UNIVERSAL
LIBRARY

OU_198070

UNIVERSAL
LIBRARY

ಪ್ರಾಥಮಿಕ ಶಾಲೆಗಳ ೫, ೬, ೭ನೆಯ ಇಯತ್ತೆಗಳಿಗಾಗಿ ಹಾಗೂ ಮಾಧ್ಯಮಿಕ
ಶಾಲೆಗಳ ಕೆಳಗಿನ ಇಯತ್ತೆಗಳಿಗಾಗಿ, ಪ್ರಾಥಮಿಕ ಶಿಕ್ಷಕರ ಟ್ರೇನಿಂಗ
ಸಂಸ್ಥೆಗಳಿಗಾಗಿ ಪಠ್ಯಪುಸ್ತಕವೆಂದು ಮಂಜೂರಾಗಿದೆ.

ಶಾಲಾ ಭಾರತವರ್ಷ

ಅಥವಾ

ಹಿಂದುಸ್ಥಾನದ ಇತಿಹಾಸ

ಇದನ್ನು

ನರಸಿಂಹ ಪಾಂಡುರಂಗ ನೋಡಕ್ಕೆ

ಇವರು ರಚಿಸಿದರು.

೨ನೆಯ ಆವೃತ್ತಿಯು.

ಈ ಪುಸ್ತಕದ ಎಲ್ಲ ಹಕ್ಕುಗಳು ಗ್ರಂಥಕರ್ತರಿಂದ ಕಾದಿಡಲ್ಪಟ್ಟಿವೆ.

೧೯೩೯

Price 1-8-0] [ಬೆಲೆ ೧-೮-೦

(All Rights Reserved by the Author)

ಮುದ್ರಕ :—
ಎಸ್. ಎಮ್. ಮುನ್ಷಿ.
ಗದಗ.

ಪ್ರಾಚೀನ ಇತಿಹಾಸವು

ಅನುಕ್ರಮಣಿಕೆ

ಮೊದಲನೆಯ ಭಾಗ.

ಅತಿ ಪ್ರಾಚೀನಕಾಲ. (ಕ್ರಿ. ಶ. ಪೂ. ೨೦೦೦—ಕ್ರಿ. ಶ. ಪೂ. ೩೨೭).

ಪಾಠ.	ವಿಷಯ.	ಪುಟ.
೧.	ಹಿಂದುಸ್ಥಾನದ ಭೌಗೋಲಿಕ ವಿಚಾರವೂ ಪರಿಸ್ಥಿತಿಯೂ	೧
೨.	ಆರ್ಯಸಂಸ್ಕೃತಿಯ ಮಹತ್ವವೂ ಇತಿಹಾಸ ಸಂಶೋಧನವೂ.	೬
೩.	ಮೂಲ ನಿವಾಸಿಗಳೂ ದ್ರವಿಡರೂ.	೯
೪.	ಆರ್ಯರು.	೧೧
೫.	,, ಮುಂದೆ ಸಾಗಿದ್ದು.	೧೭
೬.	ರಾಮಾಯಣವೂ ಮಹಾಭಾರತವೂ.	೨೦
೭.	ಆರ್ಯಸಂಸ್ಕೃತಿಯು ಇಡೀ ದೇಶವನ್ನು ವ್ಯಾಪಿಸಿದ್ದು.	೨೬
೮.	ಬೌದ್ಧ ಮತ್ತು ಜೈನ ಧರ್ಮಗಳು.	೩೧
೯.	ಸಿಕಂದರನ ದಾಳಿ.	೩೬

ಎರಡನೆಯ ಭಾಗ

ಪ್ರಾಚೀನಕಾಲ. (ಕ್ರಿ. ಶ. ಪೂ. ೩೨೦—ಕ್ರಿ. ಶ. ೧೨೦೫).

೧.	ಮೌರ್ಯ ಸಾಮ್ರಾಜ್ಯ.	೪೨
೨.	,, ,, ಮುಂದೆ ಸಾಗಿದ್ದು.	೪೭
೩.	ಮೌರ್ಯ ಸಾಮ್ರಾಜ್ಯವು ಅಸ್ತವಾದಂದಿನಿಂದ ಗುಪ್ತಮನೆತನದ ಉದಯದ ವರೆಗಿನ ಕಾಲ.	೫೩
೪.	,, ಮುಂದೆ ಸಾಗಿದ್ದು.	೫೮

೫.	ಗುಪ್ತ ಸಾಮ್ರಾಜ್ಯ.	೬೨
೬.	ಶ್ರೀಹರ್ಷನ ಸಾಮ್ರಾಜ್ಯ.	೬೮
೭.	,, ಮುಂದೆ ಸಾಗಿದ್ದು.	೭೨
೮.	ಬೌದ್ಧಧರ್ಮ ಅಡಗಿ ಹಿಂದುಧರ್ಮ ಮರಳಿ ಉತ್ಕರ್ಷ ಹೊಂದಿದ್ದು.	೭೫
೯.	ರಜಪುತರ ಕಾಲ.	೭೯
೧೦.	ಪ್ರಾಚೀನ ಕಾಲದಲ್ಲಿಯ ದಕ್ಷಿಣ ಹಿಂದುಸ್ಥಾನದ ಕನ್ನಡ ಅರಸು ಮನೆತನಗಳು.	೮೫
೧೧.	,, ಮುಂದೆ ಸಾಗಿದ್ದು.	೯೦
೧೨.	,, ,,	೯೪
೧೩.	,, ,,	೯೯
೧೪.	,, ,,	೧೦೨
೧೫.	,, ,,	೧೦೬
೧೬.	,, ,,	೧೧೧
೧೭.	ಪ್ರಾಚೀನಕಾಲದ ದಕ್ಷಿಣಹಿಂದುಸ್ಥಾನದ ಉಳಿದ ರಾಜ್ಯಗಳು	೧೧೪

ಹಿಂದುಸ್ಥಾನದ ಪ್ರಾಚೀನ ಇತಿಹಾಸ

ಮೊದಲನೆಯ ಭಾಗ.

ಅತಿ ಪ್ರಾಚೀನಕಾಲ. (ಕ್ರಿ. ಶ. ಪೂ. ೨೦೦೦ ದಿಂದ ಕ್ರಿ. ಶ. ಪೂ. ೩೨೭)



೧ನೆಯ ಪಾಠ.

ಹಿಂದುಸ್ಥಾನದ ಭೌಗೋಲಿಕ ವಿಚಾರವೂ ಪರಿಸ್ಥಿತಿಯೂ.

೧. **ಉಪೋದ್ಘಾತ:—** ಯಾವದೊಂದು ದೇಶದ ಇತಿಹಾಸವನ್ನು ಅಭ್ಯಾಸಿಸುವವರಿಗೆ ಆ ದೇಶದ ಭೂಗೋಲ ಜ್ಞಾನವು ಆಗಿರುವದು ಅವಶ್ಯವು. ಏಕೆಂದರೆ ಭೂಮಿಯ ಪ್ರಾಕೃತಿಕ ಸಂಗತಿಗಳು ಇತಿಹಾಸದ ಹಲವು ಸ್ಥಿತ್ಯಂತರಗಳಿಗೆ ಕಾರಣಗಳಾಗಿರುವವು.

ಹೀಗೆ ಅವಶ್ಯವಿರುವ ಭೂಗೋಲ ಜ್ಞಾನವನ್ನು ಬೇರೆ ಸ್ವತಂತ್ರವಾದ ಪುಸ್ತಕದಿಂದ ಹೊಂದುವದು ಯೋಗ್ಯವಿದ್ದರೂ ಇಲ್ಲಿ ಮಹತ್ವದ ಕೆಲವು ಭೂಗೋಲದ ಸಂಗತಿಗಳನ್ನು ವಿಚಾರಿಸಿ ಅವುಗಳನ್ನು ಕಣ್ಣುಮುಂದೆ ಇರಿಸಿಕೊಂಡು ಇತಿಹಾಸವನ್ನು ಅಭ್ಯಾಸಿಸಿದಲ್ಲಿ ಬೇರೆ ಬೇರೆ ಕಾಲಗಳಲ್ಲುಂಟಾಗುವ ಆಗುಹೋಗುಗಳ ಕಲ್ಪನೆಯು ನಮಗುಂಟಾಗುವದು.

೨. **ಹಿಂದುಸ್ಥಾನದ ಪ್ರಾಕೃತಿಕ ಸ್ವರೂಪ:—** ಹಿಂದುಸ್ಥಾನವು ಒಂದು ದೊಡ್ಡ ದ್ವೀಪಕಲ್ಪವಾಗಿದ್ದು ಭದ್ರವಾದ ಗೋಡೆಗಳಂತಿರುವ ಹಾಲಾ, ಸುಲೈಮಾನ, ಹಿಂದುಕುಶ, ಕಾರಾಕೋರಾನ, ಹಿಮಾಲಯ, ಆಸಾಮು, ಎಂಬ ಪರ್ವತಾವಳಿಗಳೂ ಬಂಗಾಲದ ಉಪಸಾಗರ ಹಿಂದೀ ಮಹಾಸಾಗರ, ಅರಬೀ ಸಮುದ್ರ ಎಂಬ ಜಲರಾಶಿಗಳೂ ಇದನ್ನು ಸುತ್ತುಗಟ್ಟಿರುವವು. ಉತ್ತರದ ಪರ್ವತಾವಳಿಗಳೊಳಗಿನ ಒಂದೆರಡು ಕಣಿವೆಯ

ದಾರಿಗಳಲ್ಲದೆ ಹೊರದೇಶಗಳಿಂದ ಈ ದೇಶಕ್ಕೆ ಬರಲು ಬೇರೆ ದಾರಿಗಳಿಲ್ಲ. ಪೂರ್ವಕಾಲದಲ್ಲಿ ಈಗಿನಂಥ ದೊಡ್ಡ ದೊಡ್ಡ ಉಗೆಹಡಗಗಳು ಬಳಕೆಯಲ್ಲಿರಲಿಲ್ಲವಾದದರಿಂದ ಬೇರೆ ದೇಶದವರು ಸಮುದ್ರ ಮಾರ್ಗವಾಗಿ ಈ ದೇಶಕ್ಕೆ ಬರುವದಂತು ಒಳ್ಳೆಯ ಕಠಿಣವಾಗಿತ್ತು.



ಅ. ಉತ್ತರ ಹಿಂದುಸ್ಥಾನ:— ಖಂಬಾಯತದ ಆಖಾತದಿಂದ ಮಹಾನದಿಯ ಮುಖದ ವರೆಗೆ ಹಬ್ಬಿದ ವಿಂಧ್ಯಪರ್ವತವು ಹಿಂದುಸ್ಥಾನವನ್ನು ಇಬ್ಭಾಗಿಸುವದು. ಈ ಪರ್ವತಾವಳಿಯ ಉತ್ತರದ ಭಾಗಕ್ಕೆ ಉತ್ತರ ಹಿಂದುಸ್ಥಾನವೆಂದೂ, ದಕ್ಷಿಣದ ಭಾಗಕ್ಕೆ ದಕ್ಷಿಣ ಹಿಂದುಸ್ಥಾನವೆಂದೂ ಹೆಸರು.

ಉತ್ತರ ಹಿಂದುಸ್ಥಾನದ ಸಿಂಧು, ಗಂಗಾ, ಯಮುನಾ ಎಂಬ ಹೊಳೆಗಳೂ ಇವುಗಳ ಶಾಖೆಗಳೂ ಹರಿಯುವ ಪ್ರದೇಶವು ಬಹಳ ಬೆಳೆಯುಳ್ಳದ್ದು. ಈ ಹೊಳೆಗಳೊಳಗಿಂದ ಹರಿದುಬಂದ ಹಿಮಾಲಯದ ರೇವೆಯಿಂದ ಈ ಭಾಗದ ಭೂಮಿಯು ಉಂಟಾಗಿರುವದು. ಹಿಂದೀ ಮಹಾಸಾಗರದ ಮೇಲಿನಿಂದ ಬರುವ ಮಳೆಗಾಳಯನ್ನು ಹಿಮಾಲಯವು ತಡೆಯುವದರಿಂದ ಉತ್ತರ ಹಿಂದುಸ್ಥಾನದ ಬಹಳ ಭಾಗದಲ್ಲಿ ಸಾಕಷ್ಟು ಮಳೆ ಸುರಿಯುವದು. ಮಳೆಗಾಲದಲ್ಲಿ ಮಳೆಯ ನೀರಿನಿಂದಲೂ ಬೇಸಗೆಯಲ್ಲಿ ಹಿಮಾಲಯದಲ್ಲಿಯ ಭರ್ಫವು ಕರಗಿಬಂದ ನೀರಿನಿಂದಲೂ ಸಿಂಧು, ಗಂಗಾ, ಮುಂತಾದ ಹೊಳೆಗಳು ಹೊರಸೂಸಿ ಹರಿದು ದಂಡೆಯ ಪ್ರದೇಶಗಳಿಗೆ ವಿಪುಲವಾದ ನೀರನ್ನು ಪೂರೈಸುತ್ತವೆ. ಈ ಹೊಳೆಗಳ ಬೈಲುಪ್ರದೇಶವು ಬಹುತರ ಸಮನೆಲದ್ದಾಗಿರುವುದರಿಂದ ಬೇಕಾದಲ್ಲಿ ಕಾಲುವೆಗಳನ್ನು ಕಟ್ಟಿಕೊಂಡು ನೀರೊಯ್ಯಲು ಅನುಕೂಲವಿದೆ. ಈ ಪ್ರದೇಶದ ಹವೆಯು ಒಕ್ಕಲತನಕ್ಕೂ ಜನರ ಆರೋಗ್ಯಕ್ಕೂ ತಕ್ಕದ್ದಾಗಿರುವದು. ಹೀಗೆ ಎಲ್ಲ ಬಗೆಯ ಅನುಕೂಲತೆಗಳಿರುವ ಪ್ರದೇಶವು ಸುಖ-ಸಂಪತ್ತುಗಳ ಮೆಟ್ಟಾಗಿರುವದು ಸಹಜ.

ಆ. ದಕ್ಷಿಣ ಹಿಂದುಸ್ಥಾನ :— ಇದು ತ್ರಿಕೋಣಾಕಾರದ ತಪ್ಪಲ ಪ್ರದೇಶವು. ವಿಂಧ್ಯಪರ್ವತ, ಪೂರ್ವಘಟ್ಟ, ಸಹ್ಯಾದ್ರಿ ಇವು ತಪ್ಪಲಿನ ಅಂಚುಗಳು. ನೈಋತ್ಯದ ಮಳೆಗಾಳಿಯಿಂದ ದಕ್ಷಿಣ ಹಿಂದುಸ್ಥಾನದ ಪಶ್ಚಿಮಾರ್ಧಪ್ರದೇಶಕ್ಕೂ ಈಶಾನ್ಯದ ಮಳೆಗಾಳಿಯಿಂದ ಪೂರ್ವಾರ್ಧ ಪ್ರದೇಶಕ್ಕೂ ಮಳೆಯು ಚೆನ್ನಾಗಿ ಬೀಳುವದು. ದಕ್ಷಿಣಕ್ಕೆ ನೀಲಗಿರಿಯ ಕಡೆಗೆ ಸಾಗಿದಂತೆ ಮಳೆಯ ಮಾನವು ಹೆಚ್ಚುವದು. ಪೂರ್ವ-ಪಶ್ಚಿಮ ಘಟ್ಟಗಳ ಕೆಳಗೆ ಸಮುದ್ರದ ವರೆಗೆ ಕಿರಿಅಗಲಾಗಿರುವ ಪಟ್ಟಗಳು ದಕ್ಷಿಣೋತ್ತರವಾಗಿ ಹಬ್ಬಿವೆ. ಈ ಭಾಗಗಳಿಂದ ಒಳದೇಶಕ್ಕೆ ಬರಲು ಹಲಕೆಲವು ಕಣಿವೆಯ ಮಾರ್ಗಗಳಿರುವವು.

ಈ ದಕ್ಷಿಣ ಹಿಂದುಸ್ಥಾನದ ಭೂಮಿಯು ಬೆಳೆಯುಳ್ಳದ್ದು. ಹವೆಯು ಉತ್ತಮವಾದದ್ದು. ಕೆರೆಕಾಲುವೆಗಳಿಂದ ಭೂಮಿಗೆ ನೀರನ್ನೊದಗಿಸಿಕೊಳ್ಳಲು

ಎಲ್ಲ ಕಡೆಗೆ ಅಷ್ಟು ಅನುಕೂಲತೆಗಳಿಲ್ಲ. ಈ ಭಾಗದಲ್ಲಿಯ ನರ್ಮದಾ, ತಾಪಿ, ಗೋದಾವರಿ, ಕೃಷ್ಣಾ, ತುಂಗಭದ್ರಾ, ಕಾವೇರಿ ಮುಂತಾದ ಹೊಳೆಗಳು ಮಳೆಗಾಲದಲ್ಲಿ ಮಾತ್ರ ತುಂಬಿ ಹರಿಯುವವು. ಇವುಗಳಲ್ಲಿಯ ಕೆಲವಂತು ಬೇಸಗೆಯಲ್ಲಿ ಹರಿಗಡಿಯುವವು. ದಂಡೆಯ ಪ್ರದೇಶವು ಎತ್ತರವಿರುವದು. ಆದರೂ ಅನುಕೂಲವಿರುವಲ್ಲಿ ಕಾಲುವೆಗಳಿರುವವು. ಕೆಲವು ಕೆರೆಗಳಿಂದಲೂ ಭೂಮಿಗೆ ನೀರು ದೊರೆಯುವದು. ಬಹುಭಾಗದ ಬೆಳೆಯು ಮಳೆಯನ್ನವಲಂಬಿಸಿರುವದರಿಂದ ಬರದ ಭಯವು ಹೆಚ್ಚು. ಒಟ್ಟಿನಮೇಲೆ ದಕ್ಷಿಣ ಹಿಂದುಸ್ಥಾನವಾದರೂ ಜನರು ಸುಖದಿಂದ ಜೀವಿಸಲು ತಕ್ಕದ್ದಾಗಿರುವದು.

೩. ಹಿಂದುಸ್ಥಾನಕ್ಕೆ ಬಂದ ವಿದೇಶದ ಜನಾಂಗಗಳು:— ಈ ರೀತಿ ಹಿಂದುಸ್ಥಾನದ ಪ್ರಾಕೃತಿಕ ಸ್ವರೂಪವು ಜನರ ಬಾಳುವೆಗೆ ಯೋಗ್ಯವಾಗಿರುವುದನ್ನು ಕಂಡು ನಮ್ಮ ಪೂರ್ವಜರಾದ ಆರ್ಯರು ಅತಿ ಪ್ರಾಚೀನಕಾಲದಲ್ಲಿ ಈ ದೇಶಕ್ಕೆ ಬಂದು ನೆಲೆಗೊಂಡರು.

ಆರ್ಯರಿಗಿಂತ ಮೊದಲು ನಿಗ್ರೋ ಮುಂತಾದ ಕಾಡುಜನರೂ ತಕ್ಕ ಮಟ್ಟಿಗೆ ಸುಧಾರಿಸಿದ್ದ **ದ್ರವಿಡ**ರೂ ಹಿಂದುಸ್ಥಾನವನ್ನು ಪ್ರವೇಶಿಸಿದ್ದರು. ಮತ್ತು ಆರ್ಯರ ತರುವಾಯ **ಗ್ರೀಕ್, ಶಕ, ಕುಶಾನ, ಪಾರ್ಥಿಯನ್** ಮೊದಲಾದ ಜನರು ವಾಯವ್ಯ ಮಾರ್ಗವಾಗಿ ಈ ದೇಶಕ್ಕೆ ಬಂದರು. ಇವರೆಲ್ಲರು ಆರ್ಯಸಂಸ್ಕೃತಿಗೆ ವಶರಾಗಿ ಕಾಲಾಂತರದಿಂದ ಅವರಲ್ಲಿ ಕೂಡಿಹೋದರು. ಆದರೆ ಈ ಬೇರೆ ಬೇರೆ ಜನಾಂಗಗಳ ಸಂಸರ್ಗದ ಪರಿಣಾಮವು ಆರ್ಯಸಂಸ್ಕೃತಿಯ ಮೇಲೆ ಆಗದೆ ಇರಲಿಲ್ಲ.

ಕ್ರಿ. ಶ. ೧೩ನೆಯ ಶತಕದ ಆರಂಭಕ್ಕೆ ಎಂದರೆ ಮುಸಲ್ಮಾನರ ಆಳಿಕೆಯು ಈ ದೇಶದಲ್ಲಿ ಆರಂಭವಾದಂದಿನಿಂದ ಹಿಂದು ಮತ್ತು ಮಹಮದೀಯ ಈ ಎರಡು ಸಂಸ್ಕೃತಿಗಳಲ್ಲಿ ವಿಶೇಷ ಸಂಬಂಧವು ಉಂಟಾಗಹತ್ತಿತು. ಅಂದಿನಿಂದ ಮುಂದೆ ಸುಮಾರು ಐದುನೂರು ವರ್ಷಗಳ ವರೆಗೆ ಈ ದೇಶದಲ್ಲಿ ಮುಸಲ್ಮಾನರ ಆಳಿಕೆಯು ಪ್ರಬಲವಾಗಿತ್ತು.

ಕ್ರಿ. ಶ. ೧೫ನೆಯ ಶತಕದ ಕೊನೆಯಲ್ಲಿ ಯುರೋಪದವರು ವ್ಯಾಪಾರದ ನೆವದಿಂದ ಸಮುದ್ರ ಮಾರ್ಗವಾಗಿ ಈ ದೇಶಕ್ಕೆ ಬರಲಾರಂಭಿಸಿದರು. ಮುಂದೆ ಅವರಲ್ಲಿಯ ಇಂಗ್ಲಿಷರಿಗೆ ಮಾತ್ರ ದೈವವು ಹೆಚ್ಚು ಅನುಕೂಲವಾಯಿತು. ವ್ಯಾಪಾರವನ್ನು ಮಾಡುತ್ತಿರುವಾಗಲೆ ರಾಜ್ಯವು ಅವರ ಕೈವಶವಾಗುವ ಸಂಭವವುಂಟಾಯಿತು. ಮುಂದೆ ಕ್ರಿ. ಶ. ೧೯ನೆಯ ಶತಕದ ಆರಂಭದಿಂದ ಇವರು ಈ ದೇಶದಲ್ಲಿ ತಮ್ಮ ಅಧಿಕಾರವನ್ನು ಸ್ಥಿರಪಡಿಸಹತ್ತಿದರು.

ಇಂಗ್ಲಿಷರ ಆಳಿಕೆಯ ಪರಿಣಾಮ:— ಇಂಗ್ಲಿಷರು ಈ ದೇಶವನ್ನು ಆಳಹತ್ತಿದಂದಿನಿಂದ ಇಲ್ಲಿಯ ಪರಿಸ್ಥಿತಿಯು ಒತ್ತರದಿಂದ ಬದಲಾಗುತ್ತ ನಡೆದಿದೆ. ಒಂದೇ ತರದ ವ್ಯವಸ್ಥೆಯಿಂದ ಇಡಿಯ ದೇಶದ ಕಾರಭಾರವು ಸಾಗಿದೆ. ಪೋಸ್ಟು, ತಾರು, ಉಗೆಬಂಡಿ, ಮೋಟರು ಮೊದಲಾದ ಸಾಧನಗಳಿಂದ ಪ್ರಾಂತಪ್ರಾಂತಗಳಲ್ಲಿಯ ಬಳಕೆಯು ಹೆಚ್ಚಾಗಿದೆ. ಆಶ್ಚರ್ಯಕರವಾದ ಹಲವು ಶಾಸ್ತ್ರೀಯ ಶೋಧಗಳಿಂದ ಜನರ ಜೀವನ ಕ್ರಮದಲ್ಲಿ ಎಷ್ಟೋ ಸೌಲಭ್ಯಗಳುಂಟಾಗಿವೆ. ವಿದ್ಯಾಪ್ರಸಾರವು ಹೆಚ್ಚಾಗಿದೆ. ಜಗತ್ತಿನ ಉಳಿದ ರಾಷ್ಟ್ರಗಳ ಸ್ಥಿತಿಗತಿಯ ಜ್ಞಾನವಾಗಿದೆ. ಜನರಿಗೆ ತಮ್ಮ ಇರವು ಹೇಗಿರುವದೆಂಬ ಅರಿವು ಹುಟ್ಟಿದೆ. ಚಾಣರೂ ಸಾಹಸಿಗರೂ ಸ್ವಾತಂತ್ರ್ಯಪ್ರೇಮಿಗಳೂ ಆದ ಇಂಗ್ಲಿಷರ ಸಹವಾಸದಿಂದ ಇಷ್ಟವಾದ ಹಲವು ಸುಧಾರಣೆಗಳು ಆಗಹತ್ತಿವೆ. ಇಡಿಯ ಹಿಂದೀ ರಾಷ್ಟ್ರವು ಒಂದೇ ಎಂಬ ಭಾವನೆಯು ದೃಢವಾಗಿದೆ. ಜಗತ್ತಿನಲ್ಲಿ ಅಭಿಮಾನದಿಂದಲೂ ವೈಭವದಿಂದಲೂ ಬಾಳಲು ತಕ್ಕ ಉತ್ಕರ್ಷವನ್ನು ಪಡೆಯಲು ರಾಷ್ಟ್ರವು ಆತುರವಾಗಿದೆ.

೫. ಇತಿಹಾಸದ ಉಪಯೋಗ :— ಇತಿಹಾಸವೆಂದರೆ **ಅನುಭವಗಳ ಸಂಗ್ರಹವು.** ಅನುಭವದಿಂದ ಸರಿಯಾದುದೆಂದು ತೋರಿದ ಮಾರ್ಗವನ್ನೇ ಜನಾಂಗವು ಅನುಸರಿಸಬೇಕು; ತಪ್ಪು ದಾರಿಯನ್ನು ಬಿಟ್ಟುಬಿಡಬೇಕು. ಪೂರ್ವಜರ ಸ್ಫೂರ್ತಿದಾಯಕವಾದ ಚರಿತ್ರೆಗಳ ಅಭ್ಯಾಸದಿಂದ ನಮ್ಮಲ್ಲಿ ಆತ್ಮವಿಶ್ವಾಸವೂ ಉತ್ಸಾಹವೂ ಉಂಟಾಗುವದು. ಆದುದರಿಂದ

ನಮ್ಮ ದೇಶದ ಭೌಗೋಲಿಕ ಸಂಗತಿಗಳನ್ನೂ ಈಗಿನ ಪರಿಸ್ಥಿತಿಯನ್ನೂ ಲಕ್ಷದಲ್ಲಿಟ್ಟುಕೊಂಡು ಇತಿಹಾಸ ವಿಷಯವನ್ನು ಅಭ್ಯಾಸಿಸಬೇಕು.

೨ನೆಯ ಪಾಠ.

ಆರ್ಯ ಸಂಸ್ಕೃತಿಯ ಮಹತ್ವವೂ ಇತಿಹಾಸ ಸಂಶೋಧನವೂ.

೧. **ಹಿಂದೀ ರಾಷ್ಟ್ರದ ಪ್ರಾಚೀನತೆ :**— ಹಿಂದುಸ್ಥಾನದ ಪ್ರಾಕೃತಿಕ ಸ್ವರೂಪವು ಜನರ ಬಾಳುವೆಗೆ ಹೆಚ್ಚು ಅನುಕೂಲವಾಗಿರುವುದರಿಂದ ನಮ್ಮ ಪೂರ್ವಜರಾದ ಆರ್ಯರು § ಬಹು ಪ್ರಾಚೀನ ಕಾಲದಲ್ಲಿ ಈ ದೇಶಕ್ಕೆ ಬಂದು ನೆಲೆಗೊಂಡರು. ಮತ್ತು ಅವರು ತಮ್ಮ ಶೌರ್ಯ, ಚಾತುರ್ಯ, ಸಾಹಸ, ನೀತಿ ಇವುಗಳ ಬಲದಿಂದ ಸುಸಂಸ್ಕೃತಿಯನ್ನು ಹೊಂದಿ ಸುಖ-ಸಂಪತ್ತುಗಳಿಂದ ಮೆರೆದು ಸ್ಥಿರವಾದ ಕೀರ್ತಿಯನ್ನು ಪಡೆದರು. ಆರ್ಯರ ವೇದಗ್ರಂಥಗಳಷ್ಟು ಪುರಾತನ ಗ್ರಂಥಗಳು ಬೇರೆ ಯಾವವೂ ಇಲ್ಲ. ಪ್ರಾಚೀನಕಾಲದ ಇತಿಹಾಸವೆಂದರೆ ಈ ಆರ್ಯರ ಸಂಸ್ಕೃತಿಯ ಇತಿಹಾಸವೇ ಸರಿ.

೨. **ಆರ್ಯ ಸಂಸ್ಕೃತಿಯ ಶ್ರೇಷ್ಠತೆ :**— † ಭಾರತೀಯರ ಹಿಂದೀ ರಾಷ್ಟ್ರದಂತೆಯೆ ಇಜಿಪ್ತ, ಚೀನ, ಬಾಬಿಲೋನಿಯ, ಅಸೀರಿಯ ಮುಂತಾದ ರಾಷ್ಟ್ರಗಳಾದರು ಪ್ರಾಚೀನಕಾಲದಲ್ಲಿ ಒಳ್ಳೆಯ ವೈಭವವನ್ನು ಹೊಂದಿದ್ದವು.

---

§ ಸಿಂಧಪ್ರಾಂತದಲ್ಲಿ ಮೋಹೆಂಜೋ ದಾರೋ ಮತ್ತು ಮುಲತಾನದ ನೆರೆಯಲ್ಲಿ ಹರಪ್ಪಾ ಎಂಬ ನೆಲದೊಳಗೆ ಹೂಳಿದ್ದ ಎರಡು ಪಟ್ಟಣಗಳನ್ನು ಪುರಾಣ ವಸ್ತುಸಂಶೋಧನ ಖಾತೆಯವರು ಗೊತ್ತುಪಡಿಸಿರುವರು ಈ ಪಟ್ಟಣಗಳ ಕುರುಹುಗಳ ಮೇಲಿಂದ ಈ ಪಟ್ಟಣಗಳು ಕ್ರಿ. ಶಕಕ್ಕೆ ಮುಂಚೆ ಮೂರು ನಾಲ್ಕು ಸಾವಿರ ವರ್ಷಗಳ ಆಚೆಯೆಂದು ಗೊತ್ತಾಗುವದು. ಆದದರಿಂದ ಆರ್ಯರ ಆರಂಭಕಾಲವು ಕ್ರಿ. ಶ ಮುಂಚೆ ೩-೪ ಸಾವಿರ ವರ್ಷಗಳ ಹಿಂದಿನದೆಂಬ ಮಾತನ್ನು ಎಲ್ಲರು ಒಪ್ಪಬೇಕಾಗುವದೆಂದು ತೋರುವದು.

† ದುಷ್ಮಂತರಾಜನ ಮಗನೂ ಮಹಾ ಪರಾಕ್ರಮಿಯೂ ಆದ ಭರತರಾಜನಿಂದ ಈ ದೇಶಕ್ಕೆ 'ಭರತಖಂಡ' ಎಂಬ ಹೆಸರುಂಟಾಯಿತು. ಭರತಖಂಡದ ಜನರು ಭಾರತೀಯರು.

ಆದರೆ ಚೀನದ ಹೊರತಾದ ಯಾವ ರಾಷ್ಟ್ರವೂ ತಮ್ಮ ಸಂಸ್ಕೃತಿಯನ್ನು ಈಗಿನ ತನಕ ಕಾದುಕೊಂಡಿಲ್ಲ. ಹಿಂದುಗಳ ಸಂಸ್ಕೃತಿಯ ಪರಂಪರೆಯು ಪ್ರಾಚೀನಕಾಲದಿಂದ ಈ ವರೆಗೆ ಅಖಂಡವಾಗಿ ಸಾಗುತ್ತ ಬಂದದೆ. ಪ್ರಾಚೀನ ಕಾಲದಲ್ಲಿ ಈ ದೇಶವು ಸಂಪತ್ತು, ವಿದ್ಯೆ, ಪರಾಕ್ರಮ, ಧರ್ಮಾಚರಣೆ ಇವು ಗಳಿಗಾಗಿ ಹೆಸರಾಗಿತ್ತು. ಹಲವು ವಿದ್ಯೆ–ಕಲೆಗಳು ಇಲ್ಲಿಂದಲೆ ಬೇರೆ ಬೇರೆ ದೇಶಗಳಲ್ಲಿ ಹಬ್ಬಿದವು. ಈ ದೇಶದಲ್ಲಿ ಆಗಿಹೋದಷ್ಟು ವಿದ್ವಾಂಸರು, ಧರ್ಮ ಸ್ಥಾಪಕರು, ಶಾಸ್ತ್ರಕಾರರು, ಸಾಧುಸಂತರು, ವೀರರು, ಮುತ್ಸದ್ದಿಗಳು ಇನ್ನಾವ ದೇಶದಲ್ಲಿಯೂ ಆಗಿರಲಿಕ್ಕಿಲ್ಲ. ಪರದೇಶದ ಆಘಾತಗಳು ಈ ದೇಶದ ಮೇಲೆ ಎಷ್ಟೋ ಸರತಿ ಆಗಿದ್ದರೂ ಹಿಂದು ಸಂಸ್ಕೃತಿಯು ಹೆಣಿ ಯದೆ ನಿಂತಿರುವದನ್ನು ವಿಚಾರಿಸಿದರೆ ಸೋಜಿಗವೆನಿಸುವದು.

೩. **ಇತಿಹಾಸ ಜ್ಞಾನದ ಸಾಧನಗಳು:**— ಹಿಂದೀರಾಷ್ಟ್ರವು ಅತಿ ಪ್ರಾಚೀನವಾಗಿರುವದರಿಂದಲೂ ಮಿತಿಯಿಲ್ಲದಷ್ಟು ಆಘಾತಗಳು ಇದರ ಮೇಲೆ ಆಗಿರುವದರಿಂದಲೂ ಈ ದೇಶದ ಇತಿಹಾಸ ಸಾಧನಗಳು ಬಹಳ ಮಟ್ಟಿಗೆ ಮಾಯವಾಗಿದೆ. ಆದರೂ ಶಿಲಾಲೇಖಗಳು, ತಾಮ್ರಪಟಗಳು, ಹಳೆಯ ನಾಣ್ಯಗಳು, ಪುರಾತನಕಾಲದ ಕಟ್ಟಡಗಳು, ವೇದಗಳು, ಪುರಾಣ ಗಳು ಇವುಗಳ ಸಹಾಯದಿಂದ ಹಿಂದಿನ ಕಾಲವ ಇತಿಹಾಸವು ತಕ್ಕಮಟ್ಟಿಗೆ ತಿಳಿಯುವದು.

೪. **ಇತಿಹಾಸ ಸಂಶೋಧನದ ಪ್ರಯತ್ನಗಳು:**— ಇತ್ತೀಚೆಗೆ ಭೂಮಿಯ ಪ್ರಾಚೀನ ಇತಿಹಾಸವನ್ನು ಶೋಧಿಸುವ ಲವಲವಿಕೆಯುಳ್ಳವರು ಪ್ರಾಚೀನ ರಾಷ್ಟ್ರವಾದ ಹಿಂದುದೇಶದ ಇತಿಹಾಸವನ್ನು ಅಭ್ಯಾಸಿಸಹತ್ತಿದರು. ಉಯಿಲ್ಯಮ್ ಜೋನ್ಸ್ ಎಂಬ ವಿದ್ವಾಂಸನು ಸಂಸ್ಕೃತ ಶಾಕುಂತಲ ನಾಟಕ ವನ್ನು ಇಂಗ್ಲಿಷದಲ್ಲಿ ಭಾಷಾಂತರಿಸಿದಂದಿನಿಂದ ನಮ್ಮ ದೇಶದ ಇತಿಹಾಸ ಸಂಶೋಧನದ ಸಂಬಂಧದಿಂದ ಎಲ್ಲರಲ್ಲಿ ಕುತೂಹಲವು ಉಂಟಾಯಿತು. ಸರಕಾರದವರು ಕ್ರಿ. ಶ. ೧೮೬೧ರಲ್ಲಿ **ಪುರಾಣ ವಸ್ತುಸಂಶೋಧನ ಖಾತೆ** ಯನ್ನು ಸ್ಥಾಪಿಸಿ ಇತಿಹಾಸ ಸಂಶೋಧನ ಕಾರ್ಯವನ್ನು ಸಾಗಿಸಿರುವರು.

ಕ್ಯಾನಿಂಗ್ ಹ್ಯಾಮ್, ಬರ್ಗೆಸ್, ಫ್ಲೀಟ, ಮ್ಯಾಕ್ಸಮುಲರ, ಕೀಲಹಾರ್ನ ಮುಂತಾದ ವಿದೇಶೀಯರೂ ಭಾವೂ ದಾಜೀ, ರಾಜೇಂದ್ರಲಾಲ ಮಿತ್ರ, ಭಾಂಡಾರಕರ, ಗೌರೀಶಂಕರ ಓಝಾ, ರಾಜವಾಡೆ, ಆರ್. ನರಸಿಂಹಾಚಾರ್ಯ, ವೆಂಕಟರಾವ ಆಲೂರ, ಷಿಬಲಿ, ನಜೀಬ-ಆಬಾದಿ ಮುಂತಾದ ಹಿಂದೀ ಜನರೂ ಭಾರತ ಇತಿಹಾಸ-ಸಂಶೋಧನ ಕಾರ್ಯದಲ್ಲಿ ಹೆಸರಾಗಿರುವರು.

೫. ಸಂಶೋಧನದ ಪರಿಣಾಮ:— ಇತಿಹಾಸ ಸಂಶೋಧಕರು ಮಾಡಿದ ಪ್ರಯತ್ನಗಳಿಂದ ಪ್ರಾಚೀನ-ಅರ್ವಾಚೀನ ಕಾಲಗಳ ಇತಿಹಾಸದ ಸಂಬಂಧದಿಂದ ಎಷ್ಟೋ ಸಂಗತಿಗಳ ಶೋಧವಾಗಿದೆ. ನಾವು ಇದುವರೆಗೆ ನಿಜವೆಂದು ನಂಬುತ್ತಲಿದ್ದ ಹಲವು ಸಂಗತಿಗಳು ತಪ್ಪು ಮತ್ತು ಅತಿಶಯೋಕ್ತಿಯವೆಂದು ಗೊತ್ತಾಗಿದೆ. ಹೀಗೆ ಸಂಶೋಧನದಿಂದ ಗೊತ್ತಾಗುವ ಸುಸಂಗತವಾದ ಇತಿಹಾಸವು ನಮ್ಮ ಮುಂದಿನ ಕಾಲದ ಉತ್ಕರ್ಷಕ್ಕೆ ಕಾರಣವಾಗುವದರಲ್ಲಿ ಸಂಶಯವಿಲ್ಲ.

೩ ನೆಯ ಪಾಠ.

ಮೂಲ ನಿವಾಸಿಗಳೂ ದ್ರವಿಡರೂ.



೧. **ಮೂಲ ನಿವಾಸಿಗಳ ಮೂಲಸ್ಥಾನ:**— "ಎಷ್ಟೋ ಸಾವಿರ ವರ್ಷಗಳ ಮೊದಲು ಹಿಂದುಸ್ಥಾನದ ದಕ್ಷಿಣಕ್ಕಿರುವ ಹಿಂದೀಮಹಾಸಾಗರ ದಲ್ಲಿ, ಖಂಡಪ್ರಾಯವಾದ ದೊಡ್ಡದೊಂದು ಭೂಪ್ರದೇಶವು **ಆಸ್ಟ್ರೇಲಿಯಾ, ಆಫ್ರಿಕಾಖಂಡಗಳ** ವರೆಗೆ ಹಬ್ಬಿತ್ತು. ಮತ್ತು ಅಲ್ಲಿ ಈಗಿನ ಆಂದಮಾನದ ನಿವಾಸಿಗಳಂಥ, **ನಿಗ್ರೋ** ವರ್ಗಕ್ಕೆ ಸೇರಿದ ಜನರು ವಾಸವಾಗಿದ್ದರು." ಎಂದು ಭೂಗರ್ಭ ಶಾಸ್ತ್ರಜ್ಞರೂ ಇತಿಹಾಸ-ಸಂಶೋಧಕರೂ ಅಭಿಪ್ರಾಯ ಪಡುವರು. ಆ ಪ್ರದೇಶವು ನೀರಿನಲ್ಲಿ ಮುಳುಗಿ ಹೋಗಿರುವದಂತೆ! ಆ ಕಾಲದ ಗೋರೆ, ಚೀಪುಗಲ್ಲುಗಳ ಆಯುಧ ಮುಂತಾದ ಅವಶೇಷಗಳು ಹಿಂದುಸ್ಥಾನದ ದಕ್ಷಿಣ ಭಾಗದಲ್ಲಿ ಬಹಳವಾಗಿ ದೊರೆತಿರುವವು. ಹಿಂದೀ ಮಹಾಸಾಗರದಲ್ಲಿದ್ದ ಈ ಪ್ರದೇಶಗಳಿಂದಲೇ ನಿಗ್ರೋ ಜನರು ಪ್ರಾಚೀನ ಕಾಲದಲ್ಲಿ ಹಿಂದುಸ್ಥಾನಕ್ಕೆ ಬಂದು ವಾಸವಾಗಿರಬೇಕೆಂದು ತೋರುವದು.

೨. **ನಿಗ್ರಿಟೋ ಜನರು:**— ಕರಾಚಿಯ ಪಶ್ಚಿಮಕ್ಕೆ ಸಮುದ್ರ ದಂಡೆಯಲ್ಲಿಯೂ ಆರಾಕಾನ, ತೇನಾಸರೀಮ, ಸಯಾಮಗಳಲ್ಲಿಯೂ ಈಗ ವಾಸಿಸಿರುವ **ನಿಗ್ರಿಟೋ** ಎಂಬ ಕಾಡು ಜನರ ಪೂರ್ವಜರೇ ಹಿಂದು ಸ್ಥಾನದ ತೀರ ಪ್ರಾಚೀನ ನಿವಾಸಿಗಳೆಂದು ಹೇಳುವರು. ನಿಗ್ರಿಟೋ ಜನರು ಗಿಡ್ಡರೂ ಕಪ್ಪು ಬಣ್ಣದವರೂ ಆಗಿದ್ದು ಮೀನ ಹಿಡಿಯುವ ಉದ್ಯೋಗವನ್ನೇ ಬಹುಕಾಲದಿಂದ ಮಾಡುತ್ತ ಬಂದಿರುವರು. ಇವರ ಪೂರ್ವಜರಾದ ಮೂಲ ನಿವಾಸಿಗಳಿಗೆ ಧಾತುಗಳನ್ನು ಉಪಯೋಗಿಸುವದು ಗೊತ್ತಿರಲಿಲ್ಲ; ಅವರು ಚೂಪಾದ ಕಲ್ಲುಗಳ ಆಯುಧಗಳಿಂದಲೇ ಬೇಟೆ ಯಾಡಿ ಉಪಜೀವಿಸುತ್ತಿದ್ದರು.

೩. **ಸಂತಾಳ – ಕೋಳ – ಗೋಂಡರು** :— ನಿಗ್ರಿಟೋ ಜನರ ತರುವಾಯ ಹಿಂದುಸ್ಥಾನದ ಈಶಾನ್ಯ ಮಾರ್ಗವಾಗಿ ಬ್ರಹ್ಮಪುತ್ರೆಯ ಕೊಳ್ಳದಗುಂಟ ಬಂದು ಇಲ್ಲಿ ನೆಲೆಸಿದವರು **ಮೊಂಗೋಲಿಯನ್** ಮತ್ತು **ಕೋಲೇರಿಯನ್** ಜನರು. ಇವರು ನಿಗ್ರಿಟೋ ಜನರಿಗಿಂತ ಹೆಚ್ಚು ಸುಧಾರಿಸಿದವರು; ಕಲ್ಲಿನ ಸುತ್ತಿಗೆ, ಮಣ್ಣಿನ ಪಾತ್ರೆ ಇವುಗಳನ್ನು ಉಪಯೋಗಿಸುವರು; ಶತ್ರುಗಳೊಡನೆ ಕಾದುವಾಗ ಕವಣೆಗಳನ್ನು ಹೊಡೆಯುವರು. ಮಧ್ಯಹಿಂದುಸ್ಥಾನ, ಒಡಿಸಾ, ಛೋಟಾನಾಗಪೂರ ಪ್ರಾಂತಗಳ ಅರಣ್ಯಗಳಲ್ಲಿ ಇರುವ ಈಗಿನ **ಸಂತಾಳ, ಕೋಳ, ಗೋಂಡ** ಮುಂತಾದ ಕಾಡುಜನರು ಈ ಮೋಂಗೋಲಿಯನ್, ಕೋಲೇರಿಯನ್ ನಿವಾಸಿಗಳ ವಂಶಜರೇ ಆಗಿರುವರು. ಮೊದಲು ಇವರು ಹೊಳೆಗಳ ದಂಡೆಗುಂಟ ನೆಲೆಸಿದ್ದರು. ಆದರೆ ಇವರ ತರುವಾಯ ಬಂದವರು ಇವರನ್ನು ಕಾಡುಗಳಿಗೆ ಅಟ್ಟಿದರು. ಈ ಹೊಸ ಜನರಿಗೆ ತಾಮ್ರ ಮುಂತಾದ ಧಾತುಗಳ ಉಪಯೋಗವು ಗೊತ್ತಿತ್ತು. ಆದದರಿಂದ ಇವರಿಗೆ **ತಾಮ್ರಯುಗೀನ**ರೆಂಬ ಹೆಸರುಂಟಾಯಿತು. ಇವರು ಸಿಂಧು, ಗಂಗಾ ಮುಂತಾದ ಹೊಳೆಗಳ ದಂಡೆಗುಂಟ ವಾಶಿಸಿದ್ದರು. ಇವರು ದಕ್ಷಿಣ ಹಿಂದುಸ್ಥಾನವನ್ನು ಪ್ರವೇಶಿಸಲಿಲ್ಲ.

೪. **ದ್ರವಿಡರು** :— ತಾಮ್ರಯುಗೀನರ ತರುವಾಯ ಅಂದರೆ ಕ್ರಿ. ಶಕಕ್ಕೆ ಮುಂಚೆ ಸುಮಾರು ಐದು ಸಾವಿರ ವರ್ಷಗಳ ಪೂರ್ವದಲ್ಲಿ **ದ್ರವಿಡ**ರೆಂಬ ಜನರು ಹಿಂದುಸ್ಥಾನದ ವಾಯವ್ಯ ಮಾರ್ಗವಾಗಿ * ಈ ದೇಶಕ್ಕೆ ಬಂದರು. ಇವರು ಹಿಂದಿನವರಿಗಿಂತ ಹೆಚ್ಚು ಸುಧಾರಣೆಯನ್ನು ಹೊಂದಿದ್ದರು. ಕಲ್ಲುಗಳಿಂದಲೂ ಧಾತುಗಳಿಂದಲೂ ಸುಂದರವಾದ ಒಡವೆಗಳನ್ನು ಮಾಡುವದು, ಕಲ್ಲುಬಂಡೆಗಳಿಂದ ಮನೆಗಳನ್ನೂ ಕೋಟೆಗಳನ್ನೂ ಕಟ್ಟುವದು, ಬಲುಚಿಸ್ಥಾನದಲ್ಲಿರುವಾಗಲೇ ಈ ಕಲೆಗಳನ್ನು ಇವರು ಅರಿತಿದ್ದರೆಂದು ತೋರುತ್ತದೆ. ಯುರೋಪ – ಏಶಿಯ ಖಂಡಗಳ ಗಡಿ

---

* ದ್ರವಿಡರು ಹಿಂದೀ ಮಹಾಸಾಗರದಲ್ಲಿದ್ದ ಪ್ರದೇಶಗಳಿಂದ ಹಿಂದುಸ್ಥಾನಕ್ಕೆ ಬಂದರೆಂದೂ ಅವರು ಒಳ್ಳೆಯ ಸುಧಾರಣೆಯನ್ನು ಹೊಂದಿ ಬಲುಚಿಸ್ಥಾನದ ವರೆಗೆ ಸಹ ಒಂದು ಕಾಲದಲ್ಲಿ ಹಬ್ಬಿದ್ದರೆಂದೂ ಕೆಲವರು ಅಭಿಪ್ರಾಯ ಪಡುವರು.


ಸೀಮೆಯು ಈ ದ್ರವಿಡರ ಮೂಲ ಸ್ಥಾನನಿರಬೇಕೆಂದು ತಿಳಿಯುವದು. ಇವರು ಇಡೀ ದೇಶದಲ್ಲಿ ಹಬ್ಬಿ ಪಟ್ಟಣಗಳನ್ನು ಕಟ್ಟಿಕೊಂಡು ಒಕ್ಕಲತನ ವನ್ನೂ ಪಶುಪಾಲನೆಯನ್ನೂ ಮಾಡಿಕೊಂಡಿದ್ದರು. ಆಚಾರ-ವಿಚಾರಗಳೂ ಭಾಷೆಯೂ ತಕ್ಕಮಟ್ಟಿಗೆ ಸುಧಾರಿಸಿದ್ದವು. ಉತ್ತಮವಾದ ನೂಲಿನ ವಸ್ತ್ರ ಗಳು ಬಳಕೆಯಲ್ಲಿದ್ದವು. ಈಗ ದ್ರವಿಡರ ವಸತಿಯು ವಿಶೇಷವಾಗಿ ದಕ್ಷಿಣ ಹಿಂದುಸ್ಥಾನದ ಪೂರ್ವ ಮತ್ತು ದಕ್ಷಿಣ ಭಾಗಗಳಲ್ಲಿ ಇರುವದು. **ತಮಿಳ್, ತೆಲಗು, ಕನ್ನಡ, ತುಳು** ಮತ್ತು **ಮಲಿಯಾಳ** ಇವು ದ್ರವಿಡವರ್ಗದ ಭಾಷೆಗಳಾಗಿವೆ.

ದ್ರವಿಡರ ತರುವಾಯ ಬಂದ ಆರ್ಯರು ದ್ರವಿಡರಿಗಿಂತ ಹೆಚ್ಚು ಸುಧಾರಿಸಿದವರೂ ಬುದ್ಧಿವಂತರೂ ಆದದರಿಂದ ಆರ್ಯರ ಮುಂದೆ ಇವರ ಆಟವು ಸಾಗಲಿಲ್ಲ. ಆರ್ಯರು ಹಿಂದುಸ್ಥಾನದ ಎಲ್ಲ ಭಾಗಗಳನ್ನು ವ್ಯಾಪಿ ಸುತ್ತ ನಡೆದಂತೆ ದ್ರವಿಡರು ಕೆಳಕೆಳಗೆ ದಕ್ಷಿಣಕ್ಕೆ ಸರಿಯಹತ್ತಿದರು. ಆದರೂ ದ್ರವಿಡರ ಸಂಸರ್ಗದಿಂದ ಆರ್ಯರ ಧರ್ಮ, ಆಚಾರ, ವಿಚಾರ ಇವುಗಳ ಮೇಲೆ ದ್ರವಿಡ-ಸಂಸ್ಕೃತಿಯ ಪರಿಣಾಮವು ಆಗದೆ ಇರಲಿಲ್ಲ. ಇಷ್ಟೇ ಅಲ್ಲ; ಕಾಲಾಂತರದಿಂದ ದ್ರವಿಡ-ಆರ್ಯರ ಸಂಮಿಶ್ರಣವೂ ಆಯಿತು.

ಳನೆಯ ಪಾಠ.

ಆರ್ಯರು.

(ಕ್ರಿ. ಶ. ಪೂ. ೨೦೦೦ ದಿಂದ ಕ್ರಿ. ಶ. ಪೂ. ೧೪೦೦)



೧. **ಆರ್ಯರ ಪ್ರವೇಶ**:— ದ್ರವಿಡರ ತರುವಾಯ ಬಹು ಕಾಲದ ಮೇಲೆ ಮಧ್ಯಏಶಿಯದಿಂದ ಗೌರವರ್ಣದವರೂ, ಹೆಚ್ಚು ನಿಲು ವಿಕೆಯವರೂ ಬುದ್ಧಿಶಾಲಿಗಳೂ ಆದ ಜನರು ಹಿಂದುಸ್ಥಾನದ ವಾಯವ್ಯ ಮಾರ್ಗವಾಗಿ ಬಂದು ಪಂಜಾಬ ಪ್ರಾಂತದಲ್ಲಿ ಒಕ್ಕಲಾಗಿ ನಿಂತರು. ಇವರೇ

* **ಆರ್ಯರು.** ಆರ್ಯರು ಗುಂಪು ಗುಂಪಾಗಿ ತಮ್ಮ ದನಕರುಗಳ ಹಿಂಡುಗಳೊಡನೆ ಪಂಜಾಬಕ್ಕೆ ಬಂದರು. ಮುಂದೆ ಅವರು ಕ್ರಮದಿಂದ ಗಂಗಾ-ಯಮುನೆಗಳ ದಂಡೆಗುಂಟ ಆಗ್ನೇಯಕ್ಕೆ ಸಾಗುತ್ತ, ಬೆಳೆಯುಳ್ಳ ಭೂಮಿಗಳನ್ನೂ ಇರಲು ಅನುಕೂಲವಾದ ಸ್ಥಳಗಳನ್ನೂ ನೋಡಿಕೊಂಡು ಅಲ್ಲಲ್ಲಿ ಒಕ್ಕಲಾಗಿ ನಿಂತರು.

೨. ಆರ್ಯರು ಅನಾರ್ಯರನ್ನೂ ದ್ರವಿಡರನ್ನೂ ಹಿಂದಕ್ಕಟ್ಟಿದ್ದು:– ಈ ದೇಶದ ಆರೋಗ್ಯವಾದ ಹವೆ, ಬೆಳೆಯುಳ್ಳ ಭೂಮಿ, ನೀರಿನ ವಿಪುಲತೆ, ಮನೋಹರವಾದ ಸೃಷ್ಟಿಸೌಂದರ್ಯ ಇವುಗಳಿಂದ ಆರ್ಯರಿಗೆ ಇಲ್ಲಿ ಸ್ಥಿರವಾಗಿ ನೆಲೆಗೊಳ್ಳಲು ಉತ್ಸಾಹವೆನ್ನಿಸಿತು. ಒಕ್ಕಲತನ, ಪಶುಪಾಲನೆ, ನೆಯಿಗೆ ಈ ಉದ್ಯೋಗಗಳಿಂದ ಉಪಜೀವನವು ಉತ್ತಮವಾಗಿ ಸಾಗ ಹತ್ತಿತು. ಆರ್ಯರು ಇಲ್ಲಿ ವಾಸವಾಗಿದ್ದ ಮೂಲ ನಿವಾಸಿಗಳ ಸಂಗಡಲೂ ದ್ರವಿಡರ ಸಂಗಡಲೂ ಕಾದಿ, ಯುಕ್ತಿ ಪ್ರಯುಕ್ತಿಗಳಿಂದ ಅವರಿಂದಾಗುವ ಉಪದ್ರವವನ್ನು ತಪ್ಪಿಸಿ ಅವರನ್ನು ಹಿಂದಕ್ಕಟ್ಟಿದರು. ಕಾಡು ಜನರು ಅರಣ್ಯಗಳನ್ನು ಸೇರಿ ಅಲ್ಲಿಯೇ ಇರಹತ್ತಿದರು. ದ್ರವಿಡರು ದಕ್ಷಿಣಕ್ಕೆ ಹಿಮ್ಮೆಟ್ಟಿದರು.

೩. ಆರ್ಯರ ಧರ್ಮಸುಧಾರಣೆ.— ಈ ರೀತಿ ನಿಶ್ಚಿಂತರಾಗಿ ಇರಹತ್ತಿದ ಬಳಿಕ ಆರ್ಯರು ಕ್ರಮದಿಂದ ವಿದ್ಯೆಕಲೆಗಳಲ್ಲಿ ಪ್ರಗತಿಯನ್ನು ಹೊಂದಿದರು. ಸೃಷ್ಟಿಕರ್ತನಾದ ದೇವರನ್ನು ಭಕ್ತಿಯಿಂದ ಸ್ತುತಿಸುವ ಮಂತ್ರಗಳನ್ನು ರಚಿಸಿದರು. ಯಜ್ಞಯಾಗಾದಿ ಕರ್ಮಗಳನ್ನು ಮಾಡಹತ್ತಿದರು. ಇವರ ಭಾಷೆಯು **ಸಂಸ್ಕೃತವು.** ಸಂಸ್ಕೃತ ಸೂಕ್ತ

---

* "ಆರ್ಯ" ಎಂಬದರ ಅರ್ಥವು "ಬೇಸಾಯಗಾರ" ಮತ್ತು "ಸುಧಾರಿಸಿದವ" ಎಂದು ಎರಡು ವಿಧವಾಗಿ ರೂಢಿವಾಗಿದೆ. ಮೂಲ ನಿವಾಸಿಗಳು ಒಕ್ಕಲತನ ಮಾಡದೆ ಬೇಟೆಯಿಂದಲೇ ಜೀವಿಸುತ್ತಿದ್ದರು. ಮತ್ತು ಪಶುವೃತ್ತಿಗಿಂತ ಹೆಚ್ಚಿನ ಸುಧಾರಣೆಯೂ ಇವರಲ್ಲಿ ಆಗಿರಲಿಲ್ಲ. ಆದದರಿಂದ ಮೂಲ ನಿವಾಸಿಗಳಿಗೆ "ಅನಾರ್ಯ" ಎಂಬ ಹೆಸರು ಬಂದಿತು. ಆರ್ಯರ ಮೂಲ ಸ್ಥಾನವು ಉತ್ತರ ಧ್ರುವಪ್ರದೇಶವೆಂದು ಲೋ. ಟಿಳಕರವರು ನಿರ್ಣಯಿಸಿರುವರು.

ಗಳನ್ನು ಪಾಠಮಾಡಿ ಪರಂಪರೆಯಿಂದ ನೆನಪಿಡುತ್ತಿದ್ದರು. ಸೂಕ್ತಗಳಿಗೆ **ಶ್ರುತಿ**ಗಳೆಂದೂ ಹೆಸರು. 'ಶ್ರುತ' ಎಂದರೆ ಕೇಳಿದ್ದು ಎಂಬರ್ಥ. ಮುಂದೆ ಈ ಬೇರೆ ಬೇರೆ ಸೂಕ್ತಗಳನ್ನು ಒಟ್ಟುಗೂಡಿಸಿ ಬರೆದ ಗ್ರಂಥವು **ಋಗ್ವೇದಸಂಹಿತೆ** ಎಂದು ಹೆಸರುಗೊಂಡಿತು. ಈ * ಋಗ್ವೇದವು ಆರ್ಯರ ಅತಿ ಪ್ರಾಚೀನ ಗ್ರಂಥವು. ಇದರಿಂದ ಆರ್ಯರ ಬುದ್ಧಿವೈಭವವು ಚೆನ್ನಾಗಿ ವ್ಯಕ್ತವಾಗುತ್ತದೆ.

೪. **ಚಾತುರ್ವರ್ಣ್ಯ**:— ಆರ್ಯರು ಪಂಜಾಬ ಪ್ರಾಂತದಿಂದ ದಕ್ಷಿಣಕ್ಕೆ ಸಾಗಿದ ಬಳಿಕ ತಮಗೆ ಅಡ್ಡಿಮಾಡಿದ ಶತ್ರುಗಳ ಕೂಡ ಅವರು ಯುದ್ಧಕಲೆಯನ್ನು ಆರಿತುಕೊಂಡರು. ಶತ್ರುಗಳನ್ನು ಸೋಲಿಸಿದ ನಂತರ ಸಂರಕ್ಷಣೆ ಮತ್ತು ಸುವ್ಯವಸ್ಥೆ ಇವುಗಳ ಉದ್ದೇಶದಿಂದ ರಾಜ್ಯಗಳನ್ನು ಸ್ಥಾಪಿಸಿದರು. ಯುದ್ಧಕಲೆ, ರಾಜ್ಯಭಾರಗಳನ್ನು ವಹಿಸಿ ಕೆಲವರು ಅವನ್ನು ಅಭ್ಯಾಸಿಸಹತ್ತಿದರು. ಇವರು **ಕ್ಷತ್ರಿಯ**ರೆನ್ನಿಸಿದರು. ವ್ಯಾಪಾರ, ಉದ್ಯೋಗ, ಒಕ್ಕಲತನ ಮುಂತಾದ ಸಮಾಜದ ಪೋಷಣೆಗೆ ಅಗತ್ಯವಾದ ಕೆಲಸಗಳನ್ನು ಕೆಲವರು ಕೈಕೊಂಡರು; ಇವರೇ **ವೈಶ್ಯ**ರೆನ್ನಿಸಿದರು. ವೇದಾಭ್ಯಾಸ, ಧರ್ಮ ಕಾರ್ಯ, ದೇವತೋಪಾಸನೆ ಇಂಥ ಕೆಲಸಗಳಲ್ಲಿ ಮಗ್ನರಾಗಿ ಕೆಲವರು ಇರಹತ್ತಿದರು; ಇವರು **ಬ್ರಾಹ್ಮಣ**ರೆನ್ನಿಸಿದರು. ಸೋತ ಅನಾರ್ಯರಲ್ಲಿ ಒಪ್ಪಿ ಕೊಂಡವರನ್ನು ಆರ್ಯರು ತಮ್ಮ ಹತ್ತರ ಇರಿಸಿಕೊಂಡು, ಅವರಿಂದ ಕೂಲಿ, ಕುಂಬಳಿ ಮುಂತಾವ ಕೆಲಸಗಳನ್ನು ಮಾಡಿಸಿಕೊಳ್ಳಹತ್ತಿದರು. ಆರ್ಯರನ್ನು ನಂಬಿಕೊಂಡು ಇದ್ದು ತಮ್ಮ ಉಪಜೀವನವನ್ನು ಸಾಗಿಸುತ್ತಿರಹತ್ತಿದ

---

* ಋಗ್ವೇದದಲ್ಲಿ ಹತ್ತು ಮಂಡಲಗಳೂ ೧೦೨೮ ಸೂಕ್ತಗಳೂ ಇವೆ. ಇದರಲ್ಲಿ ದೇವತೆಗಳ ಒಡೆಯನಾದ ಇಂದ್ರನ ಪರಾಕ್ರಮದ ವರ್ಣನೆಯುಂಟು. ಮತ್ತು ಇಂದ್ರಾದಿ ದೇವತೆಗಳನ್ನು ಕುರಿತು- " ಶತ್ರುಗಳ ನಾಶವಾಗಲಿ; ಸತ್ತವರಿಗೆ ಸದ್ಗತಿಯಾಗಲಿ; ಮದುಮಗಳು ಸುಪುತ್ರನನ್ನು ಪಡೆಯಲಿ; ಪಾಪಗಳು ನಶಿಸಲಿ; ಸುಬುದ್ಧಿಯು ಹುಟ್ಟಲಿ; ಭೂಮಿಯಲ್ಲಿ ಸಮೃದ್ಧವಾದ ಬೆಳೆಗಳು ಬೆಳೆಯಲಿ; ಸಂಪತ್ತು ಉಂಟಾಗಲಿ " ಇವೇ ಮುಂತಾದ ಉದ್ದೇಶಗಳಿಂದ ಪ್ರಾರ್ಥಿಸಿರುವದುಂಟು. ಋಗ್ವೇದವು ಕ್ರಿ. ಶ. ಮುಂಚೆ ೧೫೦೦-೧೦೦೦ ವರೆಗಿನ ಕಾಲದಲ್ಲಿ ಗ್ರಂಥರೂಪವನ್ನು ಹೊಂದಿರಬೇಕೆಂದು ಅನುಮಾನವದೆ.

ಈ ಅನಾರ್ಯರೇ 'ಶೂದ್ರ' ಎಂಬ ಹೆಸರನ್ನು ಪಡೆದರು. ಹೀಗೆ ಚಾತುರ್ವರ್ಣ್ಯ ಪದ್ಧತಿಯು ನೆಲೆಗೊಂಡಿತು.

೫. ಸಾಮಾಜಿಕ ಸ್ಥಿತಿ :— ಆರಂಭದಲ್ಲಿ ಬ್ರಾಹ್ಮಣ, ಕ್ಷತ್ರಿಯ, ವೈಶ್ಯ ಇವರಲ್ಲಿ ಶ್ರೇಷ್ಠ-ಕನಿಷ್ಠ ಭಾವನೆಯು ಇದ್ದಿರಲಿಲ್ಲ. ಅನುಕೂಲತೆಗೆಂದು ಒಂದೊಂದು ಸಮೂಹದವರು ಒಂದೊಂದು ಉದ್ಯೋಗವನ್ನು ಮಾಡುತ್ತಿದ್ದರು. ಪ್ರೌಢ ವಿವಾಹವು ಬಳಕೆಯಲ್ಲಿತ್ತು. ಸ್ತ್ರೀಯರು ವಿದ್ಯಾವತಿಯರಿದ್ದರು. ಯಜ್ಞಕಾಲದಲ್ಲಿ ವಿದ್ವಾಂಸರು ಒತ್ತಟ್ಟಿಗೆ ಕಲೆತು ಗಹನವಾದ ವಿಷಯಗಳನ್ನು ಚರ್ಚಿಸುವರು. ಆಗ ಸ್ತ್ರೀಯರು ಸಹ ನಿರ್ಭಯರಾಗಿ ಚರ್ಚೆಮಾಡುವರು.

ಆರ್ಯರು ಒಕ್ಕಲತನದ ಕಡೆಗೆ ವಿಶೇಷ ಲಕ್ಷ್ಯಕೊಡುತ್ತಿದ್ದರು. ಕೆರೆ-ಕಾಲುವೆಗಳನ್ನು ಕಟ್ಟಿಸಿದ್ದರು. ದನಕರುಗಳನ್ನು ಸಂಪತ್ತೆಂದು ಭಾವಿಸಿದ್ದರು. ಕುದುರೆಗಳನ್ನು ಉಪಯೋಗಿಸುತ್ತಿದ್ದರು. ಸಮುದ್ರ ಪ್ರವಾಸವನ್ನು ಮಾಡುತ್ತಿದ್ದರು. ಬೆಳ್ಳಿ-ಬಂಗಾರದ ವಸ್ತುಗಳನ್ನು ಧರಿಸುತ್ತಿದ್ದರು. ನಿಷ್ಕವೆಂಬ ಬಂಗಾರದ ನಾಣ್ಯವು ಬಳಕೆಯಲ್ಲಿತ್ತು.

೬. ಆಶ್ರಮ ವ್ಯವಸ್ಥೆ :— ಆರ್ಯರು, ಮನುಷ್ಯನ ಆಯುಷ್ಯದಲ್ಲಿ ನಾಲ್ಕು ಭಾಗಗಳನ್ನು ಕಲ್ಪಿಸಿ, ಆ ಕಾಲಗಳಲ್ಲಿ ಅವನು ಮಾಡತಕ್ಕ ಕರ್ತವ್ಯಗಳನ್ನು ಗೊತ್ತುಮಾಡಿದ್ದರು. ಇದಕ್ಕೆ ಆಶ್ರಮವ್ಯವಸ್ಥೆ ಎಂಬ ಹೆಸರು. **ಬ್ರಹ್ಮಚರ್ಯ, ಗೃಹಸ್ಥ, ವಾನಪ್ರಸ್ಥ, ಸನ್ಯಾಸ** ಇವು ನಾಲ್ಕು ಆಶ್ರಮಗಳು.

ಬ್ರಹ್ಮಚರ್ಯ:— ಎಂಟನೆಯ ವರುಷ ಉಪನಯನವಾದ ಕೂಡಲೆ ಗುರುವಿನಲ್ಲಿಯೆ ಇದ್ದು, ಇಪ್ಪತ್ತು ಇಪ್ಪತ್ತೈರಡು ವರ್ಷದವನಾಗುವ ವರೆಗೆ ವಿದ್ಯಾಭ್ಯಾಸ ಹಾಗು ಗುರುಸೇವೆಯನ್ನು ಮಾಡುವದು.

ಗೃಹಸ್ಥ:— ಪ್ರಪಂಚಿಕನಾಗಿ, ಸುಮಾರ್ಗದಿಂದ ದ್ರವ್ಯವನ್ನು ಸಂಪಾದಿಸಿ ಕುಟುಂಬವನ್ನು ಸಂರಕ್ಷಿಸುವದು; ಸಮಾಜದ ಹಿತದ ಕಾರ್ಯಗಳಿಗೆ ನೆರವಾಗುವದು.

ವಾನಪ್ರಸ್ಥ :— ಪ್ರಪಂಚದ ಮೋಹವು ಕಡಿಮೆಯಾಗಬೇಕೆಂದು ಕೆಲಕಾಲ ಅರಣ್ಯದಲ್ಲಿದ್ದು ಕಂದಮೂಲಗಳನ್ನು ಸೇವಿಸುತ್ತ ಚಿತ್ತಶುದ್ಧಿಯನ್ನು ಪಡೆಯುವದು.

ಸನ್ಯಾಸ:— ಸ್ವಂತದ ಅಭಿಲಾಷೆಯನ್ನು ತ್ಯಜಿಸಿ, ಕರ್ತವ್ಯವೆಂದು ಜಗತ್ಕಲ್ಯಾಣದ ಕಾರ್ಯಗಳನ್ನು ಮಾಡುತ್ತ, ಪರಮಾತ್ಮ ಚಿಂತನೆಯಲ್ಲಿ ನಿರತನಾಗಿದ್ದು ಸದ್ಗತಿಯನ್ನು ಪಡೆಯುವದು.

೭. **ಪರಮಾತ್ಮನ ಸಂಬಂಧದ ವಿಚಾರ**:— ಆರ್ಯರ ಧರ್ಮವು ಮನೋಹರವಾದದ್ದು. ಆ ಕಾಲದ ಎಲ್ಲ ಜನರ ಮೇಲೆ ಅದರ ಸುಪರಿಣಾಮವಾಗಿ ಅವರು ಅದನ್ನು ಸ್ವೀಕರಿಸಿದರು. ಪಂಚಮಹಾಭೂತಗಳ ನಿಜ ಸ್ವರೂಪವೂ ಅವುಗಳ ಕಾರ್ಯಕಾರಣಭಾವವೂ ಗೊತ್ತಾಗುವ ಮೊದಲೇ ಅವುಗಳ ವಿಷಯವಾಗಿ ಆರ್ಯರಲ್ಲಿ ದೈವೀಭಾವನೆಯು ಉಂಟಾಯಿತು. ಈ ಶಕ್ತಿಗಳನ್ನು ಭಕ್ತಿಯಿಂದ ನಮಿಸಿ, ಪ್ರಸಂಗದಲ್ಲಿ ಅವುಗಳನ್ನು ಪ್ರಾರ್ಥಿಸುವರು. ಯಮ, ಯಮಲೋಕ ಇವುಗಳ ಸಂಬಂಧವಾಗಿ ಅವರಲ್ಲಿ ವಿಶ್ವಾಸವಿತ್ತು. ಪುನರ್ಜನ್ಮವು ಉಂಟೆಂದು ಅವರು ತಿಳಿದಿದ್ದರು. 'ದೇಹವು ನಾಶಹೊಂದಿದರೂ ಆತ್ಮನು ಅಮರನು ಎಂದರೆ ಅವನಿಗೆ ನಾಶವಿಲ್ಲ.' ಎಂದು ಅವರು ದೃಢವಾಗಿ ನಂಬಿದ್ದರು. ಇಂದ್ರಾದಿ ಅನೇಕ ದೇವತೆಗಳನ್ನು ಪ್ರಾರ್ಥಿಸುವರಾದರೂ ಜಗತ್ಕಾರಣನಾದ ಪರಮಾತ್ಮನು ಒಬ್ಬನೇ ಎಂಬುದನ್ನು ಅವರು ತಿಳಿದಿದ್ದರು. ಸೃಷ್ಟಿಶಕ್ತಿಗಳನ್ನು ಪರಮಾತ್ಮನ ಸ್ವರೂಪಗಳೆಂದು ಭಾವಿಸಿದ್ದರು.

೮ * **ಆರ್ಯರ ಯೋಗ್ಯತೆ**:— ಆರ್ಯರ ತರುವಾಯ ಅನೇಕ ಜನಾಂಗದವರು ಹಿಂದುಸ್ಥಾನವನ್ನು ಪ್ರವೇಶಿಸಿದರು. ಆದರೆ ಅವರ ಹಾಗೆ

---

* ಆರ್ಯರು ಅನಾರ್ಯ [ಮೂಲ ನಿವಾಸಿ]ರನ್ನು ನಾಶಗೊಳಿಸದೆ ಅವರನ್ನು ತಮ್ಮ ಸಮಾಜ ಸಂಸ್ಥೆಯಲ್ಲಿ ಸೇರಿಸಿಕೊಂಡುದು, ಆರ್ಯರ ದೊಡ್ಡ ಮನಸ್ಸಿನ ಸಾಕ್ಷಿಯಾಗಿದೆ. ಏಕೆಂದರೆ ೧೭ನೆಯ ಶತಮಾನದಲ್ಲಿ ಅಮೇರಿಕಾ ಖಂಡಕ್ಕೂ ೧೮ನೆಯ ಶತಮಾನದಲ್ಲಿ ಆಫ್ರಿಕಾ ಖಂಡಕ್ಕೂ ಹೋಗಿ ವಸಾಹತು ಮಾಡಿದ ಪಾಶ್ಚಾತ್ಯರು ಅಲ್ಲಿಯ ಮೂಲ ನಿವಾಸಿಗಳಾದ ಕೆಂದು ಇಂಡಿಯನ್ ಮತ್ತು ನಿಗ್ರೋ ಜನರನ್ನು ನಿರ್ದಯತನದಿಂದ ನಾಶಗೊಳಿಸಿದರು. ಈಗ ಮುನ್ನೂರು ವರ್ಷಗಳಾದ ಮೇಲೆಯೂ, ಆ ಜನರು ಕ್ರಿಸ್ತೀ ಧರ್ಮವನ್ನು ಸ್ವೀಕರಿಸಿದ್ದರೂ ಅವರಿಗೆ ಕ್ರಿಸ್ತೀ ಸಮಾಜದಲ್ಲಿ ಸಮಾನತೆಯ ಅಧಿಕಾರವು ದೊರೆಯುವದಿಲ್ಲ.

ಹಿಂದುಸ್ಥಾನದ ಮೇಲೆ ಮತ್ತಾರೂ ತಮ್ಮ ವರ್ಚಸ್ಸನ್ನು ನೆಲೆಗೊಳಿಸ ಲಿಲ್ಲ. ಆರ್ಯರು ಎಲ್ಲ ಬಗೆಯಿಂದ ಉಳಿದೆಲ್ಲರಿಗಿಂತ ಸುಧಾರಣೆಯಲ್ಲಿ ಮುಂದುವರಿದಿದ್ದರು. ಅತ್ತ ಪಾಶ್ಚಾತ್ಯ ರಾಷ್ಟ್ರಗಳಲ್ಲಿಯ ಜನರು ತೊಗಲು ಗಳನ್ನೇ ಹೊದ್ದುಕೊಳ್ಳುವಂಥ ಕಾಡುಸ್ಥಿತಿಯಲ್ಲಿರುವಾಗ ಇತ್ತ ಆರ್ಯರು ನಾಗರಿಕರಾಗಿ ಸಿರಿಸಂಪತ್ತುಗಳಿಂದ ಕೂಡಿಕೊಂಡು ವೈಭವದಿಂದ ಬಾಳುವೆ ಮಾಡುತ್ತಿದ್ದರು.

---

೫ ನೆಯ ಪಾಠ.

ಆರ್ಯರು. (ಮುಂದೆ ಸಾಗಿದೆ)

(ಕ್ರಿ. ಶ. ಪೂ. ೧೪೦೦ ರಿಂದ ಕ್ರಿ. ಶ. ಪೂ. ೮೦೦)

೧. **ರಾಜ್ಯಸ್ಥಾಪನೆ:**— ಆರ್ಯರು ಗಂಗಾ ಯಮುನೆಗಳ ದಂಡೆಯ ಪ್ರದೇಶದಲ್ಲಿ ನೆಲೆಗೊಂಡ ತರುವಾಯ, **ಕುರು** ವಂಶದವರು **ಹಸ್ತಿನಾವತಿ** ಯಲ್ಲಿಯೂ **ಕೋಸಲರು ಅಯೋಧ್ಯೆ**ಯಲ್ಲಿಯೂ **ಪಾಂಚಾಲರು ಕಾಂಪಿಲ್ಯ** ದಲ್ಲಿಯೂ **ವಿದೇಹರು ಬಿಹಾರ** ಪ್ರಾಂತದಲ್ಲಿಯೂ ತಮ್ಮ ತಮ್ಮ ರಾಜ್ಯಗಳನ್ನು ಸ್ಥಾಪಿಸಿದರು. ರಾಜಸತ್ತೆಯು ನೆಲೆಗೊಂಡಿತು. ಆದರೂ ಅರಸರು ಜನರ ಅನುಮತಿಯಂತೆ ನಡೆಯುತ್ತಿದ್ದರು. ಅರಸರಿಂದ ವಿದ್ವಾಂಸರಿಗೆ ಆಶ್ರಯವು ದೊರೆಯಹತ್ತಿತು. ಧರ್ಮ, ರಾಜಕಾರಣ, ಯುದ್ಧ, ಉಳಿದ ವ್ಯವಹಾರ ಇವುಗಳ ಸಂಬಂಧದ ನಿಯಮಗಳು ಉಂಟಾದವು. ದೇವತೆಗಳ ಸಂತುಷ್ಟತೆ ಗಾಗಿ ಯಜ್ಞಯಾಗಾದಿಗಳನ್ನು ಮಾಡಹತ್ತಿದರು. ಶರಣಾಗತರನ್ನೂ ಹೆಂಗಸ ರನ್ನೂ ಹುಡುಗರನ್ನೂ ರಕ್ಷಿಸುವದು ಪ್ರತಿಯೊಬ್ಬನ ಕರ್ತವ್ಯವೆಂದು ಆರ್ಯರ ಗ್ರಹಿಕೆಯಿದ್ದಿತು.

೨. **ವೇದಗಳು:**— ಗಂಗಾತೀರದ ಆರ್ಯರು ಪಂಜಾಬದಲ್ಲಿಯ ಆರ್ಯರಿಗಿಂತ ಹೆಚ್ಚು ಸುಧಾರಿಸಿದ್ದರು. ಇವರ ರಾಜ್ಯಗಳು ವಿಸ್ತಾರವಾಗಿ ದ್ದವು. ಯಜ್ಞಸಮಾರಂಭಗಳನ್ನು, ಇವರು ಒಳ್ಳೆಯ ಸಡಗರದಿಂದ ಜರಗಿಸು

ವರು. ಯಜ್ಞಸಂಬಂಧವಾದ ನಿಯಮಗಳನ್ನು ತಿಳಿಸುವ ಗ್ರಂಥವು **ಯಜುರ್ವೇದವು.** ಗೀತರೂಪವಾಗಿ ಅನ್ನತಕ್ಕ ಸೂಕ್ತಗಳ ಸಂಗ್ರಹವು **ಸಾಮವೇದವು.** ಮತ್ತು ಉಳಿದ ಮಂತ್ರ ತಂತ್ರ ವ್ಯವಹಾರ ಸಂಬಂಧದ ಸೂಕ್ತಗಳ ಗ್ರಂಥವು **ಅಥರ್ವವೇದವು.** ಹೀಗೆ ಮೂಲ ಋಗ್ವೇದದ ಜೊತೆಗೆ ಯಜುರ್ವೇದ, ಸಾಮವೇದ, ಅಥರ್ವವೇದ ಇವು ಉಂಟಾದವು. 'ವೇದಗಳು ಅಪೌರುಷೇಯಗಳು, ಎಂದರೆ, ಅವು ಮನುಷ್ಯರಿಂದ ಸಿದ್ಧವಾದವುಗಳಲ್ಲ;' ಎಂದು ಹಿಂದುಗಳು ನಂಬುವರು.

೩. **ಬ್ರಾಹ್ಮಣಗಳು** :— ವೇದಗಳ ತರುವಾಯ ಬ್ರಾಹ್ಮಣಗಳೆಂಬ ಗ್ರಂಥಗಳು ಉಂಟಾದವು. ಈ ಬ್ರಾಹ್ಮಣಗಳು ಯಜ್ಞಕಾರ್ಯಗಳನ್ನೂ ಅವುಗಳ ಸಂಬಂಧದ ವೃತಗಳನ್ನೂ ವಿವರಿಸುತ್ತವೆ.

೪. **ಉಪನಿಷತ್ತುಗಳು** :— ಬ್ರಾಹ್ಮಣಗಳೊಳಗಿನ ಆಧ್ಯಾತ್ಮಿಕ ಭಾಗಕ್ಕೆ ಉಪನಿಷತ್ತುಗಳೆನ್ನುವರು. ಆರಂಭ ಕಾಲದಲ್ಲಿ, ಆರ್ಯರು ಸ್ವಶಕ್ತಿಗಳಿಂದ ಪೃಥ್ವಿ, ಆಪ್, ತೇಜ, ವಾಯು, ಆಕಾಶ ಎಂಬ ಪಂಚ ಮಹಾಭೂತಗಳನ್ನು ಭಕ್ತಿಯಿಂದ ವ್ಯಾರ್ಧಿಸಿದರು. ಉಪನಿಷತ್ಕಾಲದಲ್ಲಿ ಅವರು ನೀತಿ-ವಿಷಯಗಳನ್ನುಂಟು ಮಾಡುವ ಈ ಶಕ್ತಿಗಳಿಗೆ ಮೂಲ ಕಾರಣವೇನಾದರೂ ಇರಬಹುದೆಂಬ ವಿಚಾರವನ್ನು ಮಾಡಹತ್ತಿದರು; ಮತ್ತು ಸೃಷ್ಟಿ-ಸ್ಥಿತಿ-ಲಯಗಳಿಗೆ ಕಾರಣನಾದ **ಪರಮಾತ್ಮನ** ಸ್ವರೂಪವನ್ನು ಮನಗಂಡರು. ಬ್ರಾಹ್ಮಣಗಳಿಂದಲೇ ಈ ಉಪನಿಷತ್ತುಗಳ ಉಗಮವಾಗಿದ್ದರೂ ಇವು ಕರ್ಮಮಾರ್ಗವನ್ನು ಹಿಂದಿಡುತ್ತ ಅಧ್ಯಾತ್ಮವಿದ್ಯೆಗೆ ಹೆಚ್ಚು ಪ್ರಾಧಾನ್ಯವನ್ನು ಕೊಟ್ಟಿರುತ್ತವೆ. ಅಧ್ಯಾತ್ಮಜ್ಞಾನದ ಅತಿ ಸರಸವಾದ ವಿವೇಚನೆಯು ಉಪನಿಷತ್ತುಗಳಲ್ಲಿರುವದು. ತತ್ವಜ್ಞಾನದ ಸಂಬಂಧದ ಗ್ರಂಥಗಳಲ್ಲಿ ಉಪನಿಷತ್ತುಗಳಷ್ಟು ಶ್ರೇಷ್ಠವಾದ ಗ್ರಂಥಗಳು ಜಗತ್ತಿನಲ್ಲಿ ಇನ್ನಾವೂ ಇಲ್ಲ. ಉಪನಿಷತ್ತುಗಳನ್ನು ಓದಿದ ಜರ್ಮನ್ ಪಂಡಿತನಾದ **ಶೋಪೆನ್ ಹಾಯರ** ನು "ಇವು ನನ್ನ ಜೀವದ ಕಳವಳವನ್ನು ಶಾಂತಗೊಳಿಸಲು ಕಾರಣವಾದವು" ಎಂದಿರುವನು.

ಸಂಹಿತೆ, ಬ್ರಾಹ್ಮಣ, ಉವನಿಷತ್ತು ಇವುಗಳೆಗೆಲ್ಲ ಕೂಡಿ **ಶ್ರುತಿ** ಗಳೆಂಬ ಹೆಸರು.

೫. **ಆಗಮಗಳು**:— ಉಪನಿಷತ್ಕಾಲದ ನಂತರ **ಶೈವ, ವೈಷ್ಣವ** ಮೊದಲಾದ ಆಗಮಗಳುಂಟಾದವು. ಇವು ಆ ಆ ಮತಗಳ ಉಪಾಸ್ಯ ದೇವತೆಗಳ ಉಪಾಸನಾ ವಿಧಿಗಳನ್ನೂ ಆ ಆ ಮೂರ್ತಿಗಳ ರಚನೆಯ ಮತ್ತು ಪ್ರತಿಷ್ಠಾಪನೆಯ ಕ್ರಮಗಳನ್ನೂ ವಿವರಿಸುತ್ತವೆ.

೬. **ಸೂತ್ರಗಳು**:— ಗ್ರಂಥವಿಸ್ತಾರವು ಹೆಚ್ಚಾದಂತೆ ಅದರಲ್ಲಿಯ ವರ್ಣನೆಗಳನ್ನೂ ವಿವರಣೆಗಳನ್ನೂ ನೆನಪಿನಲ್ಲಿಡುವದು ಕಠಿಣವಾಯಿತು. ಆಗ ಸ್ವಲ್ಪದರಲ್ಲಿ ಬಹಳ ಅರ್ಥಗಳನ್ನು ಕೊಡುವ ವಾಕ್ಯಗಳನ್ನು ರಚಿಸ ಹತ್ತಿದರು. ಇಂಥ ವಾಕ್ಯಗಳಿಗೆ **ಸೂತ್ರ**ಗಳೆಂಬ ಸಂಜ್ಞೆ. ಸೂತ್ರಗಳು ಮೂರು ಪ್ರಕಾರದವು. ೧. ಯಜ್ಞಸಂಬಂಧವಾದ ನಿಯಮಗಳನ್ನು ಹೇಳುವ **ಶ್ರೌತಸೂತ್ರ**ಗಳು. ೨. ಪ್ರತಿಯೊಬ್ಬನು ತನ್ನ ಮನೆಯಲ್ಲಿ ಮಾಡತಕ್ಕ ಕಾರ್ಯಗಳ ನಿಯಮಗಳನ್ನು ಸೂಚಿಸುವ **ಗೃಹ್ಯಸೂತ್ರ**ಗಳು. ೩. ಸಮಾಜದ ಸುಸ್ಥಿತಿಗೋಸ್ಕರ ಮಾಡಿದ ನಿಯಮಗಳನ್ನು ತಿಳಿಸುವ **ಧರ್ಮಸೂತ್ರ**ಗಳು.

ಇವಲ್ಲದೆ ನ್ಯಾಯ, ವ್ಯಾಕರಣ, ವೇದಾಂತ ಈ ವಿಷಯಗಳ ಸಂಬಂಧವಾಗಿಯೂ ಸೂತ್ರಗ್ರಂಥಗಳು ಬರೆಯಲ್ಪಟ್ಟವು.

೭. **ಸ್ಮೃತಿಗಳು**:— ಧರ್ಮಸೂತ್ರಗಳನ್ನು ವಿಸ್ತಾರವಾಗಿ ವಿವರಿಸುವ ಸ್ಮೃತಿಗಳನ್ನು ಮುಂದಿನ ಕಾಲದಲ್ಲಿ ಅನೇಕರು ಬರೆದರು. ಇವುಗಳಲ್ಲಿಯ **ಮನು, ಯಾಜ್ಞವಲ್ಕ್ಯ** ಇವರ ಸ್ಮೃತಿಗಳು ಒಳ್ಳೆಯ ಹೆಸರಾದವುಗಳು.

೮. **ಇತಿಹಾಸಗಳೂ ಪುರಾಣಗಳೂ**:— ಇವೆಲ್ಲವುಗಳ ಹೊರತಾದ ಆರ್ಯರ ಮುಖ್ಯ ಗ್ರಂಥಗಳೆಂದರೆ ಇತಿಹಾಸಗಳೂ, ಪುರಾಣಗಳೂ. ರಾಮಾಯಣ-ಮಹಾಭಾರತಗಳು ಮಹತ್ವದ ಇತಿಹಾಸ ಗ್ರಂಥಗಳಾಗಿವೆ. ಪುರಾಣಗಳು ಹದಿನೆಂಟು ಅವೆ. ಈ ಇತಿಹಾಸ-ಪುರಾಣಗಳಲ್ಲಿ ಆರ್ಯರ ಅರಸುಮನೆತನಗಳ ಇತಿಹಾಸವೂ ಸಾಮಾನ್ಯರಿಗೆ ಉಪಯುಕ್ತವೆನಿಸುವ ನೀತಿಯೂ ಹೇಳಲ್ಪಟ್ಟಿವೆ. ಶ್ರುತಿ – ಸ್ಮೃತಿ – ಪುರಾಣಗಳ ತಳಹದಿಯ ಮೇಲೆಯೇ ಹಿಂದುಸಂಸ್ಕೃತಿ ಎಂಬ ಮಂದಿರವು ರಚಿತವಾಗಿದೆ. ಶ್ರುತಿ

ಗಳ ಆಧಾರದಿಂದ ಸ್ಮೃತಿಗಳೂ, ಶ್ರುತಿ-ಸ್ಮೃತಿಗಳ ಆಧಾರದಿಂದ ಪುರಾಣ ಗಳೂ ಉಂಟಾಗಿವೆ. ಇವೆಲ್ಲ ಗ್ರಂಥಗಳ ರಚನಾ ಕಾಲವು ನಿಷ್ಕರ್ಷವಾಗಿ ತಿಳಿದಿರುವದಿಲ್ಲ.

೯. **ಉಳಿದ ಶಾಸ್ತ್ರಗಳು**:— ಆರ್ಯರು **ಗಣಿತ, ಜ್ಯೋತಿಷ, ವ್ಯಾಕರಣ** ಮುಂತಾದ ಶಾಸ್ತ್ರಗಳನ್ನು ಅರತಿದ್ದರು. ಆದರೆ ಅವನ್ನೆಲ್ಲ ಅವರು ವೈದಿಕಧರ್ಮದ ಉಪಸಾಧನಗಳೆಂದು ತಿಳಿದಿದ್ದರು. ಯಜ್ಞ ಮಾಡ ತಕ್ಕ ಕಾಲವನ್ನು ನಿಶ್ಚಿತವಾಗಿ ತಿಳಿಯುವದಕ್ಕೆಂದು ನಕ್ಷತ್ರಗಳನ್ನು ನಿರೀ ಕ್ಷಿಸಿ ಕಾಲಗಣನೆಯನ್ನು ಮಾಡಹತ್ತಿದರು. ವಿಧವಿಧದ ಆಕಾರದ ಯಜ್ಞ ಮಂಡಲಗಳನ್ನು ತಪ್ಪಿಲ್ಲದಂತೆ ರಚಿಸುವ ಸಾಧವೆಂದು ಭೂಮಿತಿಯನ್ನು ಅಭ್ಯಾಸಿಸಿದರು. ವೈದಿಕ ವಾಙ್ಮಯದಲ್ಲಿಯ ಶಬ್ದಗಳ ಹಾಗು ಪ್ರಯೋಗಗಳ ಸಾಧುತ್ವವನ್ನು ಬೋಧಿಸುವದಕ್ಕಾಗಿ **ವ್ಯಾಕರಣ** ಶಾಸ್ತ್ರವು ಉಂಟಾಯಿತು. **ದಶಾಂಶ ಪದ್ಧತಿ**ಯು ಮೂಲತಃ ಆರ್ಯರದೇ. ಆದನ್ನು ಅರಬರು ಕಲಿತು ಕೊಂಡರು. ಅವರಿಂದ ಅದು ಮುಂದೆ ಗ್ರೀಸಕ್ಕೂ ಯುರೋಪದ ಉಳಿದ ದೇಶಗಳಿಗೂ ಹೋಯಿತು.

೬ ನೆಯ ಪಾಠ.

ರಾಮಾಯಣವೂ ಮಹಾಭಾರತವೂ.



೧. **ಸಾಮಾನ್ಯ ಸ್ವರೂಪ**:— ರಾಮಾಯಣ–ಮಹಾಭಾರತಗಳು ನಮ್ಮಲ್ಲಿ ಸ್ಫೂರ್ತಿಯನ್ನು ಉಂಟುಮಾಡುವ ರಾಷ್ಟ್ರೀಯ ಇತಿಹಾಸ ಗ್ರಂಥ ಗಳಾಗಿವೆ. ರಾಮಾಯಣದಲ್ಲಿ ಸುಮಾರು ಇಪ್ಪತ್ತು ಸಾವಿರ ಶ್ಲೋಕಗಳೂ, ಮಹಾಭಾರತದಲ್ಲಿ ಇದರ ಸುಮಾರು ನಾಲ್ಕುಮಡಿ ಶ್ಲೋಕಗಳೂ ಇರುವವು. ಇವುಗಳನ್ನು ಅನುಕ್ರಮವಾಗಿ **ವಾಲ್ಮೀಕಿ, ವ್ಯಾಸ** ಋಷಿಗಳು ಬರೆದರು. ಇವೆರಡು ಗ್ರಂಥಗಳಿಂದ ಆರ್ಯರ **ಧಾರ್ಮಿಕ, ಸಾಮಾಜಿಕ, ರಾಜಕೀಯ** ಮೊದಲಾದ ಎಲ್ಲ ಬಗೆಯ ಜ್ಞಾನವು ಆಗುವದು. ಪ್ರಾಚೀನ ಭರತಖಂಡದ ವೈಭವದ ಹಾಗು ಸುಧಾರಣೆಯ ಸುರಸವಾದ ವರ್ಣನೆಯು ಇವುಗಳಲ್ಲಿಯ

ಹಾಗೆ ಇನ್ನಾವ ಗ್ರಂಥಗಳಲ್ಲಿಯೂ ಇಲ್ಲ. ಹಿಂದುಸ್ಥಾನದ ಎಲ್ಲ ಭಾಷೆಗಳಲ್ಲಿಯೂ ಈ ಗ್ರಂಥಗಳ ಭಾಷಾಂತರಗಳು ಆಗಿರುತ್ತವೆ.

೨. ರಾಮಾಯಣ:— ಹಿಂದಕ್ಕೆ ಅಯೋಧ್ಯೆಯಲ್ಲಿ **ದಶರಥ**ನೆಂಬ ಸೂರ್ಯವಂಶದ ಅರಸನು ರಾಜ್ಯವಾಳುತ್ತಿದ್ದನು. ಆತನಿಗೆ **ಶ್ರೀರಾಮ, ಲಕ್ಷ್ಮಣ, ಭರತ, ಶತ್ರುಘ್ನ** ಎಂಬ ನಾಲ್ವರು ಮಕ್ಕಳಿದ್ದರು. ಇವರೆಲ್ಲರು ಮಹಾ ಪರಾಕ್ರಮಿಗಳೂ ಸದ್ಗುಣಿಗಳೂ ಆಗಿದ್ದರು. ಶ್ರೀರಾಮನನ್ನು ದಶರಥನು ಹೆಚ್ಚಾಗಿ ಪ್ರೀತಿಸುತ್ತಿದ್ದನು. ಆತನು ಚಿಕ್ಕಂದಿನಲ್ಲಿಯೇ ಅತಿ ಭಾರವಾದ ಶಿವನ ಬಿಲ್ಲನ್ನು ಮುರಿದು **ಜನಕರಾಜನ** ಮಗಳಾದ ಸೀತಾ **ದೇವಿ**ಯನ್ನು ಲಗ್ನವಾಗಿದ್ದನು.

ಹೀಗಿರುವಾಗ ದಶರಥನು ಶ್ರೀರಾಮನ ಯುವರಾಜ ಪಟ್ಟಾಭಿಷೇಕದ ಸಿದ್ಧತೆಯನ್ನು ಮಾಡತೊಡಗಿದನು. ಇದು ಶ್ರೀರಾಮನ ಮಲತಾಯಿಯೂ ಭರತನ ತಾಯಿಯೂ ಆದ **ಕೈಕೇಯಿ**ಯ ಮನಸ್ಸಿಗೆ ಬರಲಿಲ್ಲ. ಆಕೆಯು ತನ್ನ ಮಗನಾದ ಭರತನಿಗೆ ಪಟ್ಟವಾಗಬೇಕೆಂದೂ ಶ್ರೀ ರಾಮನನ್ನು ಹದಿನಾಲ್ಕು ವರುಷ ವನವಾಸಕ್ಕೆ ಕಳುಹಬೇಕೆಂದೂ ದಶರಥನನ್ನು ಕೇಳಿ ಕೊಂಡಳು. ಕೇಳಿಕೊಂಡ ಎರಡು ಮಾತುಗಳನ್ನು ನಡೆಯಿಸುವೆನೆಂದು ದಶರಥನು ಆಕೆಗೆ ಮೊದಲು ವಚನ ಕೊಟ್ಟಿದ್ದನಾದುದರಿಂದ ಈಗ ಆಕೆಯ ಮಾತನ್ನು ಮೀರುವಂತೆ ಇದ್ದಿಲ್ಲ. ಶ್ರೀರಾಮನನ್ನು ಕಾಡಿಗೆ ಕಳುಹುವದಂತೂ ಹೆಚ್ಚಿನ ಕಷ್ಟ. ಹೀಗಾಗಿ ಅವನು ಬಹಳ ವ್ಯಸನಕ್ಕೀಡಾದನು. ಇದನ್ನು ಕಂಡು ಶ್ರೀರಾಮನು— "ತಂದೆಯೇ ವ್ಯಸನಪಡಬೇಡ; ನಿನ್ನ ವಚನವನ್ನು ನಡೆಯಿಸುವದಕ್ಕಾಗಿ ನಾನು ಸಂತೋಷದಿಂದ ಅರಣ್ಯಕ್ಕೆ ಹೋಗುವೆನು. ಕೈಕೇಯಿ ದೇವಿಯ ಇಚ್ಛೆಯಂತೆ ಭರತನನ್ನೆ ಪಟ್ಟಕ್ಕೆ ಕುಳ್ಳಿರಿಸು. ನಿನ್ನ ವಚನವನ್ನು ಸುಳ್ಳುಮಾಡಿ ಎಂಥ ಹೆಚ್ಚಿನ ಸುಖವನ್ನಾದರೂ ಅನುಭವಿಸಲು ನನ್ನ ಮನಸ್ಸು ಒಪ್ಪುವದಿಲ್ಲ." ಎಂದನು.

ಮುಂದೆ ಶ್ರೀರಾಮನು ಸೀತಾಲಕ್ಷ್ಮಣರನ್ನು ಕೂಡಿಕೊಂಡು ಅರಣ್ಯಕ್ಕೆ ಹೊರಟನು. ಭರತನು ಆಗ ಅಯೋಧ್ಯೆಯಲ್ಲಿ ಇದ್ದಿಲ್ಲ. ದಶರಥನು

ಶ್ರೀರಾಮನ ಶೋಕದಿಂದ ಮರಣಹೊಂದಿದನು. ಭರತನು ಬಂದು ನಡೆದ ಎಲ್ಲ ಸಂಗತಿಯನ್ನು ತಿಳಿದು ಕೈಕೇಯಿಯೊಡನೆ **ಚಿತ್ರಕೂಟ** ಪರ್ವತದಲ್ಲಿ ಶ್ರೀರಾಮನಿದ್ದೆಡೆಗೆ ಹೋಗಿ, ತಿರುಗಿ ಅಯೋಧ್ಯೆಗೆ ಬರಬೇಕೆಂದು ಆತನನ್ನು ಬಹಳವಾಗಿ ಬೇಡಿಕೊಂಡನು. ಆದಕ್ಕೆ ಶ್ರೀರಾಮನು— "ತಮ್ಮಾ, ನಾನು



ಭರತನು ಶ್ರೀರಾಮಚಂದ್ರನನ್ನು ಬೆಟ್ಟಿಯಾದದ್ದು.

ತಿರುಗಿ ಬರುವದು ಯೋಗ್ಯವಾಗುವದಿಲ್ಲ. ವಚನಕೊಟ್ಟಂತೆ ಹದಿನಾಲ್ಕು ವರುಷವ ವನವಾಸವನ್ನು ಪೂರ್ಣಮಾಡಲೇ ಬೇಕು. ಆದ ಮಾತಿಗಾಗಿ ಇನ್ನು ಚಿಂತೆಗೊಳ್ಳಬೇಡ. ಪ್ರಜೆಗಳಿಗೆ ಹಿತಕರವಾಗುವಂತೆ ರಾಜ್ಯಭಾರ ವನ್ನು ನಾಗಿಸುವದು ಈಗ ನಿನ್ನ ಕರ್ತವ್ಯವಾಗಿದೆ," ಎಂದನು. ಆಗ

ಅಣ್ಣನ ಮಾತಿಗೆ ಒಪ್ಪಿ ಭರತನು— "ನೀನು ಬರುವ ವರೆಗೆ ನಿನ್ನ ಪಾದಸಾಕ್ಷಿಯಿಂದ ರಾಜ್ಯಭಾರವನ್ನು ಸಾಗಿಸುವೆನು. ಆ ಮೇಲೆ ನೀನು ಬರದೆ ಇದ್ದರೆ, ನಾನು ಈ ನನ್ನ ದೇಹವನ್ನು ಅಗ್ನಿಗೆ ಅರ್ಪಿಸತಕ್ಕವನು." ಎಂದು ಹೇಳಿ, ಶ್ರೀರಾಮನ ಅಪ್ಪಣೆಯನ್ನು ಪಡೆದು ಅಯೋಧ್ಯೆಗೆ ಬಂದು, ರಾಜ್ಯಪರಿಪಾಲನೆಯನ್ನು ಮಾಡಿಕೊಂಡಿದ್ದನು.

ತರುವಾಯ, ಶ್ರೀರಾಮನು ಸೀತಾ-ಲಕ್ಷ್ಮಣರೊಡನೆ * **ಪಂಚವಟಿ** ಯಲ್ಲಿರುವಾಗ **ರಾವಣ**ನೆಂಬ ರಾಕ್ಷಸನು ಶ್ರೀರಾಮ-ಲಕ್ಷ್ಮಣರು ಆಶ್ರಮದಲ್ಲಿ ಇಲ್ಲದ ಹೊತ್ತು ಸಾಧಿಸಿ, ಸೀತಾದೇವಿಯನ್ನು ಹರಣಮಾಡಿಕೊಂಡು ತನ್ನ **ಲಂಕಾ** ಪಟ್ಟಣಕ್ಕೆ ಒಯ್ದು, **ಅಶೋಕ** ವನದಲ್ಲಿ ಇರಿಸಿದನು. ಮತ್ತು ತನ್ನ ತಂಗಿಯಾದ **ಶೂರ್ಪನಖಿ**ಯ ಕಿವಿ-ಮೂಗುಗಳನ್ನು ಕೊಯ್ಯಿಸಿದ ರಾಮನ ಸೇಡು ತೀರಿಸಿದೆನೆಂದು ತಿಳಿದು ಸಂಭ್ರಮದಲ್ಲಿದ್ದನು.

ಇತ್ತ ಶ್ರೀರಾಮನೂ ಲಕ್ಷ್ಮಣನೂ ಕಾಡು ಕಾಡು ಹುಡುಕಿಯೂ ಸೀತಾದೇವಿಯ ಶೋಧವಾಗದಿರಲು ಬಹಳ ದುಃಖಿತರಾದರು. ಮುಂದೆ ಅವರು ವಾನರರ ಒಡೆಯನಾದ **ಸುಗ್ರೀವ**ನ ಸ್ನೇಹವನ್ನು ಸಂಪಾದಿಸಿದರು. ಸುಗ್ರೀವನ ಕಡೆಯ **ಹನುಮಂತ**ನೆಂಬ ಬಲಶಾಲಿಯು ಶ್ರೀರಾಮನ ಗುಣಾತಿಶಯಗಳನ್ನು ತಿಳಿದು ಆತನ ಭಕ್ತನಾದನು. ಈ ಹನುಮಂತನೇ, "ರಾವಣನು ಸೀತಾದೇವಿಯನ್ನು ಕದ್ದೊಯ್ದು ತನ್ನ ಅಶೋಕ ವನದಲ್ಲಿ ಇಟ್ಟಿರುವನು" ಎಂಬ ಸುದ್ದಿಯನ್ನು ತಂದನು. ಶ್ರೀರಾಮನು ವಾನರರ ಸೇನೆಯ ಸಹಾಯದಿಂದ ಸಮುದ್ರಕ್ಕೆ ಸೇತುವೆಯನ್ನು ಕಟ್ಟಿ, ಲಂಕೆಯನ್ನು ಸೇರಿ, ರಾವಣಾದಿಗಳೊಡನೆ ಯುದ್ಧಮಾಡಿ ಅವರೆಲ್ಲರನ್ನು ಸೋಲಿಸಿ, ಸೀತಾದೇವಿಯನ್ನು ಕರೆದುಕೊಂಡು ಮರಳಿ **ಅಯೋಧ್ಯೆಗೆ** ಬಂದನು. ಇಲ್ಲಿಗೆ ಹದಿನಾಲ್ಕು ವರುಷಗಳೂ ಪೂರ್ಣವಾದವು. ಶ್ರೀರಾಮನು ಪಟ್ಟಕ್ಕೆ ಕೂತು ತಮ್ಮಂದಿರೊಡನೆ ಸುಖವಾಗಿ ರಾಜ್ಯಪರಿಪಾಲನೆಯನ್ನು ಮಾಡಿಕೊಂಡು ಇರುತ್ತಿದ್ದನು.

---

* ಇದು ನಾಶಿಕ ಪಟ್ಟಣದ ಸೆರೆಯಲ್ಲಿದೆ. ಇಲ್ಲಿಯ ಶ್ರೀರಾಮನ ಮಂದಿರವು ಸುಂದರವೂ ಭವ್ಯವೂ ಆಗಿದೆ. ಇದನ್ನು ಪೇಶ್ವೆಯವರು ಕ್ರಿ. ಶ. ೧೭೯೦ರಲ್ಲಿ ಕಟ್ಟಿಸಿದರು.

ರಾಮರಾಜ್ಯದಲ್ಲಿ ಮೋಡಗಳು ಸಕಾಲಕ್ಕೆ ಮಳೆಗರೆಯುತ್ತಿದ್ದವು; ಭೂಮಿಯು ಉತ್ತಮವಾದ ಫಲವನ್ನು ಕೊಡುತ್ತಲಿದ್ದಿತು; ಆ ಕಾಲದಲ್ಲಿ ಅಕಾಲದ ಮರಣವಿರಲಿಲ್ಲ; ಜನರು ಬೇನೆಬೇಸರಿಕೆಗಳನ್ನು ಅರಿಯರು. ಶ್ರೀರಾಮನು ಏಕವಚನಿಯೂ ಏಕಬಾಣಿಯೂ ಏಕಪತ್ನೀವ್ರತಸ್ಥನೂ ಆಗಿದ್ದನು. ಶ್ರೀರಾಮನ ಸ್ಮರಣೆಯೊಡನೆ ಆತನ ಪ್ರಜಾವಾತ್ಸಲ್ಯ, ಬಂಧುಪ್ರೇಮ, ಪಿತೃಭಕ್ತಿ, ಕರ್ತವ್ಯನಿಷ್ಠೆ, ಸಹನಶಕ್ತಿ, ಕ್ಷಮಾಗುಣ, ಅಸಾಮಾನ್ಯ ಪರಾಕ್ರಮ, ಧೈರ್ಯ, ತೇಜಸ್ವಿತೆ ಮುಂತಾದ ಸದ್ಗುಣಗಳು ಕಣ್ಣ ಮುಂದೆ ಕಟ್ಟಿದಂತಾಗಿ ಆನಂದ ವಿಸ್ಮಯಗಳಿಂದ ಮನಸ್ಸು ಕ್ಷಣಹೊತ್ತು ಆತನಲ್ಲಿ ಲೀನವಾಗುವದು. ಇಂಥ ಸದ್ಗುಣಸ್ವರೂಪನಾದುದರಿಂದಲೇ ಶ್ರೀ ರಾಮನನ್ನು ದೇವರ ಅವತಾರವೆಂದು ಭಾರತೀಯರೆಲ್ಲರು ಭಾವಿಸಿರುವರು.

೩. **ಮಹಾಭಾರತ**:— ಚಂದ್ರವಂಶದ **ಧೃತರಾಷ್ಟ್ರ** ರಾಜನಿಗೆ **ದುರ್ಯೋಧನ** ಮೊದಲಾದ ನೂರು ಮಂದಿ ಮಕ್ಕಳಿದ್ದರು. ಇವರೇ **ಕೌರವರು.** ಧೃತರಾಷ್ಟ್ರನು ಕುರುಡನಾಗಿದ್ದುದರಿಂದ ಅವನ ತಮ್ಮನಾದ **ಪಾಂಡು**ರಾಜನೇ ರಾಜ್ಯಭಾರವನ್ನು ಸಾಗಿಸುತ್ತಿದ್ದನು. ಈ ಪಾಂಡುರಾಜನಿಗೆ **ಧರ್ಮ, ಭೀಮ, ಅರ್ಜುನ, ನಕುಲ, ಸಹದೇವ** ಎಂಬ ಐವರು ಮಕ್ಕಳಿದ್ದರು. ಇವರಿಗೆ **ಪಾಂಡವ**ರೆಂಬ ಹೆಸರು. ಮುಂದೆ ಪಾಂಡುರಾಜನು ಸಾಯಲು ಧೃತರಾಷ್ಟ್ರನು ತಮ್ಮನ ಮಕ್ಕಳಾದ ಪಾಂಡವರನ್ನು ಪ್ರೀತಿಯಿಂದ ಸಲುಹಿ, ಅವರಿಗೆ ಅರ್ಧ ರಾಜ್ಯವನ್ನು ಕೊಟ್ಟನು. ಇರಇರುತ್ತ ಕೌರವರಿಗೂ ಪಾಂಡವರಿಗೂ ಹಗೆತನ ಉಂಟಾಯಿತು. ಭೀಮಾರ್ಜುನರು ಒಳ್ಳೆಯ ಶೂರರಿದ್ದುದರಿಂದ ಕೌರವರ ಆಟವೇನೂ ಸಾಗದಾಯಿತು. ಆಗ ಅವರು ಪಾಂಡವರನ್ನು ದ್ಯೂತಕ್ಕೆ ಬರಮಾಡಿಕೊಂಡು ಮೋಸದಿಂದ ಸೋಲಿಸಿದರು. ಮೊದಲೇ ಗೊತ್ತಾದ ಮೇರೆಗೆ ಸೋತ ಪಾಂಡವರು ತಮ್ಮ ರಾಜ್ಯವನ್ನೆಲ್ಲ ಕೌರವರಿಗೆ ಕೊಟ್ಟು ಹನ್ನೆರಡು ವರುಷ ವನವಾಸ, ಒಂದು ವರ್ಷ ಅಜ್ಞಾತವಾಸ ಇವುಗಳನ್ನು ಅನುಭವಿಸುವದಕ್ಕಾಗಿ ಅರಣ್ಯಕ್ಕೆ ಹೋದರು. ಈ ಹದಿಮೂರು ವರ್ಷಗಳಲ್ಲಿ ಪಾಂಡವರು ಪರಿಪರಿಯ ಕಷ್ಟ

ಗಳನ್ನು ಸಹಿಸಿ ಮರಳಿ ಬಂದು ತಮ್ಮ ರಾಜ್ಯವನ್ನು ಬೇಡಿದರು. ಕಡೆಗೆ ಐದು ಗ್ರಾಮಗಳನ್ನಾದರೂ ಕೊಡಿರೆಂದು ಕೇಳಿದರೂ "ನಿಮಗೆ ಸೂಜಿಯ ತುದಿಗೆ ಹತ್ತುವಷ್ಟು ಭೂಮಿಯು ಕೂಡ ಸಿಗಲಾರದು;" ಎಂದು ದುರ್ಯೋಧನನು ಹೇಳಿದನು. ದುರ್ಯೋಧನಾದಿಗಳು ಐಶ್ವರ್ಯಮದ ದಿಂದ ಉನ್ಮತ್ತರಾಗಿದ್ದರು. ಯಾರ ಹಿತೋಕ್ತಿಗಳನ್ನೂ ಅವರು ಲೆಕ್ಕಿಸಲಿಲ್ಲ.

ಪಾಂಡವರು **ಶ್ರೀಕೃಷ್ಣ**ನನ್ನೂ ತಮ್ಮ ಪಕ್ಷದ ಉಳಿದ ಅರಸ ರನ್ನೂ ಕೂಡಿಕೊಂಡು ಯುದ್ಧಕ್ಕೆ ಅನುವಾದರು. **ಕೌರವರು ಕರ್ಣಾದಿ** ವೀರರಿಂದಲೂ ಮಾಂಡಲಿಕ ರಾಜರಿಂದಲೂ ಮಿಲಿತರಾಗಿ ಪಾಂಡವರನ್ನು ಎದುರಿಸಿದರು. ಹದಿನೆಂಟು ದಿವಸಗಳ ವರೆಗೆ ಘೋರವಾದ * ಸಂಗ್ರಾಮ ವಾಯಿತು. ಕೌರವರೆಲ್ಲರು ಮಡಿದರು. ಪಾಂಡವರಿಗೆ ಜಯದೊರೆಯಿತು. ಈ ಯುದ್ಧದ ಆರಂಭದಲ್ಲಿ ಅರ್ಜುನನು "ರಾಜ್ಯದಾಶೆಯಿಂದ ಅಣ್ಣ ತಮ್ಮಂದಿರ ಮತ್ತು ಗುರುಹಿರಿಯರ ಕೂಡ ಯುದ್ಧಮಾಡಿ ನಾನು ಹಿಂಸೆಯ ಪಾಪವನ್ನು ಹೊಂದಲಾರೆ, ನನಗೆ ಗೆಲವು ಬೇಡ; ರಾಜ್ಯವು ಬೇಡ; ಸುಖವೂ ಬೇಡ ಇವುಗಳಿಂದ ಕ್ಷೇಮವಾಗುವದೆಂದು ನನಗೆ ತೋರುವದಿಲ್ಲ." ಎಂದು ಖಿನ್ನ ಮನಸ್ಸಿನಿಂದ ನುಡಿದನು. ಆಗ ಶ್ರೀಕೃಷ್ಣನು— "ಅರ್ಜುನನೇ ನೀನು ಕ್ಷತ್ರಿಯನು; ದುಷ್ಟರನ್ನು ಶಿಕ್ಷಿಸಿ ಶಿಷ್ಟರನ್ನು ಪಾಲಿಸುವದು ನಿನ್ನ ಧರ್ಮವಾಗಿದೆ, ಈಗ ನೀನು ಹಿಂಜರಿದರೆ ವೈರಿಗಳು ಉಪಹಾಸಮಾಡುವರು. ಗೆದ್ದರೆ ರಾಜ್ಯವು ದೊರೆಯುವದು; ಕರ್ತವ್ಯವೆಂದು ಯುದ್ಧಮಾಡುತ್ತಿರುವಾಗ ಒಂದುವೇಳೆ ಸಾವು ಬಂದರೆ ವೀರೋಚಿತವಾದ ಸದ್ಗತಿಯು ನಿನಗುಂಟಾವದು. ಇಲ್ಲದ ಸುಳ್ಳು ವಿಚಾರ ಗಳಿಗೆ ಮೋಸಹೋಗಬೇಡ." ಎಂದು ಉಪದೇಶಮಾಡಿದನು. **ಶ್ರೀಕೃಷ್ಣನ** ಈ ಉಪದೇಶದಿಂದ ಅರ್ಜುನನ ಸಮಾಧಾನವಾಗಿ ಆತನು ಯುದ್ಧಕ್ಕೆ ಸಿದ್ಧನಾಗಿ ಪರಾಕ್ರಮದಿಂದ ಕಾದಿ ಜಯಶೀಲನಾದನು.

* ಶ್ರೀ. ವೈದ್ಯ ಚಿಂತಾಮಣಿರಾಯರು, ಈ ಮಹಾಭಾರತ ಯುದ್ಧಕಾಲವು ಕ್ರಿ. ಶ. ಪೂ. ೩೦೧೯ನೆಯ ವರ್ಷವೆಂದು ಸಿದ್ಧಮಾಡಿರುವರು.

ಶ್ರೀಕೃಷ್ಣನು ಅರ್ಜುನನಿಗೆ ಮಾಡಿದ ಉಪದೇಶ ಗ್ರಂಥವೇ **ಭಗವದ್ಗೀತೆಯು.** ಇದರಲ್ಲಿ ಹದಿನೆಂಟು ಅಧ್ಯಾಯಗಳೂ ಏಳುನೂರು ಶ್ಲೋಕಗಳೂ ಇರುವವು. ವೇದ-ಉಪನಿಷತ್ತುಗಳಲ್ಲಿಯ ತತ್ವಜ್ಞಾನವು ಸಾರರೂಪವಾಗಿ ಇದರಲ್ಲಿ ಹೇಳಲ್ಪಟ್ಟಿದೆ. ಇದು ಹಿಂದುಗಳ ಧರ್ಮಗ್ರಂಥವು. ಮಹಾಭಾರತದಲ್ಲಿ ವರ್ಣಿತವಾದ ಶ್ರೀಕೃಷ್ಣನ ಮುತ್ಸದ್ದಿತನ, ಅಸಾಮಾನ್ಯ ಪರಾಕ್ರಮ, ಭಕ್ತವಾತ್ಸಲ್ಯ, ಲೋಕಕಲ್ಯಾಣೇಚ್ಛೆ ಇವುಗಳೂ ಅರ್ಜುನನ ಧನುರ್ವಿದ್ಯೆಯ ಕೌಶಲ್ಯವೂ ಶೌರ್ಯವೂ ಭೀಷ್ಮನ ಸ್ಥಿರತೆ – ಬ್ರಹ್ಮಚರ್ಯಗಳೂ ಅವರವರ ಶ್ರೇಷ್ಠತೆಗೆ ಕಾರಣಗಳಾಗಿರುವವು. 'ಅಸಹ್ಯವಾದ ಕಷ್ಟಗಳಿಂದ ಸಮಾಜವು ಕಳೆಗುಂದಿದಾಗ ನಾನು ಅವತರಿಸಿ ಅವರನ್ನು ಸುಸ್ಥಿತಿಗೆ ತರುವೆನು.' ಎಂದು ಭಗವಂತನ ವಚನವುಂಟು. ಈ ವಚನದಂತೆಯೇ ಪರಮಾತ್ಮನು ಶ್ರೀಕೃಷ್ಣನ ರೂಪದಿಂದ ಅವತರಿಸಿ ಸಜ್ಜನರ ರಕ್ಷಣೆ, ದುರ್ಜನರ ಸಂಹರಣೆ, ಸದ್ಧರ್ಮದ ಸಂಸ್ಥಾಪನೆ ಎಂಬ ಕಾರ್ಯಗಳನ್ನು ನೆರವೇರಿಸುವನು ಎಂದು ಹಿಂದುಗಳು ನಂಬುವರು.


೭ನೆಯ ಪಾಠ.

ಆರ್ಯಸಂಸ್ಕೃತಿಯು ಇಡೀ ದೇಶವನ್ನು ವ್ಯಾಪಿಸಿದ್ದು.

(ಕ್ರಿ. ಶ. ಪೂ. ೮೦೦ ರಿಂದ ಕ್ರಿ. ಶ. ಪೂ. ೩೨೦)



೧. ಭರತಖಂಡದ ರಾಜ್ಯಗಳು :— ಈ ಕಾಲದಲ್ಲಿ ಹಿಂದುಸ್ಥಾನದಲ್ಲಿ ಅಲ್ಲಲ್ಲಿ ನೆಲೆಗೊಂಡಿದ್ದ ಪ್ರಸಿದ್ಧವಾದ ರಾಜವಂಶಗಳ ಹೆಸರುಗಳು ಮಾತ್ರ ಗೊತ್ತಾಗಿವೆ. **ಮಗಧ** (ಬಿಹಾರ), **ಅಂಗ** (ಪಶ್ಚಿಮ ಬಂಗಾಲ), **ವಂಗ** (ಪೂರ್ವ ಬಂಗಾಲ), **ಕಲಿಂಗ** (ಓರಿಸಾ), **ಆಂಧ್ರ** (ದಕ್ಷಿಣ ಹಿಂದುಸ್ಥಾನದ ಮಧ್ಯಭಾಗ), **ಚೋಳ** (ಕಾರೋ ಮಾಂಡಲ), **ಚೇರ** (ಮಲಬಾರ), **ಪಾಂಡ್ಯ** (ಮಧುರೆ), **ಅವಂತಿ** (ಮಾಳವ), **ಸೌರಾಷ್ಟ್ರ** (ಗುಜರಾಥ) ಮೊದಲಾದ ರಾಜ್ಯಗಳ ಉಲ್ಲೇಖವು ಆ ಕಾಲದ



ಭರತಖಂಡದ ಪ್ರಾಚೀನ ರಾಜ್ಯಗಳು.

ಗ್ರಂಥಗಳಲ್ಲಿ ಉಂಟು. ಇವೆಲ್ಲ ರಾಜ್ಯಗಳ ವಿಸ್ತೃತ ಹಾಗು ಸುಸಂಗತ ವಾದ ಇತಿಹಾಸವು ಗೊತ್ತಾಗಿರುವದಿಲ್ಲ. ದೊರೆತಷ್ಟು ಸಂಗತಿಗಳನ್ನು ವಿಚಾರಿಸಿದರೂ ಆಗಿನ ಪರಿಸ್ಥಿತಿಯು ಹೇಗಿತ್ತೆಂಬುದು ತಿಳಿಯುವಂತಿದೆ. **ಕಲಿಂಗ** ಅರಸರ ಬಳಿಯಲ್ಲಿ ಅರವತ್ತು ಸಾವಿರ ಮತ್ತು **ಆಂಧ್ರರ** ಬಳಿಯಲ್ಲಿ ಒಂದು ಲಕ್ಷ ಕಾಲಾಳುಗಳಿದ್ದರೆಂಬ ಸಂಗತಿಯಿಂದ ಆಗಿನವರ ಘನವಾದ ಐಶ್ವರ್ಯದ ಕಲ್ಪನೆಯು ಆಗುವಂತಿದೆ.

೨. ಮಗಧರಾಜ್ಯ:— ಭರತಖಂಡದ ರಾಜ್ಯಗಳಲ್ಲಿ ಪ್ರಾಚೀನ ಮಗಧರಾಜ್ಯವು ಮುಖ್ಯವಾದದ್ದು. ಮಹಾಭಾರತಕಾಲದಲ್ಲಿ **ಜರಾಸಂಧನು** ಮಗಧದ ಅರಸನಾಗಿದ್ದನು ಅವನ ತರುವಾಯ ಮಗಧ ರಾಜ್ಯವನ್ನು ಆಳಿದ ೨೭ ಜನ ಅರಸರ ಹೆಸರುಗಳು ಮಾತ್ರ ಗೊತ್ತಾಗಿವೆ. ಕ್ರಿ. ಶ. ಪೂ. ೭ನೆಯ ಶತಮಾನದಲ್ಲಿ **ಶಿಶುನಾಗನು** ಮಗಧದ ಒಡೆಯನಾಗಿದ್ದನು. ಅಂದಿನಿಂದ ಅವನ ವಂಶಕ್ಕೆ **ಶೈಶುನಾಗ** ವಂಶವೆಂಬ ಹೆಸರುಂಟಾಯಿತು. ಈ ವಂಶದ ಐದನೆಯ ಅರಸನಾದ **ಬಿಂಬಸಾರನು** ಆಳುವಾಗ (ಕ್ರಿ. ಶ. ಪೂ. ೫೮೨–ಕ್ರಿ. ಶ. ಪೂ. ೫೫೪.) ಮಹಾತ್ಮನಾದ **ಗೌತಮಬುದ್ಧನು** ಬೌದ್ಧ ಮತವನ್ನೂ **ಮಹಾವೀರವರ್ಧಮಾನನು** ಜೈನಮತವನ್ನೂ ಸ್ಥಾಪಿಸತೊಡಗಿದ್ದರು. ಬಿಂಬಸಾರನ ಮಗನಾದ **ಅಜಾತಶತ್ರುವು** ಕ್ರಿ. ಶ. ಪೂ. ೫೫೪–ಕ್ರಿ. ಶ. ಪೂ. ೫೨೭.) ಈ ಇಬ್ಬರು ಸತ್ಪುರುಷರನ್ನು ಸನ್ಮಾನಿಸಿದನು. ಇವನ ಮಗನಾದ **ದರ್ಶಕನು** ಆಳುತ್ತಿರುವಾಗ (ಕ್ರಿ. ಶ. ಪೂ. ೫೨೭–ಕ್ರಿ. ಶ. ಪೂ. ೫೦೩.) ಇರಾಣದ ಅರಸನಾದ **ಡರಾಯಸನು** ತನ್ನ ಸರದಾರನಾದ **ಸ್ಕಾಯಲ್ಯಾಕ್ಸನನ್ನು** ಹಿಂದುಸ್ಥಾನದ ಮೇಲೆ ದಂಡೆತ್ತಿ ಕಳುಹಿದನು. ಈ ಸರದಾರನು ಪಂಜಾಬದಿಂದ ಸಿಂಧದ ವರೆಗಿನ ವಾಯವ್ಯ ಸರಹದ್ದಿನ ಪ್ರದೇಶವನ್ನು ಗೆದ್ದು ಇರಾಣದ ರಾಜ್ಯಕ್ಕೆ ಸೇರಿಸಿದನು. ಆದರೆ ಮುಂದೆ ಇರಾಣದ ಅಧಿಕಾರವು ಆ ಪ್ರಾಂತದ ಮೇಲೆ ಸಾಗುವದು ಬೇಗನೆ ನಿಂತು ಹೋಯಿತು. ದರ್ಶಕನ ತರುವಾಯ **ಉದಯ, ನಂದಿನ** ಮೊದಲಾದ ಅರಸರು ಆಳಿದರು. ಈ ಶೈಶುನಾಗ ವಂಶವು ಕ್ರಿ.ಶ.ಪೂ. ೪೧೩ರಲ್ಲಿ ಮುಗ್ಗಿತು.

೩. **ಆರ್ಯ-ದ್ರವಿಡರ ಸಮ್ಮಿಶ್ರಣವು**:— ಉತ್ತರದಿಂದ ದಕ್ಷಿಣಕ್ಕೆ ಸಾಗುತ್ತ ಬಂದು ಆರ್ಯರು ಸ್ಥಿರವಾಗಿ ನೆಲೆಗೊಂಡ ಬಳಿಕ ಅವರಿಗೂ ದ್ರವಿಡರಿಗೂ ಬಳಕೆಯಾಗಹತ್ತಿತು. ಆರ್ಯಸಂಸ್ಕೃತಿಯು ವರ್ಚಸ್ಸು ದ್ರವಿಡ ಸಂಸ್ಕೃತಿಯ ಮೇಲೆ ಆಯಿತು. ದ್ರವಿಡರ ಸಂಸ್ಕೃತಿ ವಿಶೇಷಗಳನ್ನು ಆರ್ಯರು ಅನುಕರಿಸಿದರು. ಮುಂದಿನ ಕಾಲದಲ್ಲಿ ಎರಡೂ ಸಮಾಜಗಳು ಕೂಡಿಕೊಂಡು ಒಂದು ಮಿಶ್ರ ಸಮಾಜವು ಉಂಟಾಯಿತು. ಶುದ್ಧ ಆರ್ಯರು ಮತ್ತು ಶುದ್ಧ ದ್ರವಿಡರು ಎಂಬ ಭಾವನೆಯು ಕಡಿಮೆಯಾಗಹತ್ತಿತು. ಇನ್ನು ಮುಂದಿನ ಇತಿಹಾಸವನ್ನು ವಿವರಿಸುವಾಗ ಆರ್ಯಸಂಸ್ಕೃತಿ ಎಂಬದರ ಸ್ಥಳದಲ್ಲಿ ಹಿಂದು ಸಂಸ್ಕೃತಿ ಎಂದು ಅನ್ನುವದು ಯುಕ್ತವೆನಿಸುತ್ತದೆ. ಏಕಂದರೆ ಆರ್ಯ ಮತ್ತು ದ್ರವಿಡ ಈ ಎರಡೂ ಸಂಸ್ಕೃತಿಗಳ ಶುದ್ಧಸ್ವರೂಪವು ಈ ಕಾಲದಿಂದ ಅಡಗಲಾರಂಭಿಸಿತು.

೪. **ಆ ಕಾಲದ ಸಮಾಜಸ್ಥಿತಿ**:— ಆರ್ಯರು ಇಡೀ ದೇಶದಲ್ಲಿ ಪಸರಿಸಿದ ನಂತರ ಇತರರೊಡನೆ ಅವರ ಶರೀರಸಂಬಂಧಗಳು ಆಗ ತೊಡಗಿದವು. ಸಮಾಜದಲ್ಲಿ ಎಷ್ಟೋ ತೊಡಕಿನ ಪ್ರಸಂಗಗಳುಂಟಾಗಹತ್ತಿದವು. ಶುದ್ಧ ಆರ್ಯರು ತಾವು ಇತರರಿಗಿಂತ ಶ್ರೇಷ್ಠರೆಂದು ತಿಳಿಯಹತ್ತಿ ಉಳಿದವರಿಂದ ಅಗಲಿ ಇರಹತ್ತಿದರು. ರಕ್ತದ ಶುದ್ಧತೆ-ಅಶುದ್ಧತೆಗಳ ಹೆಚ್ಚುಕಡಿಮೆ ಪ್ರಮಾಣದಂತೆ ಶ್ರೇಷ್ಠತೆ-ಕನಿಷ್ಠತೆಗಳು ಗೊತ್ತಾಗಹತ್ತಿದವು. ಸಮಾಜದಲ್ಲಿ ವಿಷಮತೆಯು ಉಂಟಾಗಿ ಜಾತಿಭೇದವು ಹುಟ್ಟಿತು. ಗುಣಕರ್ಮಗಳನ್ನು ಅನುಸರಿಸಿ ಉಂಟಾಗಿದ್ದ ವರ್ಣವ್ಯವಸ್ಥೆಯು ಜಾತಿಭೇದದ ಬಲೆಗೆ ಸಿಕ್ಕು ವರ್ಣಗಳು ಸ್ವತಂತ್ರ ಜಾತಿಗಳಾದವು. ಬರಬರುತ್ತ ಜಾತಿಜಾತಿಗಳಲ್ಲೂ ಒಳಜಾತಿಗಳು ಉಂಟಾಗುತ್ತ ನಡೆದವು. ಈ ಸ್ಥಿತ್ಯಂತರವು ಒಮ್ಮೆಲೆ ಆಗಿರುವದಿಲ್ಲ.

೫. **ಬೌದ್ಧಿಕ ಪ್ರಗತಿ**:— ಈ ಕಾಲದಲ್ಲಿಯೂ ಹೊಸ ಹೊಸ ಶೋಧಗಳೂ ಗ್ರಂಥರಚನೆಯೂ ಆಗುತ್ತಲೇ ಇದ್ದವು. ಭಾಷೆಯ ವಿಷಯದಲ್ಲಿ ಆರ್ಯರ ಲಕ್ಷ್ಯವು ವಿಶೇಷವಾಗಿತ್ತು. ಸಮಾಜವು ಬೆಳೆಯುತ್ತಲೂ ಉದ್ಯೋಗ ವ್ಯವಹಾರಗಳು ಹೆಚ್ಚುತ್ತಲೂ ನಡೆದ ಹಾಗೆ ಭಾಷೆಯು

ಹೊಸ ರೂಪವನ್ನು ಹೊಂದಹತ್ತಿತು. ಪ್ರಾಚೀನ ವೇದಕಾಲದ ಭಾಷೆಯು ತಿಳಿಯುವುದು ಕಠಿಣವಾಯಿತು. ಇದಕ್ಕಾಗಿ **ಯಾಸ್ಕನು, ನಿರುಕ್ತ** ಎಂಬ ಶಬ್ದಕೋಶವನ್ನು ರಚಿಸಿದನು. **ಪಾಣಿನಿ** ಎಂಬ ವಿಖ್ಯಾತನಾದ ವಿದ್ವಾಂಸನು **ಅಷ್ಟಾಧ್ಯಾಯಿ** ಎಂಬ ಸಂಸ್ಕೃತ ವ್ಯಾಕರಣಗ್ರಂಥವನ್ನು ರಚಿಸಿದನು. ಈತನ ಕಾಲವು ಕ್ರಿ. ಶ. ಪೂ. ೮ನೆಯ ಶತಕವೆಂದು ಅನುಮಾನವದೆ. ಕ್ರಿ. ಶ. ಪೂ. ೪ನೆಯ ಶತಕದಲ್ಲಿ **ವರರುಚಿ** (ಕಾತ್ಯಾಯನ) ಎಂಬವನೂ, ಕ್ರಿ ಶ. ಪೂ. ೨ನೆಯ ಶತಕದಲ್ಲಿ **ಪತಂಜಲಿ** ಎಂಬ ಮುನಿಯೂ ವ್ಯಾಕರಣ ಗ್ರಂಥಗಳನ್ನು ರಚಿಸಿದರು ವ್ಯಾಕರಣದ ಹೊರತಾಗಿ **ಅಂಕಗಣಿತ, ಬೀಜಗಣಿತ, ಜ್ಯೋತಿಷ, ಆರ್ಯುವೈದ್ಯಕ** ಮುಂತಾದ ಶಾಸ್ತ್ರಗಳ ಸಂಬಂಧದ ಗ್ರಂಥಗಳು ಹುಟ್ಟಿದವು. **ಕಪಿಲ** ಮುನಿಯು **ಸಾಂಖ್ಯ** ಶಾಸ್ತ್ರವನ್ನು ಬರೆದನು. **ಗೌತಮು - ಕಣಾದರ** ನ್ಯಾಯಶಾಸ್ತ್ರಗಳು ಪ್ರಸಿದ್ಧವಾದವು. **ಜೈಮಿನಿಯ ಪೂರ್ವಮಿಮಾಂಸೆ** ಎಂಬ ಧರ್ಮಶಾಸ್ತ್ರಗ್ರಂಥವೂ **ಬಾದರಾಯಣನ ಉತ್ತರಮಿಮಾಂಸೆ** ಎಂಬ ಬ್ರಹ್ಮಜ್ಞಾನ ವಿಷಯದ ಗ್ರಂಥವೂ ಸಿದ್ಧವಾದವು. ಆರ್ಯರು ತತ್ವಜ್ಞಾನದ ಸಂಬಂಧವಾಗಿ ಅತಿ ಗಹನವಾದ ವಿಚಾರ ಮಾಡಹತ್ತಿದರು. ಬಿಹಾರಪ್ರಾಂತದಲ್ಲಿಯೂ, ಹಿಮಾಲಯದ ಅಡಿಯಲ್ಲಿರುವ ತೆರಾಯಿ ಎಂಬಲ್ಲಿಯೂ ನಿಸರ್ಗ ರಮಣೀಯವಾದ ಕೆಲವು ಅರಣ್ಯಗಳಿರುವವು. ಇವುಗಳಲ್ಲಿ ಜೇನು, ಹಣ್ಣು-ಹಂಪಲ, ಗಡ್ಡೆ-ಬೇರು ಮುಂತಾದ ಸ್ವಾಭಾವಿಕ ಆಹಾರಗಳು ಸಮೃದ್ಧವಾಗಿ ದೊರೆಯುವವು. ಏಕಾಂತಚಿತ್ತದಿಂದ ವಿಚಾರಮಗ್ನರಾಗಿರಲಿಕ್ಕೂ ಪ್ರಪಂಚದಲ್ಲಿ ತಾಪಗೊಂಡವರು ವಿಶ್ರಾಂತಿಯನ್ನು ಹೊಂದಲಿಕ್ಕೂ ತಪಸ್ಸನ್ನಾಚರಿಸಲಿಕ್ಕೂ ತಕ್ಕವಾದ ಅನೇಕ ಸ್ಥಳಗಳು ಈ ಅರಣ್ಯಗಳಲ್ಲಿರುವವು. ಪ್ರಾಚೀನಕಾಲದಲ್ಲಿ ಎಷ್ಟೋ ಸತ್ಪುರುಷರು, ಕವಿಗಳು, ತತ್ವಜ್ಞಾನಿಗಳು ಈ ತಪೋಭೂಮಿಗಳನ್ನು ಆಶ್ರಯಿಸಿ, ತಮ್ಮ ಬುದ್ಧಿ-ಜ್ಞಾನ-ವೈರಾಗ್ಯಗಳಿಂದ ಜಗತ್ತಿಗೆ ಮಾನ್ಯರಾಗಿರುವರು.

೮ ನೆಯ ಪಾಠ.

ಬೌದ್ಧ ಮತ್ತು ಜೈನ ಧರ್ಮಗಳು.



೧. **ಬೌದ್ಧಧರ್ಮದ ಸ್ಥಾಪನೆಯ ಕಾಲದ ಸ್ಥಿತಿ**:— ಆರ್ಯರು ತಮ್ಮ ಸಂಸ್ಕೃತಿಯನ್ನು ಹೆಚ್ಚು ಹೆಚ್ಚು ಹಬ್ಬಿಸುತ್ತ ನಡೆದ ಹಾಗೆಲ್ಲ ಅದರ ಮೊದಲಿನ ಶುದ್ಧ ರೂಪದಲ್ಲಿ ಕೆಲವು ದೋಷಗಳು ಅಡಕವಾದವು. ಕ್ಷುಲ್ಲಕ ವೆನಿಸಿದ ದೋಷಗಳು ಕ್ರಮದಿಂದ ಜೆಳೆಯಲಾರಂಭಿಸಿದವು. ಧರ್ಮ ಸಂಬಂಧವಾದ ಯಜ್ಞಯಾಗಗಳು ಆಳತೆಗೆಟ್ಟು ಆಗಹತ್ತಿದವು. ಕರ್ಮದ ಆಡಂಬರವೇ ಹೆಚ್ಚಾಗಿ ಧರ್ಮತತ್ವಗಳೆ ಕಡೆಗೆ ದುರ್ಲಕ್ಷ್ಯವಾಗಹತ್ತಿತು. ಯಜ್ಞದಿಂದ ಸದ್ಗತಿಯುಂಟಾಗುವದೆಂಬ ತಿಳುವಳಿಕೆಯೇ ಸ್ಥಿರವಾಗಿ ಶುದ್ಧಾಚರಣೆಯ ಕಡೆಗೆ ಅಲಕ್ಷ್ಯವಾಗಹತ್ತಿತು. ಇವೆಲ್ಲ ಸಂಗತಿಗಳು ವಿಚಾರವಂತರಲ್ಲಿ ಅಸಮಾಧಾನವನ್ನು ಉಂಟುಮಾಡಿದವು.

ಪ್ರಾಣಹಿಂಸೆ, ಜಾತಿಭೇದ ಪಕ್ಷಪಾತಬುದ್ಧಿಯಿಂದ ಮಾಡಿದ ನಿಯಮಗಳು, ಆಚಾರದ ಡಾಂಭಿಕತನ, ಧರ್ಮದ ನಿಜತತ್ವಗಳ ಕಡೆಗೆ ಆಗಹತ್ತಿದ ಅಲಕ್ಷ್ಯ ಇವುಗಳ ಮೂಲಕ ಜನಸಮಾಜವು ಗೊಂದಲದಲ್ಲಿ ಸಿಲುಕಿತು. ಇಂಥ ವಿಚಿತ್ರ ಸ್ಥಿತಿಯು ಇರುವಾಗ **ಗೌತಮ** ಮುನಿಯು ಅವತರಿಸಿದನು.


೨. **ಗೌತಮ ಬುದ್ಧ**:— **ಶಾಕ್ಯರ** ರಾಜಧಾನಿಯಾದ **ಕಪಿಲವಸ್ತು** ಎಂಬಲ್ಲಿ **ಶುದ್ಧೋದನನೆಂಬ** ಅರಸನು ಆಳುತ್ತಿದ್ದನು. **ಈ** ಶುದ್ಧೋದನನ ಮಗನೇ **ಸಿದ್ಧಾರ್ಥನು.** ತಂದೆಯು ಮಗನಿಗೆ ಉತ್ತಮವಾದ ಶಿಕ್ಷಣವನ್ನು **ಕೊಟ್ಟನು.** ಧನುರ್ವಿದ್ಯೆಯಲ್ಲಿ ನಿಪುಣನಾದ ಸಿದ್ಧಾರ್ಥನು **ಯಶೋಧರೆ**ಯೆಂಬ ರಾಜಕನ್ಯೆಯನ್ನು ಕಠಿಣವಾದ ಪಣವನ್ನು ಗೆದ್ದು ಲಗ್ನವಾದನು. ಸುಖೋಪಭೋಗಗಳನ್ನು ಅನುಭವಿಸುವ ಈತನು ವಿಲಾಸದಲ್ಲಿಯೇ ಮಗ್ನನಾಗಿರುವದು ಸ್ವಾಭಾವಿಕವಾಗಿತ್ತು. ಆದರೆ ಸಿದ್ಧಾರ್ಥನ ಮನಸ್ಸು ವಿಲಾಸಕ್ಕೂ ಸುಖಭೋಗಗಳಿಗೂ ಮೆಚ್ಚಲಿಲ್ಲ. ಐಹಿಕ

ವಿಚಾರಗಳ ಕಡೆಗೆ ಮನಸ್ಸು ಹಾಕದೆ ಎಲ್ಲ ಸಂಗತಿಗಳನ್ನು ಪಾರಮಾರ್ಥಿಕ ದೃಷ್ಟಿಯಿಂದ ಸೂಕ್ಷ್ಮವಾಗಿ ನಿರೀಕ್ಷಿಸತೊಡಗಿದನು. ಯಜ್ಞಗಳಿಂದ ಮೋಕ್ಷವು ಉಂಟಾಗುವದೋ? ಯಜ್ಞದಲ್ಲಾಗುವ ಪ್ರಾಣಿಹಿಂಸೆಯು ದೇವರಿಗೆ ಪ್ರಿಯವಾಗಬಹುದೇ? ಸಾಮಾಜಿಕ ವಿಷಮತೆಯು ಅನ್ಯಾಯಕರವಲ್ಲವೇ? ಇವೇ ಮುಂತಾದ ಪ್ರಶ್ನೆಗಳಿಂದ ಆತನ ಮನಸ್ಸು ವ್ಯಗ್ರವಾಯಿತು. ಮನಸ್ಸಿನ ಕಳವಳವು ಹೆಚ್ಚಿತು. ಒಂದು ದಿನ ಒಂದು ಹೆಣವನ್ನೂ, ವ್ಯಾಧಿಯಿಂದ ಬಳಲುವ ಒಬ್ಬ ರೋಗಿಯನ್ನೂ ನೋಡಿ **'ಈ ದೇಹವು ನಶ್ವರವು'** ಎಂದು ಮನಗಂಡು ರಾಜ್ಯವನ್ನೂ, ಹೆಂಡಿರು-ಮಕ್ಕಳನ್ನೂ ಅಗಲಿ ಅರಣ್ಯವನ್ನು ಸೇರಿದನು. ಅಲ್ಲಿ ಆರು ವರ್ಷಗಳ ವರೆಗೆ ತಪಸ್ಸನ್ನಾಚರಿಸಿದನು. ಬಳಿಕ, ಉಪವಾಸಾದಿ ದೇಹದಂಡನೆಗಳಿಂದ ಜ್ಞಾನಪ್ರಾಪ್ತಿಯು ಆಗದೆಂದು ತಿಳಿದು ತಪಾಚರಣೆಯನ್ನು ಬಿಟ್ಟುಬಿಟ್ಟನು. ಮುಂದೆ ಅವನು ಗಯೆಯ ಬಳಿಯ ಅರಣ್ಯದಲ್ಲಿ ಒಂಟಿಗನಾಗಿ ವಾಸಿಸಹತ್ತಿದನು. ಹೀಗಿರುವಾಗ ಒಂದು ದಿನ ಆತನು ಒಂದು ಅಶ್ವತ್ಥವೃಕ್ಷದ ಬುಡದಲ್ಲಿ ವಿಚಾರಮಗ್ನನಾಗಿ ಕುಳಿತಿರುವಾಗ ಒಮ್ಮೆಲೆ ಆತನಿಗೆ ದಿವ್ಯಜ್ಞಾನದ ಪ್ರಾಪ್ತಿಯಾಯಿತು. **ಈ ಅಶ್ವತ್ಥ** ವೃಕ್ಷಕ್ಕೆ **ಬೋಧಿವೃಕ್ಷ**ವೆಂದೂ ಆ ಸ್ಥಳಕ್ಕೆ * **ಬುದ್ಧಗಯೆ**ಯೆಂದೂ ಹೆಸರುಂಟಾಯಿತು. ಬುದ್ಧನು ಆ ಬಳಿಕ **ಕಾಶಿಯ** ನೆರೆಯಲ್ಲಿಯ **ಸಾರನಾಥ** ಎಂಬಲ್ಲಿ **ಮೃಗದಾವ** ಎಂಬ ಉಪವನಗಳಲ್ಲಿದ್ದುಕೊಂಡು ಜನರಿಗೆ ಉಪದೇಶ ಮಾಡತೊಡಗಿದನು. ಆಗ ಆತನು ಮೂವತ್ತಾರು ವರ್ಷದವನಿದ್ದನು. **ಕೋಸಲದ ಪ್ರಸೇನಜಿತನೂ** ಮಗಧದ ಬಿಂಬಿಸಾರನೂ ಗೌತಮಬುದ್ಧನ **ಈ** ಹೊಸ ಧರ್ಮವನ್ನು ಸೇರಿದರು. ರಾಜಾಶ್ರಯವು ದೊರೆತದರಿಂದ ಬುದ್ಧಧರ್ಮ ಪ್ರಸಾರಕ್ಕೆ ಮತ್ತಿಷ್ಟು ಸಹಾಯವಾಯಿತು **ನೇಪಾಳದ** ನೆರೆಯ **ಕುಶಿ** ಎಂಬ ಪಟ್ಟಣದಲ್ಲಿ ಗೌತಮ ಬುದ್ಧನು ತನ್ನ ವಯಸ್ಸಿನ ಅಂಶಿಯ ವರ್ಷ ಎಂದರೆ, ಕ್ರಿ. ಶ. ಪೂ. ೪೮೨ರಲ್ಲಿ ದೇಹವಿಟ್ಟನು. ಆಷ್ಟರಲ್ಲಿ ಅಸಂಖ್ಯ ಜನರು ಬೌದ್ಧಧರ್ಮಕ್ಕೆ ಸೇರಿದ್ದರು. ಶ್ರೀಕೃಷ್ಣ, ಯೇಸುಕ್ರಿಸ್ತ, ಮಹಮ್ಮದ

---

* ಸಿದ್ಧಾರ್ಥನ ಉಪದೇಶವನ್ನು ಕೇಳಿ ಬಹು ಜನರು ಅವನ ಶಿಷ್ಯರಾದರು. ಅಂದಿನಿಂದ ಸಿದ್ಧಾರ್ಥನಿಗೆ 'ಬುದ್ಧ' ಎಂದರೆ ಜ್ಞಾನಿ ಎಂಬ ಹೆಸರುಂಟಾಯಿತು.

ಜೈಗಂಬರ, ಬಸವೇಶ್ವರ ಮೊದಲಾದವರಂತೆಯೆ ಗೌತಮ ಬುದ್ಧನಾದರೂ ಮಹಾತ್ಮರಲ್ಲಿ ಎಣಿಸಲ್ಪಡುವನು.



ಗಯೆಯಲ್ಲಿದ್ದ ಬುದ್ಧನ ಗುಡಿ.

೩. **ಬೌದ್ಧಧರ್ಮದ ಪ್ರಸಾರ**:— ಬುದ್ಧನ ಮರಣದ ನಂತರ ಆತನ ಶಿಷ್ಯರು ರಾಜಗೃಹದಲ್ಲಿ ಒಂದು ಸಭೆಯನ್ನು ನೆರೆಯಿಸಿ, ಬುದ್ಧನ ವಚನಗಳನ್ನು ಸಂಗ್ರಹಿಸಿದರು. ಈ ಸಂಗ್ರಹಕ್ಕೆ **ಪೀತಕ**ಗಳೆಂಬ ಸಂಜ್ಞೆ. ಈ ಪೀತಕಗಳು ಮೂರು ಭಾಗಗಳಲ್ಲಿ ವಿಭಾಗಿಸಲ್ಪಟ್ಟಿವೆ. ಮುಂದೆ ಬೌದ್ಧ ಧರ್ಮವು ಹಿಂದುಧರ್ಮದಿಂದ ಭಿನ್ನವಾಗಿ ಕಾಣಹತ್ತಿ ಭರದಿಂದ ಹಬ್ಬ

ತೊಡಗಿತು. ಕಾಲಕಾಲಕ್ಕೆ ಬೌದ್ಧ ಭಿಕ್ಷುಗಳು ತಮ್ಮ ಧರ್ಮಸಭೆಯನ್ನು ಕರೆದು ತೊಡಕುಳ್ಳ ಪ್ರಶ್ನೆಗಳನ್ನು ಚರ್ಚಿಸಿ ಸಂಶಯಗಳನ್ನು ಪರಿಹರಿಸಿ ಕೊಳ್ಳುವರು. ಮೊದಲನೆಯ ಸಭೆಯಾದ ನಂತರ ನೂರು ವರ್ಷಕ್ಕೆ ಎರಡನೆಯ ಧರ್ಮಸಭೆಯು ನೆರೆಯಿತು. ಮುಂದೆ **ಅಶೋಕನು** ಮೂರನೆಯ ಮಹಾಸಭೆಯನ್ನು ಕೂಡಿಸಿದನು. ಹಿಂದುಸ್ಥಾನದಲ್ಲಿಯೂ ಹೊರದೇಶಗಳಲ್ಲಿಯೂ ಬೌದ್ಧಧರ್ಮವು ಭರದಿಂದ ಪ್ರಸಾರಗೊಂಡಿತು. ಕ್ರಿ. ಶಕದ ೧ನೆಯ ಶತಮಾನದಲ್ಲಿ **ಕನಿಷ್ಕನು** ೪ನೆಯ ಸಭೆಯನ್ನು ಕೂಡಿಸಿ ಬೌದ್ಧಧರ್ಮ ಗ್ರಂಥಗಳನ್ನು ಸಂಗ್ರಹಿಸಿದನು. **ಈ** ಧರ್ಮಗ್ರಂಥಗಳೆಲ್ಲ ಬಹುತರ **ಪಾಲೀ** ಭಾಷೆಯಲ್ಲಿಯೇ ಬರೆಯಲ್ಪಟ್ಟಿವೆ. ಬೌದ್ಧಧರ್ಮಾನುಯಾಯಿಗಳು ಸದ್ಯಕ್ಕೆ ಹಿಂದುಸ್ಥಾನದಲ್ಲಿರದಿದ್ದರೂ **ತಿಬೇಟು, ಚೀನ, ಬ್ರಹ್ಮದೇಶ, ಜಪಾನ, ಸಿಲೋನ ಈ** ದೇಶಗಳಲ್ಲಿ ಈಗ ಬೌದ್ಧಧರ್ಮವೇ ಮುಖ್ಯವಾಗಿದೆ. ಗ್ರೀಸ ದೇಶದ ಅರಸನಾದ **ಮಿಲಿಂದನು** ಈ ಧರ್ಮವನ್ನು ಸ್ವೀಕರಿಸಿದ್ದನು ಕ್ರಿ ಶ. ೨ನೆಯ ಶತಕದಲ್ಲಿ ಈ ಧರ್ಮದಲ್ಲಿ **ಮಹಾಯಾನ, ಹೀನಯಾನ** ಎಂಬ ಎರಡು ಪಂಗಡಗಳು ಉಂಟಾದವು. ಮಹಾಯಾನ ಪಂಥದವರು ಬುದ್ಧನ ಮೂರ್ತಿಯನ್ನು ಪೂಜಿಸಹತ್ತಿದರು.

೪. ಬೌದ್ಧಧರ್ಮದ ತತ್ವಗಳು :— ಬೌದ್ಧ ಮತ್ತು ಜೈನ ಧರ್ಮಗಳು ಹಿಂದುಧರ್ಮದಿಂದ ತೀರ ಸ್ವತಂತ್ರವಾದ ಹೊಸ ಧರ್ಮಗಳೆಂದು ತಿಳಿಯುವ ಕಾರಣವಿಲ್ಲ ಹಿಂದುಧರ್ಮದಲ್ಲಿಯ ತಮ್ಮ ಮನಸ್ಸಿಗೆ ಒಪ್ಪಿದ ತತ್ವಗಳನ್ನೇ ಬುದ್ಧ ಮತ್ತು ಮಹಾವೀರರು ಜನರಿಗೆ ಬೋಧಿಸಿರುವರು. ಗೌತಮ ಬುದ್ಧನಂತೂ ಉಪನಿಷತ್ತುಗಳಲ್ಲಿಯ ತತ್ವಗಳನ್ನೇ ಆಶ್ರಯಿಸಿರುವನು. ಯಜ್ಞಯಾಗಗಳ ಮೇಲೂ ವೇದಗಳಮೇಲೂ ಬುದ್ಧನ ಕಟಾಕ್ಷನಿತ್ತು.

ಭೂತದಯೆ, ಮನೋನಿಗ್ರಹ, ಅಹಿಂಸೆ ಇವು ಬುದ್ಧಮತದ ಮುಖ್ಯ ತತ್ವಗಳು. ಇವನ್ನು ಆಚರಿಸಿ ಯಾವನೇ ಆಗಲಿ ನಿರ್ವಾಣವನ್ನು (ಮುಕ್ತಿಯನ್ನು) ಹೊಂದಬಹುದು. ಆಶೆಯನ್ನು ತ್ಯಜಿಸಿ ನಿರ್ವಾಣವನ್ನು ಹೊಂದುವದಕ್ಕಾಗಿ ಎಂಟು ತರದ ಸಾಧನಗಳು ಹೇಳಲ್ಪಟ್ಟಿವೆ. ಈ ಅಷ್ಟವಿಧ ಸಾಧನಗಳಲ್ಲಿ ಸದಿಚ್ಛೆ, ಸತ್‌ಶ್ರದ್ಧೆ, ಸದ್ವರ್ತನ, ಸದ್ವಚನ, ಸತ್ಪರಿಶ್ರಮ,

ಸಚ್ಚಿಂತನ, ಸಚ್ಚಿಶ್ಚಯ ಎಂಬ ಎಂಟು ಉತ್ತಮ ನೀತಿ ತತ್ವಗಳು ಅಡಕ ವಾಗಿರುವವು.

೫. ಜೈನಧರ್ಮ :— (ಮಹಾವೀರ ವರ್ಧಮಾನ)– ಜೈನಮತದ ಉದ್ಧಾರಕನಾದ ಮಹಾವೀರ ವರ್ಧಮಾನನು ಕ್ರಿ. ಶ. ಪೂ. ೫೪೨ನೆಯ ವರ್ಷ **ವೈಶಾಲಿಯ ಲಿಚ್ಛವಿ** ಎಂಬ ರಾಜವಂಶದಲ್ಲಿ ಹುಟ್ಟಿದನು. ಚಿಕ್ಕಂದಿ ನಲ್ಲಿಯೇ ಮಹಾವೀರನು ವಿಚಾರಮಗ್ನನೂ, ವಿಷಯಪರಾಙ್ಮುಖನೂ ಆಗಿದ್ದನು. ಜನರನ್ನು ಉಪದೇಶಿಸುತ್ತ ಸಂಚರಿಸುವ **ಪಾರ್ಶ್ವನಾಥ** ನೆಂಬ ಸತ್ಪುರುಷನ ಶಿಷ್ಯನಾಗಿ, ಗುರುವಿನ ತರುವಾಯ ತಾನೇ ಉಪದೇಶ ಕಾರ್ಯವನ್ನು ಕೈಕೊಂಡನು. ಮುಂದೆ ಹೆಚ್ಚು ವಿದ್ಯೆಯನ್ನು ಸಂಪಾದಿಸಿ ಪ್ರಪಂಚವನ್ನು ತ್ಯಾಗಮಾಡಿ ಅಲ್ಲಲ್ಲಿ ಸಂಚರಿಸಿ ಸಾಧುಸಮಾಗಮದಿಂದ ಜ್ಞಾನವನ್ನು ಹೊಂದಿದನು. ಮತ್ತು ವಯಸ್ಸಿನ ನಾಲ್ವತ್ತೆರಡನೆಯ ವರ್ಷ ಜೈನಮತದ ತತ್ವಗಳನ್ನು ಜನರಿಗೆ ಬೋಧಿಸಹತ್ತಿದನು. ಇವನ ಪ್ರಯತ್ನ ದಿಂದ ಜೈನಮತದ ಪ್ರಸಾರವು ಒತ್ತರದಿಂದ ಆಗಹತ್ತಿತು. ಮಹಾವೀರನು ಕ್ರಿ. ಶ. ಪೂ. ೪೭೨ರಲ್ಲಿ ದೇಹವಿಟ್ಟನು.

೬. ಜೈನಧರ್ಮದ ತತ್ವಗಳು:— ಅಹಿಂಸೆಯು ಜೈನಧರ್ಮದ ಮುಖ್ಯ ತತ್ವವು. ಸದಾಚರಣೆಯಿಂದ ಇದ್ದು ಇಂದ್ರಿಯಗಳನ್ನು ಗೆಲೆದು ಮೋಕ್ಷವನ್ನು ಸಂಪಾದಿಸುವದು, ಈ ಧರ್ಮದ ಧ್ಯೇಯವ್ರ. ಕೇವಲ ಸಾಧು ವೃತ್ತಿಯನ್ನು ಸ್ವೀಕರಿಸದೆ ಪ್ರಪಂಚದಲ್ಲಿದ್ದುಕೊಂಡು ಜೈನತತ್ವಗಳಂತೆ ನಡೆ ಯುವವರು **ಶ್ರಾವಕ**ರೆನಿಸಿದರು ಜೈನಧರ್ಮದಲ್ಲಿ **ದಿಗಂಬರ, ಶ್ವೇತಾಂಬರ** ಎಂಬ ಎರಡು ಒಳಪಂಥಗಳುಂಟು. ಉಪವಾಸದಿಂದ ಶರೀರ, ಮನಸ್ಸು ಗಳನ್ನು ನಿರ್ಮಲವಾಗಿಟ್ಟುಕೊಂಡು ಎಲ್ಲ ಜಗತ್ತನ್ನೇ ಸಮದೃಷ್ಟಿಯಿಂದ ಪ್ರೀತಿಸುವದು ವರ್ಧಮಾನ ಮಹಾವೀರನ ಉಪದೇಶದ ಗುಟ್ಟಾಗಿರುವದು.

೭. ಜೈನ ಧರ್ಮದ ಪ್ರಸಾರ:— ಮಹಾವೀರನು ದೇಹವಿಡು ವಾಗ ಸುಮಾರು ಹದಿನಾಲ್ಕು ಸಾವಿರ ಜನರು ಜೈನಮತಾನುಯಾಯಿ ಗಳಾಗಿದ್ದರು. ಮುಂದೆ **ಮೌರ್ಯವಂಶದ ಚಂದ್ರಗುಪ್ತನು** ಜೈನತತ್ವಗಳನ್ನು ಸಂಗ್ರಹಿಸಿದನು. ಇವನ ಕಾಲದಲ್ಲಿ, **ಭದ್ರಬಾಹು** ಎಂಬ ಪಂಡಿತನು ಮುಂದೆ

ಭಯಂಕರವಾದ ಬರಬೀಳುವದೆಂಬದನ್ನು ಕಂಡು ಜೈನಸಾಧುಗಳ ಸಂಘ ದೊಂದಿಗೆ ದಕ್ಷಿಣ ಹಿಂದುಸ್ಥಾನಕ್ಕೆ ಬಂದನು. ಇವನ ಉಪದೇಶದಿಂದ ದಕ್ಷಿಣದಲ್ಲಿದ್ದ ಜೈನಮತವೂ ಹೆಚ್ಚು ಬೆಳವಣಿಗೆ ಹೊಂದಿತು. ಜೈನಧರ್ಮಾನು ಯಾಯಿಗಳು ಹಿಂದುಸ್ಥಾನದ ಎಲ್ಲ ಭಾಗಗಳಲ್ಲಿ ಇರುವರು. ಇವರು ವ್ಯಾಪಾರದಿಂದ ಧನಿಕರಾಗಿದ್ದು ಸಾತ್ವಿಕರೂ ಪರೋಪಕಾರಿಗಳೂ ಎಂದು ಹೆಸರಾಗಿರುವರು. ಜೈನರು ಅಲ್ಲಲ್ಲಿ ಕಟ್ಟಿಸಿದ ಭವ್ಯವಾದ ಮಂದಿರ, ಧರ್ಮಶಾಲೆ, ಔಷಧಾಲಯಗಳು ಇವು ಅವರ ಪರೋಪಕಾರ, ದಾತೃತ್ವ ಇವುಗಳ ಸಾಕ್ಷಿಗಳಾಗಿವೆ ಹಿಂದುಸ್ಥಾನದ ಹೊರಗೆ ಜೈನಧರ್ಮದ ಪ್ರಸಾರ ವಾಗಲಿಲ್ಲ. ಬೌದ್ಧಧರ್ಮವು ಹೊರದೇಶಗಳಲ್ಲಿ ಬಹು ದೊಡ್ಡ ಜನಾಂಗದ ಧರ್ಮವೆನಿಸಿದ್ದರೂ ಹಿಂದುಸ್ಥಾನದಲ್ಲಿ ಜನಿಸಿದಂಥ ಆ ಧರ್ಮಕ್ಕೆ ಇಲ್ಲಿಯೇ ನೆಲೆಯೂರಿ ನಿಲ್ಲಲು ಅವಕಾಶವು ಉಳಿಯಲಿಲ್ಲ! ಆದರೆ ಜೈನಧರ್ಮವು ಮಾತ್ರ ಸ್ಥಿರವಾಗಿ ಉಳಿದದೆ!! ಮುಂದಿನ ಕಾಲದಲ್ಲಿ ಹಿಂದುಧರ್ಮಿಗಳು ಕುಶಲತನದಿಂದ, ಬುದ್ಧ ಧರ್ಮದವರ ಉತ್ತಮವಾದ ತತ್ವಗಳನ್ನು ಸ್ವೀಕರಿಸಿ, ಲೋಕಪ್ರಿಯವಾದ ಭಾಗವತ ಧರ್ಮವನ್ನು ಜನರಿಗೆ ಬೋಧಿಸಿ, ಪ್ರಚಂಡವಾದ ಚಟುವಟಿಕೆಯನ್ನು ಮಾಡಿ ಬೌದ್ಧಧರ್ಮಕ್ಕೆ ನಿಲ್ಲಲು ಆಧಾರವಿಲ್ಲದ ಹಾಗೆ ಮಾಡಿದರು. ಜೈನಧರ್ಮದಿಂದ ಹಿಂದು ಧರ್ಮಕ್ಕೆ ವಿಶೇಷ ಬಾಧೆ ತಟ್ಟದೆಯಿದ್ದುದರಿಂದಲೂ ಜೈನಧರ್ಮದ ಸಾತ್ವಿಕಸ್ವರೂಪವು ಜನಸಾಮಾನ್ಯರಿಗೆ ಪ್ರಿಯವಾದುದರಿಂದಲೂ ಈ ಧರ್ಮವು ಈ ದೇಶದಲ್ಲಿ ಉಳಿದುಕೊಂಡಿದೆ.

---

೯ ನೆಯ ಪಾಠ.

ಸಿಕೆಂದರನ ದಾಳಿ. ಕ್ರಿ. ಶ. ಪೂ. ೩೨೭ ರಿಂದ ಕ್ರಿ. ಶ. ಪೂ. ೩೨೫.



೧. ನಂದವಂಶ:— ಶೈಶುನಾಗವಂಶವು ಕ್ರಿ. ಶ. ಪೂ. ೪೧೩ರಲ್ಲಿ ಮುಗಿದು ಹೋದ ಬಳಿಕ ನಂದರು ಮಗಧರಾಜ್ಯವನ್ನು ಆಳಹತ್ತಿದರು.

ಈ ವಂಶದ ಒಂಬತ್ತು ಜನ ಅರಸರು ಸುಮಾರು ತೊಂಬತ್ತು ವರ್ಷಗಳ ವರೆಗೆ ರಾಜ್ಯವಾಳಿದರು. ಕಡೆಗೆ ಚಂದ್ರಗುಪ್ತನು **ಚಾಣಕ್ಯ**ನೆಂಬ ಪ್ರಸಿದ್ಧನಾದ ಮುತ್ಸದ್ದಿಯ ನೆರವಿನಿಂದ ಕ್ರಿ. ಶ. ಪೂ. ೩೨೧ರಲ್ಲಿ ಮೌರ್ಯ ದೇಶದ ಮೇಲೆ ದಂಡೆತ್ತಿ ಹೋಗಿ **ಧನಾನಂದ**ನೆಂಬ ನಂದರಾಜನನ್ನು ಕೊಂದು ಆ ವಂಶವನ್ನು ನಿರ್ಮೂಲ ಮಾಡಿದನು. ಬಳಿಕ ಚಂದ್ರಗುಪ್ತನು ಮಗಧ ರಾಜ್ಯದ ಒಡೆಯನಾದನು.

೨. **ಅಲೆಕ್ಸ್‌ಾಂಡರನ ಅಥವಾ ಸಿಕಂದರನ ಉದಯ**:— ಗ್ರೀಸದ ಉತ್ತರಕ್ಕಿರುವ **ಮಾಸಿಡೋನಿಯ**ದಲ್ಲಿ **ಫಿಲಿಪ**ನೆಂಬ ಪರಾಕ್ರಮಿಯಾದ ಅರಸನು ಆಳುತ್ತಿದ್ದನು. ಇವನ ಮಗನೇ ಜಗದ್ವಿಖ್ಯಾತನಾದ **ಅಲೆಕ್ಸ್‌ಾಂಡರ** ಅಥವಾ **ಸಿಕಂದರ**ನು. ತಂದೆಯ ತರುವಾಯ ಸಿಕಂದರನು ಪಟ್ಟಕ್ಕೆ ಬಂದನು. ಇವನು ಶೂರನೂ, ಸಾಹಸಿಯೂ, ಚತುರನೂ ಆದ ಸೇನಾಪತಿಯಾಗಿದ್ದನು. ಜಗತ್ತನ್ನೇ ಗೆದೆಯುವ ಆಭಿಲಾಷೆಯು ಇವನದಿದ್ದಿತು. **ಗ್ರೀಸ್, ಇರಾಣ** ದೇಶಗಳನ್ನು ಗೆದ್ದುಕೊಂಡ ಬಳಿಕ ಇವನು **ಹಿಂದುಸ್ಥಾನ**ವನ್ನು ನುಗ್ಗಬೇಕೆಂದು ಹೊರಟನು.

೩. **ಸಿಕಂದರನು ಹಿಂದುಸ್ಥಾನದ ಮೇಲೆ ದಂಡೆತ್ತಿ ಬಂದದ್ದು**:— ಸಿಕಂದರನು ಕ್ರಿ. ಶ. ಪೂ. ೩೨೯ ರಲ್ಲಿ **ಕಾಬೂಲ**ದ ವರೆಗೆ ಬಂದು ತಿರುಗಿ ಹೋದನು. ಮುಂದೆ ೨ ವರ್ಷಗಳ ತರುವಾಯ ಎಂದರೆ ಕ್ರಿ. ಶ. ಪೂ. ೩೨೭ನೆಯ ವರ್ಷ ಕುದುರೆಯ ರಾವುತರಿಂದ ಕೂಡಿದ ಸುಮಾರು ೩೦ ಸಾವಿರ ಸೈನ್ಯದೊಡನೆ ಹಿಂದುಸ್ಥಾನದ ವಾಯವ್ಯ ಸರಹದ್ದಿಗೆ ಬಂದನು. ಚಳಿಗಾಲವು ಹೋಗಿ ಬೇಸಿಗೆ ಬರಲು **ಓಹಿಂದದ** ಹತ್ತರ ಸಿಂಧೂ ನದವನ್ನು ದಾಟಿ * **ತಕ್ಷಶಿಲೆ**ಯ ರಾಜ್ಯವನ್ನು ಸೇರಿದನು. ಪಂಚಾಬದ ಸಣ್ಣ ದೊಡ್ಡ ರಾಜರು ಒಬ್ಬರೊಬ್ಬರ ವೈರಿಗಳಾಗಿದ್ದರು. ತಕ್ಷಶಿಲೆಯ **ಅಂಭಿ** ಎಂಬ ರಾಜನು ಅಲೆಕ್ಸ್‌ಾಂಡರನನ್ನು ಕೂಡಿಕೊಂಡು **ಪೋರವ**ನೊಡನೆ

* ತಕ್ಷಶಿಲೆ ಅಥವಾ ತಕ್ಷಿಲೆ ಎಂಬುದು ಆ ಕಾಲದ ಸುಪ್ರಸಿದ್ಧವಾದ ವಿಶ್ವವಿದ್ಯಾಲಯವಾಗಿದ್ದಿತು. ಇದು ರಾವಳಪಿಂಡಿಯ ವಾಯವ್ಯಕ್ಕೆ ೧೦ ಮೈಲಿನ ಮೇಲೆ ಇದೆ. ಸಂಶೋಧಕರು ನೆಲದಲ್ಲಿ ಹೂಳಿಹೋಗಿದ್ದ ಈ ಪಟ್ಟಣದ ಅವಶೇಷಗಳನ್ನು ಹೊತ್ತು ಹಚ್ಚುತ್ತಿರುವರು.

ಯುದ್ಧಮಾಡಲಿಕ್ಕೆ ಐದು ಸಾವಿರ ರಾಹುತರ ಬೆಂಬಲವನ್ನಿತ್ತನು. ಪೋರವನು ಧೈರ್ಯದಿಂದ ಯುದ್ಧಕ್ಕೆ ಸಿದ್ಧನಾದನು. ಜೇಹಲಂ ನದಿಯ ತೀರದಲ್ಲಿ ಘೋರವಾದ ಯುದ್ಧವಾಯಿತು. ಪೋರವನು ಸೋತು ಕೈಸೆರೆಯಾದನು. ಅಲೆಕ್ಸಾಂಡರನು ಪೋರವ (**ಪೌರಸ**) ನ ಧೈರ್ಯ-ಶೌರ್ಯಗಳಿಗೆ ಮೆಚ್ಚಿ ಅವನ ಇಚ್ಛೆಯ ಪ್ರಕಾರ ರಾಜ್ಯವನ್ನು ತಿರುಗಿ ಕೊಟ್ಟನು. ಪರಚಕ್ರಗಳು ಬಂದಾಗ ಒಕ್ಕಟ್ಟಿನಿಂದ ಎದುರಿಸುವದನ್ನು ಬಿಟ್ಟು ಅಂಭಿಯು ಅವನಿಗೆ ಸಹಾಯ ಮಾಡಿದನು. ವೇದವಿದ್ಯೆಯ ಆಗರವೆನಿಸಿದ ತಕ್ಷಶಿಲೆಯ ಕಣ್ಣಿಗೂ, ಈ ಕೃತಿಯಿಂದ ರಾಷ್ಟ್ರಕ್ಕೆ ಅಪಾಯವಾದೀತೆಂಬ ವಿಚಾರವು ಕಾಣದೆ ಹೋಯಿತು! ತಕ್ಷಶಿಲೆಯ ಅಂಬಿಯು ಮಾಡಿದ ತಪ್ಪನ್ನೇ **ಮಹಮ್ಮದ** ಬಿನ್ **ಕಾಶೀಮ್, ಘೋರೀ ಮಹಮ್ಮದ** ಮುಂತಾದವರು ದಂಡೆತ್ತಿಬಂದಾಗ ಹಿಂದುಗಳು ಮಾಡಿರುವರು.

೪. **ಸಿಕೆಂದರನು ಹಿಂದಿರುಗಿ ಹೋದದ್ದು**:— ಬಳಿಕ ಸಿಕಂದರನು ಪೂರ್ವಕ್ಕೆ ಸಾಗುತ್ತ ಸತಲಜ ನದಿಯವರೆಗೆ ಹೋದನು. ಇಡೀ ಹಿಂದುಸ್ಥಾನವನ್ನು ಆಧೀನ ಪಡಿಸಿಕೊಳ್ಳುವ ಮನಸ್ಸು ಅವನದಿತ್ತು. ಮಗಧ ರಾಜ್ಯವು ಆಗ ಒಳ್ಳೆಯ ಬಲಾಢ್ಯವಾಗಿತ್ತು. ಸಿಕಂದರನ ಸೈನಿಕರು ಮುಂದೆ ಸಾಗಲು ಒಪ್ಪಲಿಲ್ಲ. ಅವರು ತಮ್ಮ ದೇಶಕ್ಕೆ ಹೋಗುವ ಆತುರವುಳ್ಳವರಾಗಿದ್ದರು. ಆದದರಿಂದ ಸಿಕಂದರನು ತನ್ನ ಇಚ್ಛೆಯನ್ನು ಒತ್ತಿಕ್ಕಿ ತಿರುಗಿ ಹೊರಟು ಹೋಗಬೇಕಾಯಿತು. ಬಂದ ದಾರಿಯಿಂದ ತಿರುಗಿ ಹೋಗದೆ ಅವನು ಜೆಹಲಂ, ಸಿಂಧುಗಳ ಜಲಮಾರ್ಗವಾಗಿ ಮುಖದ ವರೆಗೆ ಹೋಗಿ ಮುಂದೆ ಸಮುದ್ರದ ದಂಡೆಗುಂಟ ಇರಾಣದ ಆಖಾತಕ್ಕೆ ತಲುಪಿದನು. ಮತ್ತು ತನ್ನ ದೇಶಕ್ಕೆ ಮುಟ್ಟುವ ಪೂರ್ವದಲ್ಲಿಯೇ ಕ್ರಿ. ಶ. ಪೂ. ೩೨೫ನೆಯ ವರ್ಷ, ಮುವತ್ತೆರಡು ವರ್ಷದವನಿರುವಾಗ **ಬಾಬಲಿನ** ಪಟ್ಟಣದಲ್ಲಿ ಮರಣಹೊಂದಿದನು.

೫. **ಸಿಕೆಂದರನ ದಾಳಿಯ ಪರಿಣಾಮ**:— ಈ ದಾಳಿಯ ನಂತರ ಹಿಂದುಸ್ಥಾನ-ಯುರೋಪಗಳ ಬಳಕೆಯು ಹೆಚ್ಚಿತು ಸಿಕಂದರನ ಸಂಗಡ ಗ್ರೀಸದ ಬಹುಜನ ವಿದ್ವಾಂಸರು ಇತ್ತ ಬಂದಿದ್ದರು. ಅವರು ಆಗಿನ

ಹಿಂದುಸ್ಥಾನದ ಸ್ಥಿತಿಯನ್ನು ವರ್ಣಿಸಿರುವರು. ಸಿಕಂದರನು ತನ್ನೊಡನೆ ಈ ದೇಶದ ಎಷ್ಟೋ ಪಂಡಿತರನ್ನೂ ಅನೇಕ ಗ್ರಂಥಗಳನ್ನೂ ಒಯ್ದಿದ್ದನು. ಇದರಿಂದ ಹಿಂದುಸ್ಥಾನದ ಸಂಪತ್ತು, ವಿದ್ಯೆ, ಕಲೆ, ಆಚಾರ, ವಿಚಾರ ಇವುಗಳ ಜ್ಞಾನವು ಯುರೋಪದವರಿಗಾಯಿತು.

೬. **ಅತಿ ಪ್ರಾಚೀನ ಕಾಲದ ಕಡೆ**:— ಕ್ರಿ. ಶ. ಪೂ. ೩೨೭ ರ ತರುವಾಯ ಹಿಂದುಸ್ಥಾನದೊಡನೆ ವಿದೇಶಗಳ ಸಂಬಂಧವು ಹೆಚ್ಚುತ್ತ ನಡೆದದರಿಂದ, ಈ ದೇಶದ ಇತಿಹಾಸದೊಳಗಿನ ಅನಿಶ್ಚಿತ ವಿಷಯಗಳನ್ನು ಸಮಕಾಲೀನವಾದ, ವಿದೇಶಗಳ ಇತಿಹಾಸಕ್ಕೆ ಒರೆಗಾಣಿಸಿಕೊಳ್ಳಲು ಅನುಕೂಲವಾಗಿರುವದು. ಈ ಪ್ರಕಾರದ ಅನುಕೂಲತೆಯು ಅತಿ ಪ್ರಾಚೀನ ಕಾಲದ ಇತಿಹಾಸಕ್ಕೆ ಇರುವದಿಲ್ಲ. ಇದೇ ಕಾರಣದಿಂದ, ನೇದಕಾಲದಿಂದ ಕ್ರಿ. ಶ. ಪೂ. ೩೨೭ರ ವರೆಗಿನ ಇತಿಹಾಸವನ್ನು ಪ್ರಾಚೀನ ಕಾಲದ ಇತಿಹಾಸದಿಂದ ಬೇರ್ಪಡಿಸಿ, ಅದನ್ನು **ಅತಿ ಪ್ರಾಚೀನಕಾಲ**ವೆಂಬ ಸ್ವತಂತ್ರ ವಿಭಾಗದಲ್ಲಿ ವಿವರಿಸಿರುತ್ತದೆ. ಇಲ್ಲಿಗೆ ಅತಿ ಪ್ರಾಚೀನಕಾಲವು ಮುಗಿಯಿತು. ಮುಂದಿನ ವಿಭಾಗದಲ್ಲಿ ಸಿಕಂದರನ ದಾಳಿಯ ತರುವಾಯದ ಇತಿಹಾಸವು ಆರಂಭವಾಗುವದು.

ಅತಿ ಪ್ರಾಚೀನ ಕಾಲದಲ್ಲಿ ವರ್ತಿಸಿದ
ಕೆಲವು ಸಂಗತಿಗಳ ಕಾಲಗಳು.

ಶೈಶುನಾಂಗ ವಂಶ—(ಕ್ರಿ. ಶ. ಪೂ. ೬೪೨. ಕ್ರಿ. ಶ. ಪೂ. ೪೧೩).

೧.	ಬಿಂಬಿಸಾರ	ಕ್ರಿ. ಶ. ಪೂ.	೬೪೨	ಕ್ರಿ. ಶ. ಪೂ.	೪೮೩
೨.	ಅಜಾತಶತ್ರು	,,	೫೮೨	,,	೫೫೪
೩.	ದರ್ಶಕ	,,	೫೫೪	,,	೫೨೭
೪.	ಉದಯ	,,	೫೨೭	,,	೫೦೩
	ಉಳಿದ ಅರಸರು	,,	೫೦೩	,,	೪೮೩

ಕ್ರಿ. ಶ. ಪೂ.	೩೦೦೧			ಮಹಾಭಾರತ ಯುದ್ಧ
,,	೨೦೦೦	**ಕ್ರಿ. ಶ. ಪೂ.**	೧೫೦೦	ಆರ್ಯರ ಪ್ರಗತಿ
,,	೧೫೦೦	,,	೧೦೦೦	ಉಪನಿಷತ್ಕಾಲ
,,	೮೦೦	,,	೭೦೦	ಪಾಣಿನಿಯ ಕಾಲ
,,	೬೫೦			ನಾಣ್ಯಗಳ ಪ್ರಚಾರ
,,	೫೬೭	,,	೪೮೨	ಗೌತಮ ಬುದ್ಧ
,,	೫೪೭	,,	೪೬೭	ಮಹಾವೀರವರ್ಧಮಾನ
,,	೪೦೦			ಕಣಾದನ ಕಾಲ
,,	೩೨೭	,,	೩೨೫	ಸಿಕಂದರನ ದಾಳಿ

ಅತಿ ಪ್ರಾಚೀನಕಾಲದ ಇತಿಹಾಸದ ಆವರ್ತನೆಯ ಹಾಗೂ
ಪರೀಕ್ಷೆಯ ಪ್ರಶ್ನೆಗಳು.

೧. ಹಿಂದುಸ್ಥಾನದ ವೈಭವಕ್ಕೆ ಇದರ ಪ್ರಾಕೃತಿಕ ಸ್ವರೂಪವು ಹೇಗೆ ಕಾರಣವಾಯಿತು?

೨. ಆರ್ಯರ ಮೂಲ ಸ್ಥಾನವು ಯಾವದು? ಅವರು ಹಿಂದುಸ್ಥಾನಕ್ಕೆ ಯಾವ ಮಾರ್ಗವಾಗಿ ಬಂದರು?

೩. ಮೂಲ ನಿವಾಸಿಗಳು, ದ್ರವಿಡರು, ಪಂಜಾಬದ ಆರ್ಯರು ಇವರ ವಿಷಯವಾಗಿ ಗೊತ್ತಿದ್ದುದನ್ನು ಸಂಕ್ಷೇಪವಾಗಿ ಬರೆಯಿರಿ.

೪. ದ್ರವಿಡರ ಮೂಲಸ್ಥಾನ, ಅವರ ಪ್ರಗತಿ, ಅವರ ಭಾಷೆಯ ಈಗಿನ ಸ್ವರೂಪ ಇವುಗಳ ಸಂಬಂಧವಾಗಿ ಟಿಪ್ಪಣಿಗಳನ್ನು ಕೊಡಿರಿ.

೫. ಆರ್ಯಸಂಸ್ಕೃತಿಯ ಮಹತ್ವವವನ್ನೂ, ಗಂಗಾತೀರದ ಆರ್ಯರ ಪ್ರಗತಿಯನ್ನೂ ವಿವರಿಸಿರಿ.

೬. ಆರ್ಯರ ವರ್ಣವ್ಯವಸ್ಥೆಯು ಹೇಗೆ ಉದಯ ಹೊಂದಿತು? ಅವರ ವ್ಯವಸ್ಥೆಯು ಹೇಗಿದ್ದಿತು?

೭. ವೇದಗಳು, ಬ್ರಾಹ್ಮಣಗಳು, ಉಪನಿಷತ್ತುಗಳು, ಸೂತ್ರಗಳು, ಭಗವದ್ಗೀತೆ ಇವುಗಳ ವಿಷಯಕ್ಕೆ ಟಿಪ್ಪಣಿಗಳನ್ನು ಬರೆಯಿರಿ.

೮. ರಾಮಾಯಣ - ಮಹಾಭಾರತಗಳ ಕಥೆಗಳನ್ನು ಸಂಕ್ಷಿಪ್ತದಲ್ಲಿ ಹೇಳಿ ಅವುಗಳೊಳಗಿನ ಅನುಕರಣೀಯವಾದ ವ್ಯಕ್ತಿಗಳಲ್ಲಿ ಯಾವ ಯಾವ ಸದ್ಗುಣಗಳಿದ್ದವೆಂಬದನ್ನು ಹೇಳಿರಿ.

೯. ಅತಿ ಪ್ರಾಚೀನಕಾಲದ ಭರತಖಂಡದ ರಾಜ್ಯಗಳು ಯಾವವು? ಅವು ಈಗಿನ ಯಾವ ಯಾವ ಪ್ರಾಂತಗಳಲ್ಲಿದ್ದವು?

೧೦. ಬೌದ್ಧಧರ್ಮದ ಉದಯವಾಗಲು ಕಾರಣಗಳಾವವು? ಆ ಧರ್ಮವು ಹಿಂದುಸ್ಥಾನದಲ್ಲಿ ಏಕೆ ಬೇರೂರಿ ನಿಲ್ಲಲಿಲ್ಲ?

೧೧. ಮಹಾತ್ಮ ಗೌತಮ ಬುದ್ಧ ಮತ್ತು ಮಹಾವೀರ ವರ್ಧಮಾನ ಇವರ ಚರಿತ್ರೆಗಳನ್ನು ಸ್ವಲ್ಪದರಲ್ಲಿ ಬರೆದು, ಅವರು ಸ್ಥಾಪಿಸಿದ ಮತತತ್ವಗಳ ಸಾಮ್ಯ-ವೈಷಮ್ಯಗಳನ್ನು ವಿವರಿಸಿರಿ.

೧೨. ಸಿಕಂದರನ ದಾಳಿಯ ವಿಷಯವಾಗಿ ಗೊತ್ತಿದ್ದುದನ್ನು ಬರೆಯಿರಿ. ಈ ದಾಳಿಯಲ್ಲಿ ಹಿಂದುಗಳಿಗೆ ಅಪಶಯವಾಗಲು ಕಾರಣವೇನು? ಈ ದಾಳಿಯಿಂದ ಈ ದೇಶದ ಮೇಲೆ ಪರಿಣಾಮವೇನಾಯಿತು?

ಎರಡನೆಯ ಭಾಗ

ಪ್ರಾಚೀನಕಾಲ. (ಕ್ರಿ. ಶ. ಪೂ. ೩೨೦ ರಿಂದ ಕ್ರಿ. ಶ. ೧೨೦೫ ರ ವರೆಗೆ).

೧ ನೆಯ ಪಾಠ.

ಮೌರ್ಯ ಸಾಮ್ರಾಜ್ಯ

(ಕ್ರಿ. ಶ. ಪೂ. ೩೨೧ ರಿಂದ ಕ್ರಿ. ಶ. ಪೂ. ೧೮೪)

೧. **ಚಂದ್ರಗುಪ್ತ**:— (ಕ್ರಿ. ಶ. ಪೂ. ೩೨೧. ಕ್ರಿ. ಶ. ಪೂ. ೨೯೪) ಇವನು ಕ್ರಿ ಶ. ಪೂ. ೩೨೧ನೆಯ ವರ್ಷ ನಂದವಂಶವನ್ನು ಹಾಳುಮಾಡಿ ಮಗಧರಾಜ್ಯದ ಒಡೆಯನಾದನು. ಈ ರಾಜ್ಯವನ್ನು ದೊರಕಿಸುವ ಕಾರ್ಯದಲ್ಲಿ ಇವನಿಗೆ **ವಿಷ್ಣುಗುಪ್ತ** ಅಥವಾ **ಆರ್ಯಚಾಣಕ್ಯ**ನೆಂಬ ಬುದ್ಧಿಶಾಲಿಯಾದ ಬ್ರಾಹ್ಮಣನ ಸಹಾಯವು ದೊರೆಯಿತು ಈ ಆರ್ಯಚಾಣಕ್ಯನು ನಂದರ ಮಂತ್ರಿಯಾಗಿದ್ದನು. ಇವನು ಬರೆದ ಕೌಟಲೀಯ ಅರ್ಥಶಾಸ್ತ್ರವೆಂಬ ಗ್ರಂಥದಲ್ಲಿ ರಾಜನೀತಿ ಶಾಸ್ತ್ರವು ಮಾರ್ಮಿಕವಾಗಿ ನಿವೇಚಿಸಲ್ಪಟ್ಟಿರುವದು. ಈತನು ಆರ್ಯ ಧರ್ಮದ ಅಭಿಮಾನಿಯಾಗಿದ್ದನು. **ನಂದ** ಅರಸರು ಬೌದ್ಧ ಧರ್ಮಕ್ಕೆ ಅನುಕೂಲರಾಗಿದ್ದರು. ಒಂದು ದಿನ ತುಂಬಿದ ಸಭೆಯಲ್ಲಿ ನಂದರಿಂದ ಚಾಣಕ್ಯನ ಅಪಮಾನವಾಯಿತು ಆಗ ಚಾಣಕ್ಯನು "ನಾನು ನಂದರನ್ನು ನಾಶ ಮಾಡದಿದ್ದರೆ ಚಾಣಕ್ಯನೇ ಅಲ್ಲ" ಎಂದು ಪ್ರತಿಜ್ಞೆ ಮಾಡಿದನು. ನಂದರ ಸೇನಾಪತಿಯಾದ ಚಂದ್ರಗುಪ್ತನಿಗೂ ನಂದರನ್ನು ನಾಶಗೊಳಿಸುವದೇ ಬೇಕಿದ್ದಿತು. ಚಾಣಕ್ಯ – ಚಂದ್ರಗುಪ್ತರು ನಂದರ ನಾಶಕ್ಕಾಗಿ ಮಾಡಿದ ಒಂದು ಪ್ರಯತ್ನವು ಸಫಲವಾಗದಿರಲು ಇಬ್ಬರೂ ನಂದರಾಜ್ಯದಿಂದ ಹೊರಗೆ ಹಾಕಲ್ಪಟ್ಟರು. ಅವರು ಹತಾಶರಾಗದೆ ಪಂಜಾಬದಲ್ಲಿ ನಿಂತುಕೊಂಡು ನಂದರಾಜರ ನಾಶದ ಉಪಾಯವನ್ನು ಯೋಚಿಸುತ್ತಿದ್ದರು. ಸಿಕಂದರನ ಮರಣದ ನಂತರ ಪಂಜಾಬದ ಪೋರವ ಮೊದಲಾದ ಅರಸರ ಸಹಾಯವನ್ನು ಪಡೆದು, ನಂದರ ರಾಜ್ಯವನ್ನು ನುಗ್ಗಿ, **ಧನಾನಂದನನ್ನು** ಸೋಲಿಸಿ ಕೊಂದು ಮಗಧ ರಾಜ್ಯವನ್ನು

ಅಕ್ರಮಿಸಿದರು ಚಾಣಕ್ಯನು ಚಂದ್ರಗುಪ್ತನ ಮಂತ್ರಿಯಾದನು. ಚಂದ್ರಗುಪ್ತ ಚಾಣಕ್ಯರ ಶೌರ್ಯ, ಸಾಹಸ, ಬುದ್ಧಿಶಕ್ತಿ ಇವುಗಳ ಸಂಯೋಗದಿಂದ ಪ್ರಾಚೀನ ಇತಿಹಾಸ ಕಾಲದ ಮೊದಲನೆಯ ಸಾಮ್ರಾಜ್ಯವು ಸ್ಥಾಪಿತವಾಯಿತು. ಮುಂದೆ ಮಧ್ಯಕಾಲದಲ್ಲಿ **ಹರಿಹರ–ವಿದ್ಯಾರಣ್ಯರು** ಸ್ಥಾಪಿಸಿದ ವಿಜಯನಗರದ ಸಾಮ್ರಾಜ್ಯವು ಎರಡನೆಯದು. ಮತ್ತು ಅರ್ವಾಚೀನ ಕಾಲದಲ್ಲಿ **ಶಿವಾಜಿ–ರಾನುದಾಸರು** ಸ್ಥಾಪಿಸಿದ ಸಾಮ್ರಾಜ್ಯವು ಮೂರನೆಯದು. ಈ ಮೂರು ಸಾಮ್ರಾಜ್ಯಗಳ ಸ್ಥಾಪನೆಯಲ್ಲಿ ಶೌರ್ಯ, ಧೈರ್ಯ, ಸಾಹಸ, ಬುದ್ಧಿಚಾತುರ್ಯ, ವಿದ್ಯೆ, ನೀತಿ ಇವುಗಳ ಮನೋಹರವಾದ ಸಂಗಮವಾದದ್ದು ಕಂಡು ಬರುವದು.

೨. **ಚಂದ್ರಗುಪ್ತನ ರಾಜ್ಯವಿಸ್ತಾರ**:— ಚಂದ್ರಗುಪ್ತನು ಪಟ್ಟಕ್ಕೆ ಬಂದ ಬಳಿಕ ಭರದಿಂದ ರಾಜ್ಯವನ್ನು ವಿಸ್ತರಿಸಿದನು ಸಿಕಂದರನ ಒಡೆತನಕ್ಕೆ ಸೇರಿದ್ದ ಪಂಜಾಬ ಪ್ರಾಂತವನ್ನು ಇವನು ತನ್ನ ಅಧಿಕಾರಕ್ಕೊಳಪಡಿಸಿಕೊಂಡನು. ಸಿಂಧುನದದಿಂದ ಬಂಗಾಲದ ವರೆಗಿನ ಎಲ್ಲ ರಾಜ್ಯವು ಇವನ ವಶಕ್ಕೆ ಬಂದಿತು. ಇಷ್ಟರಲ್ಲಿ ಸಿಕಂದರನ ಶೂರ ಸೇನಾಪತಿಯಾದ **ಸೆಲ್ಯೂಕಸ**ನು ಸಿಂಧದ ಆಚೆಯ ಪ್ರದೇಶಗಳ ಮೇಲೆ ತನ್ನ ಒಡೆತನವನ್ನು ನೆಲೆಸಿ ಹಿಂದುಸ್ಥಾನದ ಮೇಲೆ ಸಾಗಿಬಂದನು. ಆಗ ಸೆಲ್ಯೂಕಸನಿಗೂ ಚಂದ್ರಗುಪ್ತನಿಗೂ ಯುದ್ಧವಾಗಿ ಸೆಲ್ಯೂಕಸನು ಸೋತನು. **ಕಾಬುಲ, ಕಂದಾಹಾರ, ಬಲುಚಿಸ್ಥಾನ** ಈ ಪ್ರಾಂತಗಳು ಸೆಲ್ಯೂಕಸನಿಂದ ಚಂದ್ರಗುಪ್ತನಿಗೆ ದೊರೆತವು. ಮತ್ತು ಸೆಲ್ಯೂಕಸನು ತನ್ನ ಮಗಳನ್ನು ಚಂದ್ರಗುಪ್ತನಿಗೆ ಕೊಟ್ಟು ಆತನ ಸ್ನೇಹವನ್ನು ಸಂಪಾದಿಸಿದನು. ಅಂದಿನಿಂದ ಸೆಲ್ಯೂಕಸನ ವಕೀಲನಾದ **ಮೇಗ್ಯಾಸ್ಥಿನೀಸನು** ಚಂದ್ರಗುಪ್ತನ ಓಲಗದಲ್ಲರಹತ್ತಿದನು. ಚಂದ್ರಗುಪ್ತನು ಐದುನೂರು ಆನೆಗಳನ್ನು ಸೆಲ್ಯೂಕಸನಿಗೆ ಕೊಟ್ಟನು.

೩. **ಚಂದ್ರಗುಪ್ತನ ರಾಜ್ಯವ್ಯವಸ್ಥೆ**:— ಚಂದ್ರಗುಪ್ತನ ರಾಜ್ಯಪದ್ಧತಿಯು ಈಗಿನ ಕಾಲದ ಸುಧಾರಿಸಿದ ರಾಷ್ಟ್ರಗಳ ರಾಜ್ಯಪದ್ಧತಿಯನ್ನೇ ಹೋಲುವಂತಹದಿದ್ದಿತು. ಇದರಿಂದ ಚಂದ್ರಗುಪ್ತನ ಮತ್ತು ಆತನ ಗುರುವೂ ಮಂತ್ರಿಯೂ ಆದ ಆರ್ಯ ಚಾಣಕ್ಯನ ಯೋಗ್ಯತೆಯು ಚೆನ್ನಾಗಿ

ವ್ಯಕ್ತವಾಗುತ್ತದೆ. ರಾಜ್ಯದ ಮುಖ್ಯ ಭಾಗದ ವ್ಯವಸ್ಥೆಯನ್ನು ಅರಸನು ಸ್ಥಾನಿಕ ಅಧಿಕಾರಿಗಳ ನೆರವಿನಿಂದ ತಾನೇ ನೋಡುವನು. ಅಧೀನ ಪ್ರದೇಶಗಳಿಗೆ ರಾಜಮನೆತನಕ್ಕೆ ಹೊಂದಿದವರನ್ನು ಪ್ರತಿನಿಧಿಗಳನ್ನಾಗಿ ನಿಯಮಿಸಿ ಅಲ್ಲಿಯ ಕಾರಭಾರವನ್ನು ಸಾಗಿಸುವನು. ರಾಜ್ಯಕಾರಭಾರದ ಸೌಲಭ್ಯಕ್ಕಾಗಿ ಆರು ಖಾತೆಗಳನ್ನು ಏರ್ಪಡಿಸಿದ್ದನು. ಅವುಗಳ ವಿವರ:— (ಅ) **ಸೈನ್ಯ** (ಆ) **ಗುಪ್ತಚಾರರು** (ಇ) **ನ್ಯಾಯವಿಚಾರಣೆ** (ಈ) **ಉತ್ಪನ್ನ** (ಉ) **ಕೆರೆ-ಕಾಲುವೆಗಳು** (ಊ) **ಲೋಕೋಪಯೋಗದ ಕೆಲಸಗಳು.**

ಅ) ಸೈನ್ಯ:— ಇವನ ಸೈನ್ಯವು ಆನೆ, ಕುದುರೆ, ರಥ, ಕಾಲಾಳು ಇವುಗಳಿಂದ ಕೂಡಿದ್ದಿತು ಈ ನಾಲ್ಕು ತರದ ಸೈನ್ಯದ ಮೇಲೆ ನಾಲ್ವರು ಮುಖ್ಯ ಅಧಿಕಾರಿಗಳಿದ್ದರು. ಯುದ್ಧದ ಹಡಗುಪಡೆಯ ಮೇಲೊಬ್ಬ ಸ್ವತಂತ್ರ ಅಧಿಕಾರಿಯು ಇದ್ದನು. ಸೈನ್ಯದ ಪ್ರವಾಸದ ವ್ಯವಸ್ಥೆಯನ್ನು ಒಬ್ಬ ಸ್ವತಂತ್ರ ಅಧಿಕಾರಿಯು ಮಾಡುತ್ತಿದ್ದನು. ಈ ಪ್ರಕಾರ ಸೈನ್ಯವು ಆರು ಜನ ಅಧಿಕಾರಿಗಳ ಮೇಲ್ವಿಚಾರಕ್ಕೆ ಒಳಪಟ್ಟಿತ್ತು. ಆರು ಲಕ್ಷ ಕಾಲಾಳು, ಮೂವತ್ತು ಸಾವಿರ ಸವಾರರು, ಒಂಭತ್ತು ಸಾವಿರ ಆನೆಗಳು, ಎಂಟು ಸಾವಿರ ರಥಗಳು ಚಂದ್ರಗುಪ್ತನ ಸೈನ್ಯದಲ್ಲಿದ್ದವು.

ಕತ್ತಿ-ಢಾಲು, ಬಿಲ್ಲು-ಬಾಣ ಇವೇ ಆ ಕಾಲದ ಯೋಧರ ಆಯುಧಗಳಾಗಿದ್ದವು. ತೀಕ್ಷ್ಣವಾದ ಬಾಣಗಳ ಹೊಡೆತಕ್ಕೆ ಢಾಲು, ಮೈಜೋಡುಗಳು ಈಡಾಗುತ್ತಿದ್ದಿಲ್ಲ. ಬಿಲ್ಲುಗಳು ಆಳ ಎತ್ತರದವೂ ಬಾಣಗಳು ಆರು ಮೊಳದವೂ ಇದ್ದವು. ಬಿಲ್ಲಿನ ಒಂದು ತುದಿಯನ್ನು ನೆಲಕ್ಕೂರಿ ಹೆದೆಯನ್ನು ಕಿವಿವರೆಗೆ ಉಗಿದು ಬಿಟ್ಟ ಬಾಣಗಳು ಶತ್ರುಗಳನ್ನು ಚದುರಿಸಿ ಬಿಡುವವು.

(ಆ) **ಗುಪ್ತ ಚಾರರು** — ಎಲ್ಲಿ ಕಡೆಯಲ್ಲ ನಡೆದ ಮಹತ್ವದ ಸಂಗತಿಗಳ ವರ್ತಮಾನವನ್ನೂ ಶತ್ರುಗಳ ಒಳಸಂಚು-ಸುಳಿದಾಟಗಳನ್ನೂ ಅರಸನಿಗೆ ತಿಳಿಸುವದು ಗುಪ್ತಚಾರರ ಕೆಲಸವಾಗಿದ್ದಿತು.

(ಇ) **ನ್ಯಾಯವಿಚಾರಣೆ**:— ನ್ಯಾಯವಿಚಾರಣೆಯು ನಿಷ್ಪಕ್ಷಪಾತದಿಂದ ನಡೆಯುತ್ತಿದ್ದಿತು. ಅಪರಾಧಿಗಳಿಗೆ ಕಠಿಣ ತರದ ಶಿಕ್ಷೆಯು ವಿಧಿಸಲ್ಪ

ಡುತ್ತಿತ್ತು. ಕಡೆಯ ನ್ಯಾಯವಿಚಾರಣೆಯ ಅಧಿಕಾರವು ಅರಸನದಿದ್ದಿತು. ಅವನು ತುಂಬಿದ ಸಭೆಯಲ್ಲಿ ಕುಳಿತು ನ್ಯಾಯವಿಚಾರಣೆ ಮಾಡುತ್ತಿದ್ದನು.


(ಈ) **ಉತ್ಪನ್ನ**:— ಭೂಕಂದಾಯ, ಕಾಲುವೆ, ಮಾದಕದ್ರವ್ಯ, ವ್ಯಾಪಾರದ ಸರಕು ಇವುಗಳ ಮೇಲಿನ ಕರ ಇವು ರಾಜ್ಯದ ಉತ್ಪನ್ನದ ಮಾರ್ಗಗಳಾಗಿದ್ದವು. ಭೂಮಿಯ ಉತ್ಪನ್ನದ ನಾಲ್ಕನೆಯ ಪಾಲು ಸರ ಕಾರಕ್ಕೆ ಸಲ್ಲುತ್ತಿತ್ತು.

(ಉ) **ಕೆರೆಕಾಲುವೆಗಳು**:— ಹೊಸ ಕಾಲುವೆಗಳನ್ನು ಕಟ್ಟಿಸುವದು, ಇದ್ದವುಗಳನ್ನು ಕೆಡದಂತೆ ಕಾಯ್ದುಕೊಳ್ಳುವದು, ಕಾಲುವೆಯ ನೀರಿನ ಕರ ವನ್ನು ಗೊತ್ತುಮಾಡಿ ಅದನ್ನು ಎತ್ತುವದು ಇವು ಈ ಖಾತೆಯ ಕೆಲಸ ಗಳಾಗಿದ್ದವು.

(ಊ) ಲೋಕೋಪಯೋಗದ ಕೆಲಸಗಳು:— ಮಾರ್ಗಗಳನ್ನು ಕೆಡದಂತೆ ನೋಡಿಕೊಳ್ಳುವದು, ಹೊಸ ಮಾರ್ಗಗಳನ್ನು ಮಾಡಿಸುವದು, ಪ್ರಯಾಣಸ್ಥರ ತೊಂದರೆಗಳನ್ನು ದೂರಪಡಿಸುವದು ಇವೇ ಮೊದಲಾದ ಜನ ಹಿತದ ಕೆಲಸಗಳು ಈ ಖಾತೆಯವರಿಂದ ಜರುಗುತ್ತಿದ್ದವು.

೪. **ಚಂದ್ರಗುಪ್ತನ ಕಾಲದ ಲೋಕಸ್ಥಿತಿ**:— ಆ ಕಾಲದಲ್ಲಿ ಹಿಂದು ಸ್ಥಾನದಲ್ಲಿ ಏಳು ಜಾತಿಗಳಿದ್ದವು. ಬ್ರಾಹ್ಮಣರು ವರ್ಚಸ್ಸುಳ್ಳವರಾಗಿದ್ದರು. ಸ್ತ್ರೀಯರ ಪಾತಿವ್ರತ್ಯವೂ ಪುರುಷರ ಧೈರ್ಯ-ಶೌರ್ಯಗಳೂ ಹೊಗಳತಕ್ಕವಾ ಗಿದ್ದವು. ಕಳ್ಳ-ಸುಳ್ಳರ ಸುಳಿವು ವಿಶೇಷವಾಗಿದ್ದಿಲ್ಲ. ಒಕ್ಕಲತನ-ಕೈಗಾರಿಕೆ ಗಳಲ್ಲಿ ಜನರು ಒಳ್ಳೆಯ ಕುಶಲರಿದ್ದರು. ಹಳ್ಳಿಯ ಇಲ್ಲವೆ ಪಟ್ಟಣಗಳ ಆಂತ ರ್ಯವಸ್ಥೆಯಲ್ಲಿ ಅರಸರು ಕೈಹಾಕುತ್ತಿರಲಿಲ್ಲ. ಇವು ತಮ್ಮಷ್ಟಕ್ಕೆ ಸ್ವತಂತ್ರವಾದ ಚಿಕ್ಕ ರಾಜ್ಯಗಳಾಗಿದ್ದವು. ಪಟ್ಟಣಗಳ ವ್ಯವಸ್ಥೆಯನ್ನು ನೋಡುವ **ಮಂಡಲ**ವು ಈಗಿನ **ಮ್ಯುನಿಸಿಪಾಲಿಟಿಯ** ಮಾದರಿಯದಿರಬಹುದೆಂದು ತೋರುವದು. ರಾಜರಾಜರಲ್ಲಿ ಯುದ್ಧಗಳು ನಡೆದಾಗ ಯುದ್ಧಕ್ಕೆ ಸಂಬಂಧವಿಲ್ಲದ ಜನರು ತಮ್ಮ ಉದ್ಯೋಗ ವ್ಯವಹಾರಗಳನ್ನು ನಿಶ್ಚಿಂತೆಯಿಂದ ನಡೆಯಿಸಬಹುದಾಗಿತ್ತು. ಕೊಲೆ-ಸುಲಿಗೆಗಳ ಗಾಳಿಯು ಅವರಿಗೆ ಸೋಂಕುತ್ತಿದ್ದಿಲ್ಲ. ಆಗಿನ ಯುದ್ಧ ನೀತಿಯೇ ಇದಕ್ಕೆ ಕಾರಣವು. ಅನೇಕ ಅರಸುಮನೆತನಗಳು ಅಳಿಹೋದರೂ ಗ್ರಾಮಸಂಸ್ಥೆಗಳು ಸ್ಥಿರವಾಗಿಯೇ ಉಳಿದುಕೊಂಡಿದ್ದವು. ಇಂಗ್ಲಿಷರ ಆಳಿಕೆ

ಯಿಂದೀಚಿಗೆ ಹೊಸ ಪದ್ಧತಿಯ ರಾಜ್ಯಕಾರಭಾರವು ನಡೆಯಹತ್ತಿದ್ದರಿಂದ ಪ್ರಾಚೀನ ಕಾಲದಿಂದ ಅಖಂಡವಾಗಿ ನಡೆಯುತ್ತ ಬಂದಿದ್ದ ಗ್ರಾಮಸಂಸ್ಥೆಗಳು ಇಲ್ಲದಂತಾದವು.



ರಾಜಧಾನಿಯಾದ **ಪಾಟಲೀಪುತ್ರವು** ಒಳ್ಳೆಯ ಘನತೆಯನ್ನು ಪಡೆದಿದ್ದಿತು. ಅಲ್ಲಿಂದ ಎಲ್ಲ ಕಡೆಗೆ ರಾಜಮಾರ್ಗಗಳು ಆಗಿದ್ದವು. ಒಳದೇಶದ ವ್ಯಾಪಾರವು ಭರದಿಂದ ನಡೆಯುತ್ತಿದ್ದಿತು. ಜಲಮಾರ್ಗವಾಗಿ ದೂರದೂರದ ದೇಶಗಳ ಸಂಗಡ ಹಿಂದುಸ್ಥಾನದ ವ್ಯಾಪಾರವು ಸಾಗುತ್ತಿತ್ತು. ವ್ಯಾಪಾರಸ್ಥರ ರಕ್ಷಣೆಗಾಗಿ ವಿಶೇಷವಾಗಿ ಲಕ್ಷ್ಯವು ಪೂರೈಸಲ್ಪಡುತ್ತಿತ್ತು.

ಮೌರ್ಯ ಮನೆತನದ ಸ್ಥಾಪಕನೂ ಪ್ರಾಚೀನ ಭರತಖಂಡದ ಸಾಮ್ರಾಜ್ಯದ ಸಂಸ್ಥಾಪಕನೂ ನೊದಲನೆಯ ಚಕ್ರವರ್ತಿಯೂ ಪರಾಕ್ರಮಿಯೂ

ರಾಜಕಾರಣನಿಪುಣನೂ ಬುದ್ಧಿಶಾಲಿಯೂ ಆದ ಈ ದ್ರ ಗುಪ್ತನು ಕ್ರಿ. ಶ. ಪೂ. ೨೯೮ನೆಯ ವರ್ಷ ಮರಣಹೊಂದಿದನು. ಇವನು ಸಾಯುವ ಪೂರ್ವದಲ್ಲಿ ಜೈನಧರ್ಮದ ದೀಕ್ಷೆಯನ್ನು ಹೊಂದಿ ಮೈಸೂರ ಪ್ರಾಂತಕ್ಕೆ ಬಂದನೆಂದು ತಿಳಿಯುತ್ತದೆ. ಇವನ ತರುವಾಯ ಇವನ ಮಗನಾದ **ಮಿತ್ರ ಗುಪ್ತ** ಅಥವಾ **ಬಿಂದುಸಾರನು** ಮಗಧ ಸಾಮ್ರಾಜ್ಯದ ಒಡೆಯನಾದನು.

೫. **ಬಿಂದುಸಾರ**:— ಈತನು ಸೆಲ್ಯುಕಸನ ನಂತರ ಬಂದ **ಅಂಟಿಯೋಕಸ್ಸ**ನೊಡನೆ ಸ್ನೇಹವನ್ನು ಬೆಳಿಸಿದನು ನರ್ಮದೆಯಿಂದ ತುಂಗಭದ್ರೆಯ ವರೆಗಿನ ದಕ್ಷಿಣ ದೇಶವನ್ನು ಗೆದ್ದು ಅಲ್ಲಿಯ ಅರಸರನ್ನು ತನ್ನ ಮಾಂಡಲಿಕರನ್ನಾಗಿ ಮಾಡಿಕೊಂಡನು. ಇವನು ಇಪ್ಪತ್ತೈದು ವರುಷ ಸಾಮ್ರಾಜ್ಯ ವೈಭವವನ್ನು ಅನುಭವಿಸಿ, ಕ್ರಿ. ಶ ಪೂ ೨೭೩ರಲ್ಲಿ ಮರಣ ಹೊಂದಿದನು. ಇವನ ಕಾಲದ ಇತಿಹಾಸವು ಹೆಚ್ಚಿಗೆ ಗೊತ್ತಾಗಿಲ್ಲ.

೨ನೆಯ ಪಾಠ.

ಮೌರ್ಯ ಸಾಮ್ರಾಜ್ಯ. (ಮುಂದೆ ಸಾಗಿದ್ದು).



೧. **ಅಶೋಕನು ಚಕ್ರವರ್ತಿಯಾದನು**:— ಬಿಂದುಸಾರನ ಆಳಿಕೆಯಲ್ಲಿ ಇವನ ಎರಡನೆಯ ಮಗನಾದ **ಅಶೋಕನು** ವಾಯವ್ಯ ಪ್ರಾಂತದ ಪ್ರತಿನಿಧಿಯಾಗಿ ತಕ್ಷಶಿಲೆಯಲ್ಲಿ ಇರುತ್ತಿದ್ದನು ಆಗ ಆ ಪ್ರಾಂತದಲ್ಲಿ ಆದ ಬಂಡಾಯವನ್ನು ಈ ಅಶೋಕನು ತನ್ನ ಬುದ್ಧಿಚಾತುರ್ಯದಿಂದ ಸಹಜವಾಗಿ ಅಡಗಿಸಿದನು. ಅಲ್ಲಿಯ ಪ್ರಜೆಗಳ ನಂಬುಗೆಯನ್ನು ಮೊರಕಿಸಿ ಸೌಮ್ಯ ಉಪಾಯಗಳಿಂದಲೇ ಅವರನ್ನು ದಾರಿಗೆ ತಂದನು. ಬಿಂದುಸಾರನ ಮರಣದ ನಂತರ ಅವನ ಹಿರಿಯ ಮಗನಾದ **ಸುಷೀಮ**ನನ್ನು ಬದಿಗೊತ್ತಿ, ಶೂರನಾದ ಅಶೋಕನು ಮಂತ್ರಿಯಾದ **ರಾಧಾಗುಪ್ತನ** ಸಹಾಯದಿಂದ ಸಿಂಹಾಸನವನ್ನೇರಿದನು. (ಕ್ರಿ. ಶ. ಪೂ. ೨೭೩).


೨. **ಅಶೋಕನ ಪರಾಕ್ರಮ:**—ಗೋದಾವರಿ-ಮಹಾನದಿಗಳ ಮುಖಗಳ ನೆರೆಯಲ್ಲಿಯ **ಕಲಿಂಗರ** ರಾಜ್ಯವು ಸ್ವತಂತ್ರವಾಗಿತ್ತು. ವ್ಯಾಪಾರದ ಮೂಲಕ ಆದು ಒಳ್ಳೆಯ ಘನತೆಯನ್ನು ಹೊಂದಿತ್ತು. ಆಲ್ಲಿಯ ವ್ಯಾಪಾರಿಗಳು ಜಲಪರ್ಯಟಣದಲ್ಲಿ ಬಹು ಕುಶಲರಿದ್ದರು. ಹಿಂದುಸ್ಥಾನದ ಪೂರ್ವಕ್ಕಿರುವ ನಡುಗಡ್ಡೆಗಳಲ್ಲಿ ಆರ್ಯಸಂಸ್ಕೃತಿಯನ್ನು ಹಬ್ಬುಗೊಳಿಸಿದವರು **ಈ** ಕಲಿಂಗರೇ. ಅಶೋಕನು ಮೂರು ನಾಲ್ಕು ವರ್ಷಗಳಲ್ಲಿ ಸುಷೀಮ ಮುಂತಾದ ಒಳಹಗೆಗಳನ್ನು ಅಡಗಿಸಿ, ಕ್ರಿ. ಶ. ಪೂ. ೨೬೯ರಲ್ಲಿ ರಾಜ್ಯಾಭಿಷೇಕವನ್ನು ಮಾಡಿಸಿಕೊಂಡನು. ಬಳಿಕ ಕಲಿಂಗರ ಮೇಲೆ ದಂಡೆತ್ತಿ ಬಂದು ಅವರ ರಾಜ್ಯವನ್ನು ಗೆದ್ದುಕೊಂಡನು ಈ ದಾಳಿಯಲ್ಲಿ ಒಂಬತ್ತರ ಲಕ್ಷ ಜನರು ಸೆರೆಸಿಕ್ಕರು; ಒಂದು ಲಕ್ಷ ಜನರು ಮಡಿದರು, ಇದಕ್ಕಿಂತ ಹೆಚ್ಚು ಜನರು ದಾಳಿಯ ನಂತರ ಅನೇಕ ಕಾರಣಗಳಿಂದ ಸಾವಿಗೆ ತುತ್ತಾದರು. **ಈ** ನಿರ್ದಯತನದ ಕೊಲೆಯಿಂದ ಕಲಿಂಗದೇಶವು ಹಾಳಾಗಿಹೋಯಿತು ಎಷ್ಟೋ ಸಾಧುಗಳೂ ಪಂಡಿತರೂ ಸಹ ಜೀವಕ್ಕೆರವಾದರು. **ಈ** ಅಮಾನುಷವಾದ ಹಿಂಸೆಯಿಂದ ಅಶೋಕನ ಮನಸ್ಸಿನಸ್ಥಿತಿಯು ಒಮ್ಮೆಲೆ ಬೇರೆಯಾಯಿತು. ತನ್ನ ಸಾಮ್ರಾಜ್ಯ ವಿಸ್ತಾರದ ಅತ್ಯಾಶೆಯೇ **ಈ** ಅನರ್ಥದ ಕಾರಣವೆಂದು ನೆನೆದು, ಆತನು ದೊರೆತ ವಿಜಯವನ್ನು ಪ್ರೀತಿಸದಾದನು. ವೈಭವದ ವಿಷಯವಾಗಿ ಅವನಲ್ಲಿ ತಿರಸ್ಕಾರವುಂಟಾಯಿತು. ನಿಷ್ಕಾರಣವಾಗಿ ಇನ್ನೆಂದೂ ಯುದ್ಧಮಾಡಬಾರದೆಂದು ನಿಶ್ಚಯಿಸಿಕೊಂಡು ಕಡೆತನಕ ಅದರಂತೆಯೇ ವರ್ತಿಸಿದನು.

೩. **ಅಶೋಕನು ಬೌದ್ಧಧರ್ಮವನ್ನು ಸ್ವೀಕರಿಸಿದ್ದು:**— ಬೌದ್ಧಧರ್ಮದ ಅಹಿಂಸೆ, ಭೂತದಯೆ, ಪರೋಪಕಾರ ಮುಂತಾದ ನೀತಿ ತತ್ವಗಳ ಪರಿಣಾಮವು ಅಶೋಕನ ಮನಸ್ಸಿನ ಮೇಲೆ ದಿನದಿನಕ್ಕೆ ಹೆಚ್ಚಾಗಹತ್ತಿತು. ಅವನು ಮುಂದೆ ಬೌದ್ಧಧರ್ಮವನ್ನು ಅಂಗೀಕರಿಸಿದನು. ರಾಜ್ಯದಲ್ಲಿ ಬೇಟೆಯಾಡುವದನ್ನು ನಿಲ್ಲಿಸಿದನು **ಕಪಿಲವಸ್ತು, ಗಯೆ** ಮುಂತಾದ ಬೌದ್ಧಧರ್ಮದ ಪವಿತ್ರ ಸ್ಥಳಗಳ ಯಾತ್ರೆಯನ್ನು ಮಾಡಿದನು. ತಾನು ಮನಶ್ಯಾಂತಿಗಾಗಿ ಬೌದ್ಧಧರ್ಮವನ್ನು ಸ್ವೀಕರಿಸಿದರೂ ಉಳಿದ ಧರ್ಮದವರನ್ನೂ ಸಮದೃಷ್ಟಿಯಿಂದ ನೋಡುತ್ತಿದ್ದನು. **ಭಿನ್ನ ಧರ್ಮದವರಾದರೂ ಎಲ್ಲರೂ ಒಕ್ಕೆಟ್ಟಿನಿಂದ ಇರಬೇಕು;** ಎಂಬುದು ಅವನ ಒಂದು ಲೇಖದ ಅಭಿಪ್ರಾಯವದೆ.

೪. **ಅಶೋಕನು ಮಾಡಿದ ಬೌದ್ಧಧರ್ಮದ ಪ್ರಸಾರ.**— ಅಶೋಕನು ಸ್ವತಂತ್ರವಾದ ಧರ್ಮಖಾತೆಯೊಂದನ್ನು ಏರ್ಪಡಿಸಿ, ಆರವತ್ತು ನಾಲ್ಕು ಸಾವಿರ ಧರ್ಮೋಪದೇಶಕರನ್ನು ನಿಯಮಿಸಿ, ಈ ದೇಶದಲ್ಲಿಯೂ ಪರದೇಶಗಳಲ್ಲಿಯೂ ಬೌದ್ಧಧರ್ಮವನ್ನು ಹಬ್ಬುಗೊಳಿಸಿದನು. ದೇಶದ ಯಾವತ್ತು ಭಾಗಗಳಲ್ಲಿ ಧರ್ಮಸಂಬಂಧವಾದ ಆಜ್ಞೆಗಳನ್ನು ಪ್ರಸಿದ್ಧಿಸಿ, ಅಲ್ಲಲ್ಲಿ ಬಂಡೆಗಳ ಮೇಲೂ ಕಲ್ಲುಗಳ ಮೇಲೂ ಅವನ್ನು ಕೊರೆಯಿಸಿದನು. ತನ್ನ ಮಗನಾದ **ಮಹಿಂದ**ನನ್ನು ಧರ್ಮಪ್ರಸಾರಕ್ಕಾಗಿ **ಸಿಂಹಲ** ದ್ವೀಪಕ್ಕೆ ಕಳುಹಿದನು. ಬೌದ್ಧ ಭಿಕ್ಷುಗಳಿಗೋಸುಗ ಪಾಟಲೀಪುತ್ರದ ನೆರೆಯಲ್ಲಿ ಎರಡು ಭವ್ಯವಾದ ಮಠಗಳನ್ನು ಕಟ್ಟಿಸಿದನು. ಆಜೀವಕರಗೋಸ್ಕರ ಗುಡ್ಡಗಳಲ್ಲಿ ಗವಿಗಳನ್ನು ಮಾಡಿಸಿದನು. ಇವನು ಬೌದ್ಧರ ಮೂರನೆಯ ಧರ್ಮಸಭೆಯನ್ನು ನೆರೆಯಿಸಿ ಧರ್ಮಸಂಬಂಧವಾದ ತೊಡಕಿನ ಪ್ರಶ್ನೆಗಳನ್ನು ಚರ್ಚಿಸಿದನು ಈ ಸಭೆಯು ಒಂಬತ್ತು ತಿಂಗಳು ನಡೆಯಿತು. ಈ ಚರ್ಚೆಯಿಂದ ಗೊತ್ತಾದ ನಿರ್ಣಯಗಳನ್ನು ಸಂಗ್ರಹಿಸಿ ಒಂದು ಧರ್ಮಗ್ರಂಥವನ್ನು ಬರೆಯಿಸಿದನು.

೫. **ಅಶೋಕನು ಕಟ್ಟಿಸಿದ ಕಟ್ಟಡಗಳು**:— ಇವನ ಕಾಲದ ಕಟ್ಟಡಗಳೆಲ್ಲ ಧರ್ಮಬುದ್ಧಿಯಿಂದಲೂ ಲೋಕೋಪಯೋಗದ ದೃಷ್ಟಿಯಿಂದಲೂ ಕಟ್ಟಿಸಿದಂತಹವಾಗಿವೆ. ವಿಲಾಸ ಮತ್ತು ವೈಭವ ಇವುಗಳ ಅನೇಕ್ಷೆಯಿಂದ ಯಾವ ಕಟ್ಟಡವನ್ನೂ ಕಟ್ಟಿಸಲಿಲ್ಲ. ಹದಿನಾಲ್ಕು ಧರ್ಮಾಜ್ಞೆಗಳನ್ನು ಕೊರೆಯಿಸಿದ **ಗಿರಿಲೇಖ**ಗಳು ದೇಶದ ಎಲ್ಲ ಭಾಗಗಳಲ್ಲಿ ದೊರೆತಿರುವವು. ಗುಡ್ಡ-ಬಂಡೆಗಳ ಅನುಕೂಲವಿಲ್ಲವಲ್ಲಿ ಈ ಲೇಖಗಳನ್ನು ಕೊರೆಯಿಸಿದ ಭವ್ಯವಾದ ಸ್ತಂಭಗಳನ್ನು ನಿಲ್ಲಿಸಿರುವನು. ಅಯೋಧ್ಯಾ ಪ್ರಾಂತದಲ್ಲಿರುವ ಇಂಥ ಒಂದು ಸ್ತಂಭವು, ಮೂವತ್ತು ಮೂವತ್ತೆರಡು ಮೊಳ ಎತ್ತರವಿದ್ದು ಅದರ ಮೇಲಿನ ಕೆತ್ತಿಕೆ – ಒಪ್ಪಗಳು ಹೊಗಳತಕ್ಕಂಥವುಗಳಾಗಿವೆ. ಈ ಸ್ತಂಭದ ತೂಕವು ಸುಮಾರು ನಾಲ್ಕು ಸಾವಿರ ಮಣ ಆಗಬಹುದೆಂದು ಹೇಳುವರು. ಇಂಥ ಅತಿ ಭಾರವಾದ ಕಲ್ಲುಗಳನ್ನು ಖನಿಯೊಳಗಿಂದ ತೆಗೆದು, ಇಷ್ಟು ಎತ್ತರದ ಮೇಲೆ ನಿಲುಕಿಸಿ, ಭದ್ರವಾಗಿರುವಂತೆ ಕಟ್ಟಿರುವದನ್ನು ನೋಡಿದರೆ, ಆ ಕಾಲದ ವಾಸ್ತು ಶಾಸ್ತ್ರದ ಪ್ರಗತಿಯು ಶ್ರೇಷ್ಠ ತರಗತಿಯದಿತ್ತೆಂದು ಗೊತ್ತಾಗುವದು. ಈ ಸ್ತಂಭಗಳಲ್ಲದೆ ಅಶೋಕನು ಅಲ್ಲಲ್ಲಿ ಅನೇಕ

ಸ್ತೂಪಗಳನ್ನು ಕಟ್ಟಿಸಿದ್ದನು. ಇವುಗಳಲ್ಲಿ ಸಾಂಚಿಯ ಸ್ತೂಪವು ಬಹು ಪ್ರಸಿದ್ಧವಾದದ್ದು. ಮೂವತ್ತಾರು ಮೊಳ ಎತ್ತರವಾದ, ಡೊಬ್ಬು ಕೊಪ್ಪರಿಗೆಯ ಆಕಾರದ ಈ ಸ್ತೂಪವು ಒಂದು ವಿಸ್ತಾರವಾದ ಗಚ್ಚಿನ ನೆಲಗಟ್ಟಿನ



ಅಶೋಕನ ಸ್ತಂಭ

ಮೇಲೆ ಕಟ್ಟಲ್ಪಟ್ಟಿರುವದು. ಕಾಠೇವಾಡದ ಗಿರಿನಾರಪರ್ವತದ ನೆರೆಯಲ್ಲಿ ನದಿಯ ಪ್ರವಾಹವನ್ನು ಅಡ್ಡಗಟ್ಟಿ **ಸುದರ್ಶನ**ವೆಂಬ ದೊಡ್ಡ ಕೆರೆಯನ್ನು ಕಟ್ಟಿಸಿ, ನೀರಿಲ್ಲದ ಪ್ರದೇಶಗಳಿಗೆ ಕಾಲುವೆಗಳ ಮಾರ್ಗವಾಗಿ ನೀರು ದೊರೆಯು

ವಂತೆ ಮಾಡಿಸಿದ್ದನು. ಕಾಶ್ಮೀರ ನೇಪಾಳಗಳಲ್ಲಿಯ **ಶ್ರೀನಗರ** ಮತ್ತು **ದೇವ ಪಾಟಣ** ಎಂಬೆರಡು ಪಟ್ಟಣಗಳನ್ನು ಅಶೋಕನೇ ನೆಲೆಸಿದನು.

೬. **ಅಶೋಕನ ರಾಜ್ಯವ್ಯವಸ್ಥೆ** :— ಅಶೋಕನು ತನ್ನ ರಾಜ್ಯದಲ್ಲಿ ಐದು ವಿಭಾಗಗಳನ್ನು ಮಾಡಿ ಒಂದರ ವ್ಯವಸ್ಥೆಯನ್ನು ತನ್ನ ಕಡೆಗೆ ಇಟ್ಟುಕೊಂಡು, **ಉಜ್ಜಯಿನಿ, ತಕ್ಷಶಿಲೆ, ತೋಸಾಲಿ** (ಕಲಿಂಗ), **ಸುವರ್ಣನಗರ** (ಮೈಸೂರು) ಎಂಬ ನಾಲ್ಕು ಪ್ರಾಂತಗಳ ಮೇಲೆ ನಾಲ್ವರು ರಾಜಪ್ರತಿನಿಧಿಗಳನ್ನು ನಿಯಮಿಸಿದನು. ರಾಜನು ಸ್ವತಂತ್ರನೆಂಬಂತೆ ತೋರುತ್ತಿದ್ದರೂ ಅವನು ಪ್ರಜೆಗಳ ಮತವನ್ನು ಮೂಲಗೊತ್ತಿ ಮನಬಂದಂತೆ ನಡೆಯುವ ಹಾಗೆ ಇದ್ದಿಲ್ಲ ಪ್ರಜೆಗಳಲ್ಲಯ ಜಾಗ್ರತೆ ಮತ್ತು ಪ್ರಾಚೀನ ಪರಂಪರೆಯೇ ಇದರ ಕಾರಣವು. ಪ್ರಾಚೀನ ಕಾಲದಿಂದ ನಡೆಯುತ್ತ ಬಂದ ಧರ್ಮ, ಆಚಾರ-ವಿಚಾರ, ಸಾಂಪ್ರದಾಯ ಇವುಗಳಲ್ಲಿ ಹೆಚ್ಚುಕಡಿಮೆ ಮಾಡುವಾಗ ಧರ್ಮಾಧಿಕಾರಿಗಳ ಮತ್ತು ಧರ್ಮ ಸಭೆಗಳ ಒಪ್ಪಿಗೆಯನ್ನು ಪಡೆಯಲೇ ಬೇಕಾಗಿತ್ತು. ಸೈನ್ಯ ಮುಂತಾದ ಯಾವತ್ತು ಖಾತೆಗಳ ವ್ಯವಸ್ಥೆಯು ಚಂದ್ರಗುಪ್ತನ ಕಾಲದಂತೆಯೇ ನಡೆಯುತ್ತಿತ್ತು.

೭. **ಅಶೋಕನ ಪ್ರಜಾಹಿತದಕ್ಷತೆ**:— ಮಾರ್ಗದ ಎಡಬಲಗಳಲ್ಲ ನಾಲು ಗಿಡಗಳನ್ನು ಹಚ್ಚಿಸಿ ದಾರಿಕಾರರ ಬಿಸಿಲಿನ ಬಾಧೆಯನ್ನು ತಪ್ಪಿಸಿದನು. ಅರ್ಧ ಹರದಾರಿಗೊಂದರಂತೆ ಬಾವಿಯನ್ನು ಕಟ್ಟಿಸಿ ನೀರಿನ ಕೊರತೆಯಾಗದಂತೆ ಮಾಡಿದನು. ಧರ್ಮಶಾಲೆಗಳನ್ನು ಕಟ್ಟಿಸಿದನು. ಮನುಷ್ಯರಿಗಾಗಿಯೂ ದನಗಳಿಗಾಗಿಯೂ ಅವಶ್ಯವಿದ್ದಲ್ಲಿ ಆರವಟ್ಟಿಗೆಗಳನ್ನಿಡಿಸಿದನು. ಮನುಷ್ಯರ ಮತ್ತು ದನಗಳ ಔಷಧಾಲಯಗಳನ್ನು ಏರ್ಪಡಿಸಿದನು. ಔಷಧಗಳ ಕೊರತೆಯುಂಟಾಗಬಾರದೆಂದು ವನೌಷಧಿಗಳಿಂದ ಸಮೃದ್ಧವಾದ ತೋಟಗಳನ್ನು ಮಾಡಿಸಿದನು. ಇವೆಲ್ಲ ಸುಖಸಾಧನಗಳನ್ನು ಮಾಡಿಸುವದರಲ್ಲಿ, ಜನರು ಧರ್ಮನಿರತರಾಗಲೆಂಬದೇ ನನ್ನ ನಿಜವಾದ ಉದ್ದೇಶವೆಂದು ಅಶೋಕನು ಎಂದಿರುವನು. ಕೆರೆ-ಕಾಲುವೆಗಳನ್ನು ಕಟ್ಟಿಸಿ ಒಕ್ಕಲತನಕ್ಕೆ ಅನುಕೂಲ ಮಾಡಿಕೊಟ್ಟನು. ಜನರ ಶಿಕ್ಷಣಕ್ಕೂ ಉತ್ತೇಜನವನ್ನಿತ್ತನು. ಧರ್ಮಶಿಕ್ಷಣಾ

ರ್ಥವಾಗಿ ಪ್ರಯತ್ನ ಮಾಡಿದವರಲ್ಲಿ ಅಶೋಕನೇ ಅಗ್ರಗಣ್ಯನು. **ನಾಲಂದದ** ಮಹಾ ವಿದ್ಯಾಲಯವನ್ನು ಇವನೇ ಸ್ಥಾಪಿಸಿದನು.

೮. **ಅಶೋಕನ ಯೋಗ್ಯತೆ**:— ಅಶೋಕನಂಥ ಅಸಾಮಾನ್ಯ ಪುರುಷನು ಹುಟ್ಟುವದು ಅಪರೂಪ. ಇವನು ಅತ್ಯಂತ ಸಾತ್ವಿಕನೂ ಪ್ರಜಾಹಿತದಕ್ಷನೂ, ರಾಜಕಾರ್ಯನಿಪುಣನೂ, ತೇಜಸ್ವಿಯೂ ಆಗಿದ್ದನು ಈತನು ಹಿಂಸೆಯಿಂದ ದೂರವಾಗಿರುವನೆಂದು ತಿಳಿದ ಮೇಲೂ ಇವನ ಸಾಮ್ರಾಜ್ಯಾಧಿಕಾರವು ಶಿಥಿಲವಾಗದೆ ಮತ್ತಿಷ್ಟು ಭದ್ರವಾಯಿತು. ಇದರಿಂದ ಅಶೋಕನ ದರ್ಪವೂ ಆಳಿಕೆಯ ಸಾಮರ್ಥ್ಯವೂ ಹೇಗೆ ಇತ್ತೆಂಬದು ಗೊತ್ತಾಗುವದು. ಈ ಜಗದ್ವಿಖ್ಯಾತನಾದ ಮಹಾಪುರುಷನು ಕ್ರಿ. ಶ ಪೂ. ೨೭೩ರಲ್ಲಿ ಮರಣ ಹೊಂದಿದನು.

೯. **ಅಶೋಕನ ನಂತರದ ಮೌರ್ಯ ಮನೆತನದ ಸ್ಥಿತಿ**:— ಅಶೋಕನ ತರುವಾಯ ಸಮರ್ಥರಾದ ಅರಸರು ಯಾರೂ ಆಗದೆ ಇದ್ದದರಿಂದ ಸಾಮ್ರಾಜ್ಯವು ಕಳೆಗುಂದಹತ್ತಿತು. ಅಶೋಕನ ಮಗನಾದ **ಕುನಾಲ** ಮತ್ತು **ಮೊಮ್ಮಗನಾದ ದಶರಥ** ಇವರ ಆಳಿಕೆಯಲ್ಲಿ ಕಲಿಂಗ ಅಫಗಾನಿಸ್ಥಾನಗಳು ಸ್ವತಂತ್ರವಾದವು. ಅಶೋಕನಿಂದ ಏಳನೆಯವನಾದ **ಬೃಹದ್ರಥನು** ಆಳುವಾಗ ಕ್ರಿ. ಶ. ಪೂ. ೧೯೦ರಲ್ಲಿ *ಬಾಕ್ಟ್ರಿಯದ ಗ್ರೀಕ ಅರಸನಾದ **ಡಿಮಿಟ್ರಿಯಾಸನು** ಹಿಂದುಕುಶ ಪರ್ವತವನ್ನು ದಾಟಿ ಮೌರ್ಯರ ರಾಜ್ಯವನ್ನು ನುಗ್ಗಿ ಈ ಬೃಹದ್ರಥನನ್ನು ಸೋಲಿಸಿದನು. ಕಾಬೂಲ ಪ್ರಾಂತವು ಬೃಹದ್ರಥನ ಕೈಬಿಟ್ಟಿತು. ಗೋದಾವರಿಯ ದಕ್ಷಿಣಕ್ಕೆ ಈ ಮೊದಲೆ ನೆಲೆಗೊಂಡಿದ್ದ **ಆಂಧ್ರರು** ಪ್ರಬಲರಾಗಹತ್ತಿದರು. ಹೀಗೆ ಇಳಿತರದ ಸ್ಥಿತಿಯಿರುವಾಗ ಬೃಹದ್ರಥನ ಸೇನಾಪತಿಯಾದ **ಪುಷ್ಯಮಿತ್ರ ಶುಂಗನು** ಬೃಹದ್ರಥನನ್ನು ಕೊಂದು ಮಗಧ ರಾಜ್ಯವನ್ನು ಕೈವಶ ಮಾಡಿಕೊಂಡನು ಕ್ರಿ. ಶ. ಪೂ. ೧೮೪. ಇಲ್ಲಿಗೆ ಪ್ರಸಿದ್ಧವಾದ ಮೌರ್ಯ ಸಾಮ್ರಾಜ್ಯವು ಮುಗಿಯಿತು.

* ಹಿಂದುಕುಶ ಪರ್ವತಕ್ಕೂ ಆಕ್ಸಸ್ ನದಿಗೂ ನಡುವೆ ಇರುವ ಪ್ರದೇಶಕ್ಕೆ ಬಾಕ್ಟ್ರಿಯಾ ಎಂಬ ಹೆಸರು.

೩ನೆಯ ಪಾಠ.

ಮೌರ್ಯ ಸಾಮ್ರಾಜ್ಯದ ಅಸ್ತವಾದಂದಿನಿಂದ ಗುಪ್ತ ಮನೆತನದ ಉದಯದ ವರೆಗಿನ ಕಾಲ.

(ಕ್ರಿ. ಶ. ಪೂ ೧೮೪ ರಿಂದ ಕ್ರಿ. ಶ ೩೨೦ರ ವರೆಗೆ).



೧. **ಮಿನಾಂಡರ ಅಥವಾ ಮಿಲಿಂದ ರಾಜನು.**— (ಕ್ರಿ. ಶ. ಪೂ. ೧೮೦ ರಿಂದ ಕ್ರಿ. ಶ ಪೂ. ೧೪೦) ಪುಷ್ಯಮಿತ್ರ ಶುಂಗನು ಮೌರ್ಯ ಸಾಮ್ರಾಜ್ಯವನ್ನು ಮುಗ್ಗಿಸಿ ಮಗಧದ ಸಿಂಹಾಸನವನ್ನು ಆಕ್ರಮಿಸಿದ ಸಂಗತಿಯು ಹಿಂದಿನ ಪಾಠದಲ್ಲಿ ಹೇಳಿದೆ. ಈ ಪುಷ್ಯಮಿತ್ರನು, ದೊರೆತ ರಾಜ್ಯಪದವನ್ನು ಸ್ಥಿರಪಡಿಸಿಕೊಳ್ಳುವ ಕಾರ್ಯದಲ್ಲಿ ತೊಡಗಿದ್ದನು. ಇದೇ ಸಮಯಕ್ಕೆ ಅತ್ತ ಕಾಬೂಲ ಪ್ರಾಂತವನ್ನು ಆಳುತ್ತಿದ್ದ *ಗ್ರೀಕ ರಾಜನಾದ **ಮಿಲಿಂದ**ನೆಂಬ ಅರಸನು, ಹಿಂದುಸ್ಥಾನದ ಮೇಲೆ ದಂಡೆತ್ತಿ ಬಂದು ಆಯೋಧ್ಯಾ ಪ್ರಾಂತದಲ್ಲಿಯ **ಸಾಕೇನ** ಪಟ್ಟಣವನ್ನೂ ರಾಜಸ್ಥಾನದಲ್ಲಿ ಚಿತ್ತೂರ ನೆರೆಯ **ನಾಗರೀ** ಪಟ್ಟಣವನ್ನೂ ವಶಮಾಡಿಕೊಂಡು, ತನ್ನ ಅಧಿಕಾರವನ್ನು **ಭಡೋಚ**ದ ವರೆಗೆ ನೆಲೆಸಿದನು. ಮತ್ತು ಕಾಬೂಲದಿಂದ **ಸಿಯಾಲ ಕೋಟಕ್ಕೆ** ತನ್ನ ಸಿಂಹಾಸನವನ್ನು ತಂದು ಅಲ್ಲಿ ಇರಹತ್ತಿದನು. ಇವನು ಬೌದ್ಧಧರ್ಮವನ್ನು ಸ್ವೀಕರಿಸಿದನು. ಮಿಲಿಂದನ ಪ್ರಶ್ನೆಗಳೆಂಬ ತಾತ್ವಿಕ ಪ್ರಶ್ನೆಗಳು ಬೌದ್ಧ ವಾಙ್ಮಯದಲ್ಲಿ ಪ್ರಸಿದ್ಧವಾಗಿರುವವು

೨ **ಶುಂಗ ಮನೆತನ**:— (ಕ್ರಿ. ಶ. ಪೂ. ೧೮೪–ಕ್ರಿ. ಶ. ಪೂ. ೭೩). ಮಿಲಿಂದನ ವರ್ಚಸ್ಸು ಮುಂದೆ ಬಹುದಿವಸ ನಡೆಯಲಿಲ್ಲ. ಪುಷ್ಯಮಿತ್ರನು ಪ್ರಬಲನಾಗಿ, ಮಿಲಿಂದನು ಕಾಬೂಲದಲ್ಲಿದ್ದ ಬಂಡಾಯವನ್ನು ಮುರಿಯಲು

---

* ಗ್ರೀಸದ ದಕ್ಷಿಣವಲ್ಲಿರುವ ಅಯೋನಿಯನ್ ದ್ವೀಪಗಳ ನಿವಾಸಿಗಳಿಗೆ ಯವನರೆಂಬ ಹೆಸರು ಇತ್ತೆಂದು ತೋರುತ್ತದೆ. ಮಿನಾಂಡರನ ಗ್ರೀಕ (ಯವನ) ರಾಜ್ಯವು ಕಾಬುಲ ಪ್ರಾಂತದಲ್ಲಿ ಸುಮಾರು ಎರಡು ಶತಕಗಳ ವರೆಗೆ ನಡೆದು ಕ್ರಿ. ಶ. ೨೫ ರಲ್ಲಿ ಕುಶಾನರ ದಾಳಿಯಿಂದ ಲಯಹೊಂದಿತು.

ಹೋದ ಸಮಯವನ್ನು ಸಾಧಿಸಿ, ಸಿಂಧುನದಿಯ ವರೆಗಿನ ಪ್ರಾಂತವನ್ನು ಗೆದ್ದುಕೊಂಡನು. ಮತ್ತು ಮೌರ್ಯ ಸಾಮ್ರಾಜ್ಯದ ಕಾಲದ ಬಹುತರ ಯಾವತ್ತು ಭಾಗವನ್ನು ಆಕ್ರಮಿಸಿಕೊಂಡು ವಿಜಯಸೂಚಕವಾದ ಅಶ್ವಮೇಧ ಯಜ್ಞವನ್ನು ಮಾಡಿದನು. ಇವನು ಒಳ್ಳೆಯ ಶಿವಭಕ್ತನಾಗಿದ್ದನು. ಅಶೋಕನ ಕಾಲದಿಂದ ಹಿಮ್ಮೆಟ್ಟಹತ್ತಿದ್ದ ಹಿಂದು ಧರ್ಮಕ್ಕೆ ಉತ್ತೇಜನವನ್ನು ಕೊಟ್ಟನು. ಪುಷ್ಯಮಿತ್ರನು ಮೂವತ್ತಾರು ವರುಷ ರಾಜ್ಯವಾಳಿದ ತರುವಾಯ ಇವನ ಮಗನಾದ **ಅಗ್ನಿಮಿತ್ರನು** ಪಟ್ಟಕ್ಕೆ ಬಂದನು. ಈ ಅಗ್ನಿಮಿತ್ರನನ್ನೇ ನಾಯಕನನ್ನಾಗಿ ಮಾಡಿ **ಕಾಲಿದಾಸ**ನೆಂಬ ಪ್ರಸಿದ್ಧನಾದ ಕವಿಯು '**ಮಾಲವಿ ಕಾಗ್ನಿಮಿತ್ರ**' ಎಂಬ ನಾಟಕವನ್ನು ಸಂಸ್ಕೃತದಲ್ಲಿ ಬರೆದಿರುವನು. ಮುಂದೆ ಈ ಮನೆತನದ ಹತ್ತನೆಯ ಮತ್ತು ಕಡೆಯ ಅರಸನಾದ **ದೇವಭೂತಿ**ಯನ್ನು ಅವನ ಮಂತ್ರಿಯಾದ **ವಸುದೇವ ಕಣ್ವನು** ಕೊಂದು, ಮಗಧ ರಾಜ್ಯಕ್ಕೆ ಒಡೆಯನಾದನು. ಕ್ರಿ. ಶ. ಪೂ. ೭೩.


೩. **ಕಣ್ವವನೆತನ**:— (ಕ್ರಿ. ಶ. ಪೂ. ೭೩ ರಿಂದ ಕ್ರಿ. ಶ. ಪೂ. ೨೭). ಕಣ್ವರು, ಬ್ರಾಹ್ಮಣರು. ಈ ವಂಶದ ನಾಲ್ವರು ಅರಸರು ಒಟ್ಟು ೪೫ ವರ್ಷ ರಾಜ್ಯವಾಳಿದರು. ಕುಶಾನರ ದಾಳಿಗಳಿಂದ ಮಗಧದ ರಾಜಸತ್ತೆಯು ಬಲಗುಂದಹತ್ತಿತ್ತು. ಕಣ್ವರ ನಾಲ್ಕನೆಯ ಅರಸನಾದ **ಸುಶರ್ಮ**ನು ಆಳುತ್ತಿರಲು ಆಂಧ್ರರು ಸಾಗಿಬಂದು ಮಗಧ ರಾಜ್ಯವನ್ನು ಆಕ್ರಮಿಸಿದರು. ಕಣ್ವಮನೆತನದ ಕಡೆಯಾಯಿತು.

೪. **ಶಕರ ದಾಳಿ**:— ಮಗಧ ರಾಜ್ಯದಲ್ಲಿ ಈ ರೀತಿ ಆಗುಹೋಗುಗಳು ನಡೆದಿರಲು ಆತ್ತ ಮಧ್ಯಏಶಿಯದಲ್ಲಿಯೂ ಹಿಂದುಸ್ಥಾನದ ವಾಯವ್ಯಕ್ಕೆ ಇರುವ ಪ್ರದೇಶಗಳಲ್ಲಿಯೂ ಕ್ರಾಂತಿಯೊಂದು ಉಂಟಾಯಿತು. ಅದರ ಪರಿಣಾಮವು ಹಿಂದುಸ್ಥಾನದ ಮೇಲೆ ವಿಶೇಷವಾಯಿತು. ಬಾಕ್ಟ್ರಿಯದ ಉತ್ತರಕ್ಕೆ **ಆಕ್ಸೆಸ್** ಮತ್ತು **ಜಕ್ಸಾರ್ಟಿಸ್** ನದಿಗಳ ಮಧ್ಯ ಪ್ರದೇಶದಲ್ಲಿ **ಸಿಥಿಯನ್** ಅಥವಾ **ಶಕ** ಎಂಬ ಹೆಸರಿನ ಕಾಡು ಜನಾಂಗದವರು ವಾಸಿಸಿದ್ದರು. ಈ ಶಕ ಜನರ ಪ್ರದೇಶದ ಪೂರ್ವಕ್ಕೆ ಚೀನದ ಪ್ರದೇಶದಲ್ಲಿ **ಯುಏಚಿ** (ಕುಶಾನ) ಜನರು ವಾಸವಾಗಿದ್ದರು. ಅವರಾಚೆಯಲ್ಲಿ **ಹೂಣ** ಎಂಬ ಜನರ ವಸತಿಯಿತ್ತು. ಹೂಣರು ಕುಶಾನರ ಪ್ರದೇಶವನ್ನು ನುಗ್ಗಿ ಅವರನ್ನು ಅಲ್ಲಿಂದ ಓಡಿಸಲು,

ಆ ಕುಶಾನರು ಶಕರ ಸೀಮೆಯನ್ನು ಹೊಕ್ಕು ಅವರು ಅಲ್ಲಿ ಇರದಂತೆ ಮಾಡಿದರು. ಆಗ ಶಕರು ತಮ್ಮ ಸ್ಥಳವನ್ನು ಬಿಟ್ಟು ಬಾಕ್ಟ್ರಿಯವನ್ನು ಆಕ್ರಮಿಸಿದರು (ಕ್ರಿ. ಶ. ಪೂ. ೧೩೦). ಬಳಿಕ ಬಾಕ್ಟ್ರಿಯದ ಗ್ರೀಕರು ಹಿಂದುಕುಶ ಪರ್ವತವನ್ನು ದಾಟಿ ದಕ್ಷಿಣಕ್ಕೆ ಬಂದು ತಮ್ಮ ರಾಜ್ಯವಾಗಿದ್ದ ಕಾಬೂಲ ಪ್ರಾಂತದಲ್ಲಿ ನಿಂತುಕೊಂಡರು. ಇತ್ತ ಬಾಕ್ಟ್ರಿಯವನ್ನು ಆಕ್ರಮಿಸಿದ ಶಕರು ಮತ್ತೆ ದಕ್ಷಿಣಕ್ಕೆ ಸಾಗಿ, **ಸಿಸ್ತಾನ** (ಶಕಸ್ಥಾನ) ಕ್ಕೆ ಬಂದು, ಮುಂಚೆ ಬಂದು ಅಲ್ಲಿ ವಾಸಿಸಿದ್ದ ತಮ್ಮ ಪಂಗಡದವರನ್ನು ಕೂಡಿಕೊಂಡರು. ತರುವಾಯ ಬಲೂಚಿಸ್ಥಾನದ ಬೋಲನ ಕಣಿವೆಯ ಮಾರ್ಗವಾಗಿ ಸಿಂಧ-ಪಂಜಾಬಗಳನ್ನು ಪ್ರವೇಶಿಸಿದರು. **ತಕ್ಷಶಿಲೆ, ಉಜ್ಜಯನಿ, ಮಥುರೆ, ಕಾಠೇವಾಡ** ಎಂಬ ಪ್ರಾಂತಗಳಲ್ಲಿ ಶಕರ ರಾಜ್ಯಗಳು ಉಂಟಾದವು. ಈ ಶಕರ ಅರಸರು ತಮ್ಮನ್ನು **ಸತ್ರಪ** (ಕ್ಷತ್ರಪ) ಅಥವಾ **ಮಹಾಕ್ಷತ್ರಪ**ರೆಂದು ಎನಿಸಿಕೊಳ್ಳಹತ್ತಿದರು. ಈ ಕ್ಷತ್ರಪ ರಾಜ್ಯಗಳು ಕ್ರಿ. ಶ. ೫ನೆಯ ಶತಕದ ವರೆಗೆ ನಡೆದವು. ಆಂಧ್ರರ ಬಲವಾದ ತಡೆಯಾದುದರಿಂದ ಕ್ಷತ್ರಪರಿಂದ ಸಾಮ್ರಾಜ್ಯವನ್ನು ಸ್ಥಾಪಿಸುವದು ಆಗಲಿಲ್ಲ. ಬರಬರುತ್ತ ಆಂಧ್ರರ ಹೊರತಾಗಿ ಉತ್ತರದಲ್ಲಿ ಕುಶಾನರೂ ಪೂರ್ವದಲ್ಲಿ ಗುಪ್ತರೂ ಇವರಿಗೆ ವೈರಿಗಳುಂಟಾದರು. ಆದದರಿಂದ ಶಕರ ಅಧಿಕಾರವು ಬಲಗುಂದತ್ತ ನಡೆಯಿತು.

೫. ಕುಶಾನರ ದಾಳಿ:— ಹೂಣರ ನುಗ್ಗುವಿಕೆಯಿಂದ ಕುಶಾನರು ಶಕರ ಸೀಮೆಯಾದ ಆಕ್ಸಸ್ ಮತ್ತು ಜಕ್ಸಾರ್ಟಿಸ್ ನದಿಗಳ ಮಧ್ಯಪ್ರದೇಶಕ್ಕೆ ಬಂದರೆಂದು ಹಿಂದೆ ಹೇಳಿದೆ. ಹೂಣರು ಅಲ್ಲಿಯೂ ಬೆನ್ನಟ್ಟಿಬರಲು, ಕುಶಾನರು ಮತ್ತೆ ಸ್ಥಾನಾಂತರವನ್ನು ಹೊಂದಿ ಬಾಕ್ಟ್ರಿಯಕ್ಕೆ ಬಂದು, ಅಲ್ಲಿಂದ ಶಕರನ್ನು ಹೊಡೆದೋಡಿಸಿ ತಾವು ಅಲ್ಲಿ ಇರಹತ್ತಿದರು. ಯುಏಚಿ ಜನರಲ್ಲಿ ಕುಶಾನರೆಂಬವರು ಪ್ರಬಲರಾಗಿ, ಎಲ್ಲ ಯುಏಚಿಗಳ ಏಕೀಕರಣವನ್ನು ಮಾಡಿ **ಕಡಫೀಸ್**ನನ್ನು ತಮ್ಮ ಮುಖ್ಯನನ್ನಾಗಿ ಮಾಡಿಕೊಂಡರು. ಈ ಕಡಫೀಸನು ಹಿಂದುಕುಶವನ್ನು ದಾಟಿ ಕಾಬೂಲ ಪ್ರಾಂತದ ಮೇಲೆ ಸಾಗಿಬಂದು ಗ್ರೀಕರನ್ನು ಸೋಲಿಸಿದನು. ಮುಂದೆ ಇವನ ಮಗನಾದ **೨ನೆಯ ಕಡಫೀಸನು** ಕಾಶಿಯ ವರೆಗಿನ ಹಿಂದುಸ್ಥಾನದ ಪ್ರದೇಶವನ್ನು ಗೆದ್ದುಕೊಂಡನು.

೬. **ಕನಿಷ್ಕನ ಸಾಮ್ರಾಜ್ಯ**:— ಕ್ರಿ. ಶ. ೧೨೦ರಲ್ಲಿ **ಕನಿಷ್ಕನು** ಕುಶಾನರ ಅರಸನಾದನು. **ಪುರುಷಪುರ** (ಪೇಶಾವರ) ಎಂಬುವದು ಇವನ ರಾಜಧಾನಿಯು. ಕನಿಷ್ಕನ ರಾಜ್ಯವು ಪೂರ್ವಕ್ಕೆ ಕಾಶಿಯ ವರೆಗೆ, ದಕ್ಷಿಣಕ್ಕೆ ವಿಂಧ್ಯ ಪರ್ವತದ ವರೆಗೆ ಹಬ್ಬಿತ್ತು. ಸಿಂಧ, **ಕಾಬೂಲ, ಕಾಶ್ಮೀರ, ಚಾರ್ಕೆಂದ,**



ಕುಶಾನರ ಕಾಲದ ಹಿಂದುಸ್ಥಾನ.

ಖೋತಾಖಾನ, ಚೀನದ ಕೆಲವು ಭಾಗ ಇವು ಇವನ ರಾಜ್ಯಕ್ಕೆ ಸೇರಿದ್ದವು. ಪ್ರಾರ್ಥಿಯನರ ಹಾಗು ಕ್ಷತ್ರಪರ ಸಣ್ಣ ಸಣ್ಣ ರಾಜ್ಯಗಳು ಕನಿಷ್ಕನ ಒಡೆತನವನ್ನು ಒಪ್ಪಿಕೊಂಡಿದ್ದವು. ಅಶೋಕನ ತರುವಾಯ ಆದ ಹೆಸರಾದ ಸಾರ್ವಭೌಮನು ಈ ಕನಿಷ್ಕನೆ. **ಮಥುರೆ**ಯು ಇವನ ದಕ್ಷಿಣದ ರಾಜಧಾನಿ ಆಗಿತ್ತು.

೭. **ಕನಿಷ್ಕನ ಯೋಗ್ಯತೆ**:— ಕನಿಷ್ಕನು ಸಾಮ್ರಾಜ್ಯಸ್ಥಾಪಕನಾಗಿದ್ದಂತೆ ವಿದ್ಯಾಪಕ್ಷಪಾತಿಯೂ ಬೌದ್ಧಧರ್ಮಾಭಿಮಾನಿಯೂ ಆಗಿದ್ದನು. ಮಹಾಸಭೆಯನ್ನು ನೆರೆಯಿಸಿ ವಿದ್ವಾಂಸರಿಂದ ಬೌದ್ಧ ಧರ್ಮಗ್ರಂಥಗಳ ಮೇಲಿನ ಟೀಕೆಗಳನ್ನು ಬರೆಯಿಸಿದನು. ಬೌದ್ಧತತ್ವಜ್ಞಾನಿಯೂ ಕವಿಯೂ ಆದ **ಅಶ್ವಘೋಷ**ನು ಈ ಕನಿಷ್ಕನ ಆಸರದಲ್ಲಿದ್ದನು. ಪ್ರಸಿದ್ಧ ವೈದ್ಯ ಶಾಸ್ತ್ರಕಾರನಾದ **ಚರಕ**ನು ಕನಿಷ್ಕನ ರಾಜವೈದ್ಯನಾಗಿದ್ದನು. **ನಾಗಾರ್ಜುನ, ವಸುಮಿತ್ರ** ಎಂಬ ಪಂಡಿತರು ಇದೇ ಕಾಲದಲ್ಲಿ ಆಗಿಹೋದರು. ಕನಿಷ್ಕನು ಕ್ರಿ ಶ ೧೯೨ ರಲ್ಲಿ ಮರಣ ಹೊಂದಿದನು.

ಕನಿಷ್ಕನ ತರುವಾಯ ಅವನ ಮಗನಾದ **ಹವಿಷ್ಕ**ನು ಪಟ್ಟಕ್ಕೆ ಬಂದು ಚನ್ನಾಗಿ ರಾಜ್ಯಕಾರಭಾರವನ್ನು ಸಾಗಿಸಿದನು. ಇವನು ಕಾಶ್ಮೀರದಲ್ಲಿಯ ಹವಿಷ್ಕಪುರವನ್ನು ನೆಲೆಸಿದನು. ಇವನ ನಂತರ ವಾಸುದೇವ ಮುಂತಾದ ದುರ್ಬಲ ಅರಸರು ಪಟ್ಟಕ್ಕೆ ಬಂದುದರಿಂದ ಸಾಮ್ರಾಜ್ಯವು ಕಳೆಗುಂದ ಹತ್ತಿತು. ಕುಶಾನರ ಸಾಮ್ರಾಜ್ಯವು ಕ್ರಿ. ಶ. ೩೫೫ ರ ವರೆಗೆ ನಡೆಯಿತು.

೮. **ಪಾರ್ಥಿಯನನ ದಾಳಿ**:— ಪಾರ್ಥಿಯನರಲ್ಲಿ ಒಬ್ಬ ಅರಸನಾದ **ಮಿಥ್ರಿಡೇಟ್ಸ್** ಎಂಬವನು ಸಿಂಧುನದದ ವರೆಗೆ ದಂಡೆತ್ತಿ ಬಂದನು. *ಪಾರ್ಥಿಯನರ ಅಧಿಕಾರವು ಸಿಂಧದ ದಕ್ಷಿಣಭಾಗದ ಮೇಲೆ ನಡೆಯುತ್ತಿತ್ತು. ಈ ಮನೆತನದ **ಗೋಂಡೋಫರ್ನೀಸ**ನ ಆಳಿಕೆಯಲ್ಲಿ ಕ್ರೈಸ್ತ ಧರ್ಮೋಪದೇಶಕನಾದ **ಸೆಂಟಥಾಮಸ**ನು ಇವನಲ್ಲಿಗೆ ಬಂದಿದ್ದನು. ಗೋಂಡೋಫರ್ನೀಸನು ಕ್ರಿಶ್ಚನ್ ಧರ್ಮವನ್ನು ಸ್ವೀಕರಿಸಿದ್ದನು. ಕ್ರಿ. ಶ. ಎರಡನೆಯ ಶತಕದಲ್ಲಿ ಪಾರ್ಥಿಯನರ ರಾಜ್ಯವು ಕುಶಾನರ ಸಾಮ್ರಾಜ್ಯದಲ್ಲಿ ಕೂಡಿಹೋಯಿತು.


---

* ಬಾಕ್ಟ್ರಿಯದ ನೈಋತ್ಯಕ್ಕಿರುವ ಪ್ರದೇಶಕ್ಕೆ ಪಾರ್ಥಿಯಾ ಎಂಬ ಹೆಸರು.

೪ನೆಯ ಪಾಠ.

ಮೌರ್ಯ ಸಾಮ್ರಾಜ್ಯದ ಅಸ್ತವಾದಂದಿನಿಂದ ಗುಪ್ತ ಮನೆತನದ ವರೆಗಿನ ಕಾಲ. (ಮುಂದೆ ಸಾಗಿದ್ದು.)

೧. **ಆಂಧ್ರರಾಜ್ಯ :—** ಹಿಂದುಸ್ಥಾನದ ಪಶ್ಚಿಮೋತ್ತರ ಭಾಗಗಳಲ್ಲಿ ಯವನ (ಗ್ರೀಕ), ಶಕ, ಕುಶಾನ, ಮತ್ತು ಪಾರ್ಥಿಯನರೆಂಬ ಪರಕೀಯರು



ಶಾತವಾಹನರ ರಾಜ್ಯ

ಒಬ್ಬರ ಹಿಂದೊಬ್ಬರು ಬಂದು ಆಳುತ್ತಿರುವಾಗ ದಕ್ಷಿಣದಲ್ಲಿ **ಆಂಧ್ರರು** ಪ್ರಬಲರಾದರು. ಆಂಧ್ರರು ಆರ್ಯರಲ್ಲದಿದ್ದರೂ, ಅವರು ಸುಧಾರಣೆಯಲ್ಲಿ ಮುಂದುವರಿದವರಾಗಿದ್ದರು. ಅವರ ರಾಜ್ಯವು ಕಲಿಂಗರ ರಾಜ್ಯಕ್ಕೆ ಹೊಂದಿ ಕೃಷ್ಣಾ–

ಗೋದಾವರಿಗಳ ಮಧ್ಯದಲ್ಲಿಯ ಪ್ರದೇಶದಲ್ಲಿ ನೆಲೆಗೊಂಡಿತ್ತು. ಐತರೇಯ ಬ್ರಾಹ್ಮಣಗಳಲ್ಲಿಯ ಒಂದು ಕಥೆಯಲ್ಲಿ ಈ ಆಂಧ್ರರ ಉಲ್ಲೇಖವುಂಟು. ಆದದರಿಂದ ಆಂಧ್ರರು ಕ್ರಿ. ಶ. ಪೂ. ೧೦೦೦ನೆಯ ವರ್ಷದಿಂದ ಈ ಭಾಗದಲ್ಲಿ ಆಳುತ್ತಿರಬೇಕೆಂದು ತಿಳಿಯುವದು ಕ್ರಿ ಶ. ಪೂ. ೪ನೆಯ ಶತಕದಲ್ಲಿ ಆಂಧ್ರ ರಾಜ್ಯವು ಒಳ್ಳೆಯ ಘನತೆಯನ್ನು ಹೊಂದಿತ್ತು. ಆಗ ಈ ರಾಜರ ಬಳಿಯಲ್ಲಿ ಒಂದುಲಕ್ಷ ಕಾಲಾಳು, ಎರಡು ಸಾವಿರ ಸವಾರರು, ಒಂದು ಸಾವಿರ ಆನೆಗಳು ಇದ್ದವೆಂದು **ಪ್ಲಿನೀ** ಎಂಬ ರೋಮನ್ ಇತಿಹಾಸಕಾರನು ಬರೆದಿರುವನು. ಇವರ ರಾಜ್ಯದಲ್ಲಿ ಭದ್ರವಾದ ದುರ್ಗಗಳುಳ್ಳ ಮೂವತ್ತು ಪಟ್ಟಣಗಳಿದ್ದವು. ಅಶೋಕನ ಆಳಿಕೆಯಲ್ಲಿ ಆಂಧ್ರರು ಅವನ ಆಧಿಕಾರವನ್ನು ಒಪ್ಪಿಕೊಂಡರು.

೨. ಆಂಧ್ರ ಭೃತ್ಯರ ಅಥವಾ ಶಾತವಾಹನರ ಮನೆತನ:— ಆಂಧ್ರ ರಾಜ್ಯವು ಕ್ರಿ. ಶ. ಪೂ. ೨೪೦ನೆಯ ವರ್ಷ **ಶಾತವಾಹನ** ಮನೆತನದ ವಶವಾಯಿತು. ಈ ಶಾತವಾಹನರಿಗೆ **ಶಾಲಿವಾಹನ**ರೆಂದೂ ಹೆಸರು. **ಸಿಮುಕ**ನೆಂಬವನೇ ಈ ಶಾತವಾಹನ ರಾಜರ ಮೂಲಪುರುಷನು. ಅಶೋಕನ ಮರಣದ ನಂತರ ಈ ಶಾತವಾಹನ ರಾಜರು ಸ್ವತಂತ್ರರಾಗಿ ಪ್ರಬಲರಾಗಹತ್ತಿದರು. ಮುಂಪೆ ಇವರ ರಾಜ್ಯ ಪಶ್ಚಿಮಕ್ಕೆ **ನಾಶಿಕ**ದ ವರೆಗೆ ಹಬ್ಬಿತು. ಆಗ ಶಾತವಾಹನರು ತಮ್ಮ ರಾಜಧಾನಿಯನ್ನು **ಪ್ರತಿಷ್ಠಾನ** ಅಥವಾ **ಪೈಠಣಕ್ಕೆ** ತಂದರು. ಈ ಮನೆತನದ ೧೩ನೆಯ ಅರಸನಾದ **ಕುಂತಲಸ್ವಾತಿಕರ್ಣ** ಎಂಬವನು ಕ್ರಿ. ಶ. ಪೂ. ೨೭ನೆಯ ವರ್ಷ ಕಾಣ್ವ ಮನೆತನದ **ಸುಶರ್ಮ**ನನ್ನು ತಳ್ಳಿ ಮಗಧ ರಾಜ್ಯವನ್ನು ವಶಮಾಡಿಕೊಂಡನು. ಅಂದಿನಿಂದ ಈ ಮಗಧ ರಾಜ್ಯವು ಮುಂದೆ ೩೦೦ ವರ್ಷಗಳ ವರೆಗೆ ಶಾತವಾಹನರ ವಶದಲ್ಲಿಯೆ ಇತ್ತು. * ಶಾತವಾಹನರು ಮಗಧ ಸಾಮ್ರಾಜ್ಯವನ್ನು ಮುರಿದ ಬಳಿಕ ತಮ್ಮ ಸಾಮ್ರಾಜ್ಯವನ್ನು ಸ್ಥಾಪಿಸಿದರು. ಸಾಮ್ರಾಜ್ಯದ ವೈಭವದೊಂದಿಗೆ ಉತ್ತರದಿಂದ ಬರುವ ಪರಚಕ್ರಗಳನ್ನು

* ವಾತ್ಸ್ಯಾಯನನ ಕಾಮಸೂತ್ರವೆಂಬ ಗ್ರಂಥದಲ್ಲಿ ಶಾತಕರಣಿ ಎಂಬೊಬ್ಬ ಶಾಲಿವಾಹನ ರಾಜನಿಗೆ 'ಕುಂತಳಾವೀಶ' ಎಂದೂ ಬಳ್ಳಾರಿ ಜಿಲ್ಲೆಯ ಹಿರೇಹಡಗಲಿಯಲ್ಲಿ ಮೊರೆತ ಶಾಸನಗಳಲ್ಲಿ ಆ ನಾಡಿಗೆ 'ಶಾತವಾಹನನಾಡು' ಎಂದೂ ಹೆಸರುಗಳಿರುವದರಿಂದ ಶಾತವಾಹನ ರಾಜರು ಕನ್ನಡಿಗರಿರಬೇಕೆಂದು ಕೆಲವರ ಅನುಮಾನ.

ತರುವಿ ಹಿಂದಕ್ಕಟ್ಟುವ ಕಠಿಣ ಕಾರ್ಯವೂ ಇವರ ಪಾಲಿಗೆ ಬಂದಿತು ಶಕರು ಉತ್ತರ ಹಿಂದುಸ್ಥಾನದ ಪಶ್ಚಿಮೋತ್ತರ ಭಾಗಗಳಲ್ಲಿ ತಮ್ಮ ಅಧಿಕಾರವನ್ನು ನೆಲೆಸಿ ಪಂಜಾಬ, ರಾಜಸ್ಥಾನ, ಕಾಠೇವಾಡ, ಮಾಳವ, ಗುಜರಾಥ ಪ್ರಾಂತಗಳನ್ನು ಗೆದ್ದು, ನರ್ಮದೆಯನ್ನು ದಾಟಿ ನಾಶಿಕ ಪಟ್ಟಣವನ್ನೂ ಹಿಡಿದುಕೊಂಡರು. ಶಕರ ದಾಳಿಯಿಂದ ದೇಶವು ಹಾಳಾಗ ಹತ್ತಿತು. ಜನರು ಬಹು ಕಷ್ಟಕ್ಕೀಡಾದರು. ಆಗ ಶಾತವಾಹನರ ಅತಿ ಪರಾಕ್ರಮಿಯಾದ * ಗೌತಮಿ ಪುತ್ರನಾದ **ಶಾತಕರ್ಣಿ** (ಸ್ವಾತಿಕರ್ಣ) ನು ಶಕರನ್ನು ನರ್ಮದೆಯ ಆಚೆಗೆ ಓಡಿಸಿದ್ದಲ್ಲದೆ, ಮಾಳವ – ರಾಜಸ್ಥಾನಗಳ ವರೆಗೆ ಬೆನ್ನಟ್ಟಿ ಹೋಗಿ ಅವರನ್ನು ಸಂಪೂರ್ಣವಾಗಿ ಸೋಲಿಸಿದನು. ಈ ಶಾತಕರ್ಣನು ೨೫ ವರ್ಷ ವೈಭವದಿಂದ ಆಳಿದ ತರುವಾಯ ಕ್ರಿ. ಶ ೧೩೦ ರಲ್ಲಿ ಇವನ ಮಗನಾದ **ಪುಲಿಮಾಯಿ** *' **ಶಾಲಿವಾಹನ**ನು ಪಟ್ಟಕ್ಕೆ ಬಂದನು. ಇವನ ಕಾಲದದಲ್ಲಿ ಶಕರಿಗೂ ಶಾತವಾಹನರಿಗೂ ಅನೇಕ ಯುದ್ಧಗಳಾದವು. **ಮಾಳವದ** ಶಕರಾಜನಾದ **ರುದ್ರದಮನ**ನು ಎಲ್ಲ ಶಕರಲ್ಲಿ ಐಕ್ಯವನ್ನುಂಟುಮಾಡಿಕೊಂಡು ಶಾಲಿವಾಹನನ ನರ್ಮದೆಯ ಉತ್ತರದ ಅಧಿಕಾರವನ್ನು ಕಿತ್ತೊಗೆದು, ನರ್ಮದೆಯನ್ನು ದಾಟಿ ಬರಹತ್ತಿದನು. ಆದರೆ ಶಾಲಿವಾಹನನ ಮುಂದೆ ಅವನ ಆಟವು ನಡೆಯಲಿಲ್ಲ. ರುದ್ರದಮನನಾದರು ಪರಾಕ್ರಮಿಯಾದದರಿಂದ ಶಾಲಿವಾಹನನ ಅಧಿಕಾರವನ್ನು ನರ್ಮದೆಯ ಉತ್ತರದಲ್ಲಿ ಅವನೂ ನಡೆಯಗೊಡಲಿಲ್ಲ ನರ್ಮದೆಯೆ ಶಕ–ಶಾಲಿವಾಹನರ ಮೇರೆಯು ಸ್ಥಿರವಾಯಿತು. ಶಾತವಾಹನರ ಸಾಮ್ರಾಜ್ಯವು ಪೂರ್ವ–ಪಶ್ಚಿಮ ಸಮುದ್ರಗಳ ವರೆಗೆ ಪ್ರಸರಿಸಿತ್ತು ಹಿಂದು ಮತ್ತು ಬೌದ್ಧ ಧರ್ಮಗಳೆರಡೂ ಉತ್ತಮ ಸ್ಥಿತಿಯಲ್ಲಿದ್ದವು. ಈ ಮನೆತನದ ೩೦ ಮಂದಿ ಅರಸರು ಒಟ್ಟಿಗೆ ೪೫೦ ವರ್ಷ ರಾಜ್ಯವಾಳಿದರು. ಕ್ರಿ. ಶ. ೨೧೮ ರಲ್ಲಿ ಈ ಮನೆತನದ ಲೋಪವಾಯಿತು.

---

* ಈ ವಿಜಯದಿಂದ ಗೌತಮನಿಗೆ ಬಹು ಸಂತೋಷವಾಯಿತೆಂದು ಕಾರ್ಲೆಯ ಕೊರೆದ ಗುಡಿಯೊಳಗಿನ ಒಂದು ಶಿಲಾಲೇಖದಿಂದ ತಿಳಿಯುತ್ತದೆ.

*' ಈ ಶಾಲಿವಾಹನನೇ ದಕ್ಷಿಣ ಹಿಂದುಸ್ಥಾನದಲ್ಲಿ ಈಗಲೂ ನಡೆಯುತ್ತಿರುವ ಶಾಲಿವಾಹನ ಶಕವನ್ನು ಆರಂಭಿಸಿದನು. ಆ ವರೆಗೆ ನಡೆಯುತ್ತ ಬಂದ ಶಕರ ಕಾಲಗಣನೆಯೇ ಶಾಲಿವಾಹನ ಶಕವೆಂಬ ಹೆಸರಿನಿಂದ ಮುಂದೆ ನಡೆಯಹತ್ತಿತು.

೩. **ಧಾರ್ಮಿಕ ಸ್ಥಿತಿ**:— ಶಕ, ಕುಶಾನ, ಮುಂತಾದ ಪರದೇಶದವರ ಬರುವಿಕೆಯಿಂದ ಹಿಂದುಸಂಸ್ಕೃತಿಯ ಮೇಲೆ ವಿಶೇಷ ಪರಿಣಾಮಗಳಾಗಲಿಲ್ಲ. ಹೊರಗಿನಿಂದ ಬಂದ ಈ ಜನರು ತಾವೇ ಹಿಂದು ಅಥವಾ ಬೌದ್ಧಧರ್ಮವನ್ನು ಸ್ವೀಕರಿಸಿದರು. ಇಷ್ಟೇ ಅಲ್ಲ; ಕುಶಾನರ ಕನಿಷ್ಕ ರಾಜನು ಬೌದ್ಧ ಧರ್ಮದ ಪ್ರಸಾರಕ್ಕಾಗಿ ಬಹಳ ಪ್ರಯತ್ನಮಾಡಿದನು. ಶುಂಗ ಮತ್ತು ಕಣ್ವ ಮನೆತನದ ಅರಸರು ಹಿಂದುಧರ್ಮದ ಉತ್ಕರ್ಷಕ್ಕಾಗಿ ಸಾಹಸಮಾಡಿದರು. ಬೌದ್ಧಧರ್ಮದ ಸಾಹಚರ್ಯದಿಂದ ಹಿಂದು ಧರ್ಮದಲ್ಲಿ ವಿಶೇಷವಾದ ಹೆಚ್ಚುಕಡಿಮೆಗಳಾದವು. ಕರ್ಮಗಳ ಅತಿರೇಕವು ಇಲ್ಲದಾಯಿತು; ಯಜ್ಞ-ಯಾಗಗಳು ಬಹುತರ ನಿಂತುಹೋದವು; ಬುದ್ಧ ವಿಹಾರಗಳಂತೆ ಹಿಂದುಗಳು ದೇವಾಲಯಗಳನ್ನು ಕಟ್ಟಹತ್ತಿದರು; ಬ್ರಹ್ಮ-ವಿಷ್ಣು-ಶಿವ ಮೊದಲಾದ ದೇವತೆಗಳ ಮೂರ್ತಿಗಳನ್ನು ಗುಡಿಗಳಲ್ಲಿ ಸ್ಥಾಪಿಸಿ ಅವನ್ನು ಪೂಜಿಸಹತ್ತಿದರು. ಅಶೋಕನ ತರುವಾಯ ದೇಶದಲ್ಲಿ ಹಿಂದು ಮತ್ತು ಬೌದ್ಧ ಧರ್ಮದವರು ತಮ್ಮ ತಮ್ಮ ಧರ್ಮವನ್ನೂ ಹಬ್ಬಿಸುವ ಪ್ರಯತ್ನದಲ್ಲಿದ್ದರು. ಹಿಂದುಗಳು ಬೌದ್ಧಧರ್ಮದಲ್ಲಿಯ ಉತ್ತಮವಾದ ಸಂಗತಿಗಳನ್ನು ಎತ್ತಿಕೊಂಡು ತಮ್ಮ ಧರ್ಮವು ಜನಪ್ರಿಯವಾಗುವಂತೆ ಯತ್ನಿಸುತ್ತಿದ್ದರು. ಅರಸರ ಒಲವಿನಂತೆ ಕೆಲವು ಕಾಲ ಬೌದ್ಧಧರ್ಮಕ್ಕೂ ಕೆಲಕಾಲ ಹಿಂದುಧರ್ಮಕ್ಕೂ ಉತ್ತೇಜನವು ದೊರೆಯುತ್ತಿತ್ತು.

೪. **ಆ ಕಾಲದ ಪ್ರಗತಿ**:— ಈಗ ಪ್ರಚಾರದಲ್ಲಿರುವ ಮನುಸ್ಮೃತಿಯೆಂಬ ಗ್ರಂಥವು ಇದೇ ಕಾಲದಲ್ಲಿ ರಚಿತವಾಯಿತು. ಬೌದ್ಧ ಧರ್ಮದ ಪ್ರಸಾರದಿಂದ ಆಗುತ್ತಿದ್ದ ವರ್ಣಸಂಕರವನ್ನು ತಡೆಯುವದೇ ಮನುಸ್ಮೃತಿಯ ಉದ್ದೇಶವಿರಬೇಕೆಂದು ತೋರುತ್ತದೆ. ಆಯಾ ವರ್ಗದವರು ಮಾಡತಕ್ಕ ಕರ್ತವ್ಯಗಳು ಇದರಲ್ಲಿ ವಿವರವಾಗಿ ಹೇಳಲ್ಪಟ್ಟಿವೆ. ಬೌದ್ಧಧರ್ಮವು ಹಿಮ್ಮೆಟ್ಟಿ ಹಿಂದುಧರ್ಮವು ಮುಂದಡಿಯಿಡಹತ್ತಿದಾಗ ಈ ಮನುಸ್ಮೃತಿಗೆ ಬಹಳ ಮಹತ್ವವುಂಟಾಯಿತು.

ಮನುಸ್ಮೃತಿಯ ಹೊರತಾಗಿ ಜ್ಯೋತಿಷ ಶಾಸ್ತ್ರದ ಗ್ರಂಥಗಳು ಆ ಕಾಲದಲ್ಲಿ ಸಿದ್ಧವಾದವು. ಇವನ್ನು **ಪಾರಾಶರ – ಗರ್ಗ** ಋಷಿಗಳು ಬರೆ

ದರು. ಗ್ರೀಕರು ಜ್ಯೋತಿಷ ಶಾಸ್ತ್ರದಲ್ಲಿ ಹೊಂದಿದ್ದ ಪ್ರಗತಿಯನ್ನು ಇವರು ಅರಿತಿದ್ದರು. ಪಾರಾಶರ ಮತ್ತು **ಯಾಜ್ಞವಲ್ಕ್ಯ** ಋಷಿಗಳು ಬರೆದ ಸ್ಮೃತಿಗಳೂ ಪ್ರಸಿದ್ಧವಾಗಿರುವವು. ಬೌದ್ಧರ ಕೊರೆದ ಗುಡಿಗಳೊಳಗಿನ ಕೆತ್ತಿಗೆ, ಸುಳಿವುಗಳು ಆ ಕಾಲದ ಜನರ ಜಾಣ್ಮೆಯ ಸಾಕ್ಷಿಗಳಾಗಿವೆ. ಕಟ್ಟಡಗಳ ಭವ್ಯತೆ ಮತ್ತು ಭದ್ರತೆಗಳನ್ನು ನೋಡಿದರೆ ಆಗಿನ ಶಿಲ್ಪಕಲೆಯು ಎಷ್ಟು ಮೇಲ್ಮೆ ಹೊಂದಿತ್ತೆಂಬುದು ಒಡೆದು ಕಾಣುವದು. ಪುರಾಣಗಳಾದರೂ ಆ ಕಾಲದಲ್ಲಿಯೇ ರಚಿತವಾದವು.


ಹಿಂದುಸ್ಥಾನದ ವ್ಯಾಪಾರವು ರೋಮು ಸಾಮ್ರಾಜ್ಯ, ಏಶಿಯಾ ಮೈನರ, ಅರಬಸ್ತಾನ, ಇರಾಣ, ಚೀನ ಈ ದೇಶಗಳೊಡನೆ ಒಳ್ಳೆಯ ಭರದಿಂದ ನಡೆದಿತ್ತು. ನೂಲು – ರೇಶಿಮೆಗಳ ಜಿನುಗಾದ ಬಟ್ಟೆಗಳು, ಮಸಾಲೆಯ ಪದಾರ್ಥಗಳು, ಆನೆಯ ಹೆಲ್ಲು ಮುಂತಾದವು ನಮ್ಮ ದೇಶದ ಹಡಗಗ ಳೊಳಗಿಂದಲೆ ಪರದೇಶಗಳಿಗೆ ಕಳುಹಲ್ಪಡುತ್ತಿದ್ದವು. ಹೆಸರಾದ ಅರಸರು ಸಾಮ್ರಾಜ್ಯಗಳನ್ನು ಸ್ಥಾಪಿಸಿ ದೇಶದ ವ್ಯಾಪಾರೋದ್ಯೋಗಗಳನ್ನು ಊರ್ಜಿತ ಸ್ಥಿತಿಗೆ ತಂದಿದ್ದರು. ಆದದರಿಂದ ಸಿರಿಸಂಪತ್ತುಗಳಿಂದ ಸಮೃದ್ಧವಾದ ಈ ದೇಶವು ಆ ಕಾಲದಲ್ಲಿ ಸುವರ್ಣಭೂಮಿ ಎಂಬ ಹೆಸರು ಪಡೆಯಿತು.

೫ನೆಯ ಪಾಠ.

ಗುಪ್ತ ಸಾಮ್ರಾಜ್ಯ.

೧. **ಚಂದ್ರಗುಪ್ತ**:— ಕ್ರಿ. ಶ. ೨೫೦ ರ ವರೆಗೆ ಮಗಧ ರಾಜ್ಯವು ಶಾತವಾಹನರ ಅಧಿಕಾರಕ್ಕೆ ಒಳಗಾಗಿತ್ತು. ಮುಂದೆ ಕ್ರಿ. ಶ. ೩೨೦ ರಲ್ಲಿ **ಚಂದ್ರಗುಪ್ತ**ನೆಂಬ ಶೂರಪುರುಷನು ಪಾಟಲೀಪುತ್ರದಲ್ಲಿ ಪ್ರಬಲನಾಗಿ ಮಗಧ ರಾಜ್ಯವನ್ನು ಆಕ್ರಮಿಸಿಕೊಂಡು, ಮಹಾರಾಜ ಎಂಬ ಬಿರುದನ್ನು ಧರಿಸಿ ಸ್ವತಂತ್ರವಾಗಿ ಆಳಹತ್ತಿದನು. ಇವನು ವೈಶಾಲಿಯ **ಲಿಚ್ಛವಿ**ಯೆಂಬ ಮನೆತನದ **ಕುಮಾರದೇವಿ**ಯನ್ನು ಲಗ್ನವಾಗಿದ್ದನು. ರಾಜ್ಯಸ್ಥಾಪನೆಯ

ಕಾರ್ಯದಲ್ಲಿ ಚಂದ್ರಗುಪ್ತನಿಗೆ ಈ ಲಿಚ್ಛವಿಯರ ಬೆಂಬಲವು ಚೆನ್ನಾಗಿ ಮೊರೆಯಿತು. ಈತನು ತನ್ನ ಗುಪ್ತಶಕವನ್ನು ಆರಂಭಿಸಿದನು. ಅದು ಉತ್ತರ ಹಿಂದುಸ್ಥಾನದಲ್ಲಿ ಬಹುಕಾಲ ನಡೆಯಿತು ತನ್ನ ಸುವರ್ಣ ನಾಣ್ಯಗಳ ಮೇಲೆ ಅರಸು ಅರಸಿಯರ ಹೆಸರುಗಳನ್ನು ಮುದ್ರಿಸಿದ್ದನು. ಕ್ರಿ. ಶ. ೩೭೦ ರ ಸುಮಾರಕ್ಕೆ ಇವನು ಮರಣಹೊಂದಿದನು.



ಗುಪ್ತರ ಕಾಲದ ಹಿಂದುಸ್ಥಾನ

೨. **ಸಮುದ್ರಗುಪ್ತ ಚಕ್ರವರ್ತಿ**:— ಚಂದ್ರಗುಪ್ತನ ನಂತರ ಅವನ ಮಗನಾದ **ಸಮುದ್ರಗುಪ್ತನು** ಅಳಹತ್ತಿ ಮಗಧ ರಾಜ್ಯವನ್ನು ಒಳ್ಳೆಯ ಊರ್ಜಿತಸ್ಥಿತಿಗೆ ತಂದನು. ಅಶೋಕನ ತರುವಾಯ ಆದ ಕರ್ತೃತ್ವಶಾಲಿಯಾದ ಚಕ್ರವರ್ತಿಯು ಈತನೇ. ಈತನು ಬೌದ್ಧ ಧರ್ಮಿಯಾಗಿರದೆ **ಭಗವದ್ಗೀತೆ**ಯ ಭಾಗವತ ಧರ್ಮದ ಅನುಯಾಯಿಯಾಗಿದ್ದನು. ಎಲ್ಲಕಡೆಗೆ

ವಿಜಯವನ್ನು ಸಂಪಾದಿಸಿದ ಬಳಿಕ ಇವನು **ಅಶ್ವಮೇಧ ಯಜ್ಞ**ವನ್ನು ಮಾಡಿರಬಹುದಾಗಿ ತೋರುವದು. ಅಶೋಕನು ಧರ್ಮ ಭಾವನೆಯಿಂದ ಕೊರೆಯಿಸಿದ ನೀತಿವಚನಗಳ ಬುಡದಲ್ಲಿಯೇ ಈ ಸಮುದ್ರಗುಪ್ತನು ತನ್ನ ದಿಗ್ವಿಜಯದ ವರ್ಣನೆಯನ್ನು ಬರೆಯಿಸಿರುವನು! **ಕಾಬುಲ**ದಿಂದ **ಅಸಾಮು**ದ ವರೆಗೂ **ನೇಪಾಳ**ದಿಂದ **ಕಾಂಜಿವರಮು**ದ ವರೆಗೂ ಇವನ ರಾಜ್ಯವು ಹಬ್ಬಿತ್ತು. **ಮಹಾಕಾಂತಾರ** (ಒಡಿಸಾ), **ಪಿಷ್ಟಪುರ** (ಆಂಧ್ರ), **ದೇವರಾಷ್ಟ್ರ** (ಮಹಾರಾಷ್ಟ್ರ), **ಕಾಂಜಿ** (ಕಾಂಜಿವರಮು), ಮುಂತಾದ ಹನ್ನೆರಡು ಪ್ರಾಂತಗಳ ರಾಜರನ್ನು ಈತನು ಗೆದ್ದ ಬಳಿಕ, ತನ್ನ ಒಡೆತನವನ್ನು ಅವರು ಒಪ್ಪಿಕೊಂಡಿದ್ದರಿಂದ ಅವರ ಸ್ವಾತಂತ್ರ್ಯವನ್ನು ಮರಳಿಕೊಟ್ಟನು ಪೂರ್ವ-ಪಶ್ಚಿಮ ಮೇರೆಗಳಲ್ಲಿಯ ರಾಜರನ್ನು ತನ್ನ ಮಾಂಡಲಿಕರನ್ನಾಗಿ ಮಾಡಿಕೊಂಡನು. ಉತ್ತರದ ರಾಜರನ್ನು ಪೂರ್ಣವಾಗಿ ಬಗ್ಗುಬಡಿದನು ಎಷ್ಟೋ ಕಾಡುಜನರು ಶರಣು ಬಂದು ಇವನ ಸೇವಕರಾದರು. ವಾಯವ್ಯ ಮಾರ್ಗವಾಗಿ ಬರುತ್ತಿದ್ದ ಪರಚಕ್ರಗಳನ್ನು ಕಟ್ಟುಮಾಡಿದನು. ಸಿಲೋನಿನ **ಮೇಘವರ್ಮ**ನು ಸಮುದ್ರಗುಪ್ತನೊಡನೆ ಸ್ನೇಹದಿಂದ ಇರಹತ್ತಿದನು. ಈ ಮೇಘವರ್ಮನು, ಬುದ್ಧಗಯೆಗೆ ಬರುವ ಸಿಲೋನಿನ ಯಾತ್ರಿಕರಿಗೋಸುಗ ಸ್ವತಂತ್ರವಾದ ಧರ್ಮಶಾಲೆಯನ್ನೊಂದನ್ನು ಕಟ್ಟಿಸಿಕೊಳ್ಳಲು ಒಪ್ಪಿಗೆಯನ್ನು ಕೇಳಲು, ಸಮುದ್ರಗುಪ್ತನು ಸಂತೋಷದಿಂದ ಈ ಮಾತಿಗೆ ಸಮ್ಮತಿಸಿದನು.

ಹೀಗೆ ಮಾಂಡಲಿಕ ಮತ್ತು ಮಿತ್ರರಾಜರ ಪ್ರೀತಿಪಾತ್ರನೂ, ಪರಾಕ್ರಮಿಯೂ, ಸುಸಂಸ್ಕೃತನೂ ರಾಜಕಾರ್ಯಕುಶಲನೂ ಆದ ಈ ಚಕ್ರವರ್ತಿಯು ಕ್ರಿ. ಶ. ೩೭೫ರಲ್ಲಿ ಮರಣಹೊಂದಿದನು. ಇವನಿಗೆ **ಬಾಲಾದಿತ್ಯ**, **ವಿಕ್ರಮಾದಿತ್ಯ**, **ಚಂದ್ರಪ್ರಕಾಶ** ಎಂಬ ಬಿರುದುಗಳಿದ್ದವು.

೩. **ವಿಕ್ರಮಾದಿತ್ಯ**:— ಸಮುದ್ರಗುಪ್ತನ ತರುವಾಯ ಅವನ ಮಗನಾದ **೨ನೆಯ ಚಂದ್ರಗುಪ್ತನು** ವಿಕ್ರಮಾದಿತ್ಯ ಎಂಬ ಹೆಸರಿನಿಂದ ಪಟ್ಟಕ್ಕೆ ಕುಳಿತನು. ಪಂಜಾಬು, ಬಂಗಾಲ ಪ್ರಾಂತಗಳ ಮೇಲೆ ದಂಡೆತ್ತಿ ಹೋಗಿ ಅವನ್ನು ವಶಮಾಡಿಕೊಂಡನು. ಮಾಳವದ ಕ್ಷತ್ರಪರನ್ನು ಸೋಲಿಸಿ, ಉಜ್ಜಯಿನಿಯನ್ನು ತಕ್ಕೊಂಡು ಅಲ್ಲಿಗೆ ತನ್ನ ಸಿಂಹಾಸನವನ್ನು ತಂದನು. ಉಜ್ಜ

ಯಿನಿಯು ಆ ಕಾಲದ ವ್ಯಾಪಾರದ ಮುಖ್ಯ ಕೇಂದ್ರವಾಗಿತ್ತು. ಖಂಬಾಯತದ ಮಾರ್ಗವಾಗಿ ಬಂದ ಪರದೇಶದ ಸರಕುಗಳು ಉಜ್ಜಯಿನಿಗೆ ಬಂದಬಳಿಕ ಅಲ್ಲಿಂದ ಉತ್ತರಹಿಂದುಸ್ಥಾನದ ಎಲ್ಲ ಭಾಗಗಳಿಗೆ ಹೋಗುತ್ತಿದ್ದವು. ಈ ವಿಕ್ರಮಾದಿತ್ಯನು ನ್ಯಾಯಪ್ರಿಯನೆಂದು ಖ್ಯಾತಿಗೊಂಡು ಕ್ರಿ ಶ. ೩೭೫ರಿಂದಕ್ರಿ. ಶ. ೪೧೩ರ ವರೆಗೆ ಆಳಿದನು. ಉತ್ತರ ಹಿಂದುಸ್ಥಾನದಲ್ಲಿ ನಡೆಯುತ್ತಲಿದ್ದ ಕಾಲಗಣನೆಗೆ '**ವಿಕ್ರಮಸಂವತ್**' ಎಂಬ ಹೆಸರು ಈ ವಿಕ್ರಮಾದಿತ್ಯನಿಂದ ಉಂಟಾಯಿತು. ದಕ್ಷಿಣ ಹಿಂದುಸ್ಥಾನದಲ್ಲಿ ಶಾಲಿವಾಹನ ಶಕವು ನಡೆಯುತ್ತಿರುವಂತೆ ಉತ್ತರ ಹಿಂದುಸ್ಥಾನದಲ್ಲಿ ವಿಕ್ರಮ ಸಂವತ್ತು ಈಗಲೂ ನಡೆಯುತ್ತದೆ.

ಫಾಹ್ಯೆನನೆಂಬ ಚೀನ ದೇಶದ ಯಾತ್ರಿಕನು ಬುದ್ಧರ ಪವಿತ್ರ ಸ್ಥಳಗಳನ್ನು ನೋಡಲೋಸುಗ ಈ ವಿಕ್ರಮಾದಿತ್ಯನ ಕಾಲದಲ್ಲಿ ಹಿಂದುಸ್ಥಾನಕ್ಕೆ ಬಂದು ಹೋದನು. ಕ್ರಿ. ಶ. ೪೦೫ರಿಂದ ಕ್ರಿ. ಶ. ೪೧೧ರ ವರೆಗೆ ಎಂದರೆ ೬ ವರ್ಷ ಇವನು ಈ ದೇಶದಲ್ಲಿ ಸಂಚಾರಮಾಡಿದನು. ಇವನು ಬರೆದಿಟ್ಟ ಸಂಗತಿಗಳಿಂದ ಆ ಕಾಲದ ಹಿಂದುಸ್ಥಾನವು ಎಲ್ಲ ಬಗೆಯಿಂದಲೂ ಶ್ರೇಷ್ಠತೆಯನ್ನು ಪಡೆದಿತ್ತೆಂದು ತಿಳಿಯುವದು. ಹಿಂದುಸ್ಥಾನವು ಸುಖಸಂಪತ್ತು-ವಿದ್ಯೆ ಕಲೆಗಳ ಆಗರವೆನಿಸಿತ್ತು. ಏಶಿಯಾಖಂಡದ ಬಹುಭಾಗದಲ್ಲಿ ಆರ್ಯಸಂಸ್ಕೃತಿಯೇ ಹಬ್ಬಗೊಂಡಿದ್ದು ಹಿಂದುಸ್ಥಾನವು ಆ ಸಂಸ್ಕೃತಿಯ ಕೇಂದ್ರವೆನಿಸಿತ್ತು. ಬೇರೆ ಬೇರೆ ದೇಶಗಳ ವಿದ್ವಾಂಸರು ಸಂಸ್ಕೃತಿಯ ಅಭ್ಯಾಸಕ್ಕಾಗಿ ಈ ದೇಶಕ್ಕೆ ಬರುತ್ತಿದ್ದರು. ಫಾಹ್ಯೆನನು ಇಲ್ಲಿಯ ಆ ಕಾಲದ ಲೋಕಸ್ಥಿತಿಯ ವಿಷಯವಾಗಿ ಕೆಳಗಿನಂತೆ ಅಭಿಪ್ರಾಯವನ್ನು ವ್ಯಕ್ತಗೊಳಿಸಿರುವನು.


"ಜನರು ಪ್ರಾಮಾಣಿಕರಾಗಿರುವರು. ಹಿಂದು ಮತ್ತು ಬೌದ್ಧ ಇವರಲ್ಲಿ ಪ್ರೇಮದ ಬಳಕೆಯಿದೆ. ಜನರು ಪ್ರಾಣಿಗಳನ್ನು ಹಿಂಸಿಸುವದಿಲ್ಲ. ಮದ್ಯವನ್ನು ಕುಡಿಯುವದಿಲ್ಲ. ಬೆಳ್ಳುಳ್ಳಿ ಮುಂತಾದ ಪದಾರ್ಥಗಳನ್ನು ತಿನ್ನುವದಿಲ್ಲ. ಧನಿಕರು ಬಡವರಿಗಾಗಿ ಔಷಧಾಲಯಗಳನ್ನು ಇರಿಸಿರುವರು. ಪ್ರಯಾಣಿಕರಿಗೋಸುಗ ಅಲ್ಲಲ್ಲಿ ಧರ್ಮಶಾಲೆಗಳಿರುವವು. ರಾಜರು ಪ್ರಜೆಗಳಿಗೆ ಭಾರವೆನಿಸುವ ಕರಗಳನ್ನು ಎತ್ತುವದಿಲ್ಲ. ಅಪರಾಧಿಗಳಿಗೆ ಕೊಟ್ಟ ಶಿಕ್ಷೆಗಳು ಹಗುರಾ

ಗಿರುವವು. ಮರಣದ ಶಿಕ್ಷೆಯನ್ನು ಕೊಡುವದಿಲ್ಲ. ಅರಸರ ಓಲಗದಲ್ಲಿ ಕವಿಗಳೂ, ವಿದ್ವಾಂಸರೂ ಬಹು ಜನರು ಇರುವರು. ಶಾಸ್ತ್ರ-ಕಲೆಗಳು ಅಭಿವೃದ್ಧಿಯನ್ನು ಹೊಂದಿರುವವು."

೪. **ಗುಪ್ತಮನೆತನದ ಉಳಿನ ಅರಸರು** :— ವಿಕ್ರಮಾದಿತ್ಯನ (ಎನೆಯ ಚಂದ್ರಗುಪ್ತ) ತರುವಾಯ ಅವನ ಮಗನಾದ **ಕುಮಾರಗುಪ್ತನು** ಪಟ್ಟಕ್ಕೆ ಬಂದು ದಿಗ್ವಿಜಯ ಸೂಚಕವಾದ ಅಶ್ವಮೇಧ ಯಜ್ಞವನ್ನು ಮಾಡಿದನು. ಕ್ರಿ. ಶ. ೪೫೫ ರಲ್ಲಿ ಕುಮಾರಗುಪ್ತನು ಮರಣ ಹೊಂದಲು ಅವನ ಮಗನಾದ **ಸ್ಕಂದಗುಪ್ತನು** ಆಳಹತ್ತಿದನು. ಈ ಕಾಲದಲ್ಲಿ **ಹೂಣ** ರೆಂಬವರು ವಾಯವ್ಯಮಾರ್ಗವಾಗಿ ಹಿಂದುಸ್ಥಾನದ ಮೇಲೆ ದಾಳಿಯ ಮಾಡಿದರು. ಸ್ಕಂದಗುಪ್ತನು ಶೌರ್ಯದಿಂದ ಈ ಹೂಣರನ್ನೆದುರಿಸಿ ಹಿಂದಕ್ಕಟ್ಟಿದನು. ಕ್ರಿ. ಶ. ೪೮೦ರಲ್ಲಿ ಸ್ಕಂದಗುಪ್ತನು ಸಾಯಲು **ಪುರಗುಪ್ತ, ನರಸಿಂಹಗುಪ್ತ, ಕುಮಾರಗುಪ್ತ, ಬುದ್ಧಗುಪ್ತ, ಭಾನುಗುಪ್ತ** ಮುಂತಾದವರು ರಾಜ್ಯವಾಳಿದರು. ಹೂಣರ ಮುಖ್ಯಸ್ಥನಾದ **ತೋರಮಾಣ**ನು ಕ್ರಿ ಶ. ೪೯೯ರಲ್ಲಿ ಗುಪ್ತರ ಮೇಲೆ ಸಾಗಿಬಂದು ಅವರನ್ನು ಸೋಲಿಸಿ ಉಜ್ಜಯನಿ ಪ್ರಾಂತವನ್ನು ವಶಮಾಡಿಕೊಂಡನು. ಗುಪ್ತರು ಮೇಲಿಂದಮೇಲೆ ಈ ಹೂಣರೊಡನೆ ಯುದ್ಧ ಮಾಡಬೇಕಾದುದರಿಂದಲೂ ಸ್ಕಂದಗುಪ್ತನ ತರುವಾಯ ಸಮರ್ಥರಾರೂ ಆಗದೆಯಿದ್ದದರಿಂದಲೂ ಗುಪ್ತಸಾಮ್ರಾಜ್ಯವು ಬಲಗುಂದಿತು. ಭಾನುಗುಪ್ತನು ಹೂಣರೊಡನೆ ಕಾದುವಾಗ ಕ್ರಿ. ಶ. ೫೧೦ ರಲ್ಲಿ ಹತನಾದನು. ಮಾಂಡಲಿಕ ರಾಜರು ಸ್ವತಂತ್ರರಾದರು. ಮುಂದೆ ಈ ಗುಪ್ತ ವಂಶಜರು ಮಗಧದ ಭಾಗವನ್ನು ಕ್ರಿ. ಶ. ೭೫೦ ರ ವರೆಗೆ ಆಳುತ್ತಿದ್ದರು.

೫. **ಗುಪ್ತರ ಕಾಲದ ದೇಶದ ಸ್ಥಿತಿ** :— ಗುಪ್ತ ಸಾಮ್ರಾಜ್ಯದ ಕಾಲಕ್ಕೆ 'ಸುವರ್ಣಯುಗ' ಎಂಬ ಹೆಸರು. ಆ ಕಾಲದ ಸ್ಥಿತಿಯು ಈ ಹೆಸರಿಗೆ ತಕ್ಕಂತೆಯೆ ಇತ್ತು. ಗುಪ್ತರಾಜರು ಸುವಿಚಾರಿಗಳಾಗಿದ್ದದರಿಂದ ಪ್ರಜೆಗಳಿಗೆ ಶಾಂತಿ-ಸುಖಗಳು ಒಲಿಸಿದವು. ಎಲ್ಲ ಬಗೆಯಿಂದ ದೇಶದ ಏಳ್ಗೆಯಾಯಿತು. ಈ ಅರಸರು ಹಿಂದುಧರ್ಮಿಗಳಾಗಿದ್ದದರಿಂದ ಇವರಿಂದ ಹಿಂದುಧರ್ಮದ ಉತ್ಕರ್ಷಕ್ಕೆ ಸಹಾಯವಾಯಿತು. ಹೀಗಿದ್ದರೂ ಉಳಿದ ಧರ್ಮದವರಿಗೆ

ಎಷ್ಟೂ ತೊಂದರೆಯಾಗುತ್ತಿದ್ದಿಲ್ಲ. ಸಂಸ್ಕೃತ ಭಾಷೆಯು ಪೂರ್ಣವಾಗಿ ಸುಧಾರಣೆಯನ್ನು ಹೊಂದಿತು. ಗುಪ್ತರ ಕಾಲದ ಕಟ್ಟಡಗಳು ಅಪ್ರತಿಮವಾಗಿವೆ. ಕಾಶೀ ಮುಂತಾದ ಪಟ್ಟಣಗಳಲ್ಲಿ ಹಲವು ಭವ್ಯವಾದ ದೇವಾಲಯ



ಕಾಶೀ ಪಟ್ಟಣದ ದೇವಾಲಯ

ಗಳು ಕಟ್ಟಲ್ಪಟ್ಟವು. ಅಜಂತೆಯ ಕಲ್ಪನೆಯ ಕೆತ್ತಿಗೆಯೂ ದಿಲ್ಲಿಯ ಬಳಿಯಲ್ಲಿ ಈಗಲೂ ನಿಂತಿರುವ ಜಂಗುಹತ್ತದಂಥ ಕಬ್ಬಿಣದ ಭವ್ಯವಾದ ಸ್ತಂಭಗಳೂ ಆಗಿನ ಶಿಲ್ಪಕಲೆಯ ಮೇಲ್ಮೈಯ ಸಾಕ್ಷಿಗಳಾಗಿವೆ. ಉತ್ತಮ ತರದ ನಾಣ್ಯಗಳು ಅವೇ ಕಾಲದಲ್ಲಿ ಅಚ್ಚು ಹಾಕಲ್ಪಟ್ಟವು. ಸಂಗೀತ ಕಲೆಯಲ್ಲಿಯೂ ಆಗಿನವರು ಒಳ್ಳೆಯ ಪ್ರಗತಿಯನ್ನು ಹೊಂದಿದ್ದರು.

೬ನೆಯ ಪಾಠ.

ಶ್ರೀಹರ್ಷನ ಸಾಮ್ರಾಜ್ಯ.

(ಕ್ರಿ. ಶ. ೬೦೬ – ಕ್ರಿ. ಶ ೬೪೭)

೧. **ಮಾಳವದ ಯಶೋಧರ್ಮ:**— ಗುಪ್ತರು ಬಲಗುಂದುತ್ತಿರುವಾಗ ಹೂಣರನ್ನು ತಡೆಯುವ ಕಾರ್ಯವನ್ನು **ಯಶೋಧರ್ಮ**ನೆಂಬ ಪರಾಕ್ರಮಿಯು ಕೈಕೊಂಡನು. ಇವನು ಮಾಳವ ಪ್ರಾಂತವನ್ನು ಹೂಣರಿಂದ ಸೆಳೆದುಕೊಂಡು ಸ್ವತಂತ್ರವಾಗಿ ಆಳಹತ್ತಿದನು. ವಿಕ್ರಮಾದಿತ್ಯ ಎಂಬ ಬಿರುದನ್ನು ಧರಿಸಿ ಗುಪ್ತರ ಅಧಿಕಾರವನ್ನು ಹಿಮ್ಮೆಟ್ಟಿಸಿ ಸಾರ್ವಭೌಮನೆನಿಸಿಕೊಂಡನು. ಈತನು ವಿದ್ಯಾಪಕ್ಷಪಾತಿಯಾಗಿದ್ದು ಕವಿಕುಲಗುರುವಾದ **ಕಾಲಿದಾಸ**ನಿಗೆ ಆಶ್ರಯವನ್ನು ಕೊಟ್ಟಿದ್ದನು. ಕಾಲಿದಾಸ ಕವಿಯಿಂದ ರಚಿತವಾದ **ರಘುವಂಶ ಶಾಕುಂತಲ** ಮೊದಲಾದ ಗ್ರಂಥಗಳು ಒಳ್ಳೆಯ ಹೆಸರಾಗಿರುವವು. ಈ ಅರಸರು ಕ್ರಿ. ಶ. ೫೨೮ ರಿಂದ ೫೮೩ ವರೆಗೆ ೫೫ ವರ್ಷ ವೈಭವದಿಂದ ಆಳಿದರು. **ಶ್ರೀಹರ್ಷ**ನು ಕ್ರಿ. ಶ. ೬೦೬ರಲ್ಲಿ ಈ ರಾಜ್ಯವನ್ನು ತೆಗೆದುಕೊಂಡನು.


೨. **ವಲ್ಲಭಿ ಹಾಗು ಸ್ಥಾನೇಶ್ವರ ಮನೆತನಗಳು:**— ಭಟ್ಟಾರ್ಕನೆಂಬವನು ಕ್ರಿ. ಶ. ೫೦೦ ರಲ್ಲಿ ಕಾಠೇವಾಡದಲ್ಲಿ ತನ್ನ ರಾಜ್ಯವನ್ನು ಸ್ಥಾಪಿಸಿ **ವಲ್ಲಭಿ** ಎಂಬ ಪಟ್ಟಣದಲ್ಲಿ ಆಳಹತ್ತಿದನು. ಈ ಮನೆತನದ ನಾಲ್ಕನೆಯ ಅರಸನಾದ **ಗುಡಸೇನ**ನು ಗುಪ್ತರ ಮೇಲಧಿಕಾರವನ್ನು ಕಿತ್ತೊಗೆದು ಸ್ವತಂತ್ರನಾದನು. ಈ ಮನೆತನದವರು ಹರ್ಷನ ಕಾಲದಲ್ಲಿ ಅವನ ಮಾಂಡಲಿಕರಾದರು. ಹರ್ಷನ ತರುವಾಯ ಮತ್ತೆ ಸ್ವತಂತ್ರರಾಗಿ ಆಳಹತ್ತಿದರು. ಈ ಮನೆತನವು ಕ್ರಿ. ಶ. ೭೭೮ರ ವರೆಗೆ ಸಾಗಿ ಮುಸಲ್ಮಾನರ ಕೈಸೇರಿತು.

ಸ್ಥಾನೇಶ್ವರದ ರಾಜರಾದರೂ ಕೂಡ ಗುಪ್ತರಿಂದ ಸ್ವತಂತ್ರರಾದರು. ಈ ಸ್ಥಾನೇಶ್ವರದ ರಾಜ್ಯವು ಆರನೆಯ ಶತಕದಲ್ಲಿ ಒಳ್ಳೆಯ ಹೆಸರಾಗಿತ್ತು. ಈ ಮನೆತನದ **ಪ್ರಭಾಕರವರ್ಧನ**ನೆಂಬವನು ೬ನೆಯ ಶತಕದ ಕೊನೆಗೆ ಪಂಜಾಬದಲ್ಲಿಯ ಹೂಣರನ್ನು ಸೋಲಿಸಿದನು. ಮತ್ತು ಮಾಳವ–ಗುಜರಾಥಗಳ

ಅರಸರನ್ನು ಗೆದ್ದು ತನ್ನ ಮಾಂಡಲಿಕರನ್ನು ಮಾಡಿಕೊಂಡನು. ಪ್ರಭಾಕರವರ್ಧನನ ತರುವಾಯ **ರಾಜವರ್ಧನನು** ರಾಜನಾದನು. ಈತನ ತಂಗಿಯಾದ **ರಾಜಶ್ರೀ** ಎಂಬವಳು ಕನೋಜದ ರಾಜನಾದ **ಗೃಹವರ್ಮನಿ**ಗೆ ಕೊಡಲ್ಪಟ್ಟಿದ್ದಳು. ಗೃಹವರ್ಮನಿಗೂ ಮಾಳವದ **ದೇವಗುಪ್ತ**ನಿಗೂ ಹಗೆತನವಿತ್ತು. ದೇವಗುಪ್ತನು ಕನೋಜದ ಮೇಲೆ ಸಾಗಿ ಗೃಹವರ್ಮನನ್ನು ಕೊಂದನು. ರಾಜಶ್ರಿಯು ಸೆರೆಸಿಕ್ಕಳು. ಆಗ ಈಕೆಯ ಅಣ್ಣನಾದ ರಾಜವರ್ಧನನು ದೇವಗುಪ್ತನನ್ನು ಮುತ್ತಿ ಅವನನ್ನು ಕೊಂದು ಹಾಕಿದನು. ಅಷ್ಟರಲ್ಲಿ ದೇವಗುಪ್ತನ ಸಹಾಯಕನಾದ ಬಂಗಾಲ ಪ್ರಾಂತದ **ಶಶಾಂಕಗುಪ್ತ**ನು ಕಪಟದಿಂದ ರಾಜವರ್ಧನನನ್ನು ಕೊಂದನು. ರಾಜವರ್ಧನನು ಸಾಯಲು ೧೬ ವರ್ಷದ **ಶ್ರೀಹರ್ಷನು** ಅಣ್ಣನನ್ನು ಕೊಂದ ಶಶಾಂಕನನ್ನೂ ಮಾಳವದವರ ಸೈನ್ಯವನ್ನೂ ಪೂರ್ಣವಾಗಿ ಸೋಲಿಸಿ, ವಿಂಧ್ಯಾದ್ರಿಯ ಅರಣ್ಯದಲ್ಲಿದ್ದ ರಾಜಶ್ರಿಯನ್ನು ಕರೆತಂದು ಆಕೆಯ ಸಹಾಯದಿಂದ ಕನೋಜದಲ್ಲಿಯೆ ಸಾರ್ವಭೌಮನಾಗಿ ಆಳಹತ್ತಿದನು.

೩. **ಸಾರ್ವಭೌಮನಾದ ಶ್ರೀಹರ್ಷನು:—** (ಕ್ರಿ ಶ. ೬೦೬ರಿಂದ ಕ್ರಿ. ಶ. ೬೪೭) ಪ್ರಭಾಕರವರ್ಧನನು ಸಾಯುವ ಸಮಯದಲ್ಲಿ ಕನೋಜದ ರಾಜ್ಯಕ್ಕೆ ಹೂಣರ ಕಾಟವಿತ್ತು ಗೌಡ-ಮಾಳವಗಳ ಅರಸರು ಒಟ್ಟಾಗಿ ಕನೋಜ ಮತ್ತು ಸ್ಥಾನೇಶ್ವರ ಇವುಗಳನ್ನು ಕೈಸೇರಿಸಿಕೊಳ್ಳುವ ಯತ್ನವನ್ನೂ ನಡೆಯಿಸಿದ್ದರು. ಇಂಥ ಪ್ರಸಂಗದಲ್ಲಿ ಶ್ರೀಹರ್ಷನು ಅಧಿಕಾರವನ್ನು ವಹಿಸಿ ಪಂಜಾಬ, ಸಿಂಧ, ಕಾಠೇವಾಡ (ವಲ್ಲಭ), ನೇಪಾಳಗಳಲ್ಲಿ ತನ್ನ ವರ್ಚಸ್ಸನ್ನು ನೆಲೆಸಿದನು. ಶಶಾಂಕನನ್ನು ಪೂರ್ವಕ್ಕೆ ಅಟ್ಟಿ ಪಶ್ಚಿಮಕ್ಕೆ ಅಡಿಯಿಡದಂತೆ ಕಟ್ಟುಮಾಡಿದನು. **ಕಾಮರೂಪ** (ಅಸಾಮ)ದ **ಕುಮಾರರಾಜ**ನೊಡನೆ ಸಖ್ಯವನ್ನು ಬೆಳೆಸಿದನು. ಈ ಕುಮಾರರಾಜನು ಬಹು ಬೆಲೆಯುಳ್ಳ ಒಂದು ಶ್ವೇತಛತ್ರವನ್ನು ಸಾರ್ವಭೌಮತ್ವದ ಗುರುತೆಂದು ಶ್ರೀಹರ್ಷನಿಗೆ ಅರ್ಪಿಸಿದನು. ಈ ಪ್ರಕಾರ ಬಹುತರ ಇಡೀ ಉತ್ತರ ಹಿಂದುಸ್ಥಾನವು ಇವನ ಅಧಿಕಾರಕ್ಕೆ ಒಳಗಾಯಿತು. ಇದೇ ಕಾಲಕ್ಕೆ ದಕ್ಷಿಣ ಹಿಂದುಸ್ಥಾನದಲ್ಲಿ ಬಾದಾಮಿಯ ಚಾಲುಕ್ಯರ **೨ನೆಯ ಪುಲಿಕೇಶಿ**ಯು ಸಾಮ್ರಾಜ್ಯಾಧಿಕಾರಿಯಾಗಿದ್ದನು. ಹರ್ಷನು ನರ್ಮದೆಯನ್ನು ದಾಟಿ ಪುಲಿಕೇಶಿಯ ರಾಜ್ಯವನ್ನು ಪ್ರವೇಶಿಸಲು

ಪುಲಿಕೇಶಿಯು ಹರ್ಷನನ್ನು ತಡೆದು ಸೋಲಿಸಿ ಹಿಂದಕ್ಕಟ್ಟಿದನು. ಅಂದಿನಿಂದ ನರ್ಮದಾನದಿಯೇ ಹರ್ಷ ಸಾಮ್ರಾಜ್ಯದ ದಕ್ಷಿಣ ಮೇರೆಯಾಯಿತು. ಒಂದು ಲಕ್ಷ ಕುದುರೆಯ ಸವಾರರೂ ಆರವತ್ತು ಸಾವಿರ ಆನೆಗಳೂ ಹರ್ಷನ ಬಳೆಯಲ್ಲಿದ್ದವು. ಈ ಅದ್ಭುತವಾದ ಸೈನ್ಯದ ಬೆಂಬಲವಿದ್ದದರಿಂದ ಇವನ ರಾಜ್ಯದ ಮೇಲೆ ಯಾರೂ ಕೈಯೆತ್ತದಂತಾಯಿತು.



ಶ್ರೀಹರ್ಷನ ಕಾಲದ ಹಿಂದುಸ್ಥಾನ.

೪. **ಬೌದ್ಧ ಧರ್ಮಕ್ಕೆ ಕೊಟ್ಟ ಆಶ್ರಯ:**— ಆರು ವರ್ಷಗಳ ವರೆಗೆ ಬಹು ಶ್ರಮಬಟ್ಟು ಎಲ್ಲ ಶತ್ರುಗಳನ್ನು ಕಡಗಿಸಿದ ಬಳಿಕ ಹರ್ಷನು ಉಳಿದ ಆಯುಷ್ಯವನ್ನು ಬೌದ್ಧ ಧರ್ಮದ ಪ್ರಸಾರದಲ್ಲಿಯೇ ಕಳೆದನು. **ದಿವಾಕರ ಮಿತ್ರ**ನೆಂಬ ಬೌದ್ಧಸನ್ಯಾಸಿಯ ಸಹವಾಸದಿಂದಲೂ ಬಾಲ್ಯದಿಂದಲೆ ಒದಗಿದ

ಅನೇಕ ಸಂಕಟಗಳ ಆಘಾತಗಳಿಂದಲೂ ಈತನಲ್ಲಿ ಬೌದ್ಧಧರ್ಮದ ವಿಷಯದ ಪ್ರೀತಿಯೂ ವೈರಾಗ್ಯವೂ ಉಂಟಾದವೆಂದು ತೋರುವದು. ಬೌದ್ಧ ಧರ್ಮವನ್ನು ಸ್ವೀಕರಿಸಿ, ರಾಜ್ಯದಲ್ಲಿ ಆಗುತ್ತಿದ್ದ ಹಿಂಸೆಯನ್ನು ನಿಲ್ಲಿಸಿದನು. ಬೌದ್ಧ ಭಿಕ್ಷುಗಳಿಗಾಗಿ ವಿಹಾರಗಳನ್ನು ಕಟ್ಟಿಸಿದನು. ವರ್ಷಕ್ಕೊಮ್ಮೆ ಬೌದ್ಧಭಿಕ್ಷುಗಳನ್ನು ನೆರೆಯಿಸಿ ಇಪ್ಪತ್ತೊಂದು ದಿವಸಗಳವರೆಗೆ ಧರ್ಮ ಸಂಬಂಧವಾದ ಚರ್ಚೆಯನ್ನು ಮಾಡಿಸುವನು. ಚೀನದ ಪ್ರವಾಸಿಯಾದ **ಹುಯೆನ್‌ತ್ಸಂಗ**ನು ಬುದ್ಧಧರ್ಮದ ಜ್ಞಾನವನ್ನು ಸಂಪಾದಿಸುವದಕ್ಕಾಗಿ ಹರ್ಷನಲ್ಲಿಗೆ ಬರಲು, ಹರ್ಷನು ದೊಡ್ಡ ಧರ್ಮಸಭೆಯೊಂದನ್ನು ಕನೋಜದಲ್ಲಿ ನೆರೆಯಿಸಿದನು.

೫. **ಶ್ರೀಹರ್ಷನ ದಾತೃತ್ವ**:— ಹರ್ಷನು ವರಾಕ್ರಮದಲ್ಲಿ ಸಮುದ್ರಗುಪ್ತನನ್ನು ಹೋಲುತ್ತಿರುವಂತೆ ದಾತೃತ್ವದಲ್ಲಿ ಅಶೋಕನನ್ನು ಹೋಲುತ್ತಿದ್ದನು. ಪ್ರಯಾಗದಲ್ಲಿ ಐದು ವರ್ಷಕ್ಕೊಮ್ಮೆ ದೊಡ್ಡ ಜಾತ್ರೆಯನ್ನು ನೆರೆಯಿಸಿ ದಾನಧರ್ಮಗಳನ್ನು ಆಚರಿಸುವನು. ಬುದ್ಧನ ಮೂರ್ತಿಯ ಸಂಗಡ ಸೂರ್ಯ ಈಶ್ವರ ಈ ಮೂರ್ತಿಗಳನ್ನೂ ಮೆರೆಯಿಸುವನು ಭೇದಬುದ್ಧಿಯಿಲ್ಲದೆ ಬೌದ್ಧ ಭಿಕ್ಷುಗಳು, ಬ್ರಾಹ್ಮಣರು, ಶ್ರಮಣಕರು ಮುಂತಾದವರಿಗೆ ದಾನಗಳನ್ನು ಕೊಡುವನು. ಐದು ವರ್ಷಕ್ಕೊಮ್ಮೆ ತನ್ನಲ್ಲಿದ್ದ ಸಿಲುಕನ್ನೆಲ್ಲ ದಾನಮಾಡಿಬಿಡುವನು. ಹೀಗೆ ಸರ್ವಸ್ವವನ್ನು ಕೊಟ್ಟಬಳಿಕ ಒಮ್ಮೆ ಹೊದ್ದುಕೊಳ್ಳಲಿಕ್ಕೆ ವಸ್ತ್ರವು ಕೂಡ ಇಲ್ಲದಾಗಲು ತನ್ನ ತಂಗಿಯಾದ ರಾಜಶ್ರಿಯಲ್ಲಿ ಒಂದು ಕಾವೆಯ ವಸ್ತ್ರವನ್ನು ಬೇಡಿಕೊಂಡನು! ಈ ರೀತಿ ನಿರ್ಧನನಾಗುವದರಲ್ಲಿ ಹರ್ಷನಿಗೆ ಒಳ್ಳೆಯ ಆನಂದವೆನಿಸುವದು. ಸ್ವಪರಾಕ್ರಮದಿಂದ ಸಾಮ್ರಾಜ್ಯ ವೈಭವವನ್ನು ಪಡೆದು ಆಳುತ್ತಿರುವಾಗ, ಉದಾರ ಮನಸ್ಸಿನಿಂದ, ಕೂಡಿದ ದ್ರವ್ಯವನ್ನೆಲ ಪ್ರಜೆಗಳಲ್ಲಿ ಸೂರೆಮಾಡುವ ಶ್ರೀಹರ್ಷನಂತಹ ರಾಜರು ಜಗತ್ತಿನ ಬೇರೆ ದೇಶಗಳ ಇತಿಹಾಸಗಳಲ್ಲಿ ದೊರೆಯುವರೆ?

೭ನೆಯ ಪಾಠ.

ಶ್ರೀಹರ್ಷನ ಸಾಮ್ರಾಜ್ಯ. (ಮುಂದೆ ಸಾಗಿದ್ದು)



೧. **ರಾಜ್ಯಪದ್ಧತಿ**:— ಹರ್ಷನು ರಾಜ್ಯಭಾರವನ್ನು ಜಾಗ್ರತೆಯಿಂದ ಸಾಗಿಸುತ್ತಿದ್ದನು. ಬೇಟೆ, ತೀರ್ಥಯಾತ್ರೆ, ಅಧಿಕಾರಿಗಳ ಮೇಲಿನ ನಿರೀಕ್ಷಣೆ ಮುಂತಾದ ಕಾರಣಗಳಿಂದ ರಾಜ್ಯದಲ್ಲೆಲ್ಲ ತಿರುಗಾಡಿ ಎಲ್ಲ ಪರಿಸ್ಥಿತಿಯನ್ನು ಚೆನ್ನಾಗಿ ಅರಿತುಕೊಂಡಿದ್ದನು. ಮಂತ್ರಿಮಂಡಲವು ಮಹತ್ವದ ರಾಜ್ಯಕಾರ್ಯಗಳನ್ನು ವ್ಯವಸ್ಥೆಯಿಂದ ನೆರವೇರಿಸುತ್ತಿತ್ತು. ಕನೋಜದ ಬರಿದಾದ ಪಟ್ಟಕ್ಕೆ ಹರ್ಷನೇ ಯೋಗ್ಯನೆಂದು ಆಲ್ಲಿಯ ಮಂತ್ರಿಮಂಡಲದವರೇ ನಿರ್ಣಯಿಸಿದ್ದರು. ಲೆಕ್ಕ – ಪತ್ರಗಳನ್ನು ಕಾಯ್ದಿಡುವ ಸ್ವತಂತ್ರವಾದ ಒಂದು ಖಾತೆಯೇ ಏರ್ಪಡಿಸಲ್ಪಟ್ಟಿತ್ತು. ಕಾಲಾಳುಗಳು, ಸವಾರರು, ರಥಗಳು, ಆನೆಗಳು ಎಂಬ ಚದುರಂಗಗಳಿಂದ ಕೂಡಿದ ಇವನ ಸೈನ್ಯವು ರಾಜ್ಯವನ್ನು ಭದ್ರವಾಗಿ ಕಾಯುತ್ತಿತ್ತು. ಕಠಿಣವಾದ ಕಾಯಿದೆಗಳಿದ್ದರೂ ಅವುಗಳನ್ನು ಸುವಿಚಾರದಿಂದ ಉಪಯೋಗಿಸುವನು. ದಾಳಿಗಾರರ ಕಾಟವು ಮಾತ್ರ ಆಗಾಗ್ಗೆ ಆಗುತ್ತಿತ್ತೆಂದು ಬಾಣಭಟ್ಟ, ಹ್ಯೂವೆನ್‌ತ್ಸಂಗ್ ಇವರು ಬರೆದಿಟ್ಟ ವರ್ಣನೆಗಳಿಂದ ತಿಳಿಯುವದು.

ವಿದ್ಯೆಯ ಏಳ್ಗೆ:— ಹರ್ಷನ ಕಾಲದಲ್ಲಿ ವಿದ್ಯೆಯ ಏಳ್ಗೆ ಚೆನ್ನಾಗಿತ್ತು. ಹರ್ಷನು ಸಂಪತ್ತಿನ ನಾಲ್ಕನೆಯ ಅಂಶವನ್ನು ವಿದ್ಯಾಪ್ರಸಾರಕ್ಕಾಗಿ ವೆಚ್ಚಮಾಡುತ್ತಿದ್ದನು. ಬಹುಜನ ವಿದ್ಯಾವಂತರು ಸನ್ಯಸ್ತವೃತ್ತಿಯಿಂದ ಇದ್ದುಕೊಂಡು ಅಧ್ಯಯನ ಅಧ್ಯಾಪನಗಳಲ್ಲಿಯೆ ಕಾಲಕಳೆಯುತ್ತಿದ್ದರು. "ಐದು ಸಾವಿರ ವಿಹಾರಗಳನ್ನೂ ಅವುಗಳಲ್ಲಿ ವಾಸಿಸಿರುವ ಎರಡು ಲಕ್ಷಕ್ಕಿಂತ ಹೆಚ್ಚಾದ ಬೌದ್ಧ ಸಾಧುಗಳನ್ನೂ ಇನ್ನುಳಿದ ಧರ್ಮಪಂಥಗಳ ಬಹುಜನ ಸಾಧುಗಳನ್ನೂ ತಾನು ಕಂಡೆನು" ಎಂದು ಹೂವೆನ್‌ತ್ಸಂಗನು ಬರೆದಿರುವನು. **ನಾಲಂದ, ಗಯಾ, ಪ್ರಯಾಗ, ಕನೋಜ**

ಮುಂತಾದ ವಿಶ್ವವಿದ್ಯಾಲಯಗಳು ವಿದ್ಯಾರ್ಥಿಗಳಿಂದ ತುಂಬಿಕೊಂಡಿದ್ದವು. ಇವುಗಳಲ್ಲಿ ನಾಲಂದದ ಮಹಾ ವಿದ್ಯಾಲಯವು ಹೆಚ್ಚಿನದು. ಇದರ ಕಟ್ಟಡವು ಭವ್ಯವಾಗಿ ಆರು ಅಂತಸ್ತುಗಳುಳ್ಳದಾಗಿತ್ತು. ಅದು ಹತ್ತುಸಾವಿರ ವಿದ್ಯಾರ್ಥಿಗಳಿಗೆ ಸಾಲುವಷ್ಟು ದೊಡ್ಡದಿತ್ತು! ಅಧ್ಯಾಪಕರು ತಮ್ಮ ಪ್ರೌಢ ವಿದ್ಯಾರ್ಥಿಗಳಿಗೆ ಪ್ರತಿದಿನ ಸುಮಾರು ನೂರು ಬೇರೆ ಬೇರೆ ವಿಷಯಗಳ ಪಾಠಗಳನ್ನು ಹೇಳುವರು. **ವೇದವಿದ್ಯಾಮಂದಿರ, ತರ್ಕಶಾಸ್ತ್ರಮಂದಿರ, ಚಿಕಿತ್ಸಾವಿದ್ಯಾಮಂದಿರ, ನ್ಯಾಯಶಾಸ್ತ್ರಮಂದಿರ** ಮುಂತಾದ ಸ್ವತಂತ್ರವಾದ ವಿಭಾಗಗಳಲ್ಲಿ ಆಯಾ ಶಾಸ್ತ್ರಗಳ ಶಿಕ್ಷಣವು ಸಾಗುತ್ತಿತ್ತು. ವಿದ್ಯಾರ್ಥಿಗಳೂ ಅವರ ಗುರುಗಳೂ ಒಂದೆಡೆಯಲ್ಲಿ ಇದ್ದುಕೊಳ್ಳಲು ತಕ್ಕ ಅನುಕೂಲತೆಗಳಿಲ್ಲವು ಅಲ್ಲಿದ್ದವು. **ಶೀಲಭದ್ರ**ನೆಂಬವನು ಮಹಾ ವಿದ್ಯಾಲಯದ ಕುಲಗುರುವಾಗಿದ್ದನು. ಈ ಮಹಾ ವಿದ್ಯಾಲಯದ ವೆಚ್ಚಕ್ಕಾಗಿ ನೂರು ಗ್ರಾಮಗಳು ಉಂಬಳಿಯಾಗಿದ್ದವು.

ಶ್ರೀಹರ್ಷನು **ಬಾಣಭಟ್ಟ, ಹರದತ್ತ, ಜಯಸೇನ** ಮುಂತಾದ ಹೆಸರಾದ ವಿದ್ವಾಂಸರಿಗೆ ಆಶ್ರಯಕೊಟ್ಟಿದ್ದನು. ಇವನು ಸ್ವತಃ ಒಳ್ಳೆಯ ವಿದ್ವಾಂಸನಿದ್ದುದರಿಂದ ವಿದ್ಯಾವಂತರು ಇವನನ್ನು ಹೆಚ್ಚಾಗಿ ಪ್ರೀತಿಸುತ್ತಿದ್ದರು. ಒಮ್ಮೆ ಜಯಸೇನನ ವಿದ್ವತ್ತಿಗೆ ಮೋಹಿತನಾದ ಹರ್ಷನು ಆತನಿಗೆ ಬಿಹಾರ ಪ್ರಾಂತದ ಎಂಬತ್ತು ಗ್ರಾಮಗಳನ್ನು ಉಂಬಳಿಯಾಗಿ ಕೊಡುವ ಅಪೇಕ್ಷೆಯನ್ನು ವ್ಯಕ್ತಗೊಳಿಸಿದನು. ಆದರೆ ಆ ನಿರಪೇಕ್ಷಿಯಾದ ಪಂಡಿತನು ಆ ದಾನವನ್ನು ತೆಗೆದುಕೊಳ್ಳಲಿಲ್ಲ!

೩. **ಸಮಾಜದ ಪರಿಸ್ಥಿತಿ**:—ಆ ಕಾಲದಲ್ಲಿ ಸಹಗಮನವು ಗೌರವದ ಸಂಗತಿಯಾಗಿತ್ತು. ಬಾಲವಿವಾಹವು ರೂಢವಾಗಿತ್ತು. ಪುನರ್ವಿವಾಹವನ್ನು ಶಿಷ್ಯರು ಸಮ್ಮತಿಸುತ್ತಿರಲಿಲ್ಲ. ಸ್ತ್ರೀಯರು ವಿದ್ಯಾವತಿಯರಿದ್ದರು. ಜಾತಿಭೇದಗಳು ಹೆಚ್ಚು ದೃಢವಾಗಿದ್ದವು. ಮೂರ್ತಿಪೂಜೆಯ ಪ್ರಸಾರವಾಗಿತ್ತು. ಜಾವಾ ಸುಮಾತ್ರಾ ನಡುಗಡ್ಡೆಗಳೊಡನೆ ಈ ದೇಶದ ವ್ಯಾಪಾರವು ನಡೆದಿತ್ತು. ಉಡಿಗೆ ತೊಡಿಗೆಗಳು ತೀರ ಸಾದಾತರದವಾಗಿದ್ದವು. ಶ್ರೀಮಂತರು ಜರದ ಬೆಲೆಯುಳ್ಳ ವಸ್ತ್ರಗಳನ್ನು ಉಪಯೋಗಿಸುತ್ತಿದ್ದರು.

೪. **ಹರ್ಷ ಸಾಮ್ರಾಜ್ಯದ ಅಸ್ತ** :—ಶ್ರೀಹರ್ಷನು ಹೆಸರಾದ ಸಾರ್ವಭೌಮನಾಗಿ ಆಳಿ, ಕ್ರಿ. ಶ. ೬೪೭ರಲ್ಲಿ ಮರಣಹೊಂದಿದನು. ಇವನ ತರುವಾಯ ಇವನ ರಾಜ್ಯವು ಇವನ ತಂಗಿಯ ವರ್ಮವೆಂಬ ಮನೆತನದ ಕೈಸೇರಿತು. ಈ ಮನೆತನದ **ಯಶೋವರ್ಧನ**ನು ಆಳುತ್ತಿರುವಾಗ ಕ್ರಿ. ಶ. ೬೯೬ರಲ್ಲಿ **ಕರ್ಕೋಟಕ** ಮನೆತನದ **ಲಲಿತಾದಿತ್ಯ**ನೆಂಬ ಕಾಶ್ಮೀರದ ಅರಸನು ಇವನನ್ನು ಕೊಂದು ಕನೋಜವನ್ನು ವಶಮಾಡಿಕೊಂಡನು. ಆಗ ಯಶೋವರ್ಧನನ ಆಶ್ರಯದಲ್ಲಿದ್ದ **ಭವಭೂತಿ** ಎಂಬ ಪ್ರಸಿದ್ಧ ಕವಿಯು ಕಾಶ್ಮೀರಕ್ಕೆ ಹೋಗಿ ಲಲಿತಾದಿತ್ಯನ ಆಶ್ರಯದಲ್ಲಿ ಇರಹತ್ತಿದನು.

೫. **ಕವಿಗಳೂ ನಾಟಕಕರ್ತರೂ** :— ಗುಪ್ತ ಹಾಗು ಹರ್ಷ ಸಾಮ್ರಾಜ್ಯಗಳ ಕಾಲದಲ್ಲಿ **ಮಹಾಕವಿ ಕಾಲಿದಾಸ, ಭವಭೂತಿ, ಬಾಣ, ವಿಶಾಖದತ್ತ, ದಂಡಿ, ಭಾರವಿ, ಭರ್ತೃಹರಿ, ವಿಷ್ಣುಶರ್ಮ** ಮೊದಲಾದ ವಿಖ್ಯಾತರಾದ ಸಂಸ್ಕೃತ ಕವಿಗಳೂ ನಾಟಕಕರ್ತರೂ ಆಗಿಹೋದರು. ಇವರೆಲ್ಲರಲ್ಲಿ ಕವಿಕುಲಗುರುವಾದ ಕಾಲಿದಾಸ ಮಹಾಕವಿಯೇ ಶ್ರೇಷ್ಠನು. ಜಗತ್ತಿನ ಮೇಲ್ತರಗತಿಯ ವಾಙ್ಮಯದಲ್ಲಿ ಕಾಲಿದಾಸನ ಗ್ರಂಥಗಳಿಗೆ ಒಳ್ಳೆಯ ಹೆಚ್ಚಿನ ಸ್ಥಾನವು ದೊರೆವುದರಲ್ಲಿ ಸಂದೇಹವಿಲ್ಲ. ಬಾಣಕವಿಯು ರಚಿಸಿದ **ಕಾದಂಬರಿ**ಯೂ **ಹರ್ಷಚರಿತ**ವೂ ಪ್ರಸಿದ್ಧವಾಗಿರುವವು. ಸಾರ್ವಭೌಮನಾದ ಶ್ರೀಹರ್ಷನು ಒಳ್ಳೆಯ ವಿದ್ವಾಂಸನಾಗಿದ್ದನಲ್ಲದೆ ಅವನು **ನಾಗಾನಂದ** ಮತ್ತು **ರತ್ನಾವಲಿ** ಎಂಬ ಎರಡು ನಾಟಕಗಳನ್ನು ಬರೆದಿರುವನು. **ದಶಕುಮಾರ ಚರಿತ**ದ ಕರ್ತನಾದ ದಂಡಿಯೂ **ನೀತಿ, ವೈರಾಗ್ಯ, ಶೃಂಗಾರ** ಎಂಬ ಮೂರು ಶತಕಗಳನ್ನು ಬರೆದ ಭರ್ತೃಹರಿಯೂ ಏಳನೆಯ ಶತಮಾನದಲ್ಲಿ ಆಗಿ ಹೋದರು ವಿಷ್ಣುಶರ್ಮನು **ಪಂಚತಂತ್ರ**ವನ್ನು ಬರೆದನು. ಕರುಣರಸ ಮುಖ್ಯವಾದ **ಉತ್ತರರಾಮ ಚರಿತ**ವೆಂಬ ನಾಟಕವನ್ನೂ **ಮಾಲತೀ-ಮಾಧವ** ಮತ್ತು **ಮಹಾವೀರಚರಿತಂ** ಎಂಬ ಗ್ರಂಥಗಳನ್ನೂ ಬರೆದ ಭವಭೂತಿಯು ಎಂಟನೆಯ ಶತಕದವನು.

೬. **ಶಾಸ್ತ್ರೀಯ ಗ್ರಂಥಗಳು**:— ಜ್ಯೋತಿಷ ಶಾಸ್ತ್ರದಲ್ಲಿ **ಆರ್ಯಭಟ್ಟ**ನು ಬಲ್ಲಿದವನಾಗಿದ್ದನು. ಪೃಥ್ವಿಯು ತನ್ನ ಅಚ್ಚಿನ ಸುತ್ತಲು ತಿರುಗುವ

ದೆಂದು ಇವನೇ ಮೊದಲು ಕಂಡುಹಿಡಿದನು. ಗ್ರಹಣಗಳ ನಿಜವಾದ ಕಾರಣ ಗಳನ್ನು ಇವನು ತನ್ನ ಗ್ರಂಥಗಳಲ್ಲಿ ಬರೆದಿರುವನು. **ಬ್ರಹ್ಮಗುಪ್ತ**ನೆಂಬ ಗಣಿತ ಜ್ಞನು "ವರ್ತುಲದ ಪರೀಘದಿಂದ ಮರ್ಯಾದಿತವಾದ ಚತುಷ್ಕೋಣದ ಎದುರುಬದುರಿನ ಎರಡು ಕೋಣಗಳ ಒಟ್ಟು ಎರಡು ಕಾಟಕೋಣಗಳಿಗೆ ಸರಿಯಿರುವದು" ಎಂಬ ಪ್ರಮೇಯವನ್ನು ಮೊದಲು ಕಂಡುಹಿಡಿದನು. ಅಮರ ಸಿಂಹನು **ಅಮರಕೋಶ**ವನ್ನೂ ವರಾಹಮಿಹಿರನು **ಬೃಹತ್ಸಂಹಿತಾ, ಪಂಚ ಸಿದ್ಧಾಂತಿಕಾ** ಎಂಬ ಗ್ರಂಥಗಳನ್ನೂ ರಚಿಸಿದನು. ವೈದ್ಯಶಾಸ್ತ್ರದಲ್ಲಿ ಬಲ್ಲಿದ ನೆಂದು ಹೆಸರಾದ **ಧನ್ವಂತರಿ**ಯು ವಿಕ್ರಮಾದಿತ್ಯನ ಆಶ್ರಯದಲ್ಲಿದ್ದನು.

೮ನೆಯ ಪಾಠ.

ಬೌದ್ಧ ಧರ್ಮವು ಅಡಗಿ, ಹಿಂದುಧರ್ಮವು ಮರಳಿ ಉತ್ಕರ್ಷವನ್ನು ಹೊಂದಿದ್ದು.

೧. **ಧಾರ್ಮಿಕ ಪರಿಸ್ಥಿತಿ:**— ಕ್ರಿ. ಶಕಕ್ಕೆ ಮೊದಲು ೬ನೆಯ ಶತ ಮಾನದಲ್ಲಿ ಮಹಾತ್ಮ ಗೌತಮ ಬುದ್ಧನಿಂದ ಸ್ಥಾಪಿತವಾದ ಬೌದ್ಧಧರ್ಮವು ಕ್ರಮದಿಂದ ಹೆಚ್ಚುತ್ತ ನಡೆದಿದ್ದರೂ ಅಶೋಕನ ಕಾಲದ ವರೆಗೆ ಹಿಂದು ಧರ್ಮದ ವರ್ಚಸ್ಸು ಕಡಿಮೆಯಾಗಿರಲಿಲ್ಲ. ಅಶೋಕನ ದೀರ್ಘ ಪ್ರಯತ್ನ ದಿಂದ ಬೌದ್ಧಧರ್ಮವು ಕಳೆಕೊಂಡು, ಹಿಂದುಸ್ಥಾನದಲ್ಲಿಯೂ ಹೊರದೇಶ ಗಳಲ್ಲಿಯೂ ಆದು ಬಹು ದೊಡ್ಡ ಭಾಗವನ್ನು ವ್ಯಾಪಿಸಿತು. ಆಗ ಕೆಲಕಾಲ ಹಿಂದು ಧರ್ಮವು ಹಿಮ್ಮೆಟ್ಟಿದಂತಾಗಿ ಬೌದ್ಧಧರ್ಮವೇ ವರ್ಚಸ್ಸನ್ನು ಹೊಂ ದಿತು. ಅಶೋಕನ ತರುವಾಯ ಅವನಷ್ಟು ಮನಸ್ಸಿಟ್ಟು ಯಾರೂ ಬೌದ್ಧ ಧರ್ಮವನ್ನು ಎತ್ತಿಹಿಡಿಯಲಿಲ್ಲ. ಹಿಂದು ಧರ್ಮದ ಅಭಿಮಾನಿಗಳಾದ ಗುಪ್ತ ರಾಜರಿಂದ ಹಿಂದು ಧರ್ಮಕ್ಕೆ ಉತ್ತೇಜನವು ದೊರೆತದರಿಂದ ಕಳೆಗುಂದಿದ್ದ ಆ ಧರ್ಮವು ಮತ್ತೆ ಹೆಚ್ಚಳವನ್ನು ಪಡೆಯಹತ್ತಿತು. ಬೌದ್ಧಧರ್ಮಕ್ಕೆ

ಆಶ್ರಯವನ್ನಿತ್ತ ಕಡೆಯ ಅರಸನು ಶ್ರೀಹರ್ಷನೇ. ಅವನ ತರುವಾಯ ಎಂದರೆ ಕ್ರಿ. ಶ. ೭ನೆಯ ಶತಕದನಂತರ ಬೌದ್ಧ ಧರ್ಮಕ್ಕೆ ರಾಜಾಶ್ರಯವು ದೊರೆಯಲೆ ಇಲ್ಲ.

೨. **ಬೌದ್ಧ ಧರ್ಮದಲ್ಲುಂಟಾದ ದೋಷಗಳು.**— ಕ್ರಿ. ಶ. ೭ನೆಯ ಶತಕದ ಸುಮಾರಿಗೆ ಬೌದ್ಧಧರ್ಮಿಗಳಲ್ಲಿಯೂ ಕೆಲವು ದೋಷಗಳುಂಟಾದವು. ರೊಕ್ಕಸ್ತ್ರರಾದ ಬೌದ್ಧ ಭಿಕ್ಷುಗಳು ನೀತಿತಪ್ಪಿ ನಡೆಯಹತ್ತಿದರು. ಭಿಕ್ಷುಗಳ ಸಂಖ್ಯೆಯು ಹೆಚ್ಚಾಗಿ ಅವರನ್ನು ಪೋಷಿಸುವ ಭಾರವು ಸಮಾಜದ ಮೇಲೆ ಹೆಚ್ಚಿದ್ದರಿಂದ ರಾಷ್ಟ್ರದ ಸಂಪತ್ತಿಯ ದುರುಪಯೋಗವಾಗಹತ್ತಿತು. ಅಹಿಂಸೆಯ *ಅತಿರೇಕವಾದದರಿಂದ ಸ್ವಸಂರಕ್ಷಣೆಗೆ ಅವಶ್ಯವಾದ ಕ್ಷಾತ್ರವೃತ್ತಿಯು ಕಡಿಮೆಯಾಗಹತ್ತಿತು. ವೇದಪ್ರಾಮಾಣ್ಯ ವರ್ಣಾಶ್ರಮ ಇವುಗಳನ್ನು ಪ್ರೀತಿಸುವ ಹಿಂದು ಧರ್ಮಾಭಿಮಾನಿಗಳು ಬೌದ್ಧಧರ್ಮಿಗಳಲ್ಲಿಯ ಈ ದೋಷಗಳನ್ನೆತ್ತಿ ಆದನ್ನು ಖಂಡಿಸಹತ್ತಿದರು.

೩. **ಕುಮಾರಿಲಭಟ್ಟರು:**— ಮೇಲೆ ನಿವರಿಸಿದಂತೆ ಬೌದ್ಧ ಧರ್ಮದ ಸ್ಥಿತಿಯಿರುವಾಗ **ಅಸಾಮ ಪ್ರಾಂತದ** ವಿದ್ವಾಂಸರ ಒಂದು ಮನೆತನದಲ್ಲಿ ಜನ್ಮಿಸಿದ **ಕುಮಾರಿಲಭಟ್ಟ**ರೆಂಬವರು ಹರ್ಷನ ತರುವಾಯ ತುಸು ದಿವಸಗಳಲ್ಲಿ ಪ್ರಸಿದ್ಧಿಗೆ ಬಂದರು. ಇವರು ವಿದ್ವಾಂಸರಾಗಿದ್ದು ಬೌದ್ಧ ಭಿಕ್ಷುಗಳಿಂದ ಆ ಧರ್ಮತತ್ವಗಳನ್ನು ಚೆನ್ನಾಗಿ ಮನನಮಾಡಿಕೊಂಡು, ಹಿಂದುಧರ್ಮದ ಪುನರುಜ್ಜೀವನದ ಕಾರ್ಯವನ್ನು ಕೈಕೊಂಡರು. ಮತ್ತು ಬೌದ್ಧ ಮತವನ್ನು ಖಂಡಿಸಿ, ವೇದಗಳ ವಿಷಯವಾಗಿ ಅನಾದರ ಬುದ್ಧಿಯನ್ನು ತೋರಿಸುವದು ಯೋಗ್ಯವಲ್ಲೆಂಬದನ್ನು ಜನರ ಮನಸ್ಸಿನಲ್ಲಿ ಬಿಂಬಿಸಿದರು. ಇದರಿಂದ ವೇದಗಳಿಗೆ ಮೊದಲಿನ ಗೌರವವು ಉಂಟಾಯಿತು. ಅಗ್ನಿಹೋತ್ರವೂ ಯಜ್ಞಾದಿ ಕರ್ಮಗಳೂ ಅವಶ್ಯವಾದವುಗಳೆಂದು ಇವರು ಪ್ರತಿಪಾದಿಸಿದರು. ಸನ್ಯಾಸ ಮಾರ್ಗವಂತೂ ಇವರಿಗೆ ಎಷ್ಟೂ ಸಮ್ಮತವಿರಲಿಲ್ಲ. ಆದರೆ ಬೌದ್ಧಧರ್ಮದ

---

* ಮಹಮ್ಮದ ಕಾಶೀಮನು ದಂಡೆತ್ತಿ ಬಂದಾಗ ಬೌದ್ಧಧರ್ಮಿಗಳಾದ ವೈಶ್ಯರು ತಾವಾಗಿಯೆ ಶರಣುಹೋದ ಸಂಗತಿಯು ಅಹಿಂಸಾತತ್ವದ ಅತಿರೇಕದ ಸಾಕ್ಷಿಯಾಗಿದೆ.

ಅಹಿಂಸೆ ಮತ್ತು ಸಂನ್ಯಾಸ ಇವು ಲೋಕಪ್ರೀಯವಾಗಿದ್ದದರಿಂದ ಈ ತತ್ವಗಳನ್ನು ಖಂಡಿಸುವದೂ ಯಜ್ಞಯಾಗಾದಿಗಳನ್ನು ಮರಳಿ ರೂಢಿಯಲ್ಲಿ ತರುವದೂ ಮಾತ್ರ ಸಾಧ್ಯವಾಗಲಿಲ್ಲ.

೪. **ಶಂಕರಾಚಾರ್ಯರು :—** ಅಸಾಮಾನ್ಯ ಬುದ್ಧಿಶಾಲಿಗಳಾದ ಈ ಪುರುಷರು ಕೇರಳ (ಮಲಬಾರ) ಪ್ರಾಂತದ ನಂಬುದ್ರಿ ಎಂಬ



ಆದ್ಯ ಶಂಕರಾಚಾರ್ಯರು

ಬ್ರಾಹ್ಮಣ ಕುಲದಲ್ಲಿ ಕ್ರಿ. ಶ. ೭೮೮ರಲ್ಲಿ ಜನಿಸಿದರು. ಚಿಕ್ಕವರಿರುವಾಗಲೆ ಇವರ ಹಿರಿಯರು ತೀರಿಕೊಂಡರು. ಅಲ್ಪ ಕಾಲದಲ್ಲಿಯೆ ಇವರು ವಿದ್ಯಾಭ್ಯಾಸವನ್ನು ಮುಗಿಸಿದರು. ಮನೆಯಲ್ಲಿ ಇವರ ಲಗ್ನದ ವಿಚಾರವು ನಡೆಯಲು ಅದಕ್ಕೆ ಒಪ್ಪಿಕೊಳ್ಳದೆ ಉಪಾಯದಿಂದ ತಾಯಿಯವರ ಅಪ್ಪಣೆ

ಯನ್ನು ದೊರೆಯಿಸಿಕೊಂಡು **ಕಾಶಿಗೆ** ಹೊರಟರು. ವಿಂಧ್ಯಾಂದ್ರಿಯ ನೆರೆಯ ಪ್ರದೇಶದಲ್ಲಿಗೆ **ಗೋವಿಂದಸಾದಾಚಾರ್ಯ**ರೆಂಬ ಸತ್ಪುರುಷರ ದರ್ಶನ ವಾಯಿತು. ಅವರಿಂದ ಉಪದೇಶದೊಂದಿಗೆ ಸಂನ್ಯಾಸ ದೀಕ್ಷೆಯನ್ನು ಹೊಂದಿ ದರು. ಬಳಿಕ ಕಾಶಿಗೆ ಹೋಗಿ ಧರ್ಮ ಮತ್ತು ತತ್ವಜ್ಞಾನ ಈ ವಿಷಯಗಳ ಚರ್ಚೆಯಲ್ಲಿ ಅಲ್ಲಿಯ ಪಂಡಿತರನ್ನೇ ಜಯಿಸಿ ತಮ್ಮ ಮತವನ್ನು ಪ್ರಸ್ಥಾಪಿಸಿ ದರು. * **ಪ್ರ ಸ್ಥಾ ನ ತ್ರ ಯಿ ಯ** ಮೇಲೆ ಇವರು ಬರೆದ ಟೀಕೆಗಳು **"ಶಾಂಕರಭಾಷ್ಯ"** ಎಂಬ ಹೆಸರಿನಿಂದ ಪ್ರಸಿದ್ಧವೆನಿಸಿರುವವು. ಗ್ರಂಥ ರಚನೆಯ ಕೆಲಸವು ಮುಗಿದ ಬಳಿಕ ಇವರು ಹಿಂದುಸ್ಥಾನದ ಎಲ್ಲ ಭಾಗ ಗಳಲ್ಲಿ ಸಂಚಾರಮಾಡಿದರು. ಅಲ್ಲಲ್ಲಿ ಒದಗಿದ ಚರ್ಚೆಯ ಪ್ರಸಂಗಗಳಲ್ಲಿ ಪಂಡಿತರಿಂದ ತಮ್ಮ ಮತಕ್ಕೆ ಒಪ್ಪಿಗೆಯನ್ನು ಪಡೆಯುತ್ತ ಕುಮಾರಿಲ ಭಟ್ಟರು ಆರಂಭಿಸಿದ್ದ ಹಿಂದುಧರ್ಮದ ಪುನರುಜ್ಜೀವನದ ಕಾರ್ಯವನ್ನು ಹೆಚ್ಚು ಚಾತುರ್ಯದಿಂದ ನಡೆಯಿಸಿದರು. ಬೌದ್ಧಧರ್ಮದ ಸಂನ್ಯಾಸ ಮತ್ತು ಅಹಿಂಸೆ ಎಂಬ ತತ್ವಗಳು ಬಹು ಜನರಿಗೆ ಪ್ರಿಯವಾಗಿದ್ದವು. ಇವುಗಳಿಗೆ ಒಪ್ಪಿಗೆಯನ್ನಿತ್ತು ವೇದ ಮತ್ತು ವರ್ಣಾಶ್ರಮ ಇವುಗಳ ಮಹತ್ವ ವನ್ನು ಜನರು ಒಪ್ಪುವಂತೆ ಉಪದೇಶಿಸಿದರು. ಇವರ ಉಪದೇಶದಿಂದ ಬೌದ್ಧರೆಲ್ಲ ಹಿಂದುಗಳಾದರು. ಬೌದ್ಧಧರ್ಮದ ಅನುಯಾಯಿಯು ಈ ದೇಶದಲ್ಲಿ ಒಬ್ಬನೂ ಉಳಿಯಲಿಲ್ಲ. ಹಿಂದು ಧರ್ಮವು ಭರದಿಂದ ಉತ್ಕರ್ಷ ವನ್ನು ಹೊಂದಹತ್ತಿತು. ಧರ್ಮಜಾಗ್ರತೆಯ ಕಾರ್ಯವು ಅಖಂಡವಾಗಿ ನಡೆಯಲೆಂದು ಇವರು ದೇಶದ ನಾಲ್ಕೂ ಭಾಗಗಳಲ್ಲಿ ಮಠಗಳನ್ನು ಸ್ಥಾಪಿ ಸಿದರು. ಇವುಗಳಲ್ಲಿ †**ಶೃಂಗೇರಿಯ** ಮಠವು ಮುಖ್ಯವು. ಈ ರೀತಿ ಅಲೌಕಿಕ ವಾದ ಕಾರ್ಯವನ್ನು ನೆರವೇರಿಸಿ **ಜಗದ್ಗುರು**ಗಳೆನಿಸಿಕೊಂಡರು. ಮತ್ತು ವಯಸ್ಸಿನ **೩೨ ನೆಯ ವರ್ಷ** ಹಿಮಾಲಯದಲ್ಲಿಯ ಬದರೀಕೇದಾರದ

---

* ಉಪನಿಷತ್ತುಗಳು ಭಗವದ್ಗೀತೆ ಮತ್ತು ವೇದಾಂತ ಸೂತ್ರಗಳಿಗೆ ' ಪ್ರಸ್ಥಾನತ್ರಯಿ ' ಎಂಬ ಹೆಸರು.

† ದಕ್ಷಿಣದಲ್ಲಿ ಶೃಂಗೇರಿ, ಉತ್ತರದಲ್ಲಿ ಬದರಿಕೇದಾರ, ಪಶ್ಚಿಮದಲ್ಲಿ ದ್ವಾರಕೆ, ಪೂರ್ವದಲ್ಲಿ ಜಗನ್ನಾಥಪುರಿ ಎಂಬ ನಾಲ್ಕು ಸ್ಥಳಗಳಲ್ಲಿ ನಾಲ್ಕು ಮುಖ್ಯ ಮಠಗಳು ಸ್ಥಾಪಿಸಲ್ಪಟ್ಟವು.

ಕಡೆಗೆ ಹೋದವರು ಮರಳಿ ಬರಲಿಲ್ಲ! ಇವರ ಅಸಾಧಾರಣ ಮೇಧಾ ಶಕ್ತಿ, ದೀರ್ಘೋದ್ಯೋಗ, ಸಾಹಸ, ಕಾರ್ಯಗಳನ್ನು ನಿರ್ವಹಿಸುವ ಶಕ್ತಿ, ವ್ಯವಹಾರ ಕುಶಲತೆ ಈ ಗುಣಗಳು ಅತ್ಯಲ್ಪ ಕಾಲದಲ್ಲಿ ಪ್ರಚಂಡ ಕಾರ್ಯಗಳನ್ನು ನೆರವೇರಿಸಲು ಕಾರಣಗಳಾದವು.

೫. ಬೌದ್ಧ ಧರ್ಮದ ಸಂಸರ್ಗದಿಂದ ಹಿಂದು ಧರ್ಮದ ಮೇಲೆ ಆದ ಪರಿಣಾಮ :— ಹಿಂದುಸ್ಥಾನದಲ್ಲಿ ಬೌದ್ಧಧರ್ಮವು ಇಲ್ಲದಂತಾದರೂ ಅದರ ಸ್ಥಿರವಾದ ಪರಿಣಾಮವು ಹಿಂದುಧರ್ಮದ ಮೇಲೆ ಆಗದೆ ಇರಲಿಲ್ಲ. ಆ ಪರಿಣಾಮಗಳು ಯಾವವೆಂದರೆ :— ೧. ಅಹಿಂಸಾ ತತ್ವದ ವಿಜಯದ ಮೂಲಕ ಹಿಂಸಾಯುಕ್ತವಾದ ಯಜ್ಞನಿಧಿಗಳು ನಿಂತುಹೋದವು. ೨. ಹಿಂದುಗಳು ಬುದ್ಧನ ಮೂರ್ತಿಗಳಂತೆ ದೇವತೆಗಳ ಮೂರ್ತಿಗಳನ್ನು ಸ್ಥಾಪಿಸಿ ಅವನ್ನು ಪೂಜಿಸಹತ್ತಿದರು. ೩. ಬುದ್ಧ, ಧರ್ಮ, ಸಂಘ ಈ ತ್ರಯಿಯಂತೆ **ಬ್ರಹ್ಮ-ವಿಷ್ಣು-ಮಹೇಶ**ರೆಂಬ ತ್ರಿಮೂರ್ತಿಗಳ ಉಪಾಸನೆಗೆ ಆರಂಭವಾಯಿತು. ೪. ಜನಸಾಮಾನ್ಯರಿಗೆ ಸುಲಭವಾದ ಭಕ್ತಿಮಾರ್ಗದ ಉದಯವಾಯಿತು. ೫. ಸಂನ್ಯಾಸಮಾರ್ಗಕ್ಕೆ ಹೆಚ್ಚು ಮಹತ್ವವುಂಟಾಯಿತು.

೯ನೆಯ ಪಾಠ.

ರಜಪೂತರ ಕಾಲ.

(ಕ್ರಿ. ಶ. ೬೪೭ — ಕ್ರಿ. ಶ. ೧೧೯೯)



೧. ಹರ್ಷನ ತರುವಾಯದ ಕಾಲಸ್ಥಿತಿ :— ಹರ್ಷನ ಸಾಮ್ರಾಜ್ಯದ ತರುವಾಯ **ರಜಪೂತ** ಅಥವಾ **ರಾಜಪುತ್ರರು** ಪ್ರಬಲರಾಗಿ ತಮ್ಮ ರಾಜ್ಯಗಳನ್ನು ಸ್ಥಾಪಿಸಿದರು. ಕುಮಾರಿಲಭಟ್ಟರೂ ಶಂಕರಾಚಾರ್ಯರೂ ಪ್ರಚಂಡವಾದ ಚಳವಳಿಯನ್ನು ಮಾಡಿ, ಹೊಸ ಸ್ವರೂಪದಲ್ಲಿ ವೈದಿಕಧರ್ಮವನ್ನು ಮರಳಿ ಸ್ಥಾಪಿಸಿದ ಬಳಿಕ, ಅದರ ಸಂರಕ್ಷಣೆಯ ಕಾರ್ಯವನ್ನು ಎಂಟನೆಯ ಶತಕದಿಂದ ಹದಿನೇಳನೆಯ ಶತಕದ ವರೆಗೆ

ಈ ರಜಪೂತ ಅರಸರೇ ಮಾಡಿದರು. ಅಪರಿಮಿತವಾದ ಕಷ್ಟನಷ್ಟಗಳನ್ನು ಸಹಿಸಿಯೂ ಅಸಂಖ್ಯ ಪ್ರಾಣಗಳನ್ನು ನೀಡಿಯೂ ಈ ವೀರರು ಧರ್ಮವನ್ನುಳಿಸಿಕೊಳ್ಳಲು ಒಂದೇಸವನೆ ಸಾಹಸಪಟ್ಟರು. ಸ್ಥಿರವಾದ ಜಯವೂ ಸ್ವಾತಂತ್ರ್ಯವೂ ಸಿಗದೆಯಿದ್ದರೂ ಇವರು ಮಾಡಿದ ಬಲವಾದ ತಡೆಯಿಂದ, ಹಿಂದುಧರ್ಮವು ಈಗಿರುವಷ್ಟಾದರೂ ಉಳಿದುಕೊಂಡಿದೆಯೆಂದು ಹೇಳಬಹುದು. ಕ್ರಿ. ಶ. ೬ನೆಯ ಶತಕದಲ್ಲಿ **ಅರಬಸ್ತಾನ**ದಲ್ಲಿ **ಮುಸಲ್ಮಾನೀ** ಧರ್ಮವು ಸ್ಥಾಪಿತವಾಯಿತು. ಈ ಮುಸಲ್ಮಾನರು ತಮ್ಮ ಧರ್ಮಸಂಸ್ಕೃತಿಗಳೊಂದಿಗೆ ಪರಾಕ್ರಮದಿಂದ ಒಂದರಹಿಂದೊಂದು ದೇಶಗಳನ್ನು ಗೆಲೆದು ಅವನ್ನೆಲ್ಲ ಸಂಪೂರ್ಣವಾಗಿ ಮುಸಲ್ಮಾನ ಧರ್ಮಕ್ಕೆ ಕೂಡಿಸಿಕೊಂಡುದನ್ನು ವಿಚಾರಿಸಿದರೆ, ಹಿಂದುಧರ್ಮವು ಮುಸಲ್ಮಾನರ ಅಬ್ಬರದ ಆಳಿಕೆಯ ತರುವಾಯವೂ ಉಳಿದಿರುವದು ಆಶ್ಚರ್ಯದ ಸಂಗತಿಯೆನಿಸುವದು. ಈ ರೀತಿಯಾಗಿ ಹಿಂದುಧರ್ಮವು ಸ್ಥಿರವಾಗಿ ಉಳಿಯಲು, ಹಿಂದು ಸಂಸ್ಕೃತಿಯ ಮಹತ್ವವೂ ರಜಪುತರ ಧರ್ಮಾಭಿಮಾನ-ಶೌರ್ಯ-ಸಾಹಸಗಳೂ ಕಾರಣವಾದವೆಂದು ನಿಸ್ಸಂಶಯವಾಗಿ ಹೇಳಬಹುದು.

೨. ರಜಪುತರ ಉದಯ :— ರಜಪುತರು * ಪ್ರಾಚೀನ ಕ್ಷತ್ರಿಯ ರಾಜರ ವಂಶದವರು. ಬೌದ್ಧಧರ್ಮವು ಒತ್ತರದಿಂದ ಹಬ್ಬುತ್ತಿರುವಾಗ ಬಹು ಜನರು ಆ ಧರ್ಮವನ್ನು ಸ್ವೀಕರಿಸಿದರು. ಇದರಿಂದ ವರ್ಣಗಳ ಸಂಕರವಾಗಹತ್ತಿತು. ತಮ್ಮ ಪ್ರಾಚೀನ ಪರಂಪರೆಯನ್ನು ಕಾಯ್ದುಕೊಳ್ಳುವ ಮನಸ್ಸುಳ್ಳವರಿಗೆ ಈ ವರ್ಣಸಂಕರವು ಸರಿಬರಲಿಲ್ಲ ಇಂಥ ಕೆಲ ಕ್ಷತ್ರಿಯ ಮನೆತನದವರು ಸಂಕರಹೊಂದಿದವರಿಂದ ಅಗಲಿಹೋಗಿ ಅರವಲಿ – ವಿಂಧ್ಯಗಳ ಮಧ್ಯಪ್ರದೇಶವನ್ನು ಆಶ್ರಯಿಸಿದರು. ಇವರೇ, ಮುಂದೆ ಶುದ್ಧ ಕ್ಷತ್ರಿಯರೆಂಬುದನ್ನು ಸೂಚಿಸುವ ರಾಜಪುತ್ರ ಅಥವಾ ರಜಪುತ ಎಂಬ ಹೆಸರನ್ನು ಪಡೆದರು.

---

* ರಜಪೂತರು ತಾವು ಸೂರ್ಯ ಅಥವಾ ಚಾಂದ್ರವಂಶಜರೆಂದು ನಂಬುತ್ತಿದ್ದರೆಂದೂ ತಮ್ಮ ಪರಂಪರೆಯನ್ನು ರಾಮ-ಕೃಷ್ಣರವರೆಗೆ ನಿಲುಕಿಸುತ್ತಿದ್ದರೆಂದೂ ೯ನೆಯ ೧೦ನೆಯ ಶತಮಾನಗಳ ಶಿಲಾಲೇಖಗಳಿಂದ ತಿಳಿಯುವದು.

ರಜಪುತರು ಒಳ್ಳೆಯ ಶೂರರೂ ಉದಾರರೂ ವಚನಪಾಲಿಸುವವರೂ ಆಗಿದ್ದರು. ಯುದ್ಧದಲ್ಲಿ ಒಂದುವೇಳೆ ಸಾವು ಬಂದರೆ ಮೋಕ್ಷವು ಉಂಟಾಗುವದೆಂದು ಇವರ ನಂಬುಗೆ. ಬಹುತರ ಎಲ್ಲ ರಜಪುತರು ಶಿವಭಕ್ತರು. ರಜಪುತ ಸ್ತ್ರೀಯರಾದರೂ ಶೂರರೇ. ಶತ್ರುಗಳಿಗೆ ಬೆನ್ನು ತೋರಿಸಿ ಬಂದವರನ್ನು ಮರಳಿ ಯುದ್ಧಕ್ಕೆ ಕಳುಹುವರು. ಅನೇಕ ಸ್ತ್ರೀಯರು ಪರಾಕ್ರಮದಿಂದ ಶತ್ರುಗಳೊಡನೆ ಕಾದಿರುವರು. ಶತ್ರುಗಳ ಕೈಗೆ ಸಿಗುವ ಪ್ರಸಂಗವು ಒದಗಲು, ದುರ್ದಶೆಯನ್ನು ತಪ್ಪಿಸುವದಕ್ಕಾಗಿ **ಜೋಹರವನ್ನು** ಮಾಡಿ ತಮ್ಮ ದೇಹಗಳನ್ನು ಅಗ್ನಿಗೆ ಆರ್ಪಿಸುತ್ತಿದ್ದರು.

೩. **ಉತ್ತರ ಹಿಂದುಸ್ಥಾನದಲ್ಲಿಯ ರಜಪೂತರ ರಾಜ್ಯಗಳು:—**

(ಅ) **ಕನೋಜದ ಪ್ರತಿಹಾರರು:—** ಈ ಮನೆತನದ **ನಾಗಭಟ**ನೆಂಬವನು ಕ್ರಿ. ಶ. ೮೧೬ರಿಂದ ಕನೋಜದಲ್ಲಿ ರಾಜ್ಯವಾಳಹತ್ತಿದನು. ಇವನು ಕ್ರಿ. ಶ. ೮೩೫ರಲ್ಲಿ ಮರಣಹೊಂದಿದನು. ಮುಂದೆ ಹದಿನೈದು ವರ್ಷಗಳ ತರುವಾಯ ಈ ವಂಶದ **ಮಿಹಿರ** ಅಥವಾ **ಭೋಜನು** ಆಳುತ್ತಿರುವಾಗ ಪ್ರತಿಹಾರರ ಸಾಮ್ರಾಜ್ಯವು ಪಶ್ಚಿಮ ಸಮುದ್ರದಿಂದ ಪೂರ್ವ ಸಮುದ್ರದವರೆಗೆ ಪ್ರಸರಿಸಿತ್ತು. ಈ ಭೋಜನು ಬಂಗಾಲದ ಅರಸನನ್ನು ಸೋಲಿಸಿದನು. ಆದರೆ ದಕ್ಷಿಣದಲ್ಲಿ ಪ್ರಬಲರಾಗಿದ್ದ **ರಾಷ್ಟ್ರಕೂಟರ** ಮುಂದೆ ಇವನ ಆಟವು ಸಾಗಲಿಲ್ಲ. ಕ್ರಿ. ಶ. ೮೯೦ರಲ್ಲಿ ಭೋಜನು ಮರಣಹೊಂದಿದನು. ಮುಂದೆ ಕ್ರಿ. ಶ. ೯೧೬ರಲ್ಲಿ ರಾಷ್ಟ್ರಕೂಟರ **ಇಂದ್ರ**ನೆಂಬ ಅರಸನು ಕನೋಜದವರನ್ನು ಪೂರ್ಣವಾಗಿ ಸೋಲಿಸಿದನು. ಕ್ರಿ. ಶ. ೧೦೨೦ರ ವರೆಗೆ ಕನೋಜದಲ್ಲಿ ಈ ಮನೆತನದ ಅನೇಕ ಅರಸರು ಆಳಿದರು. ಕ್ರಿ. ಶ. ೧೦ನೆಯ ಶತಕದ ಆರಂಭದಿಂದ ಮುಸಲ್ಮಾನರ ದಾಳಿಗಳು ಬರಹತ್ತಿದವು. ಇವುಗಳ ಸಂಬಂಧದ ತಿಳಿವು ಮುಂದೆ ವಿವರಿಸಲ್ಪಟ್ಟಿದೆ.

(ಆ) ಧಾರದ ಪರಮಾರರು:— ಈ ಮನೆತನದ **ಕೃಷ್ಣರಾಜ**ನೆಂಬವನು ಕನೋಜದ ಅಧಿಕಾರವನ್ನು ಕಿತ್ತೊಗೆದು ಕ್ರಿ.ಶ. ೯೧೪ರಿಂದ ಸ್ವತಂತ್ರನಾಗಿ ಆಳಹತ್ತಿದನು. ಮುಂದೆ ಕ್ರಿ. ಶ. ೧೦೧೪ರಿಂದ ೧೦೬೦ರ ವರೆಗೆ ಆಳಿದ **ಭೋಜರಾಜನು** ಸ್ವತಃ ವಿದ್ವಾಂಸನಾಗಿದ್ದು ಅನೇಕ ವಿದ್ವಾಂಸರಿಗೆ ಆಶ್ರಯ

ವನ್ನು ಕೊಟ್ಟನು. ರಾಜಧಾನಿಯಾದ **ಧಾರಾ** ನಗರದಲ್ಲಿ ಒಂದು ವಿಶ್ವ ವಿದ್ಯಾಲಯವನ್ನು ಸ್ಥಾಪಿಸಿದನು. ಕ್ರಿ. ಶ. ೧೦೬೦ ರ ಬಳಿಕ ಗುಜರಾಥ, ಮಧ್ಯಪ್ರಾಂತಗಳ ಅರಸರು ಈ ಪರಮಾರರನ್ನು ಸೋಲಿಸಿದ್ದರಿಂದ ಇವರ ರಾಜ್ಯವು ಬಲಗುಂದಿತು.


(ಇ) **ಚಂದೆಲ್ಲರು** :— ಬುಂದೇಲ ಖಂಡದ ಈ ರಜಪುತ ರಾಜರು ೯ನೆಯ ಶತಕದಲ್ಲಿ ಸ್ವತಂತ್ರರಾಗಿ ಆಳಹತ್ತಿದರು. ಇವರು ಕನೋಜದ ರಾಜರಿಗೆ ಪರಿಚಕ್ರಗಳೊಡನೆ ಕಾದುವ ಕೆಲಸದಲ್ಲಿ ಸಹಾಯಕರಾಗಿದ್ದರು ಚವ್ಹಾಣರ **ಪೃಥ್ವಿರಾಜ**ನೂ ಆ ಬಳಿಕ ಮುಸಲ್ಮಾನರೂ ಎಷ್ಟೋ ಸಾರೆ ಬುಂದೇಲಖಂಡದ ಮೇಲೆ ಸಾಗಿಬಂದರೂ ಚಂದೆಲ್ಲರು ತಮ್ಮ ಸ್ವಾತಂತ್ರ್ಯ ವನ್ನು ರಕ್ಷಿಸಿಕೊಂಡಿದ್ದರು.

(ಈ) **ಪಾಲರು** :— ಕ್ರಿ. ಶ. ೭೫೦ರಿಂದ ಪಾಲರು ಬಂಗಾಲವನ್ನು ಆಳಹತ್ತಿದರು. ಕೆಲಕಾಲ ಇವರು ಪ್ರಬಲರಾಗಿ ಸಾಮ್ರಾಜ್ಯವನ್ನು ಆಳಿ ದರು. ಬಂಗಾಲದ ಮೇಲೆ ಇವರ ಅಧಿಕಾರವು ೧೨ನೆಯ ಶತಮಾನದ ಕಡೆಯ ವರೆಗೆ ನಡೆದಿತ್ತು.

(ಉ) **ಮೇವಾಡದ ಗುಹಿಲೋತರು** :— ಈ ಮನೆತನವು ಎಲ್ಲ ರಜಪುತರ ಮನೆಗಳಲ್ಲಿ ಶ್ರೇಷ್ಠವೆನಿಸುವದು. ಈ ಅರಸರು ತಾವು ಶ್ರೀ ರಾಮಚಂದ್ರನ ವಂಶಜರೆಂದು ಹೇಳುವರು. **ಬಾಪ್ಪಾರಾವಳ**ನು ಈ ಮನೆ ತನದ ಮೂಲ ಪುರುಷನು. ಕ್ರಿ. ಶ. ೭೭೩ರಲ್ಲಿ ಇವನು ಮರಣ ಹೊಂದಿ ದನು. ಇವನ ಮಗನಾದ **ಗುಹಿಲೋತನು** ಬಹು ಪರಾಕ್ರಮಿಯಾದದ ರಿಂದ ಈ ಮನೆತನಕ್ಕೆ ' ಗುಹಿಲೋತ ' ಎಂಬ ಹೆಸರುಂಟಾಯಿತು. ಮುಂದೆ ಈ ಮನೆತನದಲ್ಲಿ **ರಾಣಾ ಭೀಮದೇವ, ಸಂಗರಾಜ, ಪ್ರತಾಪಸಿಂಹ** ಎಂಬ ಕೆಚ್ಚೆದೆಯ ವೀರರು ಹೆಸರಾದರು.

(ಊ) ಇವರ ಹೊರತು ದಿಲ್ಲಿಯಲ್ಲಿ **ತೋಮರರು**, ಗುಜರಾಥದಲ್ಲಿ **ಚಾಲುಕ್ಯರು**, ಅಜಮೀರದಲ್ಲಿ **ಚವ್ಹಾಣರು**, ಚೇದಿಯಲ್ಲಿ **ಕಲಚೂರ್ಯರು** ಮುಂತಾದ ರಜಪುತರು ಆಳುತ್ತಿದ್ದರು.

೪. ಉಳಿದ ಅರಸು ಮನೆತನಗಳು:— (ಅ) ಸಿಂಧದ ರಾಜ್ಯ:— ಸಿಂಧ ಪ್ರಾಂತದಲ್ಲಿ **ಸಾಹಸೀ** ಎಂಬ ಶೂದ್ರ ರಾಜನು ಕ್ರಿ. ಶ. ೬೫೧ ರಲ್ಲಿ ಆಳಲಾರಂಭಿಸಿದನು. ಆತನ ರಾಜಧಾನಿಯು **ಆಲೋರ** ಎಂಬದಿತ್ತು. ಇವನು ಕ್ರಿ. ಶ. ೬೭೦ ರಲ್ಲಿ ಸಾಯಲು **ಚಚ**ನೆಂಬ ಬ್ರಾಹ್ಮಣ ಮಂತ್ರಿಯು ತಾನೇ ಅರಸನಾದನು. ಚಚನ ತರುವಾಯ ಅವನ ತಮ್ಮನಾದ **ಚಂದ್ರ**ನು



ರಜಪುತರ ರಾಜ್ಯಗಳು

ಕೆಲದಿನ ಆಳಿ, ಚಚನ ಮಗನಾದ **ದಾಹಿರ**ನು ಪ್ರಬುದ್ಧನಾದದರಿಂದ ಅವನಿಗೆ ರಾಜ್ಯವನ್ನೊಪ್ಪಿಸಿದನು. ಈ ದಾಹಿರನ ಆಳಿಕೆಯಲ್ಲಿ **ಮಹಮ್ಮದ ಬಿನ್ ಕಾಶೀಮ**ನೆಂಬ ಅರಬರ ಶೂರ ಸರದಾರನು ದಾಹಿರನನ್ನು ಕೊಂದು ಸಿಂಧಪ್ರಾಂತವನ್ನು ವಶಪಡಿಸಿಕೊಂಡನು. ಕ್ರಿ. ಶ. ೭೧೨.

(ಆ) ಒಡಿಸಾದ ಮನೆತನಗಳು :— **ಯಯಾತಿ ಕೇಸರಿ** ಎಂಬವನು ಕ್ರಿ. ಶ. ೪೭೯ರಲ್ಲಿ ತನ್ನ ರಾಜ್ಯವನ್ನು ಒಡಿಸಾದಲ್ಲಿ ಸ್ಥಾಪಿಸಿದನು. ಇವನ ರಾಜಧಾನಿಯು **ಭುವನೇಶ್ವರ** ಎಂಬದು. ಶಿವಭಕ್ತನಾದ ಇವನು ಅನೇಕ ಸುಂದರವಾದ ಶಿವಾಲಯಗಳನ್ನು ಕಟ್ಟಿಸಿದನು. ಈ ವಂಶದ **ನೃಪಕೇಸರಿ** ಎಂಬವನು **ಕಟಕಪಟ್ಟಣ**ವನ್ನು ನೆಲೆಸಿದನು. ಈ ಮನೆತನವು ಕ್ರಿ. ಶ. ೧೨ನೆಯ ಶತಕದ ವರೆಗೆ ನಡೆಯಿತು.

ಬಳಿಕ, ೧೧೩೨ರಲ್ಲಿ ಗಂಗಮನೆತನದ **ಚೋರಗಂಗ**ನು ತನ್ನ ಮನೆತನವನ್ನು ನಡೆಯಿಸಿದನು. ಈ ಗಂಗರು ವಿಷ್ಣುಭಕ್ತರು. ಶೈವ, ವೈಷ್ಣವ ಸಂಘಗಳೆರಡೂ ಒಡಿಸಾದಲ್ಲಿ ಬಹುಕಾಲ ನಡೆದವು. ಈ ಭಾಗದ ಬೌದ್ಧರೆಲ್ಲ ವೈಷ್ಣವ ಪಂಥವನ್ನು ಸೇರಿದರು. ೧೨ನೆಯ ಶತಕದಲ್ಲಿ **ಅನಂತಭೀಮ**ನು **ಪುರಿಯ**ಲ್ಲಿ **ಜಗನ್ನಾಥ**ನ ಮಂದಿರವನ್ನು ಕಟ್ಟಿಸಿದನು. ಮುಂದೆ ೧೫ನೆಯ ಶತಮಾನದಲ್ಲಿ **ಪುರುಷೋತ್ತಮ**ನೆಂಬವನು ತನ್ನ ರಾಜ್ಯವನ್ನು ದಕ್ಷಿಣಕ್ಕೆ ಬೆಳೆಸಿ ಕಂಚಿಯ ರಾಜಕನ್ಯೆಯನ್ನು ಲಗ್ನವಾದನು. ಕ್ರಿ. ಶ. ೧೫೫೪ ರಲ್ಲಿ ಈ ಮನೆತನವು ಮುಗಿಯಿತು.

೫. ರಜಪುತರ ಕಾಲದ ಧರ್ಮೋನ್ನತಿ :— ರಜಪುತರ ರಾಜರೆಲ್ಲರು ಹಿಂದುಧರ್ಮಾಭಿಮಾನಿಗಳಾದ್ದರಿಂದ ಅವರಿಂದ ಹಿಂದುಧರ್ಮಕ್ಕೆ ಚೆನ್ನಾಗಿ ಬೆಂಬಲವು ದೊರೆಯಿತು. ವಿಶೇಷವಾಗಿ ಶೈವಮತಕ್ಕೆ ಹೆಚ್ಚು ಉತ್ತೇಜನವು ಸಿಕ್ಕಿತು. ಕಾಶ್ಮೀರದ ಶೈವರು ಶೈವತತ್ವಗಳನ್ನು ಪ್ರತಿಪಾದಿಸುವ ಗ್ರಂಥಗಳನ್ನು ರಚಿಸಿದರು. **ಕಾಶಿ, ಜಗನ್ನಾಥಪುರಿ, ಭುವನೇಶ್ವರ, ಗಯೆ, ಖಜರಾಹೋ, ಕನೋಜ, ಉಜ್ಜಯಿನಿ, ನಾಲಂದ, ಕಾಶ್ಮೀರ** ಮುಂತಾದ ಸ್ಥಳಗಳಲ್ಲಿ ಭವ್ಯವಾದ ಮತ್ತು ಸುಂದರವಾದ ದೇವಾಲಯಗಳು ಸ್ಥಾಪಿಸಲ್ಪಟ್ಟವು.

೬. ಸಾಹಿತ್ಯದ ಬೆಳವಣಿಗೆ :— ಶಂಕರಾಚಾರ್ಯರು ಧರ್ಮ ಮತ್ತು ವೇದಾಂತ ವಿಷಯಗಳ ಮೇಲೆ ಸಂಸ್ಕೃತದಲ್ಲಿ ರಚಿಸಿದ ಗ್ರಂಥಗಳ ಅಭ್ಯಾಸವು ಒಳ್ಳೆಯ ಆಸ್ಥೆಯಿಂದ ಸಾಗಹತ್ತಿತು. ಕಾಶಿಯು ವಿದ್ಯೆಯ

ಕೇಂದ್ರವೆನಿಸಿತ್ತು. ಮಾಳವ, ಕನೋಜ, ಗುಜರಾಥ, ಚಾಲುಕ್ಯ ಮುಂತಾದ ಅರಸರ ಓಲಗದಲ್ಲಿ ಹಲವುಜನ ಪಂಡಿತರೂ ಕವಿಗಳೂ ಆಶ್ರಯವನ್ನು ಹೊಂದಿದ್ದರು. ಹೆಸರಾದ ಕಾವ್ಯ-ನಾಟಕಗಳನ್ನು ರಚಿಸಿದ **ವಾಕ್ಪತಿ, ಭೋಜ, ಮಾಘ, ಭಟ್ಟನಾರಾಯಣ, ಕೆಲ್ಹಣ, ಜಯದೇವ** ಮೊದಲಾದ ಕವಿಗಳು ಇದೇ ಕಾಲದಲ್ಲಿ ಆಗಿಹೋದರು.

೧೦ನೆಯ ಪಾಠ.

ಪ್ರಾಚೀನ ಕಾಲದಲ್ಲಿಯ ದಕ್ಷಿಣ ಹಿಂದುಸ್ಥಾನದ ಕನ್ನಡ ಅರಸುಮನೆತನಗಳು.

(ಕ್ರಿ. ಶ. ಪೂ. ೩ನೆಯ ಶತಕದಿಂದ ಕ್ರಿ. ಶ. ೧೩ನೆಯ ಶತಕದವರೆಗೆ)



೧. **ಶಾತವಾಹನರು**:— ಕ್ರಿ. ಶ. ಪೂ. ೨೩೦ರಿಂದ ಕ್ರಿ. ಶ. ೨೨೬ರ ವರೆಗೆ ಈ ಶಾತವಾಹನರು ಗೋದಾವರಿ-ತುಂಗಭದ್ರೆಗಳ ನಡುವಿನ ಪ್ರದೇಶವನ್ನು ಸುಮಾರು ೪೫೦ ವರುಷ ಆಳಿದರು. ಉತ್ತರ ಹಿಂದುಸ್ಥಾನದ ಇತಿಹಾಸವನ್ನು ವಿವರಿಸುವಾಗ ಇವರ ಸಂಬಂಧವು ವಿಶೇಷವಾಗಿ ಬಂದದರಿಂದ ಈ ಮನೆತನದ ಹೆಚ್ಚಿನ ಸಂಗತಿಗಳನ್ನು ಅಲ್ಲಿಯೆ ಕೊಟ್ಟಿದೆ. (ಪುಟ ೫೮-೫೯)

೨. **ಕದಂಬರು**:— ಕ್ರಿ. ಶ. ೩ನೆಯ ಶತಕದಿಂದ ೬ನೆಯ ಶತಕದ ವರೆಗೆ **ಕದಂಬ** ಅರಸರು **ಬನವಾಸಿ** (ವೈಜಯಂತಿ) ಯಲ್ಲಿ ಆಳಿದರು. ಈಗಿನ **ಕಾರವಾರ, ಮಂಗಳೂರ** ಜಿಲ್ಲೆಗಳೂ **ಮೈಸೂರ** ಸೀಮೆಯೂ ಇವರ ರಾಜ್ಯಕ್ಕೆ ಸೇರಿದ್ದವು. ಈ ಮನೆತನದ ಮೂಲಪುರುಷನು **ಮಯೂರವರ್ಮ**ನೆಂಬ ಬ್ರಾಹ್ಮಣನು ಇವನು ವೇದಾಭ್ಯಾಸಕ್ಕಾಗಿ **ಕಂಚಿಗೆ** ಹೋಗಿರಲು ವಲ್ಲಭರಾಜರಿಂದ ಇವನ ಅಪಮಾನವಾಯಿತು. ಆಗ ಕೋಪಗೊಂಡು ಇವನು ಕ್ಷತ್ರಿಯವೃತ್ತಿಯನ್ನು ತಳೆದು, ಪರಾಕ್ರಮದಿಂದ ತನ್ನ


ದೊಂದು ರಾಜ್ಯವನ್ನೆ ಸ್ಥಾಪಿಸಿದನು. ೬ನೆಯ ಶತಕದಲ್ಲಿ ಈ ಕದಂಬರು **ಚಾಲುಕ್ಯರ** ಮಾಂಡಲಿಕರಾಗಿದ್ದರು. ಈ ಮನೆತನವು ೧೪ನೆಯ ಶತಕದ ವರೆಗೆ ನಡೆಯಿತೆಂದು ತೋರುವುದು. ಅಶೋಕನ ಶಾಸನಗಳಲ್ಲಿ ಈ ಕದಂಬರ ಹೆಸರು ಕಾಣಬರುತ್ತದೆ ಬನವಾಸಿಯ **ಮಧುಕೇಶ್ವರನು** ಈ ಅರಸರ ಕುಲದೇವತೆಯಾದದರಿಂದ ಈ ದೇವಸ್ಥಾನದ ವೈಭವಕ್ಕೆ ಎಣೆ ಇರಲಿಲ್ಲ. ಅತಿ ವಿಸ್ತಾರವಾಗಿ ವೈಭವದಿಂದ ಮೆರೆದ ಬನವಾಸಿಯು ಈಗ ಒಂದು ಸಾಧಾರಣ ಗ್ರಾಮವಾಗಿದೆ.

೩. **ಗಂಗರು:—** **ಗಂಗರಸರು** ಕ್ರಿ. ಶ. ೨ನೆಯ ಶತಕದಿಂದ ಮೈಸೂರ ಪ್ರಾಂತದಲ್ಲಿ ಆಳಹತ್ತಿದರು. ೧೦ನೆಯ ಶತಕದಲ್ಲಿ ಈ ಅರಸರು ಜೈನಧರ್ಮಕ್ಕೆ ಆಶ್ರಯವನ್ನು ಕೊಟ್ಟಿದ್ದರು. ಈ ವಂಶದ **ರಾಜಮಲ್ಲನ** ಕಾಲದಲ್ಲಿ ಇವನ ಮಂತ್ರಿಯಾದ **ಚಾಮುಂಡ**ರಾಯನು **ಶ್ರವಬೆಳ್ಗೊಳದ ಗೋಮಟೇಶ್ವರನ** ೫೬॥ ಅಡಿ ಎತ್ತರವಾದ ಭವ್ಯ ಮೂರ್ತಿಯನ್ನು ಸ್ಥಾಪಿಸಿದನು. **ಕವಿರನ್ನ, ಉಭಯಕವಿ** ಮುಂತಾದ ಬಿರುದುಗಳನ್ನು ಪಡೆದ **ರನ್ನ**ಕವಿಯು ಈ ಚಾಮುಂಡರಾಯನ ಆಶ್ರಯದಲ್ಲಿಯೆ ಇದ್ದನು. ಗಂಗರ ಒಂದು ಶಾಖೆಯವರು ಒಡಿಸಾ ಪ್ರಾಂತದಲ್ಲಿ ಕ್ರಿ. ಶ. ೧೨ನೆಯ ಶತಮಾನದಿಂದ ೧೯ನೆಯ ಶತಮಾನದವರೆಗೆ ಆಳಿದರು.

೪. **ಬಾದಾಮಿಯ ಚಾಲುಕ್ಯರು:—** (ಕ್ರಿ. ಶ. ೫೦೦–೭೫೦) ಈ **ಚಾಳುಕ್ಯ** ವಂಶಜರ ಮೂಲ ಪುರುಷನಾದ **ಜಯಸಿಂಹ**ನೆಂಬವನು ಕ್ರಿ. ಶ. ೫೦೦ರಲ್ಲಿ ಉತ್ತರ ಕರ್ನಾಟಕವನ್ನು ಆಳುತ್ತಿದ್ದ ರಾಷ್ಟ್ರಕೂಟರನ್ನು ಸೋಲಿಸಿ ಬಾದಾಮಿಯ ನೆರೆಯಲ್ಲಿ ತನ್ನ ಸಿಂಹಾಸನವನ್ನು ಸ್ಥಾಪಿಸಿದನು. ಚಾಳುಕ್ಯರ ನಾಲ್ಕನೆಯ ಅರಸನಾದ **೧ನೇ ಪುಲಿಕೇಶಿಯು** ಬಾದಾಮಿ ಪಟ್ಟಣವನ್ನು ವಶ ಮಾಡಿಕೊಂಡು ಅಲ್ಲಿಗೆ ತನ್ನ ಸಿಂಹಾಸನವನ್ನು ತಂದನು. ಇವನು ತನ್ನ ಪರಾಕ್ರಮದಿಂದ ಸಾರ್ವಭೌಮ ಪದವಿಯನ್ನು ಹೊಂದಿದನು. ಪುಲಿಕೇಶಿಯ ತರುವಾಯ ಇವನ ಮಗನಾದ **೧ನೆಯ ಕೀರ್ತಿವರ್ಮನು** ಕೊಂಕಣದ **ಮೌರ್ಯ**ರನ್ನೂ ಬನವಾಸಿಯ ಕದಂಬರನ್ನೂ ಸೋಲಿಸಿದನು. ಕೀರ್ತಿವರ್ಮನ ತರುವಾಯ ಇವನ ತಮ್ಮ **ಮಂಗಳೀಶ**ನು ಬಾದಾಮಿಯ ಗುಡ್ಡದ

ಲ್ಲೊಂದು ಕಲ್ಮನೆಯನ್ನು ಕೊರೆಯಿಸಿ ಅದರಲ್ಲಿ ವಿಷ್ಣುವಿನ ಪ್ರತಿಷ್ಠಾಪನೆಯನ್ನು ಮಾಡಿದನು.

೨ನೆಯ ಪುಲಿಕೇಶಿ:— ಮಂಗಳೇಶನು ಕ್ರಿ. ಶ. ೬೦೮ರಲ್ಲಿ ಮರಣ ಹೊಂದಲು ಕೀರ್ತಿವರ್ಮನ ಮಗನಾದ ೨ನೆಯ ಪುಲಿಕೇಶಿಯು ಪಟ್ಟಕ್ಕೆ ಬಂದನು. ಇವನು ಚಿಕ್ಕವನೆಂದು ತಿಳಿದು ಮಾಂಡಲಿಕರೆಲ್ಲರು ಸ್ವತಂತ್ರರಾ



ದಕ್ಷಿಣದ ರಾಜ್ಯಗಳು

ಗಲು ಹವಣಿಸಿ ಎಲ್ಲ ಕಡೆಗೆ ಪುಂಡಾಟಿಕೆಯನ್ನು ಎಬ್ಬಿಸಿದರು. ಆಗ ಪುಲಿಕೇಶಿಯು ದೊಡ್ಡ ದಂಡನ್ನು ಸಜ್ಜುಗೊಳಿಸಿಕೊಂಡು **ಕದಂಬ, ಗಂಗ** ಮಲಬಾರದ **ಅಳುಪ,** ಕೊಂಕಣದ **ಮೌರ್ಯ** ಮೊದಲಾದ ಅರಸರನ್ನು ಸೋಲಿಸಿ ದಂಗೆಯನ್ನು ಅಡಗಿಸಿದನು. ಬಳಿಕ **ಮಹಾರಾಷ್ಟ್ರಕ, ಕೋಸಲ, ಕಲಿಂಗ,**

ಮಾಳವ, ಗುರ್ಜರ, ಕಾಂಚಿಯ, ಪಲ್ಲವ ಈ ಅರಸರನ್ನು ಗೆದ್ದು ಅವರನ್ನು ತನ್ನ ಅಧಿಕಾರಕ್ಕೆ ಒಳಪಡಿಸಿಕೊಂಡನು. **ಚೋಳ, ಪಾಂಡ್ಯ, ಕೇರಳ** ದೇಶಗಳ ಅರಸರು ಇವನಿಗೆ ಶರಣು ಬಂದರು. ಹೀಗೆ ಇಡೀ ದಕ್ಷಿಣ ಹಿಂದುಸ್ಥಾನದ ಇವನ ಸಾಮ್ರಾಜ್ಯಕ್ಕೆ ಸೇರಿತು. ಸುರತದ ನೆರೆಯ **ನವಸಾರಿ** ಎಂಬಲ್ಲಿ ಒಂದು, ಮತ್ತು ಪಲ್ಲವರ ೧ನೆಯ ಮಹೇಂದ್ರವರ್ಮನಿಂದ ಸೆಳೆದುಕೊಂಡಿದ್ದ **ವೆಂಗಿ** ಪ್ರಾಂತದಲ್ಲಿ ಇನ್ನೊಂದು ಹೀಗೆ ಎರಡು ಶಾಖಾ ಸಿಂಹಾಸನಗಳನ್ನು ಸ್ಥಾಪಿಸಿದನು. ೨ನೆಯ **ಪುಲಿಕೇಶಿ**ಯು ತನ್ನ ಒಬ್ಬ ಮಗನಾದ **ಜಯಸಿಂಹ**ನನ್ನು ನವಸಾರಿಗೂ ತಮ್ಮನಾದ **ವಿಷ್ಣುವರ್ಧನ**ನನ್ನು ವೆಂಗಿ ದೇಶಕ್ಕೂ ಪ್ರತಿನಿಧಿಗಳನ್ನಾಗಿ ನಿಯಮಿಸಿದನು. ಪಲ್ಲವರನ್ನು ಸೋಲಿಸುವ ಕೆಲಸದಲ್ಲಿ **ಪಾಂಡ್ಯ**ರೂ **ಚೋಳ**ರೂ ೨ನೆಯ ಪುಲಿಕೇಶಿಗೆ ಸಹಾಯಕರಾಗಿದ್ದರು. ನೂರು ಹಡಗಗಳ ಪಡೆಯೊಂದಿಗೆ ಪಡುವಣಕಡಲನ್ನು ನೇರಿ ಮೌರ್ಯರ **ಪುರಿ** ಎಂಬ ಪಟ್ಟಣವನ್ನು ವಶಮಾಡಿಕೊಂಡನು.

ಉತ್ತರ ಹಿಂದುಸ್ಥಾನದಲ್ಲಿ ಇದೇ ಕಾಲಕ್ಕೆ ಸಾರ್ವಭೌಮನಾಗಿದ್ದ **ಶ್ರೀಹರ್ಷ**ನು ದಿಗ್ವಿಜಯವನ್ನು ಮಾಡುತ್ತ ನರ್ಮದೆಯನ್ನು ದಾಟಿ ದಕ್ಷಿಣಕ್ಕೆ ಬರುವ ಹವಣಿಕೆಯಲ್ಲಿದ್ದನು. ಪುಲಿಕೇಶಿಯು ಪ್ರಬಲವಾದ ದಂಡಿನೊಡನೆ ಆತನನ್ನು ಎದುರಿಸಿ ಹಲವು ಬಾರಿ ಗೆಲವನ್ನು ಹೊಂದಿದನು. ಬಂಗಾಲದ **ಶಶಾಂಕ**ನೂ ಕಾಠೇವಾಡದ **೨ನೇಯ ಧ್ರುವಸೇನ**ನೂ ಪುಲಿಕೇಶಿಗೆ ನೆರವಾದರು. ಈ ಗೆಲವಿನ ನೆನಪಿಗೆಂದು ಪುಲಿಕೇಶಿಯು "**ಪರಮೇಶ್ವರ**" ಎಂಬ ಬಿರುದನ್ನು ಧರಿಸಿದನು. ಪೂರ್ವ-ಪಶ್ಚಿಮ ಸಮುದ್ರಗಳೂ ನರ್ಮದಾ-ಪಾಲಾರ ನದಿಗಳೂ ಚಾಳುಕ್ಯ ಸಾಮ್ರಾಜ್ಯದ ಮೇರೆಗಳಾಗಿದ್ದವು. ಇವರ ಕೀರ್ತಿಯು ವಿದೇಶಗಳಲ್ಲೂ ಹಬ್ಬಿತು. ಇರಾಣದ ಅರಸನು ತನ್ನ ರಾಯಭಾರಿಯನ್ನು ಪುಲಕೇಶಿಯ ಓಲಗಕ್ಕೆ ಕಳುಹಿದನು. ಇವನ ಹಿರಿಯ ಸೊಸೆಯಾದ **ಭಟ್ಟಾರಿಕೆ**ಯು **ಸಾವಂತವಾಡಿ**ಯ ಭಾಗವನ್ನು ಆಳಿದಳು. ಪ್ರಸಿದ್ಧನಾದ ಚೀನದ ಹ್ಯೂವೆನ್‌ತ್ಸಂಗನು ಕ್ರಿ. ಶ. ೬೫೯ರಲ್ಲಿ ಪುಲಿಕೇಶಿಯ ರಾಜ್ಯದಲ್ಲಿ ಸಂಚರಿಸಿ ಆತನ ರಾಜ್ಯವೈಭವವನ್ನು ಚೆನ್ನಾಗಿ ಬಣ್ಣಿಸಿರುವನು. ಆತನ ಬರೆಹದ ಕೆಲವಂಶವನ್ನು ಇಲ್ಲಿ ಕೊಟ್ಟಿದೆ.

ಹ್ಯೂವೆನ್‌ತ್ಸಂಗನು ಮಾಡಿದ ವರ್ಣನೆಯು:— "ಪುಲಿಕೇಶಿಯ ರಾಜ್ಯವು ಒಂದು ಸಾವಿರ ಮೈಲು ಹಬ್ಬಿದೆ. ಪಟ್ಟಣದ ವಿಸ್ತಾರವು ಹನ್ನೆರಡು ಮೈಲು ಆದೆ. ಭೂಮಿಯು ಬಹಳ ಬೆಳೆಯುಳ್ಳದ್ದು. ಹವೆಯು ಸೆಕೆಯುಳ್ಳ ದ್ದಾಗಿದೆ. ಜನರ ನೀತಿ-ನಡೆವಳಿಕೆಗಳು ಮೆಚ್ಚುವಂಥವು. ಪ್ರಾಮಾಣಿಕ ತನವು ಇವರಲ್ಲಿ ಕಂಡುಬರುವ ಎಲ್ಲಕ್ಕೂ ಹೆಚ್ಚಿನ ಸದ್ಗುಣವು. ಜನರ ನಿಲುವಿಕೆ ಎತ್ತರ, ಮುಖಮುದ್ರೆಯು ಸ್ವಾಭಿಮಾನ-ದರ್ಪಗಳನ್ನು ತೋರ್ಪ ಡಿಸುವದು. ಇವರು ಉಪಕಾರ ಮಾಡಿದವರನ್ನು ಎಂದೂ ಮರೆಯುವವರಲ್ಲ. ಹಾಗೆಯೇ, ಅಪಕಾರ ಮಾಡಿದವರ ಸೇಡು ತೀರಿಸಿಕೊಳ್ಳದೆಯೂ ಬಿಡತಕ್ಕ ವರಲ್ಲ. ಮರೆಹೊಕ್ಕವರನ್ನು ಕಾಯುವಲ್ಲಿ ತಮ್ಮ ಜೀವದ ಪರಿವೇ ಇವರಿ ಗಿರುವದಿಲ್ಲ. ಮೈಮರೆತಿರುವ ಶತ್ರುಗಳನ್ನು ಎಚ್ಚರಗೊಳಿಸಿಯೇ ಇವರು ಯುದ್ಧಕ್ಕೆ ಸಿಲ್ಲುವರು. ಈ ರಾಜನ ಬಳೆಯಲ್ಲಿ ಸಾವಿಗಂಜದ ಲಕ್ಷಾವಧಿ ವೀರರಿರುವರು. ಪುಲಿಕೇಶಿಯು ದೊಡ್ಡಮನಸ್ಸಿನವನೂ ದಯಾಳುವೂ ಆಗಿರು ವನು ಪ್ರಜೆಗಳು ಈತನನ್ನು ಒಳ್ಳೆಯ ನಿಷ್ಠೆಯಿಂದ ಕಾಣುವರು."

ಪ್ರತಾಪಶಾಲಿಯೂ ವೈಭವಸಂಪನ್ನನೂ ಜನಪ್ರಿಯನೂ ಆದ ಈ ಚಕ್ರವರ್ತಿಯು ಕ್ರಿ. ಶ. ೬೦೮ ರಿಂದ ೬೪೨ ರ ವರೆಗೆ ಆಳಿದನು. ಈತನ ಆಳಿಕೆಯ ಕೊನೆಯ ಭಾಗದಲ್ಲಿ ಪಲ್ಲವರು ಬಲಿಷ್ಠರಾಗಿ ಚಾಳುಕ್ಯರಾಜ್ಯದ ಪೂರ್ವಭಾಗವನ್ನು ಒಳಗುಗ್ಗಿದರು. *

೨ನೆಯ ಪುಲಿಕೇಶಿಯ ತರುವಾಯ ಇವನ ಮಗನಾದ **ವಿಕ್ರಮಾದಿ ತ್ಯನು** ಪಲ್ಲವರನ್ನು ಸೋಲಿಸಿ ಅವರನ್ನು ಕಂಚಿಯ ವರೆಗೆ ಬೆನ್ನಟ್ಟಿ ಹೋಗಿದ್ದನು. ಇವನ ಹೆಂಡತಿಯಾದ **ಲೋಕಮಹಾದೇವಿಯು ಪಟ್ಟದಕಲ್ಲಿ** ನಲ್ಲಿ ವಿರೂಪಾಕ್ಷನ ಗುಡಿಯನ್ನು ಕಟ್ಟಿಸಿದಳು. ವಿಕ್ರಮಾದಿತ್ಯನ ತರುವಾಯ ಅವನ ಮಗನಾದ ೨ನೆಯ ಕೀರ್ತಿವರ್ಮನು ಆಳುತ್ತಿರಲು, ಚಾಳುಕ್ಯರ ಮಾಂಡಲಿಕನಾಗಿದ್ದ ರಾಷ್ಟ್ರಕೂಟರ **ದಂತಿದುರ್ಗ**ನೆಂಬವನು ಪ್ರಬಲನಾಗಿ ಚಾಳುಕ್ಯರ ಪಟ್ಟವನ್ನು ಕೈವಶ ಮಾಡಿಕೊಂಡನು. ಕ್ರಿ. ಶ. ೭೫೦.

* ಪಲ್ಲವರೊಡನೆ ಕಾದುವಾಗ ೨ನೆಯ ಪುಲಿಕೇಶಿಯು ಮಡಿದನೆಂದು ಕೆಲವರ ಅಭಿಪ್ರಾಯವಿದೆ.

ಚಾಳುಕ್ಯ ರಾಜರಿಂದ ಚಿತ್ರಕಲೆ – ಶಿಲ್ಪಕಲೆಗಳಿಗೆ ಉತ್ತೇಜನವು ದೊರೆಯಿತು. ಇವರು ವೈದಿಕ ಧರ್ಮದ ಅಭಿಮಾನಿಗಳಿದ್ದರೂ ಬೌದ್ಧರಿಗೂ, ಜೈನರಿಗೂ ಆಸರವನ್ನು ಕೊಟ್ಟಿದ್ದರು. ಬೌದ್ಧಧರ್ಮವು ಈ ಕಾಲದಲ್ಲಿ ಕಳೆಗುಂದಿತ್ತು. ಜೈನಧರ್ಮವು ಕಳೆಗೊಂಡಿತ್ತು. ಮತ್ತು ವೈದಿಕ ಧರ್ಮವು ಸುಸ್ಥಿತಿಯಲ್ಲಿತ್ತು.

೧೧ನೆಯ ಪಾಠ.


ಕನ್ನಡ ಅರಸು ಮನೆತನಗಳು. (ಮುಂದೆ ಸಾಗಿದ್ದು)

೧. **ರಾಷ್ಟ್ರಕೂಟರು**:— (ಕ್ರಿ. ಶ. ೭೫೦ – ೯೭೩) **ರಾಷ್ಟ್ರಕೂಟ**ರು ತಮ್ಮ ನಾಡಗೌಡಿಕೆಯಿಂದ ಏರುತ್ತೇರುತ್ತ ಸಾರ್ವಭೌಮರಾದರು. **ಮಳಖೇಡ**ವು ಇವರ ರಾಜಧಾನಿಯು. ದಂತಿದುರ್ಗನು ಚಾಲುಕ್ಯರಿಂದ ಪಟ್ಟವನ್ನು ಕಸಿದುಕೊಂಡ ಬಳಿಕ, **ಕಾಂಚಿ, ಕಲಿಂಗ, ಕೋಸಲ, ಶ್ರೀಶೈಲ, ಮಾಳವ, ಲಾಟ, ಟಂಕ** (ಟೋಂಕ) ಈ ಅರಸರನ್ನು ಗೆದ್ದು ಇವರೆಲ್ಲರನ್ನು ತನ್ನ ಮಾಂಡಲಿಕರನ್ನು ಮಾಡಿಕೊಂಡನು. ಇವನ ತರುವಾಯ ಕ್ರಿ. ಶ. ೭೬೦–೭೯೪ರವರೆಗೆ **೧ನೆಯ ಕೃಷ್ಣ** ಅಥವಾ ಶುಭತುಂಗನು ಆಳಿದನು. ಇವನು ಚಾಳುಕ್ಯರನ್ನು ಮತ್ತೊಮ್ಮೆ ಸೋಲಿಸಿ ಸಾಮ್ರಾಜ್ಯವನ್ನು ಸ್ಥಿರಗೊಳಿಸಿದನು. **ವೆರೂಳ**ದಲ್ಲಿ ಅತಿ ಸುಂದರವಾದ *__ಕೈಲಾಸವೆಂಬ__ ಶಿವಾಲಯವನ್ನು ಕಟ್ಟಿಸಿದನು. ಇವನ ತರುವಾಯ ಇಮ್ಮಡಿ ಗೋವಿಂದನು ಆಳಹತ್ತಿದನು. ಇವನು ದುರ್ಬಲನಿದ್ದುದರಿಂದ ಕ್ರಿ.ಶ. ೭೮೩ರಲ್ಲಿ ಇವನ ತಮ್ಮನಾದ **ಧ್ರುವರಾಜ**ನು ಅಣ್ಣನಿಂದ ಪಟ್ಟವನ್ನು ಆಕ್ರಮಿಸಿಕೊಂಡನು. ಈ ಧ್ರುವನ ಮಗನೇ **೩ನೆಯ ಗೋವಿಂದನು.**

---

* ವೇರೂಳದ ಹತ್ತಿರ ೧೨ ಬೌದ್ಧ, ೧೭ ಶೈವ, ೫ ಜೈನ ಹೀಗೆ ಕಲ್ಮನೆಗಳು ಇವೆ. ಇವುಗಳಲ್ಲಿ ಕೈಲಾಸವು ೧೬ನೆಯದಾಗಿದೆ. ಇದು ಒಂದೇ ಒಂದು ಬಂಡೆಯಲ್ಲಿ ಕೊರೆದು ಮಾಡಲ್ಪಟ್ಟಿದೆ. ಇದು ಜಗತ್ತಿನ ಪ್ರಸಿದ್ಧವಾದ ಕಟ್ಟಡಗಳಲ್ಲಿ ಒಂದಾಗಿದೆ.

೩ನೆಯ ಗೋವಿಂದ:— (ಕ್ರಿ. ಶ. ೮೦೦–೮೧೪) ಈತನ ಪರಾಕ್ರಮವನ್ನು ಕಂಡು ತಂದೆಯಾದ ಧ್ರುವನು ತಾನಿರುವಾಗಲೆ ಈತನನ್ನು ಪಟ್ಟಕ್ಕೆ ಕುಳ್ಳಿರಿಸಬೇಕೆಂಬ ಬಯಸಿದನು. ಆದರೆ **ಗೋವಿಂದನು** ಇದಕ್ಕೆ ಒಪ್ಪಲಿಲ್ಲ. ತಂದೆಯ ತರುವಾಯ ಇವನು ಪಟ್ಟಕ್ಕೆ ಬರಲು ಇವನ ಅಣ್ಣ



ದಕ್ಷಿಣದ ರಾಜ್ಯಗಳು

ನಾದ **ಶಂಭನು** ಬೇರೆ ಹನ್ನೆರಡು ಜನ ಮಾಂಡಲಿಕರನ್ನು ಕೂಡಿಕೊಂಡು ಗೋವಿಂದನ ಮೇಲೆ ಸಾಗಿಬಂದನು. ಗೋವಿಂದನು ಧೈರ್ಯದಿಂದ ಅವರೆಲ್ಲರನ್ನು ಎದುರಿಸಿ ಸೋಲಿಸಿದನು. ಇವನು ತಂದೆಯ ಕಾಲಕ್ಕೆ ಸೆರೆಯಿದ್ದ ಗಂಗ ಅರಸನ ಬಿಡುಗಡೆ ಮಾಡಲು ಆ ಅರಸನು ತನ್ನೆ ದೇಶಕ್ಕೆ ಮುಟ್ಟಿದೊ

ಡನೆ ಮತ್ತೆ ಪುಂಡಾಟಿಕೆಯನ್ನು ಹೂಡಿದನು. ಆಗ ಗೋವಿಂದನು ಅವನನ್ನು ಹಿಡಿದು ತಂದು, ಇವನನ್ನು ಬಿಟ್ಟದ್ದೇ ತಪ್ಪೆಂದಣಿಸಿ ಪುನಃ ಸೆರೆಯಲ್ಲಿಟ್ಟನು.

ಈತನು ಉತ್ತರದ ಕಡೆಗೆ ವಿಜಯಯಾತ್ರೆಗೆ ಹೊರಟು ಗುಜರಾಥದ ಸಮೀಪಕ್ಕೆ ಬರುವಷ್ಟರಲ್ಲಿ ಅಲ್ಲಿಯ ಅರಸನು ಓಡಿಹೋದನು. ಆಗ ಗುಜರಾಥವನ್ನು ತನ್ನ ರಾಜ್ಯಕ್ಕೆ ಕೂಡಿಸಿ ಮಾಳವದ ಕಡೆಗೆ ನಾಗಿದನು. ಮಾಳವದ **ಮಾರಶರ್ಮನು** ಶರಣು ಬಂದು ಬೆಲೆಯುಳ್ಳ ಕಾಣಿಕೆಯನ್ನು ಅರ್ಪಿಸಿದನು. ಅಲ್ಲಿಂದ ತಿರುಗಿ ಬಂದು ಪಲ್ಲವರ **ದಂಡಿಗ**ನನ್ನು ಮತ್ತೊಮ್ಮೆ ಹಣಿದು ಅತನನ್ನೂ ಪೂರ್ವ ಚಾಳುಕ್ಯರನ್ನೂ ಮಾಂಡಲಿಕರಲ್ಲಿ ಸೇರಿಸಿ ಕೊಂಡನು. ಬಳಿಕ ಹತ್ತುವರ್ಷ ಸಾಮ್ರಾಜ್ಯ ವೈಭವವನ್ನು ಅನುಭವಿಸಿ ಕ್ರಿ ಶ. ೮೧೪ರಲ್ಲಿ ಮರಣಹೊಂದಿದನು. ಈತನಿಗೆ **ಪ್ರಭೂತವರ್ಷ, ಜಗತ್ತುಂಗ, ಜಗದ್ಧುದ್ರ** ಎಂಬ ಬಿರುದುಗಳಿದ್ದವು.

೧ನೆಯ ಅಮೋಘವರ್ಷ (ನೃಪತುಂಗ) :— ಕ್ರಿ. ಶ. ೮೧೪ರಿಂದ ೮೭೭. ೩ನೆಯ ಗೋವಿಂದನ ತರುವಾಯ ಇವನ ಮಗನಾದ ಅಮೋಘವರ್ಷನು ಪಟ್ಟಕ್ಕೆ ಬಂದನು. ಇವನಾದರೂ ಬಲು ಶೂರನೂ ರಾಜನೀತಿ ನಿಪುಣನೂ ಆಗಿದ್ದನು. ತಂದೆಯು ಗಳಿಸಿದ ರಾಜ್ಯವನ್ನು ಸ್ಥಿರಗೊಳಿಸಿದನು. ವೆಂಗಿಯ ಪೂರ್ವಚಾಳುಕ್ಯರನ್ನು ಸೋಲಿಸಿದನು. ಕೊಂಕಣದ ಶಿಲಾಹರರು ಇವನ ಮಾಂಡಲಿಕರಾಗಿದ್ದರು. ನೃಪತುಂಗನೆಂದೂ ಇವನಿಗೆ ಹೆಸರಿತ್ತು.

ನೃಪತುಂಗನ ಕಾಲದ ಕನ್ನಡ ವಾಙ್ಮಯದ ಬೆಳೆವಣಿಗೆ :— ಈತನು ಸ್ವತಃ ಹೆಸರಾದ ಕನ್ನಡ ಕವಿಯಾಗಿದ್ದನು. **" ಕವಿರಾಜಮಾರ್ಗ "** ವೆಂಬ ಅಲಂಕಾರ ಶಾಸ್ತ್ರದ ಗ್ರಂಥವನ್ನು ಇವನು ಬರೆದಿರುವನು. ಈ ವರೆಗೆ ದೊರೆತಿರುವ ಪ್ರಾಚೀನ ಕನ್ನಡ ಗ್ರಂಥಗಳಲ್ಲಿ ಇದೇ ಮೊದಲನೆಯದು. ತನ್ನ ಆಸ್ಥಾನದಲ್ಲಿ ಕನ್ನಡ ಕವಿಗಳಿಗೆ ಆಶ್ರಯವನ್ನು ಕೊಟ್ಟಿರ್ವನು.

ನೃಪತುಂಗನ ಪಾರಮಾರ್ಥಿಕ ದೃಷ್ಟಿ :— ಈತನು ೬೪ ವರ್ಷ ರಾಜ್ಯವಾಳಿದ ನಂತರ ತಾನೇ ಸಂತೋಷದಿಂದ ರಾಜ್ಯವನ್ನು ಮಗನಾದ

ಇಮ್ಮಡಿ **ಕೃಷ್ಣ**ನಿಗೆ ಒಪ್ಪಿಸಿದನು. ಬಳಿಕ ವಾನಪ್ರಸ್ಥಾಶ್ರಮವನ್ನು ಹೊಂದಿದನು. ಈತನು ವೈದಿಕ ಮತವಲಂಬಿಯಾಗಿದ್ದರೂ ಜೈನಧರ್ಮಕ್ಕೂ ಉತ್ತೇಜನವನ್ನು ಕೊಟ್ಟಿದ್ದನು. ಜನಸೇನ ಭಟ್ಟಾರಕರ ಪ್ರೀತಿಗೆ ಪಾತ್ರನಾಗಿದ್ದನು. ಈತನಿಗೆ **ವೀರನಾರಾಯಣ, ಅತಿಶಯಧವಳ** ಮುಂತಾದ ಬಿರುದುಗಳಿದ್ದವು.

೩ನೆಯ ಕೃಷ್ಣರಾಜನು:— (ಕ್ರಿ ಶ. ೯೫೯–೯೬೮). ನೃಪತುಂಗನ ತಮ್ಮನಾದ ಇಮ್ಮಡಿ ಕೃಷ್ಣ, ಮುಮ್ಮಡಿ ಇಂದ್ರ, ಇಮ್ಮಡಿ ಅಮೋಘವರ್ಷ, ಕಾಲ್ವಡಿ ಗೋವಿಂದ, ಮುಮ್ಮಡಿ ಅಮೋಘವರ್ಷ ಎಂಬ ಐವರು ಅಳಿದ ಬಳಿಕ ಪ್ರಸಿದ್ಧನಾದ **ಮುಮ್ಮಡಿ**(೩ನೆಯ) **ಕೃಷ್ಣರಾಜನು** ಪಟ್ಟವನ್ನೇರಿದನು.

ಈತನು ದೊಡ್ಡ ಬಲದೊಡನೆ ದಕ್ಷಿಣ ದೇಶಕ್ಕೆ ವಿಜಯಯಾತ್ರೆಗೆ ತೊರಟು **ಪಲ್ಲವ, ಪಾಂಡ್ಯ, ಚೋಳ, ಸಿಂಹಳ** ಅರಸರನ್ನು ಗೆಲೆದು **ರಾಮೇಶ್ವರ**ದ ಬಳಿಯಲ್ಲಿ ಒಂದು ವಿಜಯಸ್ತಂಭವನ್ನು ನಿಲ್ಲಿಸಿದನು. ಬಳಿಕ ಉತ್ತರಕ್ಕೂ ಸಾಗಿಹೋಗಿ ಗುರ್ಜರ, ಚೇದಿ ಮೊದಲಾದ ರಾಜರನ್ನು ಸೋಲಿಸಿ, **ಜುರಾ** ಎಂಬಲ್ಲಿ ಉತ್ತರದ ವಿಜಯಸ್ತಂಭವನ್ನು ನಿಲ್ಲಿಸಿದನು. ಹೀಗೆ ಈ ೩ನೆಯ ಕೃಷ್ಣರಾಜನ ಕಾಲದಲ್ಲಿ ರಾಷ್ಟ್ರಕೂಟ ಸಾಮ್ರಾಜ್ಯವು ವೈಭವವನ್ನು ಹೊಂದಿತು. **ಗಜಾಂಕುಶ ನಾರಾಯಣ**ನು ಮುಖ್ಯ ಮಂತ್ರಿಯೂ **ಚಕ್ರಾಯುಧಬುಧ**ನು ಉಪಮಂತ್ರಿಯೂ ಆಗಿದ್ದರು. ಇವರೀರ್ವರೂ ಬ್ರಾಹ್ಮಣರೇ.

೩ನೆಯ ಕೃಷ್ಣರಾಜನ ಕಾಲದ ವಿದ್ಯೆಯ ಪ್ರಗತಿ:— ಕೃಷ್ಣರಾಜನು ವಿದ್ಯಾಪಕ್ಷಪಾತಿಯಾಗಿದ್ದನು. ಸುಪ್ರಸಿದ್ಧ ಕನ್ನಡ ಕವಿಯಾದ **ಪೊನ್ನ**ನೂ ಸಂಸ್ಕೃತದಲ್ಲಿ **ಕವಿರಹಸ್ಯ**ವೆಂಬ ಕಾವ್ಯವನ್ನು ಬರೆದ **ಹಲಾಯುಧ**ನೂ ಈತನ ಆಸ್ಥಾನದಲ್ಲಿದ್ದರು. **ಪುಲಿಗೆರೆಯ ಆದಿಪಂಪ**ನೆಂಬ ಕನ್ನಡ ಕವಿಯು ಇದೇ ಕಾಲದಲ್ಲಿ ಆಗಿಹೋದನು. ***ಪನಟ್ಟಿಗೆ**ಯು ಪ್ರಸಿದ್ಧವಾದ ವಿದ್ಯಾಲಯ

---

* ವಿಜಾಪುರ ಜಿಲ್ಲೆಯ ಇಂಡಿ ತಾಲೂಕಿನಲ್ಲಿರುವ ಸಾಲೋಟಗಿ ಎಂಬ ಊರೇ ರಾಷ್ಟ್ರಕೂಟರ ಕಾಲದ ಪವಿಟ್ಟಗೆಯು. ವಿದ್ಯೆಯನ್ನು ಕಲಿಸುವ ಸ್ಥಳಗಳೆಲ್ಲ ಜನಸಾಮಾನ್ಯರು 'ಸಾಲೆ' ಎಂದೆನ್ನುವದು ಸ್ವಾಭಾವಿಕವು. ಸಾಲೆಯ "ಸಾಲೆಯ ಗವಿಟ್ಟಿಗಿ" ಎಂಬ ಜನರೂಢಿಯ ಹೆಸರೇ ಬರಬರುತ್ತ ಸಾಲೋಟಗಿ' ಎಂದು ಆಗಿರಬಹುದು.

(ಪಾಠಶಾಲೆ) ವಾಗಿತ್ತು. ಅಲ್ಲಿ **ವೇದ, ದರ್ಶನ, ಮೀಮಾಂಸೆ, ಧರ್ಮಶಾಸ್ತ್ರ** ಮುಂತಾದ ಎಲ್ಲ ವಿಷಯಗಳ ಅಭ್ಯಾಸವು ನಡೆಯುತ್ತಿತ್ತು. ಹೀಗೆ ಸಕಲ ವಿದ್ಯೆಗಳಿಗೂ ಈ ಕೃಷ್ಣರಾಜನು ಆಧಾರನಾಗಿದ್ದನು.

ರಾಷ್ಟ್ರಕೂಟ ಮನೆತನದ ಕಡೆ :— ೩ನೆಯ ಕೃಷ್ಣರಾಜನ ತರುವಾಯ **ಕೊಟ್ಟಿಗ,** ಇಮ್ಮಡಿಕಕ್ಕಲ ಎಂಬ ಈರ್ವರು ಅರಸರು ಆಳಿದರು. ಇಮ್ಮಡಿ ಕಕ್ಕಲನು ಆಳುವಾಗ, ಬಾದಾಮಿಯ ಚಾಲುಕ್ಯ ವಂಶದ * **ನೂರ್ಮಡಿ ತೈಲಪನು** ಇವನನ್ನು ಗೆಲೆದು, ರಾಷ್ಟ್ರಕೂಟರು ಮೊದಲು ತಮ್ಮ ಪೂರ್ವಜರಿಂದ ಕಸಿದುಕೊಂಡಿದ್ದ ಸಿಂಹಾಸನವನ್ನು ಕೈವಶಮಾಡಿಕೊಂಡು, ಚಾಳುಕ್ಯ ಸಾಮ್ರಾಜ್ಯವನ್ನು ಮರಳಿ ಸ್ಥಾಪಿಸಿದನು.

೧೨ನೆಯ ಪಾಠ.

ಕನ್ನಡ ಅರಸುಮನೆತನಗಳು.


(ಮುಂದೆ ಸಾಗಿದ್ದು)

೧. ಪಶ್ಚಿಮ (ಕಲ್ಯಾಣ) ಚಾಳುಕ್ಯರು :— (ಕ್ರಿ. ಶ. ೯೭೩-೧೧೮೯) **ನೂರ್ಮಡಿ ತೈಲಪನು** :— (ಕ್ರಿ. ಶ. ೯೭೩—೯೯೭). ಈತನು ಸಾಮ್ರಾಜ್ಯವನ್ನು ಸ್ಥಾಪಿಸಿದ ಬಳಿಕ ದಕ್ಷಿಣ ದೇಶಕ್ಕೂ ದಂಡೆತ್ತಿ ಹೋಗಿ **ಚೋಳ**ರಿಂದ ಮೊದಲು ಕಪ್ಪಕಾಣಿಕೆಗಳನ್ನು ತೆಗೆದುಕೊಂಡನು. ಸವದತ್ತಿಯ **ರಟ್ಟ**ರೂ **ಕೊಂಕಣದ ಶಿಲಾಹಾರ**ರೂ ಕೇವಲ ಇವನ ಹೇಳಿಕೆಯಂತೆ ನಡೆದುಕೊಳ್ಳಹತ್ತಿದರು. **ಗುಜರಾಥ**ದ ಅರಸನು ಇವನ ಅಂಕಿತನಾದನು. ದೇವಗಿರಿಯಾದವರ **೨ನೆಯ ಭಿಲ್ಲಮ**ನನ್ನು ನೆರವಿಗೆ ಕರೆದುಕೊಂಡು ಮಾಳವದ

---

* ಕ್ರಿ. ಶ. ೭೫೦ರಲ್ಲಿ ಬಾದಾಮಿಯ ಚಾಳುಕ್ಯರ ಸಾಮ್ರಾಜ್ಯವು ನಷ್ಟವಾದ ಬಳಿಕ, ಆ ಮನೆತನದವರು ಸುಮಾರು ೨೨೩ ವರ್ಷಗಳ ವರೆಗೆ ಎಂದರೆ, ನೂರ್ಮಡಿ ತೈಲಪನು ರಾಷ್ಟ್ರಕೂಟರಿಂದ ಪಟ್ಟವನ್ನು ತಕ್ಕೊಳ್ಳುವ ವರೆಗೆ, ಎಲ್ಲಿ ಇರುತ್ತಿದ್ದರೆಂಬದು ಇನ್ನೂ ಗೊತ್ತಾಗಿಲ್ಲ.

ಮುಂಜರಾಜನನ್ನು ಸೋಲಿಸಿ ಸೆರೆಯಲ್ಲಿಟ್ಟನು. ಸೆರೆಯಿಂದ ಪಾರಾಗಿ ಓಡಿ ಹೋಗುವ ಸ್ರಯತ್ನಮಾಡಿದ್ದರಿಂದ ತೈಲಪನು ಆ ಮುಂಜನನ್ನು ಕೊಲ್ಲಿಸಿದನು. **ಚೇದಿ, ಉತ್ತಲ**ಗಳ ಅರಸರು ಇವನ ಅಧಿರಾಜ್ಯವನ್ನೊಪ್ಪಿದರು. **ಮಳಖೇಡ, ಯಾತಗಿರಿ** ಇವು ಇವನ ರಾಜಧಾನಿಗಳಾಗಿದ್ದವು.



ದಕ್ಷಿಣದ ರಾಜ್ಯಗಳು

ತೈಲಪನು ಶೂರನಾಗಿದ್ದಂತೆ ವಿದ್ಯಾಭಿಮಾನಿಯೂ ಆಗಿದ್ದನು. ಸುಪ್ರಸಿದ್ಧ ಕನ್ನಡ ಕವಿಯಾದ **ರನ್ನ**ನಿಗೆ **"ಕವಿಚಕ್ರವರ್ತಿ"** ಎಂಬ ಬಿರುದನ್ನೂ **ಕೆನಕೆದಂಡ** – ಛತ್ರ – **ಚಾಮರ** – **ಆನೆ**ಗಳನ್ನೂ ಕೊಟ್ಟು ಮನ್ನಿಸಿದನು. ಈ ಅರಸನಿಗೆ **ಚಾಳುಕ್ಯಾಭರಣ, ಸತ್ಯಾಶ್ರಯ ಕುಲತಿಲಕ, ಆಹವಮಲ್ಲ** ಎಂಬ ಬಿರುದುಗಳಿದ್ದವು.

೨. ೧ನೆಯ ಸೋಮೇಶ್ವರ :— (ಕ್ರಿ. ಶ. ೧೦೪೨—೧೦೬೮). **ತೈಲಪನ** ತರುವಾಯ **ಇರಿನಬೆಡಂಗ, ೫ನೆಯ ವಿಕ್ರಮಾದಿತ್ಯ, ಜಯಸಿಂಹ** ಎಂಬ ಮೂವರು ಅಳಿದ ಬಳಿಕ **೧ನೆಯ ಸೋಮೇಶ್ವರನು** ಪಟ್ಟಕ್ಕೆ ಬಂದನು. ಇವನ ಆಳಿಕೆಯಲ್ಲಿ ದಿಗ್ವಿಜಯದ ಎಲ್ಲ ಕಾರ್ಯಗಳನ್ನು ಇವನ ೨ನೆಯ ಮಗನಾದ **ವಿಕ್ರಮಾದಿತ್ಯ**ನೇ ನೆರವೇರಿಸಿದನು. ವಿಕ್ರಮಾದಿತ್ಯನು ಮೊದಲು **ಚೋಳರಾಜೇಂದ್ರ**ನನ್ನು **ಮೈಸೂರ** ಬಳಿಯಲ್ಲಿ ಸೋಲಿಸಿದನು. **ಮಾಳವದ** ಅರಸನು ಇವನ ಸಹಾಯವನ್ನು ಕೇಳಲು, ವಿಕ್ರಮನು ಮಾಳವದ ವೈರಿಯನ್ನು ಓಡಿಸಿ, ಧಾರಾನಗರವನ್ನು ಕೈವಶಮಾಡಿಕೊಂಡು ಮಾಳವ ರಾಜನಿಗೆ ಬಂದ ಸಂಕಟವನ್ನು ನೀಗಿದನು. ಬಳಿಕ ಅಲ್ಲಿಂದ ಹೊರಟು **ಗೌಡ** (ಬಂಗಾಲ), **ಕಾಮರೂಪ** (ಆಸಾಮ) ಗಳ ಅರಸರನ್ನು ವಶಪಡಿಸಿಕೊಂಡನು. ಮತ್ತು **ಕೇರಳ, ಚೋಳ, ಸಿಂಹಳದ್ವೀಪ** ಈ ದಕ್ಷಿಣ ದೇಶಗಳ ಅರಸರನ್ನು ಮಾಂಡಲಿಕರನ್ನು ಮಾಡಿಕೊಂಡು ತಂದೆಯ ಸಾಮ್ರಾಜ್ಯವನ್ನು ವಿಸ್ತರಿಸಿ ಬಲಪಡಿಸಿದನು.

ಈರೀತಿ ವಿಕ್ರಮನ ವಿಜಯಯಾತ್ರೆಯು ನಡೆದಿರಲು ಅತ್ತ ಸೋಮೇಶ್ವರನು ಬೇನೆಪಿಡ್ದನು. ತಾನು ಈ ಬೇನೆಯಿಂದ ಪಾರಾಗಿ ಉಳಿಯುವ ದಿಲ್ಲೆಂದು ನೆನೆದು, ಸೋಮೇಶ್ವರನು ತುಂಗಭದ್ರೆಯ ದಂಡೆಯಲ್ಲಿಯ **ಕುರುವತ್ತಿ** ಎಂಬ ಗ್ರಾಮವನ್ನು ತಲುಪಿ, ವಿಧಿಪೂರ್ವಕವಾಗಿ ಸ್ನಾನಾದಿಗಳನ್ನು ತೀರಿಸಿ, ಹೇರಳವಾದ ಬಂಗಾರವನ್ನು ದಾನಮಾಡಿ, ಶಾಂತಚಿತ್ತದಿಂದ ಜಲಸಮಾಧಿಯನ್ನು ಹೊಂದಿದನು! ಆ ದಿನ ಶಕವರ್ಷದ ೯೯೦ನೆಯ ಕೀಲಕ ಸಂವತ್ಸರದ ಚೈತ್ರ ಕೃಷ್ಣ ಅಷ್ಟಮಿಯ ರವಿವಾರವಿದ್ದಿತು. ಈ ಸೋಮೇಶ್ವರ ರಾಜಯೋಗಿಗೆ **ತ್ರೈಲೋಕ್ಯಮಲ್ಲ, ಅಹವಮಲ್ಲ,** ಎಂಬೆರಡು ಬಿರುದುಗಳಿದ್ದವು. ಕ್ರಿ. ಶ. ೧೦೫೩ರಲ್ಲಿ **ಕಲ್ಯಾಣ** ಪಟ್ಟಣವನ್ನು ನೆಲೆಸಿ ಅದನ್ನು ರಾಜಧಾನಿಯನ್ನು ಮಾಡಿಕೊಂಡು, ಕ್ರಿ. ಶ. ೧೦೬೮ರ ವರೆಗೆ ಎಂದರೆ ೨೪ ವರುಷ ದಕ್ಷತೆಯಿಂದ ರಾಜ್ಯಭಾರವನ್ನು ಸಾಗಿಸಿದನು.

೩. ೨ನೆಯ ಸೋಮೇಶ್ವರ :— (ಕ್ರಿ. ಶ. ೧೦೬೮–೧೦೭೬). ೧ನೆಯ **ಸೋಮೇಶ್ವರ**ನ ತರುವಾಯ ಅವನ ಹಿರಿಯ ಮಗನಾದ **೨ನೆಯ ಸೋಮೇ**

ಶ್ವರನು ಪಟ್ಟಕ್ಕೆ ಕುಳಿತನು. ವಿಕ್ರಮನು **ವೆಂಗಿ** ದೇಶದ ಮೇಲೆ ವಿಜಯವನ್ನು ಪಡೆದು ಬರುತ್ತಿರುವಾಗ ದಾರಿಯಲ್ಲಿ ತಂದೆಯು ಸಮಾಧಿಯನ್ನು ಹೊಂದಿದ ಸುದ್ದಿಯನ್ನು ಕೇಳಿದನು. ಕೂಡಲೆ ಅವನು ಕಲ್ಯಾಣಕ್ಕೆ ಬರಲು ಅಣ್ಣನಾದ ೨ನೆಯ ಸೋಮೇಶ್ವರನು ಪ್ರೀತಿಯಿಂದ ಇದಿರ್ಗೊಡನು. ವಿಕ್ರಮನಾದರು ವಿಜಯಯಾತ್ರೆಯಿಂದ ತಂದಿದ್ದ ಸಂಪತ್ತನ್ನೆಲ್ಲ ಅಣ್ಣನ ಕಡೆಗೆ ಒಪ್ಪಿಸಿದನು. ಹೀಗೆಯೆ ಕೆಲದಿನ ಪರಸ್ಪರರು ಪ್ರೇಮದಿಂದಿದ್ದರು. ಆದರೆ ಮುಂದೆ ಸೋಮೇಶ್ವರನು ಹಿತಚಿಂತಕರಾದ ಮಂತ್ರಿಗಳ ಮತ್ತು ತಮ್ಮಂದಿರ ಮಾತುಗಳನ್ನು ದುರ್ಲಕ್ಷಿಸಿ ಮನಬಂದಂತೆ ನಡೆದು ಪ್ರಜೆಗಳಿಗೆ ಅಪ್ರಿಯನಾದನು. ಅಲ್ಲದೆ ತಮ್ಮನಾದ ವಿಕ್ರಮನ ಪರಾಕ್ರಮದ ವಿಷಯವಾಗಿ ಅಸೂಯೆಯನ್ನು ತಳೆದನು

೪. **ವಿಕ್ರಮನ ವಿಜಯಗಳು**:— ಈ ಹೊತ್ತಿನಲ್ಲಿ ಇಲ್ಲಿರುವದು ಹೆಚ್ಚಿನ ದ್ವೇಷಕ್ಕೆ ಕಾರಣವೆಂದು ಬಗೆದು, ವಿಕ್ರಮನು ದೊಡ್ಡ ಸೈನ್ಯ ಮೊಡನೆ ಮಲತಮ್ಮನಾದ ಜಯಸಿಂಹನಿಂದ ಕೂಡಿಕೊಂಡು ಕಲ್ಯಾಣವನ್ನು ಬಿಟ್ಟು ಹೊರಟನು. ಆಗ ೨ನೆಯ ಸೋಮೇಶ್ವರನು ಈತನನ್ನು ಸೆರೆಹಿಡಿಯುವದಕ್ಕಾಗಿ ತಾನೂ ಸೈನ್ಯ ತಕ್ಕೊಂಡು ಬೆನ್ನುಹತ್ತಿದನು. ವಿಕ್ರಮನು ಅಣ್ಣನ ಸೈನ್ಯವನ್ನು ಹಣಿದು ಮುಂದಕ್ಕೆ ಸಾಗಿ, ಕಂಪಲಿ ಎಂಬಲ್ಲಿ ಕೆಲಕಾಲ ವಿಶ್ರಮಿಸಿದನು. ಬಳಿಕ ಮತ್ತೆ ದಿಗ್ವಿಜಯಕ್ಕಾಗಿ ಹೊರಟನು. **ಗೋಪಕ (ಗೋವೆ)** ಪಟ್ಟಣದ **ಜಯಕೇಶಿ ಕದಂಬನು** ಕಾಣಿಕೆಯೊಡನೆ ಈತನಿಗೆ ಶರಣು ಬಂದನು. ವಿಕ್ರಮನು ಸಂತುಷ್ಟನಾಗಿ ಅವನೊಡನೆ ಸ್ನೇಹವನ್ನು ಬೆಳಿಸಿ, ತನ್ನ ಮಗಳಾದ **ಮೈಳಲದೇವಿಯನ್ನು** ಜಯಕೇಶಿಯ ಮೊಮ್ಮಗನಾದ **೩ನೆಯ ಜಯಕೇಶಿಗೆ** ಧಾರೆಯೆರೆದು ಕೊಟ್ಟನು. **ಅಳುಪ,** ಮತ್ತು **ಕೇರಳ** ಇವುಗಳ ಅರಸರು ಇವನ ಅಧಿರಾಜ್ಯವನ್ನು ಒಪ್ಪಿದರು. **ವೀರರಾಜೇಂದ್ರ** ಚೋಳನು ವಿಕ್ರಮನು ಬಂದ ಸುದ್ದಿಯನ್ನು ಕೇಳಿ, ತನ್ನ ರಾಯಭಾರಿಯನ್ನು ಕಳುಹಿ, 'ಮಾಂಡಲಿಕನಾಗಿರುವೆನೆಂದು ಒಪ್ಪುವೆನಲ್ಲದೆ, ನನ್ನ ಮಗಳನ್ನು ಮದುವೆ ಮಾಡಿ ಕೊಡುವೆನು; ತಾವು ದಯವಿಟ್ಟು ಸ್ವೀಕರಿಸಬೇಕು' ಎಂದು ತಿಳಿಸಿ ವಿಕ್ರಮನು ವೀರರಾಜೇಂದನ ವಿನಂತಿಯನ್ನು ಮನ್ನಿಸಿ, ಅಲ್ಲಿಂದ ಹೊರಟು

ಕಂಪಿಲಿ ಪಟಣಕ್ಕೆ ಬಂದನು. ಚೋಳರಾಜನು ಪರಿವಾರದೊಡನೆ ಕಂಪಿಲಿಗೆ ಬಂದು ಲಗ್ನಕಾರ್ಯವನ್ನು ನೆರವೇರಿಸಿದನು.

ರಾಜಗನ ಒಳಸಂಚು:— ಕ್ರಿ. ಶ. ೧೦೭೦ರಲ್ಲಿ ವೀರರಾಜೇಂದ್ರನು ಮರಣಹೊಂದಿದ ಬಳಿಕ ಚೋಳ ಸಿಂಹಾಸನವು ವೈರಿಗಳ ಪಾಲಾಗುವ ಪ್ರಸಂಗವು ಒದಗಿತು. ಆಗ ವಿಕ್ರಮನು ಕಾಂಚಿಗೆ ಹೋಗಿ ಶತ್ರುಗಳನ್ನು ದೂರಮಾಡಿ, ಮಾವನ ಮಗನಾದ **ಅಧಿರಾಜನನ್ನು** ಪಟ್ಟಕ್ಕೆ ಕುಳ್ಳಿರಿಸಿ ಹಿಂದಿರುಗಿ ಕಂಪಲಿಗೆ ಬಂದನು. ಅಧಿರಾಜನ ಸೋದರತ್ತೆಯ ಮಗನಾದ **ರಾಜಿಗ (ಕುಲೋತ್ತುಂಗ)** ನೆಂಬ ವೆಂಗಿಯ ಚಾಳುಕ್ಯ ಅರಸನು ಚೋಳ ಸಿಂಹಾಸನವನ್ನು ಕೈಸೇರಿಸಿಕೊಂಡು, ೨ನೆಯ ಸೋಮೇಶ್ವರನನ್ನು ತನ್ನ ಕಡೆಗೆ ಒಲಿಸಿಕೊಂಡು ಚೆನ್ನಾಗಿ ಯುದ್ಧದ ಸಿದ್ಧತೆಯನ್ನು ಮಾಡಿದನು.

ಅಧಿರಾಜನನ್ನು ರಕ್ಷಿಸಿದ್ದು:— ವಿಕ್ರಮನು ಮತ್ತೆ ಚೋಳರಾಜನ ರಕ್ಷಣೆಗೆ ಹೊರಟನು. ಅವನು ರಾಜಿಗನ ಸೈನ್ಯವನ್ನು ಎದುರಿಸುವಷ್ಟರಲ್ಲಿ ಹಿಂಮಗಡೆಯಲ್ಲಿ ೨ನೆಯ ಸೋಮೇಶ್ವರನು ದೊಡ್ಡ ಸೈನ್ಯದೊಡನೆ ವೈರಿಯಾಗಿ ಬಂದುಬಿಟ್ಟನು. ಅಡಕೊತ್ತಿನಲ್ಲಿ ಸಿಕ್ಕ ಅಡಕೆಯಂತೆ ವಿಕ್ರಮನ ಸ್ಥಿತಿಯಾಯಿತು. ಆಗ ಆತನು ಅಣ್ಣನಿಗೆ– "ನೀನು ವೈರಿಯ ಸಹಾಯಕನಾಗಿ ನಿಲ್ಲುವದು ಒಳ್ಳೆಯದಲ್ಲ; ಈ ತಪ್ಪು ದಾರಿಯನ್ನು ಹಿಡಿಯದೆ ನನ್ನ ಕಡೆಗೆ ಬರಬೇಕು" ಎಂದು ಹಲವು ತರದಿಂದ ಹೇಳಿಕೊಂಡನು. ಆದರೆ ಈ ಮಾತು ೨ನೆಯ ಸೋಮೇಶ್ವರನಿಗೆ ಸರಿದೋರಲಿಲ್ಲ. ಆಗ ವಿಕ್ರಮನು ಇಂಥ ಕಠಿಣ ಪ್ರಸಂಗದಲ್ಲಿಯೂ ಶೌರ್ಯದಿಂದ ಕಾದಿ ಎರಡೂ ಸೈನ್ಯಗಳನ್ನು ಸೋಲಿಸಿ, ಜಯಹೊಂದಿದನು. ರಾಜಿಗನು ಓಡಿಹೋದನು; ಸೋಮನು ಸೆರೆಸಿಕ್ಕನು. ಬಳಿಕ ವಿಕ್ರಮನು ಚೋಳರಾಜ್ಯವನ್ನು ಸ್ಥಿರಪಡಿಸಿ, ಅಣ್ಣನನ್ನು ಸೆರೆಹಿಡಿದುಕೊಂಡು **ಯಾತಗಿರಿಗೆ** ಬಂದನು. ೨ನೆಯ ಸೋಮೇಶ್ವರನು ರಾಜ್ಯಕ್ಕೆ ಎರವಾದನು!

೧೩ನೆಯ ಪಾಠ.

ಕನ್ನಡ ಅರಸು ಮನೆತನಗಳು. (ಮುಂದೆ ಸಾಗಿದ್ದು)

೧. ೬ನೆಯ ವಿಕ್ರಮಾದಿತ್ಯ (ವಿಕ್ರಮಾಂಕ):— (ಕ್ರಿ. ಶ. ೧೦೭೬–೧೧೨೬). ಬಳಿಕ ವಿಕ್ರಮನು ಅಣ್ಣನ ಅಧಿಕಾರವನ್ನು ಕಿತ್ತೊಗೆದು ಶಕ ವರ್ಷದ ೯೭ನೆಯ ರಾಕ್ಷಸ ಸಂವತ್ಸರದ ಫಾಲ್ಗುಣ ಶುಕ್ಲ ಪಂಚಮಿಯ ಸೋಮವಾರ ದಿವಸ **ಪಟ್ಟಬಂಧೋತ್ಸವ**ವನ್ನು ಮಾಡಿಸಿಕೊಂಡನು. '**ಶಕ ವರ್ಷ**' ಎಂಬ ರೂಢಿಯಲ್ಲಿದ್ದ, ಕಾಲಗಣನೆಯನ್ನು ನಿಲ್ಲಿಸಿ, ತನ್ನ ಹೆಸರಿನ *'**ಶ್ರೀಮಚ್ಚಾಳುಕ್ಯ ವಿಕ್ರಮವರ್ಷ** ಎಂಬ ಕಾಲಗಣನೆಯನ್ನು ಪ್ರಾರಂಭಿಸಿದನು. ಈತನು ಪಟ್ಟಕ್ಕೆ ಬರುವ ಮೊದಲೇ ಎಂದರೆ, ತಂದೆಯ ಮತ್ತು ಅಣ್ಣನ ಆಳಿಕೆಯಲ್ಲಿಯೆ ತನ್ನ ಪರಾಕ್ರಮವನ್ನು ವ್ಯಕ್ತಗೊಳಿಸಿದ್ದನು. ಆದದರಿಂದ ದಿಗ್ವಿಜಯವನ್ನೇನು ಹೊಸದಾಗಿ ಮಾಡುವ ಅವಶ್ಯವಿರಲಿಲ್ಲ. ಇಡಿ ದಕ್ಷಿಣವನ್ನು ಅಧಿರಾಜ್ಯಕ್ಕೆ ಸೇರಿಸಿಕೊಂಡದ್ದಲ್ಲದೆ **ಸಿಂಹಳ ದ್ವೀಪ, ಚೇದಿ, ಮಾಳವ, ಕನೋಜ, ಗೌಡ, ಕಾಮರೂಪ** ಇವುಗಳ ಅರಸರನ್ನೂ ಜಯಿಸಿದ್ದರಿಂದ ಇಡಿ ಹಿಂದುಸ್ಥಾನಕ್ಕೆ ಇವನು ಸಾರ್ವಭೌಮನಾದನು.

ಚಂದ್ರಲೇಖೆಯ ಸ್ವಯಂವರ:— ಈತನು ಸಾರ್ವಭೌಮನಾಗಿ ಆಳುವಾಗ **ಕರ್ಹಾಡ**ದ ಅರಸನು ತನ್ನ ಮಗಳಾದ **ಚಂದ್ರಲೇಖೆ**ಯ ಸ್ವಯಂವರವನ್ನು ಮಾಡತೊಡಗಿದನು. ಚಂದ್ರಲೇಖೆಯನ್ನು ಲಗ್ನಮಾಡಿ

---

* ಚಾಳುಕ್ಯ ವಿಕ್ರಮಾಂಕನ ಪರಾಕ್ರಮ ಹಾಗು ಅವನು ಆರಂಭಿಸಿದ ಕಾಲಗಣನೆ ಇವನ್ನು ವರ್ಣಿಸುವ ಕೆಳಗಿನ ಎರಡು ಪದ್ಯಗಳು ಗದಗಿನ ಶ್ರೀ ವೀರನಾರಾಯಣನ ದೇವಾಲಯದಲ್ಲಿದ್ದ ಶಿಲಾಲೇಖದಲ್ಲಿ ಇರುವವು.

ಬಲಾಳ್ತನದಿಂ ರಿಪುವ್ಯಪ । ಎಸೆವ ಶಕನರುಷಮಂ ಮಾ- ।
ರೆಲ್ಲರನೇಕಾಂಗದಿಂದಮೊದಗಿಸಿ ಧರಣೀ ॥ ಣಿಸಿ ವಿಕ್ರಮ ವರುಷವೆಂದು ತನ್ನಯ ಪೆಸರಂ ॥
ವಲ್ಲಭನಾದಂ ತ್ರಿಭುವನ- । ಪಸುಮತಿಗೆ ನೆಗಳ್ದಿದಂ ಸಾ- ।
ಮುಲ್ಲಂ ಚಾಳುಕ್ಯ-ವಿಕ್ರಮಾದಿತ್ಯ-ನೃಪಂ ॥೧॥ ಪಸಿಗಂ ಜಗದೇಕದಾನಿ ಧರ್ಮ ವಿನೋದಂ ॥೨

ಕೊಳ್ಳುವ ಉದ್ದೇಶದಿಂದ **ಅಯೋಧ್ಯಾ, ಕಾನ್ಯಕುಬ್ಜ** ನೊದಲಾದ ಅನೇಕ ರಾಜರು ಸ್ವಯಂವರಕ್ಕೆ ಬಂದಿದ್ದರು. ಚಂದ್ರಲೇಖೆಯು ಸ್ವಯಂವರ ಮಂಟಪವನ್ನು ಸೇರಿ ರಾಜರ ಸಮೂಹದಲ್ಲಿ ಕುಳಿತಿದ್ದ **ವಿಕ್ರಮಾಂಕನನ್ನೇ** ವರಿಸಿ ಆತನ ಕೊರಳಿಗೆ ಮಾಲೆಯನ್ನು ಹಾಕಿದಳು.

ಜಯಸಿಂಹನ ಅವಿಚಾರ :— ಇವನ ಮಲತಮ್ಮನಾದ **ಜಯಸಿಂಹ** ನು **ಬನವಾಸಿ** ಪ್ರಾಂತದ ಪ್ರತಿನಿಧಿಯಾಗಿದ್ದನು. ಕೆಲದಿನಗಳ ತರುವಾಯ ಜಯಸಿಂಹನು ವಿಕ್ರಮಾಂಕನ ವೈಭವವನ್ನು ಕಂಡು ಹೊಟ್ಟೆಕಿಚ್ಚುಪಡ ಹತ್ತಿದನು. ಮತ್ತು **ಕುಲೋತ್ತುಂಗ** ಮುಂತಾದ ಕೆಲ ಅರಸರ ಸಹಾಯ ವನ್ನು ಪಡೆದು ದೊಡ್ಡ ದಂಡನ್ನು ಕೂಡಿಸಿಕೊಂಡು ವಿಕ್ರಮಾಂಕನೊಡನೆ ಯುದ್ಧಕ್ಕೆ ಅಣಿಯಾದನು. ಮದ್ದಾನೆಯನ್ನು ಹತ್ತಿ ವಿಲಕ್ಷಣ ಶೌರ್ಯದಿಂದ ಕಾದಿ ವಿಕ್ರಮನು ಆ ಶತ್ರುಗಳೆಲ್ಲರ ಸೈನ್ಯವನ್ನು ನುಗ್ಗುಮಾಡಿ ಜಯಶೀಲ ನಾದನು. ಜಯಸಿಂಹನು ಅಡವಿಯ ಸೇರಿದನು. ಉಳಿದ ಶತ್ರುಗಳು ದಿಕ್ಕು ತಪ್ಪಿ ಓಡಿಹೋದರು.

ವಿಕ್ರಮಾಂಕನ ಪ್ರಜಾಹಿತದಕ್ಷತೆ :— ಈತನು ೫೦ ವರ್ಷಗಳ ವರೆಗೆ ಪ್ರಜೆಗಳನ್ನು ಮಕ್ಕಳಂತೆ ಪಾಲಿಸಿದನು ಆದದರಿಂದ ಆ ಕಾಲವು ಪ್ರಜೆ ಗಳಿಗೆ ಅತಿ ಸುಖಕರವಾಗಿತ್ತು. * ಕಳ್ಳಕಾಕರ ಭಯವಿಲ್ಲದೆ ಇತ್ತು. ಜನರು ಚಿಂತೆಯಿಲ್ಲದೆ ಬಾಳುವೆ ಸಾಗಿಸುತ್ತಿದ್ದರು ಪ್ರಧಾನನಾದ ಪಂಡಿತ **ವಿಜ್ಞಾನೇ ಶ್ವನು** ಬರೆದ ಪ್ರಸಿದ್ಧವಾದ **ಯಾಜ್ಞವಲ್ಕ್ಯಸ್ಮೃತಿಯ "ಮಿತಾಕ್ಷರಾ"** ಎಂಬ ಟೀಕೆಯು ಆ ಕಾಲದ ಉತ್ತಮ ಕಾಯದೆಗಳ ಸಾಕ್ಷಿಯಾಗಿದೆ. ಈಗ ಬ್ರಿಟಿಷರ ಆಳಿಕೆಯಲ್ಲಿ ಸಹ ಈ ಟೀಕೆಯು ನ್ಯಾಯ ಮಂದಿರಗಳಲ್ಲಿ ಆಧಾರಗ್ರಂಥವೆನಿಸಿದೆ. ಪಾಶ್ಚಾತ್ಯ ಕಾಯದೆ ಪಂಡಿತರು ಈ ಗ್ರಂಥಕ್ಕೆ ಬಹಳ ಮಾನ ಕೊಡುವರು. ಜಗತ್ತಿನಲ್ಲೆಲ್ಲ **ಕಲ್ಯಾಣ ನಗರ**ದಂತಹ ನಗರವೂ

---

* "ಜನರು ರಾತ್ರಿಯಲ್ಲಿ ತಮ್ಮ ಮನೆಯ ಬಾಗಿಲುಗಳನ್ನು ಇಕ್ಕುವ ಗೋಜಿಗೆ ಹೋಗುತ್ತಿರ ಲಿಲ್ಲ. ಕಳ್ಳರ ಬದಲಾಗಿ ಚಂದ್ರಕಿರಣಗಳು ಮಾತ್ರ ತೆರೆದಿಟ್ಟ ಬಾಗಿಲುಗಳಿಂದ ಮನೆಯನ್ನು ಸೇರು ತ್ತಿದ್ದವು!" ಎಂದು ವಿಕ್ರಮಾಂಕ ಚಕ್ರವರ್ತಿಯ ಆಸ್ಥಾನ ಪಂಡಿತನಾದ ಬಿಲ್ಹಣಕವಿಯು ಪರ್ಣಿಸಿರುವನು.

ವಿಕ್ರಮಾಂಕ ಚಕ್ರವರ್ತಿಗೆ ಸಮಾನರಾದ ರಾಜರೂ ದೊರೆಯಲಾರರೆಂದು ವಿಜ್ಞಾನೇಶ್ವರನ ಅಭಿಪ್ರಾಯವು ವಿಕ್ರಮಾಂಕನ ಕಾಲವು ದಕ್ಷಿಣ ವಿಶೇಷವಾಗಿ **ಕರ್ನಾಟಕದ "ಸುವರ್ಣ ಯುಗ"** ವೆಂದು ಹೇಳಲು ಸಂಶಯವಿಲ್ಲ.

ವಿಕ್ರಮಾಂಕನ ಕಾಲದ ವಿದ್ಯೆಯ ಪ್ರಗತಿ:— ಬಿಲ್ಹಣನೆಂಬ ಹೆಸರಾದ ಸಂಸ್ಕೃತ ಕವಿಯು ಇವನ ಆಶ್ರಯದಲ್ಲಿದ್ದನು. ಈತನ ಮತ್ತು ಈತನ ಮಾಂಡಲಿಕರ ಓಲಗಗಳಲ್ಲಿ **ಕೀರ್ತಿವರ್ಮ, ರಾಜಾದಿತ್ಯ, ಮಲ್ಲಿಕಾರ್ಜುನ ಭಟ್ಟ, ಕರ್ಪರಸ, ಚಂದ್ರರಾಜ** ಮೊದಲಾದ ಕನ್ನಡ ಕವಿಗಳು ಪ್ರಸಿದ್ಧಿಯನ್ನು ಹೊಂದಿದ್ದರು. ಪ್ರಧಾನಿಯ ಕೂಡ ಹೆಸರಾದ ಪಂಡಿತನಾಗಿದ್ದುದೂ ಆತನಿಂದ ಕಾಯದೆಯ ಗ್ರಂಥವನ್ನು ಬರೆಯಿಸಿದುದೂ ವಿಕ್ರಮಾಂಕನ ವಿದ್ಯಾಪ್ರೇಮದ ದ್ಯೋತಕವಾಗಿದೆ.

ವಿಕ್ರಮಾಂಕನ ಮರಣ :— ಈತನು ೭೫ ಕ್ಕಿಂತ ಹೆಚ್ಚು ವಯಸ್ಸಿನವನಿರುವಾಗಲೂ, ದೃಢಕಾಯನೂ, ಸಮರ್ಥನೂ ಆಗಿದ್ದನು. ಆದೇ ಮೂಡಿ ಬೆಳಗಲಾರಂಭಿಸಿದ **ಹೊಯ್ಸಳ ವಿಷ್ಣುವರ್ಧನನ** ಆಟವು, ಈ ವಿಕ್ರಮಾಂಕನು ಬದುಕಿರುವ ವರೆಗೆ ಮಾತ್ರ ಚಾಳುಕ್ಯರ ಮುಂದೆ ನಡೆಯಲಿಲ್ಲ. ಚಾಳುಕ್ಯರ ಕೀರ್ತಿಸೂರ್ಯನು ಮಧ್ಯಾನ್ಹವನ್ನು ಮುಟ್ಟಿದನು! ಇನ್ನು ಅವನು ಕೆಳಗಿಳಿಯುವದು ಬಿಡದ ಕೆಲಸವಾಗಿತ್ತೋ ಏನೋ!! ವಿಕ್ರಮಾಂಕನು ಕ್ರಿ. ಶ. ೧೧೨೬ ರಲ್ಲಿ ಮರಣ ಹೊಂದಿದನು!!!

೨. ೩ನೆಯ ಸೋಮೇಶ್ವರ :— ವಿಕ್ರಮಾದಿತ್ಯನ ತರುವಾಯ ಅವನ ಮಗ **ಮುಮ್ಮಡಿ ಸೋಮೇಶ್ವರ**ನು ಪಟ್ಟವೇರಿದನು. ತಂದೆಯಂತೆ ಈತನೂ ಶೂರನಾಗಿದ್ದುದಲ್ಲದೆ ಸಕಲಶಾಸ್ತ್ರ ವಿಶಾರದನೂ ಆಗಿದ್ದನು. ಈತನು ಸಂಸ್ಕೃತದಲ್ಲಿ ರಚಿಸಿದ **'ಮಾನಸೊಲ್ಲಾಸ'** ಅಥವಾ **'ಅಭಿಲಷಿತಾರ್ಥ ಚಿಂತಾಮಣಿ'** ಎಂಬ ಗ್ರಂಥದಲ್ಲಿ ರಾಜನೀತಿಶಾಸ್ತ್ರ, ಯುದ್ಧಶಾಸ್ತ್ರ, ಅಶ್ವಶಾಸ್ತ್ರ, ಗಜಶಾಸ್ತ್ರ, ವೈದ್ಯಶಾಸ್ತ್ರ ಮುಂತಾದ ಶಾಸ್ತ್ರಗಳು ವಿವರಿಸಲ್ಪಟ್ಟಿವೆ. ಈತನಿಗೆ **ಸರ್ವಜ್ಞಭೂಪ**ನೆಂದೂ ಎನ್ನುತ್ತಿದ್ದರು. ಈತನು ಹನ್ನೆರಡುವರ್ಷ ರಾಜ್ಯವಾಳಿ ೧೧೩೯ ರಲ್ಲಿ ಮರಣಹೊಂದಿದನು.

೩. **೩ನೆಯ ತೈಲಪ**:— ೩ನೆಯ ಸೋಮೇಶ್ವರನ ತರುವಾಯ **೨ನೆಯ ಜಗದೇಕಮಲ್ಲನು** ೧೨ ವರ್ಷ ರಾಜ್ಯವಾಳಿದನು. ಬಳಿಕ **೩ನೆಯ ತೈಲಪನು** ಕ್ರಿ. ಶ. ೧೧೫೦ ರಲ್ಲಿ ಪಟ್ಟಕ್ಕೆ ಬಂದನು. ಕಲಚೂರಿ ಮನೆತನದ ಬಿಜ್ಜಳನೆಂಬ ತರ್ದ್ದಿವಾಡಿ ಎಂದರೆ ವಿಜಾಪುರ ಪ್ರಾಂತದ ಮಾಂಡಲಿಕನು ತೈಲಪನ ದಂಡನಾಯಕನಾದನು. ಈತನು ತೈಲಪನು ಅಸಮರ್ಥನಾಗಿರುವದನ್ನು ತಿಳಿದು, ರಾಜ್ಯವನ್ನು ತಾನೇ ಆಕ್ರಮಿಸುವ ಪ್ರಯತ್ನಮಾಡಹತ್ತಿದನು.

೧೪ನೆಯ ಪಾಠ.

ಕನ್ನಡ ಅರಸು ಮನೆತನಗಳು.

(ಮುಂದೆ ಸಾಗಿದ್ದು)



೧. **ಕಲಚೂರಿ ಮನೆತನ**:- (ಕ್ರಿ. ಶ. ೧೧೫೬-೧೧೮೩) **ಬಿಜ್ಜಳನು ಅರಸನಾದನು**:- ಕ್ರಿ. ಶ. ೧೧೫೬-೧೧೬೬. ಸಾಮ್ರಾಜ್ಯವನ್ನು ಆಕ್ರಮಿಸುವ ಕೆಲಸದಲ್ಲಿ ವರಂಗಲ್ಲನಲ್ಲಿ ಪ್ರೋಳನೂ ಕೊಲ್ಹಾಪುರದ ವಿಜಯಾರ್ಕನೂ **ಬಿಜ್ಜಳ**ನಿಗೆ ಸಹಾಯಕರಾದರು. ಬಿಜ್ಜಳನು ತೈಲಪನನ್ನು ಕಲ್ಯಾಣದಿಂದ ಓಡಿಸಿ ಎಲ್ಲ ರಾಜ್ಯಾಧಿಕಾರಗಳನ್ನು ತನ್ನ ಕೈಯಲ್ಲಿ ತೆಗೆದುಕೊಂಡನು. ತೈಲಪನು ಆಣ್ಣಿಗೇರಿ (ಧಾರವಾಡ ಜಿಲ್ಲೆ) ಯಲ್ಲಿ ಇದ್ದು ಆ ಭಾಗವನ್ನು ಆಳಹತ್ತಿದನು. ರಾಜ್ಯದಲ್ಲೆಲ್ಲ ತನ್ನ ಅಧಿಕಾರವನ್ನು ನೆಲೆಗೊಳಿಸಿದ ಬಳಿಕ ೧೧೬೨ ರಲ್ಲಿ ತೈಲಪನನ್ನು ಆಣ್ಣಿಗೇರಿಯಿಂದಲೂ ಹೊರದೂಡಿದನು. ಆಗ ತೈಲಪನು ಬನವಾಸಿಗೆ ಹೋಗಿ ಅಲ್ಲಿಯೆ ನಿಂತುಕೊಂಡನು. ಇತ್ತ ಬಿಜ್ಜಳನು ಸ್ವತಂತ್ರ ರಾಜನೆಂದು ಡಂಗುರಸಾರಿಸಿದನು.

೨. **ಬಸವೇಶ್ವರರ ಉದಯ**:— ಬಿಜ್ಜಳನು ಜೈನನು. ಶೈವ ಬ್ರಾಹ್ಮಣನಾದ **ಬಲದೇವನು** ಇವನ ಮಂತ್ರಿಯಾಗಿದ್ದನು. ಬಲದೇವನ ಸೋದರಳಿಯಂದಿರಾದ **ಬಸವೇಶ್ವರರು** ಸಹ ತರ್ದ್ದಿವಾಡಿ ನಾಡಿನ ಇಂಗಳೇಶ್ವರ-**ಬಾಗೇವಾಡಿ** ಎಂಬ ಗ್ರಾಮದವರು. ಇವರು ಕೃಷ್ಣಾ-ಮಲಪ್ರಭೆ

ಗಳ ಸಂಗಮದಲ್ಲಿರುವ **ಕೆಪ್ಪಡಿ ಸಂಗಮೇಶ್ವರ**ಕ್ಕೆ ತಮ್ಮ ವಯಸ್ಸಿನ ಆನೆಯ ವರ್ಷಕ್ಕೆ ಹೋದರು. ಅಲ್ಲಿ **ಸಂಗಮನಾಥ** ಗುರುಗಳ ಸನ್ನಿಧಿಯಲ್ಲಿ ೧೪ ವರ್ಷ ಗಳ ವರೆಗೆ ಇದ್ದು, ಶಾಸ್ತ್ರಾಧ್ಯಯನವನ್ನು ಮಾಡಿ, ಗುರ್ವನುಗ್ರಹವನ್ನು ಪಡೆದು, ಭಕ್ತಿ-ಜ್ಞಾನ-ಸದಾಚಾರಗಳಿಂದ ಯುಕ್ತರಾಗಿ ಸತ್ಪುರುಷರೆಂದು



ವೀರಶೈವ ಮತೋದ್ಧಾರಕರಾದ ಬಸವೇಶ್ವರರು

ಪ್ರಸಿದ್ಧಿಯನ್ನು ಪಡೆದರು. ಮತ್ತು ಶಿವಾಗಮಗಳ ಉತ್ತರ ಭಾಗಗಳಲ್ಲಿ ನಿರ್ದಿಷ್ಟವಾದ ವೀರಶೈವ ಮತವನ್ನು ಉದ್ಧರಿಸಿದರು. ಬಹು ಜನರು ಈ ಮತವನ್ನು ಸ್ವೀಕರಿಸಿದರು. ಇವರ ಅನೇಕರಾದ ಶಿಷ್ಯರು ಇವರಂತೆ ಉಪ-

ದೇಶದ ಮತಪ್ರಸಾರದ ಕಾರ್ಯವನ್ನು ಕೈಕೊಂಡರು. ಹೀಗಿರುವಲ್ಲಿ ಬಲದೇವ ಮಂತ್ರಿಯು ತನ್ನ ಅಳಿಯನ ಕೀರ್ತಿಯನ್ನು ಕೇಳಿ ಅತನಿಗೆ ತನ್ನ ಮಗಳಾದ **ಗಂಗಾಂಬಿಕೆಯನ್ನು** ಕೊಟ್ಟು ಲಗ್ನಮಾಡುವ ಇಚ್ಛೆಯನ್ನು ಸಂಗಮನಾಥ ಗುರುಗಳಿಗೆ ತಿಳುಹಿದನು. ಬಳಿಕ ಗುರುಗಳ ಅನುಜ್ಞೆಯಂತೆ ಬಲದೇವನು ಅಳಿಯನನ್ನು ಬರಮಾಡಿಕೊಂಡು, ವಿವಾಹ ಮಹೋತ್ಸವವನ್ನು ಸಂಭ್ರಮದಿಂದ ಸಾಂಗಗೊಳಿಸಿದನು.

ಬಳಿಕ ಬಸವೇಶ್ವರರು 'ಸ್ವಕಷ್ಟಾರ್ಜಿತವಾದ ಧನಧಾನ್ಯಗಳೇ ನಿರ್ವಾಹಕ್ಕೆ ತಕ್ಕವು'ಗಳೆಂದು ನೆನೆದು ಬಿಜ್ಜಳ ರಾಜನಲ್ಲಿ ಗುಮಾಸ್ತನ ಕೆಲಸವನ್ನು ಮಾಡಹತ್ತಿದರು. ಮುಂದೆ ಕೆಲವು ದಿನಗಳು ಗತಿಸುತ್ತಿರಲು ಒಂದು ದಿನ, ಯಾರಿಗೂ ಓದಲಿಕ್ಕೆ ಬಾರದ ಒಂದು ಶಾಸನವನ್ನು ಇವರು ಓದಿ, ಚಾಲುಕ್ಯರ ಕಾಲಕ್ಕೆ ಹೊಳೆಟ್ಟಿದ್ದ ಅಪಾರ ಸಂಪತ್ತನ್ನು ಬಿಜ್ಜಳನಿಗೆ ದೊರಕಿಸಿಕೊಟ್ಟರು.

೩. ಬಸವೇಶ್ವರರು ಮಂತ್ರಿಪದವನ್ನು ಸ್ವೀಕರಿಸಿದ್ದು :— ಬಲದೇವ ಮಂತ್ರಿಯು ಮರಣಹೊಂದಿದ ಬಳಿಕ, ಬಸವೇಶ್ವರರ ಯೋಗ್ಯತೆಯನ್ನರಿತ ಬಿಜ್ಜಳನು ಅವರನ್ನೇ ಮಂತ್ರಿಪದಕ್ಕೆ ಆರಿಸಿದನು. ಬಸವೇಶ್ವರರು ರಾಜಕಾರಣಪಟುಗಳಾಗಿದ್ದದರಿಂದ ಬಿಜ್ಜಳನ ರಾಜ್ಯವು ಘನತೆಗೇರಿತು. ಮತ್ತು ಬಸವೇಶ್ವರರ ಭಕ್ತಿಮಯ ಆಚರಣೆಯಿಂದಲೂ ಅವರು ಬೋಧಿಸಿದ ಮತತತ್ವಗಳ ಉದಾರತೆಯಿಂದಲೂ ವೀರಶೈವ ಮತಪ್ರಸಾರದ ಕಾರ್ಯವು ಒತ್ತರದಿಂದ ಸಾಗಿತು.

೪. ಜೈನ-ವೀರಶೈವರಲ್ಲಿಯ ವಿರೋಧ:— ವೀರಶೈವರ ಧರ್ಮೋಪದೇಶದಿಂದ ಎಷ್ಟೋ ಜೈನರು ಆ ಮತಕ್ಕೆ ಕೂಡಹತ್ತಿದರು. ಇದರಿಂದ ಬಿಜ್ಜಳನ ಮನಸ್ಸು ನೊಂದಿತು. ಬಿಜ್ಜಳನ ಜೈನ ಉಪಮಂತ್ರಿಯಾದ **ಮಂಚಣ್ಣ**ನು ಬಸವೇಶ್ವರರನ್ನು ದ್ವೇಷಿಸುತ್ತಿದ್ದನು. ಅತನು ಇವರ ವಿರುದ್ಧವಾಗಿ ಇಲ್ಲದ ಚಾಡಿಹೇಳಿ ಬಿಜ್ಜಳನ ಮನಸ್ಸನ್ನು ಮತ್ತಿಷ್ಟು ಕೆಡಿಸಿದನು. ತನ್ನ ಮತಪ್ರಚಾರಕ್ಕಾಗಿ ಬೊಕ್ಕಸದ ಹಣವನ್ನು ಉಪಯೋಗಿಸುವರೆಂಬ ಅಪವಾದವನ್ನು, ಆಗದವರು ಇವರಮೇಲೆ ಹೊರಿಸಿದರು. ಮುಂದೆ ಬಿಜ್ಜಳನು

ವೀರಶೈವ ಭಕ್ತರಲ್ಲಿ ಕೆಲವರ ಕಣ್ಣುಗಳನ್ನು ಕೀಳಿಸಿದ್ದರಿಂದ ಶಾಂತ ಸ್ವಭಾವದ ಬಸವೇಶ್ವರರು ಅಲ್ಲಿ ಇರಲು ಒಪ್ಪದೆ **ಕಪ್ಪಡಿಸಂಗಮಕ್ಕೆ** ಬಂದರು. ಮತ್ತು ಸ್ವಲ್ಪ ದಿವಸಗಳಲ್ಲಿಯೆ ಲಿಂಗೈಕ್ಯರಾದರು.

೫. **ಬಿಜ್ಜಳನ ಕೊಲೆ**:— ವೀರಶೈವರ ಕಣ್ಣುಗಳನ್ನು ಕೀಳಿಸಿದ್ದಕ್ಕಾಗಿ ರೊಚ್ಚಿಗೆದ್ದ ಉಗ್ರಪಕ್ಷದ ಕೆಲವರು ಅರಮನೆಯನ್ನು ಹೊಕ್ಕು ಬಿಜ್ಜಳನನ್ನು ಇರಿದು ಕೊಂದರು. ಮುಂದೆ ಜೈನ-ವೀರಶೈವರಲ್ಲಿ ಭಯಂಕರವಾದ ಯುದ್ಧವಾಗಿ ರಕ್ತದ ಕಾಲುವೆಗಳು ಹರಿದವು. ಬಿಜ್ಜಳನ ಮಗನಾದ **ರಾಯಮುರಾರಿ ಸೋವಿದೇವನು** ತನ್ನ ತಂದೆಯ ಕೊಲೆಯ ಸೇಡನ್ನು ತೀರಿಸಿಕೊಳ್ಳುವ ಹವಣಿಕೆಯಲ್ಲಿದ್ದನು. ಆದರೆ ಅದು ಸಾಧಿಸದೆ ಕಲಚೂರಿ ಮನೆತನವು ಮಾತ್ರ ಮುಳುಗುವ ಲಕ್ಷಣಗಳು ತೋರಹತ್ತಿದವು. ಮುಂದೆ ಬನವಾಸಿಯಲ್ಲಿ ಆಶ್ರಯಹೊಂದಿದ್ದ ತಿನೆಯ ತೈಲಪನ ಮಗನಾದ **ಆನೆಯ ವೀರಸೋಮೇಶ್ವರನು** ತನ್ನ ತಂದೆಯ ಚಾಳುಕ್ಯ ಸಿಂಹಾಸನವನ್ನು ಮರಳಿ ಕಸಿದುಕೊಂಡನು. ಕ್ರಿ. ಶ. ೧೧೮೩

೬. **ವೀರಶೈವ ಮತದ ಹಬ್ಬುವಿಕೆ:**— ಬಸವೇಶ್ವರರ ತರುವಾಯ **ಅಲ್ಲಮಪ್ರಭು**ಗಳೂ **ಚೆನ್ನಬಸವೇಶ್ವರ**ರೂ ಹಲವು ಶಿವಶರಣರೊಡನೆ ಕಲ್ಯಾಣ ಪಟ್ಟಣದಿಂದ ಹೊರಟು, ಅಲ್ಲಲ್ಲಿ ಧರ್ಮೋಪದೇಶವನ್ನು ಮಾಡುತ್ತಲೂ ಮಠಗಳನ್ನು ಹೆಚ್ಚಿಸುತ್ತಲೂ ಸಾಗಿದರು. ಅಲ್ಲಮಪ್ರಭುಗಳೂ **ಅಕ್ಕಮಹಾದೇವಿ**ಯರೂ ಶ್ರೀಶೈಲಕ್ಕೆ ಹೋಗಿ ಅಲ್ಲಿಯೆ ಸಮಾಧಿಸ್ಥರಾದರು. ಚೆನ್ನಬಸವೇಶ್ವರರು ಮುಂದೆ ಬಹುಕಾಲ, ಬಸವೇಶ್ವರರ ಧರ್ಮಸುಧಾರಣೆಯ ಕಾರ್ಯವನ್ನು ಸಾಗಿಸುತ್ತಿರಲು **ಉಳವಿ** ಕ್ಷೇತ್ರದಲ್ಲಿ ಸಮಾಧಿಯನ್ನು ಹೊಂದಿದರು.

೭. **ವೀರಶೈವ ಮತತತ್ವಗಳು:**— ವೀರಶೈವರು **ಶಕ್ತಿವಿಶಿಷ್ಟಾದ್ವೈತ** ಸಿದ್ಧಾಂತವನ್ನು ನಂಬುವರು. ಶಿವನೇ **ಈ** ಮತದ ಪರದೈವತವು. ಶುದ್ಧಾಂತಃಕರುಣಿಯಾದ ಜೀವನು ಶಿವನಲ್ಲಿ ಐಕ್ಯವನ್ನು ಹೊಂದುವದು **ಈ** ಮತದ ಧ್ಯೇಯವು. ಈ ಧ್ಯೇಯದ ಸಿದ್ಧಿಗೆ **ಪಂಚಆಚಾರ**ಗಳು, **ಷಟ್‌ಸ್ಥಲ**ಗಳು, **ಅಷ್ಟ ಆವರಣ**ಗಳು ಸಾಧನಗಳಾಗಿವೆ.

೮. ವೀರಶೈವ ಮತದಿಂದ ಸಮಾಜದ ಮೇಲೆ ಆದ ಪರಿಣಾಮ:— ಸಮಾನತೆಯ ತತ್ವದಿಂದ ಸಮಾಜದಲ್ಲಿ **ಐಕ್ಯವು** ಉಂಟಾಗಲು ಅನುಕೂಲವಾಯಿತು. ಉದ್ಯೋಗ ಭೇದದಿಂದ ಉಂಟಾಗುತ್ತಿದ್ದ ಉಚ್ಚನೀಚ ಭಾವನೆಯು ಬಯಲಾಗಹತ್ತಿತು. ಮಠಸಂಸ್ಥೆಗಳ ಮೂಲಕ ಧರ್ಮಾಧಿಕಾರಿಗಳ ಲಕ್ಷ್ಯವು ಸಮಾಜದ ಮೇಲೆ ಉಳಿದು ಜನರ ಆಚಾರ ವಿಚಾರಗಳು ಸರಿಯಾಗಿರಲು ಮಾರ್ಗವಾಯಿತು. ಕಾಯಕವನ್ನು ಮಾಡಿಯೇ ಪ್ರತಿಯೊಬ್ಬನು ತನ್ನ ನಿರ್ವಾಹವನ್ನು ಸಾಗಿಸತಕ್ಕದ್ದೆಂಬ ನಿಯಮದಿಂದ ಜನರ ಲಕ್ಷ್ಯವು ಉದ್ಯೋಗದ ಕಡೆಗೆ ಹೆಚ್ಚಿಗೆ ಒಲಿಯಿತು. ಧರ್ಮ-ನೀತಿಗಳ ಜ್ಞಾನವು ಜನರಿಗೆಲ್ಲ ಸುಲಭದಿಂದ ಉಂಟಾಗಲೆಂದು ಬಸವೇಶ್ವರರು ಕನ್ನಡ **ವಚನ** ಗ್ರಂಥಗಳಿಗೆ ಪ್ರೋತ್ಸಾಹವನ್ನಿತ್ತುದರಿಂದ ಕನ್ನಡ ವಾಙ್ಮಯಕ್ಕೆ ಕಳೆಯೇರಿತು. ಈ ವಚನ ಗ್ರಂಥಗಳಿಂದ ಕನ್ನಡದಲ್ಲಿ ಸುಂದರವೂ ಪರಿಣಾಮಕರವೂ ಆದ ಗದ್ಯಶೈಲಿಯು ಉಂಟಾಯಿತು.

೧೫ನೆಯ ಪಾಠ.

ಕನ್ನಡ ಅರಸು ಮನೆತನಗಳು.

(ಮುಂದೆ ಸಾಗಿದ್ದು)

೧. ಹೊಯ್ಸಳರು:— ಈ ಮನೆತನದ ಮೂಲ ಪುರುಷನಾದ **ಸಳನು**, ಆಕಸ್ಮಿಕವಾಗಿ ಮೈಮೇಲೆ ಬಂದ ಹುಲಿಯನ್ನು ಹೊಯ್ದು ಕೊಂದದರಿಂದ ಈತನಿಗೆ '**ಹೊಯ್ಸಳ**' ಎಂದು ಹೆಸರುಂಟಾಯಿತು.* 'ಹೊಯ್ಸಳ' ಎಂಬದು ಈ ಮನೆತನದ ಅಡ್ಡ ಹೆಸರು ಆಗಿದ್ದಿತು. ಹೊಯ್ಸಳರು ಯಾದವ ಕುಲದ ಕ್ಷತ್ರಿಯರು. ಕ್ರಿ. ಶ. ೧೧ನೆಯ ಶತಮಾನದ ಆರಂಭದಲ್ಲಿ ಇವರು ಉದಯ ಹೊಂದಿ, ಮೈಸೂರ ಪ್ರಾಂತದ ಮಲೆ ನಾಡಿನಲ್ಲಿ ೧೫೦ ವರ್ಷ ಆಳಿದರು. ಇವರ ಮುಖ್ಯ ರಾಜಧಾನಿಯು **ದ್ವಾರಸಮುದ್ರವು.**

* ಆದರೆ ಈ ಕಥೆಗೆ ತಕ್ಕ ಆಧಾರಗಳಿಲ್ಲ.

ತಳಕಾಡು, ಬಂಕಾಪುರ ಇವರ ಉಪರಾಜಧಾನಿಗಳಾಗಿದ್ದವು. ಇವರು ಕಲ್ಯಾಣ ಚಾಲುಕ್ಯರ ಮಾಂಡಲಿಕರಾಗಿದ್ದರು. ಚಾಲುಕ್ಯ ಸಾಮ್ರಾಜ್ಯವು ನಷ್ಟವಾದ ಬಳಿಕ ಸ್ವತಂತ್ರರಾಗಿ, ಚಾಳುಕ್ಯ ರಾಜ್ಯದ ದಕ್ಷಿಣ ಭಾಗವನ್ನೆಲ್ಲ ಆಕ್ರಮಿಸಿದರು ಈ ಮನೆತನದಲ್ಲಿ **ವಿಷ್ಣುವರ್ಧನ, ವೀರಬಲ್ಲಾಳ** ಎಂಬಿಬ್ಬರು ಅರಸರು ಪ್ರಸಿದ್ಧರಾದರು.

೨. ವಿಷ್ಣುವರ್ಧನ:— (ಕ್ರಿ. ಶ. ೧೧೦೬–೧೧೪೧) ಈತನ ಮೊದಲಿನ ಹೆಸರು **ಬಿಟ್ಟಿಗ** (ಬಿಟ್ಟಿದೇವ) ಎಂದು ಇತ್ತು. ಈತನು ಜೈನನಾಗಿದ್ದನು ಕ್ರಿ. ಶ. ೧೦೯೫ರಲ್ಲಿ **ರಾಮಾನುಜಾಚಾರ್ಯರು ವಿಶಿಷ್ಟಾದ್ವೈತ** ಮತವನ್ನು ಉದ್ಧರಿಸುವ ಕಾರ್ಯವನ್ನು ಕೈಕೊಂಡರು ಶೈವನಾದ **ಕುಲೊತ್ತುಂಗ** ಚೋಳನಿಂದ ಇವರಿಗೆ ತೊಂದರೆಯುಂಟಾಗಲು ಇವರು ಹೊಯ್ಸಳ ರಾಜ್ಯಕ್ಕೆ ಬಂದು ಬಿಟ್ಟಿದೇವನ ಆಶ್ರಯವನ್ನು ಹೊಂದಿದರು. ಇವರ ಉಪದೇಶದಿಂದ ಬಿಟ್ಟಿದೇವನು **ಶ್ರೀ ವೈಷ್ಣವ** ಮತವನ್ನು ಸ್ವೀಕರಿಸಿ '**ವಿಷ್ಣುವರ್ಧನ**' ಎಂಬ ಹೆಸರನ್ನು ಇಟ್ಟುಕೊಂಡನು.

ಈತನು ಗಂಗವಾಡಿ, ತಳಕಾಡು, ನೊಳಂಬವಾಡಿ ಮುಂತಾದ ಪ್ರದೇಶಗಳನ್ನು ಗೆಲೆದು ಚಾಳುಕ್ಯರ ರಾಜ್ಯದಲ್ಲಿಯೂ ಕಾಲಿಡಹತ್ತಿದನು. ಆಗ ಚಾಳುಕ್ಯರ ೬ನೆಯ ವಿಕ್ರಮಾದಿತ್ಯನು ಈತನನ್ನು ಸೋಲಿಸಲು ಈತನು ಚಾಳುಕ್ಯರ ಒಡೆತನವನ್ನು ಒಪ್ಪಬೇಕಾಯಿತು. **ಈತನಿಗೆ ವೀರಗಂಗ, ವಿಕ್ರಮಗಂಗ,** ಮುಂತಾದ ಬಿರುದುಗಳಿದ್ದವು. **ಜಗದೇಕ**ನೆಂಬವನು ರಾಜಧಾನಿಯಾದ **ಹಳೆಬೀಡು** ಅಥವಾ **ದ್ವಾರಸಮುದ್ರ**ವನ್ನು ಮುತ್ತಿದ್ದನು. ಆಗ ವಿಷ್ಣುವರ್ಧನನು ಮುತ್ತಿಗೆಯನ್ನು ಕಿತ್ತು, ರಾಜಧಾನಿಯನ್ನು ಇಕ್ಕಟ್ಟಿನ ಪ್ರಸಂಗದಿಂದ ಉಳಿಸಿಕೊಂಡನು. ಉತ್ತರಕ್ಕೆ ಮಾಳವದ ವರೆಗೆ ಸಹ ಹೋಗಿದ್ದನು. ಅಷ್ಟರಲ್ಲಿ ಚಾಳುಕ್ಯ ವಿಕ್ರಮಾದಿತ್ಯನು ಮರಣಹೊಂದಿದ್ದರಿಂದ ಚಾಳುಕ್ಯ ರಾಜ್ಯದಲ್ಲಿ ಕಾಲುಚಾಚಲು ಅನುಕೂಲವಾಯಿತು. ಈತನು **ಲಕ್ಷ್ಮೇಶ್ವರ, ಹಲಸಿಗೆ**ಗಳನ್ನು ತಕ್ಕೊಂಡು **ಬಂಕಾಪುರ**ವನ್ನು ಉತ್ತರದ ರಾಜಧಾನಿಯನ್ನು ಮಾಡಿಕೊಂಡು ಅಲ್ಲಿಯೇ ಇರುತ್ತಿರುವಾಗ ಕ್ರಿ. ಶ. ೧೧೪೧ರಲ್ಲಿ ಮರಣಹೊಂದಿದನು.

೩. **ವೀರ ಬಲ್ಲಾಳ**:— (ಕ್ರಿ. ಶ. ೧೧೭೩—೧೨೨೦.) ವಿಷ್ಣುವರ್ಧನನ ತರುವಾಯ **೧ನೆಯ ನರಸಿಂಹ**ನು ಆಳಿದನು. ಈ ನರಸಿಂಹನ ಮಗನೇ ಹೊಯ್ಸಳರಲ್ಲಿ ಮಿಗಿಲಾದ **ಇಮ್ಮಡಿ ಬಲ್ಲಾಳ**ನು. ಈತನು ಅತ್ಯಂತ ಪರಾಕ್ರಮಿಯಾಗಿದ್ದುದರಿಂದ **ವೀರ ಬಲ್ಲಾಳ**ನೆಂದೆನಿಸಿಕೊಂಡನು. **ತಂತ್ರಿ ಪಾಲ ಹೆಮ್ಮಾಡಿ**ಯು ಈತನ ಮಂತ್ರಿಯೂ **ಬೆಟ್ಟರಸ**ನು ದಂಡಾಧಿಪತಿಯೂ ಆಗಿದ್ದರು. ಇವರೀರ್ವರ ನೆರವಿನಿಂದ ವೀರ ಬಲ್ಲಾಳನು ವಿಜಯಯಾತ್ರೆಯನ್ನಾರಂಭಿಸಿದನು. **ಕೊಂಗಾಳ್ವ, ಚೆಂಗಾಳ್ವ, ಅನ್ಯಮಲೆಪರ**ನ್ನೂ ಪಶ್ಚಿಮ ಘಟ್ಟದಲ್ಲಿ ಮಲೆತಿದ್ದ **ಮಲೆಪರ**ನ್ನೂ ದಳವಾಯಿಗಳು ಸೋಲಿಸಿದರು. ದಕ್ಷಿಣದ ನಾಡು ವಿಸ್ತಾರವನ್ನು ಹೊಂದುತ್ತಿರಲು ಅತ್ತ ಉತ್ತರದಲ್ಲಿ ಸ್ವತಃ ವೀರ ಬಲ್ಲಾಳನೇ ಅತುಲ ಸಾಹಸದಿಂದ ಅನೇಕ ಅರಸರನ್ನು ಸೋಲಿಸಿ ಪ್ರಖ್ಯಾತನಾದನು. **ಚೋಳ**ರು ೧೨ ವರ್ಷ ಮುತ್ತಿಕೊಂಡರೂ ಕೈಸೇರದಿದ್ದ **ಉಚ್ಚಂಗಿ** ದುರ್ಗವೆಂಬ **ಪಾಂಡ್ಯರ** ಅಭೇದ್ಯವಾದ ಕೋಟೆಯೊಂದನ್ನು, ವೀರ ಬಲ್ಲಾಳನು ಲೀಲೆಯಿಂದ ವಶಪಡಿಸಿಕೊಂಡನು. ಆಗ ಪಾಂಡ್ಯ ಅರಸನಾದ **ಕಾಮದೇವ**ನು ಶರಣು ಬಂದದರಿಂದ, ಆತನ ರಾಜ್ಯವನ್ನು ದೊಡ್ಡ ಮನಸ್ಸುಮಾಡಿ ಈತನು ತಿರುಗಿ ಕೊಟ್ಟನು. ಬಳಿಕ **ಗಿರಿದುರ್ಗದ ಕೋಟೆ**ಯನ್ನು ಗೆದ್ದುಕೊಂಡನು.

ಮಹತ್ವದ ಕ್ರಾಂತಿಕಾಲ:— ಈ ಸಮಯವು ಕರ್ನಾಟಕದ ಇತಿಹಾಸದಲ್ಲಿಯ ಮಹತ್ವದ ಕ್ರಾಂತಿಕಾಲವು. ಮರಣೋನ್ಮುಖವಾದ ಚಾಲುಕ್ಯ ವಂಶವನ್ನು ಉಳಿಸಿಕೊಳ್ಳುವುದಕ್ಕಾಗಿ ರಾಜನಿಷ್ಠನಾದ, ೩ನೆಯ ಸೋಮೇಶ್ವರನ ಬೊಮ್ಮನೆಂಬ ಸೇನಾಪತಿಯು ಮಾಡಿದ ಸಾಹಸದ ಪ್ರಯತ್ನವು ಸಫಲವಾಗಲಿಲ್ಲ. ಚಾಲುಕ್ಯರ ಪಟ್ಟವನ್ನು ಕಸಿದಿದ್ದ ಕಲಚೂರಿ ಮನೆತನವನ್ನು ಈ ಬೊಮ್ಮನು ಮುರಿದನಾದರೂ ಕೊನೆಗೆ ವೀರಬಲ್ಲಾಳನು ಇವನನ್ನು ಪೂರ್ಣವಾಗಿ ಸೋಲಿಸಿದನು. ಹೀಗಾಗಿ ಕ್ರಿ. ಶ. ೬ನೆಯ ಶತಮಾನದಿಂದ ೧೨ನೆಯ ಶತಮಾನದ ಅಂತ್ಯದ ವರೆಗೆ ಏಕ ಪ್ರಕಾರವಾಗಿ ಸಾಗುತ್ತ ಬಂದಿದ್ದ ಕರ್ನಾಟಕ-ಸಾಮ್ರಾಜ್ಯವು ಲುಪ್ತವಾಯಿತು. ಕರ್ನಾಟಕ ಸಾಮ್ರಾಜ್ಯವನ್ನು ಸ್ಥಾಪಿಸಿದವರು (ಬದಾಮಿ) ಚಾಳುಕ್ಯರು; ಮುಳುಗಿಸಿದವರು (ಕಲ್ಯಾಣ) ಚಾಳುಕ್ಯರು; ಈ ಎರಡು ಆಳಿಕೆಗಳ ನಡುವಿನ ೨೦೦ ವರ್ಷಗಳ

ಕಾಲವನ್ನು ಸಹ ಸಾಮ್ರಾಜ್ಯ ವೈಭವವನ್ನು ಕುಂದಿಸದೆ, ಕನ್ನಡಿಗರಾದ ರಾಷ್ಟ್ರಕೂಟರೇ ಆಳಿಕೊಂಡು ಬಂದರು. ಆದದರಿಂದಲೇ ಈ ಮೂರು ಆಳಿಕೆಗಳ ೭೦೦ ವರ್ಷಗಳ ಕಾಲಕ್ಕೆ **"ಕರ್ನಾಟಕದ ಅಖಂಡ ಸಾಮ್ರಾಜ್ಯಕಾಲ"** ಎಂಬ ಹೆಸರು ಉಂಟಾಗಿದೆ.

ಭಿಲ್ಲಮ-ಬಲ್ಲಾಳರ ಕದನ:— ಚಾಲುಕ್ಯರ ಸಾಮ್ರಾಜ್ಯವನ್ನು ದಕ್ಷಿಣದಿಂದ ವೀರಬಲ್ಲಾಳ ಯಾದವನು ಆಕ್ರಮಿಸುತ್ತ ನಡೆದಂತೆ, ಉತ್ತರದಿಂದ ದೇವಗಿರಿಯ **ಭಿಲ್ಲಮ** ಯಾದವನು ಆಕ್ರಮಿಸುತ್ತ ಸಾಗಿದನು. ಉಭಯ ಸೈನ್ಯಗಳು **ಸೊರಟೂರ** ಹತ್ತಿರ ಒಂದಕ್ಕೊಂದು ಇದಿರಾದವು. ಅತಿ ಘೋರ ಸಂಗ್ರಾಮವೆಸಗಿ ಬಲ್ಲಾಳನಿಗೆ ಪೂರ್ಣ ಜಯವು ದೊರೆಯಿತು. ೧೧೯೦. ಮುಂದೆ ೧೧೯೨ರಲ್ಲಿ ಭಿಲ್ಲಮನ ಮಗ **ಚೈತ್ರಸಿಂಹ**ನು ಸಾಗಿಬರಲು, **ಲಕ್ಕುಂಡಿಯ** ಹತ್ತಿರ ಅತನೂ ಸೋತುಹೋದನು. ಬಳಿಕ ಬಲ್ಲಾಳನು ಲಕ್ಕುಂಡಿಯಲ್ಲಿ ಆರಮನೆ, ದೇವಾಲಯಗಳನ್ನು ಕಟ್ಟಿಸಿ ಅದನ್ನು ರಾಜಧಾನಿಯನ್ನು ಮಾಡಿಕೊಂಡನು. ಸಂಗಮದ ವರೆಗೆ ಮಲಪ್ರಭೆಯೂ ಮುಂದೆ ಕೃಷ್ಣೆಯೂ ಇವನ ರಾಜ್ಯದ ಉತ್ತರಮೇರೆಗಳಾದವು.

ವೀರಬಲ್ಲಾಳನ ಮರಣ:— ಪ್ರತಾಪಶಾಲಿಯಾದ ಬಲ್ಲಾಳನು ೪೭ ವರ್ಷ ರಾಜ್ಯವನ್ನಾಳಿ ಕ್ರಿ. ಶ. ೧೨೨೦ರಲ್ಲಿ ಮರಣಹೊಂದಿದನು. ಕೂಡಲೆ, ಸ್ವಾಮಿನಿಷ್ಠ ಕುವರಲಕ್ಷ್ಮಣನೂ ಅತನ ಹೆಂಡತಿಯೂ ಬೇರೆ ಒಂದು ಸಾವಿರ ವೀರರೂ ವೀರಬಲ್ಲಾಳನ ಹಿಂದೆ ಬದುಕಿರಲು ಮನಸೊಪ್ಪದೆ ಸಂತೋಷದಿಂದ ಆತ್ಮಹತ್ಯವನ್ನು ಮಾಡಿದರು.

೪. **ಹೊಯ್ಸಳ ಯಾದವರ ಕೊನೆ:**— ವೀರ ಬಲ್ಲಾಳನ ತರುವಾಯ ಅವನ ವಿಸ್ತಾರವಾದ ರಾಜ್ಯವನ್ನು ನಾಲ್ಕೈದು ಜನ ಹೊಯ್ಸಳರು ಬೇರೆಬೇರೆಯಾಗಿ ಆಳಹತ್ತಿದರು. ಕ್ರಿ. ಶ. ೧೩೧೦ರಲ್ಲಿ ಆಳುತ್ತಿದ್ದ ಹೊಯ್ಸಳ ರಾಜನು ದುರ್ಬಲನಿದ್ದುದರಿಂದ, ಈ ರಾಜ್ಯವು ಮಲೀಕ ಕಾಫೂರನ ದಾಳಿಯಿಂದ ಮುಸಲ್ಮಾನರ ಕೈಸೇರಿತು.

ಮಧ್ವಾಚಾರ್ಯರು:— ಬಸನೇಶ್ವರರ ತರುವಾಯ ಸುಮಾರು ೩೦ ವರ್ಷಕ್ಕೆ ಎಂದರೆ ಕ್ರಿ. ಶ. ೧೧೮೬ ರಲ್ಲಿ **ಮಧ್ವಾಚಾರ್ಯರು** ಉಡುಪಿಯ ಬಳಿಯಲ್ಲಿ ಅವತರಿಸಿ ದ್ವೈತಮತವನ್ನು ಉದ್ಧರಿಸಿದರು. ಇವರು **ಅಚ್ಯುತ ಪ್ರೇಕ್ಷ**ರೆಂಬ ಯತಿಗಳ ಬಳಿಯಲ್ಲಿ ಅಧ್ಯಯನವನ್ನು ಮಾಡಿ, ಸನ್ಯಾಸಾಶ್ರಮಿಗಳಾಗಿ ಬ್ರಹ್ಮಸೂತ್ರಗಳಿಗೆ ದ್ವೈತ ಭಾಷ್ಯವನ್ನು ಬರೆದರು. ಕಾಶಿ ಬದರಿ



ದ್ವೈತಮತೋದ್ಧಾರಕರಾದ ಮಧ್ವಾಚಾರ್ಯರು

ಮುಂತಾದವುಗಳ ಯಾತ್ರೆಯನ್ನು ಮಾಡಿ, ಎಲ್ಲ ಕಡೆಗೂ ತಮ್ಮ ಮತವನ್ನು ಉಪದೇಶಿಸಲು ಬಹು ಜನರು ಇವರ ಮತಾನುವರ್ತಿಗಳಾದರು. ಉಡುಪಿಯಲ್ಲಿ ಇವರು **ಶ್ರೀಕೃಷ್ಣ**ನ ಗುಡಿಯನ್ನು ಕಟ್ಟಿಸಿದರು. ಇವರ ಮತದವರೇ ವೈಷ್ಣವರು. ಇವರನ್ನು **ವಾಯು**ದೇವರ ಅವತಾರವೆಂದು ವೈಷ್ಣವರು ಭಾವಿಸುವರು.

೧೬ನೆಯ ಪಾಠ.

ಕನ್ನಡ ಅರಸುಮನೆತನಗಳು. (ಮುಂದೆ ಸಾಗಿದ್ದು)



೧. **ದೇವಗಿರಿಯ ಯಾದವರು :—** ಇವರು ನಾಶಿಕದಿಂದ ದೇವಗಿರಿಯ ವರೆಗೆ ಇರುವ **ಸೇವುಣ** ದೇಶವನ್ನು ಆಳುತ್ತಿದ್ದರು. ರಾಷ್ಟ್ರಕೂಟ ಹಾಗು ಚಾಳುಕ್ಯರ ಮಾಂಡಲಿಕರಾಗಿದ್ದರು ಈ ಯಾದವರ ಕಾಲದಲ್ಲಿ ಅನೇಕ ಕವಿಗಳೂ ಪಂಡಿತರೂ ಹೆಸರಿಗೆ ಬಂದರು. **ಭಾಸ್ಕರಾಚಾರ್ಯ**ನು ಸಿದ್ಧಾಂತಶಿರೋಮಣಿ ಮತ್ತು ಲೀಲಾವತಿ ಎಂಬ ಗ್ರಂಥಗಳನ್ನು ರಚಿಸಿದನು. **ಶಾರ್ಙ್ಗಧರ**ನು ರತ್ನಾಕರವೆಂಬ ಸಂಗೀತ ಶಾಸ್ತ್ರದ ಗ್ರಂಥವನ್ನು ಬರೆದನು. **ಹೇಮಾದ್ರಿ**ಯು ರಾಮದೇವನ ಮಂತ್ರಿಯೂ ಪಂಡಿತನೂ ಆಗಿದ್ದನು. ಈ ಮನೆತನದಲ್ಲಿ **ಜನೆಯ ಭಿಲ್ಲನು** ಮತ್ತು **ಸಿಂಘಣ** ಎಂಬಿಬ್ಬರು ಹೆಸರಾದ ಅರಸರಾದರು.

೨. **ಜನೆಯ ಭಿಲ್ಲಮನು :—** (ಕ್ರಿ. ಶ. ೧೧೮೭ ರಿಂದ ೧೧೯೧). ಈತನು **ವೀರಬಲ್ಲಾಳ**ನಂತೆ ಶೂರನಾಗಿದ್ದನು. ಚಾಲುಕ್ಯರ ೪ನೆಯ ಸೋಮೇಶ್ವರನು ದುರ್ಬಲನಾದ್ದರಿಂದ ಆ ರಾಜ್ಯದ ಉತ್ತರ ಭಾಗವನ್ನು ಆಕ್ರಮಿಸಹತ್ತಿದನು. ಚಾಲುಕ್ಯ ರಾಜ್ಯವು ಅಳಿದ ನಂತರ ತನ್ನ ರಾಜ್ಯವನ್ನು ಹಬ್ಬಿಸುತ್ತ ದಕ್ಷಿಣಕ್ಕೆ ಸಾಗಿ, ಸೊರಟೂರ ಬಳಿಯಲ್ಲಿ ವೀರಬಲ್ಲಾಳನಿಗೆ ಇದಿರಾಗಿ, ಪರಾಕ್ರಮದಿಂದ ಕಾದಿ ಯುದ್ಧರಂಗದಲ್ಲಿ ಮಡಿದನು. ಈತನಲ್ಲಿ ೨ ಲಕ್ಷ ಕಾಲಾಳು ಮತ್ತು ೧೨ ಸಾವಿರ ಸವಾರರಿದ್ದರು. ಇಂಥ ಪ್ರಚಂಡ ಸೇನೆಯೊಡನೆ ವೀರಬಲ್ಲಾಳನನ್ನು ತಡೆದು ಅವನನ್ನು ಉತ್ತರಕ್ಕೆ ಮುಂದಡಿಯಿಡಗೊಡಲಿಲ್ಲ. ಭಿಲ್ಲಮ ವೀರನು ರಣದಲ್ಲಿ ಮಡಿದರೂ ಆತನ ಮಗನಾದ **ಚೈತ್ರಸಿಂಹ**ನು ಎದೆಗುಂದದೆ ಮತ್ತೆ ಯುದ್ಧಕ್ಕೆ ಅಣಿಯಾದುದೂ ಬಲ್ಲಾಳನ ರಾಜ್ಯಜೆಳೆಯಿಸುವ ಆಶೆಯು ಮುಂದೆ ಅಷ್ಟಕ್ಕೇ ತಣಿದು ನಿಂತುದೂ ದೇವಗಿರಿ ಯಾದವರ ಧೈರ್ಯ ಪರಾಕ್ರಮಗಳ ಹೆಗ್ಗುರುತಾಗಿದೆ.

೩. **ಸಿಂಘಣರಾಜ** :— (ಕ್ರಿ. ಶ. ೧೨೧೦ ರಿಂದ ೧೨೪೭). ಚೈತ್ರ ಸಿಂಹನ ತರುವಾಯ ಆವನ ಮಗ **ಸಿಂಘಣನು** ಪಟ್ಟವೇರಿದನು: ತನ್ನ ಪರಾಕ್ರಮದಿಂದ ಹೊಯ್ಸಳರ ಉತ್ತರರಾಜ್ಯವನ್ನು ಗೆದ್ದುಕೊಂಡು, ಬೀಚಣ್ಣ ನೆಂಬ ಶೂರನನ್ನು ಆ ಭಾಗದ ಅಧಿಕಾರಿಯನ್ನಾಗಿ ನಿಯಮಿಸಿದನು. ಈ ಬೀಚಣ್ಣನು ಸವದತ್ತಿ, ಗೋವೆ, ಉಚ್ಚಂಗಿ, ಗುತ್ತಲ ಮತ್ತು ದ್ವಾರ ಸಮುದ್ರಗಳ ಅರಸರನ್ನು ಬಗ್ಗು ಬಡಿದು, ಕಾವೇರಿಯವರೆಗೆ ಸಾಗಿ ಅಲ್ಲೊಂದು ದೊಡ್ಡ ಜಯಸ್ತಂಭವನ್ನು ನಿಲ್ಲಿಸಿದನು. ಕ್ರಿ. ಶ. ೧೨೩೮. ಸಿಂಘಣನು ಪರಮಾರರ ೨ನೆಯ ಅರ್ಜುನನನ್ನು ಸೋಲಿಸಿ, ಗೋದಾವರಿಯ ಆಚೆಗೆ ನರ್ಮದೆಯ ವರೆಗೆ ರಾಜ್ಯವನ್ನು ಗಳಿಸಿದನು. ಗುಜರಾಥವನ್ನು ನುಗ್ಗಿ ಆ ಅರಸನಿಂದ ಕಪ್ಪಕಾಣಿಕೆಗಳನ್ನು ತಕ್ಕೊಳ್ಳಹತ್ತಿದನು.

೪. **ದೇವಗಿರಿ ಯಾದವರ ಕಡೆ**:—ಸಿಂಘಣನ ತರುವಾಯ ಇಬ್ಬರು ಅರಸರು ನಿಶ್ಚಿಂತೆಯಿಂದ ಆಳಿದರು. ಬಳಿಕ ರಾಮದೇವನ ಆಳಿಕೆಯಲ್ಲಿ ದಿಲ್ಲಿಯ ಸುಲ್ತಾನನಾದ ಜಲಾಲುದ್ದೀನ ಖಿಲಜಿಯ ಅಣ್ಣನ ಮಗನಾದ **ಅಲ್ಲಾ ಉದ್ದೀನ** ಖಿಲಜಿಯು ದಕ್ಷಿಣವನ್ನು ಹೊಕ್ಕು, ದೇವಗಿರಿಯನ್ನು ವಶ ಮಾಡಿಕೊಂಡನು. ರಾಮದೇವನು ಅಪಾರ ದ್ರವ್ಯವನ್ನು ಕೊಟ್ಟು ಮುಸಲ್ಮಾನರ ಆಧೀನನಾಗಿ ನಡೆಯಹತ್ತಿದನು. ಆದರೆ ಮುಂದೆ ಶಂಕರದೇವನು ಆಳುವಾಗ ಅಲ್ಲಾಉದ್ದೀನನ ಸೇನಾಪತಿಯಾದ **ಮಲಿಕ್‌ಕಾಫೂರನು** ದೇವಗಿರಿಯ ರಾಜ್ಯವನ್ನು ಸಂಪೂರ್ಣವಾಗಿ ತಕ್ಕೊಂಡನು. ಯಾದವ ಮನೆತನವು ಶೂನ್ಯವಾಯಿತು!

೫. **ಕನ್ನಡಿಗರ ಆಳಿಕೆಯ ಕಾಲದ ಸಿಂಹಾವಲೋಕನ** :— **ರಾಜ್ಯ ವ್ಯವಸ್ಥೆ** :— ರಾಜ್ಯದಲ್ಲಿ ಅರಸರೇ ಮುಖ್ಯರಾಗಿದ್ದರು. ಮಂತ್ರಿ, ಉಪಮಂತ್ರಿ, ದಳವಾಯಿ, ಸಂಧಿವಿಗ್ರಹಿ ಮೊದಲಾದ ಅಧಿಕಾರಿಗಳು ಅರಸನ ಅಪ್ಪಣೆಗೆ ಒಳಗಾಗಿ ನಡೆಯುತ್ತಿದ್ದರು. ರಾಜ್ಯದ ಮುಖ್ಯ ಭಾಗಗಳ ವ್ಯವಸ್ಥೆಯನ್ನು ರಾಜಮನೆತನಕ್ಕೆ ಹೊಂದಿದ ಪುರುಷರು ಅಥವಾ ಸ್ತ್ರೀಯರು ನೋಡುತ್ತಿದ್ದರು. ಗ್ರಾಮಗಳಲ್ಲಿ ಗೌಡರೇ ಮುಖ್ಯರು. 'ಮಹಾಜನ' ಎಂಬ ಊರ ಪ್ರಮುಖ ಸಂಸ್ಥೆಗೆ ಕೆಲವು ಅಧಿಕಾರಗಳು ಇರುತ್ತಿದ್ದವು. ಅರಸರು ಸ್ವತಃ ಯುದ್ಧಕ್ಕೆ ಹೋಗುವರಲ್ಲದೆ, ಸಂಗಡ ಪ್ರಸಂಗದಲ್ಲಿ ಸ್ತ್ರೀಯರನ್ನೂ ಕರೆದೊಯ್ಯುತ್ತಿದ್ದರು.

ಭೂಮಿಯ ಉತ್ಪನ್ನದ ಆರರಲ್ಲೊಂದು ಪಾಲನ್ನು ಕಂದಾಯವೆಂದು ಕೊಡ ಬೇಕಾಗುತ್ತಿತ್ತು. ಸೈನ್ಯದಲ್ಲಿ ಸೇರುವ ಒತ್ತಾಯವಿದ್ದಿಲ್ಲ.

ಧಾರ್ಮಿಕ ಸ್ಥಿತಿ :— ಬೌದ್ಧಧರ್ಮವು ಕರ್ನಾಟಕದಲ್ಲಿ ವಿಶೇಷವಾಗಿ ಹಬ್ಬಲಿಲ್ಲ. ಜೈನರಿಗೆ ಮಾತ್ರ ರಾಜಾಶ್ರಯವು ದೊರೆತದರಿಂದ ಆ ಧರ್ಮವು ಹಬ್ಬುಗೊಂಡಿತು. ಶಂಕರಾಚಾರ್ಯರ ಹಿಂದುಧರ್ಮ ಜಾಗ್ರತೆಯ ಕಾರ್ಯ ದಿಂದ ಜೈನಧರ್ಮದ ಹಬ್ಬುವಿಕೆಯು ನಿಂತಿತು. ಬೌದ್ಧಧರ್ಮವು ಹೆಸರಿಲ್ಲ ದಂತಾಯಿತು. ಮುಂದೆ **ವಿಶಿಷ್ಟಾದ್ವೈತ, ವೀರಶೈವ** ಮತ್ತು **ದ್ವೈತ** ಮತಗಳ ಸ್ಥಾಪಕರು ತಮ್ಮ ಧರ್ಮದ ಪ್ರಸಾರವನ್ನು ಕರ್ನಾಟಕ ಭಾಗದಲ್ಲಿ ಹೆಚ್ಚಾಗಿ ಮಾಡಿದರು. ಅರಸರು ಯಾವ ಧರ್ಮದವರಿದ್ದರೂ ಉಳಿದ ಧರ್ಮದವರೊ ಡನೆ ಸಹಿಷ್ಣುತೆಯಿಂದಲೇ ನಡೆಯುತ್ತಿದ್ದರು. ಶೈವ-ವೈಷ್ಣವರಲ್ಲಿ ಜಗಳಗಳಾ ಗುತ್ತಿದ್ದರೂ ಕೂಡಲೆ ಅವನ್ನು ಅಡಗಿಸುವ ಪ್ರಯತ್ನವನ್ನು ಅರಸರೂ ಸಮಾಜಧುರೀಣರೂ ಮಾಡುತ್ತಿದ್ದರೆಂದು ಕಾಣುತ್ತದೆ. ಸಹಗಮನವು ರೂಢಿಯಲ್ಲಿತ್ತು.

ಶಿಲ್ಪಕಲೆ:— ಕರ್ನಾಟಕದಲ್ಲಿ ಅಲೌಕಿಕ ಸೌಂದರ್ಯವುಳ್ಳ ಪ್ರಾಚೀನ ಕಾಲದ ಕಟ್ಟಡಗಳು, ಕಲ್ಮನೆಗಳು, ಗವಿಗಳು ಮತ್ತು ಮೂರ್ತಿಗಳು ಅನೇಕ ವಾಗಿರುವವು. ಈ ಕಟ್ಟಡಗಳಲ್ಲಿ ಚಾಲುಕ್ಯ ಹೊಯ್ಸಳ ಮತ್ತು ಹೇಮಾದ್ರಿ ಎಂಬ ಮೂರು ತರಹದ ಕಟ್ಟುವ ಮಾದರಿಗಳುಂಟು. ಜಕ್ಕಣಾಚಾರ್ಯರು ಧರ್ಮಸಿಸ್ಥರಿದ್ದುದಲ್ಲದೆ ವಾಸ್ತುಶಾಸ್ತ್ರ, ಶಿಲ್ಪಕಲೆಗಳನ್ನು ಚೆನ್ನಾಗಿ ಬಲ್ಲವರಾಗಿ ದ್ದರು. ಆ ಕಾಲದ ಶಿಲ್ಪಿಗರು ತೋರಿಸಿರುವ ಜಾಣ್ಮೆಯು ಜಗತ್ತಿನಲ್ಲಿ ಮಿಗಿ ಲಾದದ್ದೆಂದು ತಜ್ಞರ ಮತವಿದೆ.

ಸಾಹಿತ್ಯದ ಪ್ರಗತಿ :— ಕನ್ನಡ ವಾಙ್ಮಯವು ಹೆಚ್ಚು ಎಳ್ಗೆಯನ್ನು ಪೊಂದಿತು. ಕವಿತೆಗಳಿಗೆ ಬಹುತರ ರಾಜಾಶ್ರಯವು ದೊರೆಯುತ್ತಿತ್ತು. ಎಷ್ಟೋ ಅರಸರೇ ಕವಿಗಳಾಗಿದ್ದು ಮಾನ್ಯವಾದ ಗ್ರಂಥಗಳನ್ನು ರಚಿಸಿ ಭಾಷಾಸೇವೆ ಯನ್ನು ಮಾಡಿರುವರು. ಆ ಕಾಲದಲ್ಲಿ ಜೈನ ಮತ್ತು ವೀರಶೈವ ಕವಿಗಳೇ ವಿಶೇಷವಾಗಿ ಪ್ರಸಿದ್ಧರಾದರು. ವ್ಯಾಕರಣ, ಅಲಂಕಾರ, ಜ್ಯೋತಿಷ, ಗಣಿತ,

ಸಂಗೀತ ಮುಂತಾದ ವಿಷಯಗಳ ಸಂಬಂಧವಾದ ಗ್ರಂಥಗಳೂ ರಚಿಸಲ್ಪಟ್ಟವು. ೬ನೆಯ ಶತಕದಿಂದ ಕನ್ನಡ * ಕಲ್ಬರೆಹಗಳು ಬರೆಯಲ್ಪಡಹತ್ತಿದವು. ಭಾರತೀಯರ ಸಂಸ್ಕೃತಿಯನ್ನು ಜಲಮಾರ್ಗವಾಗಿ ಹೊರದೇಶಗಳಲ್ಲಿ ಪ್ರಸಾರಗೊಳಿಸುವ ಕಾರ್ಯದಲ್ಲಿ ಕನ್ನಡಿಗರು ಹಿಂದುಳಿದಿರಲಿಲ್ಲ. ಕನ್ನಡ ಅರಸರು ಕನ್ನಡದ ಜೊತೆಗೆ ಸಂಸ್ಕೃತಕ್ಕೂ ತಕ್ಕಷ್ಟು ಆಶ್ರಯವನ್ನು ಕೊಟ್ಟಿದ್ದರು. ಇಷ್ಟೇ ಅಲ್ಲ; ಹೊಸದಾಗಿ ತಲೆಯೆತ್ತಲಾರಂಭಿಸಿದ್ದ ಮರಾಠಿ ಭಾಷೆಗೂ ದೇವಗಿರಿಯ ಯಾದವರ ಕಾಲಕ್ಕೆ ಉತ್ತೇಜನವು ಸಿಕ್ಕಿತು. ಭಗವದ್ಗೀತೆಯ ಟೀಕಾಗ್ರಂಥವಾದ **ಜ್ಞಾನೇಶ್ವರಿ**ಯು ಯಾದವರ ಕಾಲದ ಮರಾಠಿಯಲ್ಲಿಯ ಶ್ರೇಷ್ಠ ಗ್ರಂಥವು. ಕೈಬರೆಹಕ್ಕೆ ಹೆಚ್ಚು ಅನುಕೂಲವಾದ 'ಮೋಡೀ' ಲಿಪಿಯು ಯಾದವರ ಕಾಲದಲ್ಲಿಯೇ ಮರಾಠಿಗರಲ್ಲಿ ಪ್ರಚಾರಗೊಂಡಿತು. ಆ ಲಿಪಿಯು ಸಿಂಹಳದ್ವೀಪದಿಂದ ಬಂದಿತೆಂದು ಹೇಳುವರು. ಹೀಗೆ ಎಲ್ಲ ವಿದ್ಯೆ-ಕಲೆ-ಶಾಸ್ತ್ರಗಳು ಒಳ್ಳೆಯ ಸುಸ್ಥಿತಿಯಲ್ಲಿದ್ದು ಜನರು ಸುಖ-ಸಂಪತ್ತುಗಳಿಂದ ಮೆರೆಯುತ್ತಿದ್ದರು!

೧೭ನೆಯ ಪಾಠ.

ಪ್ರಾಚೀನ ಕಾಲದ ದಕ್ಷಿಣ ಹಿಂದುಸ್ಥಾನದ ಉಳಿದ ರಾಜ್ಯಗಳು.



೧. **ದ್ರಾವಿಡರು ದಕ್ಷಿಣದಲ್ಲಿ ನೆಲೆಸಿದ್ದು**:— ಉತ್ತರ ಹಿಂದುಸ್ಥಾನವನ್ನು ಆರ್ಯರು ವ್ಯಾಪಿಸುತ್ತ ಬಂದಂತೆ, **ದ್ರಾವಿಡರು** ದಕ್ಷಿಣಕ್ಕೆ ಸರಿಯಹತ್ತಿದರು. ಇವರು ದಕ್ಷಿಣ ಹಿಂದುಸ್ಥಾನದ ದಕ್ಷಿಣದ ಕಡೆಯವರೆಗೂ ವ್ಯಾಪಿಸಿ ಅಲ್ಲಿ ಸ್ಥಿರಗೊಂಡು, ತಮ **ಭಾಷೆ-ಆಚಾರ-ವಿಚಾರ**ಗಳನ್ನು ಚೆನ್ನಾಗಿ ಸುಧಾರಿಸಿಕೊಂಡು ಇರಹತ್ತಿದರು. ದಕ್ಷಿಣದ ತುದಿಗೆ ಪಾಂಡ್ಯರು, ಮಲಬಾರದಲ್ಲಿ ಚೇರರು, ಕಾವೇರಿಯ ನೆರೆಯಲ್ಲಿ ಚೋಳರು ತಮ್ಮ ತಮ್ಮ ರಾಜ್ಯವನ್ನು

* ಕ್ರಿ. ಶ. ೧೯೯ ರಲ್ಲಿಯ ಶಿಲಾಲೇಖವೊಂದು ಇತ್ತೀಚೆಯಲ್ಲಿ ದೊರೆತಿದೆ.

ಸ್ಥಾಪಿಸಿಕೊಂಡು ವೈಭವದಿಂದ ಆಳುತ್ತಿದ್ದರು. **ಮೇಗ್ಯಾಸ್ಥಿನೀಸ,** ಅಶೋಕ ಹಾಗೂ ಬೇರೆ ಗ್ರೀಕ-ರೋಮನ್ ಗ್ರಂಥಕರ್ತರು ಈ ದ್ರಾವಿಡ ರಾಜ್ಯಗಳನ್ನು ಉಲ್ಲೇಖಿಸಿರುವರು. ಕಾರಣ, ಈ ರಾಜ್ಯಗಳು ಅತಿ ಪ್ರಾಚೀನ ಕಾಲದಿಂದ ನಡೆದುಬಂದಿವೆ ಎಂದು ತಿಳಿಯಲು ಆಡ್ಡಿಯಿಲ್ಲ. ಕ್ರಿ. ಶ. ಪೂ ೧೦೦೦ ವರ್ಷದ ಆಚೆಯಿಂದಲೂ ದ್ರಾವಿಡರು ಸಮುದ್ರಮಾರ್ಗವಾಗಿ ವ್ಯಾಪಾರವನ್ನು ಮಾಡುತ್ತಿದ್ದರು. ಮತ್ತು ಪಾಶ್ಚಿಮಾತ್ಯರೊಡನೆ ವ್ಯವಹಾರ ಸಂಬಂಧವನ್ನು ಹೆಚ್ಚಾಗಿ ಬೆಳೆಸಿದ್ದರು. ರೋಮನ್ನರ ನಾಣ್ಯಗಳು ದಕ್ಷಿಣ ಹಿಂದುಸ್ಥಾನದಲ್ಲಿ ಬಹಳವಾಗಿ ದೊರೆತಿವೆ. ಇದರಿಂದ ರೋಮು ಸಾಮ್ರಾಜ್ಯದ ಉತ್ಕರ್ಷಕಾಲದಲ್ಲಿ ದ್ರಾವಿಡ ರಾಜ್ಯಗಳೊಡನೆ ವ್ಯಾಪಾರಮಾಡುವದು ರೋಮಾಯರಿಗೆ ಅಗತ್ಯವಿರಬೇಕೆಂದು ತೋರುತ್ತದೆ.

೨. ಪ್ರಾಚೀನ ಚೋಳರು :— **ಕರಿಕಾಲನೆಂಬ** ಚೋಳರಾಜನು ಹಿಮಾಲಯದ ವರೆಗೆ ರಾಜ್ಯವನ್ನು ಬೆಳೆಯಿಸಿ, ಸಾರ್ವಭೌಮನಾಗಿ ಆಳಿದನೆಂದು ಪ್ರಾಚೀನ ತಮಿಳು ಗ್ರಂಥಗಳಲ್ಲಿ ಉಲ್ಲೇಖವಿದೆ. ಕ್ರಿ. ಶ. ಪೂ. ೩ನೆಯ ಶತಕದಲ್ಲಿ ಇವರು ಸಿಂಹಳದ್ವೀಪದ ಮೇಲೆ ದಂಡೆತ್ತಿಹೋದರು. ಕ್ರಿ. ಶ. ೧ನೆಯ ಶತಕದಲ್ಲಿ ಸಿಂಹಳರು ಚೋಳರ ಮೇಲೆ ಸಾಗಿಬಂದಿದ್ದರು.

ಬಳಿಕ ಕ್ರಿ. ಶ. ೯೫೫ರಿಂದ **ರಾಜರಾಜನೆಂಬ** ಪ್ರಸಿದ್ಧನಾದ ಅರಸನು ಆಳಲಾರಂಭಿಸಿದನು. ದಕ್ಷಿಣ ಹಿಂದುಸ್ಥಾನವನ್ನೆಲ್ಲ ಗೆದ್ದನು. ಮಲಬಾರದ ಹಡಗುಪಡೆಯನ್ನು ನುಗ್ಗುಮಾಡಿ **ಚೇರರನ್ನು** ಮೆತ್ತಗೆ ಮಾಡಿದನು. ರಾಜಧಾನಿಯಾದ **ತಂಜಾವರದಲ್ಲಿಯ** ಪ್ರಸಿದ್ಧವಾದ ಗುಡಿಯನ್ನು ಇವನೇ ಕಟ್ಟಿಸಿದನು. ಇವನ ಮಗ **೧ನೆಯ ರಾಜೇಂದ್ರನು** ತನ್ನ ರಾಜ್ಯವನ್ನು ಮತ್ತೆ ಬೆಳೆಸಿ ಸಾರ್ವಭೌಮ ಎನಿಸಿದನು. ಈತನ ಹಡಗುಪಡೆಯು **ನಿಕೋಬಾರ-ಮಲಯ** ದ್ವೀಪಗಳನ್ನು ತಕ್ಕೊಂಡಿತು. ಉತ್ತರಕ್ಕೆ ಸಾಗಿ ಮಧ್ಯಪ್ರಾಂತ, ಒಡಿಸಾ ಮತ್ತು ಅಪರಾಂತಕಗಳನ್ನು ಗೆದ್ದುಕೊಂಡನು. ಇವನ ತರುವಾಯ ಇವನ ಇಬ್ಬರು ಮಕ್ಕಳೂ ಒಬ್ಬರ ಹಿಂದೊಬ್ಬರು ಚೆನ್ನಾಗಿ ಆಳಿದರು. ವೀರ ಬಲ್ಲಾಳನು ಚೋಳರನ್ನು ಕಾಡಿದನು. ಮುಂದೆ ಮುಸಲ್ಮಾನರ ಬರುವಿಕೆಯಿಂದ ಈ ರಾಜ್ಯವು ಬಲಗುಂದಿ ಮುಳುಗಿತು.

೩. **ಕಂಚಿಯ ಪಲ್ಲವರು** :— ಕ್ರಿ. ಶ. ೨ನೆಯ ಶತಮಾನದಿಂದ **ಪಲ್ಲವರು ಕಂಚಿ**ಯಲ್ಲಿ ಆಳುತ್ತಿದ್ದರು. ಇವರು ೫ನೆಯ ಶತಮಾನದಲ್ಲಿ ಪಶ್ಚಿಮೋತ್ತರ ದಿಕ್ಕುಗಳಲ್ಲಿ ಹಬ್ಬಿ ಪ್ರಬಲರಾದರು. ಇವರ ವಶದಲ್ಲಿಯೇ ಇದ್ದ ಬಾದಾಮಿಯನ್ನು ಚಾಲುಕ್ಯರು ಕಸಿದುಕೊಂಡರು. ೭ನೆಯ ಪೂಲಿ **ಕೇಶಿ**ಯು ಪಲ್ಲವರ **೧ನೆಯ ಮಹೇಂದ್ರವರ್ಮ**ನಿಂದ ವೆಂಗಿ ಪ್ರಾಂತವನ್ನು ತಕ್ಕೊಂಡನು. ಮುಂಪೆ ರಾಷ್ಟ್ರಕೂಟರೂ ಗಂಗರೂ ಇವರನ್ನು ಹಣ್ಣು ಮಾಡಿದರು. ಈ ರಾಜ್ಯವು ಮುರಿದು ಕಂಚಿಯು **ಚೋಳ**ರ ಕೈಸೇರಿತು.

೪. **ಮಧುರೆಯ ಪಾಂಡ್ಯರು** :— ಸಿಂಹಳೆಯರಿಗೂ ಪಾಂಡ್ಯರಿಗೂ ಮೇಲಿಂದಮೇಲೆ ಕದನಗಳಾಗುತ್ತಿದ್ದವು. ಮುಂದೆ ಪಾಂಡ್ಯ, ಚೋಳರಿಬ್ಬರು ಕೂಡಿ ಸಿಂಹಳೆಯರನ್ನು ಹಿಂದಕ್ಕೆ ಓಟ್ಟಿದರು. ತರುವಾಯ ಪಾಂಡ್ಯರೇ ಸಮರ್ಥರಾಗಿ ಚೋಳರಾಜ್ಯವನ್ನು ಸೆಳೆಯಹತ್ತಿದರು. ಪಾಂಡ್ಯರಾಜರಲ್ಲಿ **ಸುಂದರರಾಜ**ನು ಪ್ರಸಿದ್ಧನು. ಇವನು ಸಿಂಹಳದ್ವೀಪವನ್ನು ಗೆದ್ದನು. **ಮಧುರೆ**ಯಲ್ಲಿಯ ಹಲವು ಸುಂದರವಾದ ದೇವಾಲಯಗಳು ಪಾಂಡ್ಯರಿಂದ ಕಟ್ಟಲ್ಪಟ್ಟವು. ವೇನೀಸದ ಪ್ರವಾಸಿಯಾದ **ಮಾರ್ಕೋಪೋಲೊ** ಎಂಬವನು ಕ್ರಿ. ಶ. ೧೨೮೪ ರಲ್ಲಿ **ಈ** ದೇಶಕ್ಕೆ ಬಂದಿದ್ದನು. ಆತನು ಪಾಂಡ್ಯರ ರಾಜ್ಯವು ಒಳ್ಳೇ ಘನತೆಯನ್ನು ಪಡೆದಿತ್ತೆಂದು ಬರೆದಿಟ್ಟಿರುವನು. **ಈ** ರಾಜ್ಯವಾದರೂ ಮುಂದೆ ಮುಸಲ್ಮಾನರ ಕೈವಶವಾಯಿತು.

ಪ್ರಾಚೀನ ಕಾಲದಲ್ಲಿ ಆಳಿದ

ಪ್ರಸಿದ್ಧವಾದ ರಾಜವಂಶಗಳು.

ಮೌರ್ಯವಂಶ (ಕ್ರಿ. ಶ. ಪೂ. ೩೨೧ ಕ್ರಿ. ಶ. ಪೂ. ೧೮೪).

೧	ಚಂದ್ರಗುಪ್ತ	ಕ್ರಿ. ಶ. ಪೂ.	೩೨೧	ಕ್ರಿ. ಶ. ಪೂ.	೨೯೪.
೨	ಬಿಂದುಸಾರ	,,	೨೯೪	,,	೨೭೩.
೩	ಅಶೋಕ	,,	೨೭೪	,,	೨೩೭.
೪	ಉಳಿದ ಅರಸರು	,,	೨೩೭	,,	೧೮೪.

ಗುಪ್ತ ವಂಶ (ಕ್ರಿ. ಶ. ೩೨೦ ರಿಂದ ೬೦೦).

೧	ಚಂದ್ರಗುಪ್ತ	ಕ್ರಿ. ಶ.	೩೨೦—೩೫೦.
೨	ಸಮುದ್ರಗುಪ್ತ	,,	೩೫೦—೩೭೫.
೩	೨ನೆಯ ಚಂದ್ರಗುಪ್ತ	,,	೩೭೫—೪೧೫.
೪	ಕುಮಾರಗುಪ್ತ	,,	೪೧೫—೪೫೫.
೫	ಸ್ಕಂದಗುಪ್ತ	,,	೪೫೫—೪೯೦.
೬	ಉಳಿದ ಅರಸರು	,,	೪೯೦—೬೦೦.

ಬಾದಾಮಿಯ ಚಾಲುಕ್ಯ ವಂಶ (ಕ್ರಿ. ಶ. ೫೦೦ ರಿಂದ ೭೫೦).

೧	ಜಯಸಿಂಹ ಮತ್ತು ರಣರಾಗ	ಕ್ರಿ. ಶ.	೫೦೦—೫೫೦.
೨	೧ನೆಯ ಪುಲಿಕೇಶಿ	,,	೫೫೦—೫೬೬.
೩	ಕೀರ್ತಿವರ್ಮ ಮತ್ತು ಮಂಗಳೇಶ	,,	೫೬೬—೬೦೮.
೪	೨ನೆಯ ಪುಲಿಕೇಶಿ	,,	೬೦೯—೬೪೨.
೫	ವಿಕ್ರಮಾದಿತ್ಯ	,,	೬೪೨—೬೮೦.
೬	ಉಳಿದ ಅರಸರು	,,	೬೮೦—೭೫೦.

ರಾಷ್ಟ್ರಕೂಟ ವಂಶ (ಕ್ರಿ. ಶ. ೭೫೦ ರಿಂದ ೯೭೩).

೧	ದಂತಿದುರ್ಗ	ಕ್ರಿ. ಶ.	೭೫೦—೭೬೦.
೨	೧ನೆಯ ಕೃಷ್ಣ	,,	೭೬೦—೭೭೯.
೩	೨ನೆಯ ಗೋವಿಂದ ಮತ್ತು ಧ್ರುವ	,,	೭೭೯—೭೯೪.
೩	೨ನೆಯ ಗೋವಿಂದ ಮತ್ತು ಧ್ರುವ	,,	೭೭೯—೭೯೪.
೪	೩ನೆಯ ಗೋವಿಂದ	,,	೭೯೪—೮೧೪.
೫	೧ನೆಯ ಅಮೋಘವರ್ಷ	,,	೮೧೪—೮೭೭.
೬	ಇಮ್ಮಡಿಕೃಷ್ಣ ಮುಂತಾದ ಉಳಿದ ಅರಸರು	,,	೮೭೭—೯೭೩.

ಪಶ್ಚಿಮ ಚಾಲುಕ್ಯರು (ಕ್ರಿ. ಶ. ೯೭೩ ರಿಂದ ೧೧೮೯).

೧	ನೂರ್ಮಡಿ ತೈಲಪ	ಕ್ರಿ. ಶ.	೯೭೩—೯೯೭.
೨	ಇರಿವಬೆಡಂಗ ಮುಂತಾದ ಮೂವರು	,,	೯೯೭—೧೦೪೨.
೩	೧ನೆಯ ಸೋಮೇಶ್ವರ	,,	೧೦೪೨—೧೦೬೮.
೪	೨ನೆಯ ಸೋಮೇಶ್ವರ	,,	೧೦೬೮—೧೦೭೬.
೫	ವಿಕ್ರಮಾದಿತ್ಯ	,,	೧೦೭೬—೧೧೨೭.
೬	೩ನೆಯ ಸೋಮೇಶ್ವರ	,,	೧೧೨೭—೧೧೩೮.
೭	ಉಳಿದ ಅರಸರು	,,	೧೧೩೮—೧೧೮೯.

ಮಹತ್ವದ ಸಂಗತಿಗಳ ಕಾಲಗಳು

೧	ಮಿನಾಂಡರನ ಆಳಿಕೆ	ಕ್ರಿ. ಶ. ಪೂ. ೧೬೦ ರಿಂದ	ಕ್ರಿ.ಶ.ಪೂ. ೧೪೦.
೨	ಕನಿಷ್ಕನ ಆಳಿಕೆ	ಕ್ರಿ. ಶ.	೧೨೦—೧೬೦.
೩	ಫಾಹ್ಯೆನನು ಹಿಂದುಸ್ಥಾನದಲ್ಲಿದ್ದದ್ದು	,,	೪೦೫—೪೧೧.
೪	ಹರ್ಷನ ಆಳಿಕೆ	,,	೬೦೬—೬೪೨.
೫	ಹುವೆನ್‌ತ್ಸಂಗ	,,	೬೩೯.
೬	ಶಂಕರಾಚಾರ್ಯರ ಕಾಲ	,,	೭೮೮—೮೨೦.
೭	ವೀರಬಲ್ಲಾಳ	,,	೧೧೭೩—೧೨೨೦.
೮	೫ನೆಯ ಭಿಲ್ಲಮ	,,	೧೧೮೭—೧೧೯೧.

ಪ್ರಾಚೀನಕಾಲದ ಇತಿಹಾಸದ ಆವರ್ತನೆಯ ಹಾಗು

ಪರೀಕ್ಷೆಯ ಪ್ರಶ್ನೆಗಳು.



೧. ಚಂದ್ರಗುಪ್ತ, ಸಮುದ್ರಗುಪ್ತ, ೨ನೆಯ ಪುಲಿಕೇಶಿ, ವಿಕ್ರಮಾಂಕ ಈ ನಾಲ್ವರಲ್ಲಿ ಬೇಕಾದ ಇಬ್ಬರ ಚರಿತ್ರೆಗಳನ್ನು ಬರೆಯಿರಿ.

೨. ಅಶೋಕನ ರಾಜ್ಯವ್ಯವಸ್ಥೆ, ಶ್ರೀಹರ್ಷನ ಯೋಗ್ಯತೆ, ಫಾಹ್ಯೆನನ ಅಭಿಪ್ರಾಯ, ರಜಪುತರ ಉದಯ ಇವುಗಳ ವಿಷಯವಾಗಿ ಗೊತ್ತಿದ್ದುದನ್ನು ಸ್ವಲ್ಪದರಲ್ಲಿ ಬರೆಯಿರಿ.

೩. ಹ್ಯೂವೆನ್‌ತ್ಸಂಗ, ಸುವರ್ಣಯುಗ, ಕಾಲಿದಾಸ, ರನ್ನ, ಆರ್ಯಚಾಣಕ್ಯ, ನಾಲಂದ ಇವುಗಳ ಟಿಪ್ಪಣಿ ಕೊಡಿರಿ.

೪. ವೀರಶೈವಮತ ತತ್ವಗಳಾವವು? ಈ ಮತದ ಪ್ರಸಾರದಿಂದ ಸಮಾಜದ ಮೇಲೆ ಆದ ಪರಿಣಾಮಗಳಾವವು?

೫. ಹಿಂದುಸ್ಥಾನದ ನಕಾಶವನ್ನು ತೆಗೆದು ಕೆಳಗೆ ಬರೆದ ಸ್ಥಳಗಳನ್ನು ಅದರಲ್ಲಿ ಗುರ್ತಿಸಿರಿ; ಮತ್ತು ಅವುಗಳ ಐತಿಹಾಸಿಕ ಮಹತ್ವವನ್ನು ಸಂಕ್ಷಿಪ್ತದಲ್ಲಿ ಬರೆಯಿರಿ.

ಪಾಟಲೀಪುತ್ರ, ಸಿಂಧುನದ, ಮಧುರೆ, ಪೈಠಣ, ಬನವಾಸಿ.

೬. ಬೌದ್ಧಮತವು ಅಡಗಿದ ಕಾರಣಗಳಾವವು? ಹಿಂದುಧರ್ಮದ ಮೇಲೆ ಬೌದ್ಧಧರ್ಮದ ಪರಿಣಾಮವು ಏನಾಯಿತು?

೭. ಕನ್ನಡ ವಾಙ್ಮಯದ ಏಳ್ಗೆಯು ಯಾವ ಯಾವ ಅರಸರ ಕಾಲದಲ್ಲಿ ಆಯಿತು? ಹ್ಯೂವೆನ್‌ತ್ಸಂಗನು ಕನ್ನಡಿಗರ ಸ್ಥಿತಿಯನ್ನು ವರ್ಣಿಸಿರುವದು ಹೇಗೆ?



ಮುಸಲ್ಮಾನರ ಆಳಿಕೆಯು

ವಿಷಯಗಳ ಅನುಕ್ರಮಣಿಕೆ



ಮೊದಲನೆಯ ಭಾಗ

ಪ್ರಾಚೀನಕಾಲ (ಕ್ರಿ. ಶ. ೫೭೦—೧೨೦೫)

ಪಾಠ	ಹೆಸರು	ಪುಟ
೧	ಮುಸಲ್ಮಾನೀ ಧರ್ಮದ ಉದಯ	೧
೨	ಖಲೀಫರು	೬
೩	ಹಿಂದುಸ್ಥಾನದಲ್ಲಿ ಅರಬರ ಪ್ರವೇಶ	೮
೪	ಗಿಝ್ನಿಯ ಮನೆತನ	೧೨
೫	ಘೋರೀ ಮನೆತನ	೧೮

೨ನೆಯ ಭಾಗ

ಮಧ್ಯಕಾಲ (ಕ್ರಿ. ಶ. ೧೨೦೬—೧೭೬೧

೧	ಗುಲಾಮೀ ಮನೆತನ	೨೪
೨	ಖಿಲಜೀ ಮನೆತನ	೩೧
೩	ತಘಲಕ ಮನೆತನ	೩೬
೪	,, ,, (ಮುಂದೆ ಸಾಗಿದ್ದು) ಮತ್ತು ಸಯ್ಯದ ಮನೆತನ	೩೯
೫	ಲೋದೀ ಮನೆತನ	೪೨
೬	ಅಫಗಾನರ ಕಾಲದಲ್ಲಿ ಉತ್ತರ ಹಿಂದುಸ್ಥಾನದಲ್ಲಿ ನೆಲೆಗೊಂಡ ಬೇರೆ ರಾಜ್ಯಗಳು	೪೭

II

೭	ಅಫಗಾನರ ಕಾಲದಲ್ಲಿ ದಕ್ಷಿಣ ಹಿಂದುಸ್ಥಾನದಲ್ಲಿ ನೆಲೆಗೊಂಡ ರಾಜ್ಯಗಳು	೫೧
೮	ಬಹುಮನಿ ರಾಜ್ಯ ಮುರಿದು ಆದ ಐದು ರಾಜ್ಯಗಳು	೫೪
೯	ವಿಜಯನಗರದ ಸಾಮ್ರಾಜ್ಯ	೫೯
೧೦	ಬಾಬರ	೭೨
೧೧	ಹುಮಾಯೂನ (ಆಳಿಕೆಯ ಪೂರ್ವಾರ್ಧ)	೭೭
೧೨	ಸೂರವಮನೆತನ	೭೯
೧೩	ಹುಮಾಯೂನ (ಆಳಿಕೆಯ ಉತ್ತರಾರ್ಧ)	೮೩
೧೪	ಅಕ್‌ಬರ ಬಾದಷಾಹ	೮೫
೧೫	ಜಹಾಂಗೀರ	೯೮
೧೬	ಷಾಹೆಜಹಾನ್	೧೦೬
೧೭	ಔರಂಗಜೇಬ್	೧೧೪
೧೮	ಔರಂಗಜೇಬ್ (ಮುಂದೆಸಾಗಿದ್ದು)	೧೨೦
೧೯	ಔರಂಗಜೇಬನ ತರುವಾಯದ ಮೊಗಲ ಸಾಮ್ರಾಜ್ಯ	೧೨೭

ಉಪೋದ್ಘಾತ

ಪ್ರಿಯ ಬಾಲಕರೆ, ನಿಮಗೆ ನಾಲ್ಕನೆಯ ಇಯತ್ತೆಯಲ್ಲಿ ಕರ್ನಾಟಕದ ಇತಿಹಾಸವ ಗುರ್ತು ಆಗಿರುವದು. ಈ ನಮ್ಮ ಕರ್ನಾಟಕವು ಭಾರತದೇಶದ ಎಂದರೆ ಹಿಂದುಸ್ಥಾನದ ಒಂದು ಭಾಗವಾಗಿದೆ; ತೆಲಗು ಸೀಮೆ, ತಮಿಳುನಾಡು, ಮಹಾರಾಷ್ಟ್ರ ಮೊದಲಾದವು ಉಳಿದ ಭಾಗಗಳಾಗಿವೆ. ಕರ್ನಾಟಕ ಮೊದ ಲಾದ ಈ ಎಲ್ಲ ಪ್ರಾಂತಗಳು ಭಾರತಮಾತೆಯ ಮಕ್ಕಳು. ಈ ಭಾರತದೇಶದ ನಿವಾಸಿಗಳೆಲ್ಲರು ಭಾರತೀಯರು. ನೀವು ಕನ್ನಡಿಗರೆಂದು ಕನ್ನಡ ನಾಡಿನ ಇತಿಹಾಸವನ್ನು ಈ ಮೊದಲು ಕಲಿತಂತೆ, ಇನ್ನು ಭಾರತೀಯರೆಂದು ಭಾರತದ (ಹಿಂದುಸ್ಥಾನದ) ಇತಿಹಾಸವನ್ನು ಅಭ್ಯಾಸಿಸಬೇಕು.

ಕರ್ನಾಟಕದ ಇತಿಹಾಸವನ್ನು ಕಲಿಯುವಾಗ ಖಿಲಜಿ, ಬಹಮನಿ, ಆದಿಲ್‌ಷಾಹಿ, ಮೊಗಲ ಮೊದಲಾದ ಮುಸಲ್ಮಾನೀ ಧರ್ಮದ ಅರಸಮನೆತನ ಗಳ ಸಂಬಂಧದ ಹಲಕೆಲವು ಸಂಗತಿಗಳನ್ನು ಅರಿತಿರುವಿರಿ. ಇತಿಹಾಸ ಕಾಲ ದಲ್ಲಿ ಮುಸಲ್ಮಾನ ಅರಸರ ರಾಜ್ಯವಿಸ್ತಾರವು ಕರ್ನಾಟಕದ ಹೊರಗಿನ ಪ್ರಾಂತ ಗಳಲ್ಲಿ, ವಿಶೇಷವಾಗಿ ಉತ್ತರ ಹಿಂದುಸ್ಥಾನದಲ್ಲಿ ಹೆಚ್ಚಾಗಿದ್ದಿತು. ಆದರಿಂದ ಕರ್ನಾಟಕದ ಇತಿಹಾಸವನ್ನು ಕಲಿಯುವಾಗ ಮುಸಲ್ಮಾನರ ಸಂಬಂಧದ ಹೆಚ್ಚಿನ ಸಂಗತಿಗಳನ್ನು ಹೇಳುವ ಪ್ರಸಂಗವಿರಲಿಲ್ಲ

ಮುಸಲ್ಮಾನೀ ಧರ್ಮವು ಯಾವ ದೇಶದಲ್ಲಿ ಹುಟ್ಟಿತು? ಅದು ದೇಶ ದೇಶಗಳಲ್ಲಿ ಹೇಗೆ ಹಬ್ಬಿತು? ಮುಸಲ್ಮಾನರು ಈ ದೇಶಕ್ಕೆ ಎಂದು ಬಂದರು? ಅವರು ಈ ದೇಶದಲ್ಲಿ ಪ್ರಬಲರಾಗಿ ರಾಜ್ಯಗಳನ್ನು ಹೇಗೆ ಸ್ಥಾಪಿಸಿದರು? ಯಾವ ಯಾವ ಅರಸು ಮನೆತನಗಳು ಈ ದೇಶದಲ್ಲಿ ಆಳಿದವು? ಅವರ ಆಳಿಕೆಯಲ್ಲಿ ಈ ದೇಶದ ಪರಿಸ್ಥಿತಿಯು ಹೇಗೆ ಇದ್ದಿತು? ಇವೇ ಮೊದಲಾದ ಪ್ರಶ್ನೆಗಳ ಉತ್ತರರೂಪವಾದ **ಹಿಂದುಸ್ಥಾನದಲ್ಲಿಯ ಮುಸಲ್ಮಾನರ ಆಳಿಕೆಯ ಕಾಲದ** ಇತಿಹಾಸವನ್ನು ನೀವು ಈ ಇಯತ್ತೆಯಲ್ಲಿ ಕಲಿಯುವದಿದೆ.

ಹಿಂದುಸ್ಥಾನದಲ್ಲಿಯ ಮುಸಲ್ಮಾನರ ಆಳಿಕೆ

ಅಥವಾ

ಜನೆಯ ಇಯತ್ತೆಯ ಇತಿಹಾಸ

ಮೊದಲನೆಯ ಭಾಗ

ಪ್ರಾಚೀನಕಾಲ (ಕ್ರಿ. ಶ. ೫೭೦ ರಿಂದ ೧೭೦೫)


೧ನೆಯ ಪಾಠ

ಮುಸಲ್ಮಾನೀ ಧರ್ಮದ ಉದಯ

೧. **ಸಾಮಾನ್ಯ ವಿಚಾರ** :— ಜಗತ್ತಿನ ಇತಿಹಾಸದಲ್ಲಿ ಮುಸಲ್ಮಾನರಿಗೂ ವಿಶೇಷವಾದ ಮಹತ್ವವುಂಟು. ಇವರು ಒಂದು ಕಾಲದಲ್ಲಿ ಪಶ್ಚಿಮಕ್ಕೆ ಸ್ಪೇನದ ವರೆಗೂ ಪೂರ್ವಕ್ಕೆ ಚೀನದ ವರೆಗೂ ಇರುವ ವಿಸ್ತಾರವಾದ ಪ್ರದೇಶವನ್ನು ವ್ಯಾಪಿಸಿ, ಅನೇಕ ರಾಜ್ಯಗಳನ್ನೂ ಸಾಮ್ರಾಜ್ಯಗಳನ್ನೂ ಸ್ಥಾಪಿಸಿ, ಒಳ್ಳೆಯ ವೈಭವದಿಂದ ಆಳಿದರು ಮತ್ತು ಶಾಸ್ತ್ರ-ಕಲೆಗಳಲ್ಲಿ ಪ್ರಗತಿಯನ್ನು ಹೊಂದಿ ಸ್ವತಂತ್ರವಾದ ತಮ್ಮ ಸಂಸ್ಕೃತಿಯನ್ನು ಉಂಟುಮಾಡಿದರು ಕ್ರಿ. ಶ. ೬ನೆಯ ಶತಮಾನದಿಂದ ಕ್ರಿ ಶ. **೧೫ನೆಯ ಶತಮಾನದ** ವರೆಗೆ ಎಂದರೆ ೯೦೦ ವರ್ಷಗಳ ವರೆಗೆ ಏಶಿಯಾ – ಯುರೋಪ – ಆಫ್ರಿಕೆಗಳಲ್ಲಿ ಇವರೇ ಪ್ರಬಲರಾಗಿದ್ದರು.

೨. **ಕ್ರಿ. ಶ ೬ನೆಯ ಶತಮಾನದಲ್ಲಿಯ ಅರಬಸ್ತಾನದ ಸ್ಥಿತಿ** :— ಮುಸಲ್ಮಾನೀ ಧರ್ಮದ ಸ್ಥಾಪನೆಯಾಗುವ ಮೊದಲು, ಅಜ್ಞಾನವೆಂಬ ಕತ್ತಲೆಯು ಅರಬಸ್ತಾನವನ್ನು ಮುಸುಕಿತ್ತು; ಎಂದರೆ, ಜನರಲ್ಲಿ ಮೂಢ ಭಾವನೆಗಳೂ ಅನೀತಿ ಅನಾಚಾರಗಳೂ ಹೆಚ್ಚಾಗಿದ್ದವು. ಒಟ್ಟಿಗೆ ಆ ದೇಶವು ಹೀನಾವಸ್ಥೆಯ ಪರಮಾವಧಿಯನ್ನು ನಿಲುಕಿತ್ತೆಂದು ಹೇಳಬಹುದು. **ಇಂಥ** ಕಠಿಣ ಪರಿಸ್ಥಿತಿ ಇರುವಾಗ ಜನಾಂಗಕ್ಕೆ ಸನ್ಮಾರ್ಗವನ್ನು ತೋರಿಸುವ ಸಮರ್ಥರ ಅಗತ್ಯವು ವಿಶೇಷವಾಗಿತ್ತು.

೩. **ಮಹಮ್ಮದ ಪೈಗಂಬರರು** :— (ಕ್ರಿ. ಶ **೫೭೦-೬೩೩**) ಹೀಗಿರುವಾಗ ಹಜರತ ಮಹಮ್ಮದ ಪೈಗಂಬರರೆಂಬ ಸತ್ಪುರುಷರು ಕ್ರಿ ಶ. ೫೭೦ರಲ್ಲಿ ಅರಬಸ್ತಾನದ **ಮಕ್ಕಾ** ಪಟ್ಟಣದಲ್ಲಿ ಜನ್ಮಿಸಿದರು. ಇವರ ತಂದೆಯ ಹೆಸರು




ಅಬ್ದುಲ್ಲಾ ಮತ್ತು ತಾಯಿಯ ಹೆಸರು **ಅಮಿನಾ.** ಚಿಕ್ಕಂದಿನಲ್ಲಿಯೆ ತಾಯಿ ತಂದೆಗಳು ತೀರಿಕೊಂಡಿದ್ದರಿಂದ ಕಕ್ಕನಾದ **ಅಬುತಾಲೀಬನು** ಇವರನ್ನು

ಸಂರಕ್ಷಿಸಿದನು. ೧೬ ವರ್ಷದವರಿರುವಾಗಲೆ ಜನರು ಇವರನ್ನು **'ಅಮೀನ'** (ಸತ್ಯವಂತ) ಎಂದೆನ್ನಹತ್ತಿದರು. ಅರಬರ ಅನಾಚಾರಗಳನ್ನೂ ಹೀನ ಸ್ಥಿತಿಯನ್ನೂ ಕಂಡು ಇವರಿಗೆ ಕಳವಳವು ಉಂಟಾಯಿತು. ಆಗ ಇವರು ಏಕಾಂತ ಚಿತ್ತದಿಂದ, ಪರಮಾತ್ಮನ ಧ್ಯಾನ ಮತ್ತು ಜನೋನ್ನತಿಯ ಉಪಾಯ-ಚಿಂತನಗಳಲ್ಲಿ ಕಾಲಕಳೆಯಹತ್ತಿದರು ಈ ಧ್ಯಾನ-ಚಿಂತನಗಳಿಂದ ಒಂದು ದಿನ ಅವರ ಮನಸ್ಸಿಗೆ ಶಾಂತಿಯುಂಟಾಗಿ ಜನರ ಉನ್ನತಿಯ ನಿಶ್ಚಿತ ಮಾರ್ಗವು ಅವರಿಗೆ ಹೊಳೆಯಿತು. ಇಷ್ಟಾದ ಕೂಡಲೆ ಅವರ ವಯಸ್ಸಿನ ನಾಲ್ವತ್ತನೆಯ ವರ್ಷ ಕ್ರಿ ಶ. **೬೧೦**ರಲ್ಲಿ ಜನರಿಗೆ ತಮ್ಮ ಹೊಸ ಮತವನ್ನು ಬೋಧಿಸತೊಡಗಿದರು.

೪. ಪೈಗಂಬರರ ವಿರೋಧಿಗಳು :— ಅನೀತಿಮಯವಾದ ಆಚಾರ-ವಿಚಾರಗಳುಳ್ಳ ಅರಬರಿಗೆ ಪೈಗಂಬರರ ಉಪದೇಶವು ಸರಿಬರಲಿಲ್ಲ. ಬಹುತರ ಯಾವತ್ತು ಜನರು ಅವರನ್ನು ಪೀಡಿಸಹತ್ತಿದರು ಆದರೂ ಪೈಗಂಬರರು ಶಾಂತತೆಯನ್ನು ತಾಳಿ, ತಮ್ಮ ಉಪದೇಶದ ಕ್ರಮವನ್ನು ಹಾಗೆಯೇ ಸಾಗಿಸಿದರು ಹಜರತ **ಅಬೂಬಕರ ಸಿದ್ದೀಕ** ಮೊದಲಾದ ನಾಲ್ವತ್ತುಮೂರು ಜನ ಪ್ರಮುಖರು ಇಸ್ಲಾಮ ಧರ್ಮವನ್ನು ಸ್ವೀಕರಿಸಿದರು. ಇಸ್ಲಾಮ ಧರ್ಮಕ್ಕೆ ಹೀಗೆ ಕಳೆಯೇರಿದ್ದನ್ನು ಕಂಡು **ಅಬೂಜಹಲ್** ಮುಂತಾದವರು ಕೆಲ ಇಸ್ಲಾಮಿಯರನ್ನು ಕೊಂದು ಕೆಲವರನ್ನು ಕಠ್ಠರತನದಿಂದ ಪೀಡಿಸಿದರು

೫. ಮದೀನಾ ಪಟ್ಟಣದ ವಾಸ :— ಮುಕ್ಕಾ ಪಟ್ಟಣದವರು ಹೀಗೆ ಅನಾಹುತವನ್ನು ನಡೆಯಿಸಿರುವಾಗ **ಮದೀನಾ** ಪಟ್ಟಣಿಗರು ಪೈಗಂಬರರ ಯೋಗ್ಯತೆಯನ್ನರಿತು, ' ತಮ್ಮ ಅನುಯಾಯಿಗಳೊಡನೆ ಮದೀನಾಕ್ಕೆ ಬರಬೇಕು' ಎಂದು ಅವರನ್ನು ಕೇಳಿಕೊಂಡರು. ಇದಕ್ಕೆ ಪೈಗಂಬರರು ಸಮ್ಮತಿಸಿ ಇಬ್ಬರು ಶಿಷ್ಯರೊಂದಿಗೆ ತಾವು ಅಲ್ಲಿಯೇ ಉಳಿದು, ಮಿಕ್ಕ ಅನುಯಾಯಿಗಳನ್ನೆಲ್ಲ ಮೊದಲು ಮದೀನಾಕ್ಕೆ ಕಳುಹಿಸಿಕೊಟ್ಟರು ಈ ಹೋತ್ತು ಸಾಧಿಸಿ ಕುರೇಷಿಯರು ಅವರನ್ನು ಕೊಲ್ಲಬೇಕೆಂದು ನಿಶ್ಚಯಿಸಿದರು. ಈ ಸುದ್ದಿಯನ್ನು ಕೇಳಿ ಪೈಗಂಬರರು ಇಲ್ಲಿರುವದು ಒಳಿತಲ್ಲವೆಂದು ತಿಳಿದು, ಮಕ್ಕಾಪಟ್ಟಣವನ್ನು ತ್ಯಜಿಸಿ (ಹಿಜರತ್ ಮಾಡಿ) ಶಿಷ್ಯರೊಂದಿಗೆ ಮದೀನಾ ಪಟ್ಟಣಕ್ಕೆ ಹೋದರು. ಕ್ರಿ ಶ. **೬೨೨**. ಈ ಹಿಜರತ್ (ಸ್ಥಾನಾಂತರ) ಮಾಡಿದ ದಿವಸದಿಂದಲೇ **ಹಿಜರಿಶಕವು** ಪ್ರಾರಂಭವಾಯಿತು.

ಮದೀನಾ ಪಟ್ಟಣಕ್ಕೆ ಬಂದಂದಿನಿಂದ ಇಸ್ಲಾಮ ಧರ್ಮವು ಭರದಿಂದ ಹಬ್ಬತೊಡಗಿತು. **"ಮಸ್‌ಜಿದೆ ನಬವಿ"** ಎಂಬ ಪ್ರಾರ್ಥನಾಲಯವು ಕಟ್ಟಲ್ಪಟ್ಟಿತು. * ಅನ್ಸಾರಿ † ಮಹಾಜರೀನರಲ್ಲಿ ಬಂಧುತ್ವದ ಗೊತ್ತುವಳಿಗಳು ಬರೆಯಿಸಲ್ಪಟ್ಟವು. ಬಳಿಕ ಪೈಗಂಬರರು ಸುತ್ತಲಿನ ದೇಶಗಳಿಗೆ ಉಪದೇಶಕರನ್ನು ಕಳುಹಿದರು. ಮದೀನೆಯ **ಅಬೀವಕಾಶ**ನೆಂಬ ಯಹೂದಿಯೂ ಮಕ್ಕಾದ



ಮಕ್ಕೆಯ ಯಾತ್ರೆ

ಕುರೇಷಿಯರೂ ಮತ್ಸರದಿಂದ ಮತ್ತೆ ಇಸ್ಲಾಮಿಯರನ್ನು ಅಳಿಯಬೇಕೆಂದು ಯುದ್ಧಕ್ಕೆ ಬರಹತ್ತಿದರು. ಪೈಗಂಬರರು ನಿರುಪಾಯರಾಗಿ ಶಸ್ತ್ರ ಧರಿಸಬೇಕಾಯಿತು. ಇಸ್ಲಾಮಿಯರು ಪರಾಕ್ರಮದಿಂದ ಧರ್ಮರಕ್ಷಣೆಗಾಗಿ ಹೋರಾಡಿ ೮೫ ಯುದ್ಧಗಳಲ್ಲಿ ಜಯಹೊಂದಿದರು. ಆಗ ಕುರೇಷಿಯರು ಹುದೇಬಿಯಾದಲ್ಲಿ ಮಿತ್ರತ್ವದ ಒಪ್ಪಂದ ಮಾಡಿಕೊಂಡರು.

---

* ಮದೀನೆಯಲ್ಲಿಯ ಸಹಾಯಕರು. † ಮಕ್ಕೆಯಿಂದ ಬಂದವರು.

೬. ಮಕ್ಕಾಪಟ್ಟಣವನ್ನು ತಕ್ಕೊಂಡದ್ದು:— ಕುರೇಷಿಯರು ಒಪ್ಪಂದವನ್ನು ಮುರಿದದರಿಂದ ಪೈಗಂಬರರು ಸೈನ್ಯಜೊಂದಿಗೆ ಹೋಗಿ ಮಕ್ಕಾಪಟ್ಟಣವನ್ನು ತಕ್ಕೊಂಡ ಬಳಿಕ ಎಲ್ಲರನ್ನು ದೊಡ್ಡ ಮನಸ್ಸಿನಿಂದ ಕ್ಷಮಿಸಿ, ಗೆದ್ದವರು ಸೋತವರೊಡನೆ ಹೇಗೆ ನಡೆದುಕೊಳ್ಳಬೇಕೆಂಬದನ್ನು ಸ್ವಂತದ ಉದಾಹರಣೆಯಿಂದ ವ್ಯಕ್ತಪಡಿಸಿದರು. ಬಳಿಕ ಸ್ವಲ್ಪು ದಿವಸಗಳಲ್ಲಿ ಪೈಗಂಬರರ ಕ್ಷಮಾಶೀಲತೆಗೆ ಮೆಚ್ಚಿದ ಕುರೇಷಿಯರೆಲ್ಲರು ಮುಸಲ್ಮಾನರಾದರು. ಇವರು ಬದುಕಿರುವಾಗಲೆ ಇಡೀ ಅರಬಸ್ತಾನದಲ್ಲಿ ಇಸ್ಲಾಮು ಧರ್ಮವು * ಹಬ್ಬಿತು.

೭. ಪೈಗಂಬರರ ಮರಣ :— ಮುಂದೆ ಇವರು ಹತ್ತುವರ್ಷ ಧರ್ಮಾಧಿಕಾರವನ್ನೂ ರಾಜ್ಯಾಧಿಕಾರವನ್ನೂ ಸಾಗಿಸಿ ಕ್ರಿ ಶ. ೬೩೩ರಲ್ಲಿ ಮದೀನಾದಲ್ಲಿ ದೇಹವಿಟ್ಟರು. ಇವರು ಪ್ರಾಮಾಣಿಕರೂ ದಯೆಯುಳ್ಳವರೂ ಕ್ಷಮಾಶೀಲರೂ ಸಮದೃಷ್ಟಿಯುಳ್ಳವರೂ ಶಾಂತರೂ ಆಗಿದ್ದರು

೮. ಇಸ್ಲಾಮು ಧರ್ಮದ ತತ್ವಗಳು :— (೧) ಪರಮಾತ್ಮನು ಒಬ್ಬನೇ ಇದ್ದು ಆತನನ್ನೇ ನಿಜಭಕ್ತಿಯಿಂದ ಪ್ರಾರ್ಥಿಸುವದು. (೨) ದುರ್ವ್ಯಸನ–ದುರಾಚಾರಗಳಿಂದ ಅಲಿಪ್ತನಾಗಿರುವದು. (೩) ದಾನ ಮಾಡುವದು, ಮಕ್ಕಾದ ಯಾತ್ರೆಗೆ ಹೋಗುವದು.

೯. ಇಸ್ಲಾಮು ಧರ್ಮ ಗ್ರಂಥಗಳು :— ೧ † **ಕುರ್‌ಆನ್ ಷರೀಫ** (ದೇವರ ವಚನಗಳ ಸಂಗ್ರಹ). ೨. **ಹದೀಸ ಷರೀಫ** (ಪೈಗಂಬರರ ವಚನ

---

* "ಇಸ್ಲಾಮು ಧರ್ಮದ ಪ್ರಸಾರವು ಶಸ್ತ್ರದ ಬಲದಿಂದಲೇ ಆಗಿರದೆ, ಆದು ಸಮಾನವಾದ ಅಧಿಕಾರಗಳನ್ನು ಕೊಡೋಣ ಮತ್ತು ಪ್ರೇಮದ ವರ್ತನ ಇವುಗಳಿಂದ ಪ್ರಸಾರ ಹೊಂದಿತು" ಎಂದು ಡಾ. ಡಬ್ಲ್ಯು. ಟಿ. ಆರ್ನೋಲ್ಡರೆಂಬವರು 'ಪ್ರೀಚಿಂಗ ಆಫ್ ದಿ ಇಸ್ಲಾಮು' ಎಂಬ ಗ್ರಂಥದಲ್ಲಿ ಬರೆದಿರುವರು.

† ಕುರ್‌ಆನ್ ಷರೀಫವು "ನಿಷ್ಕಪಟತನ, ಔದಾರ್ಯ, ಶಾಂತತೆ, ಸಹನಶಕ್ತಿ, ಸತ್ಯತೆ, ಮಿತವ್ಯಯ, ವಿನಯ, ಪ್ರೇಮದ ವರ್ತನ, ನಿಷ್ಕಾಮ ಪ್ರೀತಿ, ಪರಮಾನತ್ಮಲ್ಲಿ ಶ್ರದ್ಧೆ ಎಂಬ ಗುಣಗಳಿಂದ ಕೂಡಿರುವವನೇ ನಿಜವಾದ ಮುಸಲ್ಮಾನನು" ಎಂದು ಹೇಳುತ್ತದೆ.

ಚೇಂಬರ್ಸ ಇನ್ ಸಾಯಕ್ಲೋ ಪೇಡಿಯಾ.

ಗಳು.) **ಫಿಕ್ಹಾ** (ಕುರ್‌ಆನ್ ಮತ್ತು ಹದೀಸಗಳ ಆಧಾರದಿಂದ ಬರೆದ ಟೀಕಾಗ್ರಂಥ) ೪. **ಫತವಾ** (ಧಾರ್ಮಿಕ ನಿರ್ಣಯಗಳ ಸಂಗ್ರಹ) ಇವು ನಾಲ್ಕು ಧರ್ಮಗ್ರಂಥಗಳಾಗಿವೆ. ಇವುಗಳಲ್ಲಿ ಕುರ್‌ಆನವೇ ಶ್ರೇಷ್ಠವು.

೨ನೆಯ ಪಾಠ

ಖಲೀಫರು

ಪೈಗಂಬರರ ತರುವಾಯ ಜನರಿಂದ ಆರಿಸಲ್ಪಟ್ಟ ಹಜರತ **ಅಬುಬಕರನು** ಸರ್ವಾಧಿಕಾರಿಯಾದನು. ಇವನು ಆಲೋಚನಾ ಮಂಡಲದ ಸಹಾಯದಿಂದ ಧಾರ್ಮಿಕ, ಸಾಮಾಜಿಕ, ರಾಜಕೀಯ ಕಾರ್ಯಗಳನ್ನು ನೆರವೇರಿಸುತ್ತಿದ್ದನು ಈ ಸರ್ವಾಧಿಕಾರಿಗೆ '**ಖಲೀಫ**' ಎಂಬ ಹೆಸರು ಹಜರತ ಅಬೂಬಕರನ ತರುವಾಯ ಹಜರತ **ಉಮರ, ಉಸ್ಮಾನ, ಅಲಿ** ಎಂಬ ಮೂವರು ಖಲೀಫರು ಜನರಿಂದಲೆ ಆರಿಸಲ್ಪಟ್ಟು, ಒಬ್ಬರಬಳಿಕೊಬ್ಬರು ಅಧಿಕಾರವನ್ನು ಸಾಗಿಸಿದರು. ಈ ನಾಲ್ವರು ಖಲೀಫರು ಪರಾಕ್ರಮದಿಂದ ಮುಸಲ್ಮಾನರ ವರ್ಚಸ್ಸನ್ನು ನೆಲೆಗೊಳಿಸಿದರು. ೨ನೆಯ ಖಲೀಫನಾದ ಉಮರನು **ಏರೂಸಲೇಮ್** ಪ್ರಾಂತವನ್ನೂ, ಆತನ ಗವ್ಹರ್ನರನಾದ **ಉಮರ ಇಬ್ನೇಆಸನು** ಇಜಿಪ್ತುವನ್ನೂ ವಶಪಡಿಸಿಕೊಂಡರು. ಹಜರತ ಉಮರನು ತನ್ನ ವಶಕ್ಕೆ ಬಂದ ದೇಶದ ಪ್ರಜೆಗಳಿಗೆ ಅವರವರ ಧರ್ಮದಂತೆ ನಡೆಯಲು ಸ್ವಾತಂತ್ರ್ಯವನ್ನು ಕೊಟ್ಟನು. ಈ ನಾಲ್ವರು ಖಲೀಫರ ಕಾಲದಲ್ಲಿ ಇರಾಣ, ತುರ್ಕಸ್ತಾನ, ಅಫಗಾಣಿಸ್ತಾನ, ಮಧ್ಯಏಶಿಯಾ, ಉತ್ತರ ಆಫ್ರಿಕ ಈ ದೇಶಗಳಲ್ಲಿ ಮುಸಲ್ಮಾನರ ರಾಜ್ಯವು ಹಬ್ಬಿತು ಇವರು ನಡೆಸಿದ ಕಾರಭಾರವು ಪೈಗಂಬರರು ಹಾಕಿಕೊಟ್ಟ * ನಿರ್ಬಂಧಗಳನ್ನು

---

* ಪೈಗಂಬರರು ತಮ್ಮ ತರುವಾಯ ಅಧಿಕಾರ ಪಡೆಯತಕ್ಕ ಖಲೀಫರ ವಿಷಯವಾಗಿ ಕೆಳಗೆ ಬರೆದ ನಿರ್ಬಂಧಗಳನ್ನು ಗೊತ್ತುಮಾಡಿದ್ದರು. ಅವುಗಳ ಸಾರಾಂಶ:— ೧. ಖಲೀಫರು ಜನರ ಬಹು ಮತದಿಂದ ಆರಿಸಲ್ಪಡಬೇಕು. ೨. ಎಲ್ಲ ಅಧಿಕಾರ್ಯಗಳನ್ನು ಆಲೋಚನಾ ಮಂಡಲದ ಅಭಿಪ್ರಾಯದಂತೆ ಸಾಗಿಸತಕ್ಕದ್ದು. ೩. ಖಲೀಫರು ಷರೀಯತ್ (ಇಸ್ಲಾಮೀ ಕಾನೂನು) ಗಳನ್ನು ಮೀರಿ ನಡೆ

ಅನುಸರಿಸಿಯೇ ಸಾಗಿದ್ದರಿಂದ ಒಟ್ಟಿನಮೇಲೆ ಇವರ ಆಳಿಕೆಯು ಬಲಾತ್ಕಾರ ಅನ್ಯಾಯ, ಪರಧರ್ಮಪೀಡೆ ಈ ದೋಷಗಳ ಸೆಂಪರ್ಕವಿಲ್ಲದ್ದಾಗಿತ್ತೆಂದು ತೋರುವದು. ಇವರೆಲ್ಲರು ಒಳ್ಳೆಯ ಪ್ರಜಾಹಿತದಕ್ಷರಾಗಿದ್ದರು

ಈ ನಾಲ್ವರ ತರುವಾಯ **ಮುಆವಿಯಾ** ಎಂಬ ಸರದಾರನು ಜನಮತವನ್ನು ಲೆಕ್ಕಿಸದೆ ಸ್ವಪರಾಕ್ರಮದಿಂದ ಖಲೀಫರ ಪಟ್ಟವನ್ನು ಆಕ್ರಮಿಸಿದನು. ಅಂದಿನಿಂದ ಖಲೀಫರ ವಿಷಯವಾದ ನಿರ್ಬಂಧಗಳು ಶಿಥಿಲವಾದವು **ಬನೂ ಉಮಿಯಾ, ಬನೂ ಅಬ್ಬಾಸಿಯಾ** ಎಂಬ ಬೇರೆ ಬೇರೆ ಖಿಲಾಪತ ಪಟ್ಟಗಳು ಉಂಟಾದವು. ಮತ್ತು **ಷಿಯಾ, ಸುನ್ನಿ** ಎಂಬ ಎರಡು ಮುಖ್ಯ ಪಂಥಗಳು ಹುಟ್ಟಿದವು. ಷಿಯಾ ಪಂಥದವರು ಕಡೆಯ ಖಲೀಫನಾದ ಹಜರತ ಅಲಿಯನ್ನಷ್ಟೇ ಮನ್ನಿಸುವರು. ಸುನ್ನಿ ಪಂಥದವರು ನಾಲ್ವರು ಖಲೀಫರನ್ನೂ ಮನ್ನಿಸುವರು. ಹಿಂದುಸ್ಥಾನದೊಳಗಿನ ಬಹುತರ ಎಲ್ಲ ಮುಸಲ್ಮಾನರು ಸುನ್ನಿ ಪಂಥದವರಿರುವರು.

ಬನೂ ಅಬ್ಬಾಸಿಯಾ ಖಲೀಫರು **ಸ್ಪೇನಿ**ದ ವರೆಗೆ ರಾಜ್ಯವನ್ನು ವಿಸ್ತರಿಸಿ ಅಲ್ಲಿ ಏಳೂನೂರು ವರ್ಷಗಳ ವರೆಗೆ ಆಳಿದರ. ಇವರಲ್ಲಿಯ ಪ್ರಸಿದ್ಧನಾದ **ಹಾರೂನ ಉಲ್ ರಷೀದ**ನ ಕಾಲಕ್ಕೆ ಹೋಕಾಯಂತ್ರ, ಗಡಿಯಾರ ಶಸ್ತ್ರಕ್ರಿಯೆ, ಜ್ಯೋತಿಷ್ಯ, ಬೀಜಗಣಿತ ಈ ಶಾಸ್ತ್ರಗಳ ಸಂಬಂಧವಾದ ಅನೇಕ

ದರೆ ಅವರನ್ನು ಕಿತ್ತಿ ಹಾಕುವ ಅಧಿಕಾರವು ಜನರಿಗಿದೆ. ೪ ಪ್ರಜೆಗಳು ಪಕಮತದಿಂದ ನಿರ್ಣಯಿಸಿದ ಸಂಬಳವನ್ನೇ (ಜಕಾತ) ಖಲೀಫರು ತಕ್ಕೊಳ್ಳಬೇಕು. ಮುಸಲ್ಮಾನರು ೧೦೦ಕ್ಕೆ ೭॥ ಯಂತೆ ಉತ್ಪನ್ನದ ಮೇಲಿನ ಕರವನ್ನೂ ಭೂಮಿಯ ಉತ್ಪನ್ನದ ಒಂದು ಹತ್ತಾಂಶದಷ್ಟು (ಆಷರಾ) ಕಂದಾಯವನ್ನೂ ಕೊಡಬೇಕು. ಅವಶ್ಯಸಿದ್ದಲ್ಲಿ ಫಿತರಾ (೧। ಶೇರು ಗೋದಿ), ಸದಕಾ ಮತ್ತು ಆಶಿಯಾ (ಕಾಣಿಕೆ) ಎಂಬ ಕರಗಳನ್ನೂ ಕೊಡತಕ್ಕದ್ದು. ೫. ಮುಸಲ್ಮಾನೇತರರು ಇಚ್ಛೆಯಿದ್ದರೆ ಸೈನ್ಯದಲ್ಲಿ ಸೇರಬೇಕು. ಸೈನ್ಯದಲ್ಲಿ ಸೇರದೆ ಇದ್ದವರು ವರ್ಷಕ್ಕೊಮ್ಮೆ (ಸ್ತ್ರೀಯರು, ಗುಲಾಮರು, ೧೪ವರ್ಷದ ಒಳಗಿನ ಗಂಡುಮಕ್ಕಳನ್ನು ಹೊರತುಪಡಿಸಿ) ಜಜಿಯಾ ಕರವನ್ನು ಕೊಡಬೇಕು. ಅದರ ಕ್ರಮ— ಶ್ರೀಮಂತರು ತಲೆಗೆ ೧೪ತೊಲೆ, ಮಧ್ಯಮಸ್ಥಿತಿಯವರು ೭ ತೊ ಬಡವರು ೩॥ ತೊ. ಬೆಳ್ಳಿಯನ್ನು ಕೊಡಬೇಕು ಈ ಕರದ ಹಣವು ಮುಸಲ್ಮಾನೇತರರ ವಿತ್ತ-ಜೀವಿತ-ಧರ್ಮ-ಳ ಸಂರಕ್ಷಣೆಗಾಗಿ ಉಪಯೋಗಿಸಲ್ಪಡಬೇಕು. ೬. ಅರಣ್ಯ, ಸಮುದ್ರ ಇವುಗಳಿಂದ ದೊರೆಯುವ ಪದಾರ್ಥಗಳ ಮೇಲೆ ಕರವನ್ನು ಎತ್ತಬಾರದು.

ಆಯಿನಯೆ ಹಕೀಕತ್‌ನುಮಾ (ಸಿಜದರ್ಶಕ ಕನ್ನಡ ಭಾಗ ೧ ಪುಟ ೨೬.)

ಶೋಧಗಳುಂಟಾದವು. ಮುಂದೆ ಇವರಿಂದಲೆ ಯುರೋಪದವರು ಈ ವಿದ್ಯೆ-ಕಲೆಗಳನ್ನು ಆರಿತುಕೊಂಡರು.

೩ನೆಯ ಪಾಠ

ಹಿಂದುಸ್ಥಾನದಲ್ಲಿ ಅರಬರ ಪ್ರವೇಶ

೧. **ಸಾಮಾನ್ಯ ವಿಚಾರ:—** ಪರಾಕ್ರಮಿಗಳಾದ ಮುಸಲ್ಮಾನ ಅರಬರು ಸಿರಿಯಾ, ಇರಾಣ, ಏಶಿಯಾಮೈನರ, ಉತ್ತರ ಆಫ್ರಿಕಾ ಮುಂತಾದ ದೇಶ-ಗಳನ್ನು ಆಕ್ರಮಿಸಿ, ಅಲ್ಲಿ ತಮ್ಮ ಅಧಿಕಾರ, ಧರ್ಮ, ಸಂಸ್ಕೃತಿ ಇವನ್ನು ಹಬ್ಬಿಸಿದರು. ಇವರು ಕ್ರಿ ಶ ೬೩೨ ರಿಂದ ೧೬೫೮ ರ ವರೆಗೆ ವೈಭವದಿಂದ ಸಾಮ್ರಾಜ್ಯವನ್ನು ಆಳಿದರು. ರಾಜಧಾನಿಗಳಾಗಿದ್ದ **ದಮಸ್ಕಸ, ಬಗದಾದ** ಈ ಪಟ್ಟಣಗಳು ಒಳ್ಳೆಯ ಪ್ರಸಿದ್ಧಿಯನ್ನು ಹೊಂದಿದ್ದವು.

ಅರಬರು ಪ್ರವೇಶಿಸಿದಾಗ ಸಿರಿಯಾ ಮುಂತಾದ ದೇಶಗಳಲ್ಲಿಯ ಧರ್ಮ ಸಂಸ್ಕೃತಿ ಇವು ಸುಸ್ಥಿತಿಯಲ್ಲಿ ಇದ್ದಿಲ್ಲ. ಆದದರಿಂದ ಅರಬಸ್ತಾನವನ್ನು ಊರ್ಜಿತ ಸ್ಥಿತಿಗೆ ತಂದ ಮುಸಲ್ಮಾನೀ ಧರ್ಮವು ಆ ದೇಶದವರ ಮನಸ್ಸನ್ನು ಎಳೆದುಕೊಂಡಿತು. ಆಧೀನರಾದ ಮುಸಲ್ಮಾನೇತರರು † **ಜಜಿಯಾ** ಕರವನ್ನು ಕೊಟ್ಟು ಅವರು ತಮ್ಮ ಧರ್ಮವನ್ನು ಅನುಸರಿಸಿ ನಡೆಯಬಹುದಾಗಿತ್ತು. ಮುಸಲ್ಮಾನರಾದವರೊಡನೆ ಅರಬರು ಭೇದಭಾವವಿಲ್ಲದೆ ಪ್ರೇಮದಿಂದ ಬಳಕೆ ಮಾಡಹತ್ತಿದರು ಮುಸಲ್ಮಾನೇತರರು ಸೈನ್ಯದಲ್ಲಿ ಸೇರಲೇಬೇಕೆಂಬ ಒತ್ತಾಯ ವಿದ್ದಿಲ್ಲ. ಸುಲಿಗೆಯಲ್ಲಿ ಸಿಕ್ಕ ಸಂಪತ್ತಿನ ಭಾಗವು ಸೈನಿಕರಲ್ಲಿ ಹಂಚಲ್ಪಡುತ್ತಿ-

---

†ಮುಸಲ್ಮಾನರ ಆಳಿಕೆಯ ಕಾಲಕ್ಕಿಂತ ಮೊದಲು ಪರ್ಶಿಯನ್ ರಾಜರು ಇರಾಣದಲ್ಲಿ ಮತ್ತು ಬೇರೆ ಪ್ರದೇಶಗಳಲ್ಲಿ ಪರ್ಶಿಯನ್ನರ ಹೊರತುಪಡಿಸಿ ಉಳಿದ ಜಾತಿಯವರಿಂದ "ಜಜಿಯಾ" ಎಂಬ ಕರವನ್ನು ಎತ್ತುತ್ತಿದ್ದರು. ಮುಸಲ್ಮಾನರು ರೂಢಿಯಲ್ಲಿದ್ದ ಈ ಕರವನ್ನು "ಜಜಿಯಾ" ಎಂಬ ಹೆಸರಿನಿಂದ ಎತ್ತಹತ್ತಿದರು.

ಬಾಂಬೆ ಗವ್ಹರ್ನಮೆಂಟ, ಮುಖ್ತಸರ ತಾರೀಖ್-ಹಿಂದ, ಪುಟ ೧೬೨.

ದ್ದದರಿಂದ ಶೂರರಾದ ಸೈನಿಕರ ಕೊರತೆಯು ಎಂದೂ ಉಂಟಾಗುತ್ತಿರಲಿಲ್ಲ. ಅರಸರ ಪ್ರೀತಿಯನ್ನು ಸಂಪಾದಿಸಿ ಅಧಿಕಾರ-ಮಾನ-ಧನಗಳನ್ನು ಪಡೆಯುವ ಇಚ್ಛೆಯುಳ್ಳ ಅನೇಕರು ತಾವಾಗಿಯೆ ಮುಸಲ್ಮಾನರಾಗುತ್ತಿದ್ದರು. ಆದದರಿಂದ ಮೇಲ್ಕಾಣಿಸಿದ ದೇಶಗಳನ್ನು ಅರಬರು ವಶಪಡಿಸಿಕೊಂಡಬಳಿಕ, ಧರ್ಮ ಪ್ರಸಾರಕ್ಕೆಂದು ಶಸ್ತ್ರವನ್ನು ಉಪಯೋಗಿಸುವ ಅಗತ್ಯವೇ ಇರಲಿಲ್ಲ. "ಅರಬರ ಮುತ್ಸದ್ದಿತನ, ಮುಸಲ್ಮಾನೀ ಧರ್ಮದ ಸಮಾನತೆಯ ತತ್ವ ಮತ್ತು ಆ ದೇಶ ಗಳಲ್ಲಿಯ ಅನುಕೂಲ ಪರಿಸ್ಥಿತಿ ಈ ಕಾರಣಗಳಿಂದ ಆ ಧರ್ಮವು ಒತ್ತರದಿಂದ ಹಬ್ಬಿತು." ಎಂದು **ಡಾಕ್ಟರ್ ಗುಸ್ತಾವಲಿ ಫ್ರಾನ್ಸಿಸ್**ನೆಂಬವನು **ಅರಬಸ್ತಾನದ ಸುಧಾರಣೆ'** ಎಂಬ ಗ್ರಂಥದಲ್ಲಿ ಬರೆದಿರುವನು.

ಅರಬರಿಗೆ ಹಿಂದುಸ್ಥಾನದ ಪರಿಚಯವು ಚೆನ್ನಾಗಿತ್ತು. ಅವರು **ಮುಂಗಳೂರು, ಮಲಬಾರ, ಲಖದೀವ, ಮಾಲದೀವ,** † **ಸಿಂಹಳದ್ವೀಪ**ಗಳವರೆಗೆ ವ್ಯಾಪಾರದ ನಿಮಿತ್ತದಿಂದ ಬಂದು ವಾಸವಾಗಿದ್ದರು. ಕ್ರಿ ಶ. ೬ನೆಯ ಶತಮಾನದಲ್ಲಿ ೨ನೆಯ ಖಲೀಫನಾದ ಹಜರತ **ಉಮರನು ಸುರತ, ಬಡೋಚ**ಗಳಿಗೆ ಬಂದಿದ್ದನೆಂದು ತಿಳಿಯುವದು ಹಿಂದುಸ್ಥಾನದಲ್ಲಿ ಹಿಂದು ಧರ್ಮವೂ ಹಿಂದು ಸಂಸ್ಕೃತಿಯೂ ಸಾವಿರಾರು ವರ್ಷಗಳಿಂದ ತಲೆಯೆತ್ತಿ ಬಾಳಿ ಸ್ಥಿರಗೊಂಡಿದ್ದವು ಪ್ರಜಾಹಿತದಕ್ಷರಾದ ಅರಸರು ದೇಶವನ್ನು ಆಳುತ್ತಿದ್ದರು. ಹೀಗೆ ಪರಿಸ್ಥಿತಿಯಿರುವಾಗ ಹಿಂದುಸ್ಥಾನವನ್ನು ಆಕ್ರಮಿಸುವದು ತಿಳಿದು ಅಸಾಧ್ಯವೆಂದು ಅರಬರು ತಮ್ಮ ಮಹತ್ವಾಕಾಂಕ್ಷೆಯನ್ನು ಹತ್ತಿಕ್ಕಿಕೊಂಡು ತಕ್ಕ ಕಾಲವನ್ನು ನಿರೀಕ್ಷಿಸುತ್ತಿದ್ದರು. ಇಂಥ ಒಂದು ಅನುಕೂಲ ಕಾಲವು ಮುಂದೆ ೧೫೦ ವರ್ಷಗಳ ತರುವಾಯ ಎಂದರೆ ಕ್ರಿ ಶ. **೭೧೨**ರಲ್ಲಿ ಒದಗಿತು.

೨. ಅರಬರು ಸಿಂಧಪ್ರಾಂತದ ಮೇಲೆ ಸಾಗಿಬಂದದ್ದು:— ಖಲೀಫರ ವಿರುದ್ಧವಾಗಿ ಬಂಡಾಯ ಮಾಡಿದ **ಮಹಮ್ಮದ ಬಿನ್ ಅಲಾಫಿ** ಎಂಬವನನ್ನು ಅವರು ದೇಶದಿಂದ ಹೊರಗೆ ಹಾಕಿದ್ದನು. ಆ ಮಹಮ್ಮದನು ತನ್ನ ಅನುಯಾಯಿಗಳೊಂದಿಗೆ ಸಿಂಧಪ್ರಾಂತಕ್ಕೆ ಬಂದು ಅಲ್ಲಿಯ ಅರಸನಾದ **ದಾಹರನ** ಆಶ್ರಯವನ್ನು ಪಡೆದು, ಸೈನ್ಯದ ಒಬ್ಬ ಅಧಿಕಾರಿಯಾಗಿದ್ದನು.

† ಸಿಂಹಳದ್ವೀಪದ ಅರಸನು ಮುಸಲ್ಮಾನೀ ಧರ್ಮವನ್ನು ಸ್ವೀಕರಿಸಿದ್ದನೆಂದು ಫೇರಿಸ್ತನೆಂಬ ಇತಿಹಾಸಕಾರನು ಬರೆದಿರುವನು.

ಆ ಸಮಯದಲ್ಲಿ ಸಿಂಹಲದ್ವೀಪದಿಂದ ಮಕ್ಕಾಯಾತ್ರೆಗಾಗಿ ಹೊರಟ ಯಾತ್ರಿಕರ ಹಡಗಗಳು ಬಿರುಗಾಳಿಯ ಮೂಲಕ ದಾರಿತಪ್ಪಿ ಸಿಂಧಪ್ರಾಂತದ **ದೇವಲ** ಬಂದರಕ್ಕೆ ಹತ್ತಿದವು. ಆಗ ಅಲ್ಲಿದ್ದ **ಚಾಂಚಿಯೂ** ಜನರು ಮುಸಲ್ಮಾನ ಯಾತ್ರಿಕರನ್ನು ಸುಲಿದು ಸೆರೆಹಿಡಿದರು. ಈ ಸುದ್ದಿಯು ಖಲೀಫನಿಗೆ ತಿಳಿಯಲು ಅವನು ಸಿಂಧದ ಅರಸನಾದ ದಾಹರನಿಗೆ 'ಯಾತ್ರಿಕರನ್ನು ಬಂಧಮುಕ್ತರನ್ನಾಗಿ ಮಾಡಿ ಅವರ ಹಾನಿಯನ್ನು ತುಂಬಿಕೊಡಬೇಕು' ಎಂದು ಹೇಳಿಕಳುಹಿದನು. ಖಲೀಫರ ವೈರಿಯಾದ ಮಹಮ್ಮದ ಬಿನ್ ಅಲಾಫಿಯ ಮಬ್ಬಿಗೆ ಬಿದ್ದು ದಾಹರನು ಖಲೀಫನ ಬೇಡಿಕೆಗಳನ್ನು ಲಕ್ಷಿಸಲಿಲ್ಲ. ಆಗ ಖಲೀಫನು **ಮಹಮ್ಮದ ಬಿನ್ ಕಾಸೀಮ**ನೆಂಬ ಶೂರ ಸರದಾರನನ್ನು ದಂಡಿನೊಡನೆ ಸಿಂಧಪ್ರಾಂತದ ಮೇಲೆ ಕಳುಹಿದನು.

೩. **ಸಿಂಧಪ್ರಾಂತವು ಅರಬರ ವಶವಾದದ್ದು**:— ಮಹಮ್ಮದ ಬಿನ್ ಕಾಸೀಮನು ೧೨ ಸಾವಿರ ಸೈನ್ಯದೊಡನೆ ಮೆಕ್ರಾನ, ಬಲುಚಿಸ್ತಾನ ಇವುಗಳ ಮಾರ್ಗವಾಗಿ ಸಿಂಧಪ್ರಾಂತವನ್ನು ನುಗ್ಗಿದನು ಸರಹದ್ದ ಪ್ರಾಂತದ ಸರದಾರನಾದ **ಮಹಮ್ಮದ ಬಿನ್ ಹಾರೂ**ನನು ೩ ಸಾವಿರ ಸೈನ್ಯದೊಡನೆ ಇವನನ್ನು ಕೂಡಿಕೊಂಡನು. ಅರಬರ ಸೈನ್ಯವು ಸಿಂಧುನದವನ್ನು ದಾಟಿಬರಲು ದಾಹರನ ಮಗನಾದ **ಜಯಸಿಂಹ**ನು ಅವರಿಗೆ ಇದಿರಾಗಿ ಕಾದಿ ಸೋತನು ಬಳಿಕ ದೇವಲ ಮತ್ತು ಬ್ರಾಹ್ಮಣಾಬಾದ ಇವುಗಳ ನೆರೆಯಲ್ಲಿ ಮಹಮ್ಮದ ಬಿನ್ ಕಾಸೀಮನಿಗೂ ದಾಹರನಿಗೂ ಭಯಂಕರವಾದ ಕಾಳಗವೆಸಗಿತು; ದಾಹರನು ಹತನಾದನು. ದಾಹರನ ಹೆಂಡತಿಯು ಶೌರ್ಯದಿಂದ ಕಾದಿ ಕಡೆಗೆ ಅಗ್ನಿ ಪ್ರವೇಶಮಾಡಿದಳು. ಬಳಿಕ ದಾಹರನ ಸೈನ್ಯವು ಭಯಂಕರವಾದ ಕೊಲೆಗೆ ಈಡಾಯಿತು. ಮುಖ್ಯ ಪ್ರಧಾನನಾದ **ಸೀಸಾಗರ**ನು ಆಯತವೇಳೆಗೆ ಅರಬರನ್ನು ಕೂಡಿಕೊಂಡನು! ಧೂರ್ತನಾದ ಮಹಮ್ಮದ ಬಿನ್ ಅಲಾಫಿಯು ಅರಬರೊಡನೆ ಯುದ್ಧಮಾಡದೆ ಕಾಲ್ದೆಗೆದನು!! ಜಯಶಾಲಿಯಾದ ಮಹಮ್ಮದ ಕಾಸೀಮನು **ಆಲೋರ** ರಾಜಧಾನಿಯನ್ನು ಕೈವಶಮಾಡಿಕೊಂಡು ಸಿಂಧಪ್ರಾಂತವನ್ನು ಖಲೀಫರ ರಾಜ್ಯಕ್ಕೆ ಕೂಡಿಸಿದನು. ಮತ್ತು ಸೀಸಾಗರನನ್ನೇ ಸಿಂಧದ ಸುಭೇದಾರನನ್ನಾಗಿ ನಿಯಮಿಸಿ ಖಲೀಫರ ಪದ್ಧತಿಯಂತೆ ರಾಜ್ಯಕಾರಭಾರವನ್ನು ಸಾಗಮಾಡಿದನು. ಇವನು ಮುಸಲ್ಮಾನೇತರರಿಂದ ಜಜಿಯಾ ಕರವನ್ನು ಎತ್ತಿ

ದನು. ಮುಸಲ್ಮಾನರಾಗಲು ಒತ್ತಾಯಪಡಿಸಲಿಲ್ಲ. ಹಿಂದುಗಳ † ದೇವಾಲಯಗಳಿಗಾಗಿ ೧೦೦ಕ್ಕೆ ೩ರಂತೆ ಖಜಾನೆಯಿಂದ ಹಣವನ್ನು ಖರ್ಚುಮಾಡಜೇಕೆಂದು ಗೊತ್ತುಮಾಡಿದನು. ಹಿಂದುಗಳಿಗೆ ಅಧಿಕಾರದ ಸ್ಥಳಗಳನ್ನು ಕೊಟ್ಟು ಅವರಿಂದ ಪ್ರಜಾಹಿತದ ಹಲವು ಕೆಲಸಗಳನ್ನು ಮಾಡಿಸಿದನು.

ಬಳಿಕ ಮಹಮ್ಮದ ಬಿನ್ ಕಾಶೀಮನು **ಮುಲತಾನ**ದ ಮೇಲೆ ಸಾಗಿ ಹೋಗಿ ಅದನ್ನು ಕೈವಶಮಾಡಿಕೊಂಡನು. ಅಲ್ಲಿಯ ರಜಪುತರು ಶೌರ್ಯದಿಂದ ಕಾದಿ ಹತರಾದರು. ರಜಪುತ ಸ್ತ್ರೀಯರು ಜೋಹರ ಮಾಡಿದರು ಅಲ್ಲಿಂದ ಇವನು ರಾಜಸ್ಥಾನದ ಕಡೆಗೆ ಸಾಗಿ **ಚಿತ್ತೂರ**ವನ್ನು ಮುತ್ತಹೋದನು. ಆಗ ಅಲ್ಲಿಯ ಶೂರ ಸೇನಾಪತಿಯಾದ **ಬಪ್ಪಾ ರಾವಳನು** ಅರಬರ ಸೈನ್ಯವನ್ನು ತಡೆದು ಅದನ್ನು ಸೋಲಿಸಿದನು ಆಗ ಮಹಮ್ಮದ ಬಿನ್ ಕಾಸೀಮನು ಮುಂದೆ ಸಾಗುವ ವಿಚಾರವನ್ನು ಬಿಟ್ಟು ಹಿಂದಿರುಗಿ ಸಿಂಧವನ್ನು ಸೇರಿದನು. ಹಿಂದುಸ್ಥಾನದಲ್ಲಿ ದೊರೆತ ಸಂಪತ್ತಿನ ಕೆಲವಂಶವನ್ನೂ ದಾಹರನ ಹೆಣ್ಣುಮಕ್ಕಳನ್ನೂ ಖಲೀಫನ ಕಡೆಗೆ ಕಳುಹಿದನು ಉಳಿವ ಸಂಪತ್ತನ್ನು ತಾನೂ ತನ್ನ ಸೈನಿಕರೂ ಹಂಚಿಕೊಂಡರು

೪. ಮಹಮ್ಮದ ಬಿನ್ ಕಾಸೀಮನ ಯೋಗ್ಯತೆ ಮತ್ತು ಕೊನೆ:— ಇವನು ಶೂರನೂ, ಕರ್ತವ್ಯದಕ್ಷನೂ, ರಾಜತಂತ್ರ ನಿಪುಣನೂ, ಸಾಹಸಿಯೂ ಆಗಿದ್ದನು ಪ್ರಜೆಗಳನ್ನು ಸಂತೋಷಗೊಳಿಸಿ ತನ್ನ ಉದ್ದೇಶವನ್ನು ಸಾಧಿಸುವ ಅರಬರ ಹಿಡಿತವು ಇವನಿಗೆ ಚೆನ್ನಾಗಿ ಸಾಧಿಸಿತ್ತು. ಬಪ್ಪಾ ರಾವಳನು ಇವನನ್ನು ತಡೆಯದಿದ್ದರೆ ಸಮರ್ಥರಾದ ಅರಬರ ರಾಜ್ಯವನ್ನು ಇವನು ಇನ್ನೂ ಹೆಚ್ಚಾಗಿ ಬೆಳೆಸುತ್ತಿದ್ದನೆಂದು ಹೇಳಬಹುದು. ಇವನು ಮರಳಿ ತನ್ನ ದೇಶಕ್ಕೆ ಹೋದಬಳಿಕ ಮುಂದಿನ ಖಲೀಫನಿಂದ ಕೊಲ್ಲಲ್ಪಟ್ಟನು. ದಾಹರನ ಹೆಣ್ಣುಮಕ್ಕಳು ಮಹಮ್ಮದನ ವಿರುದ್ಧವಾಗಿ ಖಲೀಫನ ಮನಸ್ಸನ್ನು ಕೆಡಿಸಿದ್ದೇ ಈ ಕೊಲೆಗೆ ಕಾರಣವಾಯಿತು. ಇವನ ಕೊಲೆಯಾದ ಬಳಿಕ ಆ ಹೆಣ್ಣುಮಕ್ಕಳು "ತಮ್ಮ ತಂದೆಯಾದ ದಾಹರನನ್ನು ನಾಶಗೊಳಿಸಿದ್ದರ ಸೇಡು ತೀರಿಸಿಕೊಳ್ಳುವ ದಕ್ಕಾಗಿ ಮಹಮ್ಮದನ ವಿರುದ್ಧವಾಗಿ ಸುಳ್ಳು ಹೇಳಿದೆವು." ಎಂದು ಖಲೀಫನಿಗೆ ತಿಳಿಸಿದರು. ಆಗ ಖಲೀಫನು ಸಿಟ್ಟಾಗಿ ಆ ಹೆಣ್ಣುಮಕ್ಕಳನ್ನೂ ಕೊಲ್ಲಿಸಿಬಿಟ್ಟನು.

† ಆಯಿನಾಯಿ ಹಕೀಕತ್‌ನುಮಾ (ನಿಜದರ್ಶಕಕನ್ನಡಿ) ಭಾಗ ೧ ಪುಟ ೧೦೩, ೧೦೭.

೫. ಅರಬರ ಆಳಿಕೆಯ ಸಿಂಹಾವಲೋಕನ.— ಮಹಮ್ಮದ ಬಿನ್ ಕಾಸೀಮನ ತರುವಾಯ ಅರಬರು ಯಾರೂ ಹಿಂದುಸ್ಥಾನದ ಮೇಲೆ ಸಾಗಿಬರಲಿಲ್ಲ. ಸಿಂಧಪ್ರಾಂತವು ಮಾತ್ರ ಮುಂದೆ ೧೨೫ ವರ್ಷಗಳ ವರೆಗೆ ಎಂದರೆ ಕ್ರಿ. ಶ. ೪೪೦ರ ವರೆಗೆ ಅರಬರ ಆಧೀನದಲ್ಲಿತ್ತು. ಅಷ್ಟರಲ್ಲಿ ಅಲ್ಲಿ ಮುಸಲ್ಮಾನೀ ಧರ್ಮವು ಹೆಚ್ಚಾಗಿ ಹಬ್ಬಿತು. ಮುಂದೆ ಅರಬರ ವರ್ಚಸ್ಸು ಕಡಿಮೆಯಾದುದರಿಂದ ಸಿಂಧಪ್ರಾಂತವು ಅರಬರಿಂದ ಸ್ವತಂತ್ರವಾಯಿತು. ಕ್ರಿ. ಶ. ೧೦ನೆಯ ಶತಮಾನದ ವರೆಗೆ ಅರಬರಾಗಲಿ ಬೇರೆ ಮುಸಲ್ಮಾನರಾಗಲಿ ಯಾರೂ ಹಿಂದುಸ್ಥಾನಕ್ಕೆ ಬರಲಿಲ್ಲ.

೪ನೆಯ ಪಾಠ

ಘಜ್ನಿಯ ಮಹಮ್ಮದ

(ಕ್ರಿ ಶ ೯೭೭ರಿಂದ ೧೦೨೭)

೧. ಸಾಮಾನ್ಯ ವಿಚಾರ:— ಅರಬರು ತುರ್ಕೀ ಜನರ ಶೌರ್ಯವನ್ನು ಕಂಡು ಅವರನ್ನು ತಮ್ಮ ಸೈನ್ಯದಲ್ಲಿ ಸೇರಿಸಿಕೊಳ್ಳಹತ್ತಿದರು. ಅರಬರ ಸಹವಾಸದಿಂದಲೂ ಮುಸಲ್ಮಾನರಾದ ಮೇಲೆ ದೊರೆಯುವ ಅಧಿಕಾರದ ಲೋಭದಿಂದಲೂ ಈ ತುರ್ಕರು ಮುಸಲ್ಮಾನೀ ಧರ್ಮವನ್ನು ಸ್ವೀಕರಿಸಿದರು. ಮತ್ತು ಬರಬರುತ್ತ ಪ್ರಬಲರಾಗಿ ದೊಡ್ಡ ದೊಡ್ಡ ಅಧಿಕಾರಗಳನ್ನು ಪಡೆದರು. ಅರಬರು ವಿಲಾಸಪ್ರಿಯರಾಗಿ ಒಳಜಗಳಗಳಿಂದ ದುರ್ಬಲರಾಗುತ್ತ ನಡೆದಂತೆ ತುರ್ಕರು ಪ್ರಬಲರಾಗಿ ಸ್ವತಂತ್ರವಾದ ರಾಜ್ಯಗಳನ್ನು ಸ್ಥಾಪಿಸಹತ್ತಿದರು.

ತುರ್ಕ, ಮೊಗಲ, ತಾರ್ತರ ಈ ಜನಾಂಗಗಳ ಮೂಲಸ್ಥಾನವು **ಮಧ್ಯ ಏಶಿಯವು.** ಇವರು ತಮ್ಮ ನುತ್ತು ತಮ್ಮ ದನಕರುಗಳ ಉಪಜೀವನದ ಅನುಕೂಲ ಸ್ಥಳಗಳನ್ನು ಹುಡುಕುತ್ತ ಅಲ್ಲಲ್ಲಿ ತಿರುಗಾಡುತ್ತಿದ್ದರು. ಮೂಲತ: ಇವರು ಕ್ರೂರ ಸ್ವಭಾವದವರು. ಕೊಳ್ಳೆ, ಕೊಲೆ, ಸುಲಿಗೆ ಮುಂತಾದ ಹಾವಳಿಗಳಿಂದ ಸುಸ್ಥಿತಿಯನ್ನು ನಾಶಗೊಳಿಸುವ ಚಟದವರು. ಮುಂದೆ ಇವರು ಮುಸಲ್ಮಾನೀ ಧರ್ಮವನ್ನು ಸ್ವೀಕರಿಸಿದ್ದರಿಂದಲೂ ರಾಜ್ಯಗಳನ್ನು ಸುಸೂತ್ರವಾಗಿ ಕಾದುಕೊಳ್ಳಬೇಕಾದುದರಿಂದಲೂ ಕೆಲಮಟ್ಟಿಗೆ ಸೌಮ್ಯ ಸ್ವಭಾವದವರಾದರು. ಆದರೂ ನಡುನಡುವೆ ಕೆಲ ಕೆಲವರು ತಮ್ಮ ವಂಶದ ಮೂಲ

ಸ್ವಭಾವಕ್ಕೆ ತಕ್ಕಂತಹ ಭೀಕರವಾದ ಅನೇಕ ಕ್ರೂರ ಕೃತ್ಯಗಳನ್ನು ಮಾಡದೆ ಇರಲಿಲ್ಲ. ಅರಬ, ಮುಸಲ್ಮಾನ, ಮತ್ತು ತುರ್ಕ ಮುಂತಾದ ಉಳಿದ ಮುಸಲ್ಮಾನ ಇವರಲ್ಲಿಯ ಈ ವೈಷಮ್ಯವು ಹೀಗೆ ಒಡೆದುಕಾಣಿಸುವಂತಹದಾಗಿದೆ.

೨. **ಅಲಪ್ತಗೀನ**:— (ಕ್ರಿ. ಶ. **೯೬೨-೯೭೬**) ತಾರ್ತರ ಅಥವಾ ತುರ್ಕ ಮನೆತನದ ಜನೆಯ ಸುಲ್ತಾನನಾದ **ಅಬ್ದುಲ್ ಮಲೀಕ**ನೆಂಬವನು **ಬುಖಾರಾ** ಪಟ್ಟಣದಲ್ಲಿ ರಾಜ್ಯವಾಳುತ್ತಿದ್ದನು ಶೂರನೂ ಚತುರನೂ ಆದ **ಅಲಪ್ತಗೀನ**ನು ಈ ಸುಲ್ತಾನನ ವಶದಲ್ಲಿದ್ದ **ಖೋರಾಸಾನ** ಪ್ರಾಂತದ ಸುಭೇದಾರನಿದ್ದನು. ಈ ಅಲಪ್ತಗೀನನು ಸುಲ್ತಾನನ ಮರಣದ ತರುವಾಯ ಸ್ವತಂತ್ರನಾಗಿ ೯ ವರ್ಷ ರಾಜ್ಯವಾಳಿ ಮರಣಹೊಂದಿದನು. ಕ್ರಿ ಶ. **೯೭೬.**

೩. **ಸಬಕ್ತಗೀನ**:- (ಕ್ರಿ. ಶ. **೯೭೬-೯೯೭**). ಮೊದಲು ಅಲಪ್ತಗೀನನ ಗುಲಾಮನಾಗಿದ್ದು ತರುವಾಯ ಅಳಿಯನಾದ ಈ **ಸಬಕ್ತಗೀನ**ನು ಕ್ರಿ. ಶ. ೯೭೬ರಲ್ಲಿ ಅರಸನಾದನು. ಇವನು ಹಿಂದುಸ್ಥಾನದ ಮೇರೆಯ ವರೆಗೆ ತನ್ನ ರಾಜ್ಯವನ್ನು ಬೆಳೆಯಿಸಿದನು. **ವಹಿಂದ**ದಲ್ಲಿ ಆಳುತ್ತಿದ್ದ ಪಂಜಾಬದ **ಜಯಪಾಲ**ನು. ಸಬಕ್ತಗೀನನು ಪ್ರಬಲನಾಗಿ ಹಿಂದುಸ್ಥಾನಕ್ಕೆ ಬರಬಹುದೆಂದು ಎಣಿಸಿ, ಮಿತ್ರರಾಜರ ಸಹಾಯದಿಂದ ಅವನ ಮೇಲೆ ಸಾಗಿಹೋದನು. ಆದರೆ ಜಯಪಾಲನಿಗೆ ಜಯ ದೊರೆಯದೆ ಇದ್ದುದರಿಂದ ಕಪ್ಪವನ್ನು ಕೊಡಲೊಪ್ಪಿ ಹಿಂದಿರುಗಿ ಬಂದನು. ಮರು ವರ್ಷ ಕಪ್ಪವನ್ನು ಕೊಡದೆ ಇದ್ದುದರಿಂದ ಸಬಕ್ತಗೀನನೇ ಜಯಪಾಲನ ಮೇಲೆ ಸಾಗಿಬಂದು ಅವನನ್ನು ಪುನಃ ಸೋಲಿಸಿದನು. ಪಂಜಾಬ ಪ್ರಾಂತದ **ಕಾಬೂಲ** ಪಟ್ಟಣವೂ **ಖೈಬರಘಟ್ಟ**ವೂ ಮುಸಲ್ಮಾನರ ಕೈಸೇರಿದವು. ಮುಂದೆ ಇದೇ ಖೈಬರಘಟ್ಟದ ಮಾರ್ಗವಾಗಿ ಮುಸಲ್ಮಾನರು ಹಿಂದುಸ್ಥಾನಕ್ಕೆ ಬರಲು ಅನುಕೂಲವಾಯಿತು. ಸಬಕ್ತಗೀನನು ಕ್ರಿ. ಶ. ೯೯೭ರಲ್ಲಿ ಮರಣಹೊಂದಿದನು.

ಸುಲ್ತಾನ ಮಹಮೂದ:— (ಕ್ರಿ. ಶ. **೯೯೭**ರಿಂದ **೧೦೩೦**) ಸಬಕ್ತಗೀನನ ತರುವಾಯ ಅವನ ಮಗನಾದ ಮಹಮೂದನು ಪಟ್ಟಕ್ಕೆ ಬಂದನು. ಇವನು ಬುಖಾರಾದ **ಸಾಮಾನೀ** ವಂಶದ ಸುಲ್ತಾನನ ಮೇಲೆ ಸಾಗಿಹೋಗಿ ಎರಡು ವರ್ಷಗಳ ವರೆಗೆ ಕಾದಿ, **ಬಲಖ್, ಖೋರಾಸಾನ** ಪ್ರಾಂತಗಳನ್ನು

ವಶಪಡಿಸಿಕೊಂಡು **ಸೇಸ್ತಾನ**ದ ಸುಲ್ತಾನನನ್ನು ಸೆರೆಹಿಡಿದು ಗಿಝ್ನಿಗೆ ಬಂದು ತಾನೇ ಸುಲ್ತಾನನೆನಿಸಿ ಆಳಹತ್ತಿದನು. ಇವನ ವಶಕ್ಕೆ ಬಂದ ಪ್ರದೇಶದ ವೀರವೃತ್ತಿಯ ಜನರೆಲ್ಲರು ಇವನಿಗೆ ಇದಿರಾಗಿ ನಿಂತು ಕೊಲ್ಲಲ್ಪಟ್ಟರು. ಉಳಿದವರಲ್ಲಿ ಅನೇಕರನ್ನು ಇವನು ಇರಾಣಕ್ಕೆ ಒಯ್ದು ಗುಲಾಮರಂತೆ ಮಾರಿ ದ್ರವ್ಯವನ್ನು ಕೂಡಹಾಕಿದನು. ರಾಜ್ಯವಿಸ್ತಾರವನ್ನೂ ಧರ್ಮಪ್ರಸಾರವನ್ನೂ ಮಾಡುವ ಹೆಂಬಲವು ಇವನಲ್ಲಿ ವಿಶೇಷವಾಗಿತ್ತು.


ಹಿಂದುಸ್ಥಾನದ ಅರಸರಲ್ಲಿ ಒಕ್ಕಟ್ಟು ಇಲ್ಲದಿರುವ ಸಂಗತಿಯು ಇವನಿಗೆ ಗೊತ್ತಿತ್ತು. ಆದದರಿಂದ ಸಂಘಶಕ್ತುಳ್ಳ ಈ ದೇಶವನ್ನು ಸುಲಿದು ಐಶ್ವರ್ಯವನ್ನು ದೊರಕಿಸುವ ನಿಮಿತ್ತದಿಂದ ೧೭ ಸಾರೆ ದೌಡುಗಳನ್ನು ಮಾಡಿದನು.

೧ನೆಯ ದೌಡು:— ಪಂಜಾಬದ ಅರಸನಾದ ಜಯಪಾಲನು ಗಿಝ್ನಿಯ ಮೇಲೆ ಸಾಗಿ ಬರಬಹುದೆಂದು ತಿಳಿದು, ಮಹಮೂದನು ತಾನೇ ದಂಡೆತ್ತಿ ಪೇಶಾವರದ ಸಮೀಪಕ್ಕೆ ಬಂದನು. ಕ್ರಿ. ಶ. ೧೦೦೧. ಜಯಪಾಲನು ಈತನಿಗೆ ಇದಿರಾದನು. ಉಭಯತರಲ್ಲಿ ಕಡುತರವಾದ ಯುದ್ಧವೆಸಗಿತು. ಈ ಸರತಿಯಲ್ಲಿಯೂ ಜಯಪಾಲನೇ ಸೋತು ಒಡಂಬಡಿಕೆ ಮಾಡಿಕೊಂಡು ಹಿಂದಿರುಗಿದನು ಮತ್ತು ಖಿನ್ನಮನಸ್ಸಿನವನಾಗಿ ರಾಜ್ಯವನ್ನು ಮಗನಾದ **ಅನಂಗಪಾಲ**ನಿಗೆ ಒಪ್ಪಿಸಿ ಬೆಂಕೆಯಲ್ಲಿ ಹಾರಿಕೊಂಡು ಸತ್ತನು.

ಇತ್ತ ಮಹಮೂದನು ಸಿಂಧುನದದ ಪಶ್ಚಿಮ ಪ್ರದೇಶವನ್ನೆಲ್ಲ ತನ್ನ ರಾಜ್ಯಕ್ಕೆ ಕೂಡಿಸಿ ಗುಡ್ಡಗಾಡಿನ ಆಯಕಟ್ಟಿನ ಮೆಟ್ಟುಗಳನ್ನು ಭದ್ರಪಡಿಸಿ ತನ್ನ ಕೈಯಲ್ಲಿಟ್ಟುಕೊಂಡನು.

೪ನೆಯ ದೌಡು:— ಇದು ಮಹತ್ವದ ಥ್ರೌಡು. ಈ ಸಾರೆ ಹಿಂದೂ ಅರಸರೂ ಪ್ರಜೆಗಳೂ ಒಮ್ಮನಸ್ಸಿನಿಂದ ಮಹಮೂದನನ್ನು ಹೊರಗೆ ಹಾಕುವ ಸಾಹಸ ಮಾಡಿದರು. ಅನಂಗಪಾಲನು ಮುಖ್ಯನಾಗಿ ಎಲ್ಲ ಅರಸರ ಸಹಾಯವನ್ನು ಪಡೆದನು. ಸ್ತ್ರೀಯರು ತಮ್ಮ ಮೈಮೇಲಿನ ಆಭರಣಗಳನ್ನು ಮಾರಿ ಧನಸಹಾಯ ಮಾಡಿದರು. ಶೂರನಾದ ಮಹಮೂದನು ಸುತ್ತಲು ಕಂದಕಗಳನ್ನು ಅಗಿಸಿ ಭದ್ರವಾಗಿ ನಿಂತು ಯುದ್ಧವನ್ನು ಆರಂಭಿಸಿದನು. ಅನಂಗಪಾಲನಿಗೇ ಜಯಸಿಗುವದೆಂದು ಮಹಮೂದನು ಒಪ್ಪಂದಮಾಡಿಕೊಳ್ಳುವ

ವಿಚಾರದಿಂದ ಸಮರಭೂಮಿಯಿಂದ ಕಡೆಗೆ ಬಂದಿದ್ದನು. ಅಷ್ಟರಲ್ಲಿ ವೈರಿಗಳ ಉರಿಬಾಣಗಳಿಂದ ಅನಂಗಪಾಲನು ಏರಿದ ಆನೆಗೆ ಉರಿಯು ಹತ್ತಿದ್ದರಿಂದ ಅದು ಹಿಂದಿರುಗಿ ಓಡತೊಡಗಿತು. ಅನಂಗಪಾಲನ ಸ್ಥಿತಿಯನ್ನು ನೋಡಿ ಸೈನಿಕರು ಸಹ ಓಡಲಾರಂಭಿಸಿದರು! ಮಹಮೂದನು ಹೊತ್ತು ಸಾಧಿಸಿ ಆವೇಶದಿಂದ ಏರಿಬಂದು ಹಿಂದು ಸೈನ್ಯವನ್ನು ಚದರಿಸಿ ಜಯಹೊಂದಿದನು. ಕ್ರಿ. ಶ. ೧೦೦೮ನೆಯ ವರುಷದ ಯುದ್ಧದಲ್ಲಿ ಅನಂಗಪಾಲನು ಹತನಾದನು.



ಗಿಝ್ನಿ ಮಹಮೂದನ ದೌಡುಗಳು

೫ನೆಯ ದೌಡು:— ಮಹಮೂದನು **ನಗರಕೋಟೆ**ಯನ್ನು ವಶಮಾಡಿಕೊಂಡು ಅಲ್ಲಿಯ ದೇವಾಲಯದಲ್ಲಿ ಹೂಳಿಟ್ಟ ಅಗಣಿತವಾದ ಸಂಪತ್ತನ್ನು ಎತ್ತಿಕೊಂಡು ಹೋದನು. ಕ್ರಿ. ಶ. **೧೦೧೨.**

೭ನೆಯ ದೌಡು:— ಸ್ಥಾನೇಶ್ವರ, ಕನೋಜ ಮುಂತಾದ ರಾಜರು ಒಕ್ಕಟ್ಟಿನಿಂದ ಯುದ್ಧ ಮಾಡತಕ್ಕವರಿರುವರೆಂಬ ಸುದ್ದಿಯನ್ನು ಕೇಳಿ ಮಹ-

ಮೂದನು ಬಂದು ಸ್ಥಾನೇಶ್ವರವನ್ನು ಮುತ್ತಿದನು ಆಗ ಆಲ್ಲಿಯ ಅರಸನು ಯುದ್ಧಭೂಮಿಯಿಂದ ಕಾಲ್ದೆಗೆದನು. ಆಲ್ಲಿಯ ದೇವಾಲಯದಲ್ಲಿಯ ಮೂರ್ತಿಯನ್ನೂ ಸಂಪತ್ತನ್ನೂ ಮಹಮೂದನು ಎತ್ತಿಕೊಂಡು ಹೋದನು. ಕ್ರಿ. ಶ. **೧೦೧೪.**

೯ನೆಯ ದಾಂಡು:— ಮಹಮೂದನು ೧ ಲಕ್ಷ ಸೈನ್ಯದೊಂದಿಗೆ ಕಾಶ್ಮೀರಕ್ಕೆ ಬಂದು ಆ ಅರಸನ ಸಹಾಯವನ್ನು ಹೊಂದಿ ಕನೋಜದ ಮೇಲೆ ಸಾಗಿ ಬಂದನು. ಆಲ್ಲಿಯ **ಕುವರರಾಜನು** ಶರಣಾಗತನಾಗಿ ಈತನನ್ನು ಮೂರು ದಿವಸಗಳವರೆಗೆ ತನ್ನಲ್ಲಿ ಇರಿಸಿಕೊಂಡನು ಬಳಿಕ ಮಹಮೂದನು **ಮಥುರೆ** ಯನ್ನು ವಶಮಾಡಿಕೊಂಡು ಆಲ್ಲಿಯ ಬೆಳ್ಳಿ-ಬಂಗಾರಗಳ ಮೂರ್ತಿಗಳನ್ನೂ ಸಂಪತ್ತನ್ನೂ ತೆಗೆದುಕೊಂಡು ತನ್ನ ದೇಶಕ್ಕೆ ಹೋದನು. ಕ್ರಿ ಶ. **೧೦೨೦.**

೧೧ನೆಯ ದಾಂಡು:— ಕನೋಜದ ಅರಸನು ಮಹಮೂದನಿಗೆ ಶರಣು ಹೋದದ್ದು **ಕಲಿಂಜರ** ಮುಂತಾದವುಗಳ ಅರಸರಿಗೆ ಸರಿಬರಲಿಲ್ಲ. ಆವನು ಮಥುರೆ, ಮಹಾಬನ, ಪಂಜಾಬಗಳ ಅರಸರ ಸಹಾಯದಿಂದ **ಕನೋಜದ** ಮೇಲೆ ದಂಡೆತ್ತಿ ಹೋಗಿ ಕುವರನನ್ನು ಕೊಂದು ಹಿಂದಿರುಗಿದ್ದರು. ಮಹಮೂದನು ತನ್ನ ಕೈಕೆಳಗಿನ ಮಾಂಡಲಿಕನನ್ನು ಕೊಂದದ್ದಕ್ಕಾಗಿ ಕಲಿಂಜರ ಕೋಟೆಯನ್ನು ಮುತ್ತಿದನು. ಆಲ್ಲಿಯ ಅರಸನಾದ **ನಂದನು** ಶರಣಾಗತನಾಗಿ ೩೦೦ ಆನೆಗಳನ್ನು ಕೊಟ್ಟಿದ್ದಲ್ಲದೆ ಮಹಮೂದನ ವರ್ಣನೆಯ ಒಂದು ಕವಿತ್ವವನ್ನು ಬರೆಯಿಸಿ ಕಳುಹಿದನು. ಮಹಮೂದನು ಆ ಕವಿತ್ವದ ಆರ್ಥವನ್ನು ತಿಳಿದು ಸಂತುಷ್ಟನಾಗಿ ಕಲಿಂಜರದ ಸುತ್ತಲಿನ ೧೫ ಕೋಟೆಗಳನ್ನು ನಂದರಾಜನಿಗೆ + ಉಂಬಳಿಯಾಗಿ ಕೊಟ್ಟನು. ಬಳಿಕ ಬೆಲೆಯುಳ್ಳ ಮುತ್ತು ರತ್ನಗಳನ್ನು ಕಾಣಿಕೆಯಾಗಿ ತೆಗೆದುಕೊಂಡು ಸ್ವದೇಶಕ್ಕೆ ಹೋದನು.

೧೬ನೆಯ ದಾಂಡು:— ಮಹಮೂದನು ಕಡೆಯಸಾರೆ ಕಾಠೇವಾಡದಲ್ಲಿಯ **ಸೋಮನಾಥ**ನೆಂಬ ದೇವಾಲಯದ ಮೇಲೆ ಸಾಗಿಬಂದನು. ಕಾಠೇವಾಡದ **ಭೀಮ**ನೆಂಬ ರಾಜನು **ಅನಹೀಲವಾಡ**ದಲ್ಲಿ ಆಳುತ್ತಿದ್ದನು. ಸೋಮ-

---

+ ಲಾಲಾ ಬಾಬೂರಾಮ ಆಯೋಧ್ಯಾ ಶ್ರೀವಾಸ್ತವರೆಂಬವರು "ಸೈರಗುಲ್‌ಮುತಖೆರೀನ್ ಹಿಂದ"ದ ೧೯೯೬ನೆಯ ಪುಟದಲ್ಲಿ ಬರೆದಿರುವರು.

ನಾಥನ ಲಿಂಗವು ಹಿಂದುಸ್ಥಾನದಲ್ಲೆಲ್ಲ ಪ್ರಸಿದ್ಧವಾದ ಜ್ಯೋತಿರ್ಲಿಂಗಗಳಲ್ಲಿ ಒಂದಾಗಿತ್ತು. ಸೋಮನಾಥನ ಸಂಪತ್ತಿಗೆ ಅಳತೆಯಿರಲಿಲ್ಲ. "ಉಳಿದ ದೇವರು ಮಹಮೂದನನ್ನು ತಡೆದು ನಿಲ್ಲಿಸದೆ ಇದ್ದದರಿಂದ ಸೋಮನಾಥನು ಸಿಟ್ಟಾಗಿರುವನು" ಎಂದು ಬಹು ಜನರು ಆಡುವುದನ್ನು ಅವನು ಕೇಳಿದ್ದನು. ಆದದರಿಂದ ಸೋಮನಾಥವನ್ನೇ ಸುಲಿಯಬೇಕೆಂದು ನಿಶ್ಚಯಿಸಿ ಕ್ರಿ. ಶ ೧೦೨೪ರಲ್ಲಿ ಮುಲ್ತಾನ, ಅಜಮೀರಗಳ ಮಾರ್ಗವಾಗಿ ಅವನು ಅನಹಿಲವಾಡಕ್ಕೆ ತಲುಪಿದನು. ಅಖಂಡವಾಗಿ ದೊರಕಿದ ವಿಜಯಗಳಿಂದ ಮಹಮೂದನ ದರ್ಪವು ಹೆಚ್ಚಾಗಿ ಹಬ್ಬಿತ್ತು. ಆದದರಿಂದ ಭೀಮನು ಹೆದರಿ ಓಡಿಹೋದನು. ಸೋಮನಾಥನ ದೇವಾಲಯದ ಸಂರಕ್ಷಣೆಯ ವ್ಯವಸ್ಥೆಯನ್ನು ಮುಂದಾಗಿ ಯಾರೂ ಮಾಡಲಿಲ್ಲ ಮಹಮೂದನು ದೇವಾಲಯವನ್ನು ಹೊಕ್ಕು ಮೂರ್ತಿಯನ್ನು ಒಡೆಯ ಹೋದಾಗ "ಬೇಕಾದಷ್ಟು ದ್ರವ್ಯವನ್ನು ಕೊಡುವೆವು ಮೂರ್ತಿಯನ್ನ ಒಡೆಯಬೇಡ" ಎಂದು ಪೂಜಾರರು ಹೇಳಿಕೊಂಡರು. ಮಹಮೂದನು ಅವರ ಮಾತನ್ನು ಲಕ್ಷಿಸದೆ ಮೂರ್ತಿಯನ್ನು ಒಡೆದು ತುಂಡು ತುಂಡು ಮಾಡಿದನು. ಆಯತ ವೇಳೆಯಲ್ಲಿ ಪೂಜಾರರೂ ಇತರರೂ ಜೀವವ ಹಂಗುದೊರೆದು ಕಾದಿದರು. ಸುಮಾರು ೫೦ ಸಾವಿರ ಜನರು ಜೀವಕ್ಕೆ ಎರವಾದರು ಇದರಿಂದ ಯಾವ ಉಪಯೋಗವು ಆಗಲಿಲ್ಲ; ಮಹಮೂದನಿಗೆ ಪೂರ್ಣ ಜಯವು ದೊರೆಯಿತು. ಅಪಾರವಾದ ಸಂಪತ್ತನ್ನು ಅವನ ಕೈಸೇರಿತು. ಮಾಳವದ **ಪರಮಾರದೇವ**ನು ಯುದ್ಧಕ್ಕೆ ಸಿದ್ಧನಾಗಿರುವನೆಂದು ಕೇಳಿ, ಬೇರೆ ದಾರಿಯ ಹಿಡಿದು ತನ್ನ ದೇಶಕ್ಕೆ ಹೊರಟು ಹೋದನು.

೬. ಮಹಮೂದನ ಯೋಗ್ಯತೆ:— ಮುಸಲ್ಮಾನೀ ರಾಷ್ಟ್ರಗಳಲ್ಲಿ ಮಹಮೂದನ ಕೀರ್ತಿಯು ವಿಶೇಷವಾಗಿತ್ತು. ಇವನು ಶೂರನಾದ ಸೇನಾಪತಿಯೂ ಸಮರ್ಥನಾದ ಅರಸನೂ ವಿದ್ಯಾಭಿಮಾನಿಯೂ ಆಗಿದ್ದನು. ಹಿಂದುಸ್ಥಾನದಿಂದ ಅನೇಕ ಕಲಾಕುಶಲರನ್ನು ಕರೆದೊಯ್ದು ಗಿಝ್ನಿಯಲ್ಲಿ ಎಷ್ಟೋ ಸುಂದರವಾದ ಮಂದಿರಗಳನ್ನು ಕಟ್ಟಿಸಿದನು. **ವಿದ್ಯಾಲಯ, ಗ್ರಂಥಾಲಯ, ವಸ್ತು ಸಂಗ್ರಹಾಲಯ**ಗಳನ್ನು ಏರ್ಪಡಿಸಿದನು. **ಫಿರದೂಸಿ, ಅನ್ಸಾರಿ** ಎಂಬ ಹೆಸರಾದ ಕವಿಗಳು ಇವನ ಆಶ್ರಯದಲಿದ್ದರು. ಫಿರದೂಸಿಯು **'ಶಹಾನಾಮಾ'**

ಎಂಬ ಗ್ರಂಥವನ್ನು ರಚಿಸಿದನು. ಪರರಾಜ್ಯದಲ್ಲಿ ಸುಲಿಗೆ ಮಾಡುವ ಇವನು ತನ್ನ ಪ್ರಜೆಗಳನ್ನು ನ್ಯಾಯದಿಂದಲೂ ದಯೆಯಿಂದಲೂ ಆಳುತ್ತಿದ್ದನು. ದಾಳಿಯ ಕಾಲದಲ್ಲಿ ಇವನು ಹೆಂಗಸರ ಮತ್ತು ಹುಡುಗರ ಕೊಲೆಯನ್ನು ಮಾಡಿದಂತೆ ಕಾಣುವದಿಲ್ಲ. ಇವನು ತನ್ನ ತಂದೆಯ ಕಾಲದ ಮಾಂಡಲಿಕ ರಾಜ್ಯವನ್ನು ವಿಸ್ತರಿಸಿ, ದೊಡ್ಡ ಸಾಮ್ರಾಜ್ಯವನ್ನು ಸ್ಥಾಪಿಸಿದನು ಈ ದೃಷ್ಟಿಯಿಂದ ಈತನನ್ನು **ನೇಪೋಲಿಯನ**ನಂಥ ಪರಾಕ್ರಮಿಯೊಡನೆ ಹೋಲಿಸಬಹುದು.

ಆದರೆ ಮಹಮೂದನು ದೇವಾಲಯಗಳನ್ನೂ ಮೂರ್ತಿಗಳನ್ನೂ ನಾಶ ಗೊಳಿಸಿದ ಸಂಗತಿಯು, ಪರಧರ್ಮಸಹಿಷ್ಣುತೆ, ಮುತ್ಸದ್ದಿತನ ಇವುಗಳ ದೃಷ್ಟಿಯಿಂದ ನಿಂದ್ಯವೆಂದು ಹೇಳಬಹುದು ಕೋಟ್ಯವಧಿ ಹಿಂದುಗಳ ಧರ್ಮ ಭಾವನೆಗಳನ್ನು ನೋಯಿಸಿದ್ದರಿಂದ ಇವನ ವಿಷಯವಾಗಿ ತಿರಸ್ಕಾರವುಂಟಾಯಿತು ಈ ತಿರಸ್ಕಾರವೇ ಇವನ ಅಧಿಕಾರವು ಮುಂದೆ ಸ್ವಲ್ಪ ಕಾಲದಲ್ಲಿಯೇ ನಷ್ಟವಾದದ್ದರ ಕಾರಣವು. ತಪ್ಪು ದಾರಿಯಿಂದ ಧರ್ಮ ಪ್ರಸಾರ ಗೊಳಿಸುವ ಗೊಡವೆಗೆ ಹೋಗದೆ ಯಿದ್ದರೆ ಇವನು ಮೊದಲಿನ ನಾಲ್ವರು ಖಲೀಫರಂತೆ ಲೋಕಪ್ರಿಯನಾಗುತ್ತಿದ್ದನು ಇವನು ಕ್ರಿ. ಶ ೧೦೩೦ರಲ್ಲಿ ತೀರಿಕೊಂಡನು.

೫ನೆಯ ಪಾಠ

ಘೋರೀ ಮುನೆತನ

(ಕ್ರಿ. ಶ ೧೧೮೬ — ೧೨೦೬)

೧. ಸಾಮಾನ್ಯ ವಿಚಾರ:— ಮಹಮೂದ ಸುಲ್ತಾನನ ದಾಳಿಗಳಿಂದ ಹಿಂದುಸ್ಥಾನದ ಮೇಲೆ ಸ್ಥಿರವಾದ ಪರಿಣಾಮವೇನೂ ಆಗಲಿಲ್ಲ. ಆದರೆ ಕಾಬೂಲ, ಪಂಜಾಬ ಪ್ರಾಂತಗಳು ಮಾತ್ರ ಆಗಿನಿಂದ ಮುಸಲ್ಮಾನರ ಆಳಿಕೆಗೆ ಒಳಗಾದವು. ಇವನ ತರುವಾಯ ಗಟ್ಟಿಗರಾರೂ ಪಟ್ಟಕ್ಕೆ ಬಾರದೆ ಇದ್ದದರಿಂದ ಗಿಝ್ನಿಯ ಸಾಮ್ರಾಜ್ಯವು ಕಳೆಗುಂದಹತ್ತಿತು. ಗಿಝ್ನಿಯ ವಾಯವ್ಯಕ್ಕೆ **ಘೋರ** ಎಂಬದೊಂದು ಪ್ರಾಂತವಿರುವದು. ಇದೇ ಅಫಗಾನರ ಮೂಲಸ್ಥಾನವು. ಅರಬ ಖಲೀಫರು ಈ ಪ್ರಾಂತವನ್ನು ವಶಮಾಡಿಕೊಂಡ ಬಳಿಕ

ಅಫಗಾನರು ಮುಸಲ್ಮಾನರಾದರು. ಮುಂದೆ ಅರಬರ ಇಳಿಕೆಯ ಕಾಲದಲ್ಲಿ ಇವರು ಸ್ವತಂತ್ರರಾದರೂ ಕ್ರಿ. ಶ. ೧೦೧೦ರಲ್ಲಿ ಮತ್ತೆ ಗಿಝ್ನಿಯು ಮಹಮೂದನ ಮಾಂಡಲಿಕರಾದರು. ಮಹಮೂದನ ತರುವಾಯ ಘೋರದ ಅರಸನಾದ **ಅಲ್ಲಾಉದ್ದೀನ ಹಸನ**ನು ಕ್ರಿ. ಶ. ೧೧೫೦ ರಲ್ಲಿ ಗಿಝ್ನಿಯನ್ನು ಮುತ್ತಿ ಅದನ್ನು ಏಳು ದಿವಸಗಳ ವರೆಗೆ ಹಾಳು ಮಾಡಿದನು! ಈ ಅಲಾಉದ್ದೀನನಿಗೆ **ಗಯಾಸುದ್ದೀನ, ಮಹಮ್ಮದ** ಎಂಬ ಇಬ್ಬರು ಮಕ್ಕಳಿದ್ದರು. ಮಹಮ್ಮದನಿಗೆ **ಶಹಾಬುದ್ದೀನ** ಎಂದೂ ಹೆಸರು.



ಮಹಮ್ಮದ ಘೋರಿ

೨. ಮಹಮ್ಮದ ಘೋರಿ:— ಈ ಮಹಮ್ಮದ (ಶಹಾಬುದ್ದೀನ) ನು ಕ್ರಿ. ಶ. ೧೧೭೨ರಲ್ಲಿ ಗಿಝ್ನಿಯ ಪಟ್ಟವನ್ನು ಆಕ್ರಮಿಸಿ ಸುಲ್ತಾನ ಎಂಬ ಪದವಿಯನ್ನು ಧರಿಸಿದನು. ಬಳಿಕ ಕ್ರಿ. ಶ. ೧೧೯೧ರ ವರೆಗೆ ಪೇಶಾವರ, ಮುಲ್ತಾನ, ಲಾಹೋರಗಳ ಸುಭೇದಾರರನ್ನು ಸೋಲಿಸಿ ಅಲ್ಲಿ ತನ್ನ ಅಧಿಕಾರವನ್ನು ಚೆನ್ನಾಗಿ ನೆಲೆಗೊಳಿಸಿ ರಜಪುತರ ಮೇಲೆ ಸಾಗಿಬಂದನು.

೩. ಆಗಿನ ಹಿಂದುಸ್ಥಾನದ ಸ್ಥಿತಿ:— ಆಗ ಉತ್ತರ ಹಿಂದುಸ್ಥಾನದಲ್ಲಿ ಅನೇಕ ಚಿಕ್ಕ ದೊಡ್ಡ ರಜಪುತ ರಾಜ್ಯಗಳಿದ್ದವು. ರಜಪುತ ರಾಜ್ಯರಲ್ಲಿ ದಿಲ್ಲಿ, ಅಜಮೀರಗಳ ಚವ್ಹಾಣ (ಚಾಹಮಾನ) **ಪೃಥ್ವೀರಾಜ**ನೂ ಕನೋಜದ ರಾಠೋಡ **ಜಯಚಂದ**ನೂ ಪ್ರಬಲರಾಗಿದ್ದರು. ಪೃಥ್ವೀರಾಜನ ಪೂರ್ವಜನಾದ * **ವೀಸಲದೇವ**ನು ಕನೋಜದ ರಾಠೋಡರಿಂದ ದಿಲ್ಲೀ ಪ್ರಾಂತವನ್ನು ಕಸಿದುಕೊಂಡಾಗಿನಿಂದ ಈ ಎರಡು ಮನೆತನಗಳಲ್ಲಿ ಹಗೆತನವುಂಟಾಗಿತ್ತು. ಪೃಥ್ವೀರಾಜನು ತನ್ನ ಪರಾಕ್ರಮದಿಂದ ಬಹುತರ ಯಾವತ್ತು ಅರಸರ ಜೆಂಬಲ

* ಪ್ರೊ. ಓತೂರಕರರ ಹಿಂದುಸ್ಥಾನದ ಸೋಪಪತ್ತಿಕ ಇತಿಹಾಸ ಪುಟ ೯೩.

ವನ್ನು ದೊರೆಯಿಸಿಕೊಂಡಿದ್ದನು. ಆದರೆ ಜಯಚಂದನಿಗೆ ಮಾತ್ರ ತನ್ನ ಸಾಮ್ರಾಜ್ಯಾಧಿಕಾರವನ್ನು ಧಿಕ್ಕರಿಸುವ ಪೃಥ್ವೀರಾಜನ ಉತ್ಕರ್ಷವು ಸಹನ ವಾಗುತ್ತಿದ್ದಿಲ್ಲ.

ಜಯಚಂದನಿಗೆ **ಸಂಯೋಗಿತೆ** ಎಂಬ ಒಬ್ಬ ಮಗಳಿದ್ದಳು. ಆಕೆಯು ಶೂರಳೂ ನಿಷ್ಠೆವಂತಳೂ ಆಗಿದ್ದಳು. ಮಗಳ ಸ್ವಯಂವರವನ್ನು ಮಾಡುವ ವಿಚಾರವು ಜಯಚಂದನದಿತ್ತು. ಅದನ್ನು ತಿಳಿದು ಸಂಯೋಗಿತೆಯು ಕ್ಷಾತ್ರ ಧರ್ಮದಂತೆ, ನಾನು ಮನಸ್ಸಿನಿಂದ ಪೃಥ್ವಿರಾಜನನ್ನೇ ವರಿಸಿರುವೆನೆಂದು ತಂದೆಗೆ ತಿಳಿಸಿದಳು. ತನ್ನ ಹಗೆಯಾದ ವನನ್ನು ವರಿಸಿದ್ದಕ್ಕೆ ಜಯಚಂದನು ಕೋಪಗೊಂಡು ಸಂಯೋಗಿತೆಯನ್ನು ಸೆರೆಯಲ್ಲಿಟ್ಟನು. ಈ ಸುದ್ದಿಯನ್ನು ಕೇಳಿ ಪೃಥ್ವಿರಾಜನು ಯುಕ್ತಿಯಿಂದ ಸಂಯೋಗಿತೆಯನ್ನು ದಿಲ್ಲಿಗೆ ಕರೆದೊಯ್ದನು. ಜಯಚಂದನು ಪೃಥ್ವೀರಾಜನನ್ನು ಮತ್ತಿಷ್ಟು ದ್ವೇಷಿಸಹತ್ತಿದನು.



ಪೃಥ್ವೀರಾಜ

೩. ಮಹಮ್ಮ ಘೋರಿಯು ಸೋತು ಹೋದದ್ದು:– ಮಹಮ್ಮದನು ದಿಲ್ಲಿಯ ಮೇಲೆ ಸಾಗಿಬರುವದನ್ನು ಪೃಥ್ವೀರಾಜನು ತಿಳಿದು ತನ್ನ ಸಹಾಯಕ ರಾಜರಿಂದೊಡಗೂಡಿ ಯುದ್ಧಕ್ಕೆ ಸಜ್ಜಾದನು. ಎರಡೂ ಸೈನ್ಯಗಳು ಸ್ಥಾನೇಶ್ವರದ ಬಳಯ "**ತರಾಯನ**" ಎಂಬಲ್ಲಿ ಕೂಡಿದವು. ಯುದ್ಧದ ಭರದಲ್ಲಿ ಕೆಲಹೊತ್ತು ಮಹಮ್ಮದ ಘೋರಿಯು ಕಾಣದಂತಾಗಲು ' ತಮ್ಮ ಅರಸನು ಕೊಲ್ಲಲ್ಪಟ್ಟನು ' ಎಂದು ತಿಳಿದು ಮುಸಲ್ಮಾನ ಸೈನಿಕರು ಸಿಕ್ಕಹಾಗೆ ಓಡಹತ್ತಿದರು. ಮಹಮ್ಮದನು ಪೃಥ್ವೀರಾಜನ ಕೈಗೆ ಸಿಕ್ಕನು. ಆಗ ಪೃಥ್ವೀರಾಜನು ಕಪ್ಪ–ಕಾಣಿಕೆಗಳನ್ನು ತಕ್ಕೊಂಡು ಅವನನ್ನು ಬಿಟ್ಟುಬಿಟ್ಟನು.

೪. ಮಹಮ್ಮದ ಘೋರಿಯು ೨ನೆಯ ಸರತಿ ಸಾಗಿಬಂದದ್ದು:— ಮಹಮ್ಮದನು ಪೃಥ್ವೀರಾಜನ ಸೇಡುತೀರಿಸಿಕೊಳ್ಳುವ ಹಟತೊಟ್ಟು ಗಿಝ್ನಿಗೆ ಹೋಗಿ ಚನ್ನಾಗಿ ಯುದ್ಧದ ಸಿದ್ಧತೆಯನ್ನು ಮಾಡಿದನು ಮತ್ತು ೧೧೯೨ರಲ್ಲಿ ೨ನೆಯ ಸರತಿ ಪೃಥ್ವೀರಾಜನ ಮೇಲೆ ಸಾಗಿಬಂದನು. ಮೊದಲಿನ ಸ್ಥಳದಲ್ಲಿಯೇ ಮತ್ತೆ ಯುದ್ಧಕ್ಕೆ ಆರಂಭವಾಯಿತು. ಜಯಚಂದನು ಗುಪ್ತವಾಗಿ ಮಹಮ್ಮದನಿಗೆ ಸಹಾಯಕನಾಗಿದ್ದನು. ರಜಪುತರ ಒಡಕಿನ ಲಾಭವು ಮಹಮ್ಮದನಿಗೆ ದೊರೆಯಿತು. ಪೃಥ್ವೀರಾಜನು ಸೋತು ಮಹಮ್ಮದನಿಂದ ಕೊಲ್ಲಲ್ಪಟ್ಟನು. ಬಳಿಕ ಅವನು ಅಜಮೀರದ ಮೇಲೆ ಸಾಗಿ ಸಹಸ್ರಾವಧಿ ಹಿಂದುಗಳ ಕೊಲೆಯನ್ನು ಮಾಡಿದನು. ಹೀಗೆ ಹನ್ನೆರಡನೆಯ ಶತಮಾನದಲ್ಲಿ ಹಿಂದುಗಳ ಸಾಮ್ರಾಜ್ಯವು ನಾಶವಾಯಿತು.

೫. ಮಹಮ್ಮದ ಘೋರಿಯ ರಾಜ್ಯವಿಸ್ತಾರ:— ಇವನು ಇಷ್ಟಕ್ಕೆ ತೃಪ್ತನಾಗದೆ ಕ್ರಿ. ಶ. ೧೧೯೪ರಲ್ಲಿ **ಕನೋಜದ** ಮೇಲೆ ಸಾಗಿ ಪೃಥ್ವೀರಾಜನ ವಿರುದ್ಧವಾಗಿ ತನಗೆ ಸಹಾಯಮಾಡಿದ ಜಯಚಂದನನ್ನು ಸೋಲಿಸಿ ಸುಂದರವಾದ ಕನೋಜವನ್ನು ಸುಲಿದು ಹಾಳುಮಾಡಿದನು. ತನ್ನೊಬ್ಬ ವೈರಿಯನ್ನು ನಾಶಗೊಳಿಸುವ ವಿಚಾರದ ಭರದಲ್ಲಿ ಇಡೀ ರಜಪುತ ರಾಜರ ಶತ್ರುವಿಗೆ ಸಹಾಯ ಮಾಡಿದೆನಲ್ಲ ಎಂದು ಜಯಚಂದನು ಮಿಡುಕಿದನು. ಆದರೆ ಉಪಯೋಗವೇನು! ಮುಂದೆ ಮಹಮ್ಮದ (ಶಹಾಬುದ್ದೀನ)ನು ಗುಜರಾಥ, ರೋಹಿಲಖಂಡಗಳನ್ನು ವಶಪಡಿಸಿಕೊಂಡನು. ತಾನು ಗೆದ್ದ ಸೀಮೆಗಳ ವ್ಯವಸ್ಥೆಯನ್ನು ನೋಡುವದಕ್ಕಾಗಿ **ಕುತುಬುದ್ದೀನ**ನೆಂಬ ತನ್ನ ಗುಲಾಮನನ್ನು ಗೊತ್ತುಮಾಡಿದನು **ಬಖ್ತ್ಯಾರ ಖಿಲಜಿ** ಎಂಬ ಇನ್ನೊಬ್ಬ ಸರದಾರನು ಅಯೋಧ್ಯಾ ಬಹಾರ ಪ್ರಾಂತಗಳನ್ನು ಹೊಕ್ಕು ಲಖನೌತಿ ಪಟ್ಟಣವನ್ನು ವಶಮಾಡಿಕೊಂಡನು. ಕ್ರಿ. ಶ. ೧೨೦೫ ಈ ಸರದಾರನ ಪರಾಕ್ರಮದಿಂದ ಮುಸಲ್ಮಾನರು ಹಿಂದುಸ್ಥಾನದಲ್ಲಿ ಸ್ಥಿರಗೊಂಡರು. ಕುತುಬುದ್ದೀನನಿಂದ ಸ್ಥಾಪಿತವಾದ ಮುಸಲ್ಮಾನರ ಅಧಿಕಾರವು ೧೯ನೆಯ ಶತಕದ ವರೆಗೆ ಎಂದರೆ ಆರು ನೂರು ವರ್ಷಗಳ ವರೆಗೆ ದಿಲ್ಲಿಯಲ್ಲಿ ನಡೆಯಿತು.

೬. ಮಹಮ್ಮದ ಘೋರಿಯ ಯೋಗ್ಯತೆ ಮತ್ತು ಕೊನೆ:— ಇವನು ಶೂರನೂ ಸಾಹಸಿಯೂ ಆಗಿದ್ದನು. ಬರಿಯ ಸುಲಿಗೆಯಿಂದ ಇವನು ತೃಪ್ತ

ನಾಗದೆ ಹಿಂದುಸ್ಥಾನದಲ್ಲಿ ರಾಜ್ಯವನ್ನು ಸ್ಥಾಪಿಸುವದಕ್ಕಾಗಿಯೆ ಹಲವುಸಾರೆ ದಂಡೆತ್ತಿ ಬಂದನು. ಅಣ್ಣನಾದ ಗಯಾಸುದ್ದೀನನ ಮೇಲೆ ಇವನ ಪ್ರೀತಿ ಬಹಳ. **ಖೋಖರ**ರೆಂಬ ಗುಡ್ಡಗಾಡಿನ ಜನರು ಎಬ್ಬಿಸಿದ ಬಂಡಾಯವನ್ನು ಮುರಿಯ ಹೋದಾಗ ಅವರಿಂದ ಕೊಲ್ಲಲ್ಪಟ್ಟನು. ಇವನ ತರುವಾಯ ಇವನ ಗುಲಾಮರಲ್ಲಿಯ ಮುಖ್ಯರಾದವರೇ ರಾಜ್ಯದ ಒಡೆಯರಾದರು

೭. ಹಿಂದುಗಳ ಅಪಜಯದ ಕಾರಣಗಳು:—ರಜಪುತರು ಮಾತ್ರ ಶೌರ್ಯ–ಸಾಹಸಗಳಿಂದ ಮುಸಲ್ಮಾನರೊಡನೆ ಕಾದಿದರೂ ಅವರಿಗೆ ಜಯ ದೊರೆಯಲಿಲ್ಲವೆಂಬುದಕ್ಕೆ ಕೆಲವು ಮಹತ್ವದ ಕಾರಣಗಳಿರುವವು- **೧.** ಬೌದ್ಧಧರ್ಮದ ಏಳ್ಗೆಯ ಕಾಲದಿಂದ ಪ್ರಜೆಗಳು ರಾಜಕಾರಣಗಳನ್ನು ದುರ್ಲಕ್ಷಿಸಹತ್ತಿದರು. ಆಗ ಅರಸರ ಮೇಲಿನ ಬಿಗಿವು ತಪ್ಪಿದ್ದರಿಂದ ಅಯೋಗ್ಯರಾದ ಅನೇಕ ಅರಸರು ರಾಜ್ಯಾಧಿಕಾರವನ್ನು ಪಡೆದರು. ಇಂಥವರಿಂದ ದೇಶಕ್ಕೆ ಅಹಿತಕರವಾದ ಅನೇಕ ಪ್ರಸಂಗಗಳು ಒದಗಿದವು **೨.** ರಾಜ್ಯಕ್ಕೆಂತ ಆಥನಾ ರಾಷ್ಟ್ರಕ್ಕೆಂತ ರಾಜನ ಮಹತ್ವವೇ ಬೆಳೆಯುತ್ತ ಹೋಗಿ ರಾಷ್ಟ್ರೀಯ ಭಾವನೆಯು ಲೋಪವಾಯಿತು. ಸೈನಿಕರು ರಾಜನಿಗಾಗಿಯೆ ಯುದ್ಧಕ್ಕೆ ಬರುತ್ತಿದ್ದದರಿಂದ ರಾಜನು ಕಾಣದಾಗಲು ಇಲ್ಲವೆ ಸಾಯಲು, ಈ ಸೈನಿಕರು ರಣದಿಂದ ಕಾಲ್ದೆಗೆಯಹತ್ತಿದರು **೩.** ಅಹಿಂಸೆ ಹಾಗು ಸಂನ್ಯಾಸ ಈ ತತ್ವಗಳ ಪ್ರಸಾರದ ಮೂಲಕ ಕ್ಷತ್ರಿಯರು ಕ್ಷಾತ್ರಧರ್ಮವನ್ನು ಬಿಟ್ಟರು. ಬಹುಜನ ಸಮಾಜವು ಯುದ್ಧಕಲೆಯನ್ನು ಮರೆತಿತು. ಪರಚಕ್ರಗಳು ದೇಶವನ್ನು ನುಗ್ಗಿದಾಗ ಸ್ವಸಂರಕ್ಷಣೆಯನ್ನು ಮಾಡಿಕೊಳ್ಳಲಾಗದೆ ಸುಲಭವಾಗಿ ಜಯಿಸಲ್ಪಟ್ಟರು. **೪.** ರಜಪುತ ವೀರರಿಗೆ ಇದಿರಾಳುಗಳ ಸ್ವಭಾವ–ಪರಿಸ್ಥಿತಿಗಳು ಚೆನ್ನಾಗಿ ಗೊತ್ತಿರಲಿಲ್ಲ. ಯುದ್ಧ ಪದ್ಧತಿಯನ್ನು ಸುಧಾರಿಸಲಿಲ್ಲ. ಶಸ್ತ್ರಾಸ್ತ್ರಗಳಲ್ಲಿ ಆದ ಸುಧಾರಣೆಯನ್ನು ಮುಂದಾಗಿ ತಿಳಿದುಕೊಂಡು ಅವನ್ನು ಉಪಯೋಗಿಸಲಿಲ್ಲ. **೫.** ದೇಶದ್ರೋಹಿಗಳಾದ ಅನೇಕರು ಶತೃಗಳಿಗೆ ಸಹಾಯ ಮಾಡಿದ್ದರಿಂದ ಅವರಿಗೆ ಅಯಾಸವಿಲ್ಲದೆ ಜಯವುಂಟಾಯಿತು. **೬.** ಚಳಿನಾಡಿಗರೂ ಬಡವರೂ ಆದ ಮುಸಲ್ಮಾನರು ಸೆಕೆನಾಡಿಗರೂ ಸುಖಜೀವಿಗಳೂ ಆದ ಹಿಂದುಗಳಿಗಿಂತ ಸ್ವಾಭಾವಿಕವಾಗಿ ಗಟ್ಟಿಗರೂ ಕಷ್ಟವನ್ನು ಸಹಿಸುವವರೂ ಆಗಿದ್ದರು. ಮತ್ತು ಅವರು ಧರ್ಮಪ್ರಸಾರದ ಉದ್ದೇಶದಿಂದ ಹುರುಪುಗೊಂಡು

'ಗೆದ್ದರೆ **ಗಾಝಿ** (ಜಯಶಾಲಿ), ಸತ್ತರ **ಷಹೀದ್** (ವೀರಸ್ವರ್ಗ)' ಎಂಬ ವಿಚಾರದಿಂದ ಮೈಮರೆತು ಕಾದಿದರು. ೭. ಮುಸಲ್ಮಾನರು ಅನೇಕ ದೇಶಗಳನ್ನು ಸಂಚರಿಸಿ ಹೊಸ ಹೊಸ ಯುದ್ಧ ಪದ್ಧತಿಗಳನ್ನು ಅರಿತವರು ಮತ್ತು ಸುಧಾರಿಸಿದ ಶಸ್ತ್ರಾಸ್ತ್ರಗಳನ್ನು ಪಯೋಗಿಸಿದವರಾಗಿದ್ದರು

೮. ಪ್ರಾಚೀನಕಾಲದ ಇತಿಹಾಸದ ಸಿಂಹಾವಲೋಕನೆ:—೧೨ನೆಯ ಶತಮಾನದ ಕೊನೆಗೆ ಹಿಂದುಗಳ ಸ್ವಾತಂತ್ರ್ಯವು ನಷ್ಟವಾಗಿ ಹಿಂದುಸ್ಥಾನವು ಮುಸಲ್ಮಾನರ ಆಳಿಕೆಗೆ ಒಳಗಾಯಿತು. ಅಲ್ಲಿಯ ವರೆಗೆ ಎಂದರೆ ಪ್ರಾಚೀನಕಾಲದಲ್ಲಿ ಹಿಂದುಗಳು ಸಂಪೂರ್ಣವಾದ ಸ್ವಾತಂತ್ರ್ಯವನ್ನು ಅನುಭವಿಸಿದರು. ಪರಚಕ್ರಗಳ ಆಟವು ಇಲ್ಲಿ ಸಾಗಲಿಲ್ಲ. ಚಂದ್ರಗುಪ್ತ, ಅಶೋಕರಂಥ ರಾಜರು ಪ್ರಜೆಗಳ ಸೌಖ್ಯವನ್ನು ಹೆಚ್ಚಿಸಿದರು. ಕಾಲಿದಾಸ, ಬಾಣರಂತಹ ಕವಿಗಳೂ ಭಾಸ್ಕರಾಚಾರ್ಯರಂತಹ ಶಾತ್ರಜ್ಞರೂ ಚಾಣಿಕ್ಯರಂತಹ ರಾಜತಂತ್ರಜ್ಞರೂ ಶಂಕರಾಚಾರ್ಯರಂತಹ ಪ್ರಚಂಡ ಕಾರ್ಯಕರ್ತರೂ ಜನಿಸಿ ಹಿಂದುಸ್ಥಾನವು ಜಗನ್ಮಾನ್ಯರ ಜನ್ಮಭೂಮಿಯಹ-ದೆಂಬುದನ್ನು ಸಿದ್ಧಪಡಿಸಿದರು. ಈ ಬಗೆಯ ಹಿಂದುಸ್ಥಾನವನ್ನು ಪರದೇಶದವರು ಆಶ್ಚರ್ಯದಿಂದ ನೋಡಹತ್ತಿದರು. ಸಾಹಸಿಗರು ಈ ದೇಶಕ್ಕೆ ಬರುವ ವಿಚಾರಮಾಡಹತ್ತಿದರು. ಅರಬರು ಮಹಮ್ಮದ ಬಿನ್ ಕಾಸೀಮನ ಮುಖಾಂತರ ಸಿಂಧಪ್ರಾಂತದ ವರೆಗೆ ಸಿಲುಕಿದರು. ಮುಂದೆ ಗಿಝ್ನಿಯ ಮಹಮೂದನು ಮನದಣಿ ಸಂಪತ್ತನ್ನು ಹೇರಿಕೊಂಡು ಹೋದನು. ಕಡೆಗೆ ಮಹಮ್ಮದ ಘೋರಿಯು ಈ ದೇಶದಲ್ಲಿ ತನ್ನ ರಾಜ್ಯವನ್ನು ಸ್ಥಿರಗೊಳಿಸಿದನು.

ಇಲ್ಲಿಗೆ ಪ್ರಾಚೀನಕಾಲದ ಇತಿಹಾಸವು ಮುಗಿಯಿತು ಇನ್ನು ಮುಂದೆ ಮುಸಲ್ಮಾನರ ಅಧಿಕಾರಕ್ಕೆ ಒಳಪಟ್ಟ ಕಾಲದ ಇತಿಹಾಸವನ್ನು ಅಭ್ಯಾಸಿಸುವದಿದೆ.

೨ನೆಯ ಭಾಗ

ಮಧ್ಯಕಾಲ

(ಕ್ರಿ. ಶ ೧೨೦೬-೧೬೧೧)

೧ನೆಯ ಪಾಠ


ಗುಲಾಮಿ ಮನೆತನ

೧. **ಸಾಮಾನ್ಯ ವಿಚಾರ**:— ಈ ಮಧ್ಯಕಾಲವೆಂಬ ಭಾಗದಲ್ಲಿ ಮುಸಲ್ಮಾನರ ಎರಡು ಸಾಮ್ರಾಜಗಳ ಉದಯ, ಉತ್ಕರ್ಷ, ಅಸ್ತುಗಳು ಕ್ರಮದಿಂದ ವಿವರಿಸಲಾಗಿವೆ ಮೊದಲನೆಯ ಸಾಮ್ರಾಜ್ಯವು ಗುಲಾಮಿ ಮನೆತನದ ಕುತುಬುದ್ದೀನನಿಂದ ಪ್ರಾರಂಭವಾಗಿ ಲೋದೀ ಮನೆತನದ ಇಬ್ರಾಹಿಮನ ಕೈಯಿಂದ ಮುಗಿಯಿತು. **ಗುಲಾಮಿ, ಖಿಲಜೀ, ತಘಲಖ, ಸಯ್ಯದ** ಮತ್ತು **ಲೋದಿ** ಎಂಬ ಐದು ಮನೆತನದ ಅರಸರು ಈ ಸಾಮ್ರಾಜ್ಯವನ್ನು ಕ್ರಿ. ಶ. ೧೨೦೬ರಿಂದ ೧೫೨೬ರ ವರೆಗೆ ಆಳಿದರು.

೨. **ಕುತುಬುದ್ದೀನ ಐಬಕ**:— (ಕ್ರಿ. ಶ. ೧೨೦೬-೧೨೧೦) ಇವನು ತುರ್ಕನು. ಚಿಕ್ಕವನಿರುವಾಗ ಗುಲಾಮನಾಗಿದ್ದನು ವರ್ತಕನೊಬ್ಬನು ಇವನನ್ನು ಕೊಂಡು, ಮಹಮ್ಮದ ಘೋರಿಗೆ ಕಾಣಿಕೆಯಾಗಿ ಒಪ್ಪಿಸಿದನು. ಮಹಮ್ಮದನಿಗೂ ಅವನ ಅಣ್ಣ ಗಯಾಸುದ್ದೀನನಿಗೂ ಗಂಡುಮಕ್ಕಳಿಲ್ಲದ್ದರಿಂದ ಅವರು ಕುತುಬುದ್ದೀನನನ್ನೇ ಮಗನಂತೆ ಕಾಣುತ್ತಿದ್ದರು. ಕುತುಬುದ್ದೀನನು ಪ್ರಾಮಾಣಿಕತನ ಮತ್ತು ಯುದ್ಧಕೌಶಲ್ಯ ಇವುಗಳಿಂದ ಹೆಸರಿಗೆ ಬಂದು ಮಹಮ್ಮದ ಘೋರಿಯಿಂದ ದಿಲ್ಲೀ ಪ್ರಾಂತದ ಸುಭೇದಾರಿಯನ್ನು ಪಡೆದನು. ಮತ್ತು ಮುಂದೆ ಮಹಮ್ಮದ ಘೋರಿಯ ಮರಣದ ತರುವಾಯ ಸುಲ್ತಾನ ಎಂಬ ಬಿರುದಿನೊಡನೆ ದಿಲ್ಲಿಯಲ್ಲಿ ಸ್ವತಂತ್ರವಾಗಿ ಆಳಹತ್ತಿ ಮುಸಲ್ಮಾನರ ಮೊದಲನೆಯ ಸಾಮ್ರಾಜ್ಯದ ಸ್ಥಾಪಕನೆನಿಸಿದನು.

ಇವನು ನ್ಯಾಯದಿಂದಲೂ, ಶಾಂತತೆಯಿಂದಲೂ ರಾಜ್ಯವಾಳಿದನು. ಕಳ್ಳಕಾಕರ ಉಪದ್ರವನ್ನು ತಪ್ಪಿಸಿ ಜನರು ನಿರ್ಭಯರಾಗಿ ದೂರದೂರದ

ಪ್ರವಾಸಮಾಡುವಂತೆ ವ್ಯವಸ್ಥೆಯನ್ನಿಟ್ಟನು. ಹಿಂದುಗಳನ್ನು ಭೇದಬುದ್ಧಿಯಿಲ್ಲದೆ ನಡೆಯಿಸಿಕೊಂಡನು. ಕಲಾಕೌಶಲ್ಯಗಳ ಅಭಿರುಚಿಯುಳ್ಳವನಾಗಿದ್ದನು. **ಕುತುಬ ಮಿನಾರ**ವೆಂಬ ಭವ್ಯವಾದ ವಿಜಯಸ್ತಂಭವನ್ನೂ **ಕುತುಬ ಮಸೀದಿ**ಯನ್ನೂ ಕಟ್ಟಿಸಿದನು. ಕುತುಬ ಮಿನಾರವು ೨೫೦ ಫೂಟು ಎತ್ತರವಿದೆ.



ಕುತುಬ ಮಿನಾರ

ಅವರ ಮೇಲೆ ಕುರ್‌ಆನಿನ ವಾಕ್ಯಗಳು ಕೊರೆಯಿಸಲ್ಪಟ್ಟಿವೆ. ಮುಂಚೆ ಹಾಳುಬಿದ್ದಿದ್ದ ಹಿಂದು ದೇವಾಲಯಗಳ ಕೊರೆದ ಕಲ್ಲುಗಳನ್ನು ಈ ಕಟ್ಟಡಕ್ಕೆ ಉಪಯೋಗಿಸಿದನು. **ಚೌಗಾನ್** ಎಂಬ ಆಟವಾಡುವಾಗ ಕುದುರೆಯ ಮೇಲಿಂದ ಬಿದ್ದು ಇವನು ಮರಣಹೊಂದಿದನು. ಕ್ರಿ. ಶ. ೧೨೧೦.

೩. ಶಮಸುದ್ದೀನ ಇಲ್ತಮಶ್:— (ಕ್ರಿ. ಶ. **೧೨೧೦-೧೨೩೫**) ಕುತುಬುದ್ದೀನನ ತರುವಾಯ **ಆರಾಮನು** ಪಟ್ಟಕ್ಕೆ ಬಂದನು. ಆದರೆ ಇವನು ರಾಜ್ಯವಾಳಲು ಅಯೋಗ್ಯನಿದ್ದವರಿಂದ ಕುತುಬುದ್ದೀನನ ಅಳಿಯನಾದ **ಇಲ್ತಮಶನು** ಆರಾಮನನ್ನು ತಳ್ಳಿ ಎಲ್ಲ ಸರದಾರರ ಸಮ್ಮತಿಯಿಂದ ಪಟ್ಟಕ್ಕೆ ಕುಳಿತನು ಇಲ್ತಮಶನೂ ತುರ್ಕೀ ಕುಲದವನೇ ಆಗಿದ್ದನು ಕುತುಬುದ್ದೀನನು ಗಿಝ್ನಿಯ ಪೇಟೆಯಲ್ಲಿ ಇವನನ್ನು ಕೊಂಡಿದ್ದನು. ಇಲ್ತಮಶನ ಸ್ವಾಮಿನಿಷ್ಠೆ, ಪರಾಕ್ರಮಗಳಿಗೆ ಮೆಚ್ಚಿ, ಕುತುಬುದ್ದೀನನು ಇವನಿಗೆ ಗ್ವಾಲ್ಹೇರದ ಸುಭೇದಾರಿಯನ್ನು ಕೊಟ್ಟಿದ್ದಲ್ಲದೆ, ಮುಂದೆ ತನ್ನ ಮಗಳನ್ನು ಕೊಟ್ಟು ಲಗ್ನಮಾಡಿದನು. ಇಲ್ತಮಶನು ಕ್ರಿ. ಶ. ೧೨೨೫ರ ವರೆಗೆ ಗ್ವಾಲ್ಹೇರ, ರತನಭೋರ ಎಂಬ ಕೋಟೆಗಳನ್ನೂ ಕೈವಶ ಮಾಡಿಕೊಂಡು ಉತ್ತರ ಹಿಂದುಸ್ಥಾನದಲ್ಲೆಲ್ಲ ತನ್ನ ಅಧಿಕಾರವನ್ನು ಸ್ಥಾಪಿಸಿದನು. ಇಲ್ತಮಶನ ಈ ಪರಾಕ್ರಮವನ್ನು **ಬಗದಾದ**ದ ಖಲೀಫನು ಕೇಳಿ ಬಹುಮಾನದ ವಸ್ತ್ರಗಳನ್ನು ಕಳುಹಿಸಿದನು. ಇವನಾದರೂ ತನ್ನ ಹೆಸರಿನ ನಾಣ್ಯಗಳನ್ನು ಮುದ್ರಿಸಿದನು ಇವನು ವಿದ್ಯಾವಂತನಾಗಿದ್ದನು ೨೫ ವರ್ಷ ರಾಜ್ಯವಾಳಿ ಕ್ರಿ ಶ ೧೨೩೫ರಲ್ಲಿ ಮರಣ ಹೊಂದಿದನು

ಇಲ್ತಮಶನು ಹಿಂದುಸ್ಥಾನದಲ್ಲಿ ಆಳುವಾಗ ಆತ್ತ ಮಧ್ಯಏಶಿಯದಲ್ಲಿ **ಚಂಗೀಝ್‌ಖಾನ**ನೆಂಬೊಬ್ಬ ಪರಾಕ್ರಮಿಯು ಹೆಸರಿಗೆ ಬಂದನು ಇವನು * **ಮೋಂಗಲ** ವಂಶದವನಾಗಿದ್ದು ಮುಸಲ್ಮಾನೀ ಧರ್ಮವನ್ನು ಸ್ವೀಕರಿಸಿದ್ದಿಲ್ಲ. ಚೀನದಿಂದ ಕಸ್ಪುಸಮುದ್ರದ ವರೆಗಿನ ಪ್ರದೇಶವನ್ನು ಇವನು ವ್ಯಾಪಿಸಿದ್ದನು ಗಿಝ್ನಿಯ ರಾಜ್ಯವು ಇವನ ಕೈಸೇರಿತ್ತು. ಹಿಂದುಸ್ಥಾನದ ಮೇಲೂ ಬರಬಹುದೆಂಬ ಹೆದರಿಕೆಯಿತ್ತು ಸಿಂಧುನದದ ವರೆಗೆ ಬಂದ ಚಂಗೀಝ್‌ನ

---

* "ಮೋಂಗಲರು ಭಯಂಕರ ಸ್ವರೂಪದ ಭೂತಪಿಶಾಚಿಗಳನ್ನು ಪೂಜಿಸುತ್ತಿದ್ದರು. ದಸ್ಪಾದ ತುಟಿ, ಅಗಲಾದ ಎದೆ, ಕಾಕದೃಷ್ಟಿ ಇವು ಇವರ ಲಕ್ಷಣಗಳು. ಇವರು ಅತಿ ಕ್ರೂರರು. ಚಾಂಗೀಝ್‌ಖಾನನ ಹಾಗು ಅವನ ವಂಶಜರ ಕೈಕೆಳಗಿದ್ದ ಮಧ್ಯಏಶಿಯದ ಮುಸಲ್ಮಾನರ ರಾಜ್ಯಗಳನ್ನೂ ರಶಿಯಾ ಪೋಲಂಡ, ಹಂಗರಿ ಈ ಪ್ರದೇಶಗಳನ್ನೂ ಇವರು ಹಾಳುಮಾಡಿದರು. ಗಂಡಸರನ್ನೂ ಹೆಂಗಸರನ್ನೂ ಸೆರೆಹಿಡಿದು ಗುಲಾಮರಂತೆ ಮಾರುತ್ತಿದ್ದರು." ಎಂದು ರಶಿಯನ್ ಇತಿಹಾಸ ಕರ್ತನಾದ ಸರ್. ಡಿ. ಮೆಕೆಂಝಿ ವಾಲೀಸ ಎಂಬವನು ಬರೆದಿರುವನು.

ದಾಳಿಯು ಇಲ್ತುಮಶನ ಯುಕ್ತಿಯಿಂದ ಅಷ್ಟಕ್ಕೇ ಹಿಂದಿರುಗಿ ಪಶ್ಚಿಮಕ್ಕೆ ನಾಗಿತು. ಚಂಗೀಝನು ಖಾನನು ಅತಿ ಕ್ರೂರನಾಗಿದ್ದು ಕಡೆಯ ೨೦ ವರ್ಷ ಗಳಲ್ಲಿ ೧ ಕೋಟಿ ೪೦ ಲಕ್ಷ ಜನರನ್ನು ಸಂಹರಿಸಿದನೆಂದು ಹೇಳುವರು. ಧರ್ಮ, ವಿದ್ವಾಂಸರನ್ನು ಅವನು ದ್ವೇಷಿಸುತ್ತಿದ್ದನು. ಅವನು ಬಾಯಬಲ್ ಗ್ರಂಥವನ್ನು ಸುಡಿಸಿದನು! ಕುರಾನವನ್ನು ಕುದುರೆಯ ಕಾಲಿಗೆ * ತುಳಿ ಸಿದನು!! ಈ ನರರಾಕ್ಷಸನು ಕ್ರಿ. ಶ ೧೨೨೭ರಲ್ಲಿ ಸತ್ತನು



೪.**ಸುಲ್ತಾನಾ ರಜಿಯಾ**:— (ಕ್ರಿ. ಶ. ೧೨೩೬-೧೨೩೯) ಇಲ್ತುಮನ ತರುವಾಯ ಆಳುತ್ತಿದ್ದ ಅವನ ಮಗ **ರುಕ್ನುದ್ದೀನನು** ವಿಲಾಸಿಯೂ ರಾಜ್ಯವಾಳಲು ಅಯೋಗ್ಯ ನೂ ಆಗಿದ್ದನು. ಆಗ ಅವನ ತಂಗಿಯಾದ **ಸುಲ್ತಾನಾ ರಜಿಯಳು** ಸ್ವಲ್ಪ ದಿವಸಗಳಲ್ಲಿ ಅವನನ್ನು ತಳ್ಳಿ ತಾನೇ ಪಟ್ಟಕ್ಕೆ ಬಂದಳು. ಇಲ್ತುಮಶನು ಯುದ್ಧದಲ್ಲಿ ತೊಡಗಿರುವಾಗ ಈ ರಜಿಯಳೇ ತನ್ನ ತಂದೆಯ ಕಾರಭಾರ ವನ್ನು ನಾಗಿಸುತ್ತಿದ್ದಳು ಇಲ್ತುಮಶನು ಈಕೆಯ ಧೈರ್ಯ – ಚಾತುರ್ಯ – ಕರ್ತೃತ್ವ ಶಕ್ತಿಗಳನ್ನು ನೋಡಿ, ತನ್ನ ತರುವಾಯ ಈಕೆಯೇ ರಾಜ್ಯವಾಳಲು ತಕ್ಕವಳೆಂದು ತಿಳಿದಿದ್ದನು. ವೀರ ಪುರುಷನಂತೆ ಈಕೆಯು ಉಡುಪು-ತೊಡುಪುಗಳನ್ನು ಧರಿಸುತ್ತಿದ್ದಳು. ಚಾತು-ರ್ಯದಿಂದ ಕಾರಭಾರವನ್ನು ನಾಗಿಸಿ ಹಲಕೆಲವು ಸುಧಾರಣೆಗಳನ್ನು ಮಾಡಿ ದಳು ಸ್ತ್ರೀಯ ಮೇಲಧಿಕಾರವಲ್ಲಿ ಇರಲು ಮನಸ್ಸೊಪ್ಪದ ತುರ್ಕಿ ಸರದಾರರು ಈಕೆ ಒಬ್ಬ ಹಬಸೀ ಗುಲಾಮನ ಒಲವಿನಂತೆ ನಡೆಯಹತ್ತಿದ ನೆವಮಾಡಿ ಬಂಡಾಯವನ್ನೆಬ್ಬಿಸಿದರು. ಈ ಬಂಡಾಯಗಾರರ ಮುಖ್ಯನಾದ **ಅಲ್ತೂನಿ** ಯು ರಜಿಯಳನ್ನು ಸೆರೆಹಿಡಿಯಲು ಈಕೆಯು ಅವನೊಡನೆ ಮದುವೆಯಾ-ದಳು. ಆಗ ಉಳಿದ ಸರದಾರರು ರೊಚ್ಚಿನಿಂದ ಇವರಿಬ್ಬರನ್ನೂ ಕೊಂದು

---

* ಫ್ರೆಂಚ್ ಬರಹಗಾರರ ಹಿಂದುಸ್ಥಾನದ ಸೋಷಲಿಸ್ಟಿಕ ಇತಿಹಾಸ ಪು. ೧೦೧.

ಹಾಕಿದರು. ಕ್ರಿ. ಶ. ೧೨೩೯. ದಿಲ್ಲಿಯನ್ನು ಆಳಿದ ಮುಸಲ್ಮಾನ 'ಅರಸಿ' ಎಂದರೆ ಈಕೆಯೊಬ್ಬಳೇ.

೫. ನಾಸಿರುದ್ದೀನ ಮಹಮೂದ:— (ಕ್ರಿ ಶ. ೧೨೪೬-೧೨೬೬) ಸುಲ್ತಾನ ರಜಿಯಳ ತರುವಾಯ ನಾಲ್ಕೈದು ವರ್ಷ, ರಾಜ್ಯದಲ್ಲಿ ಬಹಳ ಗೊಂದಲವಿತ್ತು. ಈ ಅವಧಿಯಲ್ಲಿ ಬಹರಾಮ್, ಮಸ್‌ಊದರು ಕ್ರೂರತನದಿಂದ ಆಳಿದರು. ಅವಿಂರರು ಮಸ್‌ಊದನನ್ನು ತಳ್ಳಿ ಇಲ್ತುಮನ ಕಡೆಯ ಮಗನಾದ **ನಾಸಿರುದ್ದೀನನನ್ನು** ಪಟ್ಟಕ್ಕೆ ಕೂಡಿಸಿದರು. ನಾಸಿರುದ್ದೀನನು **ಗಯಾಸುದ್ದೀನನೆಂಬ** ಜಾಣನಾದ ಮಂತ್ರಿಯ ಸಹಾಯದಿಂದ ಸುತ್ತಲು ಹಬ್ಬಿದ ಬಂಡಾಯಗಳನ್ನು ಮುರಿದನು. ಇವನು ಶೌರ್ಯದಿಂದ ಮೊಗಲರನ್ನು ತಡೆಯಲು, ಚಂಗೀಝ್‌ಖಾನನ ಮಗ **ಹಲಾಕುಖಾನನು** ಇವನೊಡನೆ ಸ್ನೇಹದ ಒಡಂಬಡಿಕೆಯನ್ನು ಮಾಡಿಕೊಂಡನು. ರಾಜ್ಯವನ್ನು ವಿಸ್ತರಿಸಿ ಪ್ರಜೆಗಳಿಗೆ ಹಿತವಾಗುವಂತೆ ಇವನು ಕಾರಭಾರವನ್ನು ಸಾಗಿಸಿದನು.



ನಾಸಿರುದ್ದೀನ ಮಹಮೂದ

ಈತನು ಶಾಂತನೂ, ಧರ್ಮಶೀಲನೂ, ಸಾಧುವೃತ್ತಿಯವನೂ. ವಿದ್ಯಾವಂತನೂ ಆಗಿದ್ದನು. ಧರ್ಮಗ್ರಂಥಗಳ ಪ್ರತಿಗಳನ್ನು ಕೈಯಿಂದ ಬರೆದು ಅವುಗಳನ್ನು ಮಾರಿ ಬಂದ ಹಣದಿಂದ ತನ್ನ ಉಪಜೀವನವನ್ನು ಸಾಗಿಸುತ್ತಿದ್ದನು. ಉಡುಗೆ ತೊಡುಗೆಗಳು ಉರುಟು ನೂಲಿನವೇ ಇರುತ್ತಿದ್ದವು ಈತನಿಗೆ ಒಬ್ಬಳೇ ಹೆಂಡತಿಯಿದ್ದು ಆಕೆಯೇ ಇವನಿಗೆ ಅಡಿಗೆ ಮಾಡುತ್ತಿದ್ದಳು "ನಾನು ರಾಜ್ಯದ ಒಡೆಯನಲ್ಲ; ಸಂರಕ್ಷಕನು ಆದದರಿಂದ ಪ್ರಜೆಗಳಿಂದ ಕೂಡಿದ ಹಣವನ್ನು ನನಗೋಸುಗ ಉಪಯೋಗಿಸುವದು ತಕ್ಕದ್ದಲ್ಲ" ಎಂದು ಇವನು ಎನ್ನುವನು. ಕ್ರಿ. ಶ. ೧೨೬೬ರಲ್ಲಿ ಈತನು ಮರಣ ಹೊಂದಿದನು.

೬. **ಬಲ್ಬನ್**:— (ಕ್ರಿ. ಶ. ೧೨೬೬ — ೧೨೮೬) ಗಯಾಸುದ್ದೀನ ಎಂಬುದು ಇವನ ಮೊದಲಿನ ಹೆಸರು. ಚಿಕ್ಕಂದಿನಲ್ಲಿ ಗುಲಾಮನಾಗಿದ್ದನು. ಕುರೂಪಿಯಾಗಿದ್ದದರಿಂದ ಇವನನ್ನು ನೋಡಲು ಯಾರೂ ಕೊಳ್ಳಲಿಲ್ಲ ಇವನು, ಎಷ್ಟೋ ಗುಲಾಮರನ್ನು ಕೊಂಡಿದ್ದ ಇಲ್ತುಮಶನಿಗೆ 'ಒಡೆಯರೇ, ದೇವರ ಹೆಸರಿನಿಂದ ನನ್ನೊಬ್ಬನನ್ನು ಕೊಂಡುಕೊಳ್ಳಿರಿ!' ಎಂದನು. ಆಗ ಇಲ್ತುಮಶನು ಕನಿಕರಬಟ್ಟು ಇವನನ್ನು ಕೊಂಡುಕೊಂಡು ಬಂದು ನೀರು ತರುವ ಕೆಲಸಕ್ಕೆ ಹಚ್ಚಿದನು ಹೀಗೆ ಎಲ್ಲರಿಗೂ ಬೇಸರಾಗಿದ್ದ ಈ ಗಯಾಸುದ್ದೀನನು ತನ್ನ ಜಾಣತನದಿಂದ ಹೆಸರಿಗೆ ಬಂದು ಇಲ್ತುಮಶನ ರಾಜ್ಯದ ಆಧಾರ ವೆನಿಸಿದನು



ಬಲ್ಬನ್

ನಾಸಿರುದ್ದೀನನ ಇಪ್ಪತ್ತು ವರ್ಷದ ಆಳಿಕೆಯಲ್ಲಿ ಇವನು ಮುಖ್ಯ ಮಂತ್ರಿಯಾಗಿದ್ದನು. ನಾಸಿರುದ್ದೀನನಿಗೆ ಮಕ್ಕಳಿಲ್ಲದ್ದರಿಂದ ಅವನ ತರುವಾಯ ಗಯಾಸುದ್ದೀನನೇ '**ಬಲ್ಬನ್**' ಎಂಬ ಹೆಸರಿನಿಂದ ಪಟ್ಟಕ್ಕೆ ಕುಳಿತನು. ಬಳಿಕ ಇವನು **ರತನಭೋರ, ಮಾಳವ, ಕಲಿಂಜರ**ಗಳ ಹಿಂದು ಅರಸರು ಎಬ್ಬಿಸಿದ ಬಂಡಾಯಗಳನ್ನು ಅಡಗಿಸಿದನು. ಆಗ ಒಂದು ಲಕ್ಷ ಜನರು ಕೊಲೆಗೀಡಾದರು ಬಂಗಾಲದ ಸುಭೇದಾರನಾದ **ತೋಘರಲ್ ಖಾನ**ನು ಬಂಡಾಯವನ್ನೆಬ್ಬಿಸಲು ಅವನನ್ನು ಸೋಲಿಸಿ ಕೊಂದು ಅವನ ವಂಶವನ್ನು ನಿರ್ಮೂಲಮಾಡಿದನು. ಮತ್ತು ಅವನಿಗೆ ಸಹಾಯಕರಾಗಿದ್ದವರನ್ನು ಹುಡುಕಿಸಿ ಅವರನ್ನೂ ಕೊಲ್ಲಿಸಿದನು. ವಾಯವ್ಯ ಸೀಮೆಯ ಪ್ರಾಂತವನ್ನು ಭದ್ರಪಡಿಸಿದನು. ಇವನ ಶೂರ ಮಗನಾದ **ಮಹಮ್ಮದ**ನು ಮೊಗಲರ ದಾಳಿಗಳನ್ನು ತಡೆದು ಅವರನ್ನು ಹಿಂದಕ್ಕಟ್ಟಿದನು. ಆದರೆ ಕಡೆಯ ಕಾಳಗದಲ್ಲಿ ಮಹಮ್ಮದನು ಮೊಗಲರಿಂದ ಹತನಾದನು. ಈ ಪ್ರಿಯಪುತ್ರನ ವಿಯೋಗದಿಂದ ೮೦ ವರ್ಷದ ಮುಪ್ಪಿನ ಬಲ್ಬನನು ಎದೆಯೊಡೆದುಕೊಂಡು ಸತ್ತನು.

ಇವನು ಶೂರನೂ, ಚತುರನೂ, ವೈಭವಪ್ರಿಯನೂ ಆಗಿದ್ದನು. ಯಾರ ಆಟವನ್ನೂ ನಡೆಯಗೊಡದೆ ರಾಜ್ಯವನ್ನು ವಿಸ್ತರಿಸಿದನು ವೈರಿಗಳನ್ನು ಅಡಗಿಸುವ ಭರದಲ್ಲಿಯೂ ಯುದ್ಧದ ಅನಂತರದಲ್ಲಿಯೂ ಇವನು ಮಾಡಿದ ಕೊಲೆಯು ಇವನಲ್ಲಿಯ ಕ್ರೂರತನವನ್ನು ತೋರಿಸುವದು. ಇವನು ವಿದ್ಯಾಭಿಮಾನಿಯಾಗಿದ್ದದರಿಂದ ವಿದ್ವಾಂಸರಿಗೆ ಆಶ್ರಯವನ್ನಿತ್ತನು. **ಅಮೀರ ಖುಸ್‌ರು** ಎಂಬ ಕವಿಯು ಇವನ ಬಳಿಯಲ್ಲಿದ್ದನು. ಮೊಗಲರ ಕಾಟವನ್ನು ತಪ್ಪಿಸಿಬಂದ ನಾಲ್ವರು ಅರಸರು ಇವನ ಹತ್ತಿರಿದ್ದರು ರಾಜ್ಯದಲ್ಲಿ ಮದ್ಯಪಾನಕ್ಕೆ ಪ್ರತಿಬಂಧವಿತ್ತು. ಅಡವಿಗಳನ್ನು ಕಡಿಸಿ ಒಕ್ಕಲತನಕ್ಕೂ ವಸತಿಗೂತಕ್ಕ ಭೂಮಿಗಳನ್ನುಂಟುಮಾಡಿದನು. ಇವನ ವೈಭವವೂ ವ್ಯವಸ್ಥೆಯೂ ವರ್ಣಿಸುವಂತಹವಿದ್ದವು

೭. **ಗುಲಾಮಿ ಮನೆತನದ ಕೊನೆ**:— ಬಲ್ಬನ್ನನ ತರುವಾಯ ಇವನ ಮೊಮ್ಮಗನಾದ **ಮುಅಜುದ್ದೀನ ಕೈಕುಬಾದನನ್ನು** ಅಮೀರರು ಪಟ್ಟಕ್ಕೆ ತಂದರು. ಸುರೂಪಿಯೂ ಸೌಮ್ಯನೂ ಆಗಿದ್ದ ಇವನು ಅಧಿಕಾರ ದೊರೆತ ಬಳಿಕ ವಿಲಾಸಿಯೂ ವ್ಯಸನಿಯೂ ಆಗಿ ರಾಜ್ಯವಾಳಲು ಅಸಮರ್ಥನಾದನು ಈ ಹೊತ್ತನ್ನು ಸಾಧಿಸಿ **ಜಲಾಲುದ್ದೀನ ಖಿಲಜಿ** ಎಂಬ ಸರದಾರನು ಕೈಕುಬಾದನನ್ನು ಕೊಂದು ದಿಲ್ಲಿಯ ಪಟ್ಟವನ್ನು ಆಕ್ರಮಿಸಿದನು ಗುಲಾಮಿ ಮನೆತನವು ಕೊನೆಗಂಡಿತು. ಕ್ರಿ ಶ ೧೨೪೮.


೮. **ಗುಲಾಮಿ ಮನೆತನದ ಆಳಿಕೆಯ ಸಿಂಹಾವಲೋಕನ**:— ಈ ಮನೆತನದ ಹೆಸರಾದ ಅರಸರು ಮೊದಲಿನ ಅರಸರ ಗುಲಾಮರಾಗಿದ್ದವರಿಂದ ಈ ಮನೆತನಕ್ಕೆ **ಗುಲಾಮಿ** ಎಂಬ ಹೆಸರು ಬಂದಿದೆ. ಅರಸರು ಅಮೀರರ ಮತವನ್ನು ಅನುಸರಿಸಿ ಕಾರಭಾರವನ್ನು ಸಾಗಿಸುತ್ತಿದ್ದರು ಕುತುಬುದ್ದೀನನ ಹೊರತು ಯಾರು ಕೈಗಾರಿಕೆಗೆ ಉತ್ತೇಜನವನ್ನು ಕೊಡಲಿಲ್ಲ. ಏಶಿಯಾ ಯುರೋಪಗಳಲ್ಲಿ ಭಯಂಕರ ಹಾವಳಿಯನ್ನು ಮಾಡುತ್ತಿದ್ದ ಮೋಂಗಲರನ್ನು ತಡೆದು, ಹಿಂದುಸ್ಥಾನದಲ್ಲಿ ಶಾಂತತೆಯನ್ನು ಕಾದುಕೊಳ್ಳುವ ಮಹತ್ವದ ಕಾರ್ಯವನ್ನು ಈಮನೆತನದವರು ಮಾಡಿದರು. ಮತ್ತು ಕುತುಬುದ್ದೀನಿನಿಂದ ಸ್ಥಾಪಿತವಾದ ಸಾಮ್ರಾಜ್ಯವನ್ನು ಸ್ಥಿರಪಡಿಸಿದರು.

೨ನೆಯ ಪಾಠ

ಖಿಲಜೀ ಮನೆತನ

(ಕ್ರಿ. ಶ. ೧೨೯೦ — ೧೩೨೧)

೧. **ಜಲಾಲುದ್ದೀನ** :— (ಕ್ರಿ. ಶ. ೧೨೯೦-೧೨೯೬) ಇವನು ಪಟ್ಟಕ್ಕೆ ಬಂದಾಗ ೭೦ ವರ್ಷದ ಮುದುಕನು. ತನ್ನ ಅಧಿಕಾರವನ್ನು ಸ್ಥಿರಗೊಳಿಸಿದ



ದೇವಗಿರಿಯ ಕೋಟೆ

ಬಳಿಕ ಇವನು ಸೌಮ್ಯನಾಗಿ ಆಳಹತ್ತಿದನು. ಆದರೆ ಇವನ ಅಣ್ಣನ ಮಗನಾದ **ಅಲ್ಲಾ ಉದ್ದೀನ**ನು ಚಾತುರ್ಯದಿಂದಲೂ ಪರಾಕ್ರಮದಿಂದಲೂ ಎಲ್ಲ ತುರ್ಕೀ ಸರದಾರರನ್ನು ಅಂಕಿತದಲ್ಲಿಟ್ಟುಕೊಂಡನು. ಈ ಅಲ್ಲಾ ಉದ್ದೀನನು ಕ್ರಿ. ಶ. **೧೨೯೪** ರಲ್ಲಿ ಮಾಳವ, ಬುಂದೇಲಖಂಡಗಳಲ್ಲಿದ್ದ ಬಂಡಾಯವನ್ನು ಅಡಗಿಸಿದನು. ಬಳಿಕ ಇವನು ವಿಂಧ್ಯಪರ್ವತದ ವಿಸ್ತಾರವಾದ ಪ್ರದೇಶವನ್ನು ದಾಟಿ ದೇವಗಿರಿ ಯಾದವರ ರಾಜ್ಯವನ್ನು ಸೇರಿದನು.

"ಕಕ್ಕನೊಡನೆ ಜಗಳಾಡಿ ಹೊರಬಿದ್ದು ಊಳಿಗವನ್ನು ಹುಡುಕುತ್ತ ಬೇರೆ ಕಡೆಗೆ ಹೋಗುವೆನು" ಎಂದು ಅವನು ಸುದ್ದಿಯನ್ನು ಹಬ್ಬಿಸಿದನು. ಮತ್ತು **ದೇವಗಿರಿ**ಯ ಸಮೀಪಕ್ಕೆ ಬಂದಕೂಡಲೆ ಅಕಸ್ಮಾತ್ತಾಗಿ ಪಟ್ಟಣವನ್ನು ಮುತ್ತಿದನು. ದೇವಗಿರಿಯ ಅರಸನಾದ **ರಾಮದೇವ**ನು ಅಲ್ಲಾಉದ್ದೀನನ ಸಂಬಂಧದ ಸುಳ್ಳುಸುದ್ದಿಯನ್ನೇ ನಂಬಿ ಯುದ್ಧಕ್ಕೆ ಸಿದ್ಧತೆಯಿಲ್ಲದೆ ಸ್ವಸ್ಥವಾಗಿದ್ದನು. ಆದದರಿಂದ ನಿರುಪಾಯನಾಗಿ ಒಪ್ಪಂದಮಾಡಿಕೊಂಡು **ಯಲಿಚಪೂರ** ಕೋಟೆಯನ್ನು ಅಲ್ಲಾಉದ್ದೀನನಿಗೆ ಬಿಟ್ಟುಕೊಟ್ಟನು. ಮತ್ತು ಪ್ರತಿ ವರ್ಷ ಕಪ್ಪವನ್ನು ಕೊಡಲೊಪ್ಪಿದನು. ಹೀಗೆ ಜಯಶೀಲನಾಗಿ ಅಲ್ಲಾಉದ್ದೀನನು ದಿಲ್ಲಿಗೆ ಬರಲು ಜಲಾಲುದ್ದೀನನಿಗೆ ಬಹಳ ಸಂತೋಷವಾಯಿತು. ಆದರೆ ಅಲ್ಲಾಉದ್ದೀನನು ಕಕ್ಕನ ಸರದಾರರಿಗೆ ಲಂಚ ಕೊಟ್ಟು ಅವರನ್ನು ತನ್ನ ಕಡೆಗೆ ಮಾಡಿಕೊಂಡು ಹೊತ್ತು ಸಾಧಿಸಿ ಕಕ್ಕನನ್ನು ಕೊಲ್ಲಿಸಿದನು. ತನ್ನ ಕಾರ್ಯವಾದ ಬಳಿಕ ಕಕ್ಕನಿಗೆ ವಿಶ್ವಾಸಘಾತ ಮಾಡಿದವರೆಂದು ತಪ್ಪು ಹೊರಿಸಿ ಅವರನ್ನು ಕಠಿಣವಾಗಿ ಶಿಕ್ಷಿಸಿ ಅವರ ಸಂಪತ್ತನ್ನು ಹರಣಮಾಡಿದನು. ಮತ್ತು ನಂಬಿಗೆಗೆ ತಕ್ಕವರಾದವರನ್ನು ಸನ್ಮಾನಿಸಿದನು. ಹೀಗೆ ಇವನ ಸ್ವಭಾವವು ವಿಚಿತ್ರವಾಗಿತ್ತು.

೨. ಅಲ್ಲಾಉದ್ದೀನ:-(ಕ್ರಿ. ಶ ೧೨೯೬-೧೩೧೫) ಇವನು ಕ್ರಿ. ಶ. ೧೨೯೬ರಲ್ಲಿ ಮೊಗಲರ ಮೊದಲನೆಯ ದಾಳಿಯನ್ನು ಹಿಂದಕ್ಕಟ್ಟಿದನು. ಬಳಿಕ ಗುಜರಾಥದ ಮೇಲೆ ಸಾಗಿ ಹೋಗಲು ಅಲ್ಲಿಯ ಅರಸನಾದ **ಕರ್ಣರಾಯ**ನು ಓಡಿಹೋದನು. ಅಲ್ಲಾಉದ್ದೀನನು ಆ ರಾಜ್ಯವನ್ನು ವಶಮಾಡಿಕೊಂಡು ಕರ್ಣರಾಯನ ಹೆಂಡತಿಯಾದ **ಕಮಲಾದೇವಿ**ಯನ್ನು ದಿಲ್ಲಿಗೆ ಹಿಡಿದೊಯ್ದನು.



ಅಲ್ಲಾಉದ್ದೀನ

ಈ ರೀತಿ ಎಡೆಬಡದೆ ದೊರೆತ ವಿಜಯಗಳಿಂದ ಇವನಿಗೆ ಗರ್ವವುಂಟಾಯಿತು. ತಾನು ಪೈಗಂಬರನಾಗಿ ಹೊಸ ಧರ್ಮವನ್ನು ಸ್ಥಾಪಿಸಬೇಕೆಂದು

ಎಣಿಸಿದನು. ಮತ್ತೊಮ್ಮೆ ಜಗತ್ತನ್ನೆಲ್ಲ ಗೆದ್ದು ೨ನೆಯ ಅಲೆಕ್ಸಾಂಡರನೆನಿಸ ಬೇಕೆಂದು ಬಯಸಿದನು. ನಾಣ್ಯಗಳ ಮೇಲೆ ತನ್ನ ಹೆಸರಿನ ಮುಂದೆ **೨ನೆಯ ಅಲೆಕ್ಸಾಂಡರ** ಎಂದು ಬಿರುದು ಹಾಕಿಸಿದನು. ಅಲ್ಲಾಉದ್ದೀನನ ಈ ವಿಚಾರ ಗಳನ್ನು ತಿಳಿದ ಒಬ್ಬ ಗೃಹಸ್ಥನು ಇವನಿಗೆ, ಧರ್ಮವನ್ನು ಸ್ಥಾಪಿಸುವದು ನಿನ್ನ ಕೆಲಸವಲ್ಲ; ಮತ್ತು ಜಗತ್ತನ್ನೇ ಗೆಲ್ಲಬೇಕೆನ್ನುವ ನೀನು ಮೊಗಲರನ್ನೂ ರಜಪುತರನ್ನೂ ಬಿಗುವಿನಲ್ಲಿಡಬಾರದೇ! ಎನ್ನಲು ಅಲ್ಲಾಉದ್ದೀನನು ಸಿಟ್ಟಾ ಗದೆ ಅವನಿಗೆ ಬಹುಮಾನ ಮಾಡಿದನು.

ಕ್ರಿ. ಶ. ೧೩೦೦ ರಲ್ಲಿ ರಜಪುತಸ್ಥಾನವನ್ನು ಗೆಲ್ಲುವ ನಿಶ್ಚಯದಿಂದ ರತನಭೋರವನ್ನು ಮುತ್ತಿದನು ರಜಪುತರ ರಾಜ್ಯಗಳಲ್ಲಿ ಮುಖ್ಯವಾದ **ಚಿತ್ತೂರನ್ನು** ತಕ್ಕೊಂಡರೆ ರಜಪುತಸ್ಥಾನವೆಲ್ಲ ಸಹಜವಾಗಿ ವಶವಾಗುವ ದೆಂದೆಣಿಸಿ ಅತ್ತ ಸಾಗಿದನು. ಆಗ ಚಿತ್ತೂರನ್ನು **ಲಕ್ಷ್ಮಣಸಿಂಗನು** ಆಳುತ್ತಿ ದ್ದನು. ಅವನ ಕಕ್ಕನಾದ **ಭೀಮಸಿಂಗನ ಪದ್ಮಿನಿ**ಯೆಂಬ ರೂಪವತಿಯಾದ ಹೆಂಡತಿಯನ್ನು ಕೈವಶ ಮಾಡಿಕೊಳ್ಳುವ ದುರಾಶೆಯು ಅಲ್ಲಾಉದ್ದೀನನಿಗೆ ಉಂಟಾಯಿತು. ಅದಕ್ಕಾಗಿ ಅವನು ಭೀಮಸಿಂಗನನ್ನು ಯುಕ್ತಿಯಿಂದ ಸೆರೆ ಹಿಡಿದು "ಪದ್ಮಿನಿಯನ್ನು ಒಪ್ಪಿಸದಿದ್ದರೆ ನಿನ್ನನ್ನು ಬಿಡುವದಿಲ್ಲ" ಎಂದು ತಿಳಿಸಿದನು. ಈ ಸುದ್ದಿಯನ್ನು ಕೇಳಿ ಪದ್ಮಿನಿಯು 'ಪರಿವಾರ ಸಹಿತ ನಾನು ನಿಮ್ಮ ಪಾಳ್ಯಕ್ಕೆ ಬರುವೆ' ನೆಂದು ಅಲ್ಲಾಉದ್ದೀನನಿಗೆ ಹೇಳಿಕಳುಹಿದಳು. ಬಳಿಕ ಒಳಗೆ ಸಶಸ್ತ್ರರಾದ ರಜಪುತರುಳ್ಳ ಬುರಕೆ ಹಾಕಿದ ಮೇಣಿಗಳು ಪದ್ಮಿನಿರಾಣಿಯ ಪರಿವಾರವೆಂದು ಹೇಳಿ ಅಲ್ಲಾಉದ್ದೀನನ ಪಾಳ್ಯದೊಳಗೆ ಹೋದವು ಹೊತ್ತುನೋಡಿ ರಜಪುತ ವೀರರು ಒಮ್ಮೆಲಿ ಶತ್ರುಗಳ ಮೇಲೆ ಬಿದ್ದು ಕೋಲಾಹಲವನ್ನು ಎಬ್ಬಿಸಿ ಭೀಮಸಿಂಗನನ್ನು ಸುರಕ್ಷಿತವಾಗಿ ದಾಟಿ-ಸಿದರು. ಅಲ್ಲಾಉದ್ದೀನನು ರಜಪುತರ ಕೈಯೊಳಗಿಂದ ಪಾರಾಗಿ ದಿಲ್ಲಿಗೆ ಹೋದನು. ಆದರೆ ಮರುವರ್ಷ ಹೆಚ್ಚು ಸನ್ನಾಹಮೊಂದಿಗೆ ಮತ್ತೆ ಚಿತ್ತೂರ ವನ್ನು ಮುತ್ತಿದನು. ಚಿತ್ತೂರು ಇವನ ಕೈವಶವಾಗುವದೆಂದು ತಿಳಿದ ಮೇಲೆ ರಜಪುತ ಸ್ತ್ರೀಯರು ಮುಂದೊದಗುವ ಪ್ರಸಂಗವನ್ನು ತಪ್ಪಿಸುವದಕ್ಕಾಗಿ ಸ್ವಸಂತೋಷದಿಂದ **"ಜೋಹರ"** ಎಂದರೆ ಅಗ್ನಿಪ್ರವೇಶವನ್ನು ಮಾಡಿದರು. ವೀರರು ಶತ್ರುಗಳೊಡನೆ ಕಾದುತ್ತ ಮಡಿದರು. ಕ್ರಿ. ಶ. ೧೩೦೩. ಆಗ

ಚಿತ್ತೂರು ಅಲ್ಲಾಉದ್ದೀನನ ಕೈಸೇರಿದರೂ ಅವನ ಜೀವಮಾನದಲ್ಲಿಯೇ **ಹವಿೂರ**ನೆಂಬ ರಜಪುತ ವೀರನಿಂದ ಅದಕ್ಕೆ ಸ್ವಾತಂತ್ರ್ಯವು ದೊರೆತು. ಕ್ರಿ. ಶ. **೧೩೧೩.**

ಮೊಂಗಲರ ದಾಳಿಗಳನ್ನು ತಡೆದದ್ದು.—ಮೇಲಿಂದಮೇಲೆ ಏರಿಬರತಕ್ಕ ಮೊಗಲರನ್ನು ತಡೆಯುವದಕ್ಕಾಗಿ ಅಲ್ಲಾಉದ್ದೀನನು **ದೀಪಲಪುರ**ದ ಕೋಟೆಯನ್ನು ಚೆನ್ನಾಗಿ ಭದ್ರಪಡಿಸಿ ಅಲ್ಲಿ ಬಲವಾದ ಸೈನ್ಯವನ್ನಿಟ್ಟನು. ಮೊಗಲರು ಕ್ರಿ. ಶ. ೧೩೦೫ರಲ್ಲಿ ಮೂರನೆಯ ಸಾರೆ ದಾಳಿಮಾಡಿದಾಗ ಅಲ್ಲಾಉದ್ದೀನನು ಅವರನ್ನು ಹಿಂದಕ್ಕಟ್ಟಿದನು.

ಮಲಿಕ್ ಕಾಫೂರನು ದಕ್ಷಿಣವನ್ನು ಜಯಿಸಿದ್ದು:– ಮಲಿಕ್ ಕಾಫೂರನು ಮೊದಲು ಹಿಂದು ಆಗಿದ್ದು, ಗುಜರಾಥದಲ್ಲಿ ಅಲ್ಲಾಉದ್ದೀನನ ಕೈಗೆ ಸಿಕ್ಕು ಗುಲಾಮನಾದನು. ಅಲ್ಲಾಉದ್ದೀನನು ಇವನ ಪ್ರಾಮಾಣಿಕತನವನ್ನೂ ಪರಾಕ್ರಮವನ್ನೂ ಕಂಡು ಇವನನ್ನು ಮುಖ್ಯ ಸೇನಾಪತಿಯನ್ನು ಮಾಡಿದನು. ಈ ಮಲಿಕ್ ಕಾಫೂರನು ಕ್ರಿ. ಶ. **೧೩೦೭**ರಲ್ಲಿ ದೇವಗಿರಯನ್ನು ಮುತ್ತಿ ರಾಮದೇವನನ್ನು ಸೆರೆಹಿಡಿದು ದಿಲ್ಲಿಗೆ ಕಳುಹಿದನು. ಆದರೆ ಅಲ್ಲಾಉದ್ದೀನನು ಮಾಂಡಲಿಕನಾಗಿರಲೊಪ್ಪಿದ ಇವನನ್ನು ಮರ್ಯಾದೆಯಿಂದ ತಿರುಗಿ ದೇವಗಿರಿಗೆ ಕಳುಹಿದನು. ಮುಂದೆ ಈ ರಾಮದೇವನ ಮಗನಾದ **ಶಂಕರದೇವ**ನು ಸ್ವತಂತ್ರನಾದದರಿಂದ ಮಲಿಕ್ ಕಾಫೂರನು ಎರಡನೆಯ ಸರತಿ ದೇವಗಿರಿಯ ಮೇಲೆ ಸಾಗಿಬಂದು ಕ್ರಿ. ಶ. **೧೩೧೨**ರಲ್ಲಿ ಶಂಕರದೇವನ ಮೈದೊಗಲನ್ನು ಸುಲಿಸಿ ಕೊಂದು ಅವನ ರಾಜ್ಯವನ್ನು ದಿಲ್ಲಿಯ ರಾಜ್ಯಕ್ಕೆ ಸೇರಿಸಿದನು

ಇವನು ಕ್ರಿ. ಶ. **೧೩೧೪**ರಲ್ಲಿ **ಒರಂಗಲ್ಲಿನ** ಮೇಲೆ ದಂಡೆತ್ತಿ ಹೋಗಿ ಆ ಕೋಟೆಯನ್ನು ವಶಮಾಡಿಕೊಂಡನು. ಆಗ ಅಲ್ಲಿಯ ಅರಸನು ಮಾಂಡಲಿಕನಾಗಲು ಒಪ್ಪಿದನು. ಮರುವರ್ಷ ಮಲಿಕ್ ಕಾಫೂರನು ಹೊಯ್ಸಳರ ದ್ವಾರಸಮುದ್ರವನ್ನೂ ಪಾಂಡ್ಯರ ಮಧುರೆಯನ್ನೂ ಗೆದ್ದುಕೊಂಡು ಕನ್ಯಾಕುಮಾರಿಯ ವರೆಗೆ ಸಾಗಿ ಅಲ್ಲಲ್ಲಿ ತನ್ನ ಅಧಿಕಾರಿಗಳನ್ನು ನಿಯಮಿಸಿದನು. ಮತ್ತು ದಕ್ಷಿಣ ಸಮುದ್ರ ತೀರದಲ್ಲಿ ಒಂದು ಮಸೀದೆಯನ್ನು ಕಟ್ಟಿಸಿ ದಿಲ್ಲಿಯ ಕಡೆಗೆ ತಿರುಗಿದನು ಸಂಗಡ ೬೧೨ ಆನೆಗಳನ್ನೂ ೨೦ ಸಾವಿರ ಕುದುರೆಗಳನ್ನೂ ಹೇರಳ ಬಂಗಾರವನ್ನೂ ಒಯ್ದನೆಂದು ಹೇಳುವರು.

ಅಲ್ಲಾಉದ್ದೀನನ ಯೋಗ್ಯತೆ:— ಇವನಿಗೆ ಇಡೀ ಹಿಂದುಸ್ಥಾನದಲ್ಲಿ ಇದಿರಾಗಿ ನಿಲ್ಲುವವರು ಯಾರೂ ಉಳಿಯಲಿಲ್ಲ. ಮುಸಲ್ಮಾನಿ ಸಾಮ್ರಾಜ್ಯವು ಒಳ್ಳೆಯ ವಿಸ್ತಾರವನ್ನು ಹೊಂದಿತು. ಇಷ್ಟು ದೊಡ್ಡ ಪ್ರದೇಶವನ್ನು ಹೆಸರಾದ ಮೊಗಲ ಬಾದಶಹರು ಕೂಡ ಆಳಲಿಲ್ಲ. ಸೈನಿಕರ ಸಂತೋಷಕ್ಕಾಗಿ ಅವರಿಗೆ ನಿಯಮಿತವಾದ ಸಂಬಳವನ್ನು ಗೊತ್ತುಮಾಡಿದನು. ಮತ್ತು ಅವರಿಗೆ ಬೇಕಾಗುವ ಕಾಳುಕಡಿಗಳು ಅಗ್ಗವಾಗಿ ದೊರೆಯುವಂತೆ ವ್ಯವಸ್ಥೆಮಾಡಿದನು. ಇವನ ರಾಜ್ಯದಲ್ಲಿ ಮದ್ಯಸಾನಕ್ಕೆ ಅಡ್ಡಿಯಿತ್ತು. ಮದ್ಯದ ವಿಷಯಕ್ಕೆ ತನಗಿದ್ದ ಬೇಸರವನ್ನು ವ್ಯಕ್ತಪಡಿಸುವದಕ್ಕಾಗಿ ಸರಾಯಿ ಕುಡಿಯುವ ಪಾತ್ರೆಗಳನ್ನೇ ಒಡೆಯಿಸಿ ಸಿಲುಕಿ ಇದ್ದ ಸರಾಯಿಯನ್ನೆಲ್ಲ ಸುರುವಿಬಿಟ್ಟನು. ತನ್ನವಿರುದ್ಧ ಒಳಸಂಚು ಮಾಡಬಹುದೆಂದು ಸರದಾರರನ್ನು ಅಪ್ಪಣೆಯಿಲ್ಲದೆ ಒತ್ತಟ್ಟಿಗೆ ಕಲಿಯಗೊಡುತ್ತಿದ್ದಿಲ್ಲ. ಗುಪ್ತ ಚಾರರಿಂದ ಎಲ್ಲ ಕಡೆಯ ಸುದ್ದಿಗಳನ್ನು ತಿಳಿದುಕೊಳ್ಳುತ್ತಿದ್ದನು ಹಿಂಮಗಳನ್ನು ಹೆಚ್ಚು ಬಲಾತ್ಕಾರದಿಂದ ನಡೆಯಿಸಿ ಕೊಳ್ಳುತ್ತಿದ್ದನು. ಇವನು ಶೂರನೂ, ಕರ್ತೃತ್ವಶಾಲಿಯೂ, ಭಾಗ್ಯವಂತನೂ ಆಗಿದ್ದನಂತೆ ಕ್ರೂರನೂ, ಸಂತಾಪಿಯೂ, ಕಾಮಾಂಧನೂ, ಪರಧರ್ಮ ದ್ವೇಷಿಯೂ ಆಗಿದ್ದನು. ಇವನು ಪರಾಕ್ರಮದಿಂದ ಗಳಿಸಿದ ವಿಸ್ತಾರವಾದ ರಾಜ್ಯವು ಇವನ ತರುವಾಯ ತಡವಿಲ್ಲದೆ ಹಾಳಾಗುವದಕ್ಕೆ ಇವನ ದುರ್ಗುಣ ಗಳಿಂದ ಉಂಟಾದ ಪ್ರಜಾಕ್ಷೋಭವೇ ಕಾರಣವಾಯಿತು. ಇವನು ಕ್ರಿ. ಶ. ೧೩೧೬ರಲ್ಲಿ ಮರಣಹೊಂದಿದನು.

ಖಿಲಜೀ ಮನೆತನದ ಕೊನೆ:— ಅಲ್ಲಾಉದ್ದೀನನು ಸತ್ತಕೂಡಲೆ ರಾಜ್ಯದಲ್ಲಿ ಅವ್ಯವಸ್ಥೆಗೆ ಆರಂಭವಾಯಿತು. ಮಲಿಕ್‌ಕಾಫೂರನು ಅಲಾಉದ್ದೀ ನನ ಕಡೆಯ ಮಗನನ್ನು ಪಟ್ಟಕ್ಕೆ ಕೂಡಿಸಿ ತಾನೇ ಮಂತ್ರಿಯಾದನು ಆದರೆ ಮಲಿಕ್‌ಕಾಫೂರನು ತೀರ ಅಪ್ರಿಯನಾಗಿದ್ದರಿಂದ ಬೇಗನೆ ಕೊಲ್ಲಲ್ಪಟ್ಟನು. ಬಳಿಕ ಸರದಾರರು ಅಲ್ಲಾಉದ್ದೀನನ ಹಿರಿಯ ಮಗನಾದ **ಮುಬಾರಕ**ನನ್ನು ಪಟ್ಟಕ್ಕೆ ತಂದರು ಇವನು ದಕ್ಷಿಣಕ್ಕೆ ದಂಡೆತ್ತಿಹೋಗಿ ಪ್ರಬಲನಾಗುತ್ತಿದ್ದ ರಾಮದೇವನ ಅಳಿಯನಾದ **ಹರಿಪಾಲ**ನನ್ನು ಕ್ರೂರತನದಿಂದ ಕೊಲ್ಲಿಸಿದನು. ಅವಿವೇಕಿಯೂ, ಕ್ರೂರನೂ, ದುರ್ವ್ಯಸನಿಯೂ ಆದ ಈ ಮುಬಾರಕನು **ಖುಸ್ರುಖಾನ**ನೆಂಬವನ ಕೈಗೆ ಎಲ್ಲ ಕಾರಬಾರವನ್ನು ಒಪ್ಪಿಸಿ ತಾನು ವಿಲಾಸದಲ್ಲಿ

ಮಗ್ನನಾದನು. ಈ ಖುಸ್ರುಖಾನನು ಮೊದಲು ಹಿಂದುವಾಗಿದ್ದು ಬಳಿಕ ಮುಸಲ್ಮಾನನಾಗಿ ಮುಬಾರಕನ ಪ್ರೀತಿಪಾತ್ರನಾಗಿದ್ದನು. ಇವನು ಹೊತ್ತು ಸಾಧಿಸಿ ಮುಬಾರಕನನ್ನು ಕೊಂದು ತಾನೇ ಅರಸನಾದನು. ಕ್ರಿ. ಶ. **೧೩೨೦.** ಮತ್ತು ಖಿಲಜಿ ಮನೆತನದವರನ್ನೆಲ್ಲ ಕೊಲ್ಲಿಸಿ, ಮಸೀದೆಗಳನ್ನು ಕೆಡವಿಸಿ ಮುಸಲ್ಮಾನರ ಧರ್ಮಗ್ರಂಥಗಳನ್ನು ತುಳಿಸಿದನು ಆಷ್ಟರಲ್ಲಿ ಪಂಜಾಬದ ಸುಭೇದಾರನಾದ **ಗಾಜಿಮುಲಕ** (ಗಯಾಸುದ್ದೀನ ತಘಲಖ)ನು ದಂಡೆತ್ತಿ ಬಂದು, ಖುಸ್ರುಖಾನನನ್ನು ಕೊಂದು, ಖಿಲಜಿ ವಂಶಜರಾರೂ ಇಲ್ಲದ್ದರಿಂದ ಸರದಾರರ ಒಪ್ಪಿಗೆಯಿಂದ ತಾನೇ ದಿಲ್ಲಿಯ ಒಡೆಯನಾದನು ಕ್ರಿ ಶ. **೧೩೨೧.**

೩ನೆಯ ಪಾಠ

ತಘಲಖ ಮನೆತನ

(ಕ್ರಿ. ಶ. ೧೩೨೧ ರಿಂದ ೧೪೧೪)

೧. ಗಯಾಸುದ್ದೀನ :— ಕ್ರಿ ಶ (**೧೩೨೧—೧೩೨೫**). ಇವನು ತನ್ನ ಪರಾಕ್ರಮದಿಂದ ರಾಜ್ಯದಲ್ಲೆಲ್ಲ ಅಡಗಿಸಿ ವಾಯವ್ಯ ಸೀಮೆಯನ್ನು ಚೆನ್ನಾಗಿ ಸಂರಕ್ಷಿಸಿದನು ಕಾಲಕಾಲಕ್ಕೆ ಬಂದ ಮೊಂಗಲರ ದಾಳಿಗಳನ್ನು ತಡೆದು ಅವರನ್ನು ಹಿಂದಕ್ಕೆ ಅಟ್ಟಿದ್ದರಿಂದ ಇವನು "**ಗಾಝಿ ಮುಲಕ**" ಎಂಬ ಹೆಸರನ್ನು ಪಡೆದನು. ಬಂಗಾಲ, ಒರಂಗಲ್ಲುಗಳಲ್ಲಿದ್ದ ಬಂಡಾಯಗಳನ್ನು ಮುರಿದನು. ಪ್ರಜೆಗಳ ಶಾಂತತೆಗಾಗಿ ಭೂಮಿಯ ಕಂದಾಯವನ್ನು ಕಡಿಮೆ ಮಾಡಿದನು. ಎಷ್ಟೋ ಒಳ್ಳೆಯ ಕಾಯಿದೆಗಳನ್ನು ಬಳಿಕೆಯಲ್ಲಿ ತಂದನು. ಇವನ ಸ್ವಾಗತಕ್ಕೆಂದು ಸಿದ್ಧಪಡಿಸಿದ ನುಂಟಪವೇ ಇವನ ಮೇಲೆ ಬೀಳಲು ಅದರಿಂದ * ಮರಣಹೊಂದಿದನು. ಕ್ರಿ ಶ. **೧೩೨೫.**

೨. ಮಹಮ್ಮದ ತಘಲಕ :— ಕ್ರಿ. ಶ. **೧೩೨೫-೧೩೫೧.** ಗಯಾಸುದ್ದೀನನ ತರುವಾಯ ಉಲುಘಖಾನನು **ಮುಮ್ಮಹದ ತಘಲಕ** ಎಂಬ

---

* ಇವನ ಮಗನಾದ ಉಲುಘಖಾನನೇ ರಾಜ್ಯದಾಸೆಯಿಂದ ಮಂಟಪವನ್ನು ಕೆಡವಿಸಿ ಇವನನ್ನು ಕೊಲ್ಲಿಸಿದನೆಂದು ಕೆಲ ಇತಿಹಾಸಕಾರರ ಮತವಿದೆ.

ಹೆಸರಿನಿಂದ ಆಳಹತ್ತಿದನು ಇವನು ಅರಬಿ, ಫಾರ್ಸಿ, ಭಾಷೆಗಳಲ್ಲಿ ಬಲ್ಲಿದನಾಗಿದ್ದನು. ಗ್ರೀಕತತ್ವಜ್ಞಾನ ಮತ್ತು ಗಣಿತ ಈ ವಿಷಯಗಳಲ್ಲಿ ಇವನಿಗೆ ಗತ್ತಿಯಿತ್ತು. ಆ ಚರಣೆಯಿಂದ ಶುದ್ಧನೂ ನಿಯಮಿತನೂ ಆಗಿದ್ದನು. ಸರಾಯಿಯನ್ನು ಮುಟ್ಟುತ್ತಿದ್ದಿಲ್ಲ ದಾನಮಾಡುವದರಲ್ಲಿ ಹೆಸರಾಗಿದ್ದನು. ಶೂರನೂ ಯುದ್ಧಕಲಾನಿಪುಣನೂ ಎನಿಸಿದ್ದನು ಆದರೆ ಹೆಚ್ಚಿನ ದುರಾಗ್ರಹಿಯೂ, ಸಂತಾಪಿಯೂ. ಕ್ರೂರನೂ ಆಗಿದ್ದನು. ಅಸಾಧ್ಯವಾದ ಕಾರ್ಯಗಳನ್ನು ಕೈಕೊಂಡು ಅವು ಸಾಧ್ಯವಾಗದಿರಲು ಸಂತಾಪಗೊಳ್ಳುವನು. ಮತ್ತು ಸಂತಾಪದ ಭರದಲ್ಲಿ ವಿಚಾರಗೆಟ್ಟು ಕ್ರೂರವಾದ ಉಪಾಯಗಳಿಂದ ಆ ಕಾರ್ಯಗಳನ್ನು ಸಾಧಿಸುವ ಹಟಹಿಡಿಯುವನು. ಹೀಗಾಗಿ ಇವನಿಂದ ಪ್ರಜಾಪೀಡೆಯು ಹೆಚ್ಚಾಯಿತು. ಸರದಾರರೆಲ್ಲರು ಅಸಂತುಷ್ಟರಾಗಿ ಬಂಡಾಯಗಳನ್ನೆಬ್ಬಿಸಿದರು. ಈ ಬಂಡಾಯಗಳನ್ನು ಮುರಿಯುವ ಕೆಲಸದಲ್ಲಿಯೇ ಇವನ ಆಯುಷ್ಯವೆಲ್ಲ ಹೋಯಿತು ಆದರೂ ಉಪಯೋಗವೇನೂ ಆಗದೆ ಸುದೈವದಿಂದ ದೊರೆತಿದ್ದ ದೊಡ್ಡ ರಾಜ್ಯವನ್ನು ಹಾಳುಗೆಡವಿದನು.

ಮಹಮ್ಮದ ತಘಲಕನ ಸಾಹಸಗಳು :— ಕ್ರಿ. ಶ **೧೩೨೭** ರಲ್ಲಿ **ತರ್ಮಶರೀನನ** ಕೈಕೆಳಗೆ ಮೋಂಗಲರು ನೆಟ್ಟಗೆ ದಿಲ್ಲಿಯ ವರೆಗೆ ಸಾಗಿಬಂದರು ಆಗ ಇವರನ್ನು ಇದಿರಿಸುವ ಸಾಮರ್ಥ್ಯವಿಲ್ಲದ್ದರಿಂದ ಮಹಮ್ಮದನು ಹೇರಳ ದ್ರವ್ಯವನ್ನು ಕೊಟ್ಟು ಅವರನ್ನು ಹಿಂದಿರುಗಿ ಕಳುಹಿದನು ಬೊಕ್ಕಸವೆಲ್ಲ ಬರಿದಾಯಿತು ! ಬಳಿಕ ಇರಾಣದ ಮೇಲೆ ಸಾಗಿಹೋಗುವ ವಿಚಾರದಿಂದ ಒಂದು ವರ್ಷದ ವರೆಗೆ ಸೈನ್ಯವನ್ನು ಸಜ್ಜುಗೊಳಿಸಿದನು. ಆದರೆ ಮುಂದೆ ವೆಚ್ಚಕ್ಕೆ ಹಣವಿಲ್ಲದಂತಾಗಲು ಆ ಸೈನ್ಯವನ್ನು ಮುರಿದುಬಿಟ್ಟನು. ಕ್ರಿ. ಶ. **೧೩೨೭**ರಲ್ಲಿ ಚೀನ ದೇಶವನ್ನು ಗೆಲ್ಲುವ ಉದ್ದೇಶದಿಂದ ಒಂದು ಲಕ್ಷ ಸೈನ್ಯವನ್ನು **ನೇಪಾಳ**ದ ಮಾರ್ಗವಾಗಿ ಅತ್ತ ಕಡೆಗೆ ಕಳುಹಿದನು. ಆ ಸೈನ್ಯವು **ಹಿಮಾಲಯ**ದಲ್ಲಿ ಚಳಿಯಿಂದ ಬಳಲುತ್ತ ಆಚೆಗೆ ಹೋಗಿ, **ಚೀನ**ದವರೊಡನೆ ಕಾದಿ ಸೋತು ಹಿಂದಿರುಗಿತು. ಬಹುತರ ಎಲ್ಲ ಸೈನ್ಯವು ಚಳಿಯಿಂದ ನಾಶವಾಗಿ ಹತ್ತು ಜನರು ಮಾತ್ರ ದಿಲ್ಲಿಗೆ ಬಂದು ಮುಟ್ಟಿದರು !

ಇವೆಲ್ಲ ಕಾರಣಗಳಿಂದ ಹಣದ ಕೊರತೆಯು ಮತ್ತಿಷ್ಟು ಹೆಚ್ಚಿತು. ಆಗ ಇವನು ರೈತರ ಮೇಲಿನ ಕರವನ್ನು ಹೆಚ್ಚಿಸಿದನು ರೈತರು ಅಸಾಧ್ಯವಾದ

ಕರವನ್ನು ಕೊಡದಿರಲು ಕ್ರೂರತನದಿಂದ ಅವರ ಕೊಲೆ ಮಾಡಿದನು ಎಷ್ಟೋ ಜನರನ್ನು ಸುಲಿಸಿದನು. ಏನು ಮಾಡಿದರೂ ಇವನಿಗೆ ಸಾಕಾದಷ್ಟು ಹಣವು ದೊರೆಯಲಿಲ್ಲ. ಈ ದುಸ್ಥಿತಿಯು ಬರಗಾಲದಿಂದ ಮತ್ತಿಷ್ಟು ಭಯಂಕರ ವಾಯಿತು. ಪ್ರಜೆಗಳು ತ್ರಸ್ತರಾದರು. ವಿಚಾರವಂತರು ಉಪಾಯವನ್ನು ಚಿಂತಿಸಹತ್ತಿದರು. ಸರದಾರರು ಸ್ವತಂತ್ರರಾಗುವ ಸಿದ್ಧತೆಯಲ್ಲಿ ತೊಡಗಿದರು. ರಾಜಸತ್ತೆಯ ಹೊರತು ಯಾರ ಬೆಂಬಲವೂ ಮಹಮ್ಮದನಿಗೆ ಇಲ್ಲದಾಯಿತು. ಹಣದ ಕೊರತೆಯನ್ನು ಅಡಗಿಸುವ ಉಪಾಯವೆಂದು ಇವನು ಬೆಳ್ಳಿಯ ನಾಣ್ಯದ ಬೆಲೆಗೆ ತಾಮ್ರದ ನಾಣ್ಯವನ್ನು ಹಿಡಿಯಬೇಕೆಂದು ಗೊತ್ತುಮಾಡಿ-ದನು. ಆದರೆ ತಗಲು ನಾಣ್ಯಗಳುಂಟಾಗದಂತೆ ಬಿಗಿಯಿಡುವದು ಆಗದೆ ಇದ್ದ ದರಿಂದ ಬೇಕುಬೇಕಾದವರು ನಾಣ್ಯಗಳನ್ನು ನೂಡಹತ್ತಿದರು. ಇಂಥ ತಾಮ್ರದ ನಾಣ್ಯಗಳಿಗೆ ಪ್ರತಿಯಾಗಿ ಕೊಡಲು ಬೆಳ್ಳಿಯ ನಾಣ್ಯಗಳು ಇಲ್ಲವಾ ದವು. ಆದದರಿಂದ ವ್ಯವಹಾರದಲ್ಲಿ ಈ ನಾಣ್ಯದ ಪತ್ತು ಉಳಿಯಲಿಲ್ಲ.

ಕ್ರಿ. ಶ. **೧೩೩೬** ರಲ್ಲಿ **ವಿಜಯನಗರ** ರಾಜ್ಯವು ಸ್ಥಾಪಿತವಾಯಿತು. **ಕಲಬುರ್ಗಿ**ಯ ಸುಭೇದಾರನು ಸ್ವತಂತ್ರನಾಗುವ ಹವಣಿಕೆಯಲ್ಲಿದ್ದನು. ಆದದ ರಿಂದ ದಕ್ಷಿಣ ದೇಶದ ಮೇಲೆ ಲಕ್ಷ್ಯವಿಡುವದಕ್ಕೆ ಹೆಚ್ಚು ಅನುಕೂಲವಾಗ-ಬೇಕೆಂದು ರಾಧಾನಿಯನ್ನು ದಿಲ್ಲಿಯಿಂದ ದೇವಗಿರಿಗೆ ತಂದನು. ಮತ್ತು ದಿಲ್ಲಿಯ ಕಾರಭಾರವನ್ನು ಸಾಗಿಸುವದಕ್ಕಾಗಿ **ಮಲಿಕ್ ಅಹಮ್ಮದ ಅಯಾಜ** ಎಂಬವ ನನ್ನು ನಿಯಮಿಸಿದನು ಮಹಮ್ಮದನು ದೇವಗಿರಿಗೆ ಮೂರು ಸುತ್ತಿನ ಕೋಟೆ ಯನ್ನು ಕಟ್ಟಿಸಿ ಅದಕ್ಕೆ **ದೌಲತಾಬಾದ** ಎಂಬ ಹೆಸರನ್ನಿಟ್ಟನು. ದಿಲ್ಲಿಯಿಂದ ಬಹು ಜನರು ದೌಲತಾಬಾದಕ್ಕೆ ತಮ್ಮ ಪರಿವಾರದೊಡನೆ ಬರಬೇಕಾದದ ರಿಂದ ಅವರಿಗೆ ೭೦೦ ಮೈಲುಗಳ ಈ ಅತಿದೂರದ ಪ್ರವಾಸದಲ್ಲಿ ಅನೇಕ ಕಷ್ಟಗಳು ಒದಗಿದವು. ದೌಲತಾಬಾದಕ್ಕೆ ಬಂದು ಇರಹತ್ತಿದ ಕೆಲವು ದಿವಸ ಗಳಲ್ಲಿಯೇ ಇವನ ಅಣ್ಣನ ಮಗನಾದ **ಬಹಾಉದ್ದೀನ** ಮತ್ತು ಮುಲ್ತಾನದ **ಬಹಿರಾಮು ಐಬ** ಎಂಬವರು ಉತ್ತರದಲ್ಲಿ ಬಂಡಾಯವನ್ನೆಬ್ಬಿಸಿದ್ದರಿಂದ, ದೌಲತಾಬಾದವನ್ನು ಬಿಟ್ಟು ಮರಳಿ ದಿಲ್ಲಿಗೆ ಹೋದನು ಬಳಿಕ ಬಂಡಾಯ-ಗಾರರನ್ನೂ ಸಂಶಯ ಬಂದ ಅಮಿರರನ್ನೂ ಕ್ರೂರತನದಿಂದ ಕೊಲ್ಲಿಸಿದನು.

ಕಡೆಗೆ ಸಿಂಧಪ್ರಾಂತದಲ್ಲೆದ್ದ ಬಂಡಾಯವನ್ನು ಮುರಿಯಹೋದಾಗ **ತಠ್ಠಾ** ಎಂಬಲ್ಲಿ ಮರಣಹೊಂದಿದನು. ಕ್ರಿ ಶ. ೧೩೫೧.

೪ನೆಯ ಪಾಠ

ತ ಘ ಲ ಖ ಮ ನೆ ತ ನ

(ಮುಂದೆ ಸಾಗಿದ್ದು)

೧. ಫಿರೋಜ ತಘಲಖ:— ಕ್ರಿ. ಶ. ೧೩೫೧-೧೩೮೮. ಮಹಮ್ಮದನ ತರುವಾಯ ಅನನ ಕಕ್ಕನ ಮಗನಾದ **ಫಿರೋಜ**ನು ಸರದಾರರ ಸಮ್ಮತಿಯಿಂದ ಸುಲ್ತಾನನಾದನು. ಕೂಡಲೆ ಇವನು ಮಹಮ್ಮದ ತಘಲಖನಿಂದ ನಷ್ಟಹೊಂದಿದವರನ್ನು ಕರೆಯಿಸಿ ಅವರ ಹಾನಿಯನ್ನು ತುಂಬಿಕೊಟ್ಟನು. ಸಾಲದ ಭಾರದಿಂದ ಬಳಲುತ್ತಿದ್ದ ರೈತರ ಕತಬಿಗಳನ್ನು ಹರಿದುಕೊಟ್ಟನು. ಕೈಬಿಟ್ಟ ಪ್ರಾಂತಗಳನ್ನು ಗಳಿಸುವದಕ್ಕಿಂತ ಇದ್ದ ರಾಜ್ಯವನ್ನು ಸುಸ್ಥಿತಿಯಲ್ಲಿಟ್ಟುಕೊಳ್ಳುವದು ಲೇಸೆಂದೆಣಿಸಿ **ವಾಯನ್ಯ ಸೀಮೆ** ಮತ್ತು **ಬಾಹನುನೀ** ರಾಜ್ಯಗಳ ಸ್ವಾತಂತ್ರ್ಯವನ್ನು ಒಪ್ಪಿದನು ಸಿಂಧ, ಬಂಗಾಲಗಳ ಸುಭೇದಾರರೊಡನೆ ಒಪ್ಪಂದಮಾಡಿಕೊಂಡು ಅವರನ್ನು ಮಾಂಡಲಿಕರನ್ನಾಗಿ ಮಾಡಿಕೊಂಡನು ಇವನು ೧೮೦೦೦ ಗುಲಾಮರನ್ನು ಸಾಕಿದ್ದನು

ಇವನು ರಾಜ್ಯದಲ್ಲಿ ಅನೇಕ ಸುಧಾರಣೆಗಳನ್ನು ಮಾಡಿದನು. ಬೀಳು ಭೂಮಿಗಳನ್ನು ಸಾಗುಮಾಡಿ **ಯಮುನಾ, ಸತಲಜ** ನದಿಗಳಿಗೆ ಕಾಲುವೆಗಳನ್ನು ಕಟ್ಟಿಸಿ ಭೂಮಿಗೆ ನೀರು ದೊರೆಯುವಂತೆ ಮಾಡಿದನು ಯಮುನಾ ಕಾಲುವೆಯು ೨೦೦ ಮೈಲು ಉದ್ದನಾಗಿದ್ದು ಈಗಲೂ ಉಪಯೋಗದಲ್ಲಿದೆ ಕಟ್ಟಡಗಳನ್ನು ಕಟ್ಟಿಸುವದರಲ್ಲಿ ಇವನ ಲಕ್ಷ್ಯವು ವಿಶೇಷವಾಗಿತ್ತು; **ಫಿರೋಜಾಬಾದ, ಜೋನಪುರ** ಮುಂತಾದ ಪಟ್ಟಣಗಳನ್ನು ನೆಲೆಸಿದನು. ಹಲವು ಮಸೀದೆ, ಕೋಟೆ, ಪಾಠಶಾಲೆ, ಧರ್ಮಶಾಲೆ, ಅನಾಥಾಲಯ, ಔಷಧಾಲಯ, ಭಾವಿ ಇವುಗಳನ್ನು ಕಟ್ಟಿಸಿದನು. ದಿಲ್ಲಿಯ ಸುತ್ತಲು ಹೂದೋಟಗಳನ್ನು ಮಾಡಿಸಿ ನಗರದ ಸೌಂದರ್ಯವನ್ನು ಹೆಚ್ಚಿಸಿದನು. ಬಡವರಿಗೆ ಸಹ ಬೇಕಾಗುವ ಉಪ್ಪು, ಕಾಯಿಪಲ್ಲೆ, ಹುಲ್ಲು ಬನಗಳ ಮೇಲಿನ ಕರವನ್ನು ತೆಗೆದು-

ಹಾಕಿದನು. ಇವನ ಕಾಲದಲ್ಲಿ ಹಿಂದು ಜನರು **ಫಾರ್ಸೀ** ಭಾಷೆಯನ್ನು ಕಲಿಯಲಾರಂಭಿಸಿದರು.

ಆದರೆ ಇಂತಹ ಶಾಂತನೂ, ಪಜಾಹಿತೈಷಿಯೂ ಆದ ಫಿರೋಜನು ಹಿಂದುಗಳನ್ನು ಮಾತ್ರ ಕೆಲವು ಸುಲ್ತಾನರಂತೆಯೇ ವಕ್ರದೃಷ್ಟಿಯಿಂದ ಕಾಣುತ್ತಿದ್ದನು. ಜಗನ್ನಾಥಪುರಿಯಲ್ಲಿಯ **ಜಗನ್ನಾಥ**ನ ಮೂರ್ತಿಯನ್ನು ದಿಲ್ಲಿಗೆ ಕೆತ್ತಿ ಒಯ್ದನು. ಆಗ ಅತ್ಯಂತ ಸಿಷ್ಣೆಯಿಂದ ಇಸ್ಲಾಮಧರ್ಮವನ್ನು ಅನುಸರಿಸುವ ಇವನಿಗೆ ಎರೂಸಲೇಮುವನ್ನು ಗೆದ್ದ ಸಮಯದಲ್ಲಿ **ತಿನೆಯ ಖಲೀಫನಾದ** ಹಜರತ **ಉಮರ**ನು ಪರಧರ್ಮಿಗಳ ಗುಡಿಗಳನ್ನು ಸಂರಕ್ಷಿಸಿದ ಸಂಗತಿಯು ನೆನಪಿಗೆ ಬಂದಿರಲಿಲ್ಲವೇ!

ಫಿರೋಜಶಹನು ೯೦ ವರ್ಷದ ಮುದಕನಾಗಿ ಕ್ರಿ. ಶ. **೧೩೮೮** ರಲ್ಲಿ ಮರಣಹೊಂದಿದನು.

೨. ತಘಲಕ ಮನೆತನದ ಕೊನೆ :— ಫಿರೋಜನ ತರುವಾಯ ದುರ್ಬಲರಾದ ಅರಸರು ರಾಜ್ಯವಾಳಹತ್ತಿದ್ದರಿಂದ ರಾಜ್ಯದಲ್ಲೆಲ್ಲ ಗೊಂದಲ ವೆದ್ದಿತು. ಫಿರೋಜನು ಸಾಕಿದ ಗುಲಾಮರೇ ಮಲೆತು ನಿಂತರು. ಹಿಂದು ಅರಸರು ಸ್ವತಂತ್ರರಾದರು. ಕ್ರಿ. ಶ. **೧೩೯೦**ರಲ್ಲಿ **ಮಹಮ್ಮದಷಾಹ**ನು ಪಟ್ಟಕ್ಕೆ ಬಂದನು. ಇವನ ಕಾಲದಲ್ಲಿ **ಮೇವಾಡ**ದ ರಜಪುತರು ದಿಲ್ಲಿಯ ವರೆಗೆ ಸಾಗಿಬರಲು ಇವನು ಅವರನ್ನು ಹಿಂದಕ್ಕೆ ಅಟ್ಟಿದನು. ಇವನ ತರುವಾಯ ಕ್ರಿ. ಶ. **೧೪೧೨** ರಲ್ಲಿ **ಮಹಮೂದ**ನು ಆಳಹತ್ತಿದನು ಮಾಳವ, ಖಾನದೇಶ, ಗುಜರಾಥ, ಜವನಪುರಗಳು ಆಗ ಸ್ವತಂತ್ರವಾದವು ಇದೇ ಸಮಯಕ್ಕೆ ಮಧ್ಯಏಶಿಯದ **ತೈಮೂರಲಂಗ**ನ ಭಯಂಕರವಾದ ದಾಳಿಯು ಹಿಂದುಸ್ಥಾನದ ಮೇಲೆ ಬಂದಿತು.

೩. ತೈಮೂರನ ದಾಳಿ :— ಕ್ರಿ. ಶ. **೧೩೯೮.** ಇವನು ತುರ್ಕ ಕುಲದವನು. ಇವನ ತಾಯಿಯು ಚಂಗೀಝನ ವೋಂಗಲ ವಂಶಜಳು. ಕ್ರಿ. ಶ. ೧೩೩೬ ರಲ್ಲಿ ಹುಟ್ಟಿದನು. ೧೭ ವರ್ಷರದವನಿರುವಾಗ ಯುದ್ಧನಾಡ ಹತ್ತಿದನು. ಯುದ್ಧದಲ್ಲಿ ಗಾಯವಾಗಿ ಇವನದೊಂದು ಕಾಲು ಕುಂಟಾಯಿತ್ತು ದರಿಂದ ಇವನಿಗೆ **'ಲಂಗ'** ಎಂದೆನ್ನುತ್ತಿದ್ದರು. ಇವನು ಕ್ರೂರನೂ ದುರಾಗ್ರಹಿಯೂ, ಕರ್ಕಶಧ್ವನಿಯವನೂ, ಕಾಕದೃಷ್ಟಿಯವನೂ ಆಗಿದ್ದನು ಚಂಗೀಝನಿ-

ಗಿಂತ ಸ್ವಲ್ಪ ಸುಧಾರಿಸಿದವನಿದ್ದನು. ಇವನು ಬರೆದ 'ಆತ್ಮಚರಿತ್ರವೂ † ರಾಜ ನೀತಿ ವಿಚಾರವೂ' ಎಂಬ ಗ್ರಂಥವು ಉಪಲಬ್ಧವಿದೆ. ಕ್ರಿ. ಶ. ೧೩೬೯ರಲ್ಲಿ ಇವನು **ಸಮರ್ಕಂದ**ದ ಅರಸನಾದನು. ಮತ್ತು ಪರಾಕ್ರಮದಿಂದ **ತುರ್ಕಸ್ಥಾನ**ದಿಂದ ಅಫಗಾನಿಸ್ತಾನದವರೆಗಿನ ಪ್ರದೇಶವನ್ನು ಗೆದ್ದು ಹಿಂದುಸ್ಥಾನದ ಕಡೆಗೆ ತಿರುಗಿದನು. ಹಿಂದುಸ್ಥಾನದಲ್ಲಿ ಸಂಪತ್ತು ಹೆಚ್ಚಾಗಿದೆ. **ಅಲ್ಲಿಯ** ಅರಸರು ದುರ್ಬಲರು; ಜನರು ಮೂರ್ತಿಪೂಜಕರಿರುವರು ಎಂದು ಅವನು ಕೇಳಿದ್ದನು.

ತನ್ನ ತಮ್ಮನ ಮಗನಾದ **ಪೀರಮಹಮ್ಮದ**ನನ್ನು ಮುಂದೆ ಕಳುಹಿ ಹಿಂದಿನಿಂದ ತಾನು ಬಿರುಗಾಳಿಯಂತೆ ಹೊಕ್ಕು ಕೊಲೆಸುಲಿಗೆ ಮಾಡುತ್ತ ಪಟ್ಟಣಗಳನ್ನು ಕೊಳ್ಳೆಯಿಡುತ್ತ ದಿಲ್ಲಿಯ ಸಮೀಪದಲ್ಲಿ ಬಂದು ೯೦ ಸಾವಿರ ಸೈನ್ಯದೊಂದಿಗೆ ತಳವೂರಿದನು. ಮಹಮೂದಶಹನೂ **ಇಕ್ ಬಾಲಖಾನ** ಮಂತ್ರಿಯೂ ಸೈನ್ಯದೊಡನೆ ಇದಿರಾಗಿ ಶೌರ್ಯದಿಂದ ಕಾದಿದರೂ ಸೋತರು. ತೈಮೂರನ ಸೈನ್ಯದವರು ದಿಲ್ಲಿಯನ್ನು ನೇರಿ ಘೋರತರವಾದ ಕೊಲೆಯನ್ನು ಮಾಡಿ ಅಗಣಿತವಾದ ಸಂಪತ್ತನ್ನು ಸುಲಿದುಕೊಂಡರು. ಲಕ್ಷಾವಧಿ ಜನರು ಜೀವಕ್ಕೆ ಎರವಾದರು. ಬಳಿಕ ತೈಮೂರನು ದಾರಿಗುಂಟ ಅಲ್ಲಲ್ಲಿ ಮೂರ್ತಿಗಳನ್ನು ಒಡೆಯುತ್ತ ಲೆಕ್ಕವಿಲ್ಲದೆ ಕೊಳ್ಳೆ ಕೊಲೆಸುಲಿಗೆಗಳನ್ನು ಮಾಡುತ್ತ ಮಿರತ, ಹರಿದ್ವಾರ, ನಾಗರಕೋಟ, ಜಮ್ಮೂಗಳ ಮಾರ್ಗವಾಗಿ ಹೊರಟನು. ಸೆರೆಯಾಳುಗಳ ಸಂಖ್ಯೆಯು ಹೆಚ್ಚಾಗಲು ೧೫ ವರ್ಷದ ಮೇಲಿನವರನ್ನೆಲ್ಲ ಕೊಲ್ಲಿಸಿಬಿಟ್ಟನು. ಇಷ್ಟರಲ್ಲಿ ಸಮರ್ಕಂದದಲ್ಲಿ ಗೊಂದಲವೆದ್ದ ಸುದ್ದಿಯು ಬಂದ

---

† " ಕಾಫರರನ್ನು ಕೊಂದು, ಮೂರ್ತಿಗಳನ್ನು ನಾಶಗೊಳಿಸಿ, ಹಿಂದುಗಳಿಗೆ ಇಸ್ಲಾಮ ದೀಕ್ಷೆಯನ್ನು ಕೊಟ್ಟು, ಅಲ್ಲಾನ ರಾಜ್ಯದಲ್ಲಿ " ಗಾಝಿ " ಪದವನ್ನು ಪಡೆಯುವದೇ, ಹಿಂದುಸ್ಥಾನದ ಉದ್ದೇಶವು " ಎಂದು ತೈಮೂರನು ತನ್ನ ಚರಿತ್ರದಲ್ಲಿ ಬರೆದಿರುವನು.

ಪರಹಿಂಸೆಯ ಮೂಲಕ ಧರ್ಮಪ್ರಸಾರ ಮಾಡಿದವರು ಅಲ್ಲಾನ ಪ್ರೀತಿಗೆ ಪಾತ್ರರಾಗಬಹುದೆ ? ದೇವರ ಸಂಬಂಧದ ಮಧಾಂಧರ ಕಲ್ಪನೆಯಿದು ! ಇಸ್ಲಾಮ ಧರ್ಮವು ಇಂಥ ಕೃತ್ಯಗಳನ್ನು ಧಿಕ್ಕರಿಸುವದು.

ಕುರಾನದ ಆಧಾರ :—

' ಲಾ ಇಕರಾಹ್ ಫಿದ್ದೀನ ' (ಸೂರಯೆ ಬಕರ್ ರುಕು ಅ ೩ ೪)

ಅರ್ಥ :— ದರ್ಮಪ್ರಸಾರಕ್ಕಾಗಿ ಯಾವ ರೀತಿಯ ಬಲಾತ್ಕಾರವನ್ನು ಮಾಡಲಾಗದು.

(ಆಯಿನಯೆ ಹಕೀಕತ್‌ನುಮಾ ಭಾಗ. ೧ ಪುಟ ೧೨.)

ದರಿಂದ ಅವಸರದಿಂದ ಅತ್ತ **ಹೊರಟುಹೋದನು. ಸಯ್ಯದ ಖಿಜರಖಾನನನ್ನು** ಪಂಜಾಬದ ಸುಭೇದಾರನನ್ನು ಮಾಡಿದನು. ಮನುಷ್ಯ ಜಾತಿಯ ಶತ್ರುಗಳೆನಿಸಿ ದವರಲ್ಲಿ ತೈಮೂರನೊಬ್ಬನು. ಇವನು ತನ್ನ ತೀಕ್ಷ್ಣಬುದ್ಧಿಯನ್ನು ಜನಸಂಹಾರಕನೆನಿಸಿಕೊಳ್ಳುವದರಲ್ಲಿಯೆ ಕಳೆದನು. ಕ್ರಿ. ಶ. ೧೪೦೫ರಲ್ಲಿ ಸತ್ತನು.

೪. **ಸಯ್ಯದ ಮನೆತನ**:— (ಕ್ರಿ. ಶ. **೧೪೧೪-೧೪೫೦**) ತೈಮೂರನ ದಾಳಿಯ ತರುವಾಯ ಕ್ರಿ. ಶ ೧೪೧೭ರ ವರೆಗೆ ಮಹಮೂದಷಾಹನು ಹಾಗೂ ಹೀಗೂ ರಾಜ್ಯವಾಳಿದನು. ಇವನು ಸತ್ತಬಳಿಕ ಎರಡು ವರ್ಷಕ್ಕೆ ಪಂಜಾಬದ ಸಯ್ಯದ ಖಿಜರಖಾನನೆಂಬ ಸುಭೇದಾರನು ದಿಲ್ಲಿಯ ರಾಜ್ಯದ ಒಡೆಯನಾದನು. ಈ ಸೈಯ್ಯದರು ಅರಬರಿದ್ದು ತಾವು ಪೈಗಂಬರರ ವಂಶಜರೆಂದು ಹೇಳುತ್ತಿದ್ದರು. ಖಿಜರಖಾನನು ಚಂದವಾಡ ಇಟಾವಾ ಮುಂತಾದ ಪ್ರದೇಶಗಳನ್ನು ಕೈವಶ ಮಾಡಿಕೊಂಡನು. ಉದಾರನೂ ಪ್ರಜಾಹಿತದಕ್ಷನೂ ಆಗಿದ್ದನು. ಇವನ ತರುವಾಯ **ಮುಬಾರಕನು** ಕ್ರಿ ಶ. ೧೪೩೨ರಲ್ಲಿ ಪಟ್ಟಕ್ಕೆ ಬಂದು ಯೋಗ್ಯನೂ ಸಜ್ಜನನೂ ಎನಿಸಿದನು. ಇವನು ಮೋಸದಿಂದ ಕೊಲ್ಲಲ್ಪಟ್ಟ ಬಳಿಕ ಕ್ರಿ. ಶ. ೧೪೩೪ರಲ್ಲಿ ಮಹಮ್ಮದಷಾಹನು ಆಳಹತ್ತಿದನು ಕ್ರಿ ಶ ೧೪೪೫ರಲ್ಲಿ **ಅಲ್ಲಾ-ಉದ್ದೀನನು** ಪಟ್ಟಕ್ಕೆ ಬಂದು ೧೪೫೦ರ ವರೆಗೆ ಆಳಿದನು. ಇವನ ಕಾಲದಲ್ಲಿ **ಬಹಿಲೋಲಖಾನ ಲೋದಿ** ಎಂಬ ಪಂಜಾಬದ ಸುಭೇದಾರನು ಸಯ್ಯದ ಮನೆತನವನ್ನು ಮುಗಿಸಿ ತನ್ನ ಲೋದಿ ಮನೆತನವನ್ನು ದಿಲ್ಲಿಯಲ್ಲಿ ಪ್ರಾರಂಭಿಸಿದನು.

೫೬ನೆಯ ಪಾಠ

ಲೋದಿ ಮನೆತನ

(ಕ್ರಿ. ಶ. **೧೪೫೦-೧೫೨೬**)

೧. **ಬಹಿಲೋಲಖಾನ ಲೋದಿ** :— (ಕ್ರಿ. ಶ. **೧೪೫೦-೧೪೮೮**) ಇವನು ಪಠಾಣನು. ಕೋಹೆಸುಲೇಮಾನದ ಸುತ್ತಮುತ್ತಲಿನ ಪಠಾಣರನ್ನು ಕರೆತಂದು ಅವರಿಗೆ ದೊಡ್ಡ ದೊಡ್ಡ ಅಧಿಕಾರಗಳನ್ನು ಕೊಟ್ಟನು. ಫಿರೋಜನ ತರುವಾಯ ಉಂಟಾಗಿದ್ದ ಅರಾಜಕತೆಯನ್ನು ಮುರಿದನು. ಜೋನಪುರದ **ಹುಶೇನನನ್ನು** ಸೋಲಿಸಿ ಆ ರಾಜ್ಯಕ್ಕೆ ತನ್ನ ಮಗನನ್ನು ಸುಭೇದಾರನನ್ನು

ಮಾಡಿದನು. ಪಂಜಾಬದಿಂದ ಬಂಗಾಲದ ವರೆಗೆ ಇವನ ರಾಜ್ಯವು ಹಬ್ಬಿತ್ತು. ಇವನು ಶೂರನೂ, ಉದಾರನೂ ಆಡಂಬರಕ್ಕೆ ಮೆಚ್ಚಿದವನೂ ಆಗಿದ್ದನು. ಕ್ರಿ ಶ ೧೪೮೯ ರಲ್ಲಿ ಸತ್ತನು.

೨. **ಸಿಕಂದರಲೋದಿ**:— ಕ್ರಿ ಶ **೧೪೮೯ — ೧೫೧೭.** ಇವನು ತಂದೆಯ ರಾಜ್ಯವನ್ನು ವಿಸ್ತರಿಸಿ ಬಿಹಾರ ಪ್ರಾಂತವನ್ನು ವಶಮಾಡಿಕೊಂಡನು. ಧೋಲಪೂರ, ಚಂದೇರಿ, ಗ್ವಾಲ್ಹೇರಗಳ ರಜಪುತ ರಾಜರು ಸಿಕಂದರನ ಒಡೆತನವನ್ನು ಒಪ್ಪಿದರು ಇವನು ತನ್ನ ರಾಜ್ಯದಲ್ಲಿ ಬಹಳ ಸುಧಾರಣೆಗಳನ್ನು ಮಾಡಿದನು. ಜನರ ಸಂರಕ್ಷಣೆಯ ಸಲುವಾಗಿ ಪೋಲೀಸಖಾತೆಯನ್ನು ಏರ್ಪಡಿಸಿದನು. ಮಾ ಗ ಗಳನ್ನು ಮಾಡಿಸಿ, ಕುದುರೆಯ ಮೇಲಿಂದ ಟಪಾಲು ಒಯ್ಯುವ ವ್ಯವಸ್ಥೆಯನ್ನು ಮಾಡಿದನು. ರಾಜಧಾನಿಯನ್ನು ದಿಲ್ಲಿಯಿಂದ ಆಗ್ರಾಕ್ಕೆ ತಂದು, ಸಮೀಪದಲ್ಲಿಯೇ **ಸಿಕಂದರಾಬಾದ** ಎಂಬ ಪಟ್ಟಣವನ್ನು ಕಟ್ಟಿಸಿದನು. ಆಗ ಕಾಳುಕಡಿಗಳು ಬಹು ಅಗ್ಗವಾಗಿದ್ದವು. ಜನರು ಫಾರ್ಸೀ ಭಾಷೆಯನ್ನು ಕಲಿಯಹತ್ತಿದರು


೩. ಸಿಕಂದರನು ವಿದ್ಯಾವಂತನೂ ದಯಾಳುವೂ ಪರೋಪಕಾರಿಯೂ ಆಗಿದ್ದನು. ಹಿಂದುಗಳನ್ನು ಮಾತ್ರ ನೋಯಿಸದೆ ಬಿಡಲಿಲ್ಲ! ಅವರ ಯಾತ್ರೆಗಳನ್ನು ಕಟ್ಟುಮಾಡಿದನು. ಪರ್ವಕಾಲದಲ್ಲಿ ನದಿ- ತೀರ್ಥಗಳಲ್ಲಿ ಸ್ನಾನ ಮಾಡಲು ಅಡ್ಡಿಮಾಡಿದ್ದನು. ಅನೇಕ ದೇವಾಲಯಗಳನ್ನು ಕೆಡವಿಸಿದನು. ಕ್ರಿ ಶ ೧೫೦೫ ರಲ್ಲಿ ಉತ್ತರ ಹಿಂದುಸ್ಥಾನದಲ್ಲಿ ಭೂಕಂಪವಾಯಿತು ಸಿಕಂದರನು ಕ್ರಿ ಶ ೧೫೧೭ ರಲ್ಲಿ ಮರಣಹೊಂದಿದನು.

೪. **ಇಬ್ರಾಹಿಮ ಲೋದಿ**:— (ಕ್ರಿ. ಶ **೧೫೧೭—೧೫೨೬**) ಇವನು ತಂದೆಯಂತೆ ಶೂರನಿದ್ದರೂ ಗರ್ವಿಷ್ಠನಾಗಿದ್ದನು. ಪಠಾಣ ಸರದಾರರು ಇವನಿಗೆ ಸರಿಸಮಾನನಿಗಿಂತ ಹೆಚ್ಚಿನ ಮರ್ಯಾದೆಯನ್ನು ಕೊಡುತ್ತಿದ್ದಿಲ್ಲ. ಇದರಿಂದ ಇಬ್ರಾಹಿಮನು ಸಿಟ್ಟಾಗಿ ಸರದಾರರು ತನ್ನ ಮುಂದೆ ಕೈಕಟ್ಟಿಕೊಂಡು ನಿಲ್ಲಬೇಕೆಂದು ಕಟ್ಟಪ್ಪಣೆ ಮಾಡಿದನು. ಎಷ್ಟೋ ಜನರನ್ನು ಸಣ್ಣ ಅಪರಾಧಕ್ಕಾಗಿ ಕೊಲ್ಲಿಸಿದನು. ಆಗ ಸರದಾರರು ಅಸಂತುಷ್ಟರಾಗಿ ಇವನ ವಿರುದ್ಧ ಒಳಸಂಚು ಮಾಡಹತ್ತಿದರು. ಪಂಜಾಬದ ದೌಲತಖಾನ ಲೋದಿಯೂ ಅಯೋಧ್ಯಾ-ಜೋನಪುರ-ಬಿಹಾರಗಳ **ದರ್ಯಾಖಾನ** ಲೋಹಾನಿಯೂ ಸ್ವತಂತ್ರರಾದರು.

ದಿಲ್ಲಿಯ ರಾಜ್ಯದಾಶೆಯಿಂದ **ದೌಲತಖಾನ**ನು ಮೊದಲು ಕಾಬೂಲದ ಅರಸನಾದ ಬಾಬರನ ಸಹಾಯವನ್ನು ಬೇಡಿದನು. ೨೦ ವರ್ಷಗಳಿಂದ ಹಿಂದುಸ್ಥಾನದ ಮೇಲೆ ಬರುವ ಸಂಧಿಯನ್ನು ಕಾಯುತ್ತಿದ್ದ **ಬಾಬರನು** ಸಂತೋಷದಿಂದ ಬರಲೊಪ್ಪಿದನು. ಆದರೆ ಹಿಂದುಸ್ಥಾನಕ್ಕೆ ಬಂದಬಳಿಕ ಬಾಬರನು ಹಿಂದಿರುಗಿ ಹೋಗತಿದ್ದರೆ ಆದೊಂದು ಹೆಚ್ಚಿನ ತೊಡಕೆಂದಣಿಸಿ, ದೌಲತಖಾನನು ಅವನನ್ನು ಕರೆಯುವದನ್ನು ಮುಂದೆ ಮುಂದೆ ಹಾಕಹತ್ತಿದನು. ಅಷ್ಟರಲ್ಲಿ ಇಬ್ರಾಹಿಮ ಲೋದಿಯ ಕಕ್ಕನಾದ **ಅಲ್ಲಾ ಉದ್ದೀನ**ನು ದಿಲ್ಲಿಯ ಮೇಲೆ ಸಾಗಿಬರಬೇಕೆಂದು ಬಾಬರನಿಗೆ ಹೇಳಿಕೊಂಡನು ಆಗ ಬಾಬರನು ತಡಮಾಡದೆ ಹೊರಟು ಲಾಹೋರ-ದೀಪಲಪುರಗಳ ಮಾರ್ಗವಾಗಿ ದಿಲ್ಲಿಯ ಕಡೆಗೆ ಬರಹತ್ತಿದನು. ದೌಲತಖಾನನು ಬಂಡಾಯವನ್ನೆಬ್ಬಿಸಿದರೆ ಕಾಬೂಲದ ಸಂಬಂಧವು ಕಡಿಯುವದೆಂದು ವಿಚಾರಿಸಿ, ಮೊದಲು ಅವನನ್ನು ಸೋಲಿಸಿ ಪಂಜಾಬವನ್ನು ಸ್ವಾಧೀನ ಮಾಡಿಕೊಂಡನು ಇತ್ತ ಅಲ್ಲಾಉದ್ದೀನನು ಬಾಬರನ ಸೈನ್ಯವನ್ನೇ ತಕ್ಕೊಂಡು ದಿಲ್ಲಿಯ ಮೇಲೆ ಸಾಗಿಬಂದನು. ಆದರೆ ಇಬ್ರಾಹಿಮಷಾಹನು ಆ ಸೈನ್ಯವನ್ನೇ ಇದಿರಿಸಿ ಸೋಲಿಸಿದನು. ಸೋತುಬಂದ ಅಲ್ಲಾಉದ್ದೀನನನ್ನು ಬದಿಗಿಟ್ಟು ಬಾಬರನು ತಾನೆ ೧೨ ಸಾವಿರ ನುರಿತ ಸೈನಿಕರನ್ನೂ ತೋಪುಗಳನ್ನೂ ತಕ್ಕೊಂಡು ದಿಲ್ಲಿಯ ಕಡೆಗೆ ಬರಹತ್ತಿದನು. ಇಬ್ರಾಹಿಮನು ೧ ಲಕ್ಷ ಸೈನ್ಯದೊಂದಿಗೆ ಪಾನಿಪತದ ಹತ್ತರ ಬಾಬರನನ್ನು ತಡೆದನು.

೫. ಪಾನಿಪತದ ಮೊದಲನೆಯ ಯುದ್ಧ:— ಕ್ರಿ. ಶ. ೧೫೨೬. ಬಾಬರನು ಬಹು ದಿವಸದಿಂದ ಅನೇಕ ಯುದ್ಧಗಳನ್ನು ಮಾಡಿ ಅನುಭವವನ್ನೂ ಗಟ್ಟಿಗತನವನ್ನೂ ಪಡೆದಿದ್ದನು. ಅವನ ಸೈನ್ಯದ ರಚನೆಯೂ ವ್ಯವಸ್ಥೆಯೂ ಯುದ್ಧಪದ್ಧತಿಯೂ ಉತ್ತಮವಾಗಿದ್ದವು ಅಜಸ್ರವಾದ ತೋಪುಗಳು ಅವನಲ್ಲಿದ್ದವು. ಇಬ್ರಾಹಿಮನ ಸೈನ್ಯದಲ್ಲಿ ಈ ತರದ ಸುಧಾರಣೆಯಾಗಿದ್ದಿಲ್ಲ. ಆದರಿಂದ ಬಾಬರನು ಅತ್ಯಲ್ಪ ಸೈನ್ಯದಿಂದಲೇ ಶತೃಗಳ ಸೇನಾಸಾಗರವನ್ನು ಒಪ್ಪೊತ್ತಿನಲ್ಲಿಯೇ ಪೂರ್ಣವಾಗಿ ಸೋಲಿಸಿ ಓಡಿಸಿದನು. ಇಬ್ರಾಹಿಮನು

ಶೌರ್ಯದಿಂದ ಕಾದಿ ಮಡಿದನು. ಲೋದೀ ಮನೆತನವು ಮುಗಿಯಿತು ಬಾಬರನು ದಿಲ್ಲಿಯ ರಾಜ್ಯಕ್ಕೆ ಒಡೆಯನಾಗಲು ಮೊಗಲರ ಆಳಿಕೆಗೆ ಮೊದಲಾಯಿತು. ಕ್ರಿ ಶ. ೧೫೨೬.



ರಣಭೂಮಿಯ ನಕಾಶ

೬. **ಅಫಗಾನರ ಆಳಿಕೆಯ ಸಿಂಹಾವಲೋಕನ**:— ಕ್ರಿ. ಶ. ೧೨೦೬ ರಿಂದ ೧೫೨೬ರ ವರೆಗೆ ಎಂದರೆ ಮುನ್ನೂರ ಇಪ್ಪತ್ತು ವರ್ಷ ಪಠಾಣ ಮುಸಲ್ಮಾನರ ಸಾಮ್ರಾಜ್ಯವು ದಿಲ್ಲಿಯಲ್ಲಿ ನಡೆಯಿತು. ಪಠಾಣ ಅರಸರು ಹಿಂದಿನ ಮುಸಲ್ಮಾನರಂತೆ ಶೂರರೂ ಪರಾಕ್ರಮಿಗಳೂ ಧರ್ಮಾಭಿಮಾನಿಗಳೂ ಆಗಿದ್ದರು. ಆದರೆ ಬಹುಜನ ಅರಸರು ಕ್ರೂರರೂ ದುರಾಗ್ರಹಿಗಳೂ ಎನೆಸಿದರು. ಪಠಾಣ ಸರದಾರರ ಒಲವಿನಂತೆಯೇ ಇವರು ನಡೆಯಬೇಕಾಯಿತು. ದಿಲ್ಲಿಯ ಅರಸನು ದುರ್ಬಲನು ಅಥವಾ ಅಪ್ರಿಯನು ಆಗಲು ಸರದಾರರಲ್ಲಿ ಪ್ರಬಲನಾದ

ವನು ಅವನನ್ನು ತಳ್ಳಿಬಿಡುವನು. ಪಠಾಣ ಅರಸುಮನೆತನಗಳನ್ನು ಬಹುಶಃ ಪಂಜಾಬದ ಸುಭೇದಾರರೇ ಕೊನೆಗಾಣಿಸುತ್ತ ಬಂದರು. ಹಿಂದುಗಳನ್ನು ಧರ್ಮ ಸಹಿಷ್ಣುತೆಯಿಂದ ನಡೆಯಿಸಿಕೊಂಡವರು ಯಾರೂ ಆಗಲಿಲ್ಲ. ಸಾಮಾನ್ಯವಾಗಿ ಆಗಿನ ಮುಸಲ್ಮಾನರ ಹಾಗೂ ವಿಶೇಷವಾಗಿ ರಾಜ್ಯಕ್ಕೆ ಆಧಾರರೆನಿಸಿದ್ದ ಪಠಾಣ ಸರದಾರರ ಒಲವು ಹಿಂದುಗಳ ವಿರುದ್ಧವಾಗಿದ್ದವರಿಂದ ಪ್ರಜಾಹಿತದಕ್ಷನೂ ಪಾಪಭೀರುವೂ ಆದ ಫಿರೋಜನು ಸಹ ಹಿಂದುಗಳ ಪ್ರೇಮವನ್ನು ಸಂಪಾದಿಸಲು ಸಮರ್ಥನಾಗಲಿಲ್ಲ.

ಅಫಗಾನರ ಆಳಿಕೆಯಿಂದ ಹಿಂದುಸ್ಥಾನದ ಮೇಲೆ ಆದ ಪರಿಣಾಮಗಳು:— (೧) ಉತ್ತರ ಹಿಂದುಸ್ಥಾನವು ಸುಮಾರು ನಾಲ್ಕು ಶತಮಾನಗಳವರೆಗೆ ಪಠಾಣ ಅರಸರ ಆಳಿಕೆಗೆ ಒಳಗಾದದರಿಂದ ಆ ಕಾಲದಲ್ಲಿ ಮುಸಲ್ಮಾನರು ಈ ದೇಶದ ಸ್ಥಿರನಿವಾಸಿಗಳಾದರು (೨) ಬೀಳುಬಿದ್ದ ಎಷ್ಟೋ ಭೂಮಿಗಳು ಸಾಗಾದವು. ಕಾಲುವೆಗಳ ಮೂಲಕ ಒಕ್ಕಲತನಕ್ಕೆ ಹೆಚ್ಚು ಅನುಕೂಲವಾಯಿತು. ಕಲಾಕೌಶಲ್ಯಗಳಿಗೆ ಉತ್ತೇಜನವು ದೊರೆತದ್ದರಿಂದ ದೇಶದ ಸಂಪತ್ತು ಹೆಳೆಯಿತು. (೩) ಏಶಿಯಾ-ಯುರೋಪಗಳಲ್ಲಿ ಪ್ರಚಂಡವಾದ ಹಾವಳಿಯನ್ನು ಮಾಡಿ ದೇಶಗಳನ್ನು ಹಾಳುಗೆಡವಿದ ಅತಿ ಕ್ರೂರವಾದ ಮೋಂಗಲರ ದಾಳಿಗಳನ್ನು ಆಗಾಗ್ಗೆ ತಡೆದು, ಈ ಪಠಾಣ ಅರಸರು ತಮ್ಮ ಹಾಗು ಹಿಂದುಸ್ಥಾನದ ರಕ್ಷಣೆಯನ್ನು ಮಾಡಿದರು. ದಾಳಿಗಾರರು ಒಯ್ಯಬಹುದಾಗಿದ್ದ ಸಂಪತ್ತು ದೇಶದಲ್ಲಿಯೇ ಉಳಿಯಿತು. (೪) ಉರ್ದುಭಾಷೆಯು ಬಳಕೆಯಲ್ಲಿ ಬಂದಿತು ಸರಕಾರೀ ದಪ್ತರಗಳು ಫಾರ್ಸೀ ಭಾಷೆಯಲ್ಲಿ ಬರೆಯಲ್ಪಟ್ಟಿದ್ದರಿಂದ ಆ ಭಾಷೆಯ ಅಭ್ಯಾಸವೂ ಸಾಗಹತ್ತಿತು. ಆಗಿನ ಕಾಲದಲ್ಲಿ ಪ್ರಚಾರದಲ್ಲಿ ಬಂದ ಹುಜೂರ್, ಹುಕುಂ, ಅರ್ಜದಾರ, ಮೆಹರ್ಬಾನ್, ಕುಲ್‌ಕರನಿ (ಕುಲಕರ್ಣಿ), ಸರ್‌ರಿಷ್ತೇದಾರ (ಸಿರಸ್ತೇದಾರ), ಮುಖಮೆಲತ್‌ದಾರ (ಮಾಮಲೇದಾರ), ದಸ್ತಖವಜ್ ಮುಂತಾದ ರಾಜಕೀಯ ಶಬ್ದಗಳು ಈಗ ಸಹ ಕೋರ್ಟು-ಕಚೇರಿಗಳಲ್ಲಿ ನಡೆಯುವವು. ಪಠಾಣ ಅರಸರು ನೆಲೆಸಿದ ಮುರಾದಾಬಾದ, ಹೈದರಾಬಾದ, ಇಲಹಾಬಾದ, ಸಿಕಂದರಾಬಾದ, ಜೋನಪುರ ಮೊದಲಾದ ಪಟ್ಟಣಗಳು ಕೈಗಾರಿಕೆ, ವ್ಯಾಪಾರ ಮುಂತಾದ ಕಾರಣಗಳಿಂದ ಈಗಲೂ ಹೆಸರಾಗಿರುವವು (೫) ಹಿಂದುಗಳಲ್ಲಿ ಕೆಲವರು ಒತ್ತಾಯದಿಂದಲೂ ಕೆಲವರು

ಜೀವದಾಶೆಯಿಂದಲೂ ಮತ್ತೆ ಕೆಲವರು ದ್ರವ್ಯ ಅಧಿಕಾರ ಲೋಭದಿಂದಲೂ ಮುಸಲ್ಮಾನರಾದರು. ಹಿಂದುಗಳ ಜಾತಿ ವಿಷಯಕವಾದ ಉಚ್ಚ-ನೀಚ ಭಾವನೆಯ ಮೂಲಕ ತಮ್ಮ ಉತ್ಕರ್ಷಕ್ಕೆ ಆಸ್ಪದವಿಲ್ಲೆಂದೆನಿಸಿದವರು ಅನೇಕರು ಸ್ವೇಚ್ಛೆಯಿಂದಲೂ ಮುಸಲ್ಮಾನರಾದರು ಮುಸಲ್ಮಾನ ಧರ್ಮೋಪದೇಶಕರು ಮಾಡುವ ಉಪದೇಶದ ಪರಿಣಾಮವು ಇಂತಹರ ಮೇಲೆ ವಿಶೇಷವಾಯಿತು. (೬) ಮುಸಲ್ಮಾನೀ ಧರ್ಮದ ಸಂಸರ್ಗದಿಂದ, ಮತಮತಗಳಲ್ಲಿಯ ದುರಾಗ್ರಹವು ಕಡಿಮೆಯಾಗಿ ಹಿಂದುಗಳಿಗೆ ಐಕ್ಯದ ಮಹತ್ವವು ತಿಳಿಯಹತ್ತಿತು. 'ಜಾತಿಗೆ ಭೇದವಿದ್ದರೂ ನೀತಿಗೆ ಭೇದವಿಲ್ಲ' ಎಂಬ ವಿಚಾರವು ಮಾನ್ಯವಾಗಿ ಜಾತಿಜಾತಿಗಳಲ್ಲಿ ಸಹಾನುಭೂತಿಯು ಹೆಚ್ಚಿತು. (೭) ಅರಸರು, ಸರದಾರರು ಇವರನ್ನು ಬಿಟ್ಟು ಉಳಿದ ಮುಸಲ್ಮಾನರೂ ಹಿಂದುಗಳೂ ಒಕ್ಕಲತನ, ಕೈಗಾರಿಕೆ, ವ್ಯಾಪಾರ ಮುಂತಾದ ಉದ್ಯೋಗಗಳಲ್ಲಿ ಕೂಡಿ ನಡೆಯಬೇಕಾದುದರಿಂದ ಪರಸ್ಪರರಲ್ಲಿ ಸಹಕಾರಿತೆಯುಂಟಾಯಿತು. ವಿಚಾರ ವಿನಿಮಯದಿಂದ ಸರಳತನವೂ, ವಿಶ್ವಾಸವೂ, ಪ್ರೇಮವೂ ಹೆಚ್ಚುತ್ತ ನಡೆದವು. ಹಿಂದು-ಮುಸಲ್ಮಾನರಲ್ಲಿ ಐಕ್ಯವನ್ನುಂಟು ಮಾಡುವದಕ್ಕಾಗಿ ರಾಮಾನಂದ, ಕಬೀರದಾಸ, ನಾನಕ್ ಮುಂತಾದ ಸತ್ಪುರುಷರು ಪ್ರಯತ್ನ ಮಾಡಿದರು.

೬ನೆಯ ಪಾಠ

ಅಫಗಾನರ ಕಾಲದಲ್ಲಿ ಉತ್ತರ ಹಿಂದುಸ್ಥಾನದಲ್ಲಿ ನೆಲೆಗೊಂಡ ಬೇರೆ ರಾಜ್ಯಗಳು

೧. **ಬಂಗಾಲ**:- (೧೩೪೦-೧೫೭೬) ಗುಲಾಮಿ ವಂಶದ ಬಲ್ಬನ್ನನು **ತೊಘ್ರುಲಖಾನ**ನನ್ನು ಸೋಲಿಸಿ, ಬಂಗಾಲವನ್ನು ದಿಲ್ಲಿಯ ರಾಜ್ಯಕ್ಕೆ ಕೂಡಿಸಿಕೊಂಡನು. ಮುಂದೆ ಕ್ರಿ. ಶ. ೧೩೪೦ರಲ್ಲಿ **ಫಕರುದ್ದೀನ**ನೆಂಬವನು ದಿಲ್ಲೀ ರಾಜ್ಯದ ಅಧಿಕಾರವನ್ನು ಕಿತ್ತೊಗೆದು ಸ್ವತಂತ್ರನಾದನು. ಬಳಿಕ ಕ್ರಿ ಶ. ೧೫೭೬ರ ವರೆಗೆ ಬಂಗಾಲವು ಸ್ವತಂತ್ರವಾಗಿತ್ತು. ಕಡೆಯ ಅರಸನಾದ **ದಾವುದ**ನನ್ನು ಸೋಲಿಸಿ ಕೊಂದು **ಅಕಬರ** ಬಾದಷಾಹನು ಆ ಪ್ರಾಂತವನ್ನು ತೆಗೆದುಕೊಂಡನು. ಕ್ರಿ. ಶ. ೧೪೧೩-೧೫೭೬ರ ವರೆಗೆ ಲಖನೌತಿಯಲ್ಲಿ ಆಳಿದ **ಹುಶೇನ**

ಷಾಹನು ಹೆಸರಾದ ಅರಸನಾಗಿದ್ದನು. ಇವನು ನ್ಯಾಯವಂತನಾಗಿದ್ದನು. ಬಂಗಾಲೀ ಭಾಷೆಗೆ ಉತ್ತೇಜನ ಕೊಟ್ಟನು. ಆಗ ಜನರು ಸೌಖ್ಯದಿಂದಿದ್ದರು. ಜಮಿನದಾರರ ವರ್ಚಸ್ಸು ಚೆನ್ನಾಗಿತ್ತು.

೨. **ಜೋನಪುರ**:— (೧೩೯೪-೧೪೭೭). ಈ ಪಟ್ಟಣವನ್ನು ಫಿರೋಜ ತಘಲಖನು ಗೋಮತೀ ತೀರದಲ್ಲಿ ನೆಲೆಸಿದನು. ಸರದಾರನಾದ **ಖ್ವಾಜಾ ಜಹಾನ**ನು ಸ್ವತಂತ್ರನಾದನು ಬಹಿಲೋಲಖಾನ ಲೋದಿಯು ಹುಶೇನನನ್ನು **ಬಹಾರ**ದ ಕಡೆಗೆ ಹೋಗಿ ಅಲ್ಲಿ ಆಳಹತ್ತಿದನು ಮುಂದೆ ಈ ಮನೆತನಕ್ಕೆ **ಶರ್ಕೀ** ಎಂಬ ಹೆಸರುಂಟಾಯಿತು. ಈ ಅರಸರಿಗೆ ಕಟ್ಟಡಗಳನ್ನು ಕಟ್ಟಿಸುವ ಪ್ರೀತಿಯು ಹೆಚ್ಚಾಗಿತ್ತು. ಬಂಗಾಲದಂತೆ ಜಮಿನದಾರರ ವರ್ಚಸ್ಸು ಇಲ್ಲಿಯೂ ನೆಲೆಗೊಂಡಿತ್ತು.

೩. **ಕಾಶ್ಮೀರ**:— (೧೩೨೬-೧೫೮೬) ಮೊದಲಿನಿಂದ ಹದಿನಾಲ್ಕನೆಯ ಶತಕದವರೆಗೆ ಹಿಂದು ಅರಸರು ಕಾಶ್ಮೀರವನ್ನು ಆಳುತ್ತ ಬಂದರು. **ಸೇನದೇವ** ನೆಂಬವನು ಆಳುತ್ತಿರುವಾಗ **ಶಹಾಮಿರನು** ಕರ್ತೃತ್ವದಿಂದ ಹೆಸರಿಗೆ ಬಂದು ಮುಖ್ಯ ಮಂತ್ರಿಯಾಗಿ ಸೇನದೇವನ ತರುವಾಯ ತಾನೇ ಪಟ್ಟವನ್ನು ಸೆಳೆದು ಕೊಂಡನು. ಕ್ರಿ ಶ. ೧೪೧೭ ೧೪೬೭ರ ವರೆಗೆ ಆಳಿದ **ಜೈನುಲ್ಲಾಬ್ದೀನ**ನು ಹಿಂದುಗಳೊಡನೆ ಉದಾರನಾಗಿ ನಡೆದನು. ಸಂಸ್ಕೃತ ಫಾರ್ಸೀ ವಾಙ್ಮಯ ಗಳಿಗೆ ಹೆಚ್ಚಾಗಿ ಸಹಾಯವನ್ನಿತ್ತನು. ಕ್ರಿ. ಶ. ೧೫೮೬ರಲ್ಲಿ **ಅಕಬರ**ನು ಈ ರಾಜ್ಯವನ್ನು ಮುರಿದು ತನ್ನ ಕೈಸೇರಿಸಿಕೊಂಡನು.

೪. **ಮಾಳವ**:— (೧೪೦೧-೧೫೩೧) ಬಲ್ಬನ್ನನು ಮೊದಲು ಈ ಪ್ರಾಂತದ ಮೇಲೆ ತನ್ನ ಅಧಿಕಾರವನ್ನು ನೆಲೆಸಿದನು. ಬಳಿಕ ಅಲ್ಲಾಉದ್ದೀನನು ಇದನ್ನು ಗೆದ್ದು ತನ್ನ ರಾಜ್ಯಕ್ಕೆ ಹೊಂದಿಸಿದನು. ಮುಂದೆ ತೈಮೂರನ ದಾಳಿಯ ತರುವಾಯ ಕ್ರಿ. ಶ. ೧೪೦೧ರಲ್ಲಿ ಮಹಮ್ಮದ ಘೋರಿಯ ವಂಶಜನಾದ **ದಿಲಾವರಖಾನ**ನೆಂಬ ಸರದಾರನು ಸ್ವತಂತ್ರನಾದನು. ಇವನ ಮನೆತನದವರು **ಮಾಂಡವಗಡ**ವನ್ನು ತಮ್ಮ ರಾಜಧಾನಿಯನ್ನು ಮಾಡಿಕೊಂಡು ಕ್ರಿ. ಶ. ೧೫೩೧ರ ವರೆಗೆ ಆಳಿದರು. ಆಗ ಗುಜರಾಥದ **ಬಹದ್ದೂರಷಾಹ**ನು ಈ ರಾಜ್ಯ ವನ್ನು ಗೆದ್ದುಕೊಂಡನು. ಕಡೆಗೆ ೧೫೬೪ರಲ್ಲಿ ಈ ಮಾಳವ ಪ್ರಾಂತವು ಅಕಬರನ ಕೈಸೇರಿತು. ಕ್ರಿ. ಶ ೧೪೩೬-೧೪೬೯ರ ವರೆಗಿನ ಆಳಿದ **ಮಹಮ್ಮದ**ನು ಹೆಸರು ಗೊಳ್ಳುವಂಥ ಅರಸನಾದನು.

೫. ಗುಜರಾಥ:— ಕ್ರಿ ಶ. ೧೩೯೧-೧೫೭೨. ಗುಜರಾಥ ಪ್ರಾಂತವು ಪ್ರಾಚೀನಕಾಲದಲ್ಲಿ ಒಳ್ಳೆಯ ವೈಭವವನ್ನು ಪಡೆದಿತ್ತು. ಪರದೇಶಗಳ ಮತ್ತು ಹಿಂದುಸ್ಥಾನದ ವ್ಯಾಪಾರದ ಪಡಮೂಲೆಯಾಗಿತ್ತು. **ಮುಂಬಯಿ**ಯ ಮಹತ್ವವು ಹೆಚ್ಚಿದಂದಿನಿಂದ ಗುಜರಾಥದ ಹಡಗುಪಡೆಯೂ ವ್ಯಾಪಾರವೂ ಮುಗ್ಗಿದವು. ಅಲ್ಲಾವುದ್ದೀನನ ಕಾಲದಲ್ಲಿ ಇದು ಮೊದಲು ಮುಸಲ್ಮಾನರ ಕೈಸೇರಿತು. ಕ್ರಿ ಶ. ೧೩೯೧ರಲ್ಲಿ ಮುಂಚೆ ರಜಪುತನಾಗಿದ್ದ **ಜಾಫರಖಾನ** ನೆಂಬ ಸರದಾರನು ದಿಲ್ಲಿಯ ಅಧಿಕಾರವನ್ನು ಬಿಸುಟೆ ಆಳಲಾರಂಭಿಸಿದನು. ಕ್ರಿ. ಶ. ೧೪೧೧ರಲ್ಲಿ ಪಟ್ಟಕ್ಕೆ ಬಂದ **ಅಹಮ್ಮದಷಾಹನೇ ಅಹನುದಾಬಾದ** ಪಟ್ಟಣವನ್ನು ಕಟ್ಟಿಸಿ ಅನಹಿಲವಾಡವನ್ನು ಬಿಟ್ಟು ಅಲ್ಲಿಗೆ ಬಂದು ಆಳಹತ್ತಿದನು. ಇವನ ಕಾರಭಾರವು ಪ್ರಜೆಗಳಿಗೆ ಹಿತವಾಗುವಂತೆ ವ್ಯವಸ್ಥೆಯಿಂದ ಸಾಗಿದ್ದರಿಂದ ಗುಜರಾಥವು ವೈಭವದಿಂದ ಮೆರೆಯುತ್ತಿತ್ತು. ಅಹಮ್ಮದ ಷಾಹನ ಮಗನಾದ **ಮಹಮೂದನು** ೧೩ ವರ್ಷದವನಿರುವಾಗ ಕ್ರಿ. ಶ. ೧೪೫೯ರಲ್ಲಿ ಆಳಲಾರಂಬಿಸಿದನು. ಇವನು **ಜುನಾಗಡ, ಪಾವಾಗಡ**ಗಳೆಂಬ ಎರಡು ಭದ್ರವಾದ ಕೋಟೆಗಳನ್ನು ಶೌರ್ಯದಿಂದ ತೆಗೆದುಕೊಂಡದರಿಂದ * '**ಬೇಗಡಾ**' ಎಂಬ ಹೆಸರು ಪಡೆದನು. ಇವನಕಾಲದಲ್ಲಿ ಪೋರ್ತುಗೀಜರು ಈ ದೇಶಕ್ಕೆ ವ್ಯಾಪಾರಕ್ಕಾಗಿ ಬಂದರು ಪೋರ್ತುಗೀಜರು ಹಿಂದುಸ್ಥಾನದಲ್ಲಿ ನೆಲೆಯೂರಿದರೆ ತಮ್ಮ ವ್ಯಾಪಾರವು ಕುಗ್ಗುವದೆಂದು ತುರ್ಕಸ್ಥಾನದವರು ತಿಳಿದಿದ್ದರು. ಆಗ **ಕಾನಸ್ತಾಂತಿನೋಪಲ**ದ ಸುಲ್ತಾನನು ಪೋರ್ತುಗೀಜರ ವಿರುದ್ಧವಾಗಿ ಕಾದಲು ಗುರಾಥದ ಅರಸನ ನೆರವಿಗೆ ಸೈನ್ಯವನ್ನೂ ಹಡಗುಪಡೆಯನ್ನೂ ಕಳುಹಿದನು. ಮಹಮೂದನು ಮುಂಬಯಿಯ ದಕ್ಷಿಣಕ್ಕಿರುವ **ಚೌಲ** ಎಂಬಲ್ಲಿ ಪೋರ್ತುಗೀಜರನ್ನು ಪೂರ್ಣವಾಗಿ ಸೋಲಿಸಿದನು. ಆದರೆ ಮುಂದೆ ೨ ವರ್ಷಕ್ಕೆ ಪೋರ್ತುಗೀಜರು ಸಾಗಿಬಂದು ಗುಜರಾಥದ ಹಡಗುಪಡೆಯನ್ನು ಸೋಲಿಸಿದರು. ಇವನ ಕಾಲದಲ್ಲಿ ಗುಜರಾಥದ ವೈಭವವು ಮತ್ತಿಷ್ಟು ಹೆಚ್ಚಿತು. ಇವನ ತರುವಾಯ ಅಂತಿಂತಹ ಅರಸರು ಆಳಿದರು- ಕ್ರಿ. ಶ. ೧೫೭೨ರಲ್ಲಿ ಗುಜರಾಥವು ಅಕಬರನ ರಾಜ್ಯದ ಒಂದು ಸುಭೆಯಾಯಿತು.

---

* ಬೇ-ಎರಡು ಗಡ- ಕೋಟೆ. " ಬೇಗಡಾ " ಎರಡು ಕೋಟೆಗಳನ್ನು.

೬. **ಚಿತ್ತೂರು** :— (ಚಿತ್ತೋಡ) ಕ್ರಿ. ಶ. ೧೩೧೩-೧೫೬೧. ಅಲ್ಲಾ ಉದ್ದೀನನ ಆಳಿಕೆಯಲ್ಲಿ **ಹವಿೂರ**ನಿಂದ ಚಿತ್ತೂರಿಗೆ ಸ್ವಾತಂತ್ರ್ಯವುಂಟಾದ ಸಂಗತಿ ಹಿಂದೆ ಹೇಳಿದೆ. ಈ ಹವಿೂರನು ರಜಪುತರಲ್ಲಿ ಐಕ್ಯವನ್ನುಂಟು-ಮಾಡಿಕೊಂಡು ಆಳಿ, ಕ್ರಿ. ಶ. ೧೩೬೫ರಲ್ಲಿ ಮರಣಹೊಂದಿದನು. ಮುಂದೆ **ಕುಭರಾಣ**ನಿಗೂ ಮಾಳವದ **ಮಹಮೂದ**ನಿಗೂ ಯುದ್ಧವಾಯಿತು. ಅದರಲ್ಲಿ ಯಶವು ದೊರೆಯದೆ ಏರಿಹೋದ ಮಹಮೂದನು ಹಿಂದಿರುಗಬೇಕಾಯಿತು. ಲೋದೀ ಅರಸರ ಕಾಲದಲ್ಲಿ **ಸಂಗರಾಣ**ನು ಪ್ರಬಲನಾಗಿದ್ದನು. ರಜಪುತರ ಸಾಮ್ರಾಜ್ಯವನ್ನು ದಿಲ್ಲಿಯಲ್ಲಿ ಸ್ಥಾಪಿಸಬೇಕೆಂಬ ಇವನ ಹವಣಿಕೆಯು, ಬಾಬರನು ಈ ದೇಶದಲ್ಲಿ ಸ್ಥಿರಗೊಂಡಿದ್ದರಿಂದ ನಿಷ್ಫಲವಾಯಿತು ಇವನು ಕ್ರಿ. ಶ. ೧೫೩೦ರಲ್ಲಿ ಮರಣಹೊಂದಿದ ಬಳಿಕ **ರತ್ನಸಿಂಹ**ನು ಕ್ರಿ. ಶ ೧೫೩೫ರ ವರೆಗೆ ಆಳಿದನು. ಇವನ ಮಗನಾದ **ವಿಕ್ರಮಾಜಿತ**ನ ಕಾಲದಲ್ಲಿ ಗುಜರಾಥದ **ಬಹಾದ್ದೂರಷಾಹ**ನು ಪೋರ್ತುಗೀಜ ತೋಪ್ಪುಗಾರರ ಸಹಾಯದಿಂದ ರಜಪುತರನ್ನು ಸೋಲಿಸಿದನು. ಸೋಲುವ ನಿಶ್ಚಯವು ತೋರಲು ರಜಪುತ ಸ್ತ್ರೀಯರು ಜೋಹರ ಮಾಡಿದ ಬಳಿಕ ವೀರರು ಶತೃಗಳ ಮೇಲೆ ಬಿದ್ದು ಕಾದಿ ಮಡಿದರು. ಆಗ ಬಹಾದ್ದೂರಷಾಹನ ಕೈಸೇರಿದ ಚಿತ್ತೂರು ಹುಮಾಯುನನ ಕಾಲಕ್ಕೆ ಅವನ ಸಹಾಯದಿಂದ ಮತ್ತೆ ಸ್ವತಂತ್ರವಾಯಿತು. ಮುಂದೆ ವಿಕ್ರಮಾಜಿತನು ಕೊಲ್ಲಲ್ಪಟ್ಟಬಳಿಕ ಸರದಾರರು ಸಂಗರಾಣನ ಚಿಕ್ಕ ಮಗನಾದ **ಉದಯಸಿಂಗ**ನನ್ನು ಪಟ್ಟಕ್ಕೆ ಕೂಡಿಸುವ ಯೋಚನೆಯನ್ನು ಮಾಡಿದರು. ಆ ಹೊತ್ತಿನಲ್ಲಿ **ಬನಬೀರ**ನೆಂಬವನು ಪ್ರಬಲನಾಗಿ ಪಟ್ಟವನ್ನು ಆಕ್ರಮಿಸಿ ಉದಯಸಿಂಗನನ್ನು ಕೊಲ್ಲುವ ನಿಶ್ಚಯ ಮಾಡಿದನು. ಆದರೆ **ಪನ್ನಾ** ಎಂಬ ಸ್ವಾಮಿಭಕ್ತಳು ತನ್ನ ಮಗುವನ್ನು ಆಹುತಿಕೊಟ್ಟು ಉದಯಸಿಂಗನನ್ನು ಯುಕ್ತಿಯಿಂದ ಪಾರುಮಾಡಿ ಅವರನ್ನು ಅರವಲಿಬೆಟ್ಟದಲ್ಲಿ ಸಂರಕ್ಷಿಸಿದಳು. ಮುಂದೆ ಉದಯಸಿಂಗನು ಚಿತ್ತೂರನ್ನು ತಕ್ಕೊಂಡು ಬನಬೀರನನ್ನು ಓಡಿಸಿಬಿಟ್ಟನು. ಅಕಬರ ಬಾದಷಾಹನ ಕಾಲದಲ್ಲಿ ಈ ಉದಯಸಿಂಗನೂ ಇವನ ಮಗ **ಪ್ರತಾಪಸಿಂಹ**ನೂ ಚಿತ್ತೂರನ್ನು ಸಂರಕ್ಷಿಸಿದರು. ಪ್ರತಾಪಸಿಂಹನಂತು ಧರ್ಮ ಸ್ವಾಭಿಮಾನಗಳ ರಕ್ಷಣೆಗಾಗಿ ಸರ್ವಸ್ವವನ್ನು ತ್ಯಜಿಸಿ ಶೌರ್ಯ-ಧೈರ್ಯಗಳಿಂದ ಕಾದಿದನಲ್ಲದೆ ಹೆಗೆಗಳಿಗೆ ಶರಣುಹೋಗಲಿಲ್ಲ!

೭ನೆಯ ಪಾಠ

ಅಫಗಾನರ ಕಾಲದಲ್ಲಿ ನೆಲೆಗೊಂಡ ದಕ್ಷಿಣ ಹಿಂದುಸ್ಥಾನದ ರಾಜ್ಯಗಳು.

೧. **ಖಾನದೇಶ**:— (ಕ್ರಿ. ಶ ೧೩೫೧-೧೫೯೯) ಫೀರೋಜಷಾಹನು ನಿಯಮಿಸಿದ ಸುಭೇದಾರನು ಸ್ವತಂತ್ರನಾಗಿ ಆಳಹತ್ತಿದನು. ಮುಂದೆ ಅಕಬರನು **ಅಸೀರಗಡವನ್ನು** ಗೆದ್ದುಕೊಂಡು ಈ ಭಾಗವನ್ನು ತನ್ನ ರಾಜ್ಯಕ್ಕೆ ಸೇರಿಸಿದನು.

೨. † **ಬಹಮನಿ ಮನೆತನ** (ಕ್ರಿ. ಶ. ೧೩೪೭—೧೫೨೬):— **ಅಲ್ಲಾಉದ್ದೀನ ಹಸನ ಕಾಂಗೊ ಬಹಮನಿ**:—ಮಹಮ್ಮದ ತಘಲಖನು ದೌಲತಾಬಾದವನ್ನು ಬಿಟ್ಟು ಮರಳಿ ದಿಲ್ಲಿಗೆಹೋಗುವಾಗ **ಹಸನ** ಉರ್ಫ **ಜಾಫರಖಾನನನ್ನು** ದಕ್ಷಿಣದ ಅಧಿಕಾರಿಯನ್ನಾಗಿ ನಿಯಮಿಸಿದ್ದನು ಈ ಜಾಫರಖಾನನು ಕ್ರಿ ಶ. ೧೩೪೭ರಲ್ಲಿ ಅಲ್ಲಾಉದ್ದೀನನು ಹಸನ ಕಾಂಗೊ ಬಹಮನಿ ಎಂಬ ಬಿರುದಿನಿಂದ ಸ್ವತಂತ್ರನಾಗಿ, ದೌಲತಾಬಾದದಿಂದ **ಕಲ್ಬುರ್ಗಿ**ಗೆ ಬಂದು ಅಲ್ಲಿ ಆಳಹತ್ತಿದನು. ಇವನ ರಾಜ್ಯವು ನರ್ಮದೆಯಿಂದ ಕೃಷ್ಣೆಯ ವರೆಗೂ ಸಹ್ಯಾದ್ರಿಯಿಂದ ತೆಲಗುನಾಡಿನ ವರೆಗೂ ಹಬ್ಬಿತ್ತು. ಇವನು ಶೂರನೂ, ಚತುರನೂ, ಭಾವಿಕನೂ ಆಗಿದ್ದನು. ಮಗಧದೇವತೆಯ ಬರ ಗಾಲವೆಂದು ಹೆಸರುಗೊಂಡ ೧೨ ವರ್ಷದ ಬರವು ಭಯಂಕರ ಸ್ವರೂಪವನ್ನು ಹೊಂದಿತ್ತು ಇವನು ವಿಪುಲ ಹಣವನ್ನು ದಾನಮಾಡಿ ಕ್ರಿ. ಶ. **೧೩೫೮**ರಲ್ಲಿ ಮರಣಹೊಂದಿದನು.

ಮಹಮ್ಮದಷಾಹ:—(ಕ್ರಿ ಶ ೧೩೫೮ ೧೩೭೫.) ಇವನು ತನ್ನ ರಾಜ್ಯದಲ್ಲಿ ಕಲಬುರ್ಗಿ, ದೌಲತಾಬಾದ, ತೈಲಂಗಣ, ಮತ್ತು ವರ್ಹಾಡಗಳೆಂಬ ನಾಲ್ಕು ಸುಭೆಗಳನ್ನು ಮಾಡಿ ಅವುಗಳ ಮೇಲೆ **ತರಫದಾರ** ಎಂಬ ಅಧಿಕಾರಿ

---

† ಇವನು ಇರಾಣದ ಬಹಮನೀ ವಂಶಕ್ಕೆ ಸಂಬಂಧಿಕನಾದದರಿಂದ ತನ್ನ ಹೆಸರಿನ ಮುಂದೆ 'ಬಹಮನಿ' ಎಂಬ ಅಡ್ಡ ಹೆಸರನ್ನು ಉಪಯೋಗಿಸಿದನೆಂದು ಫ್ಲೀಸ್ನೆಂಟ ಸ್ಮಿಥ ಇವನ ಅಭಿಪ್ರಾಯ. ಆದರೆ ಫೆರಿಸ್ತನು "ಗಂಗೂಬ್ರಾಹ್ಮಣನ ಪ್ರಯತ್ನವು ತನ್ನ ಉತ್ಕರ್ಷಕ್ಕೆ ಕಾರಣವಾದದರಿಂದ ಜಾಫರಖಾನನು 'ಗಂಗೂ ಬಹಮನಿ' ಎಂಬ ಪದವಿಯನ್ನು ಕೃತಜ್ಞತೆಯುಂದೆ ಧರಿಸಿದನು" ಯೆಂದೆನ್ನುವನು.

ಗಳನ್ನು ನಿಯಮಿಸಿದ್ದನು. ತನ್ನ ನಾಣ್ಯದ ಒಂದು ಮಗ್ಗಲಿಗೆ ಮೊದಲಿನ ನಾಲ್ವರು ಖಲೀಫರ ಹೆಸರನ್ನೂ ಮತ್ತೊಂದು ಮಗ್ಗಲಿಗೆ ತನ್ನ ಹೆಸರನ್ನೂ ಮುದ್ರಿಸಿದ್ದನು. ವಿಜಯನಗರದಿಂದ **ರಾಯಚೂರ, ಮುದಗಲ್ಲು** ಕೋಟೆಗಳು ಇವನ ಕೈಸೇರಿದವು. ಆಳಿಕೆಯ ಕಡೆಯ ಕಾಲದಲ್ಲಿ **ಷೇಖ ಜಿಯಾನುದ್ದೀನ** ರೆಂಬ ಸತ್ಪುರುಷರ ಉಪದೇಶದಿಂದ **ಶರೆ** ಕುಡಿಯುವದನ್ನು ಬಿಟ್ಟನು. ಅಲ್ಲದೆ, ರಾಜ್ಯದಲ್ಲಿ ಮಾದಕ ಪದಾರ್ಥಗಳ ಮಾರಾಟವನ್ನು ತಡೆದನು. ಭಂಡಾರದಲ್ಲಿ ಹಣವು ಸಮೃದ್ಧವಾಗಿತ್ತು. ಇವನ ತರುವಾಯ ಕ್ರಿ. ಶ. ೧೩೯೪ರ ವರೆಗೆ ಐವರು ಅಪ್ರಸಿದ್ಧರು ಆಳಿದರು.

ಫಿರೋಜಷಾಹ:—ಕ್ರಿ.ಶ **೧೩೯೪-೧೪೧೭.** ಬಳಿಕ ಫಿರೋಜಷಾಹನು ಆಳಹತ್ತಿದನು. ಇವನು ಶೂರನೂ, ಚತುರನೂ, ದೇವಭಕ್ತನೂ ಆಗಿದ್ದನು. ತನ್ನ ತಮ್ಮನಾದ **ಅಹಮದಖಾನ**ನಿಗೆ 'ಅಮೀರ-ಉಲ್ ಉಮರಾ' ಎಂಬ ಬಹುಮಾನದ ಅಧಿಕಾರವನ್ನು ಕೊಟ್ಟನು. ತನ್ನ ಮಗನಾದ **ಹಸನಖಾನ**ನಿಗೆ ರಾಜ್ಯದ ಲಾಭವಾಗುವದಿಲ್ಲೆಂಬ× ಹೇಳಿಕೆಯಾದವರಿಂದ ಖಿನ್ನನಾದನು ಅಹಮ್ಮದಖಾನನಿಗೆ ಪಟ್ಟದಾಶೆ ಹುಟ್ಟಿತು ಎಲ್ಲ ಸರದಾರರ ಸಹಾಯವೂ ಆತನಿಗೇ ದೊರೆಯಿತು. ಆಗ ಫಿರೋಜನು ಅಹಮ್ಮದನನ್ನು ಕರೆಯಿಸಲು ಅವನು ಬಂದು ತಲೆಬಾಗಿ ಕ್ಷಮಬೇಡಿದನು ಫಿರೋಜನು ಸಮಾಧಾನಬಟ್ಟು ಹಸನನನ್ನು ಸಂರಕ್ಷಿಸುವ ಹಾಗೆ ವಚನ ತೆಗೆದುಕೊಂಡು, ತಮ್ಮನನ್ನೇ ಪಟ್ಟಕ್ಕೆ ಕೂಡಿಸಿ, ತಾನು ಏಕಾಂತವಾಸದಲ್ಲಿ ಕಾಲಕಳೆಯಹತ್ತಿ ಕ್ರಿ. ಶ. ೧೪೨೨ ರಲ್ಲಿ ತೀರಿದನು.

ಅಹಮದಷಾಹ ವಲಿ:—ಕ್ರಿ. ಶ. **೧೪೨೨-೧೪೫೫.** ಅಣ್ಣನಿಗೆ ಕೊಟ್ಟ ವಚನದಂತೆ ನಡೆದನು. ಹಸನಖಾನನಿಗೆ ದೊಡ್ಡ ಜಹಗೀರವನ್ನು ಹಾಕಿಕೊಟ್ಟು ಅವನ ತಂದೆಯು ಕಟ್ಟಿಸಿದ **ಫಿರೋಜಾಬಾದ**ದಲ್ಲಿಯೇ ಅವನನ್ನು ಇರಿಸಿದನು. ಕ್ರಿ. ಶ. ೧೪೩೫ರಲ್ಲಿ ತೈಲಂಗಣವನ್ನು ವಶಮಾಡಿಕೊಂಡನು. ಒಮ್ಮೆ ಮಳೆ ಹೋದಾಗ, ಇವನು ಮಳೆಯ ಸಲುವಾಗಿ ಪ್ರಾರ್ಥನೆ ಮಾಡಲು ಮಳೆ ಸುರಿಯತಂತೆ! ಆದದರಿಂದ ಜನರು ಇವನನ್ನು **'ವಲಿ'** ಎಂದರೆ ಮಹಿಮಾಶಾಲಿ ಎಂದು ಭಾವಿಸಿದರು. ಇವನ ಕಾಲದಲ್ಲಿ **ಬೇದರವು** ರಾಜಧಾನಿಯಾಯಿತು.

× ಖ್ವಾಜಾಬುದಾ ನವಾಜಲೆಂಬ ಸತ್ಪುರುಷರು ಈ ಭವಿಷ್ಯವನ್ನು ಹೇಳಿದ್ದರು.

ಕಲಬುರ್ಗೆಯಲ್ಲಿಯ **ಖ್ವಾಜಾ ಬಂದಾ ನವಾಜ**ರೆಂಬ ಸತ್ಪುರುಷರ ದರ್ಗೆಯನ್ನು ಇವನೇ ಕಟ್ಟಿಸಿದನು.

೩ನೆಯ ಅಲ್ಲಾ ಉದ್ದೀನ:— (೧೪೩೫–೧೪೫೯). ವಿಜಯನಗರದವರೊಡನೆ ಅನೇಕ ಯುದ್ಧಗಳನ್ನು ಮಾಡಿ ಸ್ನೇಹದ ಒಡಂಬಡಿಕೆಯನ್ನು ಮಾಡಿಕೊಂಡನು. ಜೂಜು, ಕುಡಿತಗಳನ್ನು ಕಟ್ಟುಮಾಡಿದನು. ಬೇದರದಲ್ಲೊಂದು ಸಾರ್ವಜನಿಕ ಔಷಧಾಲಯವನ್ನು ಸ್ಥಾಪಿಸಿದನು. ಇವನ ತರುವಾಯ ಕ್ರಿ. ಶ ೧೪೬೩ರ ವರೆಗೆ ಹುಮಾಯೂನ, ನಿಜಾಮಶಹರೆಂಬ ಅತಿ ಕ್ರೂರ ರಾಜರು ಆಳಿದ ಬಳಿಕ ೨ನೆಯ ಮಹಮ್ಮದಶಹನೆಂಬ ೮ ವರ್ಷದ ಬಾಲಕನು ಪಟ್ಟವೇರಿದನು.

೩ನೆಯ ಮಹಮ್ಮದಷಾಹ:— (ಕ್ರಿ. ಶ. **೧೪೬೩–೧೪೮೨**). **ಮಹಮ್ಮದ ಗವಾನ**ನೆಂಬ ಚತುರ ಮಂತ್ರಿಯು ಎಲ್ಲ ಕಾರಭಾರವನ್ನು ಸಾಗಿಸುತ್ತಿದ್ದನು. ಆತನು ಎಲ್ಲ ಖಾತೆಗಳಲ್ಲಿ ಉತ್ತಮವಾದ ವ್ಯವಸ್ಥೆಯನ್ನುಂಟು ಮಾಡಿದನು. ಲಂಚ ತಕ್ಕೊಳ್ಳುವದನ್ನು ನಿಲ್ಲಿಸಿದನು. ಭೂಮಿಗಳನ್ನು ಅಳೆಯಿಸಿ ಕಂದಾಯವನ್ನು ನಿರ್ಣಯಿಸಿದನು. ಅರಸನ ಏಕನಿಷ್ಠ ಸೇವಕನಾಗಿದ್ದನು. ಆದರೆ ದುಷ್ಟರಾದ ಸರದಾರರು ಇವನನ್ನು ದ್ವೇಷಿಸಹತ್ತಿದರು. ಕುಡಕನಾದ ಮಹಮ್ಮದಷಾಹನಿಗೆ ಇಲ್ಲದ ಚಾಡಿ ಹೇಳಿ ರೊಚ್ಚಿಗೆಬ್ಬಿಸಿ ಅವನಿಂದಲೆ ಮಂತ್ರಿಯನ್ನು ಕೊಲ್ಲಿಸಿದರು! ಸಾಯುವ ಮುಂಚೆ ಗವಾನನು- "ನನ್ನಂಥ ಮುಪ್ಪಿನವನಿಗೆ ಸಾವು ಬಂದದ್ದೇನೂ ಕೆಡಕಲ್ಲ! ನನ್ನ ಸಂಗಡಲೆ ರಾಜ್ಯದ ಆಸ್ತವಾಗುವದು ಮಾತ್ರ ನಿಶ್ಚಯ!!" ಎಂದು ನುಡಿದನು. ಗವಾನನ ಮರಣದ ತರುವಾಯ ರಾಜ್ಯದಲ್ಲಿ ಸರದಾರರು ಪ್ರಬಲರಾಗಹತ್ತಿದರು. ಆಗ ಮಹಮೂದ ಷಾಹನಿಗೆ ಗವಾನನನ್ನು ಕೊಲ್ಲಿಸಿದ್ದಕ್ಕಾಗಿ ಪಶ್ಚಾತ್ತಾಪವೆನಿಸಿತು. ಇದೇ ಚಿಂತೆಯಿಂದ ಈ ಬಾದಷಾಹನು ಕ್ರಿ. ಶ. **೧೪೮೨**ರಲ್ಲಿ ಸತ್ತನು.

ಬಳಿಕ ಕಲೀಮುಲ್ಲಾನ ವರೆಗಿನ ಆರಸರನ್ನು ಪಟ್ಟದ ನೌಲೆ ಗೊಂಬೆಗಳಂತೆ ಕೂಡಿಸಿ **ಕಾಸೀಮ ಬರೀದನು** ಎಲ್ಲ ಕಾರಭಾರವನ್ನು ಸಾಗಿಸಿದನು. ಕಡೆಗೆ ಕಲೀಮುಲ್ಲಾನನ್ನು ವಿಷಹಾಕಿಸಿ ಕೊಂದು, ಬಹಮನಿ ಮನೆತನವನ್ನು ಕೊನೆಗಾಣಿಸಿ, ತನ್ನ **ಬರೀದಶಾಹಿ**ಯನ್ನು ಬೇದರದಲ್ಲಿ ಸ್ಥಾಪಿಸಿದನು. ಕ್ರಿ. ಶ. ೧೫೨೭. ಬೇದರ ಮೊದಲಾದ ಐದು ಶಾಹಿಗಳಲ್ಲಿ ಬಹಮನಿಯ ರಾಜ್ಯವು ಹಂಚಿಹೋಯಿತು.

ಎನೆಯ ಪಾಠ

ಬಹಮನಿ ರಾಜ್ಯವು ಮುರಿದು ಆದ ಐದು ಶಾಹಿ (ರಾಜ್ಯ) ಗಳು

೧. **ಇಮಾದಷಾಹಿ**:— ಕ್ರಿ. ಶ. ೧೪೮೪-೧೫೨೨. **ಫತಹುಲ್ಲಾ ಖಾನ** ನೆಂಬವನು ವರ್ಹಾಡದಲ್ಲಿ ಇಮಾದಶಾಹಿಯನ್ನು ಸ್ಥಾಪಿಸಿದನು. ಇದರ ರಾಜಧಾನಿ **ಎಲಿಚಪುರವು**. ಕ್ರಿ. ಶ. ೧೫೭೨ರಲ್ಲಿ ಈ ರಾಜ್ಯವನ್ನು ನಿಜಾಮಶಾಹಿಯ ಅರಸರು ಗೆದ್ದುಕೊಂಡರು.

೨. **ನಿಜಾಮಷಾಹಿ**:—ಕ್ರಿ ಶ **೧೪೯೦-೧೬೩೬.** ಜುನ್ನರದ ಸುಭೇದಾರನಾದ **ಮಲಿಕ ಅಹಮ್ಮದ**ನೆಂಬವನು ಅಹಮ್ಮದನಗರದಲ್ಲಿ ಈ ರಾಜ್ಯವನ್ನು ಸ್ಥಾಪಿಸಿದನು. ಈ ಮನೆತನದ ಹುಶೇನಷಾಹನ ಮಗಳಾದ **ಚಾಂದ ಬೀಬಿ**ಯು ಶೂರಳೂ ಚತುರಳೂ ಆಗಿದ್ದಳು. ಈಕೆಯನ್ನು ವಿಜಾಪುರದ ಅಲ್ಲೀ ಅದಿಲಷಾಹನು ಮದುವೆಯಾಗಿದ್ದನು. ಕ್ರಿ. ಶ. ೧೬೦೦ರಲ್ಲಿ ಅಹಮ್ಮದನಗರವು ಅಕಬರನ ಮಾಂಡಲಿಕ ರಾಜ್ಯವೆನಿಸಿತು. ಮುಂದೆ **ಮಲಿಕ ಅಂಬರ**ನೆಂಬ ಮಂತ್ರಿಯು ಈ ರಾಜ್ಯದ ಸ್ವತಂತ್ರತೆಗಾಗಿ ಶೌರ್ಯದಿಂದ ಹೋರಾಡಿದರೂ ಉಪಯೋಗವಾಗಲಿಲ್ಲ. ಕಡೆಗೆ ೧೬೩೬ರಲ್ಲಿ ನಿಜಾಮಷಾಹಿಯು ಮೊಗಲರ ರಾಜ್ಯಕ್ಕೆ ಸೇರಿತು. ಮಾಲೋಜಿರಾವ ಭೋಸಲೆ ಮುಂತಾದ ಮರಾಠ ಸರದಾರರು ಮಲಿಕ ಅಂಬರನ ಕಾಲದಲ್ಲಿ ಪ್ರಸಿದ್ಧಿಯನ್ನು ಪಡೆದರು. ಕೆಲವು ವರ್ಷಗಳ ಬೆಳೆಯ ಸರಾಸರಿಯ ಮೇಲಿಂದ ತೆರಿಗೆಯನ್ನು ಗೊತ್ತುಮಾಡುವ ಪದ್ಧತಿಯನ್ನು ಮಲಿಕ ಅಂಬರನೇ ಆರಂಭಿಸಿದನು.


೩. **ಕುತುಬಷಾಹಿ**:— ಕ್ರಿ. ಶ. **೧೫೧೨-೧೬೮೭. ಕುತುಬ ಉಲ್ ಮುಲುಕ**ನೆಂಬವನು ಈ ರಾಜ್ಯವನ್ನು ಸ್ಥಾಪಿಸಿದನು. ಇವನು ಇರಾಣದ ಸಿಯಾ ಪಂಥದವನು. ಈ ರಾಜ್ಯದಲ್ಲಿ ಅನೇಕ ಮರಾಠ ಸರದಾರರಿಗೆ ಆಶ್ರಯವು ಸಿಕ್ಕಿತು. **ಹೈದರಾಬಾದ** ಪಟ್ಟಣವನ್ನು ಈ ಮನೆತನದವರೇ ಕಟ್ಟಿಸಿದರು. ಕಡೆಯ ಅರಸನಾದ **ಅಬೂಹುಶೇನನ** ಕಾಲದಲ್ಲಿ **ಅಕ್ಕಣ್ಣ, ಮಾದಣ್ಣ** ಎಂಬಿಬ್ಬರು ಬ್ರಾಹ್ಮಣ ಮಂತ್ರಿಗಳಿದ್ದರು. ಈ ಕಾಲದಲ್ಲಿ **ಮಾಸರುಲ್ ಉಮರಾ** ಎಂಬ ಇತಿಹಾಸವು ಬರೆಯಲ್ಪಟ್ಟಿತು. ಔರಂಗಜೇಬನು ಅಬೂಹುಶೇನನನ್ನು ಸೆರೆ ಹಿಡಿದು ಗೋವಳಕೊಂಡವನ್ನು ತಕ್ಕೊಂಡನು. ಕ್ರಿ. ಶ ೧೬೮೭.

೪. ಬರೀದಷಾಹಿ:— ಕ್ರಿ. ಶ.೧೫೧೨-೧೬೫೬. ಕಾಸೀಮ ಬರೀದನು ಬಹಮನಿಯ ಕಡೆಯ ಅರಸನನ್ನು ಬದಿಗಿಟ್ಟು ಈ ರಾಜ್ಯವನ್ನು ಆಳಹತ್ತಿದನು ಕ್ರಿ. ಶ. ೧೬೧೯ರಲ್ಲಿ ವಿಜಾಪುರದವರು ಈ ರಾಜ್ಯದ ಬಹು ಭಾಗವನ್ನು ತಕ್ಕೊಂಡರು. ಬೇದರದಲ್ಲಿಯೂ ಅದರ ಸುತ್ತಲಿನ ಸ್ವಲ್ಪ ಪ್ರದೇಶದಲ್ಲಿಯೂ ಈ ಮನೆತನವು ಮುಂದೆ ೫೦ ವರ್ಷಗಳ ವರೆಗೆ ಬಾಳಿತು. ಔರಂಗಜೇಬನು ಬೇದರವನ್ನು ಕ್ರಿ. ಶ. ೧೬೫೬ ರಲ್ಲಿ ಕೈವಶಮಾಡಿಕೊಂಡನು.

೫. ಆದಿಲ್‌ಷಾಹಿ:— ಕ್ರಿ ಶ. **೧೪೮೯—೧೬೮೬. ಯುಸುಫ್ ಆದಿಲ್‌ಷಾಹ.**- ಕ್ರಿ. ಶ ೧೪೮೯-೧೫೧೯. ಇವನು ತುರ್ಕಸ್ತಾನದ ಸುಲ್ತಾನನಾದ **ಆಗಾಮುರಾದನ** ಎರಡನೆಯ ಮಗನು. ತನ್ನ ಅಣ್ಣನಿಂದ ಜೀವ ಉಳಿಸಿಕೊಂಡು **ಮೊದಲು** ಇರಾಣಕ್ಕೂ ಆಮೇಲೆ ಹಿಂದುಸ್ಥಾನಕ್ಕೂ ಬಂದನು. ಇವನು ಬೇದರದಲ್ಲಿದ್ದ **ಮಹಮ್ಮದ ಗವಾನನ** ಆಶ್ರಯವನ್ನು ಹೊಂದಿ ಹೆಸರಿಗೆ ಬಂದು ವಿಜಾಪುರದ ಸುಭೆದಾರನಾದನು. ಬಹಮನೀ ಅರಸರು ದುರ್ಬಲರಾಗಲು ಸ್ವತಂತ್ರನಾಗಿ ಆದಿಲ್‌ಶಾಹಿಯನ್ನು ಸ್ಥಾಪಿಸಿದನು. ಅನೇಕ ಮರಾಠ ಸರದಾರರು ಇವನಲ್ಲಿ ಉಳಿಗಕ್ಕೆ ನಿಂತರು. **ಅಲ್ಬುಕರ್ಕ**ನೆಂಬ ಪೋರ್ತುಗೀಜ ಗವ್ಹರ್ನರನನ್ನು ಸೋಲಿಸಿ ಗೋವೆಯನ್ನು ಹಿಡಿದುಕೊಂಡನು. ಇವನು ಶೂರನೂ ಉದಾರನೂ ಆಗಿದ್ದನು. **ಪಿಯಾಪಂಥ**ದ ಕಡೆಗೆ ಇವನ ಒಲವಿತ್ತು ಕ್ರಿ. ಶ. ೧೫೦೯ ರಲ್ಲಿ ಮರಣಹೊಂದಿದನು.

ಇಸ್ಮಾಯಿಲ್ ಆದಿಲಷಾಹ:— ಕ್ರಿ. ಶ. **೧೪೧೦-೧೪೪೪.** ಇವನು ಚಿಕ್ಕನನಿದ್ದವರಿಂದ **ಕಾಮಿಲಖಾನ**ನೆಂಬ ಮಂತ್ರಿಯು ಕಾರಭಾರವನ್ನು ಸಾಗಿಸುತ್ತಿದ್ದನು. ತಾನೇ ಅರಸನಾಗಬೇಕೆಂದು ಅರಸನನ್ನು ಸೆರೆಯಿಟ್ಟನು. ಆಗ **ಖುಸುರು** ಎಂಬ ತುರ್ಕೀಗುಲಾಮನು ಕಾಮಿಲನನ್ನು ಕೊಂದನು ಅರಸನು ಖುಸರುನನ್ನು ಮೆಚ್ಚಿ ಅವನಿಗೆ **'ಅಸದಖಾನ'** ಎಂಬ ಬಿರುದನ್ನು ಕೊಟ್ಟು **ಬೆಳಗಾಂವಿಯನ್ನು** ಜಹಗೀರು ಹಾಕಿಕೊಟ್ಟನು. ಈ ಖುಸರುನೇ ಮುಂದೆ ಮಂತ್ರಿಯಾದನು. ಇಸ್ಮಾಯಿಲನು ವಿಜಯನಗರದ ಕೃಷ್ಣರಾಜನಿಂದ ಸೋತನು ಇವನ ಆಳಿಕೆಯಲ್ಲಿ ಪೋರ್ತಗೀಜರು **ಗೋವೆ**ಯನ್ನು ಗೆದ್ದುಕೊಂಡನು. ಗೋವಳಕೊಂಡದ ಮುತ್ತಿಗೆ ಕಾಲಕ್ಕೆ ಇವನು ೧೫೨೪ ರಲ್ಲಿ ಜ್ವರ ಬಂದು ಸತ್ತನು.

ಅಲ್ಲೀ ಆದಿಲ್‌ಷಾಹ:— ಕ್ರಿ. ಶ. ೧೫೫೮-೧೫೭೯. ಇಸ್ಮಾಯಿಲನ ತರುವಾಯ ಕ್ರಿ. ಶ. ೧೫೫೭ರ ವರೆಗೆ ಆಳಿದ **ಇಬ್ರಾಹೀಮ**ನು ಕ್ರೂರನೂ ಅವಿಚಾರಿಯೂ ಆಗಿದ್ದನು. **ಅಸದಖಾನನೇ** ವಿಜಾಪುರದ ಮೇಲೆ ಸಾಗಿ ಬಂದ ಅಹಮ್ಮದನಗರ, ವಿಜಯನಗರಗಳ ಅರಸರನ್ನು ಸಮಾಧಾನಬಡಿಸಿ ಗೋವಳಕೊಂಡದವರನ್ನು ಸೋಲಿಸಿದನು. ಇಬ್ರಾಹೀಮನ ತರುವಾಯ ಅಸದಖಾನನ ಸಹಾಯದಿಂದ ಅಲ್ಲೀಆದಿಲ್‌ಷಾಹನು ಪಟ್ಟಕ್ಕೆ ಕುಳಿತನು. ವಿಜಯನಗರದ ರಾಮರಾಯನೊಡನೆಸ್ನೇಹವನ್ನು ಬೆಳೆಸಿದನು. ಮುಸಲ್ಮಾನರ ಪ್ರಾರ್ಥನೆಗೋಸುಗ ಒಂದು ಭವ್ಯವಾದ **ಜುಮ್ಮಾಮಸೀದಿ**ಯನ್ನು ಕಟ್ಟಿಸಿ



ವಿಜಾಪುರದ ಜುಮ್ಮಾಮಸೀದಿ

ದನು. ವಿಜಾಪುರ, ಅಹಮ್ಮದನಗರ, ಗೋವಳಕೊಂಡಗಳ ಬಾದಷಾಹರು ತಮ್ಮತಮ್ಮೊಳಗೆ ಬಡಿದಾಡುವಾಗ ವಿಜಾಪುರದ ಆದಿಲ್‌ಷಾಹನು ವಿಜಯನಗರದವರ ಸಹಾಯವನ್ನು ಪಡೆದು ಅಹಮ್ಮದನಗರದ ನಿಜಾಮಷಾಹರನ್ನು ಸೋಲಿಸಿದನು. ಈ ಪ್ರಸಂಗದಲ್ಲಿ ರಾಮರಾಯನು ಒಳ್ಳೆ ಬಿಗುವಿನಿಂದ ನಡೆದನು. ವಿಜಾಪುರದವರ ವಕೀಲನನ್ನು ಚೆನ್ನಾಗಿ ನಡೆಯಿಸಿಕೊಳ್ಳದಾದನು. ಮತ್ತು ತನ್ನ ರಾಜ್ಯದಲ್ಲಿದ್ದ ಮುಸಲ್ಮಾನರನ್ನು ಕಾಡಿಸಹತ್ತಿದನು.

ರಾಮರಾಯನ ಗರ್ವವು ಬಾದಷಾಹರನ್ನು ಎಚ್ಚರಿಸಿತು. ಅವರು ಒಟ್ಟುಗೂಡಿ ವಿಜಯನಗರದ ರಾಜ್ಯವನ್ನು ಮುರಿಯುವ ವಿಚಾರ ಮಾಡಿದರು. ರಾಜತಂತ್ರಜ್ಞನೂ ಚತುರನೂ ಆದ † ಅಕ್‌ಬರಬಾದಷಾಹನು ಈ ಯೋಚನೆಗೆ ಒಪ್ಪಿ ಸಹಾಯವನ್ನಿತ್ತನು. ಎಲ್ಲರೂ ಒಟ್ಟುಗೂಡಿ ಸೈನ್ಯದೊಂದಿಗೆ **ನಾಲ್ಹತವಾಡ**ದ ಕಡೆಗೆ ಬಂದು ತಳವೂರಿದರು. ಇತ್ತ **ರಾಕ್ಷಸ ತಂಗಡಿಯ** ಹತ್ತಿರದ ಬೈಲಿನಲ್ಲಿ ಸೈನ್ಯದಿಂದ ಕೂಡಿಕೊಂಡು ಬಂದು ರಾಮರಾಯನೂ ನೆಲೆಯೂರಿದನು. ಎರಡೂ ಸೈನ್ಯಗಳಲ್ಲಿ ೨೭ ದಿವಸಗಳವರೆಗೆ ಅತಿ ಘೋರವಾದ ಯುದ್ಧವಾಯಿತು. ರಾಮರಾಯನು ಕಡೆಯದಿನ ಆವೇಶದಿಂದ ನುಗ್ಗಲು ಶತ್ರುಸೈನ್ಯವು ಎರಡು ಹರದಾರಿ ಹಿಮ್ಮೆಟ್ಟಿತು. ತಮಗೆ ಜಯವಾಯಿತೆಂದು ತಿಳಿದು ವಿಜಯನಗರದ ವರ ಸೈನ್ಯವು ಪಾಳಯಕ್ಕೆ ಬಂದು ಮೈಮರೆತು ಚಕ್ಕಂದದಿಂದ ಇರಹತ್ತಿತು. ಅಷ್ಟರಲ್ಲಿ ಮುಸಲ್ಮಾನರು ಒಳ್ಳೆಯ ಹುರುಪುಗೊಂಡು ಒಮ್ಮಿಂದೊಮ್ಮೆ ಶತ್ರು ಸೈನ್ಯವನ್ನು ಮುತ್ತಿದರು. ನುತ್ತು **ಮುಲಕೆ ಮೈದಾನ**ವೆಂಬ ತೋಪಿನಿಂದ ಶತ್ರುಗಳ ಮೇಲೆ ಗುಂಡಿನ ಮಳೆಗರೆಯ ಹತ್ತಿದರು. ರಾಮರಾಯನು ವೈರಿಗಳ ಕೈಗೆ ಸಿಕ್ಕು ಹತನಾದನು. ಹಿಂದು ಸೈನ್ಯವು ಎದೆಗುಂದಿ ಚದರಿತು. ಮುಸಲ್ಮಾನರು ವಿಜಯನಗರದ ಮೇಲೆ ಸಾಗಿ ಬಂದು ಅವನ್ನು ಹಾಳುಗೆಡಹಿ ಅಪಾರವಾದ ಸಂಪತ್ತನ್ನು ಹೇರಿಕೊಂಡು ಹಿಂದಿರುಗಿದರು. ಕ್ರಿ. ಶ ೧೫೬೫. ಅಲ್ಲೀ ಆದಿಲ್‌ಷಾಹನು ಮಹಮ್ಮದನಗರದವರ ಸಹಾಯದೊಂದಿಗೆ ಗೋವೆ ಪ್ರಾಂತವನ್ನು ಹೊಕ್ಕು ಹತ್ತು ತಿಂಗಳವರೆಗೆ



೧೯ನೆಯ ಅಲ್ಲಿ ಆದಿಲಷಾಹ

ಮುತ್ತಿಗೆ ಹಾಕಿದರೂ ಗೋವೆಯು ವಶವಾಗಲಿಲ್ಲ. ಅಲ್ಲೀಬರೀದನ ತಂತ್ರದಿಂದ ಇವನು ಕ್ರಿ. ಶ.೧೫೬೭ರಲ್ಲಿ ಕೊಲ್ಲಲ್ಪಟ್ಟನು. ಇವನಿಗೆ ಮಕ್ಕಳಿರಲಿಲ್ಲ.

† ಶ್ರೀ ರಾಜಪುರೋಹಿತ ಕೃತ ಕರ್ನಾಟಕದ ವರ್ಣನೆಯೂ ಇತಿಹಾಸವೂ ಪು. ೮೭ (೨ನೆಯಜ.)

೨ನೆಯ ಇಬ್ರಾಹೀಮ್‌ಷಾಹ:— ಕ್ರಿ ಶ. ೧೫೪೦–೧೬೨೬. ಅಲ್ಲೀ ಆದಿಲ್‌ಷಾಹನ ತರುವಾಯ ಅವನ ಹೆಂಡತಿಯಾದ **ಚಾಂದಬೀಬಿಯು ಕಾಮಿಲ ಖಾನ** ಮಂತ್ರಿಯ ನೆರವಿನಿಂದ ತನ್ನ ಮೈದುನನ ಮಗನಾದ **೨ನೆಯ ಇಬ್ರಾಹೀಮ**ನನ್ನು ಪಟ್ಟಕ್ಕೆ ಕೂಡಿಸಿದಳು ಮುಂಚೆ ಕಾಮಿಲನಿಗೆ ಅರಸನಾಗುವ ಆಶೆ ಹುಟ್ಟಲು ಚಾಂದಬೀಬಿಯು ಇವನನ್ನು ಸೆರೆಯಿಟ್ಟು ತಾನೇ ಕಾರಭಾರವನ್ನು ಸಾಗಿಸಹತ್ತಿದಳು. ಇವನ ಕಾಲದಲ್ಲಿ ಪ್ರಜೆಗಳು ಸುಖವಾಗಿ ಇದ್ದರು ಹಲವರು ಮರಾಠರೂ ಬ್ರಾಹ್ಮಣರೂ ಅಧಿಕಾರಗಳನ್ನು ಪಡೆದರು ಅಕಬರನ ಮಗ **ದಾನಿಯಲ**ನಿಗೆ ತನ್ನ ಮಗಳನ್ನು ಮದುವೆ ಮಾಡಿಕೊಟ್ಟನು. ಇವನು **ಸುನ್ನೀಪಂಥದ** ಅಭಿಮಾನಿಯಾಗಿ **ಜಗತ್‌ಗೀರ** (ಜಗತ್ತನ್ನು ಗೆಲ್ಲುವವ) ಎಂಬ ಬಿರುದನ್ನು ಧರಿಸಿದನು. ಕ್ರಿ. ಶ. **೧೬೨೬**ರಲ್ಲಿ ಸತ್ತನು

ಮಹಮ್ಮದ ಆದಿಲ್‌ಷಾಹ:— ಕ್ರಿ. ಶ. **೧೬೨೭–೧೬೫೬** ಇವನ ಆಳಿಕೆಯಲ್ಲಿ ಮೊಗಲರ ಮತ್ತು ಮರಾಠರ ಕೂಡ ಅನೇಕ ಯುದ್ಧಗಳಾದವು. **ಮುರಾರಿಪಂತ**ನೆಂಬ ಮಂತ್ರಿಯ ಕಡೆಗೆ ಸರ್ವಾಧಿಕಾರವನ್ನೊಪ್ಪಿಸಿ ತಾನು ಕಟ್ಟಡಗಳನ್ನು ಕಟ್ಟಿಸುವವರಲ್ಲಿಯೆ ತೊಡಗಿದ್ದನು. ಇವನು ಕಟ್ಟಿಸಿದ **ಬೋಲ ಗುಮ್ಮುಜ್, ಇಬ್ರಾಹೀಮರೋಜಾ** ಇವು ನೋಡತಕ್ಕಂತಹವಾಗಿವೆ.

೨ನೆಯ ಅಲ್ಲಿಆದಿಲ್‌ಷಾಹ:— ಕ್ರಿ. ಶ. **೧೬೫೬-೧೬೭೨.** ಇವನ ಕಾಲದಲ್ಲಿ ಮರಾಠರು ಪ್ರಬಲರಾದರು. ಸೇನಾಪತಿಯಾದ **ಅಫಜುಲ್‌ಖಾನ**ನು ಅವರ ಮೇಲೆ ಏರಿಹೋಗಿ ಕೊಲ್ಲಲ್ಪಟ್ಟದ್ದರಿಂದ ನಿರುಪಾಯನಾಗಿ ಮರಾಠರಿಗೆ ಹಣ ಕೊಟ್ಟು ಒಪ್ಪಂದಮಾಡಿಕೊಂಡನು. ಮತ್ತು ಅವರನ್ನು ಕೂಡಿಕೊಂಡು ಮೊಗಲರ ಕಾಟವನ್ನು ತಪ್ಪಿಸಿಕೊಳ್ಳುವ ಯತ್ನಮಾಡಿದನು. ಕ್ರಿ ಶ. ೧೬೭೨ ರಲ್ಲಿ ಇವನು ಸತ್ತಬಳಿಕ **ಸಿಕೆಂದರ**ನೆಂಬ ದುರ್ಬೈವಿಯ ಆಳಿಕೆಯಲ್ಲಿ ಆದಿಲ್‌ಷಾಹಿಯ ರಾಜ್ಯವನ್ನು ಔರಂಗಜೇಬನು ದಿಲ್ಲಿಯ ಸಾಮ್ರಾಜ್ಯಕ್ಕೆ ಕೂಡಿಸಿಕೊಂಡನು. ಕ್ರಿ. ಶ. **೧೬೮೬.** ಮುಂದೆ ೧೪ ವರ್ಷ ಆಗ್ರಾ ಕೋಟೆಯಲ್ಲಿ ಮೊಗಲರ ಅಧೀನನಾಗಿದ್ದು ಕ್ರಿ. ಶ. **೧೭೦೦**ರಲ್ಲಿ ಮರಣಹೊಂದಿದನು ಇಲ್ಲಿಗೆ ಆದಿಲ್‌ಷಾಹಿಯ ಮನೆತನವು ಅಳಿದುಹೋಯಿತು-

---

೯ನೆಯ ಪಾಠ

ವಿಜಯನಗರದ ಸಾಮ್ರಾಜ್ಯ

(ಕ್ರಿ. ಶ. ೧೩೩೬-೧೫೬೫)

೧. **ಮೊದಲಿನ ಸ್ಥಿತಿ**:— ಅಲ್ಲಾಉದ್ದೀನ ಖಿಲಜಿಯ ಸರದಾರನಾದ **ಮಲಿಕ್‌ಕಾಫೂರನು** ದಕ್ಷಿಣ ಹಿಂದುಸ್ಥಾನವನ್ನು ಹೊಕ್ಕು ಕ್ರಿ ಶ. ೧೩೦೬-೧೩೧೦ರ ವರೆಗೆ ದೇವಗಿರಿ, ಒರಂಗಲ್ಲ, ದ್ವಾರಸಮುದ್ರಗಳನ್ನು ವಶಪಡಿಸಿಕೊಂಡನು. ಅಲ್ಲದೆ ಬಗೆಬಗೆಯಿಂದ ಹಿಂದುಗಳನ್ನು ಹಿಂಸಿಸಿದನು. ಕ್ರೂರತನದಿಂದ ಜನರ ಕೊಲೆ-ಸುಲಿಗೆಗಳನ್ನು ಮಾಡಿ ಅಪಾರವಾದ ಸಂಪತ್ತನ್ನು ಒಯ್ದನು. ಶೃಂಗೇರಿಯ ಶಂಕರಾಚಾರ್ಯರ ಮಠಕ್ಕೂ ಇವನ ಉಪದ್ರವ ವಾಯಿತು. ಹಿಂದಿನ ರಾಜರಾಗಲಿ ರಾಜನ ಸೇನಾಪತಿಗಳಾಗಲಿ ರಾಜ್ಯವನ್ನು ಗೆಲ್ಲುವದಕ್ಕಾಗಿ ಇದಿರಾಗಿ ನಿಂತವರೊಡನೆ ಯುದ್ಧ ಮಾಡುತ್ತಿದ್ದರೇ ಹೊರತು ಸಾಮಾನ್ಯ ಪ್ರಜೆಗಳ ಗೋಜಿಗೆ ಅವರು ಹೋಗುತ್ತಿರಲಿಲ್ಲ ಬಲತ್ಕಾರದ ಧರ್ಮಹಿಂಸೆಯನ್ನಂತೂ ಅವರೆಂದೂ ಮಾಡಲಿಲ್ಲ. ದಕ್ಷಿಣ ಹಿಂದುಸ್ಥಾನಕ್ಕೆ ಇದೇ ಇಂಥ ಮೊದಲನೆಯ ಪ್ರಸಂಗವು.

೨. **ವಿದ್ಯಾರಣ್ಯರು**:— ಕಾಫೂರನ ಈ ಆಪಘಾತದಿಂದ ದಕ್ಷಿಣವು ಹೌಹಾರಿತು. ಜನರು ಉಪಾಯವನ್ನು ಚಿಂತಿಸತೊಡಗಿದರು ಮಧ್ಯ ಕರ್ನಾಟಕದಲ್ಲಿ ಆಳುತ್ತಿದ್ದ ಯಾದವ ವಂಶದ **ಸಂಗಮರಾಜನ** ಕುಲಪುರೋಹಿತರೂ ಮಂತ್ರಿಗಳೂ ಆದ **ಮಾಧವಾಚಾರ್ಯರು** ವಿದ್ವಾಂಸರೂ ರಾಜತಂತ್ರಜ್ಞರೂ ಆಗಿದ್ದರು. ಸಂಗಮರಾಜನಿಗೆ **ಹರಿಹರ, ಕಂಪಣ್ಣ, ಬುಕ್ಕರಾಯ, ಮಾರಪ್ಪ, ಮುದ್ದಪ್ಪ** ಎಂಬ ಅಯ್ಯರು ಮಕ್ಕಳು ಇದ್ದರು. ಅವರು ಗುರುಗಳಾದ ಮಾಧವಾಚಾರ್ಯರ ಅನುಜ್ಞೆಯಿಂದ ಧರ್ಮವನ್ನುಳಿಸಿಕೊಳ್ಳಲು ಸಮರ್ಥವಾದ ಒಂದು ರಾಜ್ಯವನ್ನು ಸ್ಥಾಪಿಸುವ ನಿಶ್ಚಯ ಮಾಡಿದರು. ಮತ್ತು ದೇವಗಿರಿ ಮುಂತಾದ ರಾಜ್ಯಗಳು ಮುಳುಗಿದುದರಿಂದ ನಿರಾಶ್ರಿತರಾದ ಅನೇಕ ವೀರರನ್ನು ಕಲೆಹಾಕಹತ್ತಿದ್ದರು. ಇತ್ತ ಮಾಧವಾಚಾರ್ಯರು **ಪಂಪಾಕ್ಷೇತ್ರ**ದಲ್ಲಿ ತಪಸ್ಸನ್ನು ಮಾಡಿ ಈಶ್ವರನ ಸಾಕ್ಷಾತ್ಕಾರವನ್ನು ಪಡೆದರು ಈ ಸುದ್ದಿಯು ದಕ್ಷಿಣದಲ್ಲೆಲ್ಲ ಹಬ್ಬಿತು. ವೈಭವವನ್ನು ಕಳೆದುಕೊಂಡು ಮಿಡುಕುತ್ತಿದ್ದ ಸಣ್ಣ ದೊಡ್ಡ ಅರಸರು ಸಾಮ್ರಾಜ್ಯ ಸ್ಥಾಪನೆಗಾಗಿ ಬಂಗಾರದ ನಾಣ್ಯಗಳನ್ನು ರಾಶಿ

ರಾಶಿಯಾಗಿ ತಂದೊಪ್ಪಿಸಿದರು. ರಾಜ್ಯಸ್ಥಾಪನೆಯ ಸಿದ್ದತೆಯಾಯಿತು. ಇದೇ ಸಮಯದಲ್ಲಿ ಮಾಧವಾಚಾರ್ಯರ ತಮ್ಮಂದಿರಾದ **ಭೋಗನಾಥರು** ವಿದ್ಯಾತೀರ್ಥ ಸ್ವಾಮಿಗಳಿಂದ ಸಂನ್ಯಾಸಾಶ್ರಮವನ್ನು ಹೊಂದಿ '**ಭಾರತೀತೀರ್ಥ**' ಎಂಬ ಹೆಸರಿನಿಂದ ಶೃಂಗೇರಿಯಲ್ಲಿ ಜಗದ್ಗುರುಗಳಾದರು. ಕ್ರಿ. ಶ. ೧೩೨೮.



ಸಾಯನಾಚಾರ್ಯ, ವಿದ್ಯಾರಣ್ಯ. ಹುಕ್ಕರಾಜ.

ಮುಂದೆ ಮಾಧವಾಚಾರ್ಯರು ಶೃಂಗೇರಿಗೆ ಹೋಗಿ ವಿದ್ಯಾತೀರ್ಥರಿಂದಲೆ ಸಂನ್ಯಾಶ್ರಮವನ್ನು ಸ್ವೀಕರಿಸಿ '**ವಿದ್ಯಾರಣ್ಯ**' ಎಂಬ ಹೆಸರನ್ನು ಪಡೆದು ಪಂಪಾಕ್ಷೇತ್ರಕ್ಕೆ ಮರಳಿಬಂದರು. ಕ್ರಿ. ಶ. **೧೩೩೧.** ಬಳಿಕ ಅದೇ ಪಂಪಾಕ್ಷೇತ್ರದಲ್ಲಿ ತುಂಗಭದ್ರೆಯ ದಕ್ಷಿಣ ತೀರದಲ್ಲಿ **ವಿದ್ಯಾನಗರ**ವೆಂಬ ಪಟ್ಟಣವನ್ನು


ನೆಲೆಸಿ, ಅಲ್ಲಿ ಕರ್ನಾಟಕದ ಸಿಂಹಾಸನವನ್ನು ಸ್ಥಾಪಿಸಿದರು. ಮತ್ತು ಸಂಗಮ ರಾಜನ ಹಿರಿಯ ಮಗನಾದ ಹರಿಹರರಾಯನನ್ನು ಪಟ್ಟಕ್ಕೆ ಕೂಡಿಸಿದರು. ಕ್ರಿ. ಶ. **೧೩೩೬.** ಅಂದಿನಿಂದ ಶೃಂಗೇರಿಯ ಜಗದ್ಗುರುಗಳಿಗೆ "**ಕರ್ನಾಟಕ ಸಿಂಹಾಸನ ಪ್ರತಿಷ್ಠಾಪನಾಚಾರ್ಯರು**" ಎಂಬ ಬಿರುದುಂಟಾಯಿತು.

೩. **ಹರಿಹರರಾಯ:**— ಕ್ರಿ. ಶ. **೧೩೩೬-೧೩೫೩.** ಇವನು ತನ್ನ ನಾಲ್ವರು ತಮ್ಮಂದಿರ ಸಹಾಯದಿಂದ ಮಲಪ್ರಭೆಯಿಂದ ಕಾವೇರಿಯವರೆಗೂ ಬನವಾಸಿಯಿಂದ ನೆಲ್ಲೂರಿನ ವರೆಗೂ ತನ್ನ ರಾಜ್ಯವನ್ನು ವಿಸ್ತರಿಸಿದನು. ವಿದ್ಯಾರಣ್ಯರೇ ಮಂತ್ರಿಗಳಾಗಿದ್ದರು. ದಿನದಿನಕ್ಕೆ ವಿಜಯವಾಗುತ್ತ ನಡೆದದರಿಂದ ವಿದ್ಯಾನಗರವು **ವಿಜಯನಗರ**ವೆಂಬ ಹೆಸರು ಪಡೆಯಿತು. ಕ್ರಿ ಶ ೧೩೪೬ರಲ್ಲಿ ಈ ಅಯ್ವರು ಅಣ್ಣ-ತಮ್ಮಂದಿರು ಶೃಂಗೇರಿಯ ಜಗದ್ಗುರುಗಳಿಗೆ ಭೂದಾನಗಳನ್ನು ಅರ್ಪಿಸಿದರು. ವಿದ್ಯಾರಣ್ಯರ ಅಪೇಕ್ಷೆಯಂತೆ ಹರಿಹರರಾಯನು ವಿಜಯನಗರದಲ್ಲಿ **ಶ್ರೀ ವಿರುಪಾಕ್ಷ** ದೇವರ ಗುಡಿಯನ್ನು ಕಟ್ಟಿಸಿದನು. ಇವನು ಕ್ರಿ. ಶ. **೧೩೫೩**ರಲ್ಲಿ ಮರಣಹೊಂದಿದನು.

೪. **ಬುಕ್ಕರಾಯ:**— ಕ್ರಿ. ಶ. **೧೩೫೩ ೧೩೭೭.** ಇವನ ಆಳಿಕೆಯಲ್ಲಿ ವಿಜಯನಗರದ ರಾಜ್ಯವು ಮತ್ತಿಷ್ಟು ಘನತೆಗೇರಿತು. **ರಾಜಾಧಿರಾಜ** ಮುಂತಾದ ಬಿರುದುಗಳನ್ನು ಇವನು ಪಡೆದನು. ಇವನ ಕಾಲಕ್ಕೂ ವಿದ್ಯಾರಣ್ಯರೇ ಮಂತ್ರಿಗಳಾಗಿದ್ದರು. ಬುಕ್ಕರಾಯನ ಮಕ್ಕಳಾದ **೨ನೆಯ ಹರಿಹರ** ಮೊದಲಾದವರು ಬೇರೆ ಬೇರೆ ಪ್ರಾಂತಗಳ ಅಧಿಕಾರಿಗಳಾಗಿದ್ದರು. ಇವನ ದಂಡನಾಯಕನು **ಬಸವಯ್ಯ**ನೆಂಬ ಲಿಂಗವಂತನೂ ದಳಪತಿಯು **ಇರುಗ**ನೆಂಬ ಜೈನನೂ ಆಗಿದ್ದರು. ವಿದ್ಯಾರಣ್ಯರೂ **ಸಾಯಣಾಚಾರ್ಯರೂ** ವೇದಭಾಷ್ಯ, ಸರ್ವದರ್ಶನ ಸಂಗ್ರಹ ಪಂಚದಶಿ ಮೊದಲಾದ ಗ್ರಂಥಗಳನ್ನು ಇವನ ಕಾಲದಲ್ಲಿಯೇ ಬರೆದರು. ಇವನು ೨೪ ವರ್ಷ ಚೆನ್ನಾಗಿ ಆಳಿ ಕ್ರಿ. ಶ. **೧೩೭೭**ರಲ್ಲಿ ತೀರಿಕೊಂಡನು.

೫. **೨ನೆಯ ಹರಿಹರರಾಯ:**— ಕ್ರಿ. ಶ. **೧೩೭೭-೧೪೦೪.** ಕೃಷ್ಣೆಯ ದಕ್ಷಿಣದ ಇಡೀ ದಕ್ಷಿಣ ಹಿಂದುಸ್ಥಾನವು ಇವನ ಕೈಸೇರಿದ್ದರಿಂದ ಇವನು **ಪೂರ್ವ ಪಶ್ಚಿಮ ದಕ್ಷಿಣ ಸಮುದ್ರಾಧೀಶ್ವರ**ನೆಂಬ ಬಿರುದನ್ನು ಪಡೆದನು. ಕೆಲವು ವರ್ಷಗಳ ತರುವಾಯ ವಿದ್ಯಾರಣ್ಯರು ಮುಪ್ಪಿನವರಾದುದರಿಂದ ಇವರ

ತಮ್ಮಂದಿರಾದ ಸಾಯಣಾಚಾರ್ಯರು ಮಂತ್ರಿಗಳಾದರು. ವಿದ್ಯಾರಣ್ಯರು ಕ್ರಿ. ಶ. ೧೩೩೩ರಿಂದ ೧೩೮೬ರ ವರೆಗೆ ಸಾಮ್ರಾಜ್ಯದ ಮುಖ್ಯಾಧಾರವೆನಿಸಿ, ಹಿಂದು ಧರ್ಮವನ್ನು ಸಂರಕ್ಷಿಸಿ, ಅನೇಕ ಗ್ರಂಥಗಳನ್ನು ಬರೆದು, ಕೃತಕೃತ್ಯ



ಬಹಮನೀ ಮತ್ತು ವಿಜಯನಗರದ ರಾಜ್ಯಗಳು

ರಾಗಿ ಪಂಪಾಕ್ಷೇತ್ರದಲ್ಲಿ * ಸಮಾಧಿಸ್ಥರಾದರು. ಹರಿಹರನು ಕ್ರಿ. ಶ. ೧೪೦೪ರಲ್ಲಿ ಮರಣಹೊಂದಿದನು.

---

* ಅಂದು, ೧೩೦೪ನೆಯ ಶಕವರ್ಷವೂ ಕ್ಷಯಸಂವತ್ಸರದ ಜೇಷ್ಠ ಬಹುಳ ತ್ರಯೋದಶಿಯೂ ಶನಿವಾರವೂ ಇದ್ದಿತು.

೬. **೧ನೆಯ ದೇವರಾಯ**:— ಕ್ರಿ. ಶ. **೧೪೦೬.** ೨ನೆಯ ಹರಿಹರನ ತರುವಾಯ ಇವನ ಹಿರಿಯ ಮಗನಾದ **೨ನೆಯ** ಬುಕ್ಕರಾಯನು ಎರಡೇ ವರ್ಷ ಆಳಿ ಕ್ರಿ ಶ. **೧೪೦೬**ರಲ್ಲಿ ಸಾಯಲು, ಎರಡನೆಯ ಮಗ **೧ನೆಯ ದೇವರಾಯನು** ಪಟ್ಟಕ್ಕೆ ಕುಳಿತನು. ಇವನು ಪ್ರಜೆಗಳಿಗೆ ಹಿತವಾಗುವಂತೆ ಚನ್ನಾಗಿ ಆಳಿದನು. ವಿಜಯನಗರದ ಕೋಟೆಯನ್ನು ಕಟ್ಟಿಸಿ ರಾಜಧಾನಿಯನ್ನು ಭದ್ರಗೊಳಿಸಿದನು. ತುಂಗಭದ್ರೆಗೆ ಒಡ್ಡು ಹಾಕಿ ಪಟ್ಟಣದಲ್ಲಿ ನೀರಿನ ಪೂರೈಕೆ ಮಾಡಿದನು. ವಿದ್ಯಾರಣ್ಯರ ತಂಗಿಯ ಮಗ **ಲಕ್ಷ್ಮೀಧರನು** ಈವನ ಮುಖ್ಯ ಮಂತ್ರಿಯಾಗಿದ್ದನು. ಈ ದೇವರಾಯನ ಮೊಮ್ಮಗನೇ ಪ್ರೌಢದೇವರಾಯನು.

೭. **ಪ್ರೌಢದೇವರಾಯ**:— ಕ್ರಿ ಶ **೧೪೧೯–೧೪೪೬.** ಬಹಮನೀ ಫಿರೋಜಷಾಹನನ್ನು ಇವನು ಸೋಲಿಸಿದನು. ಇವನ ಆಳಿಕೆಯಲ್ಲಿ ವಿಜಯನಗರದ ರಾಜ್ಯವು ವೈಭವದ ಶಿಖರವನ್ನೇರಿತು. ತುರ್ಕೀ ವೀರರನ್ನು ತನ್ನಲ್ಲಿಟ್ಟುಕೊಂಡು ಅವರಿಂದ ತನ್ನ ಸೈನಿಕರಿಗೆ ಹೊಸ ಯುದ್ಧಕಲೆಯ ಶಿಕ್ಷಣವನ್ನು ಕೊಡಿಸಿದನು ಇವನು ಅತಿ ಚತುರನೂ ಶೂರನೂ ಸಮಭಾವನೆಯವನೂ ವಿದ್ಯಾಭಿಮಾನಿಯೂ ಆಗಿದ್ದನು. ಇವನ ಆಳಿಕೆಯಲ್ಲಿ ಬಂದಿದ್ದ ಇಟಲಿಯ **ನಿಕೋಲೋ ಕೊಂಟಿ** ಎಂಬುಪ್ರವಾಸಿಯೂ ತೈಮೂರನ ಮಗನು ಕಾಲಿಕತದ ಸಾಮೋರಿನನ ಕಡೆಗೆ ಕಳುಹಿದ್ದ **ಅಬುಲ್‌ರಜಾಕ್** ಎಂಬ ರಾಯಬಾರಿಯೂ ವಿಜಯನಗರವನ್ನು ಕಣ್ಣಾರೆಕಂಡು ಆಗಿನ ವೈಭವವನ್ನು ಸೊಗಸಾಗಿ ಬಣ್ಣಿಸಿರುವರು.

ನಿಕೋಲೋ ಕೊಂಟಿಯು ಎನ್ನುವನು:— "ವಿಜಯನಗರದ ಸುತ್ತಳತೆಯು ೬೦ ಮೈಲು ಇವೆ ಕೋಟೆಯ ಗೋಡೆಗಳು ಬಹಳ ಭದ್ರವಾಗಿವೆ. ರಾಯನಂತಹ ಪ್ರತಾಪಶಾಲಿಯಾವ ಅರಸನು ಹಿಂದುಸ್ಥಾನದಲ್ಲಿ ಮತ್ತಾವನು ಇಲ್ಲ! ಇಲ್ಲಿಯ ಜಾತ್ರೆ-ಸಮಾರಂಭಗಳು ಒಳ್ಳೆಯ ವೈಭವದಿಂದ ನೆರವೇರುವವು."

ಅಬ್ದುಲ್ ರಜಾಕನು ಎನ್ನುವನು:— "ಈ ರಾಯನ ವಶದಲ್ಲಿ ಮೂರು ನೂರು ರೇವು (ಬಂದರ) ಗಳಿರುವವು; ಹನ್ನೊಂದು ಲಕ್ಷ ಸೈನಿಕರಿರುವರು ಇದನ್ನು ಹೋಲುವ ಬೇರೆ ನಗರವು ಜಗತ್ತಿನಲ್ಲಿರುವದಿಲ್ಲ! ಈ ಪಟ್ಟಣಕ್ಕೆ

ಏಳು ಸುತ್ತಿನಬಲವಾದ ಕೋಟೆಯಿದೆ. ಪೇಟೆಯ ಬೀದಿಗಳು ಅಗಲವಾಗಿಯೂ ಉದ್ದವಾಗಿಯೂ ಇರುವವು ನೋಡಿದಲ್ಲೆಲ್ಲ ಗುಲಾಬಿಯ ಹೂಗಳೇ ಕಾಣುತ್ತವೆ. ಇವುಗಳ ಮೇಲೆ ಈ ಜನರ ಪ್ರೀತಿಯೂ ಹೆಚ್ಚು. ಮುತ್ತು ರತ್ನಗಳ ವ್ಯಾಪಾರವನ್ನು ದಿನಾಲು ಬೈಲಂಗಡಿಯಲ್ಲಿ ನಡೆಯಿಸುವರು. ಬೆಳ್ಳಿ-ಬಂಗಾರಗಳ ಗಟ್ಟಿಗಳಿಂದ ತುಂಬಿದ ನೆಲಮನೆಗಳೆಷ್ಟೋ ಇವೆ ಅರಮನೆ, ಟಂಕಸಾಲೆ, ಮುಂತಾದವುಗಳ ರಕ್ಷಣೆಗೆ ೧೨ ಸಾವಿರ ಕಟ್ಟಾಳುಗಳು ಸಜ್ಜಾಗಿರುವವು ಈ ಪಟ್ಟಣದ ಜನಸಂಖ್ಯೆಯು ಅಪರಿಮಿತವಾಗಿವದು."

ವಿದ್ಯೆಯ ಎಳಿಗೆ:— ಇವನ ಮುಖ್ಯ ಪ್ರಧಾನನಾದ **ಲಕ್ಕಣ್ಣ ದಂಡೇಶ** ಮತ್ತು ದಂಡೇಶನಾಯಕ **ಜಕ್ಕಣಾಚಾರ್ಯ** ಇವರು ಹೆಸರಾದ ಲಿಂಗವಂತ ಕವಿಗಳಾಗಿದ್ದರು. ವೀರಶೈವ ವಿರಕ್ತನಾದ **ಚಾಮರಸ**ನು ಕನ್ನಡದಲ್ಲಿ ಬರೆದ ಅಲ್ಲಮಪ್ರಭುದೇವರ ಚರಿತ್ರೆಯನ್ನು ಪ್ರೌಢದೇವರಾಯನು ನೋಡಿ, ಆತನಿಗೆ **ಕಂಕಣ-ತ್ರಿಸರಗಳನ್ನು** ಮೆಚ್ಚುಗೊಟ್ಟು ಮನ್ನಿಸಿದನು. ರಾಜಮಾನ್ಯವೆನಿಸಿದ ಈ ಗ್ರಂಥವು ತೆಲಗು-ತಮಿಳುಗಳಲ್ಲಿ ಭಾಷಾಂತರಿಸಲ್ಪಟ್ಟಿತು. **ಕುಮಾರವ್ಯಾಸನು** ಬರೆದ ಕನ್ನಡ ಭಾರತ ಗ್ರಂಥವನ್ನು **ಚಂದ್ರಾತ್ಮಜ**ನೆಂಬ ಮಹಾರಾಷ್ಟ್ರ ಕವಿಯು ಮರಾಠಿಯಲ್ಲಿ ಭಾಷಾಂತರಿಸಿದನು. ಅಲ್ಲದೆ, **ಕಲ್ಲಿನಾಥಾರ್ಯ**ನು ಶಾರ್ಙ್ಗದೇವನ ' ಸಂಗೀತ ರತ್ನಾಕರ ' ಎಂಬ ಗ್ರಂಥಕ್ಕೆ ಟೀಕೆಯನ್ನು ಬರೆದನು. ಹೀಗಿರುವಾಗ ಸಕಲ ಸಂಪತ್ತುಗಳನ್ನು ಅನುಭವಿಸಿದ ಈ ದೇವರಾಯನು ಕ್ರಿ. ಶ. **೧೪೪೬**ರಲ್ಲಿ ಮರಣಹೊಂದಿದನು

೮. **ಸಂಗನು ವಂಶದ ಕೊಲೆ**:– ೨ನೆಯ ದೇವರಾಯನ ತರುವಾಯ ಅವನ ಹಿರಿಯ ಮಗ **ಮಲ್ಲಿಕಾರ್ಜುನ**ನು ಕ್ರಿ. ಶ. ೧೪೪೬ರಿಂದ ೧೪೬೫ರ ವರೆಗೆ ಆಳಿದನು. ಬಳಿಕ ಮಲ್ಲಿಕಾರ್ಜುನನ ಮಲತಮ್ಮ, **ವಿರೂಪಾಕ್ಷ**ನು ಆಳಹತ್ತಿದನು. ಇವನು ಹೇಡಿಯಾಗಿದ್ದರಿಂದ ಚಂದ್ರಗಿರಿಯ ಸಾಳವ ನರಸಿಂಹನು ಇವನನ್ನು ತಳ್ಳಿ ತಾನು ಅರಸನಾದನು. ಕ್ರಿ. ಶ ೧೪೫೬ರಿಂದ ಸಾಗುತ್ತ ಬಂದ ಸಂಗಮ ವಂಶವು ಇಲ್ಲಿಗೆ ಮುಗಿದು ಸಾಳುವ ವಂಶವು ಆರಂಭವಾಯಿತು. ಕ್ರಿ. ಶ. ೧೪೫೯.

೯. ಸಾಳುವ ವಂಶ—ನರಸಿಂಹ— ಕ್ರಿ. ಶ. ೧೪೭೮ರಿಂದ ೧೪೯೫. ಇವನು ಆಲ್ಪಾವಧಿಯಲ್ಲಿ ತಮಿಳು ನಾಡನ್ನು ಗೆದ್ದು ರಾಜ್ಯವನ್ನು ವಿಸ್ತರಿಸಿದನು. ಇವನು ಮೇಲಿಂದಮೇಲೆ ಮುಸಲ್ಮಾನರೊಡನೆ ಕಾದಬೇಕಾಯಿತು. ಇವನ ತರುವಾಯ ಇವನ ಮಗ **೨ನೆಯ ನರಸಿಂಹ**ನನ್ನು ತುಳುವಂಶದ **ನರಸರಾಜ**ನು ಕೊಂದು ವಿಜಯನಗರದ ಪಟ್ಟಣವನ್ನು ಹಿಡಿದುಕೊಂಡನು. ಕ್ರಿ. ಶ ೧೪೯೬.

೧೦. ತುಳುವಂಶ :— ಕೃಷ್ಣದೇವರಾಯ. ಕ್ರಿ. ಶ. **೧೫೦೯-೧೫೨೯.** ನರಸರಾಜನೂ ಅವನ ಮಗ ವೀರ ನರಸಿಂಹನೂ ಕ್ರಿ. ಶ. ೧೫೦೯ರ ವರೆಗೆ ಆಳಿದರು. ಇವರ ಆಳಿಕೆಯಲ್ಲಿಯೇ ಎಂದರೆ ಕ್ರಿ. ಶ. **೧೪೯೮**ರಲ್ಲಿ, ಹಿಂದು ಸ್ಥಾನದ **ಸಮುದ್ರಮಾರ್ಗ**ವನ್ನು ಗೊತ್ತುಹಚ್ಚಿದ **ವಾಸ್ಕೋಡಾಗಾಮ**ನು ಪೋರ್ತುಗಾಲ ದೇಶದಿಂದ **ಕಾಲಿಕತ** ಬಂದರಕ್ಕೆ ಬಂದನು

ಕ್ರಿ. ಶ **೧೫೦೯**ರಲ್ಲಿ ಕೃಷ್ಣದೇವರಾಯನು ಪಟ್ಟಕ್ಕೆ ಕುಳಿತನು. **ತಿಮ್ಮರಸ** ನೆಂಬವನು ಇವನ ಮಂತ್ರಿಯಾದನು. ಕ್ರಿ. ಶ. **೧೫೧೫**ರಲ್ಲಿ **ಒಡಿಸಾ** ಪ್ರಾಂತವು ವಿಜಯನಗರದ ರಾಜ್ಯಕ್ಕೆ ಸೇರಿತು. ಕೃಷ್ಣದೇವರಾಯನು ವಿಜಾಪುರದ ಇಸ್ಮಾಯಿಲ್ ಆದಿಲ್‌ಷಾಹನನ್ನು ಸೋಲಿಸಿ ಕೃಷ್ಣಾ–ತುಂಗಭದ್ರೆಗಳ ನಡುವಿನ **ರಾಯಚೂರು, ಮುದಗಲ್ಲು** ಪರಗಣೆಗಳನ್ನು ವಶಮಾಡಿಕೊಂಡನು. ಇವನು ಬದುಕಿರುವ ವರೆಗೆ ವಿಜಾಪುರದವರು ವಿಜಯನಗರದ ಮೇಲೆ ಕೈಯೆತ್ತಲಿಲ್ಲ. ಇವನು ವೈಷ್ಣವ ಮತದವನು; ಉಳಿದ ಮತದವರೊಡನೆ ಸಹಿಷ್ಣುತೆಯಿಂದ ನಡೆದನು ಇವನ ಆಚರಣೆಯು ಅತಿ ಉತ್ತಮವಾಗಿತ್ತು.

ಇವನ ಆಶ್ರಯದಲ್ಲಿ ಅನೇಕ ಕವಿಗಳು ಇದ್ದರು. **ತಿಮ್ಮಣ್ಣ ಕವಿ**ಯು **ಕನ್ನಡ**ದಲ್ಲಿ **ಉತ್ತರ ಭಾರತ**ವನ್ನು ಬರೆದನು. **ಪುರಂದರದಾಸ**ರೆಂಬ ಸತ್ಪುರುಷರು ಭಕ್ತಿರಸಪ್ರಧಾನವಾದ ಅನೇಕ ಪದಗಳನ್ನು ರಚಿಸಿದರು. ತೆಲಗು **ಕವಿ**ಗಳಲ್ಲಿ **ತೆನ್ನಾಲಿ ರಾಮಕೃಷ್ಣ**ನೆಂಬ ಚತುರ ವಿನೋದಗಾರನು ಒಬ್ಬನಾಗಿದ್ದನು. ಕೃಷ್ಣದೇವರಾಯನಿಗೆ **'ಕನ್ನಡರಾಯ'** ಎಂಬ ಬಿರುದು ಇದ್ದಿತು. ಇವನು ಕ್ರಿ. ಶ. **೧೫೨೯**ರಲ್ಲಿ ಮರಣಹೊಂದಿದನು.

೧೧. ರಾಮರಾಯ:— ಕ್ರಿ. ಶ. **೧೫೪೩–೧೫೬೫.** ಕೃಷ್ಣದೇವರಾಯನ ಮರಣದ ತರುವಾಯ ಅಚ್ಯುತರಾಯ, ವೆಂಕಟಪತಿರಾಯ ಇವರು

ಕ್ರಿ. ಶ. ೧೫೪೩ರ ವರೆಗೆ ಆಳಿದ ಬಳಿಕ ಕೃಷ್ಣದೇವರಾಯನ ಆಳಿಯನಾದ ರಾಮರಾಯನು ಸದಾಶಿವರಾಯನಿಗೆ ಹೆಸರಿಗೆ ಪಟ್ಟಗಟ್ಟಿ ತಾನೇ ಎಲ್ಲ ಕಾರ ಭಾರವನ್ನು ಸಾಗಿಸಹತ್ತಿದನು.

ಈ ರಾಮರಾಯನ ಪರಾಕ್ರಮದಿಂದ ವಿಜಯನಗರದ ಸಾಮ್ರಾಜ್ಯವು ಬಹಳ ಘನತೆಯನ್ನು ಹೊಂದಿತು. ಇವನು ಅಹಮ್ಮದನಗರ, ಗೋವಳಕೊಂಡ ದವರನ್ನು ಕೂಡಿಕೊಂಡು ವಿಜಾಪುರದ ಮೇಲೆ ಸಾಗಿಹೋಗಲು ಅಸದ್‌ಖಾನ ಮಂತ್ರಿಯು ಇವನೊಡನೆ ಒಪ್ಪಂದ ಮಾಡಿಕೊಂಡನು. ಮತ್ತು ಮುಂದೆ ಕ್ರಿ. ಶ. ೧೫೫೫ರಲ್ಲಿ ವಿಜಾಪುರದವರನ್ನು ಕೂಡಿಕೊಂಡು ಅಹದ್ಮುದನಗರವನ್ನು ಮುತ್ತಿದನು. ಹೀಗೆ ಹೆಚ್ಚು ಹೆಚ್ಚು ಪ್ರಬಲನಾಗಹತ್ತಿದ ರಾಮರಾಯನನ್ನು ಹತ್ತಿಕ್ಕುವ ವಿಷಯವಾಗಿ ಮುಸಲ್ಮಾನರು ವಿಚಾರ ಮಾಡಹತ್ತಿದರು. ಒಮ್ಮೆ ಒಬ್ಬರ ಕಡೆಗೆ, ಇನ್ನೊಮ್ಮೆ ಮತ್ತೊಬ್ಬರ ಕಡೆಗೆ ಆಗಿ ಇಬ್ಬರನ್ನೂ ಹಣ್ಣು ಮಾಡುವ ಇವನ ಹದವನ್ನರಿತು ತಾವೆಲ್ಲರೂ ಒಟ್ಟಾಗದಿದ್ದರೆ ತಮ್ಮ ಗತಿಯು ನೆಟ್ಟಗಾಗದೆಂದು ತಿಳಿದುಕೊಂಡರು ಮತ್ತು ತಮ್ಮ ತಮ್ಮೊಳಗಿನ ಹಗೆತನ ವನ್ನು ಮರೆತು ಒಟ್ಟುಗೂಡಿದ ಸೈನ್ಯದೊಂದಿಗೆ ರಾಮರಾಯನ ಮೇಲೆ ಸಾಗಿ ಬಂದರು. ರಾಮರಾಯನು ಸೈನ್ಯದೊಂದಿಗೆ **ರಾಕ್ಷಸತಂಗಡಿಯ** ಬೈಲಿನಲ್ಲಿ ತಳವೂರಿದನು ಕ್ರಿ. ಶ. ೧೫೬೫ರಲ್ಲಿ ಎರಡೂ ಸೈನ್ಯಗಳ ನಡುವೆ ಭಯಂಕರ ಯುದ್ಧವಾಯಿತು. ರಾಮರಾಯನ ಸೈನ್ಯದವರು ಪರಾಕ್ರಮದಿಂದ ಕಾದಿದರೂ ಕಡೆಗೆ ರಾಮರಾಯನು ಶತ್ರುಗಳ ಕೈಗೆ ಸಿಕ್ಕು ಹತನಾದನು. ಕೂಡಲೆ ಅವನ ಸೈನ್ಯವು ಚದರಿತು. ಮುಸಲ್ಮಾನರು ಜಯಶೀಲರಾದರು. ಇದೇ ಉಬ್ಬಿನಿಂದ ಅವರು ವಿಜಯನಗರವನ್ನು ಹೊಕ್ಕು ಅದನ್ನು ಸಂಪೂರ್ಣ ಹಾಳುಮಾಡಿ ಅಪಾರ ಸಂಪತ್ತನ್ನು ಹೇರಿಕೊಂಡು ಹೋದರು.

೧೨. ವಿಜಯನಗರದ ಸಾಮ್ರಾಜ್ಯದ ಕೊನೆ :— ಸುಮಾರು ೨೩೦ ವರ್ಷ ಒಳ್ಳೆಯ ವೈಭವದಿಂದ ಬಾಳಿ, ಹಿಂದುಧರ್ಮವನ್ನು ಸಂರಕ್ಷಿಸುವ ಮಹತ್ಕಾರ್ಯವನ್ನು ನೆರವೇರಿಸಿ, ಈ ವಿಜಯನಗರದ ಸಾಮ್ರಾಜ್ಯವು ರಾಕ್ಷಸತಂಗಡಿಯ ಯುದ್ಧದಿಂದ ಅಸ್ತವಾಯಿತು. ಈ ಸಾಮ್ರಾಜ್ಯದ ಮೂಲಕ ಹಿಂದುಧರ್ಮ ಹಾಗು ಹಿಂದು ಸಂಸ್ಕೃತಿ ಇವುಗಳ ರಕ್ಷಣೆಯಾಯಿತು; ಜನರಿಗೆ ಸುಖ-ಶಾಂತಿಗಳು ದೊರೆತವು; ವ್ಯಾಪಾರ, ಉದ್ಯೋಗ, ಕಲಾಕೌಶಲ್ಯಗಳು

ಸರಿಯಾಗಿ ನಡೆದವು; ದೇಶದ ಸಂಪತ್ತು ಹೆಚ್ಚಿತು; ಕನ್ನಡ, ತೆಲಗು ಮತ್ತು ಸಂಸ್ಕೃತ ಭಾಷೆಗಳಿಗೆ ಉತ್ತೇಜನವು ದೊರೆಯಿತು. ಇವೆಲ್ಲ ಕಾರಣಗಳಿಂದ ಇದು **ಎಂದಿಗೂ ಮರೆಯದ ಸಾಮ್ರಾಜ್ಯ**ವೆನಿಸಿತು.

೧೩. **ಈ ಸಾಮ್ರಾಜ್ಯದ ತರುವಾಯ ಉಂಟಾದ ರಾಜ್ಯಗಳು**:—

೧. **ಚಂದ್ರಗಿರಿಯ ರಾಜ್ಯ**:— ರಾಮರಾಯನ ತಮ್ಮ **ತಿರುಮಲನು** ಪೆನುಗೊಂಡೆಯಲ್ಲಿ ಆಳಹತ್ತಿದನು. ಈ ವಂಶದ ವೆಂಕಟಪತಿರಾಯನು **ಚಂದ್ರಗಿರಿ**ಯನ್ನು ರಾಜಧಾನಿಯನ್ನು ಮಾಡಿದನು. ಮಾಂಡಲಿಕರಾಗಿದ್ದ ಪಾಳ್ಯಗಾರರು ಸ್ವತಂತ್ರರಾದರು. ಈ ಪಾಳ್ಯಗಾರರಲ್ಲಿ ಕೆಳದಿಯ ನಾಯಕರೂ ಮೈಸೂರ ಒಡೆಯರೂ † ಕೊಡಗಿನ ಅರಸರೂ ಮುಖ್ಯರು

೨. **ಕೆಳದಿಯ ನಾಯಕರು**:— ಈ ವಂಶದ ಮೂಲಪುರುಷನಾದ ಸದಾಶಿವನಾಯಕನು ಮಾಂಡಲಿಕನಾಗಿದ್ದನು. ಕ್ರಿ. ಶ **೧೫೬೫**ರ ತರುವಾಯ **ವೆಂಕಟಪ್ಪನಾಯಕ**ನು ಸ್ವತಂತ್ರನಾಗಿ ಕೆಳದಿಯಿಂದ ಇಕ್ಕೇರಿಗೆ ಬಂದು ಆಳಹತ್ತಿದನು. ಕ್ರಿ ಶ. **೧೬೪೫**ರಲ್ಲಿ ಪಟ್ಟಕ್ಕೆ ಬಂದ **ಶಿವಪ್ಪನಾಯಕ**ನು ಮಲಿಯಾಳ, ಕೊಡಗು, ತುಳು ನಾಡುಗಳನ್ನು ತಕ್ಕೊಂಡನು. ಈ ಮನೆತನದವರು ಲಿಂಗವಂತರು. ಕಡೆಗೆ ಈ ರಾಜ್ಯವು ಮೈಸೂರಿನ ಅರಸರ ಕೈಸೇರಿತು.

---

† ಈ ರಾಜ್ಯಗಳ ವಿವರಣೆಯನ್ನು ಇಂಗ್ಲೀಷರ ಆಳಿಕೆಯ ಇತಿಹಾಸದಲ್ಲಿ ಕೊಟ್ಟಿದೆ.

ಅಫಗಾನರ ಕಾಲದಲ್ಲಿ ಆಗಿಹೋದ
ಪ್ರಸಿದ್ಧವಾದ ರಾಜವಂಶಗಳು

---

೧. ಮುಸಲ್ಮಾನರ ಮೊದಲನೆಯ (ಅಫಗಾನ) ಸಾಮ್ರಾಜ್ಯ :—

ಕ್ರಿ. ಶ. ೧೨೦೬ — ೧೫೨೬

ಗುಲಾಮಿ ಮನೆತನ — (ಕ್ರಿ. ಶ. ೧೨೦೬—೧೨೪೫)

೧	ಕುತುಬುದ್ದೀನ ಐಬಕ್	,,	೧೨೦೬—೧೨೧೦
೨	ಷಮಸುದ್ದೀನ ಇಲ್ತುಮಶ್	,,	೧೨೧೦— ೧೨೩೫
೩	ಸುಲ್ತಾನಾ ರಜಿಯಾ	,,	೧೨೩೬—೧೨೩೯
೪	ಬಹರಾಮ್, ಮಸ್‌ಊದ	,,	೧೨೩೯—೧೨೪೬
೫	ನಾಸೀರುದ್ದೀನ ಮಹಮೂದ	,,	೧೨೪೬—೧೨೬೬
೬	ಬಲ್ಬನ್	,,	೧೨೬೬—೧೨೮೬
೭	ಕೈಕುಬಾದ	,,	೧೨೮೬—೧೨೮೯

ಖಿಲಜೀ ಮನೆತನ — (ಕ್ರಿ. ಶ. ೧೨೯೦—೧೩೨೧)

೧	ಜಲಾಲುದ್ದೀನ	,,	೧೨೯೦—೧೨೯೬
೨	ಅಲ್ಲಾಉದ್ದೀನ	,,	೧೨೯೬—೧೩೧೫
೩	ಮುಬಾರಕ	,,	೧೩೧೬—೧೩೨೧

ತಘಲಖ ಮನೆತನ — (ಕ್ರಿ ಶ. ೧೩೨೧—೧೪೧೪)

೧	ಗಯಾಸುದ್ದೀನ	,,	೧೩೨೧—೧೩೨೬
೨	ಮಹಮ್ಮದಷಾಹ	,,	೧೩೨೬—೧೩೫೧
೩	ಫಿರೋಜಷಾಹ	,,	೧೩೫೧—೧೩೮೮
೪	ಮಹಮ್ಮದಷಾಹ	,,	೧೩೯೦—೧೩೯೨
೫	ಮಹಮೂದಷಾಹ	,,	೧೩೯೨—೧೪೧೩

ಸಯ್ಯದ ಮನೆತನ — (ಕ್ರಿ. ಶ. ೧೪೧೪—೧೪೫೦)

೧	ಖಿಜರಖಾನ	,,	೧೪೧೪—೧೪೨೧
೨	ಮುಬಾರಕ	,,	೧೪೨೧—೧೪೩೫

೩ ಮಹಮ್ಮದಷಾಹ ,, ೧೪೩೫—೧೪೪೫
೪ ಅಲ್ಲಾಉದ್ದೀನ ,, ೧೪೪೫—೧೪೫೦

ಲೋದೀ ಮನೆತನ— (ಕ್ರಿ. ಶ. ೧೪೫೦—೧೫೨೬)

೧ ಬಹಿಲೋಲಖಾನ ,, ೧೪೫೦—೧೪೮೮
೨ ಸಿಕಂದರ ,, ೧೪೮೮—೧೫೧೭
೩ ಇಬ್ರಾಹಿಮ ,, ೧೫೧೭—೧೫೨೬

೨. ಅಫಗಾನರ ಕಾಲದ ಉತ್ತರದ ಬೇರೆ ರಾಜ್ಯಗಳು:—

೧ ಬಂಗಾಲ ಕ್ರಿ. ಶ. ೧೩೪೦—೧೫೭೬
೨ ಜೋನಪುರ ಕ್ರಿ. ಶ. ೧೩೯೪—೧೪೭೭
೩ ಕಾಶ್ಮೀರ ,, ೧೩೨೬—೧೫೮೬
೪ ಮಾಳವ ,, ೧೪೦೧—೧೫೩೧
೫ ಗುಜರಾಥ ,, ೧೩೯೧—೧೫೭೨
೬ ಚಿತ್ತೂರ ,, ೧೩೧೩—೧೫೪೧

೩. ಅಫಗಾನ ಕಾಲದ ದಕ್ಷಿಣಹಿಂದುಸ್ಥಾನದ ಬೇರೆ ರಾಜ್ಯಗಳು.

೧ ಖಾನದೇಶ ಕ್ರಿ. ಶ. ೧೩೭೧—೧೫೯೯
೨ **ಬಹಮನೀ ರಾಜ್ಯ** ,, ೧೩೪೭—೧೫೨೬
೩ ಇಮಾದಷಾಹಿ ,, ೧೪೮೪—೧೫೭೩
೪ ನಿಜಾಮಷಾಹಿ ,, ೧೪೯೦—೧೬೩೬
೫ ಕುತುಬಷಾಹಿ ,, ೧೫೧೨—೧೬೮೭
೬ ಬರೀದಷಾಹಿ ,, ೧೫೧೨—೧೬೫೬
೭ ಆದಿಲ್‌ಷಾಹಿ ,, ೧೪೮೯—೧೬೮೬
೮ **ವಿಜಯನಗರದ ಸಾಮ್ರಾಜ್ಯ** ,, ೧೩೩೬—೧೫೬೫
ಅ. ಸಂಗಮ ವಂಶ ,, ೧೩೩೬—೧೪೮೫
ಆ. ಸಾಳುವ ವಂಶ ,, ೧೪೮೫—೧೪೯೬
ಇ. ತುಳುವಂಶ ,, ೧೪೯೬—೧೫೬೫

ಮಹತ್ವದ ಸಂಗತಿಗಳ ಕಾಲವು

೧	ಮಹಮ್ಮದ ಪೈಗಂಬರರ ಜನನ	ಕ್ರಿ. ಶ. ೫೭೦
೨	ಹಿಜರಿಶಕದ ಆರಂಭ	,, ೬೨೨
೩	ಮಹಮ್ಮದ ಪೈಗಂಬರರ ಮರಣ	,, ೬೩೩
೪	ಮಹಮ್ಮದ ಬಿನ್ ಕಾಸೀಮನು ಸಿಂಧಪ್ರಾಂತಕ್ಕೆ ಬಂದದ್ದು	,, ೭೧೨
೫	ಮಹಮೂದನ ಗನೆಯ ದೌಡು	,, ೧೦೦೧
೬	,, ಗಜನೆಯ ಸೋಮನಾಥದ ಮೇಲಿನ ದೌಡು	,, ೧೦೨೪
೭	ಮಹಮ್ಮದ ಘೋರಿಯು ಸೋತದ್ದು	,, ೧೧೯೧
೮	ಪೃಥ್ವೀರಾಜನು ಸೋತು ಹತನಾದದ್ದು	,, ೧೧೯೨
೯	ಬಖ್ತ್ಯಾರನು ಬಂಗಾಲವನ್ನು ತೆಗೆದುಕೊಂಡದ್ದು	,, ೧೨೦೫
೧೦	ಹಿಂದುಸ್ಥಾನದಲ್ಲಿ ಮುಸಲ್ಮಾನರ ರಾಜ್ಯಸ್ಥಾಪನೆ	,, ೧೨೦೬
೧೧	ಅಲ್ಲಾಉದ್ದೀನನು ಮೋಂಗಲರನ್ನು ಹಿಂದಕಟ್ಟಿದ್ದು	,, ೧೨೯೨
೧೨	ಅಲ್ಲಾಉದ್ದೀನನು ಚಿತ್ತೂರನ್ನು ತಕ್ಕೊಂಡದ್ದು	,, ೧೩೦೩
೧೩	ದೇವಗಿರಿಯು ಅಲ್ಲಾಉದ್ದೀನನ ಕೈಸೇರಿತು	,, ೧೩೧೦
೧೪	ದ್ವಾರಸಮುದ್ರವು ಅಲ್ಲಾಉದ್ದೀನನ ಕೈಸೇರಿತು	,, ೧೩೧೧
೧೫	ಹವಿೂರನಿಂದ ಚಿತ್ತೂರಿಗೆ ಸ್ವಾತಂತ್ರ್ಯವು ದೊರೆತದ್ದು	,, ೧೩೧೩
೧೬	ವಿಜಯನಗರ ಸಾಮ್ರಾಜ್ಯದ ಸ್ಥಾಪನೆ	,, ೧೩೩೬
೧೭	ಬಹಮನೀ ರಾಜ್ಯದ ಸ್ಥಾಪನೆ	,, ೧೩೪೭
೧೮	ತೈಮೂರನ ದಾಳಿ	,, ೧೩೯೮
೧೯	ಉತ್ತರ ಹಿಂದುಸ್ಥಾನದಲ್ಲಿ ಭೂಕಂಪವಾದದ್ದು	,, ೧೫೦೫
೨೦	ಪಾನಿಪತದ ಗನೆಯ ಯುದ್ಧ	,, ೧೫೨೬
೨೧	ರಾಕ್ಷಸತಂಗಡಿಯ ಯುದ್ಧ	,, ೧೫೬೫

ಅಫಗಾನರ ಕಾಲದ ಇತಿಹಾಸದ ಅವರ್ತನೆಯ ಹಾಗು

ಪರೀಕ್ಷೆಯ ಪ್ರಶ್ನೆಗಳು.

೧. ಮುಸಲ್ಮಾನೀ ಧರ್ಮದ ಸ್ಥಾಪನೆಗಿಂತ ಮೊದಲು ಅರಬಸ್ಥಾನದ ಸ್ಥಿತಿಯು ಹೇಗೆ ಇತ್ತು ?

೨. ಮಹಮ್ಮದ ಪೈಗಂಬರರ ಚರಿತ್ರವನ್ನು ಸಂಕ್ಷಿಪ್ತವಾಗಿ ಬರೆಯಿರಿ.

೩. ಮುಸಲ್ಮಾನೀ ಧರ್ಮದ ತತ್ವಗಳು ಯಾವವು ? ಸಿಯಾ ಮತ್ತು ಸುನ್ನೀ ಪಂಥಗಳಲ್ಲಿ ಭೇದವೇನು ?

೪. ಪೈಗಂಬರರ ಇಚ್ಛೆಯಂತೆ ನಡೆದುಕೊಂಡ ಖಲೀಫರು ಯಾರು ? ಅವರ ಕಾಲದಲ್ಲಿ ಮುಸಲ್ಮಾನೀ ಧರ್ಮವು ಎಲ್ಲೆಲ್ಲಿ ಹಬ್ಬಿತ್ತು ?

೫. ಅರಬರು, ತುರ್ಕರು, ಮೋಂಗಲರು ಇವರ ಸ್ವಭಾವಗಳನ್ನು ವರ್ಣಿಸಿರಿ

೬. ಮಹಮ್ಮದ ಬಿನ್ ಕಾಸೀಮ, ಮಹಮ್ಮದ ಘೋರಿ, ಸಬಕ್ತಗೀನ ಮತ್ತು ಪೃಥ್ವೀರಾಜ ಇವರಲ್ಲಿ ಬೇಕಾದ ಇಬ್ಬರ ಚರಿತ್ರೆಗಳನ್ನು ಬರೆಯಿರಿ.

೭. ಹಿಂದುಗಳ ಅಪಜಯದ ಕಾರಣಗಳು ಯಾವವು ?

೮. ನಾಸಿರುದ್ದೀನ, ಮಹಮ್ಮದ ತಘಲಕ, ಇಬ್ರಾಹಿಮ ಲೋದಿ ಇವರ ಆಳಿಕೆಯನ್ನು ಸಂಕ್ಷಿಪ್ತವಾಗಿ ಬರೆಯಿರಿ.

೯. ಪಾನಿಪತದ ೧ನೆಯ ಯುದ್ಧದಲ್ಲಿ ಮೊಗಲರಿಗೆ ಗೆಲವು ಉಂಟಾದ ಕಾರಣವೇನು ?

೧೦. ಬಹಮನಿಯ ರಾಜ್ಯವನ್ನು ಯಾರು, ಎಂದು ಸ್ಥಾಪಿಸಿದರು ? ಮತ್ತು ಈ ರಾಜ್ಯವು ಮುರಿಯಲು ಕಾರಣವೇನು ?

೧೧. ಮಹಮ್ಮದ ಗವಾನ, ಮಲಿಕಂಬರ, ಅಸದಖಾನ, ಅಫಜುಲ್ ಖಾನ ಇವರ ಸಂಬಂಧದ ಟಿಪ್ಪಣಿಗಳನ್ನು ಬರೆಯಿರಿ.

೧೨. (ಅ) ವಿಜಯನಗರದ ಸಾಮ್ರಾಜ್ಯದ ಸ್ಥಾಪನೆಯ ಹಾಗು ಆಳಿಗಾಲದ ಕಾರಣಗಳಾವವು ?

(ಆ) ಅಬ್ದುಲ್ ರಜಾಕನು ವಿಜಯನಗರದ ವೈಭವವನ್ನು ಹೇಗೆ ವರ್ಣಿಸಿರುವನು.

ಮೊಗಲರ ಸಾಮ್ರಾಜ್ಯ

೧೦ನೆಯ ಪಾಠ

ಬಾಬರ ಕ್ರಿ. ಶ. (೧೫೨೬–೧೫೩೦)

೧. ಹದಿನಾರನೆಯ ಶತಕದ ಆರಂಭದ ಸ್ಥಿತಿ :— ಕ್ರಿ.ಶ. ೧೫೨೬ರಲ್ಲಿ **ಬಾಬರ**ನು ಇಬ್ರಾಹಿಮನನ್ನು ತಳ್ಳಿ, ದಿಲ್ಲಿಯ ರಾಜ್ಯಕ್ಕೆ ಒಡೆಯನಾದ ಸಂಗತಿಯು ಹಿಂದೆ ಇದೇ ಭಾಗದ ೫ನೆಯ ಪಾಠದಲ್ಲಿ ಹೇಳಿದೆ. ಬಾಬರನ ವಿಜಯದಿಂದ ಮುಸಲ್ಮಾನರ ಮೊದಲನೆಯ **(ಪಠಾಣ)** ಸಾಮ್ರಾಜ್ಯವು ಮುಳುಗಿ, ಆವರ ಎರಡನೆಯ **(ಮೊಗಲ)** ಸಾಮ್ರಾಜ್ಯವು ಆರಂಭವಾಯಿತು. ಹಿಂದು ಸ್ಥಾನದಲ್ಲಿ ಈ ಮಹತ್ವದ ಹೆಚ್ಚುಕಡಿಮೆಯಾದ ಕಾಲಕ್ಕೆ ಜಗತ್ತಿನ ಉಳಿದ ಭಾಗಗಳಲ್ಲಿಯೂ ಅನೇಕ ಸ್ಥಿತ್ಯಂತರಗಳಾದವು. ಆದದರಿಂದ ಹದಿನಾರನೆಯ ಶತಕದ ಆರಂಭವು ಜಗತ್ತಿನ ಮಹತ್ವದ ಕ್ರಾಂತಿಕಾಲವೆಂದು ತಿಳಿಯಲ್ಪಟ್ಟಿದೆ. ಇದೇ ಕಾಲದಲ್ಲಿ ಭೂಮಿಯು ಗೋಲರೂಪವಾಗಿದೆಯೆಂಬ ಶೋಧವಾಯಿತು; ಯುರೋಪದವರಿಗೆ **ಅಮೇರಿಕಾ** ಖಂಡವೆಂಬ ಹೊಸ ಪ್ರದೇಶವು ಗೊತ್ತಾಯಿತು. ಆ ಜನರು ರಾಷ್ಟ್ರಾಭಿಮಾನ, ಉದ್ಯೋಗ, ಸಾಹಸ ಮುಂತಾದ ಗುಣಗಳಿಂದ ಹೆಚ್ಚಳವನ್ನು ಹೊಂದಹತ್ತಿದರು. ಅಲ್ಲಿಯ ನಾವಿಕರು ಭೂಪ್ರದಕ್ಷಿಣೆಯನ್ನು ಮಾಡಿದರು. **ಪೋರ್ತುಗೀಜರು** ಹಿಂದುಸ್ಥಾನಕ್ಕೆ ಬರುವ ಜಲಮಾರ್ಗವನ್ನು ಶೋಧಿಸಿ ಇಲ್ಲಿ ಬಂದು ವ್ಯಾಪಾರವನ್ನು ಮಾಡಹತ್ತಿದರು.

೨. ಬಾಬರನ ಪೂರ್ವ ಚರಿತ್ರೆ :— **ಜಹಿರುದ್ದೀನ ಮಹಮೂದ** ಎಂಬುದು ಇವನ ಮೂಲ ಹೆಸರು. ಇವನು ಪರಾಕ್ರಮಿಯಾದದರಿಂದ '**ಬಾಬರ**' ಎಂದರೆ ಸಿಂಹ ಎಂಬ ಹೆಸರನ್ನು ಪಡೆದನು. ಇವನ ತಾಯಿಯು ತೈಮೂರನ ವಂಶದವಳು; ಮತ್ತು ತಂದೆಯು ತುರ್ಕೀ ಮನೆತನದವನು. ತೈಮೂರನ ತರುವಾಯ ಅವನ ವಿಸ್ತಾರವಾದ ರಾಜ್ಯವು ಅವನ ಸಂಬಂಧಿಕರಲ್ಲಿ ಹಂಚಿಹೋಯಿತು. ಆದರಲ್ಲಿಯ **ಪರಘಾನ** ಪ್ರಾಂತವು ಪರಂಪರೆಯಿಂದ

ಬಾಬರನ ತಂದೆಯಾದ **ಉಮರಶೇಖ ಮಿರ್ಜಾನ** ಪಾಲಿಗೆ ಬಂದಿತು. ಬಾಬರನು ೧೨ ವರ್ಷದವನಿರುವಾಗ ಉಮರಶೇಖನು ಸತ್ತದರಿಂದ ರಾಜ್ಯ ಭಾರವನ್ನು ಇವನೇ ಸಾಗಿಸಬೇಕಾಯಿತು. ಬಾಬರನು ಅಷ್ಟು ಚಿಕ್ಕ ವಯಸ್ಸಿನಲ್ಲಿಯೇ ರಾಜ್ಯವಾಳಿದನು. ಅಲ್ಲದೆ, **ಸಮರ್ಕಂದ**ವನ್ನು ವಶಪಡಿಸಿಕೊಂಡು ತೈಮೂರನಂತೆ ಪರಾಕ್ರಮಿಯೆನಿಸಿಕೊಳ್ಳಬೇಕೆಂಬ ಮಹತ್ವಾಕಾಂಕ್ಷೆಯಿಂದ ಎರಡು ಸಾರೆ ಅದರ ಮೇಲೆ ಸಾಗಿಹೋದನು. ಆದರೆ ಸಮರ್ಕಂದವು ಕೈಸೇರುವದೊತ್ತಟ್ಟಿಗುಳಿದು, ಪರಘಾನವೇ ಕೈಬಿಟ್ಟಿತು. ಆಗ ನಿರುಪಾಯನಾಗಿ ಕಾಬೂಲದ ಕಡೆಗೆ ಹೊರಳಿದನು ಸುಮಾರು ದಿಂದ ಕಾಬೂಲವು ಇವನ ವಶನಾಯಿತು. ಬಳಿಕ ಸಮರ್ಕಂದವನ್ನು ಗೆಲ್ಲುವ ಪ್ರಯತ್ನವನ್ನು ಮತ್ತೊಮ್ಮೆ ಮಾಡಿ ಹತಾಶನಾದನು ಬಳಿಕ ಅತ್ತ ತನ್ನ ಆಟವು ನಾಗದೆಂದು ತಿಳಿದು ಹಿಂದುಸ್ಥಾನದ ಮೇಲೆ ಸಾಗಿಬರುವ ನಿಶ್ಚಯ ಮಾಡಿದನು.



ಬಾಬರ


೩. **ಸಿಕ್ರಿಯ ಕಾಳಗ**:— ಕ್ರಿ. ಶ. **೧೫೨೭.** ಮೇವಾಡದ **ಸಂಗ**ರಾಣನು ರಜಪುತ ಅರಸರಲ್ಲೆಲ್ಲ ಬಲಿಷ್ಠನಾಗಿದ್ದನು. ಬಾಬರನು ಮರಳಿ ಹೋಗದೆ ಈ ದೇಶದಲ್ಲಿಯೆ ಸ್ಥಿರವಾಗಿ ಉಳಿದದ್ದನ್ನು ನೋಡಿ ಅವನನ್ನು ಹೊರಗೆ ಹಾಕುವ ಉದ್ದೇಶದಿಂದ ಈತನು ಅವನೊಡನೆ ಯುದ್ಧಕ್ಕೆ ಸಿದ್ಧನಾದನು. ಎಲ್ಲ ರಜಪುತರು ಸಂಗರಾಣನ ನೆರವಿಗೆ ಬಂದರು. ರಜಪುತ ಸೈನ್ಯವೂ ಮೊಗಲ ಸೈನ್ಯವೂ ಆಗ್ರಾದ ನೆರೆಯ **ಸಿಕ್ರಿ** ಎಂಬಲ್ಲಿ ಇದಿರಾದವು. ರಜಪುತರು ಅತಿ ಪರಾಕ್ರಮದಿಂದ ಕಾದಿದರು. ಆದರೆ ಬಾಬರನ ತೋಪುಗಳ ಮುಂದೆ ರಜಪುತರ ಆಟವು ನಡೆಯಲಿಲ್ಲ. ಸಂಗರಾಣನು ಗಾಯಹೊಂದಿ ರಾಜಧಾನಿಗೆ ಹೋಗುವ ಮನಸ್ಸಿಲ್ಲದೆ ಮೇವಾಡದ ಗುಡ್ಡವನ್ನು ಸೇರಿಕೊಂಡಿದ್ದು ಮುಂದೆ ಅಲ್ಲಿಯೇ ಮರಣಹೊಂದಿದನು. ಕ್ರಿ. ಶ. **೧೫೩೦.** ಸಿಕ್ರಿಯ ವಿಜಯದಿಂದ

ರಜಪುತರ ಹೆದರಿಕೆ ತಪ್ಪಿ, ಬಾಬರನ ರಾಜ್ಯವಿಸ್ತಾರದ ಕೆಲಸವು ಹಗುರಾಯಿತು. ಬಾಬರನು ಈ ವಿಜಯದ ನೆನಪಿಗೆಂದು ಸಿಕ್ರಿಗೆ **ಫತಹ್‌ಪುರ**ವೆಂಬ ಹೆಸರನ್ನು ಇಟ್ಟನು.

೪. **ಗೋಗ್ರಾದ ಯುದ್ಧ**:— ಕ್ರಿ ಶ ೧೫೨೯. ಇಬ್ರಾಹಿಮ ಲೋದಿಯ ತಮ್ಮನಾದ **ಮಹಮ್ಮದ**ನು ಜೋನಪುರ ಪ್ರಾಂತವನ್ನು ವಶಮಾಡಿಕೊಂಡು ಬಂಗಾಲದ ಅಫಗಾನರ ಸಹಾಯವನ್ನು ಹೊಂದಿ ಬಾಬರನೊಡನೆ ಕಾದಲನುವಾದನು. ಬಾಬರನು ತಡಮಾಡದೆ ಅವರ ಮೇಲೆ ಸಾಗಿಹೋಗಿ ಗಂಗಾ-ಗೋಗ್ರಾ ನದಿಗಳ ಸಂಗಮದ ಹತ್ತಿರ ಒಟ್ಟುಗೂಡಿದ ಅಫಗಾನರ ಸೈನ್ಯವನ್ನು ಪೂರ್ಣವಾಗಿ ಸೋಲಿಸಿದನು ಅಫಗಾನರ ಭಯವೂ ಬಾಬರನಿಗೆ ಇಲ್ಲದಾಯಿತು.

೫. **ರಾಜ್ಯವಿಸ್ತಾರ**:— ಸಿಕ್ರಿ-ಗೋಗ್ರಾ ಈ ಯುದ್ಧಗಳಾದ ಬಳಿಕ ಬಾಬರನು ಬಂಗಾಲದ **ಹಜರತ್ ಖಾನ**ನೊಡನೆ ಒಪ್ಪಂದ ಮಾಡಿಕೊಂಡನು. ಮಾಳವದ ಅರಸನಾದ **ಮೇದಿನೀರಾಯ**ನನ್ನು ಸೋಲಿಸಿ ಚಂದೇರಿಯ ಕೋಟೆಯನ್ನು ವಶಮಾಡಿಕೊಂಡನು. ಉತ್ತರ ಹಿಂದುಸ್ಥಾನದ ಬಹುತರ ಎಲ್ಲ ಭಾಗವು ಬಾಬರನ ವಶವಾಯಿತು. ಗ್ವಾಲ್ಹೇರದ **ವಿಕ್ರಮಾದಿತ್ಯ**ನೆಂಬ ರಾಜನು ಇಬ್ರಾಹಿಮ ಲೋದಿಯ ಸಹಾಯಕ್ಕೆ ಹೋಗಿ ಯುದ್ಧದಲ್ಲಿ ಹತನಾದ ಬಳಿಕ ಅವನ ಮನೆತನದವರು ಆಗ್ರಾ ಪಟ್ಟಣದಲ್ಲಿ ಇರಹತ್ತಿದರು ಹುಮಾಯೂನನು ಅವರೊಡನೆ ಉದಾರತನದಿಂದ ನಡೆದನು. ಆಗ ವಿಕ್ರಮಾದಿತ್ಯನ ಮಕ್ಕಳು ಸಂತೋಷದಿಂದ ತಮ್ಮಲ್ಲಿದ್ದ **ಕೋಹೆನೂರ** ಎಂಬ ಅಮೌಲ್ಯವಾದ ರತ್ನವನ್ನು ಹುಮಾಯೂನನಿಗೆ ಕಾಣಿಕೆ ಕೊಟ್ಟರು. ಬಳಿಕ ಹುಮಾಯೂನನು ಕಾಬೂಲದಲ್ಲಿದ್ದ ಬಂಡಾಯವನ್ನು ಮುರಿಯುವದಕ್ಕಾಗಿ ಅತ್ತ ಹೋದನು.

೬. **ಬಾಬರನ ಮರಣ**:— ಒಂದೇಸವನೆ ಆದ ಶ್ರಮದಿಂದ ಬಾಬರನು ದಿನದಿನಕ್ಕೆ ಅಶಕ್ತನಾಗಹತ್ತಿದನು ಅವನ ಈ ಸ್ಥಿತಿಯನ್ನು ಕೇಳಿ ಹುಮಾಯೂನನು ಕಾಬೂಲವನ್ನು ಬಿಟ್ಟು ದಿಲ್ಲಿಗೆ ಬಂದನು. ಹೀಗೆ ಅತ್ತಕಡೆಗೆ ದುರ್ಲಕ್ಷವಾಡಿ ಬಂದದ್ದು ಬಾಬರನಿಗೆ ಸರಿಬರಲಿಲ್ಲ ಅಷ್ಟರಲ್ಲಿ ಹುಮಾಯೂನನೂ ಬೇನೆಬಿದ್ದನು. ಅವನ ಬೇನೆಯು ದಿನದಿನಕ್ಕೆ ಹೆಚ್ಚಾಯಿತು. ಆಗ



ಹುಮಾಯೂನನು ಬೇನೆಬಿದ್ದಾಗ ಬಾಬರನ ಪ್ರಾರ್ಥನೆ.

ಬಾಬರನು ಅತ್ಯಂತ ಭಕ್ತಿಯಿಂದ ದೇವರನ್ನು ಪ್ರಾರ್ಥಿಸಿ, ದೇವರೇ, 'ಹುಮಾಯೂನನ ಸಾವನ್ನು ನನಗೆ ಕೊಟ್ಟು ಆತನನ್ನು ಉಳುಹು' ಎಂದು ಬೇಡಿಕೊಂಡನು. ಮುಂದೆ ಕ್ರಮದಿಂದ ಹುಮಾಯೂನನಿಗೆ ಗುಣವಾಯಿತು. ಮತ್ತು ಮೊದಲೇ ಅಶಕ್ತನಾಗಿದ್ದ ಬಾಬರನು ಬೇನೆಬಿದ್ದು ಮರಣಹೊಂದಿದನು. ಕ್ರಿ. ಶ. ೧೫೩೦.

೭. **ಬಾಬರನ ಯೋಗ್ಯತೆ :**— ಬಾಬರನ ಚರಿತ್ರವು ಮನೋಹರವಾಗಿದೆ. ಸಮರ್ಕಂದದ ಅರಸನಾಗಬೇಕೆಂಬ ಮಹತ್ವಾಕಾಂಕ್ಷೆಯು ಅವನನ್ನು ವನವಾಸಕ್ಕೆ ಗುರಿಮಾಡಿತು. ಕಡೆಗೆ ಅದೇ ಗುಣದ ಮೂಲಕ ಅವನು ದಿಲ್ಲಿಯ ಒಡೆಯನಾದನು. **ಮನಸ್ಸಿನ ಘಟ್ಟಿತನ** ಮತ್ತು **ಸಾಹಸ** ಈ ಗುಣಗಳು ಬಾಬರನ ಉತ್ಕರ್ಷದ ಕಾರಣಗಳು. ಇವನ ಶರೀರ ಸಾಮರ್ಥ್ಯವು ಹೆಚ್ಚಿನದಿತ್ತು. ಸಮರ್ಕಂದದಿಂದ ದಿಲ್ಲಿಯ ವರೆಗಿನ ಹೊಳೆಗಳನ್ನೆಲ್ಲ ಅವನು ಈಸಿಯೇ ದಾಟಿದನು. ಇವನು ದೇವರಲ್ಲಿ ನಿಷ್ಠೆಯುಳ್ಳವನಾಗಿದ್ದನು ಸಂಕಟ ಸಮಯದಲ್ಲಿ ಅಂತಃಕರಣಪೂರ್ವಕವಾಗಿ ಆತನನ್ನು ಮರೆಹೋಗುವನು. ಸೈನಿಕರು ಇವನನ್ನು ಹೆಚ್ಚಾಗಿ ಪ್ರೀತಿಸುತ್ತಿದ್ದರು. ಹಿಂದುಸ್ಥಾನದಲ್ಲಿ ಇರಲೊಲ್ಲದೆ ಸ್ವದೇಶಕ್ಕೆ ಹೋಗುವ ಹಟಹಿಡಿದ ತನ್ನ ಸೈನಿಕರನ್ನು ಸವಿನುಡಿಗಳಿಂದ ಸಮಾಧಾನಬಡಿಸಿದನು. ವಿದ್ಯೆ, ಕಲೆ, ಸಭ್ಯತನ, ಒಳ್ಳೆಯ ನಡೆವಳಿ ಇವುಗಳ ಮೇಲೆ ಇವನ ಪ್ರೀತಿ ಬಹಳ. ಇವನು ವಿದ್ವಾಂಸನೂ ಕವಿಯೂ ಆಗಿದ್ದನು. ಫಾರ್ಸಿ ಭಾಷೆಯಲ್ಲಿ ಕವಿತೆಗಳನ್ನು ರಚಿಸುತ್ತಿದ್ದನು. ಚಿಕ್ಕಂದಿನಿಂದ ಯುದ್ಧಕಲೆಯಲ್ಲಿ ನುರಿತದರಿಂದ ಹೆಸರಾದ ಸೇನಾಪತಿಯೆನಿಸಿದನು.

೮. **ಬಾಬರನ ಚರಿತ್ರೆ:**— ಇವನು ಬರೆದ ಆತ್ಮಚರಿತ್ರವು ಹೆಸರಾದ ಗ್ರಂಥವೆನಿಸಿದೆ. ಇವನ ಸಾಮ್ರಾಜ್ಯವು ಮುಳುಗಿ ಹೋಗಿದ್ದರೂ ಈ ಆತ್ಮಚರಿತ್ರವು ಇವನ ಕೀರ್ತಿಯನ್ನು ಸ್ಥಿರಗೊಳಿಸಿರುವದು. ಹೀಗೆ ಮನೋಹರವಾಗಿರುವ ಆತ್ಮಚರಿತ್ರವನ್ನು ಇನ್ನಾವ ಬಾದಶಹನೂ ಬರೆದಿಲ್ಲ! ಚಿಕ್ಕಂದಿನಿಂದ ತನಗೊದಗಿದ ಅನೇಕ ಸುಖದುಃಖಗಳ ಪ್ರಸಂಗಗಳನ್ನು ಬಹು ಸರಸವಾಗಿ ವರ್ಣಿಸಿರುವನು. ಮನುಷ್ಯ ಸ್ವಭಾವವನ್ನೂ ಪ್ರಸಂಗಾನುಸಾರವಾಗಿ ಉಂಟಾಗುವ ಮನಸ್ಸಿನ ವಿಚಿತ್ರ ಸ್ಥಿತಿಯನ್ನೂ ರೂಪಿಸುವಲ್ಲಿ ಇವನು ಹೆಚ್ಚಿನ ಜಾಣ್ಮೆಯನ್ನು ತೋರಿಸಿರುವನು.

೧೧ನೆಯ ಪಾಠ

ಹುಮಾಯೂನ.

(ಕ್ರಿ. ಶ. ೧೫೩೦—೪೦ ಮತ್ತು ೧೫೫೫—೫೬)

ಆಳಿಕೆಯ ಪೂರ್ವಾರ್ಧ. (ಕ್ರಿ ಶ. ೧೫೩೦—೧೫೪೦)

೧. **ಹುಮಾಯೂನನು ಪಟ್ಟಕ್ಕೆ ಬಂದಾಗಿನ ಸ್ಥಿತಿ**:— ಬಾಬರನ ತರುವಾಯ ಅವನ ಹಿರಿಯ ಮಗ ಹುಮಾಯೂನನು ಪಟ್ಟಕ್ಕೆ ಕುಳಿತನು. ಬಾಬರನು ನಾಲ್ಕೇ ವರ್ಷ ಆಳಿ ಮರಣಹೊಂದಿದ್ದರಿಂದ ಹೊಸ ರಾಜ್ಯವನ್ನು ಸ್ಥಿರಗೊಳಿಸುವ ಭಾರವು ಇವನ ಮೇಲೆಯೇ ಬಿದ್ದಿತು. ತಮ್ಮಂದಿರಾದ **ಕಾಮರಾನ, ಹಿಂಡಾಲ** ಮತ್ತು **ಅಸ್ಕರಿ** ಇವರು ಇವನ ದ್ವೇಷಿಗಳಾಗಿದ್ದರು. ಕಾಮರಾನನಂತು ಕಂದಹಾರ, ಪಂಜಾಬ ಪ್ರಾಂತಗಳನ್ನು ಹಟದಿಂದ ಇಸಕೊಂಡು ಸ್ವತಂತ್ರನಾಗಿ ಆಳಹತ್ತಿದನು. ಹಿಂಡಾಲ, ಅಸ್ಕರಿ ಇವರು ಸಮರ್ಥರಲ್ಲದಿದ್ದರೂ ಬಂಡಾಯಗಾರರಿಗೆ ಅನುಕೂಲರಾಗಿದ್ದರು. ಕಾಬೂಲ, ಕಂದಾಹಾರಗಳು ಕೈಬಿಟ್ಟ್ಟರಿಂದ ಅತ್ತಕಡೆಯ ಶೂರರು ಹುಮಾಯೂನನ ಸೈನ್ಯದಲ್ಲಿ ಸೇರುವದು ಕಟ್ಟಾಯಿತು ಮನೆಯಲ್ಲಿಯೇ ಶತ್ರುಗಳು ಹುಟ್ಟ್ಟವ್ವರಿಂದ ಹೊರಗಿನ ಶತ್ರುಗಳು ಬಲಗೊಳ್ಳಲು ಅವಕಾಶವುಂಟಾಯಿತು. ಅಫಗಾನರ ರಾಜಸತ್ತೆಯನ್ನು ಮರಳಿ ಸ್ಥಾಪಿಸುವ ವಿಚಾರದಿಂದ, **ಷೇರಖಾನ**ನೆಂಬ ಅಫಗಾನ ಸರದಾರನು ಪೂರ್ವ ಭಾಗದಲ್ಲಿ ಪ್ರಬಲನಾದನು. ದಕ್ಷಿಣದಲ್ಲಿ ಗುಜರಾಥದ ಸುಲ್ತಾನನಾದ **ಬಹದ್ದೂರಷಾಹ**ನು ಹೊತ್ತು ಸಾಧಿಸಿ ಮಾಳವವನ್ನು ವಶಮಾಡಿಕೊಂಡನು. ಅವನಿಗೂ ದಿಲ್ಲಿಯ ರಾಜ್ಯನ್ನಾಳುವ ಆಶೆಯಿತ್ತು.

೨. **ಶತ್ರುಗಳನ್ನು ಮುರಿಯುವದಕ್ಕಾಗಿ ಹುಮಾಯೂನನು ಮಾಡಿದ ಪ್ರಯತ್ನ**:— ಷೇರಖಾನನು ಜೋನಪುರ – ಬಿಹಾರಗಳ ನಡುವೆ ಇರುವ **ಚುನಾರ** ಕೋಟೆಯನ್ನು ವಶಮಾಡಿಕೊಂಡು ಮುಂದೆ ಬರಹತ್ತಿದನು. ಅದನ್ನು ತಿಳಿದು ಹುಮಾಯೂನನು ಅತ್ತಕಡೆಗೆ ಸಾಗಿ ಅವನನ್ನು ಸೋಲಿಸಿದನು. ಮತ್ತು ಷೇರಖಾನನು ಶರಣು ಬಂದದರಿಂದ ಹುಮಾಯೂನನು ಅವನನ್ನು

ಕ್ಷಣಿಸಿ ಚುನಾರ ಕೋಟೆಯನ್ನು ಅವನ ಕಡೆಗೇ ಇಟ್ಟು ಹಿಂದಿರುಗಿ ದಿಲ್ಲಿಗೆ ಬಂದನು. ಬಳಿಕ ಹುಮಾಯೂನನು ಬಹದ್ದೂರಷಾಹನ ಮೇಲೆ ದಂಡೆತ್ತಿ ಹೋಗತಕ್ಕವನಿದ್ದನು. ಆದರೆ ಬಹದ್ದೂರಷಾಹನು ಆಗ ರಜಪೂತರ ಚಿತ್ತೂರ ವನ್ನು ಮುತ್ತಿದ್ದರಿಂದ 'ಈಗಲೆ ಬಹದ್ದೂರಷಾಹನ ಮೇಲೆ ಸಾಗಿದರೆ ಒಂದು ರೀತಿಯಿಂದ ರಜಪುತರಿಗೆ ಸಡಿಲು ಸಿಕ್ಕು ಅವರು ಬಲಗೊಳ್ಳಬಹುದು' ಎಂದು ತಿಳಿದು ಸುಮ್ಮನಿದ್ದನು. ಬಹದ್ದೂರಷಾಹನು ಮಾತ್ರ ಚಿತ್ತೂರು ವಶವಾದ ಕೂಡಲೆ ಹುಮಾಯೂನನಿಗೆ ಇದಿರಾಗಿ ನಿಂತನು. ಹುಮಾಯೂನನು **ಮಂದೇಶ್ವರ**ದ ಬಳಿಯಲ್ಲಿ ಅವನನ್ನು ಸೋಲಿಸಲು, ಅವನು ಮೊದಲು **ಮಾಂಡವಗಡ**ವನ್ನೂ ಬಳಿಕ **ಚಂಪಾನೇರ** ಕೋಟೆಯನ್ನೂ ಆಶ್ರಯಿಸಿದನು. ಹುಮಾಯೂನನು ಅವೆರಡೂ ಕೋಟೆಗಳನ್ನು ಗೆದ್ದು ಅಸ್ಕರಿಯನ್ನು ಗುಜರಾಥದ ಸುಭೇದಾರನನ್ನು ಮಾಡಿದನು. ಬಹದ್ದೂರಷಾಹನು ಗತಿಗಾಣದೆ ಖಂಬಾಯತ ಅಖಾತದ ಮಾರ್ಗವಾಗಿ **ದೀವ** ನಡುಗಡ್ಡೆಗೆ ಹೋಗಿ ಪೋರ್ತುಗೀಜರನ್ನು ಆಶ್ರಯಿಸಿದನು. ಇಷ್ಟರಲ್ಲಿ ಷೇರಖಾನನು ಬಹಾರವನ್ನು ಆಕ್ರಮಿಸಿ ಚುನಾರ ಕೋಟೆಯಲ್ಲಿ ಯುದ್ಧದ ಸಿದ್ಧತೆಯನ್ನು ಮಾಡುತ್ತಿರುವನೆಂಬ ಸುದ್ದಿಯು ಬಂದಿತು. ಆದದರಿಂದ ಗುಜರಾಥದಲ್ಲಿ ಅಧಿಕಾರವನ್ನು ಸ್ಥಿರಪಡಿಸುವದನ್ನು ಬಿಟ್ಟುಕೊಟ್ಟು ಹುಮಾಯೂನನು ಅವಸರದಿಂದ ಷೇರಖಾನನ ಕಡೆಗೆ ತಿರುಗಬೇಕಾಯಿತು. ಹುಮಾಯೂನನು ಹೋದ ಕೂಡಲೆ ಬಹದ್ದೂರಷಾಹನು ಮರಳಿ ಬಂದು ಅಸ್ಕರಿಯನ್ನು ಓಡಿಸಿ ಗುಜರಾಥ, ಮಾಳವ ಪ್ರಾಂತಗಳನ್ನು ವಶಮಾಡಿಕೊಂಡನು. ಹುಮಾಯೂನನು ಪರಾಕ್ರಮಿಯಾದರೂ ಒಂದೇ ಹೊತ್ತಿಗೆ ಇಬ್ಬರು ಶತ್ರುಗಳು ಗಂಟುಬಿದ್ದದರಿಂದ ಒಬ್ಬೊಬ್ಬರನ್ನು ಸಂಪೂರ್ಣವಾಗಿ ಹಿಮ್ಮೆಟ್ಟಿಸಲು ಅನುಕೂಲವಾಗಲಿಲ್ಲ. ಯಾರ ಮೇಲೆ ಮೊದಲು ಸಾಗಿಹೋಗಬೇಕೆಂಬುದು ಅವನಿಗೆ ತಿಳಿಯದಂತಾಯಿತು. ಈ ವಿಚಾರದಲ್ಲಿಯೇ ಒಂದು ವರ್ಷವು ಕಳೆದುಹೋಯಿತು. ಕಡೆಗೆ ಅವನು ಷೇರಖಾನನ ಮೇಲೆಯೇ ಸಾಗಿದನು.

೩. **ಹುಮಾಯೂನನು ಸೋತದ್ದು** :— ಆಗ ಷೇರಖಾನನು ಅಯಕಟ್ಟಿನ ಮೆಟ್ಟುಗಳಲ್ಲಿ ತನ್ನ ಜನರನ್ನಿಟ್ಟು, ತಾನು ಬಂಗಾಲದ ಮೇಲೆ ಸಾಗಿ ಹೋಗಿ, **ಗೌಡ**ವನ್ನು ತಕ್ಕೊಂಡು. **ರೋಹಟಸ** ಎಂಬ ಭದ್ರವಾದ ಕೋಟೆ

ಯನ್ನು ಆಶ್ರಯಿಸಿಕೊಂಡು ಇದ್ದನು. ಹುಮಾಯೂನನು ಪೂರ್ವಕ್ಕೆ ಸಾಗಿ ಚುನಾರವನ್ನು ವಶಮಾಡಿಕೊಂಡು, ರಾಜಮಹಾಲದ ಕಣಿವೆಯ ಹತ್ತಿರ ಷೇರಖಾನನ ಮಗನಾದ **ಜಲಾಲ**ನನ್ನು ಹಿಮ್ಮೆಟ್ಟಿಸಿ, ಬಂಗಾಲವನ್ನು ಸೇರಿದನು. ಮತ್ತು ಗೌಡ ಪಟ್ಟಣವನ್ನು ಗೆದ್ದು ಅಲ್ಲಿಯೇ ಸೊಗಸಿನಿಂದ ಕಾಲ ಕಳೆಯಹತ್ತಿದನು. ಷೇರಖಾನನು ಮಾತ್ರ ರೋಹಟಸದಿಂದ ಹೊರಟುಬಂದು **ಬನಾರಸ, ಚುನಾರ** ಮತ್ತು **ಕನೋಜ** ಇವುಗಳನ್ನು ಆಕ್ರಮಿಸಿ, ದಿಲ್ಲಿಗೂ ಹುಮಾಯೂನನಿಗೂ ಇರುವ ಸಂಬಂಧವನ್ನು ಕಡಿದುಬಿಟ್ಟನು ಅಸ್ಕರಿಯು ಬಂಡಾಯವನ್ನೆಬ್ಬಿಸಿ ಪಟ್ಟವನ್ನು ಹಿಡಿದುಕೊಂಡನು. ಕಾಮರಾನನಿಗೂ ಅಸ್ಕರಿಗೂ ಜಗಳಹತ್ತಿತು. ಇಷ್ಟಾದ ಬಳಿಕ ಹುಮಾಯೂನನಿಗೆ ಎಚ್ಚರಹುಟ್ಟಿತು. ಅವನು ದಿಲ್ಲಿಯ ಕಡೆಗೆ ಸಾಗಿಬರುವಾಗ ಷೇರಖಾನನು **ಬಕ್ಸಾರ**ದ ಬಳಿಯಲ್ಲಿ ಅವನನ್ನು ತಡೆದನು. ನಿರ್ವಾಹವಿಲ್ಲದೆ ಹುಮಾಯೂನನು ಯುದ್ಧಮಾಡಬೇಕಾಯಿತು. ಹುಮಾಯೂನನ ಸೈನ್ಯವು ನುಗ್ಗಾಯಿತು. ಅವನು ಒಬ್ಬ ಬಿಸ್ತಿಯ ಸಹಾಯದಿಂದ ಗಂಗಾನದಿಯನ್ನು ದಾಟಿ ಒಬ್ಬನೇ ಆಗ್ರಾಪಟ್ಟಣಕ್ಕೆ ಬಂದು ಮುಟ್ಟಿದನು. ಕ್ರಿ. ಶ. ೧೫೩೯. ಹುಮಾಯೂನನು ಮತ್ತೆ ಸೈನ್ಯವನ್ನು ಸಜ್ಜುಗೊಳಿಸಿ ಮರುವರ್ಷ ಷೇರಖಾನನ ಮೇಲೆ ಸಾಗಿಹೋದನು ಈ ಯುದ್ಧದಲ್ಲಿಯೂ ಸೋತದರಿಂದ ಹುಮಾಯೂನನು ನಿರಾಶನಾಗಿ, ಕಾಮರಾನನು ತನಗೆ ಸಹಾಯ ಮಾಡಬಹುದೆಂದು ತಿಳಿದು ಲಾಹೋರದ ದಾರಿಯನ್ನು ಹಿಡಿದನು. ಷೇರಖಾನನು ದಿಲ್ಲಿಯ ಒಡೆಯನಾದನು

೧೨ನೆಯ ಪಾಠ

ಸೂರ ಮನೆತನ

(ಕ್ರಿ. ಶ. ೧೫೪೦—೧೫೫೫)

೧. ಷೇರಷಾಹ:— ಕ್ರಿ. ಶ. ೧೫೪೦-೪೫. **ಫರೀದ** ಎಂಬುದು ಇವನ ಮೊದಲಿನ ಹೆಸರು ಏರಿಬಂದ ಹುಲಿಯನ್ನು ಒಂದೇಪೆಟ್ಟಿಗೆ ಕೊಂದದರಿಂದ **ಇವನಿಗೆ ಷೇರಖಾನ** (ಹುಲಿಯಂಥ ಸರದಾರ) ಎಂಬ ಹೆಸರುಂಟಾ

ಯಿತು. ಮತ್ತು ದಿಲ್ಲಿಯ ಒಡೆಯನಾದ ಬಳಿಕ **ಷೇರಷಾಹ**ನೆನಿಸಿದನು. ಇವನ ತಂದೆಯು ಬಹಾರ ಪ್ರಾಂತದ **ಸಹಾಸೇರಮು**ದ ಜಹಗೀರದಾರನು. ಫರೀದನು ದೊಡ್ಡವನಾದ ಬಳಿಕ ಇಬ್ರಾಹಿಮ ಲೋದಿ, ಬಹಾರದ ಮಹಮ್ಮದ ಲೋಹಾನಿ ಮತ್ತು ಬಾಬರ ಇವರ ಕೈಯಲ್ಲಿ ಕೆಲಸಮಾಡಿ ಯುದ್ಧಕಲೆ-ರಾಜತಂತ್ರಗಳಲ್ಲಿ ಒಳ್ಳೆಯ ಅನುಭವವನ್ನು ಪಡೆದನು. ಬಾಬರನ ಮರಣದ ತರುವಾಯ ಪ್ರಬಲನಾಗಿ ಯುಕ್ತಿಪ್ರಯುಕ್ತಿಗಳಿಂದ ಹುಮಾಯೂನನನ್ನು ಹಣ್ಣುಮಾಡಿ ದಿಲ್ಲಿಯ ಅರಸನಾದನು

ಷೇರಷಾಹನ ರಾಜ್ಯವಿಸ್ತಾರ.— ಬಂಗಾಲದ ಸುಭೇದಾರನಾದ **ಖಿಜರ ಖಾನ**ನ ಬಂಡಾಯವನ್ನಡಗಿಸಿ ಆ ಸುಭೆಯಲ್ಲಿ ಹತ್ತೊಂಬತ್ತು ಬೇರೆಬೇರೆ ಭಾಗಗಳನ್ನು ಮಾಡಿ ಅವುಗಳ ಮೇಲೆ ಒಬ್ಬೊಬ್ಬ ಸ್ವತಂತ್ರ ಅಧಿಕಾರಿಯನ್ನು ನಿಯಮಿಸಿದನು ಆ ಮೇಲೆ ಕಾಮರಾನನಿಂದ ಪಂಜಾಬವನ್ನೂ **ಕಾದರಷಾಹ**ನಿಂದ ಮಾಳವವನ್ನೂ ಕಸಿದುಕೊಂಡನು. ಗ್ವಾಲ್ಹೇರ, ರತನಭೋರ ಕೋಟೆಗಳನ್ನು ತೆಗೆದುಕೊಂಡನು. ಕ್ರಿ.ಶ. ೧೫೪೨. ಪಂಜಾಬದ ಸುಭೇದಾರನಾದ **ಹೈಬತಖಾನ**ನು ಸಿಂಧಪ್ರಾಂತವನ್ನು ಗೆದ್ದು ದಿಲ್ಲಿಯ ಸಾಮ್ರಾಜ್ಯಕ್ಕೆ ಕೂಡಿಸಿದನು ಷೇರಷಾಹನು ರಜಪುತರ ಮೇಲೆಯೂ ತನ್ನ ಅಧಿಕಾರವನ್ನು ನೆಲೆಗೊಳಿಸಿ ಬುಂದೇಲಖಂಡದ ಕಲಿಂಜರವನ್ನು ಮುತ್ತಿದನು. ಆಗ ಷೇರಷಾಹನ ಸೈನ್ಯದವರೇ ಹೊಡೆದ ತೋಫಿನ ಗುಂಡುಗಳು ಕೋಟೆಯ ಗೋಡೆಗೆ ಬಡಿದು ಹಿಂದಿರುಗಿ ಬಂದು ಬಿದ್ದು ಮದ್ದಿನ ರಾಶಿಗೆ ಬೆಂಕಿಹತ್ತಿತು. ಈ ಅಪಘಾತದಿಂದ ಷೇರಷಾಹನೂ ಇನ್ನೂ ಅನೇಕರೂ ಸುಟ್ಟು ಮರಣಹೊಂದಿದರು. ಕ್ರಿ. ಶ. ೧೫೪೫.



ಷೇರಷಾಹ

ಷೇರಷಾಹನ ಸುಧಾರಣೆಗಳು:— ಇವನು ತನ್ನ ಐದೇ ವರ್ಷದ ಆಳಿಕೆಯಲ್ಲಿ ರಾಜ್ಯದ ಬಲಿಕೆಗೂ ಜನರ ಹಿತಕ್ಕೂ ಅನುಕೂಲವಾದ ಅನೇಕ ಸುಧಾ-

ರಣೆಗಳನ್ನು ಮಾಡಿದನು. **ಸುಭೆ** ಎಂಬ ದೊಡ್ಡ ಭಾಗಗಳನ್ನು ಮುರಿದು ಮೇಲಿಂದ ಮೇಲೆ ಬಂಡಾಯವನ್ನೆಬ್ಬಿಸುವ ಸುಭೇದಾರರ ಕಾಟವನ್ನು ತಪ್ಪಿಸಿದನು. **ಸರಕಾರ**ವೆಂಬ ವಿಭಾಗದ ಮೇಲೆ **ಶಿಕ್ಕೇದಾರ, ಮುನಶಿಫ್, ಪೋತದಾರ** ಮತ್ತು **ಕಾರಕೂನ** ಮುಂತಾದ ಅಧಿಕಾರಿಗಳನ್ನು ಇಟ್ಟನು. ವಿಭಾಗದ ಮುಖ್ಯನಾಗಿ ಸಂರಕ್ಷಣೆಯನ್ನೂ ಫೌಜದಾರಿ ಪ್ರಕರಣಗಳ ವಿಚಾರಣೆಯನ್ನೂ ಮಾಡುವದು ಶಿಕ್ಕೇದಾರನ ಕೆಲಸವಾಗಿತ್ತು. ಮುನಸಿಫನು ಕೊಡಕೊಳ್ಳುವ ಹಾಗು ತೆರಿಗೆಯ ಸಂಬಂಧದ ವ್ಯಾಜ್ಯಗಳನ್ನು ತೀರಿಸುತ್ತಿದ್ದನು. ತೆರಿಗೆ ಎತ್ತುವ ಕೆಲಸಕ್ಕಾಗಿ ದಿಲ್ಲಿಯಿಂದಲೇ ಸ್ವತಂತ್ರ ಅಧಿಕಾರಿಗಳು ಬರುತ್ತಿದ್ದರು. ಪೋಲೀಸ ಖಾತೆಯನ್ನಿಟ್ಟು ಕಳವು ಮುಂತಾದವು ಆಗದಂತೆ ವ್ಯವಸ್ಥೆಯನ್ನು ಮಾಡಿದನು.

ಸೈನ್ಯದ ಅಧಿಕಾರಿಗಳಿಗೆ ಉಂಬಳಿ ಹಾಕಿಕೊಡುವ ರೀತಿಯನ್ನು ನಿಲ್ಲಿಸಿ ಅವರ ಸಂಬಳ, ಅದನ್ನು ಹೆಚ್ಚಿಸುವ ಕ್ರಮ, ಭತ್ತೆ ಮುಂತಾದವುಗಳನ್ನು ಸರಿಯಾಗಿ ಗೊತ್ತುಪಡಿಸಿದನು. ಸೈನಿಕರನ್ನು ನೇರಿಸಿಕೊಳ್ಳುವ ಕೆಲಸವನ್ನು ತನ್ನ ಕಡೆಗೆ ಇಟ್ಟುಕೊಂಡನು. ಕುದುರೆಗಳ ಮೇಲೆ ಬರೆಯಿಂದ ಕ್ರಮಾಂಕಗಳನ್ನು ಹಾಕಿಸಿ ಸರಿಯಾಗಿ ಲೆಖ್ಖವನ್ನು ಇಡಿಸಿದನು. ಸೈನಿಕರಿಂದ ಪ್ರಜೆಗಳಿಗೆ ಉಪದ್ರವವಾಗದಂತೆ ವ್ಯವಸ್ಥೆಯಿಟ್ಟನು

ಭೂಮಿಗಳನ್ನು ಅಳೆದು ನಿಯಮಿತವಾದ ತೆರಿಗೆಯನ್ನು ಗೊತ್ತುಮಾಡಿ ಅದಕ್ಕೆ ರೈತರಿಂದ ಒಪ್ಪಿಗೆಯನ್ನು ಬರೆಯಿಸಿಕೊಂಡನು; ಮತ್ತು ಭೂಮಿಗಳ ಅಧಿಕಾರ ಪತ್ರಗಳನ್ನು ಅವರಿಗೆ ಕೊಟ್ಟನು ರೂಪಾಯಿ ಎಂಬ ಬೆಳ್ಳಿಯ ನಾಣ್ಯಗಳನ್ನು ಸಾಕಷ್ಟು ಅಚ್ಚುಹಾಕಿಸಿ, ವ್ಯವಹಾರಕ್ಕೆ ಅನುಕೂಲ ಮಾಡಿದನು. ಅನೇಕ ರಾಜಮಾರ್ಗಗಳನ್ನು ಕಟ್ಟಿಸಿದನು. ಅವುಗಳಲ್ಲಿ ಡಾಕಾದಿಂದ ಸಿಂಧುನದದ ವರೆಗೆ ಮಾಡಿಸಿದ ದಾರಿಯು ಎಲ್ಲಕ್ಕೂ ಉದ್ದವಾಗಿತ್ತು. ಈ ರಾಜಮಾರ್ಗಗಳ ಎಡಬಲಗಳಲ್ಲಿ ಸಾಲು ಗಿಡಗಳನ್ನು ಹಚ್ಚಿಸಿದನು. ಅಲ್ಲಲ್ಲಿ ಛಾವಿ-ಧರ್ಮಶಾಲೆಗಳನ್ನು ಕಟ್ಟಿಸಿದನು. ಕುದುರೆಗಳ ಮೇಲಿಂದ ಟಪಾಲನ್ನು ತರುವ ಹಾಗು ಒಯ್ಯುವ ವ್ಯವಸ್ಥೆಯನ್ನು ಮಾಡಿದನು. ಒಂದೇ ತರದ ತೂಕ-ಅಳತೆಗಳನ್ನು ಗೊತ್ತುಮಾಡಿದನು. ರಾಜ್ಯದಲ್ಲಿ ಎಲ್ಲ ಕಡೆಗೆ ಗುಪ್ತ ಚಾರರನ್ನಿಟ್ಟನು.

ಷೇರಷಾಹನ ಯೋಗ್ಯತೆ:— ಈ ರೀತಿಯ ಅನೇಕ ಕಾರ್ಯಗಳನ್ನು ನೋಡಿದರೆ ಷೇರಷಾಹನ ಯೋಗ್ಯತೆಯು ಹೆಚ್ಚಿನದಿತ್ತೆಂದು ತಿಳಿಯುವದು. ಇವನು ಸಮರ್ಥನೆಂದು ತಿಳಿದೆ, ಅಣ್ಣನನ್ನು ಕಾಡಿದ ಕಾಮರಾನನು ಪಂಜಾಬ ಪ್ರಾಂತವನ್ನು ತಾನಾಗಿಯೇ ಬಿಟ್ಟುಕೊಟ್ಟನು. ಹೊಸ ರಾಜ್ಯಸ್ಥಾಪಕನಲ್ಲಿ ಇರಬೇಕಾದ ಎಲ್ಲ ಗುಣಗಳು ಇವನಲ್ಲಿದ್ದವು ಇವನು ಶೂರನೂ ಸುವಿಚಾರಿಯೂ ನುರಿತ ಸೇನಾಪತಿಯೂ ಅನುಭವಿಕ ರಾಜತಂತ್ರನೂ ಆಗಿದ್ದನು. ಬೆಳಗಿನಿಂದ ಸಂಜೆಯವರೆಗೆ ಬೇಸರಿಯದೆ ಕೆಲಸಮಾಡುವನು. ಕೈಳಗಿನ ಅಧಿಕಾರಿಗಳಮೇಲೆ ಇವನ ದರ್ಪವಿತ್ತು. ಹಿಂದುಗಳನ್ನು ದ್ವೇಷಿಸದೆ ಅವರಿಗೆ ಧರ್ಮಸ್ವಾತಂತ್ರ್ಯವನ್ನು ಕೊಟ್ಟಿದ್ದನು. ಹಿಂದು–ಮುಸಲ್ಮಾನರು ತಮ್ಮ ತಮ್ಮ ಧರ್ಮಗಳನ್ನು ಅನುಸರಿಸಿಯೂ ರಾಜಕಾರಣಗಳನ್ನು ಒಮ್ಮನಸ್ಸಿನಿಂದ ಹೇಗೆ ಸಾಗಿಸಬೇಕೆಂಬುವನ್ನು ಇವನು ತೋರಿಸಿಕೊಟ್ಟನು. ಈ ದೃಷ್ಟಿಯಿಂದ ವಿಚಾರಿಸಿದರೆ ಷೇರಷಾಹನು **ಅಕ್‌ಬರ**ನಿಗಿಂತಲೂ ಶ್ರೇಷ್ಠನೆನಿಸುವನು.

೨. ಸೂರ ಮನೆತನದ ಕಡೆ:— ಷೇರಷಾಹನ ತರುವಾಯ **ಸಲೀಮು ಷಾಹ**ನು ಪಟ್ಟದಮೇಲೆ ಕುಳಿತನು ಇವನು ಕ್ರಿ. ಶ ೧೫೫೩ರಲ್ಲಿ ಸತ್ತ ತರುವಾಯ ಸರದಾರರು **ಫಿರೋಜಷಾಹ**ನೆಂಬ ಬಾಲಕನನ್ನು ಪಟ್ಟದ ಮೇಲೆ ಕುಳ್ಳಿರಿಸಿ ಅವನ ಹೆಸರಿನಿಂದ ರಾಜ್ಯಭಾರ ನಡೆಸಿದರು. ಆದರೆ ಫಿರೋಜನನ್ನು ಅವನ ಸೋದರಮಾವನು ಕೊಂದು **ಆದಿಲ್‌ಷಾಹ**ನೆಂಬ ಬಿರುದು ಧರಿಸಿ ಪಟ್ಟದಮೇಲೆ ಕುಳಿತನು ಇವನು **ಹಿಮು** ಎಂಬ ಹಿಂದು ಮಂತ್ರಿಯ ಕಡೆಗೆ ಕಾರಭಾರವನ್ನೊಪ್ಪಿಸಿ ದುರ್ವ್ಯಸನದಲ್ಲಿ ಮಗ್ನನಾಗಿದ್ದನು. ಹಿಮುವು ಸಮರ್ಥನಾಗಿದ್ದು ಎಲ್ಲ ಅಫಗಾನರನ್ನ ಕೈಯಲ್ಲಿಟ್ಟುಕೊಂಡು ಕಾರಭಾರವನ್ನು ಸಾಗಿಸಿದನು. ಆದಿಲ್‌ಷಾಹನ ತರುವಾಯ ಆಳಿದ **ಇಬ್ರಾಹಿಮಷಾಹ** ಮತ್ತು **ಸಿಕಂದರ ಷಾಹ** ಇವರ ಕಾಲಕ್ಕೂ ಇವನೇ ಮಂತ್ರಿಯಾಗಿದ್ದನು. ಕ್ರಿ. ಶ. ೧೫೫೫ರಲ್ಲಿ ಹುಮಾಯೂನನು ಪಂಜಾಬವನ್ನು ಹೊಕ್ಕು **ಸರಹಿಂದ**ದ ಬಳಿಯಲ್ಲಿ ಸಿಕಂದರ ಸೂರನನ್ನು ಸೋಲಿಸಿದನು ಇಲ್ಲಿಗೆ ಸೂರಮನೆತನದ ಕೊನೆಯಾಗಿ ದಿಲ್ಲಿಯ ರಾಜ್ಯವು ಮತ್ತೆ ಹುಮಾಯೂನನ ವಶವಾಯಿತು.

೧೩ನೆಯ ಪಾಠ

ಹುಮಾಯೂನ

ಆಳಿಕೆಯ ಉತ್ತರಾರ್ಧ (ಕ್ರಿ. ಶ ೧೫೫೫—೧೫೫೬)

೧. **ಹುಮಾಯೂನನ ತೊಳಲಾಟ**:— ಕ್ರಿ. ಶ. **೧೫೪೦-೧೫೫೫. ಬಕ್ಸಾರ**ದ ಯುದ್ಧದಲ್ಲಿ ಸೋತು ನಿರಾಶನಾದ ಹುಮಾಯೂನನು **ಲಾಹೋರ**ದ ಕಡೆಗೆ ಹೋದ ವರೆಗಿನ ಸಂಗತಿಯು ೧೧ನೆಯ ಪಾಠದಲ್ಲಿ ಹೇಳಿದೆ. ಹುಮಾಯೂನನು ಲಾಹೋರಕ್ಕೆ ಹೋಗಲು ಕಾಮರಾನನ ಸಹಾಯವು ಇವನಿಗೆ ಮೊರೆಯಲಿಲ್ಲ ಆದದರಿಂದ ಇವನು ಸಿಂಧದಲ್ಲಿದ್ದ ಹಿಂಡಾಲನ ಬಳಿಗೆ ಬಂದನು. ಅಲ್ಲಿಯೇ ಹಿಂಡಾಲನ ಗುರುವಾದ ಅಲೀ ಅಕಬರನ ಮಗಳಾದ **ಹಮಿದಾ ಬಾನು** ಎಂಬವಳನ್ನು ಲಗ್ನವಾದನು. ರಜಪುತರ ಸಹಾಯವನ್ನು ಬೇಡುವದಕ್ಕಾಗಿ ಜೋಧಪುರಕ್ಕೆ ಹೋದಾಗ, ಷೇರಷಾಹನು ಬೆದರಿಕೆಯ ಪತ್ರವನ್ನು ಕಳುಹಿದ್ದರಿಂದ, ಧೈರ್ಯಸಾಲದೆ ರಜಪುತರು ಇವನಿಗೆ ನೆರವಾಗಲಿಲ್ಲ. ಆಗ ಏನ್ನನಾದ ಹುಮಾಯೂನನು ಪರಿವಾರದೊಡನೆ ಪರಿಪರಿಯ ಕಷ್ಟಗಳನ್ನು ಅನುಭವಿಸುತ್ತ ಹಿಂದಿರುಗಿ ಬರುವಾಗ **ಉಮರಕೋಟ**ದ **ರಾಣಾ ಪ್ರಸಾದನು** ಇವನಿಗೆ ಆಶ್ರಯವನ್ನು ಕೊಟ್ಟನು. ಅಲ್ಲಿ ಇರುವಾಗಲೆ ಇವನ ಮಗ **ಅಕ್‌ಬರನು** ಹುಟ್ಟಿದನು. ಕ್ರಿ. ಶ. **೧೫೪೨.** ಮುಂದೆ ಇವನು ಕಂದಾಹಾರಕ್ಕೆ ಹೋಗಲು ಅಸ್ಕರಿಯು ಇವನ ಮೇಲೆ ಸಾಗಿಬಂದನು. ಆಗ ಅಕ್‌ಬರನನ್ನು ಅಲ್ಲಿಯೆ ಬಿಟ್ಟು ಬಹಿರಾಮಖಾನನೊಡನೆ ಇರಾಣಕ್ಕೆ ತೆರಳಿದನು. ಅಸ್ಕರಿಯು ಅಕ್‌ಬರನನ್ನು ಕಾಮರಾನನ ಕಡೆಗೆ ಕಳುಹಿದನು.

ಆಗ ಇರಾಣವನ್ನು **ತಹಮಾಸ್ಪ ಸಫವಿ** ಎಂಬ ಷಾಹನು ಆಳುತ್ತಿದ್ದನು. ಅವನ ತಂದೆಗೂ ಬಾಬರನಿಗೂ ಗೆಳೆತನವಿತ್ತು. ಆದದರಿಂದ ಆ ಷಾಹನು ಹುಮಾಯೂನನನ್ನು ಆದರದಿಂದ ಬರಮಾಡಿಕೊಂಡನು. ಹುಮಾಯೂನನು ಹಿಂದುಸ್ಥಾನದಲ್ಲಿಯ ರಾಜ್ಯವನ್ನು ಮೊರಕಿಸುವ ಕೆಲಸದಲ್ಲಿ ತನಗೆ ನೆರವಾಗ ಬೇಕೆಂದು ಷಾಹನನ್ನು ಕೇಳಿಕೊಂಡನು. ಅದಕ್ಕೆ ಷಾಹನು '**ಸಿಯಾ** ಪಂಥವನ್ನು

ಸ್ವೀಕರಿಸಿದರೆ ಮಾತ್ರ ಸಹಾಯವು ದೊರೆಯುವದು' ಎಂದು ತಿಳಿಸಿದನು. ಹುಮಾಯೂನನು ಉಪಾಯಗಾಣದೆ ಸಿಯಾಪಂಥವನ್ನು ಸ್ವೀಕರಿಸಿ, **ಷಾಹ** ನಿಂದ ೧೪ ಸಾವಿರ ಸೈನಿಕರ ನೆರವನ್ನು ದೊರೆಯಿಸಿಕೊಂಡು, ಕಂದಾಹಾರದ ಮೇಲೆ ಸಾಗಿಬಂದನು. ಕ್ರಿ ಶ. **೧೫೪೪.**

ಬಳಿಕ ಹುಮಾಯೂನನು ಆಸ್ಕರಿಯಿಂದ ಕಂದಾಹಾರವನ್ನೂ ಕಾಮರಾನನಿಂದ ಕಾಬೂಲನನ್ನೂ ಗೆದ್ದುಕೊಂಡನು. ಮತ್ತು ಅಲ್ಲಿ ತನ್ನ ಅಧಿಕಾರವನ್ನು ಸ್ಥಿರಗೊಳಿಸುತ್ತ ಹಿಂದುಸ್ಥಾನದಲ್ಲಿಯ ಪರಿಸ್ಥಿತಿಯನ್ನು ನಿರೀಕ್ಷಿಸುತ್ತಿದ್ದನು. ಈ ಅವಧಿಯಲ್ಲಿ ಕಾಮರಾನನು ಮೂರು ಸರತಿ ಏರಿಬಂದನು ಅವನ ಕಾಟವನ್ನು ತಾಳಿತಾಳಿ ಬೇಸರಗೊಂಡ ಹುಮಾಯೂನನು ಅವನನ್ನು ಹಿಡಿದು ತರಿಸಿ ಅವನ ಕಣ್ಣುಗಳನ್ನು ಕೀಳಿಸಿದನು.

೨. **ಹುಮಾಯೂನನು ದಿಲ್ಲಿಯನ್ನು ಮರಳಿ ಗೆದ್ದದ್ದು**:— ಕ್ರಿ. ಶ. ೧೫೫೫ ರಲ್ಲಿ ದಿಲ್ಲಿಯಲ್ಲಿ ಸಿಕಂದರ ಸೂರನು ಆಳುತ್ತಿದ್ದನು. ಅವನು ದುರ್ಬಲನಾಗಿದ್ದದರಿಂದ ರಾಜ್ಯದಲ್ಲಿ ಗೊಂದಲವುಂಟಾಗಿತ್ತು ಈ ಹೊತ್ತನ್ನು ಮಾತ್ರ ಹುಮಾಯೂನನು ಸಾಧಿಸಿದನು. ಇವನು ಹಿಂದುಸ್ಥಾನವನ್ನು ನೇರಿ **ಸರಹಿಂದಿ**ದ ಯುದ್ಧದಲ್ಲಿ ಸಿಕಂದರನನ್ನು ಸೋಲಿಸಿ, ಹದಿನೈದು ವರ್ಷಗಳ ಹಿಂದೆ ಕಳೆದುಕೊಂಡಿದ್ದ ದಿಲ್ಲಿಯ ರಾಜ್ಯವನ್ನು ತಿರುಗಿ ಕೈವಶಮಾಡಿಕೊಂಡನು

೩. **ಹುಮಾಯೂನನ ಮರಣ ಮತ್ತು ಯೋಗ್ಯತೆ**:— ಇವನು ಆಳತೆಯಿಲ್ಲದ ಕಷ್ಟ-ನಷ್ಟಗಳನ್ನು ಸಹಿಸಿ, ಕಳೆದುಹೋದ ರಾಜ್ಯವನ್ನು ಗಳಿಸಿದನು. ಆದರೆ ಕಡೆಗೂ ದುರ್ದೈವಿಯಾದ ಇವನು, ಆ ರಾಜ್ಯ ಸುಖವನ್ನು ಅನುಭವಿಸಲು ಬದುಕಿರಲಿಲ್ಲ; ಒಂದು ದಿನ ಸಂಜೆಯ ಪ್ರಾರ್ಥನೆಗಾಗಿ ಮೇಲುಪ್ಪರಿಗೆಯಿಂದ ಇಳಿದು ಬರುವಾಗ ಜಾರಿಬಿದ್ದು ಮರಣಹೊಂದಿದನು. ಇವನು ಶೂರನೂ ಉದಾರನೂ ಧಾರ್ಮಿಕನೂ ದಯಾಳುವೂ ಆಗಿದ್ದನು. ಆದರೆ ತಡಮಾಡುವವನೂ ಸೊಗಸುಗಾರನೂ ಆಗಿದ್ದದರಿಂದ ಧೂರ್ತನಾದ ಷೇರಷಾಹನಿಗೆ ರಾಜ್ಯವನ್ನು ನೀಡಿದನು. ಇವನ ತಮ್ಮಂದಿರು ಕೃತಘ್ನರಾದದರಿಂದ ಇವನ ದಯಾಗುಣವು ಕೂಡ ಇವನಿಗೆ ಮುಳುವು ಆಯಿತು! ಇವನು

ವಿದ್ವಾಂಸನೂ ಕವಿಯೂ ಆಗಿದ್ದನು; ಗಣಿತ – ಭೂಗೋಲಗಳು ಇವನ ಪ್ರೀತಿಯ ವಿಷಯಗಳಾಗಿದ್ದವು; ವಿದ್ವಾಂಸರ ಸಹಾಯಕನಾಗಿದ್ದನು. ಇವನ ಸರಸವಾದ ಕವಿತೆಗಳನ್ನು ಈಗಲೂ ಜನರು ಮೆಚ್ಚುವರು.

೧೪ನೆಯ ಪಾಠ

ಅ ಕ್ ಬ ರ ಬಾ ದ ಷಾ ಹ

(ಕ್ರಿ. ಶ. ೧೫೫೬ — ೧೬೦೫)



ಅಕ್‌ಬರ

೧. ಅಕ್‌ಬರನು ಪಟ್ಟಕ್ಕೆ ಬಂದ ಕಾಲದ ಸ್ಥಿತಿ:— **ಅಕ್‌ಬರನು** ಪಟ್ಟಕ್ಕೆ ಬಂದಾಗ ೧೪ ವರ್ಷದವನಿದ್ದನು. ಮೊಗಲರ ಅಧಿಕಾರವು ಇನ್ನೂ ಸ್ಥಿರಗೊಂಡಿದ್ದಿಲ್ಲ. ಇವನ ಸಂರಕ್ಷಕನೂ ಮಾರ್ಗದರ್ಶಕನೂ ಆದ **ಬಹಿರಾಮ್‌ಖಾನ**ನಿಗೆ ಹಿಂದುಸ್ಥಾನದ ಕಾರಬಾರದ ಅನುಭವವಿದ್ದಿಲ್ಲ. ಮೊಗಲಸರದಾರರನ್ನು ಅಂಕಿತದಲ್ಲಿಡುವದು ಕಠಿಣವಾದ ಕೆಲಸವಾಗಿತ್ತು. ಪಠಾಣರ ಪ್ರಾಬಲ್ಯವು ಇನ್ನೂ ಕಡಿಮೆಯಾಗಿದ್ದಿಲ್ಲ ದಿಲ್ಲಿಯು ಅಕ್‌ಬರನದಿದ್ದರೂ ಅಲ್ಲಿರುವದು ಸುರಕ್ಷಿತವಾಗಿದ್ದಿಲ್ಲ.

೨. ಪಾನೀಪತದ ೨ನೆಯ ಯುದ್ಧ:— ಕ್ರಿ. ಶ. **೧೫೫೬.** ಅಕ್‌ಬರನನ್ನು ದಿಲ್ಲಿಯಲ್ಲಿ ಇರಿಸುವದು ಯೋಗ್ಯವಲ್ಲೆಂದು ತಿಳಿದು ಬಹಿರಾಮನು ಅವನೊಡನೆ ಲಾಹೋರದಲ್ಲಿ ಇರಹತ್ತಿದನು. ಆಗ ದಿಲ್ಲಿಯ ಸಂರಕ್ಷಣೆಯ ಕೆಲಸವು **ತಾರದೀಬೇಗ** ಎಂಬ ಸರದಾರನ ಕಡೆಗಿತ್ತು. ಸೂರಮನೆತನದ ಮಂತ್ರಿಯಾದ ಹಿಮುವು ಬಂಗಾಲದಿಂದ ದೊಡ್ಡ ಸೈನ್ಯದೊಡನೆ ಬಂದು ದಿಲ್ಲಿಯನ್ನು ಗೆದ್ದುಕೊಂಡು ತಾರದೀಬೇಗನನ್ನು ಓಡಿಸಿ **ವಿಕ್ರಮಜಿತ** ಎಂಬ ಹೆಸರಿಂದ ತಾನೇ ಆಳಹತ್ತಿದನು. ಮತ್ತು ರಜಪುತರ ಸಹಾಯವನ್ನು ಪಡೆದು ಅಕ್‌ಬರ–

ಬಹಿರಾಮರನ್ನು ಹಣೆಯುವ ವಿಚಾರದಿಂದ ಅವರಮೇಲೆ ಸಾಗಿದನು. ಆಗ ಇಂಥ ಬಲದೊಡನೆ ಯುದ್ಧಮಾಡಬೇಕೋ, ಕಾಬೂಲದ ಕಡೆಗೆ ಕಾಲ್ದೆಗೆಯ ಬೇಕೋ ಎಂಬ ಆಲೋಚನೆ ಅಕ್‌ಬರನ ಸರದಾರರಲ್ಲಿ ನಡೆಯಿತು. ಕಡೆಗೆ ಬಹಿರಾಮನು, ದಿಲ್ಲಿಯಿಂದ ಓಡಿಬಂದದ್ದಕ್ಕಾಗಿ ಬೇಗನನ್ನು ಶಿಕ್ಷಿಸಿ, ಹಿಮುವನ್ನು ಇದಿರಿಸುವ ನಿಶ್ಚಯದಿಂದ ನೈನ್ಯದೊಂದಿಗೆ ಹೊರಟನು. ಎರಡೂ ದಂಡುಗಳು ಪ್ರಸಿದ್ಧವಾದ ಪಾಸಿಪತದ ರಣಭೂಮಿಯಲ್ಲಿಯೆ ಕೂಡಿದವು ಮೊದಲು ಹಿಮುವಿನ ಪಕ್ಷವೇ ಜಯಹೊಂದುವಂತೆ ತೋರುತ್ತಿತ್ತು. ಆದರೆ ಆನೆಯನ್ನೇರಿ ನೈನ್ಯದ ಮುಂಭಾಗದಲ್ಲಿ ಹೋರಾಡುತ್ತಿದ್ದ ಹಿಮುವಿನ ಕಣ್ಣಿಗೆ ಶತ್ರುಗಳ ಬಾಣವು ನಡಲು ಅವನು ಗಾಯಹೊಂದಿ ಬಿದ್ದನು; ಶತ್ರುಗಳು ತಡ ಮಾಡದೆ ಎರಗಿ ಅವನನ್ನು ಹಿಡಿದರು; ಬಹಿರಾಮನು ಹಿಮುವನ್ನು ಕೊಂದನು; ಕೂಡಲೆ ಹಿಮುವಿನ ನೈನ್ಯವು ಚದರಿತು; ಅಕ್‌ಬರನು ಜಯಶೀಲನಾದನು.

೩. **ಬಹಿರಾಮ್ ಖಾನನು** :— ಕ್ರಿ. ಶ ೧೫೫೬—೧೫೬೦ರ ವರೆಗೆ ಎಂದರೆ ನಾಲ್ಕು ವರ್ಷ ಬಹಿರಾಮನೇ ಕಾರಭಾರವನ್ನು ನಾಗಿಸಿದನು ಇವನಿಗೆ '**ಖಾನ-ಈ-ಖಾನಾನ**' ಎಂಬ ಬಿರುದು ಇತ್ತು. ಇವನು ಪಾಸಿಪತದ ಯುದ್ಧದ ತರುವಾಯ ದಿಲ್ಲಿ, ಆಗ್ರಾ ಪಟ್ಟಣಗಳನ್ನು ವಶಮಾಡಿಕೊಂಡನು ಮತ್ತು ತಡವಾಡದೆ ಹೊರಟು **ಅಜಮೀರ, ಗ್ವಾಲೇರ, ಜೋನಪುರ**ಗಳನ್ನು ಗೆದ್ದುಕೊಂಡು ಆಫಘಾನರನ್ನು ಹತ್ತಿಕ್ಕಿದನು. ಮುಂದೆ ಇವನು ಮಾಳವ ಪ್ರಾಂತವನ್ನು ವಶಪಡಿಸಿಕೊಳ್ಳತಕ್ಕವನಿದ್ದನು. ಆದರೆ ಅಷ್ಟರಲ್ಲಿ ಸರದಾರರೆಲ್ಲರು ಅವನ ವಿರೋಧಿಗಳಾದರು. ಬಹಿರಾಮನು ಕ್ರೂರನೂ ಗರ್ವಿಷ್ಠನೂ ಇದ್ದದರಿಂದ ಎಲ್ಲರಿಗೂ ಬೇಡಾದನು.



ಬಹಿರಾಮ್ ಖಾನ

ಈ ಹೊತ್ತಿನಲ್ಲಿ ಅಕ್‌ಬರನು **ಮಹಾಮು ಅನಗಾ** ಎಂಬ ದಾಸಿಯ ಮಾತಿನಂತೆ ನಡೆಯುತ್ತಿದ್ದನು. ಆಕೆಯು ತನ್ನ ಮಗ **ಆದಮುಖಾನ**ನನ್ನು ಮಂತ್ರಿತನಕ್ಕೆ ತರುವ ವಿಚಾರದಿಂದ ಬಹಿರಾಮನ ವಿರುದ್ಧವಾಗಿ ಅಕ್‌ಬರನ ಮನಸ್ಸನ್ನು ಕೆಡಿಸಿದಳು. ಅಕ್‌ಬರನು ಉಪಕಾರ ಕರ್ತನಾದ ಬಹಿರಾಮಖಾನನನ್ನು ಕೆಲಸದಿಂದ ಬಿಡಿಸಿದನು! ಬಹಿರಾಮಖಾನನು ಮಕ್ಕಾ ಯಾತ್ರೆಗೆ ಹೊರಟು ಗುಜರಾಥದ ಕಡೆಗೆ ಸಾಗಿದನು. ಆದರೆ ನೆರವಿಗೆಂದು ಕಳುಹಲ್ಪಟ್ಟ ಜನರೇ ಬಹಿರಾಮಖಾನನನ್ನು ಕಾಡಹತ್ತಿದ್ದರಿಂದ ಅವನು ಬಂಡಾಯವನ್ನೆಬ್ಬಿಸಿದನು. ಆಗ ಅಕ್‌ಬರನ ಜನರು ಅವನನ್ನು ಹಿಡಿಯುತಂದರು. ಅಕ್‌ಬರನು ಅವನ ತಪ್ಪನ್ನು ಲಕ್ಷಿಸದೆ ಅವನಿಗೊಂದು ಅಧಿಕಾರವನ್ನು ಕೊಡಹೋದನು. ಆದರೆ ಇನ್ನು ಇಲ್ಲಿ ಇರುವದು ನಸ್ಕಂದಾಗದೆಂದು ತಿಳಿದು, ಬಹಿರಾಮನು ಮತ್ತೆ ಮಕ್ಕಾಯಾತ್ರೆಗೆ ಹೊರಟನು. ದಾರಿಯಲ್ಲಿ ಗುಜರಾಥದ ಪಾಟಣದಲ್ಲಿ ಇಳಿದು ಕೊಂಡಿರುವಾಗ ಅವನ ಕೊಲೆಯಾಯಿತು. ಬಹಿರಾಮನ ಮಗ **ಅಬದುಲ್ ರಹೀಮ**ನು ಮುಂದೆ ಅಕ್‌ಬರನಿಂದ ದೊಡ್ಡ ಅಧಿಕಾರವನ್ನು ಪಡೆದನು.

೪. **ಆದಮುಖಾನನನ್ನು ಶಿಕ್ಷಿಸಿದ್ದು** :— ಕ್ರಿ ಶ. ೧೫೬೨ರಲ್ಲಿ ಮಾಳ ವದ ಮೇಲೆ ಸಾಗಿಹೋದಾಗ ಈ ಆದಮುಖಾನನು ಅಲ್ಲಿಯ **ಬಾಝು ಬಹಾದ್ದರ** ಎಂಬ ಅಫಗಾನ ಸುಭೆದಾರನನ್ನು ಓಡಿಸಿ ಅವನ ಹೆಂಡತಿಯನ್ನು ಸೆರೆಹಿಡಿದನು. ಆಗ ಆಕೆಯು ಆದಮನ ಕಾಟವನ್ನು ತಪ್ಪಿಸಿಕೊಳ್ಳುವದಕ್ಕಾಗಿ ವಿಷಕುಡಿದು ಸತ್ತಳು ಈ ಸುದ್ದಿಯನ್ನು ಕೇಳಿ ಅಕ್‌ಬರನು ಅಲ್ಲಿಗೆ ಬಂದು ಬಾಝುಬಹಾದ್ದರ ನಿಗೆ ಅವನ ಪ್ರಾಂತವನ್ನು ತಿರುಗಿ ಕೊಟ್ಟು ಆದಮನ ಅಧಿಕಾರವನ್ನು ಕಸಿದು ಕೊಂಡು ಅವನನ್ನು ದಿಲ್ಲಿಗೆ ಒಯ್ದನು

ಆದಮನು ಸುಮ್ಮನಿರದೆ ಮಂತ್ರಿಯಾದ **ಷಮಸುದ್ದೀನ**ನನ್ನು ಅರಮನೆ ಯಲ್ಲಿಯೇ ಕೊಂದನು ಅಕ್‌ಬರನು ಆದಮನನ್ನು **ಎತ್ತರದ** ಮೇಲಿಂದ ನೂಕಿಸಿ ಕೊಲ್ಲಿಸಿದನು.

೫. **ಅಕ್‌ಬರನ ರಾಜ್ಯವಾಳುವ ಹಿಡತ** :— ಮಂತ್ರಿಯಾದ ಬಹಿ ರಾಮನಿಂದ ರಾಜ್ಯಾಧಿಕಾರವನ್ನು ಕಸಿದುಕೊಂಡ ಬಳಿಕ ಅಕ್‌ಬರನು ಕೇವಲ ಅಫಗಾನ ಸರದಾರರನ್ನು ನಂಬಿರಲಿಲ್ಲ. ಸವಿನುಡಿಯಿಂದ ರಜಪುತರನ್ನು

ಒಲಿಸಿಕೊಂಡು, ಅವರಿಗೆ ಮಹತ್ವದ ದೊಡ್ಡ ದೊಡ್ಡ ಅಧಿಕಾರಗಳನ್ನು ಕೊಟ್ಟನು. ಇದರಿಂದ ಅಕ್‌ಬರನ ಕೈಯೊಳಗಿನ ರಜಪುತ ಸರದಾರರು ಪರಾಕ್ರಮದಿಂದ ಇವನ ರಾಜ್ಯವನ್ನು ಹಬ್ಬಿಸಿದರು; ಅಫಗಾನ ಸರದಾರರ ಹೆದರಿಕೆಯನ್ನು ತಪ್ಪಿಸಿದರು; ಇಷ್ಟೇ ಅಲ್ಲ, ರಜಪುತರೊಡನೆ ಅಕ್‌ಬರನು ಯುದ್ಧ ಮಾಡುವಾಗಲೂ ಇವರು ವಿಶ್ವಾಸದಿಂದಲೇ ನಡೆದರು. ಇವನ ಸುವಿಚಾರದ ಆಳಿಕೆಯಲ್ಲಿ ಪ್ರಜೆಗಳು ಸುಖದಿಂದ ಇದ್ದರು.

೬. **ಅಕ್‌ಬರನ ರಾಜ್ಯವಿಸ್ತಾರ**:— ಅಕ್‌ಬರನು ಮೊದಲು ರಜಪುತ ಸ್ಥಾನವನ್ನು ಗೆಲ್ಲುವ ವಿಚಾರದಿಂದ **ಜಯಪುರ**ದ ಮೇಲೆ ಸಾಗಿದನು ಅಲ್ಲಿಯ ರಾಜನಾದ ಬಹಾರಮಲ್ಲನು ಅಕ್‌ಬರನ ಮಾಂಡಲಿಕನಾಗಿ ತನ್ನ ಮಗಳನ್ನು ಅವನಿಗೆ ಕೊಟ್ಟನು ಅಕ್‌ಬರನು ಇವನ ಮಗ **ಭಗವಾನದಾಸ**ನಿಗೆ ದೊಡ್ಡ ಅಧಿಕಾರವನ್ನು ಕೊಟ್ಟನು. ಬಳಿಕ ಅಕ್‌ಬರನು **ರತನಭೋರ, ಕಲಿಂಜರ** ಗಳನ್ನು ಗೆದ್ದುಕೊಂಡನು ಕ್ರಿ. ಶ. ೧೫೭೩ ರಲ್ಲಿ **ಜೋಧಪುರ**ದ ರಾಜನೂ ಅಕ್‌ಬರನಿಗೆ ಶರಣುಹೋಗಿ ತನ್ನ ತಂಗಿಯನ್ನು ಅವನಿಗೆ ಕೊಟ್ಟನು **ಚಿತ್ತೂರು** ರಜಪುತಸ್ಥಾನದಲ್ಲಿಯ ಮಹತ್ವದ ಸಂಸ್ಥಾನವು. ಅಲ್ಲಿಯ ಅರಸರು ಮಾತ್ರ ಅಕ್‌ಬರನಿಗೆ ಶರಣುಬರಲಿಲ್ಲ ಅಲ್ಲಿಯ ರಾಜನಾದ **ಉದಯಸಿಂಗ**ನು ಅಕ್‌ಬರನು ಸಾಗಿಬರುವ ಸುದ್ದಿಯನ್ನು ಕೇಳಿ ಅರವಲೀ ಗುಡ್ಡಕ್ಕೆ ಓಡಿ ಹೋದನು. **ಜಯಮಲ್ಲ**ನು ಮುಖ್ಯನಾಗಿ ಎಲ್ಲ ರಜಪುತರಿಂದ ಕೂಡಿಕೊಂಡು ಚಿತ್ತೂರನ್ನು ಕಾಯಹತ್ತಿದನು. ಅಕ್‌ಬರನ ಕಡೆಯ **ರಾಜಾ ತೋಡರಮಲ್ಲ** ಮತ್ತು **ಕಾಸೀಮಖಾನ**ರು ಅವನ ಮೇಲೆ ಸಾಗಿಬಂದರು. ಜಯಮಲ್ಲನು ಕೋಟೆಯ ಗೋಡೆಯ ಮೇಲೆ ಇರುವದನ್ನು ಕಂಡು, ಗುರಿಯಿಟ್ಟು ತುಬಾಕಿ ಹೊಡೆದು ಅವನನ್ನು ಕೊಂದರು. ಆಷ್ಟರಲ್ಲಿ ಸುರಂಗದ ಸಹಾಯದಿಂದ ಗೋಡೆಯು ಸೀಳಲು ರಜಪುತರು ನಿರಾಶರಾದರು. ಸ್ತ್ರೀಯರು **ಜೋಹರ** ಮಾಡಿದರು; ವೀರರು ಹೊರಬಿದ್ದು ಕಾದುತ್ತ ಮಡಿದರು. ಚಿತ್ತೂರು ಅಕ್‌ಬರನ ವಶವಾಯಿತು. ಈ ಯುದ್ಧದಲ್ಲಿ ಮೂವತ್ತು ಸಾವಿರ ರಜಪುತರು ಹತರಾದರು. ರಜಪುತರ ಈ ಸಾಹಸ-ನಿರ್ಧಾರಗಳನ್ನು ಕಂಡು ಅಕ್‌ಬರನು ದಿಗಿಲುಗೊಂಡನು.

ಚಿತ್ತೂರು ಮೊಗಲರ ಕೈಸೇರಿದರೂ ಉದಯಸಿಂಗನು ಅರವಲಿಯಲ್ಲಿ ಸ್ವತಂತ್ರನಾಗಿಯೇ ಇದ್ದನು. ರಜಪುತ ವೀರರು ಅವನನ್ನು ಕೂಡಿಕೊಂಡರು. ಚಿತ್ತೂರು ಕೈಬಿಟ್ಟ ಚಿಂತೆಯಿಂದ ಕ್ರಿ. ಶ ೧೫೭೨ರಲ್ಲಿ ಅವನು ಮರಣ ಹೊಂದಿದನು. ಬಳಿಕ ಉದಯಸಿಂಗನ ಶೂರನೂ ನಿಶ್ಚಯಿಯೂ ಆದ ಮಗ **ಪ್ರತಾಪಸಿಂಹನು ಉದಯಪುರ** ಎಂಬ ಪಟ್ಟಣವನ್ನು ನೆಲೆಸಿ, ಕಳೆದುಹೋಗಿದ್ದ ಸೀಮೆಗಳನ್ನು ಗೆಲ್ಲಹತ್ತಿದನು ಉದಯಪುರವು ಸ್ವತಂತ್ರ ರಜಪುತರ ಮೆಟ್ಟಾಯಿತು. ಅಕ್ಬರನು ಪ್ರತಾಪಸಿಂಹನನ್ನು ಸಾಮೋಪಚಾರದಿಂದ ಒಲಿಸಿಕೊಳ್ಳುವದಕ್ಕಾಗಿ ಮಾನಸಿಂಗನನ್ನು ಅವನ ಕಡೆಗೆ ಕಳುಹಿದನು. ಆದರೆ ಪ್ರತಾಪದು ಬಾದಷಾಹನಿಗೆ ಶರಣುಹೋಗಲಿಲ್ಲ. ಆದದದರಿಂದ ಅಕ್ಬರನು ದೊಡ್ಡ ದಂಡಿನೊಡನೆ **ಸಲೀಮ-ಮಾನಸಿಂಗರನ್ನು** ಪ್ರತಾಪಸಿಂಹನ ಮೇಲೆ ಕಳುಹಿದನು ಕ್ರಿ. ಶ **೧೫೭೬**ರಲ್ಲಿ **ಹಳದೀಘಾಟಿ**ನ ಬಳಿಯಲ್ಲಿ ಘೋರವಾದ ಸಂಗ್ರಾಮವಾಯಿತು ಪ್ರತಾಪಸಿಂಹನಿಗೆ ಹಲವು ಘಾಯಗಳಾದುದರಿಂದ ಅವನು **ಚಿತ್ತಕ** ಎಂಬ ತನ್ನ ಪ್ರೀತಿಯ ಕುದುರೆಯನ್ನೇರಿ ಅಲ್ಲಿಂದ ಜಾರಿದನು ಶತ್ರುಗಳು ಜೆನ್ನಟ್ಟಿದರೂ ಸಿಗಲಿಲ್ಲ. ಚಿತ್ತಕವು ಓಡಿ ಓಡಿ ದಣಿದು ಪ್ರಾಣಬಿಟ್ಟಿತು! ಪ್ರತಾಪಸಿಂಹನು ಈ ಅಪಜಯದಿಂದ ನೊಂದವನಾಗಿ 'ಚಿತ್ತೂರು ಕೈಸೇರುವ ತನಕ ವಿಲಾಸ ಸುಖವನ್ನು ಅನುಭವಿಸಲಿಕ್ಕಿಲ್ಲ. ರಾಜಚಿಹ್ನಗಳನ್ನು ಧರಿಸಲಿಕ್ಕಿಲ್ಲ' ಎಂದು ಪ್ರತಿಜ್ಞೆಮಾಡಿದನು. ಅಪರಿಮಿತವಾದ ಕಷ್ಟಗಳೊದಗಿದರೂ ಇವನು ಎದೆಗುಂದದೆ, ಸ್ವಾತಂತ್ರ್ಯವನ್ನೂ ಸ್ವಾಭಿಮಾನವನ್ನೂ ಕಾದುಕೊಂಡನು. ಪರಾಕ್ರಮದಿಂದ ಹೋರಾಡಿ ಚಿತ್ತೂರ, ಅಜಮೀರಗಳ ಹೊರತಾದ ತನ್ನ ಎಲ್ಲ ರಾಜ್ಯವನ್ನು ಮರಳಿ ವಶಪಡಿಸಿಕೊಂಡನು. ಕಡೆಗೆ ತನ್ನ ಸರದಾರರಿಂದ 'ಚಿತ್ತೂರನ್ನು ಗೆದ್ದುಕೊಳ್ಳುವೆವು' ಎಂಬ ವಚನ ತಕ್ಕೊಂಡು ಈ ವೀರಮಣಿಯು ಮರಣಹೊಂದಿದನು. ಇಂಥವರ ಕೀರ್ತಿಯು ಸೂರ್ಯ-



ಪ್ರತಾಪಸಿಂಹ

ಚಂದ್ರರಿರುವ ವರೆಗೂ ಅಳಿಯದು! ಉದಾರನಾದ ಅಕ್‌ಬರನು ಪ್ರತಾಪ ಸಿಂಹನ ಸ್ವಾತಂತ್ರ್ಯಪ್ರೇಮಕ್ಕೆ ತಲೆದೂಗಿದನು!!

ಅಕ್‌ಬರನು ಕ್ರಿ. ಶ. ೧೫೭೨-೭೩ರ ವರೆಗೆ ಗುಜರಾಥದ ಮೇಲೆ ಸಾಗಿ, ಅಲ್ಲಿಯ **ಮುಝಫರಷಾಹ**ನನ್ನು ಸೋಲಿಸಿ ನೆರೆಹಿಡಿದು **ಅಹಮದಾಬಾದ**ದಲ್ಲಿ ತನ್ನ ಸುಭೇದಾರನನ್ನು ನಿಯಮಿಸಿದನು. ಅಕ್‌ಬರನು ದಿಲ್ಲಿಗೆ ಹೋದಕೂಡಲೆ ಇತ್ತ ಗುಜರಾಥದಲ್ಲಿ ಮಿರ್ಝಾ ಎಂಬ ಜನರು ಬಂಡಾಯವನ್ನೆಬ್ಬಿಸಿದರು. ಕೂಡಲೆ ಅಕ್‌ಬರನು ಆರುನೂರು ಮೈಲುಗಳ ಅಂತರವನ್ನು ಹನ್ನೊಂದು ದಿವಸಗಳಲ್ಲಿ ಕ್ರಮಿಸಿ ಬಂದು, ಬಂಡಾಯವನ್ನು ಅಡಗಿಸಿದನು. ಬಳಿಕ ಅವನು ಸುರತಕ್ಕೆ ಬಂದು, ಪೋರ್ತುಗೀಜರೊಡನೆ ನ್ನೇಹದ ಒಪ್ಪಂದವನ್ನು ಮಾಡಿಕೊಂಡನು. ಸುರತದಲ್ಲಿಯೇ ಅವನು ಮೊದಲು ಸಮುದ್ರವನ್ನು ಕಂಡನು.

ಕ್ರಿ. ಶ. ೧೫೭೪-೭೬ ವರೆಗೆ **ರಾಜಾ ತೋಡರಮಲ್ಲನು** ಬಂಗಾಲದ ದಾವುದಖಾನನನ್ನು ಸೋಲಿಸಿ ಕೊಂದು **ಬಂಗಾಲ, ಬಿಹಾರ, ಓಡಿಸಾ** ಪ್ರಾಂತಗಳನ್ನು ಅಕ್‌ಬರನ ರಾಜ್ಯಕ್ಕೆ ಕೂಡಿಸಿದನು. ಕ್ರಿ. ಶ ೧೫೮೫-೮೭ರ ವರೆಗೆ **ಭಗವಾನದಾಸ-ಮಾನಸಿಂಗ**ರ ಸಾಹಸದಿಂದ **ಕಾಬೂಲ-ಕಾಶ್ಮೀರ**ಗಳು ಕೈವಶವಾದವು. ಕ್ರಿ ಶ. **೧೫೯೨**ರಲ್ಲಿ ಸಿಂಧವೂ ೧೫೯೫ರಲ್ಲಿ **ಬಲೂಚಿಸ್ತಾನ-ಕಂದಹಾರ**ಗಳೂ ಇವನ ಕೈಸೇರಿದವು

ಮರುವರ್ಷ ಎಂದರೆ ಕ್ರಿ. ಶ **೧೫೯೫**ರಲ್ಲಿ, **ಅಹಮ್ಮದನಗರ**ದಲ್ಲಿ ಪಟ್ಟದ ಸಂಬಂಧದ ಜಗಳಗಳು ನಡೆದ ಹೊತ್ತನ್ನು ನೋಡಿ ಅಕ್‌ಬರನು ತನ್ನ ಮಗ **ಮುರಾದ**ನನ್ನು ದಂಡಿನೊಡನೆ ಕಳುಹಿದನು. ಆದರೆ ಆಗ **ಹುಶೇನ ನಿಜಾಮುಷಾಹನ** ಮಗಳಾದ **ಚಾಂದಬೀಬಿ** ಎಂಬ ಚದುರೆಯು ಅಹಮ್ಮದನಗರವನ್ನು ಸಂರಕ್ಷಿಸುತ್ತಿದ್ದಳು. ಆಕೆಯ ಮುಂದೆ ಮುರಾದನ ಆಟ ನಡೆಯಲಿಲ್ಲ. ಆದದರಿಂದ ಅಕ್‌ಬರನು ತನ್ನ ನಂಬುಗೆಯ **ಅಬುಲ್ ಫಜಲ್**ನನ್ನು ಮುಂದೆ ಕಳುಹಿ, ಹಿಂದಿನಿಂದ ತಾನೂ ದಕ್ಷಿಣಕ್ಕೆ ಬಂದನು. ೫-೬ ವರ್ಷಗಳ ವರೆಗೆ ಶ್ರಮಬಟ್ಟರೂ ಅಹಮ್ಮದನಗರವು ಕೈವಶವಾಗಲಿಲ್ಲ. ಕ್ರಿ. ಶ. **೧೫೯೯**ರಲ್ಲಿ ಚಾಂದಬೀಬಿಯ ಕೊಲೆಯಾದ ಬಳಿಕ ಅಬುಲ್‌ಫಜಲನು ಅಹಮ್ಮದನಗರ

ವನ್ನು ತಕ್ಕೊಂಡನು. ಕ್ರಿ. ಶ. ೧೬೦೦. ಅಷ್ಟರಲ್ಲಿ ದಿಲ್ಲಿಯಲ್ಲಿ **ಸಲೀಮ**ನು ಬಂಡಾಯವನ್ನೆಬ್ಬಿಸಿದ ಸುದ್ದಿಯು ಬಂದದರಿಂದ ಅಕ್‌ಬರನು ಅತ್ತ ಹೊರಟು ಹೋದನು. **ವರ್ಹಾಡ, ಖಾನದೇಶ**ಗಳು ಮಾತ್ರ ಅಕ್‌ಬರನ ವಶವಾದವು; ಮತ್ತು **ವಿಜಾಪೂರ, ಗೋವಳಕೊಂಡ**ಗಳ ಅರಸರು ಇವನ ಮಾಂಡಲಿಕರಾದರು.

೭. **ಅಕ್‌ಬರನ ರಾಜ್ಯವ್ಯವಸ್ಥೆ**:— **(ಅ) ಅಧಿಕಾರಿಗಳು**— ಅಕ್‌ಬರನ ರಾಜ್ಯದಲ್ಲಿ ೧೫ * **ಸುಭೆ**ಗಳಿದ್ದವು. ಪ್ರತಿಯೊಂದು ಸುಭೆಯು ಕೆಲವು ಜಿಲ್ಲೆಗಳನ್ನೂ ಜಿಲ್ಲೆಯು ಕೆಲವು ಪರಗಣೆ ಅಥವಾ ಮಹಾಲುಗಳನ್ನೂ ಪರಗಣೆಯು ಕೆಲವು ಊರುಗಳನ್ನೂ ಒಳಗೊಂಡಿತ್ತು. **ಮುಖ್ಯ ಪ್ರಧಾನ**ನು ಆ ಆ ಖಾತೆಗಳ † **ಮುಖ್ಯಾಧಿಕಾರಿ**ಗಳ ವಿಚಾರದಿಂದಲೂ ಬಾದಷಾಹನ ಸಮ್ಮತಿಯಿಂದಲೂ ಎಲ್ಲ ಕಾರಭಾರವನ್ನೂ ಸುಭೆಗಳ ಮೇಲ್ವಿಚಾರಣೆಯ ಕೆಲಸವನ್ನೂ ಸಾಗಿಸುವನು. ಸುಭೆಗಳಲ್ಲಿಯೂ ಆ ಆ ಖಾತೆಗಳಿಗೆ ಮುಖ್ಯಾಧಿಕಾರಿಗಳಿದ್ದರು. ಅವರು ಸುಭೇದಾರನ ಸಹಾಯಕರಾಗಿದ್ದರು. ಅಕ್‌ಬರನು ಉಂಬಳಿಯ ಪದ್ಧತಿಯನ್ನು ಪೂರ್ಣವಾಗಿ ನಿಲ್ಲಿಸಿ, ಎಲ್ಲರಿಗೂ ಸಂಬಳವನ್ನೇ ಸಲ್ಲಿಸಹತ್ತಿದನು.


(ಆ) ನ್ಯಾಯಪದ್ಧತಿ:— ಇವನು ಪ್ರಜೆಗಳಿಗೆ ಯೋಗ್ಯವಾದ ನ್ಯಾಯ ಪೊರೆಯುವ ವ್ಯವಸ್ಥೆಯನ್ನು ಮಾಡಿದನು. ಮಹತ್ವದ ಪ್ರಕರಣಗಳ ನಿರ್ಣಯದ ಕೊನೆಯ ಅಧಿಕಾರವನ್ನು ತನ್ನ ಕಡೆಗೆ ಇಟ್ಟುಕೊಂಡಿದ್ದನು. ಮರಣದ ಶಿಕ್ಷೆಗೆ ಬಾದಷಾಹನ ಸಮ್ಮತಿಯು ಅವಶ್ಯವಾಗಿತ್ತು.

---

*ಅಕ್‌ಬರನ ಸುಭೆಗಳು— ೧. ದಿಲ್ಲಿ, ೨. ಆಗ್ರಾ, ೩. ಅಲಾಹಾಬಾದ, ೪. ಅಯೋಧ್ಯಾ, ೫ ಬಹಾರ, ೬. ಬಂಗಾಲ, ೭. ಅಜಮೀರ, ೮. ಮಾಳವ, ೯. ಅಹಮದಾಬಾದ, ೧೦. ಲಾಹೋರ, ೧೧. ಮುಲತಾನ, ೧೨. ಕಾಬೂಲ, ೧೩. ಖಾನದೇಶ, ೧೪. ವರ್ಹಾಡ, ೧೫. ಅಹಮದನಗರ.

†ಮುಖ್ಯ ಅಧಿಕಾರಿಗಳು— ೧. ಮುಖ್ಯ ಪ್ರಧಾನ, ೨. ಪಖೀರ ಇಲ್ಲವೆ ದಿವಾಣ (ಹಣದ ವ್ಯವಸ್ಥಾಪಕ), ೩ ಬಕ್ಷಿ (ಸಂಬಳ ಕೊಡುವವ), ೪. ಸದರ (ಧರ್ಮಾಧಿಕಾರಿ), ೫. ಕಾಝೀ (ನ್ಯಾಯಾಧೀಶ), ೬. ಕೊತವಾಲ (ಸಂರಕ್ಷಕ), ೭. ವಾಕನೀಸ (ಕಾಗದಪತ್ರಗಳ ವಿಚಾರಕ) ಇವರೆಲ್ಲರೂ ಸೈನ್ಯದ ಅಧಿಕಾರಿಗಳೂ ಇದ್ದರು.

(೩) ಸೈನ್ಯ ವ್ಯವಸ್ಥೆ:— ಅಕ್‌ಬರನ ಸೈನ್ಯವು ೪೫ ಸಾವಿರ ಕುದುರೆಯ ಸವಾರರಿಂದಲೂ ೫೦೦೦ ಆನೆಗಳಿಂದಲೂ ಕೂಡಿತ್ತು. ಕಾಲಾಳುಗಳ ಸಂಖ್ಯೆಯಂತೂ ಬಹಳ ದೊಡ್ಡದಿತ್ತು. ಮನಸಬದಾರರೆಂಬವರು ೧೦ ರಿಂದ



೧೦೦೦೦ ಕುದುರೆಗಳ ಸವಾರರ ಮೇಲಿನ ಅಧಿಕಾರಿಗಳಾಗಿದ್ದರು. ೫೪೦ ಸಾವಿರದ ಮೇಲಿನ ಮನಸಬದಾರಿಗಳು ಅರಸುಮನೆತನದವರಿಗೂ ಒಳ್ಳೆಯ ನಂಬುಗೆಯ ಸರದಾರರಿಗೂ ದೊರೆಯುತ್ತಿತ್ತು. ಹೆಚ್ಚಿನ ಕೆಲಸ ಮಾಡಿದ ಮನಸಬದಾರರಿಗೆ **ಉಮರಾವ, ಖಾನಈಖಾನಾನ** ಮುಂತಾದ ಪದವಿಗಳು

ಅಕ್ಬರನ ಓಲಗದ ನವರತ್ನಗಳು

ಕೊಡಲ್ಪಡುತ್ತಿದ್ದವು. ಈ ಸಾಮಾನ್ಯ ಸೈನ್ಯವಲ್ಲದೆ, **ದಖಿಲಿ** ಮತ್ತು **ಆಹಾಡಿ** ಎಂಬ ಬೇರೆ ಎರಡು ಸೈನ್ಯಗಳಿದ್ದವು. ಮೊದಲಿನವನ್ನು ಅಕ್‌ಬರನು ಸ್ವಂತ ಸಿದ್ಧಪಡಿಸಿ, ಮೂರಿದ ಪ್ರಸಂಗಗಳಿಗಾಗಿ ಕಾದಿದ್ದನು. ಎರಡನೆಯದರಲ್ಲಿ ಪ್ರತಿಷ್ಠಿತರಾದ ನಾಗರಿಕರೇ ಸೈನಿಕರಾಗಿದ್ದರು. ಪ್ರಸಂಗದಲ್ಲಿ ಅದು ರಾಜ್ಯದ ರಕ್ಷಣೆಗೆ ನೆರವಾಗುತ್ತಿತ್ತು.

(ಉ) ಕಂದಾಯ ಪದ್ಧತಿ:— ಹಿಂದಕ್ಕೆ **ಷೇರಷಾಹನ** ಕೈಯಲ್ಲಿ ಕೆಲಸ ಮಾಡಿದ ರಾಜಾ ತೋಡರಮಲ್ಲನು ಕಂದಾಯದ ಪದ್ಧತಿಯನ್ನು ಸುಧಾರಿಸಿದನು. ಇವನು ಎಲ್ಲ ಭೂಮಿಗಳನ್ನು ಅಳೆದು ಅವುಗಳಿಗೆ ಮೇರೆಗಳನ್ನು ಹಾಕಿಸಿದನು. ಮತ್ತು ಭೂಮಿಯ ಕಸುವು, ನೀರಿನ ಅನುಕೂಲತೆ ಇವುಗಳನ್ನು ಲಕ್ಷಿಸಿ, ತಕ್ಕ ಪ್ರಮಾಣದಲ್ಲಿ ಕಂದಾಯವನ್ನು ಗೊತ್ತುಪಡಿಸಿದನು. ನಿವಳ ಉತ್ಪನ್ನದ ಸುಮಾರು ಮೂರರಲ್ಲೊಂದು ಪಾಲು ಸರಕಾರಕ್ಕೆ ಸಲ್ಲುತ್ತಿತ್ತು. ರೈತರು ಅನುಕೂಲವಿದ್ದಂತೆ ಹಣವನ್ನಾಗಲಿ ಕಾಳುಗಳನ್ನಾಗಲಿ ಕೊಡಬಹುದಾಗಿತ್ತು. ಬೀಳು ಭೂಮಿಗಳನ್ನು ಸಾಗುಮಾಡುವದಕ್ಕಾಗಿ ರೈತರಿಗೆ ಸಾಲ ಸಿಗುವ ವ್ಯವಸ್ಥೆಯಿತ್ತು.

೮. ಅಕ್‌ಬರನ ಕಾಲದ ದೇಶಸ್ಥಿತಿ:— ಆಗ ಹಿಂದುಸ್ಥಾನದ ಜನ ಸಂಖ್ಯೆಯು ೧೦ ಕೋಟಿ ಎಂದರೆ, ಈಗಿನ ಮೂರನೆಯ ಪಾಲಿನಷ್ಟು ಇತ್ತು. ಅಕ್‌ಬರನ ೫೦ ವರ್ಷದ ಆಳಿಕೆಯಲ್ಲಿ ಮೂರು ಸರತಿ ಬರಬಿದ್ದಿತ್ತು. ಕಾಳು ಕಡಿಗಳು ಬಹಳ ಅಗ್ಗವಾಗಿದ್ದವು. ಕಾಶ್ಮೀರದ ಶಾಲುಗಳೂ, ಆಗ್ರಾದ ರತ್ನ ಗಂಬಳಿಗಳೂ, ಢಾಕಾದ ಮಲಮಲವೂ ಹೆಸರಾಗಿದ್ದವು. ದೇಶದಲ್ಲಿ ಶಾಂತತೆಯು ನೆಲಿಸಿತ್ತು. ವ್ಯಾಪಾರ, ಉದ್ಯೋಗಗಳು ಚೆನ್ನಾಗಿ ನಡೆದಿದ್ದವು

೯. ಅಕ್‌ಬರನು ಮಾಡಿದ ಸುಧಾರಣೆಗಳು:— **ಸತಿ** ಹೋಗುವ ಪದ್ಧತಿಯನ್ನು ಇವನು ಕಾಯದೆಯಿಂದ ಪ್ರತಿಬಂಧಿಸಿದನು. ಒತ್ತಾಯದಿಂದ ಲಗ್ನವಾಗುವದು ಅನ್ಯಾಯವೆಂದು ಗೊತ್ತುಮಾಡಿದನು. ಜಝಿಯಾ ಕರವನ್ನೂ ಯಾತ್ರೆಗಳ ಮೇಲಿನ ತಲೆಪಟ್ಟಿಯನ್ನೂ ತೆಗೆದುಕೊಳ್ಳುವದನ್ನು ನಿಲ್ಲಿಸಿದನು. ಸಿಕ್ರಿಯಲ್ಲಿ ಭವ್ಯವೂ ಸುಂದರವೂ ಆದ ಹಲವು ಕಟ್ಟಡಗಳನ್ನೂ ತನ್ನ ಗುರುವಾದ **ಸಲೀಮುಚಿಷ್ತಿ**ಯ ಗೋರಿಯನ್ನೂ ಕಟ್ಟಿಸಿದನು. ಹೆಸರಾದ ಚಿತ್ರಕಾರ

ರಿಂದ ಈ ಕಟ್ಟಡಗಳ ಮೇಲೆ ಉತ್ತಮವಾದ ಚಿತ್ರಗಳನ್ನು ಬರೆಯಿಸಿದನು. ಕೆಂಪು ಸಂಗಮರವರಿ ಕಲ್ಲುಗಳಿಂದಲೆ ಕಟ್ಟಿದ ಈ ಕಟ್ಟಡಗಳಿಂದಲೂ ಚಿತ್ರ ಗಳಿಂದಲೂ ಸಿಕ್ರೀ ಪಟ್ಟಣಕ್ಕೆ ಆ ಕಾಲದ ಶಿಲ್ಪವಿದ್ಯೆ ಚಿತ್ರಕಲೆಗಳ ಪ್ರದರ್ಶನ ಶಾಲೆಯ ಸೊಬಗು ಉಂಟಾಗಿತ್ತು. ಕ್ರಿ ಶ. ೧೫೭೦ ರಿಂದ ೧೬ ವರ್ಷ ಅಕ್‌ಬರನು ಸಿಕ್ರಿಯಲ್ಲಿಯೆ ಇದ್ದನು.

೧೦ ಅಕ್‌ಬರನ ಧಾರ್ಮಿಕ ವಿಚಾರ:— ಶೇಖ ಮುಬಾರಕ ಎಂಬ ಮೌಲವಿಯ ಮಗನಾದ **ಅಬುಲ್ ಫಜಲನ** ಸಹಾಯದಿಂದ ಅಕ್‌ಬರನ ಮನಸ್ಸು ಧಾರ್ಮಿಕ ವಿಚಾರದ ಕಡೆಗೆ ಒಲೆಯಿತು ಸಿಕ್ರಿಯಲ್ಲಿ ಧರ್ಮ ಚರ್ಚೆ ಗಾಗಿಯೆ ಒಂದು ಮಂದಿರವನ್ನು ಕಟ್ಟಿಸಿ, ಅಲ್ಲಿ ಪ್ರತಿ ಗುರುವಾರ ರಾತ್ರಿ ಧರ್ಮ ಚರ್ಚೆಯನ್ನು ನಡೆಯಿಸಿ, ಅಕ್‌ಬರನು ಅದನ್ನು ಕೇಳುತ್ತಿದ್ದನು. ಅಬುಲ್ ಫಜಲನು ನಡುನಡುವೆ ಪ್ರಶ್ನೆಗಳನ್ನು ಮಾಡುತ್ತಿದ್ದನು. ಹೀಗೆ ವಾದವಿವಾದ ಗಳು ನಡೆದಿರುವಾಗ ಎಷ್ಟೋ ಸಾರೆ ಚರ್ಚಕರಲ್ಲಿ ಜಗಳಗಳುಂಟಾಗುತ್ತಿದ್ದವು. ಮುಂದೆ ಅಕ್‌ಬರನು ಧರ್ಮ ಸಂಬಂಧದ ಮತಭೇದವಾದಾಗ ನಿರ್ಣಯ ಕೊಡುವ ಅಧಿಕಾರವು ತನಗುಂಟೆಂದು ಪ್ರಸಿದ್ಧಿಸಿ ಒತ್ತಾಯದಿಂದ ಎಷ್ಟೋ ಮೌಲವಿಗಳ ಒಪ್ಪಿಗೆಯನ್ನು ಪಡೆದನು ಮತ್ತು ಮುಸಲ್ಮಾನರು ಒಬ್ಬರಿ ಗೊಬ್ಬರು ಬೆಟ್ಟಿಯಾದಾಗ **'ಸಲಾಮ್'** ಎನ್ನುವದಕ್ಕೆ ಪ್ರತಿಯಾಗಿ †'ಅಲ್ಲಾಹು ಅಕ್‌ಬರ' ಎಂದೆನ್ನಬೇಕೆಂದು ಗೊತ್ತು ಪಡಿಸಿದನು.

ಅಕ್‌ಬರನು ಹೀಗೆ ಅಧಿಕಾರ ಮೂರಿ ಧರ್ಮದಲ್ಲಿ ಕೈಹಾಕಹತ್ತಿದ್ದು ಮುಸಲ್ಮಾನರಿಗೆ ಸರಿಬರಲಿಲ್ಲ ಅವರು ಇವನನ್ನು ದ್ವೇಷಿಸಹತ್ತಿದರು ಇವನ ವಿರುದ್ಧವಾಗಿ **ಕಾಬುಲ, ಬಂಗಾಲ**ಗಳಲ್ಲಿ ಬಂಡಾಯಗಳೆದ್ದವು. ಆದರೆ ಅಕ್‌ ಬರನು ಅನುಮಾನಿಸದೆ ಕಠೋರತನದಿಂದ ಅದನ್ನು ಅಡಗಿಸಿದನು.

ಬಳಿಕ ಅಕ್‌ಬರನು ಬೇರೆ ಬೇರೆ ಧರ್ಮಗಳ ಜ್ಞಾನಮಾಡಿಕೊಳ್ಳುವದ ಕ್ಕಾಗಿ ಆ ಆಧರ್ಮಗಳ ಪ್ರಮುಖರನ್ನು ಬರಮಾಡಿಕೊಂಡನು. ಪಾರ್ಸಿಗಳ ಸೂರ್ಯನ ಪೂಜೆಯನ್ನು ಇವನು ಮೆಚ್ಚಿ, ತುಂಬಿದ ಸಭೆಯಲ್ಲಿ ಸೂರ್ಯನನ್ನು

---

‡'ಅಲ್ಲಾವು ಅಕ್‌ಬರ' ಎಂಬದರ ಅರ್ಥವು ದೇವರು ಸಮರ್ಥನು; ಅಥವಾ ಅಕ್‌ಬರನು ದೇವರು ಎಂದು ಎರಡು ವಿಧವಾಗಿದೆ.

ನಮಸ್ಕರಿಸಹತ್ತಿದನು. ಮುಂದೆ ಹಿಂದು ಧರ್ಮವು ಇವನಿಗೆ ರುಚಿಸಿ, ಅದರಂತೆ ನಡೆಯಲಾರಂಭಿಸಿದನು. ಹಣೆಗೆ ಗಂಧವನ್ನು ಹಚ್ಚಿಕೊಂಡು ಓಲಗಕ್ಕೆ ಬರಹತ್ತಿದನು; ಗೋವಧೆಗೆ ಪ್ರತಿಬಂಧ ಮಾಡಿದನು. ಕ್ರಿ. ಶ. ೧೫೮೨ ರಿಂದಂತು ಇವನು ಮುಸಲ್ಮಾನೀ ಧರ್ಮವನ್ನು ತಿರಸ್ಕರಿಸಹತ್ತಿ ಆ ಧರ್ಮದ ಮೇಲೆ ಅನೇಕ ನಿರ್ಬಂಧಗಳನ್ನೂ ಹಾಕಿದನು.

ಮಹತ್ವಾಕಾಂಕ್ಷಿಯಾದ ಇವನಿಗೆ ರಾಜ್ಯಾಧಿಕಾರಕ್ಕೆ ಬೆಂಬಲವಾಗಿ ಧರ್ಮಾಧಿಕಾರವೊಂದು ಬೇಕಾಗಿತ್ತು. ಇವನು ಎಲ್ಲ ಧರ್ಮಗಳಲ್ಲಿಯ ತನ್ನ ಮನಸ್ಸಿಗೆ ಬಂದ ಉತ್ತಮವಾದ ತತ್ವಗಳನ್ನು ಸಂಗ್ರಹಿಸಿ, **ದೀನೆ–ಇಲಾಹಿ** ಎಂಬ ಹೊಸದೊಂದು ಧರ್ಮವನ್ನು ಸ್ಥಾಪಿಸಿದನು. **ಅಬುಲ್ ಫಜಲ**ನು ಈ ಧರ್ಮದ ಮುಖ್ಯಾಧಿಕಾರಿಯಾಗಿದ್ದನು. ಆದರೆ ಈ ಧರ್ಮದ ಪ್ರಸಾರವು ವಿಶೇಷವಾಗಿ ಆಗಲಿಲ್ಲ. ಅಕ್‌ಬರನು **ಗೌತಮಬುದ್ಧ**ನಂತೆ ಮನೋವಿಕಾರಗಳನ್ನು ಗೆದ್ದು, ತೊರೆದು, ರಾಜ-ವೈಭವಗಳನ್ನು ಬಿಸುಟೆ ಜೀವದ ಪರವೆಯಿಲ್ಲದೆ ಧರ್ಮಕ್ಕಾಗಿ ತಳಮಳಿಸುವವನು ಆಗಿರಲಿಲ್ಲ. ಆದದರಿಂದ ಇವನ ಧರ್ಮವು ಇವನೊಡನೆಯೇ ಅಡಗಿಹೋಯಿತು.

೧೧. **ಸಲೀಮನ ಬಂಡಾಯ ಮತ್ತು ಅಕ್‌ಬರನ ಮರಣ**– ಅಕ್‌ಬರನಿಗೆ **ಸಲೀಮ, ದಾನಿಯಾಲ** ಮತ್ತು **ಮುರಾದ** ಎಂಬ ಮೂವರು ಮಕ್ಕಳಿದ್ದರು. ಇವರು ಶೂರರೂ ಚತುರರೂ ಉದಾರರೂ ಆಗಿದ್ದರು; ಆದರೆ ಕುಡಿಯುವ ವ್ಯಸನವೊಂದು ಎಲ್ಲರಿಗೂ ಇತ್ತು. ಕ್ರಿ. ಶ. ೧೫೯೯ರಲ್ಲಿ ಮುರಾದನು ಸತ್ತನು. ಅಕ್‌ಬರನು ದಾನಿಯಾಲನನ್ನು ವಿಶೇಷವಾಗಿ ಪ್ರೀತಿಸುತ್ತಿದ್ದರಿಂದ ಸಲೀಮನಿಗೆ 'ತಂದೆಯ ತರುವಾಯ ತನಗೆ ರಾಜ್ಯವು ದೊರೆಯಲಿಕ್ಕಿಲ್ಲ' ಎಂಬ ಸಂಶಯವು ತಟ್ಟಿತು. ಅಕ್‌ಬರನು ದಕ್ಷಿಣ ಹಿಂದುಸ್ಥಾನದ ಯುದ್ಧದಲ್ಲಿ ತೊಡಗಿರುವಾಗ ಸಲೀಮನು ಅಲಹಾಬಾದಕ್ಕೆ ಬಂದು, ಅಲ್ಲಿಯ ಬೊಕ್ಕಸವನ್ನು ಕೈಸೇರಿಸಿಕೊಂಡು, ರಾಜಚಿನ್ಹಗಳನ್ನು ಧರಿಸಿ ಬಾದಷಾಹನಾದೆನೆಂದು ಪ್ರಸಿದ್ಧಿಸಿದನು. ಆಗ ಅಕ್‌ಬರನು ಆಗ್ರಾ ಪಟ್ಟಣಕ್ಕೆ ಬಂದು ಸಲೀಮನಿಗೆ ತಿಳಿಹೇಳಿದರೂ ಅವನು ಕೇಳಲಿಲ್ಲ. ಅಕ್‌ಬರನು ನಿರುಪಾಯನಾಗಿ ಅಬುಲ್‌ಫಜಲನನ್ನು ಸಲೀಮನ ಮೇಲೆ ಕಳುಹಿದನು. ಸಲೀಮನು **ವೀರಸಿಂಗ ಬುಂದೇಲ** ಎಂಬವನ

ಸಹಾಯದಿಂದ ಅಬುಲ್‌ಫಜಲನನ್ನು ಕೊಲ್ಲಿಸಿದನು; ಕ್ರಿ. ಶ. **೧೬೦೨.** ಜೀವದ ಗೆಳೆಯನಾಗಿದ್ದ ಅಬುಲ್‌ಫಜಲನ ಮರಣದಿಂದ ಅಕ್‌ಬರನಿಗೆ ಅತಿ ದುಃಖವಾಯಿತು. ಅವನಿಗೆ ಬದುಕಿರುವದು ಸಾಕೆನಿಸಿತು. ಕ್ರಿ. ಶ. ೧೬೦೪ ರಲ್ಲಿ ದಾನಿಯಾಲನೂ ಸತ್ತನು ಪುತ್ರ-ಮಿತ್ರರ ವಿಯೋಗದಿಂದಲೂ ಸಲೀಮನ ವರ್ತನದಿಂದಲೂ ಉಂಟಾದ ಚಿಂತೆಯು ಅಕ್‌ಬರನನ್ನು ನೆಲಹಿಡಿಸಿತು. ಕಡೆಗೆ ಸಲೀಮನನ್ನು ಕರೆಯಿಸಿ, ಅವನಿಗೆ ನಾಲ್ಕು ಹಿತದ ಮಾತುಗಳನ್ನು ಹೇಳಿ, ಈ ಜಗದ್ವಿಖ್ಯಾತನಾದ ಅಕ್‌ಬರ ಬಾದಷಾಹನು ಕ್ರಿ. ಶ. **೧೬೦೫** ರಲ್ಲಿ ಮರಣಹೊಂದಿದನು.

೧೨. ಅಕ್‌ಬರನ ಯೋಗ್ಯತೆ:— ಆಶೋಕನಂತೆ, ದೊಡ್ಡ ಸಾಮ್ರಾಜ್ಯವನ್ನು ಗಳಿಸಿ ವೈಭವದಿಂದಲೂ ಪ್ರಜಾಹಿತವೃಷ್ಟಿಯಿಂದಲೂ ಅಕ್‌ಬರನು ಆಳಿದನು. ಇವನ ರಾಜ್ಯವಿಸ್ತಾರವು ಇವನ ಪರಾಕ್ರಮವನ್ನೂ, ರಾಜ್ಯವ್ಯವಸ್ಥೆಯು ಇವನ ಬುದ್ಧಿಚಾತುರ್ಯವನ್ನೂ, ರಾಜ್ಯವಾಳುವ ದೃಷ್ಟಿಯು ಇವನ ಮುತ್ಸದ್ಧಿತನವನ್ನೂ ವ್ಯಕ್ತಪಡಿಸುವದು. ಇವನ ಮುಖಚರ್ಯೆಯು ಎರಡನೆಯವರ ಮನಸ್ಸನ್ನು ಎಳೆದುಕೊಳ್ಳುವಂತಹದಿತ್ತು. ಇವನು ಹುರಿಕಟ್ಟಿನ ಮೈಯವನೂ ಬೇಸರವಿಲ್ಲದೆ ದುಡಿಯುವವನೂ ಆಗಿದ್ದನು. ಒಂದೇ ಹೊತ್ತು ಊಟ ಮಾಡುವನು; ಸ್ವಲ್ಪ ನಿದ್ದೆಯು ಇವನಿಗೆ ಸಾಕಾಗಿತ್ತು. ಜೇಟಿಯಾಡುವದು ಚಿತ್ರ ಬರೆಯುವದು ಇವು ಇವನ ಪ್ರೀತಿಯ ವಿಷಯಗಳು. ಪ್ರತಿಯೊಂದು ಕೆಲಸದಲ್ಲಿ ಮನಸ್ಸು ಹಾಕಿ, ಅದರಲ್ಲಿ ಉಂಟಾಗುವ ತೊಂದರೆಗಳನ್ನು ಉಪಾಯದಿಂದ ನೀಗುವನು. ಯುದ್ಧ ವಿದ್ಯೆಯಲ್ಲಿ ಬಲ್ಲಿದನಾಗಿದ್ದನು; ಗುರಿಹೊಡೆಯುವ ಜಾಣ್ಮೆಯಿಂದಲೆ ಎಷ್ಟೋ ಯುದ್ಧಗಳಲ್ಲಿ ಸಹಜವಾಗಿ ಜಯಹೊಂದಿದನು. ಗುಣಿಜನರನ್ನು ಕರೆತರಿಸಿ ತನ್ನ ಆಶ್ರಯದಲ್ಲಿಟ್ಟುಕೊಂಡನು. ವೈರಿಗಳ ದೊಡ್ಡ ಗುಣಗಳನ್ನು ಸಹ ಹೊಗಳುವಂತಹ ಸರಳ ಮನಸ್ಸು ಇವನದಿತ್ತು. ಧರ್ಮ ಸಂಬಂಧದ ಜನರಲ್ಲಿದ್ದ ತಪ್ಪು ತಿಳುವಳಿಕೆಯನ್ನು ಇಲ್ಲವಂತೆ ಮಾಡಿ, ಮೇಲಾದ 'ಪರಧರ್ಮಸಹಿಷ್ಣು' ಎನಿಸಿಕೊಂಡನು. ಪ್ರಜಾಹಿತದ ಕಾರ್ಯಗಳನ್ನು ಮಾಡುವಾಗ ಹಣದ ತೊಂದರೆ, ಜನರ ವಿರೋಧ ಮುಂತಾದ ನೆವಗಳನ್ನು ಮುಂದೆ ಮಾಡಲಿಲ್ಲ; ಬಂದ ತೊಂದರೆಗಳನ್ನು ಧೈರ್ಯದಿಂದ ನೀಗಿದನು. ಇವನ ಹೊಸ ಧರ್ಮವು ಅಡಗಿ-

ಹೋದರೂ ಸತತವಾಗಿ ೨೫ ವರ್ಷಗಳ ವರೆಗೆ ಮಾಡಿದ ಧರ್ಮಚರ್ಚೆಯಿಂದ ಹಿಂದು-ಮುಸಲ್ಮಾನರಲ್ಲಿಯ ದ್ವೇಷಬುದ್ಧಿಯು ಕಡಿಮೆಯಾಗಲು ಪರಸ್ಪರರು ವಿಶ್ವಾಸದಿಂದ ಇರಹತ್ತಿದರು. ಅಕ್ಬರನ ರಾಜ್ಯದಂತಹ, **ಸಂಪತ್ತು--ವಿದ್ಯೆ-ಸುಧಾರಣೆ**ಗಳಿಂದ ಬಲಗೊಂಡ ರಾಜ್ಯವು ಆ ಕಾಲದಲ್ಲಿ ಇನ್ನಾವುದೂ ಇರಲಿಲ್ಲ! ಇಂಗ್ಲಂಡದ ಪ್ರಸಿದ್ಧ ರಾಣಿಯಾದ **ಎಲಿಜಾಬೇಥಳು** ಇದೇ ಕಾಲದಲ್ಲಿ ಪ್ರಜೆಗಳಿಗೆ ಹಿತವಾಗುವಂತೆ ಆಳಿದಳು **ಬಹಿರಾಮಖಾನ, ರಾಜಾ ತೋಡರಮಲ್ಲ, ಬೀರಬಲ, ಅಬುಲ್ ಫಜಲ, ಫೈಜಿ, ರಾಜಾ ಮಾನ ಸಿಂಗ, ತಾನಸೇನ, ಮುಲ್ಲಾ ದುಸ್ಯಾಜಾ** ಮತ್ತು **ಹಕೀಮು ಹುಮಾನ** ಇವರು ತಮ್ಮ ತಮ್ಮ ಗುಣಗಳಿಂದ ಪ್ರಸಿದ್ಧಿಯನ್ನೂ ಬಾದಷಾಹನ ಪ್ರೀತಿಯನ್ನೂ ಪಡೆದು '**ಓಲಗದ ನವರತ್ನ**'ಗಳು ಎನಿಸಿಕೊಂಡರು. (೯೩ನೆಯ ಪುಟದಲ್ಲಿಯ ಚಿತ್ರವನ್ನು ನೋಡಿರಿ.)

ಇವರಲ್ಲಿ, ಬಹಿರಾಮಖಾನನು ರಾಜ್ಯಸ್ಥಾಪನೆಗೂ ತೋಡರಮಲ್ಲ, ಮಾನಸಿಂಗ, ಅಬುಲ್ ಫಜಲ್, ಬೀರಬಲ ಇವರು ರಾಜ್ಯವನ್ನು ವಿಸ್ತರಿಸುವದಕ್ಕೂ ಅಕ್ಬರನಿಗೆ ನೆರವಾದರು. ಫೈಜಿಯೂ ಅಬುಲ್‌ಫಜಲನೂ ವಿದ್ವಾಂಸರಾಗಿ ಅನೇಕ ಗ್ರಂಥಗಳನ್ನು ಬರೆದರು; '**ಆಯಿನ್-ಈ-ಅಕ್ಬರಿ**' ಎಂಬದು ಅಬುಲ್‌ಫಜಲನು ಬರೆದ ಗ್ರಂಥವು; ಫೈಜಿಯು ಒಳ್ಳೆಯ ವಿರಕ್ತನಾಗಿದ್ದನು. ಬೀರಬಲನು ಅತಿ ಚತುರನಾಗಿದ್ದು ಧರ್ಮಕಾರ್ಯದಲ್ಲಿ ಅಕ್ಬರನಿಗೆ ನೆರವಾಗುತ್ತಿದ್ದನು. ತಾನಸೇನನು ಹೆಸರಾದ ಗಾಯಕನು. ತಾನಸೇನನಂತಹ ಗಾಯಕನು ಒಂದು ಸಾವಿರ ವರ್ಷದಿಂದೀಚೆಯಲ್ಲಿ ಆಗಿರಲಿಲ್ಲ' ಎಂದು ಆಗಿನ ಜನರ ಮತವಿತ್ತು.

೧೫ನೆಯ ಪಾಠ

ಜಹಾಂಗೀರ (ಕ್ರಿ ಶ ೧೬೦೭)

೧. ರಾಜ್ಯಾರೋಹಣ:— ಅಕ್ಬರನ ಮರಣದ ತರುವಾಯ ಸಲೀಮನು ಸರದಾರರ ಅಪೇಕ್ಷೆಯಂತೆ ನಡೆಯಲೊಪ್ಪಿ, ಅವರ ಸಹಾಯದಿಂದ

'ಜಹಾಂಗೀರ' ಎಂದರೆ ಜಗತ್ತನ್ನು ಗೆಲ್ಲುವವ, ಎಂಬ ಹೆಸರಿನಿಂದ ಪಟ್ಟಕ್ಕೆ ಕುಳಿತನು. ಇವನು ಪರಾಕ್ರಮಿಯಾಗಿದ್ದನು; ಆದರೆ ಕುಡಿತದ ಚಟವು ಇವನ ತೇಜವನ್ನು ಅಡಗಿಸಿತು. ತಂದೆಯ ರಾಜ್ಯಪದ್ಧತಿಯನ್ನು ಹಾಗೆಯೆ ಸಾಗಿಸಿದ್ದರಿಂದ ಕೆಲಕಾಲ ಶಾಂತತೆಯಿಂದ ಕಾರಭಾರವು ನಡೆಯಿತು. ಅಷ್ಟುಕಾಲದಲ್ಲಿ ಜನರ ಹಿತದ ಎಷ್ಟೋ ಕೆಲಸಗಳನ್ನು ಮಾಡಿದನು.



ಜಹಾಂಗೀರ

೨. ಖುಸ್ರುವನ್ನು ಶಿಕ್ಷಿಸಿದ್ದು :— ಜಹಾಂಗೀರನ ಹಿರಿಯ ಮಗನಾದ **ಖುಸ್ರುವು** ಅಕ್‌ಬರನಂತೆ ಉದಾರನೂ ಪರಧರ್ಮಸಹಿಷ್ಣುವೂ ಆಗಿದ್ದದರಿಂದ ಮುಸ್ಲಿಮನಿಯಾದ ಸಲೀಮನನ್ನು ಬಿಟ್ಟು, ಇವನನ್ನೇ ಪಟ್ಟಕ್ಕೆ ಕುಳ್ಳಿರಿಸಬೇಕೆಂದು ಬಹುಜನರ ಬಯಕೆಯಿತ್ತು. ಇದರೆ ಹೀಗೆ ಮಾಡಿದಲ್ಲಿ, ಸಲೀಮನು ಸುಸ್ಮುನಿರಲಾರನೆಂದು ತಿಳಿದು, ಅಕ್‌ಬರನು ಉಪಾಯಗಾಣದೆ ಸಲೀಮನೇ ಅರಸನಾಗಬೇಕೆಂದು ಹೇಳಿದ್ದನು. ಅಕ್‌ಬರನ ಮರಣದ ತರುವಾಯ ಇವನ ಸೇನಾಪತಿಯಾದ **ಅಜೀಜ್ ಖಾನೆ**ನೂ ಖುಸ್ರುವಿನ ಸೋದರಮಾವನಾದ ಮಾನಸಿಂಗನೂ ಲೋಕಪ್ರಿಯನಾದ ಖುಸ್ರುವನ್ನು ಪಟ್ಟಕ್ಕೆ ತರಲು ಪ್ರಯತ್ನಿಸಿದರು. ಆದರೆ ಕೆಲಸವು ಕಡೆಗಾಣದೆ, ಉಳಿದ ಸರದಾರರ ಬೆಂಬಲದಿಂದ ಸಲೀಮನೇ ರಾಜ್ಯವಾಳಹತ್ತಿದನು.

ಬಳಿಕ ಖುಸ್ರುವು, ತಂದೆಯು ತನ್ನನ್ನು ಶಿಕ್ಷಿಸಬಹುದೆಂದು ತಿಳಿದು ಪಂಜಾಬದ ಕಡೆಗೆ ಹೋದನು. ಎಷ್ಟೋ ಜನರು ಅವನ ಬೆನ್ನಕಟ್ಟಿದರು. ಜಹಾಂಗೀರನ ಕಡೆಯವರು, ಚಿನಾಬನನ್ನು ದಾಟುವಾಗ ಅವನನ್ನು ಹಿಡಿದು ತಂದರು. ಜಹಾಂಗೀರನು ಮಗನ ಸಹಾಯಕರನ್ನು ಪರಿಪರಿಯಿಂದ ಗಾಯಗೊಳಿಸಿ, ಆ ದುಸ್ಥಿತಿಯನ್ನು ಮಗನಿಂದ ನೋಡಿಸಿದನು. ಅವರೆಲ್ಲರು ತಳಮಳಿಸಿ

ಸತ್ತುಹೋದರು! ಕಡೆಗೆ ತಂದೆಯು ಖುಸ್ರುವಿನ ಕಣ್ಣುಗಳನ್ನು ಕೀಳಿಸಿ ಅವನನ್ನು ತನ್ನ ತಿನೆಯ ಮಗನಾದ **ಖುರ್ರಮನ** ವಶಕ್ಕೆ ಕೊಟ್ಟನು. ದುರ್ದೈವಿಯಾದ ಖುಸ್ರುವು ಖುರ್ರಮನೊಡನೆ ದಕ್ಷಿಣದಲ್ಲಿರುವಾಗ ಕ್ರಿ. ಶ. ೧೬೨೧ ರಲ್ಲಿ ಬರ್ಹಾಣಪುರದಲ್ಲಿ ಕೊಲೆಗೆ ಗುರಿಯಾದನು.

೩. **ಮೇವಾಡದ ಯುದ್ಧ** :— ಕ್ರಿ. ಶ ೧೫೯೭ರಲ್ಲಿ ರಾಣಾಪ್ರತಾಪ ಸಿಂಹನು ಮರಣಹೊಂದಲು, ಅವನ ಮಗ **ಅಮರಸಿಂಹನು** ಮೇವಾಡದ ಅರಸನಾದನು. ಇವನು ವಿಲಾಸಿಯಾದವರಿಂದ ಚಿತ್ತೂರನ್ನು ಕೈವಶ ಮಾಡಿಕೊಳ್ಳುವದನ್ನು ಬಿಟ್ಟುಬಿಟ್ಟಿದ್ದನು. ಆದರೆ ಸರದಾರರು ಅವನನ್ನು ಎಚ್ಚರಿಸಿ ಹುರುಪುಗೊಳಿಸಿದ್ದರಿಂದ, ಅವನು ಚಿತ್ತೂರನ್ನು ವಶಪಡಿಸಿಕೊಳ್ಳುವದಕ್ಕೆ ಸಿದ್ಧನಾದನು. ಆಗ ಜಹಾಂಗೀರನು ಕ್ರಿ. ಶ. ೧೬೦೫ರಿಂದ ಮೂರು ಸರತಿ ಉದೇಪುರವನ್ನು ಗೆಲ್ಲುವ ಪ್ರಯತ್ನ ಮಾಡಿದನು. ಆದರೆ ಅವನಿಗೆ ಜಯದೊರೆಯಲಿಲ್ಲ. ಆದದರಿಂದ ಜಹಾಂಗೀರನು ಪರ್ವೀಜನನ್ನು ಕರೆಯಿಸಿಕೊಂಡು ಜಾಣನಾದ ಖುರ್ರಮ ಮತ್ತು ಪರಾಕ್ರಮಿಯಾದ **ಮುಹಬತ್ ಖಾನ** ಇವರನ್ನು ರಜಪುತರ ಮೇಲೆ ಕಳುಹಿದನು. ಮುಹಬತ್ ಖಾನನು ರಜಪುತರ **ಗನೀಮೀ** ಪದ್ಧತಿಯ ಯುದ್ಧದ ಮರ್ಮವನ್ನು ಅರಿತವನಾದದರಿಂದಲೂ ಮೊಗಲರ ಸೈನ್ಯವು ಬಹಳ ದೊಡ್ಡದಿದ್ದದರಿಂದಲೂ **ಈ** ಸರತಿ ರಜಪುತರ ಆಟವು ಸಾಗಲಿಲ್ಲ; ಅಮರಸಿಂಹನು ಜಹಾಂಗೀರನೊಡನೆ ಒಪ್ಪಂದ ಮಾಡಿಕೊಂಡನು. ಇವನ ಮಗ **ಕರ್ಣಸಿಂಹನು** ದೊಡ್ಡ ಮನಸಬದಾರನಾದನು. ಜಹಾಂಗೀರನು ಕರ್ಣಸಿಂಹನನ್ನು ಗೆಳೆಯನಂತೆ ಕಾಣಹತ್ತಿದನು. ಮತ್ತು **ಮುಂದೆ** ಈ ತಂದೆ–ಮಕ್ಕಳ ಸ್ಮಾರಕಕ್ಕಾಗಿ ತನ್ನ ಅರಮನೆಯ ಹೂದೋಟದಲ್ಲಿ ಅವರ ಪ್ರತಿಮೆಗಳನ್ನು ನೆಲೆಸಿದನು.

೪. **ನೂರೆಜಹಾನಳನ್ನು ಮದುವೆಯಾದದ್ದು**:— **ಗಯಾಸ ಬೇಗ** ಎಂಬೊಬ್ಬ ಇರಾಣೀ ಗೃಹಸ್ಥನು ಅಕ್‌ಬರನ ಕಾಲದಲ್ಲಿ ಹಿಂದುಸ್ಥಾನಕ್ಕೆ ಬಂದನು. ಇವನು ವಿದ್ಯಾವಂತನೂ ಬರೆಹದಲ್ಲಿ ಚತುರನೂ, ಉದ್ಯೋಗಿಯೂ ಆಗಿದ್ದದರಿಂದ ಸ್ವಲ್ಪ ದಿನಗಳಲ್ಲಿ ಅಕ್‌ಬರನ ಚಿಕ್ಕ ಮಸಬದಾರನಾದನು. ಇವನ ಹೆಂಡತಿಯು ಕೂಡ ಗುಣವಂತೆಯಾಗಿ ಚಿತ್ರಕಲೆ, ಕಸೂತಿ ಮುಂತಾದ

ವಿದ್ಯೆಗಳಲ್ಲಿ ಜಾಣ್ಮೆಯನ್ನು ಹೊಂದಿದ್ದಳು. ಇವರಿಗೆ **ಮೆಹರುನ್ನಿಸಾ** ಎಂಬ ಚಲುವೆಯಾದ ಮಗಳಿದ್ದಳು. ಈಕೆಯು ಶೂರಳೂ ಚತುರಳೂ ಆಗಿದ್ದಳು. ಕುದುರೆಯನ್ನೇರುವದು, ಗುರಿಹೊಡೆಯುವದು ಮುಂತಾದ ಯುದ್ಧಕಲೆಗಳನ್ನು ಆರಿತಿದ್ದಳು. ಫಾರ್ಸಿ ಭಾಷೆಯಲ್ಲಿ ಉತ್ತಮ ಗತಿಯನ್ನು ಹೊಂದಿ **ಕವಿತೆ** ಗಳನ್ನು ರಚಿಸುತ್ತಿದ್ದಳು.

ಇಂತಹಳನ್ನು ಯೋಗ್ಯನೂ ಪರಾಕ್ರಮಿಯೂ ಆದ **ಷೇರಅಫಗನ** ಎಂಬವನಿಗೆ ಕೊಟ್ಟಿದ್ದರು. ಜಹಾಂಗೀರನ ಕಾಲಕ್ಕೆ ಷೇರ ಅಫಗನನು ಬಂಗಾ ಲದಲ್ಲಿಯ ಒಬ್ಬ ಅಧಿಕಾರಿಯಾದನು. ಮುಂಚೆ ಬಂಗಾಲದಲ್ಲಿದ್ದ ಒಂದು ಬಂಡಾಯದಲ್ಲಿ ಇವನು ಕೂಡಿದ್ದನೆಂದು ಜಹಾಂಗೀರನು ತಿಳಿದು ಇವನನ್ನು ಹಿಡಿಯಬೇಕೆಂದು ಅಲ್ಲಿಯ ಸುಭೇದಾರನಾದ **ಕುತುಬುದ್ದೀನ**ಖಾನನಿಗೆ ಅಪ್ಪಣೆ ಕೊಟ್ಟನು. ಖಾನನು ಷೇರಅಫಗನನ್ನು ಹಿಡಿಯಹೋದಾಗ ಮೊದಲು ಖಾನನೂ ಬಳಿಕ ಷೇರಅಫಗನನೂ ಹತರಾದರು! ಆಗ ಮೆಹರುನ್ನೀಸಳು ಆಗ್ರಾಕ್ಕೆ ತಂದೆಯ ಬಳಿಗೆ ಬಂದಳು. ಕ್ರೆ. ಶ. ೧೬೦೭. ಮುಂದೆ ನಾಲ್ಕು ವರ್ಷಗಳಾದ ಬಳಿಕ ಜಹಾಂಗೀರನು ಈ ಕೆ ಯ ನ್ನು ಮದುವೆಯಾದನು. ಮೆಹರುನ್ನೀಸಳು **ನೂರೆಜಹಾನ್**ಳಾದಳು.

೫. **ನೂರೆಜಹಾನಳ ಆಳಿಕೆ:**— ಜಹಾಂಗೀರನನ್ನು ಮದುವೆಯಾದ ಬಳಿಕ ಈಕೆಯು ತನ್ನ ಚಲುವಿಕೆ — ಚತುರತೆಗಳ ಮೂಲಕ ಅವ ನನ್ನು ಪೂರ್ಣ ವಶಪಡಿಸಿಕೊಂಡಳು. ಜಹಾಂಗೀರನ ವ್ಯಸನವನ್ನೂ ಚಂಚಲ ಸ್ವಭಾವವನ್ನೂ ಕಳೆಯುವ ಪ್ರಯತ್ನ ಮಾಡಿದಳು. ಎಲ್ಲ ಕಾರಭಾರವನ್ನು ದಕ್ಷತೆಯಿಂದ ತಾನೇ ಸಾಗಿಸಹತ್ತಿದಳು. ವೆಚ್ಚವನ್ನು ಅಳತೆಯಿಂದ ಸಾಗಿಸಿ ವ್ಯವಸ್ಥೆಯನ್ನು ಹೆಚ್ಚಿಸಿದಳು. ಈಕೆಯು ಧಾರ್ಮಿಕಳೂ ಪರೋಪಕಾರ ನಿರತಳೂ ಆಗಿದ್ದಳು. ಗತಿಯಿಲ್ಲದ ಬಡ ಹುಡುಗರಿಗೋಸುಗ ಈಕೆಯು ಒಂದು ಅನಾಥಾಲಯವನ್ನು ಸ್ಥಾಪಿಸಿದಳು. ಜನರಿಗೆ ನಿಷ್ಪಕ್ಷಪಾತವಾದ ನ್ಯಾಯವು ದೊರೆಯುವಂತೆ ವ್ಯವಸ್ಥೆಯನ್ನಿಟ್ಟಳು- ಎಷ್ಟೋ ಬಡ ಹೆಣ್ಣು ಮಕ್ಕಳ ಲಗ್ನಕ್ಕೆ ಧನಸಹಾಯವನ್ನಿತ್ತಳು. ಆರಮನೆಯ ಮತ್ತು ಓಲಗದ ಠೀವಿಯಲ್ಲಿ ಹಲವು ಹೊಸ ಸುಧಾರಣೆಗಳನ್ನು ಮಾಡಿದಳು. ಗುಲಾಬಿಯ

ಎಣ್ಣೆಯನ್ನು ಇರಾಣದಿಂದ ಈಕೆಯೆ ಮೊದಲು ತರಿಸಿದಳೆಂದು ಹೇಳುವರು. ಮಹತ್ವಾಕಾಂಕ್ಷೆಯುಳ್ಳವಳೂ ಕಾರ್ಯಕುಶಲೆಯೂ ಆದ ಈಕೆಯು ತನ್ನ ತಂದೆಗೂ ತಮ್ಮನಾದ **ಆಸಫಖಾನ**ನಿಗೂ ದೊಡ್ಡ ಅಧಿಕಾರಗಳನ್ನು ಕೊಟ್ಟಳು. ಮತ್ತು ಆಸಫನ ಮಗಳು **ಆರ್ಜಮಂದ ಬಾನೂ** ಎಂಬವಳನ್ನು ಕರ್ತೃತ್ವಶಾಲಿಯಾದ ಖುರ್ರಮನಿಗೆ ಕೊಟ್ಟು, ಅವನನ್ನು ತನ್ನ ಕಡೆಗೆ ಒಲಿಸಿಕೊಂಡಳು. ಆಗ ಇವರೆಲ್ಲರ ಬೆಂಬಲದಿಂದ ಸುಸೂತ್ರವಾಗಿ ಕಾರಭಾರವನ್ನು ಸಾಗಿಸಲು ಮತ್ತಿಷ್ಟು ಅನುಕೂಲವಾಯಿತು.

೬. **ಪೋರ್ತುಗೀಜರನ್ನು ಕುಗ್ಗಿಸಿದ್ದು** :— ಆ ಕಾಲದಲ್ಲಿ ಸಮುದ್ರ ಮಾರ್ಗವಾಗಿ ನಡೆಯುವ ವ್ಯಾಪಾರವು ಪೋರ್ತುಗೀಜರ ಕೈಯಲ್ಲಿತ್ತು. ಕ್ರಿ. ಶ. **೧೬೦೮**ರಲ್ಲಿ, **ಕ್ಯಾಪ್ಟನ್ ಹಾರೆನ್ಸ** ಎಂಬ ಇಂಗ್ಲಿಷ **ನಾವಿಕ**ನು ತನ್ನ ವರಿಗಾಗಿ, ಜಹಾಂಗೀರನಿಂದ ಕೆಲವು ವ್ಯಾಪಾರದ ಅನುಕೂಲಗಳನ್ನು ಪಡೆಯಲು ಪ್ರಯತ್ನಿಸಿದನು. ಆದರೆ ಪೋರ್ತುಗೀಜ ಗವ್ಹರ್ನರನು, ಹಾರೆನ್ಸನಿಗೆ ಆಶ್ರಯ ಕೊಡಕೂಡದೆಂದು ಜಹಾಂಗೀರನಿಗೆ ತಿಳಿಸಿದನು. ಪೋರ್ತುಗೀಜರನ್ನು ಸೋಯಿಸಿದರೆ, ತನ್ನ ಪರರಾಷ್ಟ್ರದ ವ್ಯಾಪಾರವು ಕೆಡುವದೆಂದು ಬಗೆದು ಜಹಾಂಗೀರನು ಹಾರೆನ್ಸನಿಗೆ ಯಾವ ಅನುಕೂಲಗಳನ್ನೂ ಕೊಡಲಿಲ್ಲ ಆದದರಿಂದ ಕ್ರಿ. ಶ. **೧೬೧೧**ರಲ್ಲಿ ಅವನು ಬರಿಗೈಯಿಂದ ಹಿಂದಿರುಗಿ ಹೋದನು. ಪೋರ್ತುಗೀಜರ ಹಡಗುಪಡೆಯು ಜಹಾಂಗೀರನ ಹಡಗುಪಡೆಗಿಂತ ಹೆಚ್ಚಿನದಿದ್ದದರಿಂದ, ಅವರು ಇವನೊಡನೆ ಅಹಂಕಾರದಿಂದ ನಡೆಯುತ್ತಿದ್ದರು. ಅಷ್ಟರಲ್ಲಿ ಕ್ರಿ. ಶ. ೧೬೧೫ರಲ್ಲಿ ಪೋರ್ತುಗೀಜರಿಗೂ ಇಂಗ್ಲೀಷರಿಗೂ **ಸುವಾಲಿ** ಎಂಬಲ್ಲಿ ಆದ ಯುದ್ಧದಲ್ಲಿ ಇಂಗ್ಲಿಷರು ಗೆದ್ದರು. ಇದನ್ನು ಕಂಡು ಜಹಾಂಗೀರನು, ಪೋರ್ತುಗೀಜರನ್ನು ಆಳತೆಯಲ್ಲಿರಿಸಲು ಇಂಗ್ಲಿಷರೇ ತಕ್ಕವರೆಂದು ತಿಳಿದು ಅವರೊಡನೆ ಸ್ನೇಹದಿಂದ ಇರತೊಡಗಿದನು. ಆದದರಿಂದ ಪೋರ್ತುಗೀಜರು ಸಿಟ್ಟಾಗಿ ಜಹಾಂಗೀರನ ಎರಡು ಹಡಗಗಳನ್ನು ಹಿಡಿದು, ಎಷ್ಟೋ ಜನರನ್ನು ಸೆರೆಯಿಟ್ಟರು. ಕ್ರಿ. ಶ. **೧೬೧೩**. ಆಗ ಜಹಾಂಗೀರನು ಕೋಪಗೊಂಡು ಇಂಗ್ಲಿಷರ ಸಹಾಯವನ್ನು ಹೊಂದಿ ನೆಲದಾರಿಯಿಂದ **ದಮನದ**

ಮೇಲೆ ಸಾಗಿ, ಅಲ್ಲಿಯ ಯಾವತ್ತು ಪೋರ್ತುಗೀಜರನ್ನು ಸೆರೆ ಹಿಡಿದನು. ಮತ್ತು ಅವರ **ಜೆಸ್ಯೂಯಿಟ** (ಧರ್ಮೋಪದೇಶಕ) ರಿಗೆ ಕೊಟ್ಟು ಎಲ್ಲ ಅನುಕೂಲಗಳನ್ನು ಕಸಿದುಕೊಂಡು ಕ್ರೈಸ್ತ ಧರ್ಮಪ್ರಸಾರಕ್ಕೆ ಅಡ್ಡಿಮಾಡಿದನು.



ಜೇಮ್ಸ

ಕ್ರಿ. ಶ. **೧೬೧೪**ರಲ್ಲಿ **ಇಂಗ್ಲಂಡ**ದ **ಜೇಮ್ಸ** ಅರಸನಿಂದ **ಸರ್ ಟಾಮಸ್ ರೋ** ಎಂಬ ರಾಯಭಾರಿಯು ಜಹಾಂಗೀರನಲ್ಲಿಗೆ ಬಂದನು. ಅವನ ಇಚ್ಛೆಯು ಇಂಗ್ಲಂಡ-ಹಿಂದುಸ್ಥಾನಗಳಲ್ಲಿ ಸ್ನೇಹದ ಒಡಂಬಡಿಕೆಯನ್ನು ಮಾಡಿಕೊಳ್ಳುವದಿತ್ತು. ಅದಕ್ಕಾಗಿ ಅವನು ಮೂರು ವರ್ಷ ಈ ದೇಶದಲ್ಲಿದ್ದನು. ಆದರೆ ಉಪಯೋಗವೇನೂ ಆಗದೆ ರೋನು ಕ್ರಿ. ಶ. ೧೬೧೮ರಲ್ಲಿ ಇಂಗ್ಲಂಡಕ್ಕೆ ಮರಳಿ ಹೋದನು.

೭. **ಕಂದಾಹಾರವು ಕೈಬಿಟ್ಟಿತು**:— ಸಮುದ್ರ ವ್ಯಾಪಾರವನ್ನು ಪೋರ್ತುಗೀಜರು ಅರಬ ಮುಂತಾದ ಮುಸಲ್ಮಾನರಿಂದ ಸೆಳೆದುಕೊಂಡ ಬಳಿಕ, ಇರಾಣ ಮುಂತಾದ ದೇಶಗಳ ಜನರು **ಕಂದಾಹಾರ** ಮಾರ್ಗವಾಗಿಯೆ ಹಿಂದುಸ್ಥಾನದೊಡನೆ ವ್ಯಾಪಾರ ಮಾಡಬೇಕಾಯಿತು. ಇದರಿಂದ ಕಂದಾಹಾರದ ಮಹತ್ವವು ಹೆಚ್ಚಿತು. ಕ್ರಿ. ಶ. **೧೬೨೨**ರಲ್ಲಿ ಇರಾಣದ ಷಾಹನಾದ **ಅಬ್ಬಾಸ**ನು ಕಂದಾಹಾರದ ಮೇಲೆ ಸಾಗಿಬಂದನು. ಆಗ ಜಹಾಂಗೀರನ ಸರದಾರರಲ್ಲಿ ಅತ್ತ ಕಡೆಗೆ ಯಾರನ್ನು ಕಳುಹಬೇಕೆಂಬ ವಿಚಾರವೇ ನಡೆದಿರಲು, ಷಾಹನು ಕಂದಾಹಾರವನ್ನು ತೆಗೆದುಕೊಂಡದರಿಂದ ಅದು ಜಹಾಂಗೀರನ ಕೈಬಿಟ್ಟಿತು.



ಸರ್ ಟಾಮಸ್ ರೋ

೮. **ಖುರ್ರಮನು ಷಾಹೆಜಹಾನನಾದನು**:— ಕ್ರಿ. ಶ. ೧೬೦೮ರ ತರುವಾಯ ಮೊಗಲರು ದಕ್ಷಿಣದ ಕಡೆಗೆ ಬಂದಿರಲಿಲ್ಲ. ಈ ಸಮಯದಲ್ಲಿ ಮಲಿಕಂಬರನು ದೌಲತಾಬಾದದ ನೆರೆಯ **ಖಡಕಿ** ಎಂಬದನ್ನು ನಿಜಾಮ ಷಾಹಿಯ ಹೊಸ ರಾಜಧಾನಿಯನ್ನು ಮಾಡಿದನು. ಮತ್ತು ಮರಾಠಾ ಸರದಾರರನ್ನು ತನ್ನಲ್ಲಿಟ್ಟುಕೊಂಡು **ಗನೀಮಿ** ಪದ್ಧತಿಯಿಂದ ಕಾದುತ್ತ ಮೊಗಲ ಸರದಾರನಾದ ಖಾನ-ಈ-ಖಾನನನ್ನು ಓಡಿಸಿ ಅಹಮ್ಮದನಗರವನ್ನು ವಶ-ಮಾಡಿಕೊಂಡನು. ಕ್ರಿ. ಶ. **೧೬೧೦.** ಈ ಸುದ್ದಿಯನ್ನು ಕೇಳಿ ಜಹಾಂಗೀರನು ಖುರ್ರಮನನ್ನು ದಕ್ಷಿಣಕ್ಕೆ ಕಳುಹಿದನು ಇವನು ಮಲಿಕಂಬರನನ್ನು ಸೋಲಿಸಲು ಅವನು **ವರ್ಹಾಡ, ಬಾಲಾಘಾಟ**ಗಳನ್ನು ಕೊಟ್ಟು ಖುರ್ರಮನೊಡನೆ ಒಪ್ಪಂದ ಮಾಡಿಕೊಂಡನು. ಜಹಾಂಗೀರನು ಮಗನ ಈ ಕಲಿತನವನ್ನು ಕಂಡು, ಅವನನ್ನು **ಷಾಹೆಜಹಾನ್** (ಜಗದೊಡೆಯ) ಎಂದು ಕರೆದನು. ಮೊಗಲ ಸೈನ್ಯವು ದಕ್ಷಿಣದ ಕಡೆಗೆ ಬೆನ್ನುಮಾಡಿದೊಡನೆ ಮಲಿಕಂಬರನು **ಬರ್ಹಾಣಪುರ**ವನ್ನು ಮುತ್ತಿ, ಮಾಂಡವಗಡದ ವರೆಗೆ ಸುಲಿಗೆಯನ್ನಾರಂಭಿಸಿದನು. ಷಾಹೆಜಹಾನನು ಮಲಿಕಂಬರನ ನೆಲೆ ಸಾಗಿಬಂದು, ಮುತ್ತಿಗೆಯನ್ನು ತೆಗೆಯಿಸಿ, ಖಡಕಿಯನ್ನು ಹಾಳುಮಾಡಿ, ೧೮ ಲಕ್ಷ ರೂಪಾಯಿ ದಂಡವನ್ನು ಎತ್ತಿಕೊಂಡು ದಿಲ್ಲಿಗೆ ಹೋದನು

೯. **ಷಾಹೆಜಹಾನನ ಬಂಡಾಯ**:— ಕ್ರಿ. ಶ ೧೬೧೧ರಿಂದ ೧೬೨೭ರ ವರೆಗೆ ನೂರಜಹಾನ ಮತ್ತು ಷಾಹೆಜಹಾನ (ಖುರ್ರಮ) ಇವರಲ್ಲಿ ಒಕ್ಕಟ್ಟು ಇದ್ದದರಿಂದ, ಈ ಹನ್ನೊಂದು ವರ್ಷದ ಆಳಿಕೆಯು ರಾಜ್ಯಕ್ಕೆ ಹಿತಕರವಾಯಿತು. ದಕ್ಷಿಣದ ದಿಗ್ವಿಜಯದ ತರುವಾಯ, ನೂರಜಹಾನಳು ಷಾಹೆಜಹಾನನ ಉತ್ಕರ್ಷವನ್ನು ಸೇರದವಳಾದಳು. ಆಕೆಯು, ಇವನು ಮುಂದೆ ತನ್ನ ಆಟವನ್ನು ನಡೆಯಗೊಡಲಿಕ್ಕಿಲ್ಲೆಂದು ಹೆದರಿ, ಇವನನ್ನು ರಾಜಧಾನಿಯಿಂದ ದೂರ ಇರಿಸುವ ಪ್ರಯತ್ನದಲ್ಲಿಯೇ ಇದ್ದಳು. ಮತ್ತು ತನಗೆ ಗಂಡುಮಕ್ಕಳಿಲ್ಲದ್ದರಿಂದ, ಮೊದಲಿನ ಲಗ್ನದ ಮಗಳನ್ನು ಜಹಾಂಗೀರನ ಚಿಕ್ಕ ಮಗನಾದ **ಷಹರೆಯಾರ**ನಿಗೆ ಕೊಟ್ಟು, ಅವನನ್ನೆ ಮುಂದೆ ಪಟ್ಟಕ್ಕೆ ತರಬೇಕೆಂದು ಪ್ರಯತ್ನಮಾಡಹತ್ತಿದಳು. ನೂರಜಹಾನಳ ಮನದೆಣಿಕೆಯನ್ನು ತಿಳಿದ ಷಾಹೆಜಹಾನನು ಕಂದಾಹಾರದ ಯುದ್ಧಕ್ಕೆ ಹೋಗುವದನ್ನು ಅಲ್ಲಗಳೆದು,

ಆಕೆಯ ವಿರುದ್ಧ ಬಂಡಾಯವನ್ನೆಬ್ಬಿಸಿದನು. ನೂರಜಹಾನಳು **ಮುಹಬತ್‌ಖಾನ** ಮತ್ತು **ಫರ್ನಿಜ**ರನ್ನು ಷಾಹೆಜಹಾನನ ಮೇಲೆ **ಕಳುಹಿ**ದಳು. ಅವರು ಇವರನ್ನು **ಅಜಮೀರ**ದ ಬಳಿಯಲ್ಲಿ ಸೋಲಿಸಿ ಓಡಿಸಿದರು. ಷಾಹೆಜಹಾನನು ದಕ್ಷಿಣಕ್ಕೆ ಬಂದು ಹೊತ್ತು ಕಾಯುತ್ತ **ನಾಶಿಕ್-ಜುನ್ನಾರ**ಗಳಲ್ಲಿ ಇರಹತ್ತಿದನು.

೧೦. **ಮುಹಬತ್‌ಖಾನನ ಬಂಡಾಯ**:— ಷಾಹೆಜಹಾನನನ್ನು ತಗ್ಗಿಸುವಷ್ಟರಲ್ಲಿ ಮುಹಬತ್‌ಖಾನ-ಫರ್ನೀಜರು ಪ್ರಬಲರಾದರು. ಮುಹಬತ್‌ಖಾನನು ಫರ್ನೀಜನನ್ನು ಪಟ್ಟಕ್ಕೆ ತರಬಹುದೆಂದು ಹೆದರಿ, ನೂರಜಹಾನಳು ಅವರಿಬ್ಬರನ್ನು ಅಗಲಿಸಿ, **ಖಾನಜಾಹಾನ್ ಲೋದಿ**ಯನ್ನು ಫರ್ನೀಜನ ನೆರವಿಗೆ ಕೊಟ್ಟಳು. ಮತ್ತು ಮುಹಬತ್‌ನನ್ನು ಸೇನಾಪತಿಯ ಕೆಲಸದಿಂದ ಬಿಡಿಸಿದಳು. ಆಗ ಮುಹಬತ್‌ಖಾನನು, ಕಾಬೂಲದ ಕಡೆಗೆ ಸಾಗಿದ್ದ ಜಹಾಂಗೀರನನ್ನು **ಜೇಹಲಂ** ನದಿಯ ತೀರದಲ್ಲಿ ಮುತ್ತಿ ಅವನನ್ನು ತನ್ನ ಕೈಯಲ್ಲಿಟ್ಟುಕೊಂಡನು. ನೂರಜಹಾನ-ಷಹರೆಯಾರರು ಪಾರಾಗಿ ಹೊಳೆಯನ್ನು ದಾಟಿ, ಖಾನನೊಡನೆ ಯುದ್ಧಕ್ಕೆ ಅನುವಾದರು. ಆದರೆ ಖಾನನ ಸೈನ್ಯದ ಮುಂದೆ ಇವರ ಆಟ ಸಾಗಲಿಲ್ಲ. ನೂರಜಹಾನಳೂ ಜಹಾಂಗೀರನಂತೆ ಖಾನನ ಆಧೀನಳಾದಳು. ಮುಹಬತ್‌ಖಾನನು ಕಾಬೂಲಕ್ಕೆ ಹೋಗಿ ಅಲ್ಲಿ ಜಹಾಂಗೀರನನ್ನು ವೈಭವದಿಂದ ಮೆರೆಸಿದನು. ನೂರಜಹಾನಳು ಮೇಲೆ ಮೇಲೆ ಸಮಾಧಾನದಿಂದ ಇರುವ ಹಾಗೆ ತೋರುತ್ತ ಖಾನನ ಸೈನ್ಯದಲ್ಲಿ ಒಡಕು ಹುಟ್ಟಿಸುವ ಕೆಲಸವನ್ನು ಸಾಗಿಸಿದ್ದಳು! ಕಾಬೂಲದಿಂದ ಮರಳಿ ಬರುವಾಗ ಅದೇ ಜೇಹಲಂ ತೀರದಲ್ಲಿ ಖಾನನ ಸೈನ್ಯವೇ ಅವನ ಮೇಲೆ ಹೊರಳಿತು. ಖಾನನು ನಸುಳಿ ಸಿಂಧವನ್ನು ಸೇರಿ ಅಲ್ಲಿಂದ ದಕ್ಷಿಣಕ್ಕೆ ಹೋಗಿ ಸಮದುಃಖಿಯಾದ ಷಾಹೆಜಹಾನನನ್ನು ಕೂಡಿಕೊಂಡನು. ಇಷ್ಟರಲ್ಲಿ ಫರ್ನೀಜನೂ, ಮುಂದೆ ಸ್ವಲ್ಪ ದಿವಸಗಳಲ್ಲಿ ಜಹಾಂಗೀರನೂ ಮರಣಹೊಂದಿದರು. ಕ್ರಿ. ಶ. ೧೬೨೭. ಇದು ವರೆಗೆ ನೂರಜಹಾನಳ ಕಡೆಗಿದ್ದ ಆಕೆಯ ತಮ್ಮ, ಆಸಫಖಾನನು ಆಳಿಯ ಷಾಹೆಜಹಾನನನ್ನೇ ಕೂಡಿದನು. ಷಾಹೆಜಹಾನನು ಸಂಗಡಿಗರೊಡನೆ ರಾಜಧಾನಿಗೆ ಬಂದು ಪಟ್ಟವನ್ನು ಆಕ್ರಮಿಸಿದನು. ಮತ್ತು ಸೆರೆಯಿದ್ದ ಷಹರೆಯಾರನನ್ನು ಕೊಲ್ಲಿಸಿದನು. ತನ್ನ ಕೈಯಲ್ಲಿ ಏನೊಂದು ಅಧಿಕಾರವೂ

ಉಳಿಯಲಿಲ್ಲೆಂಬದನ್ನು ನೂರಜಹಾನಳು ತಿಳಿದು, ಏಕಾಂತವಾಸದಲ್ಲಿರಹತ್ತಿ ಕ್ರಿ. ಶ. ೧೬೪೪ರಲ್ಲಿ ಮರಣಹೊಂದಿದಳು. ಷಾಹೆಜಹಾನನು ಈಕೆಯೊಡನೆ ಚೆನ್ನಾಗಿ ನಡೆದುಕೊಂಡನು.

೧೧. ಜಹಾಂಗೀರನ ಯೋಗ್ಯತೆ:— ಇವನು ಶೂರನೂ ಚತುರನೂ ನ್ಯಾಯಿಯೂ ಕ್ರೂರನೂ ಆಗಿದ್ದನು. ಕುಡಿತದ ಚಟವು ತನಗಿದ್ದರೂ ಇದರ ಕೆಟ್ಟ ಪರಿಣಾಮವನ್ನು ತಿಳಿದು ಪ್ರಜೆಗಳಲ್ಲಿ ಈ ಚಟವು ಹಬ್ಬಬಾರದೆಂದು ನಿರ್ಬಂಧ ಪಡಿಸಿದನು. ಇವನ ಚಟವನ್ನು ಕಡಿಮೆ ಮಾಡುವ ನೂರಜಹಾನಳ ಪ್ರಯತ್ನವು ಸಾಧ್ಯವಾದುದಕ್ಕೆ ಜಹಾಂಗೀರನ ಪಶ್ಚಾತ್ತಾಪವೇ ಕಾರಣವಾಗಿರಬೇಕು. ಅಕ್‌ಬರನ ರಾಜ್ಯಪದ್ಧತಿಯನ್ನು ಹಾಗೇ ಸಾಗಿಸಿದ್ದು ಇವನ ಚಾತುರ್ಯದ ದ್ಯೋತಕವಾಗಿದೆ

೧೬ನೆಯ ಪಾಠ

ಷಾಹೆಜಹಾನ್. (ಕ್ರಿ. ಶ. ೧೬೨೭—೧೬೫೮)

೧. ರಾಜ್ಯಾರೋಹಣದ ಸಮಾರಂಭ:— ಪಟ್ಟದ ಸಲುವಾಗಿ ವ್ಯಯತ್ನಿಸುತ್ತಿದ್ದವರನ್ನೆಲ್ಲ ನಿರ್ಮೂಲ ಮಾಡಿದ ಬಳಿಕ **ಷಾಹೆಜಹಾನನು** ಒಳ್ಳೆಯ



ಶಹಾಜಹಾನ್

ವೈಭವದ ಸಮಾರಂಭವನ್ನು ಮಾಡಿ ಪಟ್ಟಕ್ಕೆ ಕುಳಿತನು. ಮತ್ತು ತನ್ನ ಪರಾಕ್ರಮ ಹಾಗು ಕರ್ತೃತ್ವಗಳ ಬಲದಿಂದ ಓಲಗದ ಸರದಾರರನ್ನು ತನ್ನ ಕಡೆಗೆ ಒಲಿಸಿಕೊಂಡನು. ಇವನು ತನ್ನ ಮಕ್ಕಳ ಹಾಗು ಸರದಾರರ ಕಡೆಗೆ ದಿಗ್ವಿಜಯದ ಹೊರೆಯನ್ನು ಒಪ್ಪಿಸಿ, ತಾನು ದಿಲ್ಲಿ-ಆಗ್ರಾ ಪಟ್ಟಣಗಳಲ್ಲಿ ಕಟ್ಟಡಗಳನ್ನು ಕಟ್ಟಿಸುವದರಲ್ಲಿ ತೊಡಗಿದನು. ವೈಭವದಿಂದಿರುವದು ಇವನಿಗೆ ಬಹಳ ಸೇರುತ್ತಿತ್ತು. ಇವನ ಮೂವತ್ತೊಂದು ವರ್ಷದ ಆಳಿಕೆಯಲ್ಲಿ ಒಳ್ಳೆಯ ಶಾಂತತೆಯೂ ವ್ಯವಸ್ಥೆಯೂ ನೆಲೆಗೊಂಡಿದ್ದವು.


೨. ಖಾನಜಹಾನನ ಬಂಡಾಯ:— ಫರ್ದೀಜನ ಮರಣದ ತರುವಾಯ **ಖಾನಜಹಾನನೇ** ದಕ್ಷಿಣದ ಸುಭೇದಾರನಾಗಿದ್ದನು. ಇವನು ಮಲಿ

ಕಂಬರನೊಡನೆ ಸ್ನೇಹದಿಂದಿದ್ದನು. ಮತ್ತು ಅವನು ಕ್ರಿ. ಶ. ೧೬೩೬ ರಲ್ಲಿ ಸತ್ತಬಳಿಕ ಅವನ ಮಗ ಫತ್ತೆಖಾನನಿಂದ ಈ ಖಾನಜಹಾನನು ಹೇರಳ ಲಂಚವನ್ನೆತ್ತಿ ಅಹಮ್ಮದನಗರದಿಂದ ಬಾಲಾಘಟದ ವರೆಗಿನ ಮೊಗಲರ ಸೀಮೆಯನ್ನು ಅವನಿಗೆ ತಿರುಗಿ ಬಿಟ್ಟುಕೊಟ್ಟನು. ಹೊತ್ತು ಸಾಧಿಸಿ ದಿಲ್ಲಿಯ ಬಾದಶಹನಾಗಬೇಕೆಂಬೂ ಇವನ ಮನಸ್ಸಿತ್ತು. ಜಹಾಂಗೀರನ ಮರಣದ ತರುವಾಯ **ಶಹಾಜಿ ಭೋಸಲೆ**ಯನ್ನು ಕೂಡಿಕೊಂಡು ಷಾಹೆಜಹಾನನ ವಿರುದ್ಧ ಇವನು ಬಂಡಾಯವನ್ನೆಬ್ಬಿಸಿದನು ಆಗ ಷಾಹೆಜಹಾನನು ದಕ್ಷಿಣಕ್ಕೆ ಬಂದು, ಶಹಾಜಿಗೆ ಐದು ಸಾವಿರದ ಮನಸಬದಾರಿಯನ್ನು ಕೊಡಲೊಪ್ಪಿ, ಅವನನ್ನು ತನ್ನ ಕಡೆಗೆ ಮಾಡಿಕೊಂಡನು ಖಾನಜಹಾನನು ಓಡಿಹೋದನು ಮತ್ತು ಮುಂಬೆ ಕಲಿಂಜರದ ಬಳೆಯಲ್ಲಿ ಬಾದಷಾಹನ ದಂಡನ್ನು ಮತ್ತೆ ಇದಿರಿಸಿ, ಯುದ್ಧದಲ್ಲಿ ಮಡಿದನು.

೩. **ಪೋರ್ತುಗೀಜರ ಬಲವನ್ನು ಕುಗ್ಗಿಸಿದ್ದು** :— ಜಹಾಂಗೀರನು ತನ್ನ ಆಳಿಕೆಯಲ್ಲಿ ಪಶ್ಚಿಮ ಸಮುದ್ರತೀರದಲ್ಲಿ ಪೋರ್ತುಗೀಜರ ಬಲವನ್ನು ಕುಗ್ಗಿಸಿದನು. ಆದರೆ ಪೂರ್ವ ಸಮುದ್ರತೀರದಲ್ಲಿ ಹುಗಳಿಯಲ್ಲಿ ಅವರು ತಮ್ಮ ವ್ಯಾಪಾರದ ಮುಖ್ಯ ಸ್ಥಳವನ್ನು ಮಾಡಿಕೊಂಡು ಹಡಗಗಳನ್ನು ಸುಲಿಯುವದು, ಒತ್ತಾಯದಿಂದ ಧರ್ಮಪ್ರಸಾರ ಮಾಡುವದು ಮತ್ತು ಓಡಿಸಿಕೊಂಡು ಬಂದ ಜನರನ್ನು ಗುಲಾಮರಂತೆ ಮಾರುವದು. ಈ ಕೆಲಸಗಳನ್ನು ನಡೆಸಿದ್ದರು. ಮತ್ತು ಚಿತಗಾಂಗವನ್ನು ವಶಮಾಡಿಕೊಂಡು ಯುದ್ಧದ ಜೋಡಣೆಯನ್ನು ಮಾಡಹತ್ತಿದರು. ಆಗ ಬಾದಷಾಹನು ಅವರನ್ನು ಕುಗ್ಗಿಸುವದಕ್ಕಾಗಿ ಕಾಸೀಮಖಾನನನ್ನು ಕಳುಹಿದನು. ಮೂರು ತಿಂಗಳ ವರೆಗೆ ಪೋರ್ತುಗೀಜರು ಹಣೆಯದೆ ಹುಗಳಿಯಲ್ಲಿ ನಿಂತುಕೊಂಡಿದ್ದರು. ಕಡೆಗೆ ಮೊಗಲರ ಮುಂಬೆ ಆಟಸಾಗದೆ ಅವರು ಸಮುದ್ರದ ಕಡೆಗೆ ಸಾಗುತ್ತಿರಲು ಸೆರೆಹಿಡಿಯಲ್ಪಟ್ಟು ಬಹು ಜನರು ಕೊಲೆಗೆ ಗುರಿಯಾದರು. ಅಂದಿನಿಂದ ಪೋರ್ತುಗೀಜರ ಉಬ್ಬು ಅಡಗಿತು.

೪. **ಮುಮತಾಜ್ ಮಹಾಲಳ ಮರಣ**:— ಕ್ರಿ. ಶ. ೧೬೩೧ರಲ್ಲಿ ಷಾಹೆಜಹಾನನ ಪ್ರೀತಿಯ ಹೆಂಡತಿಯಾದ **ಅರ್ಜಮಂದ ಬಾನುವು** ಮರಣ

ಹೊಂದಿದಳು. ಈಕೆಯು ನೂರಜಹಾನಳ ತಮ್ಮನಾದ ಆಸಫಖಾನನ ಮಗಳು ಕ್ರಿ. ಶ. ೧೬೧೯ರಲ್ಲಿ ಷಾಹೆಜಹಾನನನ್ನು ಮದುವೆಯಾದ ಬಳಿಕ **ಮುಮತಾಜ್ ಮಹಾಲ** (ಅರಮನೆಯ ಭೂಷಣ) ಎಂಬ ಹೆಸರನ್ನು ಹೊಂದಿದಳು. ಈಕೆಯ ವಿಯೋಗದಿಂದ ಷಾಹೆಜಹಾನನು ಬಹು ದುಃಖಿತನಾದನು. ಮತ್ತು ಈಕೆಯ ನೆನಪಿಗೆಂದೇ ಒಂಬತ್ತು ಕೋಟಿ ರೂಪಾಯಿ ವೆಚ್ಚನೂಡಿ **'ತಾಜಮಹಾಲ್'** ಎಂಬ ಅತಿ ಸುಂದರವಾದ ಕಟ್ಟಡವನ್ನು ಕಟ್ಟಿಸಿದನು. ಈಕೆಯ ಮಕ್ಕಳಲ್ಲಿ **ದಾರಾ, ಸುಜಾ, ಔರಂಗಜೀಬ** ಮತ್ತು **ಮುರಾದ** ಎಂಬ ಗಂಡುಮಕ್ಕಳೂ, **ಜಹಾನ್ ಆರಾ** ಮತ್ತು **ರೋಷನ್‌ಆರಾ** ಎಂಬ ಹೆಣ್ಣುಮಕ್ಕಳೂ ಬದುಕಿದ್ದರು.



ತಾಜ್‌ಮಹಾಲ್

೫. ನಿಜಾಮಷಾಹಿಯನ್ನು ಮೊಗಲ ರಾಜ್ಯಕ್ಕೆ ಕೊಡಿಸಿದ್ದು:— ಖಾನಜಹಾನನು ಸತ್ತಬಳಿಕ ಷಾಹೆಜಹಾನನು ನಿಜಾಮಷಾಹಿಯನ್ನು ಮುರಿಯುವ ನಿಶ್ಚಯಮಾಡಿದನು. ಇವನ ಸರದಾರನಾದ **ಅಜೀಮಖಾನನು** ದೌಲತಾಬಾದ ಕೋಟೆಯನ್ನು ವಶಮಾಡಿಕೊಂಡನು. ಕ್ರಿ. ಶ. **೧೬೩೦.** ಆಗ ನಿಜಾಮಷಾಹಿಯ ರಾಜ್ಯದಲ್ಲಿ ಶಹಾಜಿ ಭೋಸಲೆಯು ಮುಖ್ಯನಾಗಿದ್ದನು. ಅವನೂ ಆದಿಲ್‌ಷಾಹಿಯವರೂ ಕೂಡಿ ಮೊಗಲ ಸೈನ್ಯಕ್ಕೆ ಇದಿರಾಗಿ ಅದನ್ನು ಸೋಲಿಸಿದರು. ಆದರೆ ಅತ್ತ ಮೊಗಲ ಸುಭೇದಾರನಾದ **ಮುಹಬತ್‌ಖಾನನು**

ಅಹಮ್ಮದನಗರವನ್ನು ಗೆದ್ದು, ನಿಜಾಮುಷಾಹನನ್ನು ಸೆರೆಹಿಡಿದು ಗ್ವಾಲ್ಹೇರ ಕೋಟೆಯಲ್ಲಿ ಇಟ್ಟನು. ಆಗ ಶಹಾಜಿ ಭೋಸಲೆಯು **ಮುರ್ತುಜಾ** ನಿಜಾಮ ಷಾಹನನ್ನು **ಜುನ್ನರ**ದಲ್ಲಿ ಪಟ್ಟಕ್ಕೆ ಕುಳ್ಳಿರಿಸಿ, ನಿಜಾಮಷಾಹಿಯನ್ನು ಬದುಕಿ ಸುವ ಪ್ರಯತ್ನ ನಡೆಸಿದನು. ಷಾಹೆಜಹಾನನು ಕ್ರಿ.ಶ. **೧೬೩೫**ರಲ್ಲಿ ಮೊದಲು ಶಹಾಜಿಯ ಮೇಲೆ ಸೈನ್ಯವನ್ನು ಕಳುಹಿಸಿದನು. ಶಹಾಜಿಯು **ಖಾನಜಮಾನನ** ಸಂಗಡ ನೂರಿದ ಪರಾಕ್ರಮದಿಂದ ಕಾದಿದರೂ ಕಡೆಗೆ ಮೊಗಲರೇ ಜಯ ಹೊಂದಿದರು. ಇವ್ವರಲ್ಲಿ **ಖಾನದೌರಾನ** ಎಂಬ ಮೊಗಲರ ಸೇನಾಪತಿಯು ವಿಜಾಪುರದ ಮೇಲೆ ಸಾಗಿ ಹೋಗಿದ್ದನು. ಆದಿಲ್‌ಷಾಹೀ ಸರದಾರನಾದ **ರಣದುಲ್ಲಾಖಾನನ** ಪರಾಕ್ರಮವೂ ವ್ಯರ್ಥವಾಯಿತು. ಅಲ್ಲಿಯೂ ಮೊಗಲರೇ ಗೆದ್ದರು. ವಿಜಾಪುರದವರು ಒಡಂಬಡಿಕೆ ಮಾಡಿಕೊಂಡದ್ದರಿಂದ ಷಾಹೆಜ ಹಾನನು ಭೀಮಾನದಿಯ ದಕ್ಷಿಣದ ಪ್ರದೇಶವನ್ನು ಅವರಿಗೆ ಕೊಟ್ಟು, ಉಳಿದ ನಿಜಾಮಷಾಹಿಯ ರಾಜ್ಯವನ್ನು ಮೊಗಲ ರಾಜ್ಯಕ್ಕೆ ಕೂಡಿಸಿಕೊಂಡನು. ಕ್ರಿ.ಶ. **೧೬೩೭** ಶಹಾಜಿ ಭೋಸಲೆಯು ವಿಜಾಪುರದ ಸರದಾರನಾದನು.

೬. ಕಂದಾಹಾರನನ್ನು ಕೈವಶಮಾಡಿಕೊಳ್ಳುವ ಕೊನೆಯ ಪ್ರಯತ್ನ : ಜಹಾಂಗೀರನ ಕಾಲಕ್ಕೆ ಮೊಗಲರ ಕೈಬಿಟ್ಟ ಕಂದಾಹಾರವು ಇರಾಣದ ಷಾಹನ ಸುಭೇದಾರನಾದ **ಅಲಿಮರ್ದಾನಖಾನನ** ವಶದಲ್ಲಿತ್ತು. ಷಾಹನ ಕಾಟ ದಿಂದ ತ್ರಸ್ತನಾದ ಈ ಸರದಾರನು ಮೊಗಲರನ್ನು ಕೂಡಿಕೊಂಡು, ಕಂದಾ ಹಾರ ಕೋಟೆಯನ್ನು ಷಾಹೆಜಹಾನನಿಗೆ ಕೊಟ್ಟುಬಿಟ್ಟನು. ಕ್ರಿ.ಶ. **೧೬೩೮**. ಮುಂದೆ ಈ ಖಾನನೂ, **ಮುರಾದನೂ, ಔರಂಗಜೇಬನೂ** ಪರಾಕ್ರಮದಿಂದ ಕಾದಿ ಬಲಖ ಪ್ರಾಂತವನ್ನು ತಕ್ಕೊಂಡರು; ಅತ್ತ ಕಡೆಯ ಯುದ್ಧಗಳಲ್ಲಿ ಮೊಗ ಲರಿಗೆ ಜಯದೊರೆತರೂ ಆ ಗೆದ್ದ ಸೀಮೆಗಳನ್ನು ಕಾದಿಟ್ಟುಕೊಳ್ಳುವದು ಕಠಿಣ ವಾಗಿತ್ತು. ಕ್ರಿ.ಶ. ೧೬೪೯ರಲ್ಲಿ ಕಂದಾಹಾರವನ್ನು ಇರಾಣಿಯರು ಮುತ್ತಿ ದರು. ಅದನ್ನು ಉಳಿಸಿಕೊಳ್ಳುವದಕ್ಕಾಗಿ ಔರಂಗಜೇಬನು ಎರಡು ಸರತಿ ಮಾಡಿದ ಪ್ರಯತ್ನಗಳು ನಿಷ್ಫಲವಾಗಲು, ಬಾದಷಾಹನು ದಾರಾನನ್ನು ಆ ಕೆಲಸಕ್ಕೆ ನಿಯಮಿಸಿದನು. ಕ್ರಿ.ಶ. ೧೬೫೩. ಅವನಿಂದಲೂ ಕಂದಹಾರವನ್ನು ಕಾದುಕೊಳ್ಳುವದಾಗದಿರಲು ಅದರ ಆಶೆಯನ್ನೇ ಬಿಟ್ಟುಬಿಟ್ಟನು.

೭. **ಔರಂಗಜೇಬನ ಸುಭೇದಾರಿಕೆ** :— ಅಹಮ್ಮದನಗರದ ರಾಜ್ಯವು ಮೊಗಲರ ವಶವಾದ ಬಳಿಕ ಔರಂಗಜೇಬನು ದಕ್ಷಿಣದ ಸುಭೇದಾರನಾದನು. ಅದುವರೆಗೆ ಬರ್ಹಾಣಪುರವು ದಕ್ಷಿಣದ ರಾಜಧಾನಿಯಾಗಿತ್ತು. ಔರಂಗಜೇಬನು ಅದನ್ನು ಬಿಟ್ಟು, ರಾಜಕೀಯ ದೃಷ್ಟಿಯಿಂದ ಹೆಚ್ಚು ಅನುಕೂಲವಾದ **ಖಡಕಿ** ಯನ್ನು ರಾಜಧಾನಿಯನ್ನು ಮಾಡಿ, ಆದಕ್ಕೆ **ಔರಂಗಾಬಾದ** ಎಂದು ಹೆಸರಿಟ್ಟನು. ಕ್ರಿ. ಶ. ೧೬೫೬ರಿಂದ ೧೬೪೪ರವರೆಗೆ ಇವನು ದಕ್ಷಿಣದ ಕಾರಭಾರವನ್ನು ಸಾಗಿಸಿದ ಬಳಿಕ, ಮೂರು ವರ್ಷ ಗುಜರಾಥದ ಸುಭೇದಾರನಾಗಿದ್ದನು. ಮುಂದೆ ಕಂದಾಹಾರವನ್ನು ಉಳಿಸುವ ಪ್ರಯತ್ನವು ವಿಫಲವಾದ ಬಳಿಕ ಇವನು ಮತ್ತೆ ದಕ್ಷಿಣದ ಸುಭೇದಾರಿಗೆ ಬಂದನು.

ಆಗ ಕುತುಬಶಾಹಿಯನ್ನು **ಅಬ್ದುಲ್ಲಾ ಕುತುಬಷಾಹನು** ಆಳುತ್ತಿದ್ದನು **ಮಿರಜುಮ್ಲಾ** ಎಂಬ ವ್ರಸಿದ್ಧ ಇರಾಣೀ ಸರದಾರನು ಅವನಲ್ಲಿದ್ದನು. ಈ ಸರದಾರನು ದಕ್ಷಿಣಕ್ಕೆ ಚಂದ್ರಗಿರಿಯ ವರೆಗೆ ರಾಜ್ಯವನ್ನು ವಿಸ್ತರಿಸಿ ಕುತುಬಷಾಹಿಯನ್ನು ಬಲಿಸಿದ್ದನು; ಮತ್ತು ದೊಡ್ಡ ಸೈನ್ಯವನ್ನು ಸಜ್ಜುಗೊಳಿಸಿ, ಯುರೋಪಿಯನ್ ಅಧಿಕಾರಿಗಳನ್ನು ಇಟ್ಟುಕೊಂಡಿದ್ದನು. ಔರಂಗಜೇಬನು ಇಂಥ ಗಟ್ಟಿಗನಾದ ಸರದಾರನನ್ನು ತನ್ನ ಕಡೆಗೆ ಮಾಡಿಕೊಂಡು, ಕುತುಬಷಾಹಿಯೊಡನೆ ಜಗಳ ಹೂಡಿದನು ಆಗ ಕುತುಬಷಾಹನು ಒಪ್ಪಂದ ಮಾಡಿಕೊಳ್ಳಲು ಸಿದ್ಧನಿರುವೆನೆಂದು ಷಾಹೆಜಹಾನನಿಗೆ ಹೇಳಿಕೊಳ್ಳಲು ಅವನು ಔರಂಗಜೇಬನಿಗೆ, 'ಕುತುಬಷಾಹನೊಡನೆ ಒಪ್ಪಂದ ಮಾಡಿಕೊಳ್ಳು' ಎಂದು ತಿಳಿಸಿದನು. ಕುತುಬಷಾಹನು ಮೊಗಲರ ಮಾಂಡಲಿಕನಾಗಿ ಇಪ್ಪತ್ತು ಲಕ್ಷ ರೂಪಾಯಿ ಕಪ್ಪ ಕೊಟ್ಟನು. ಕ್ರಿ ಶ. ೧೬೫೬. ಔರಂಗಜೇಬನು ತನ್ನ ಮಗ **ಮಹಮ್ಮದ**ನಿಗೆ ಕುತುಬಷಾಹನ ಮಗಳನ್ನು ಮಾಡಿಕೊಂಡನು.

ಮರುವರುಷ ಔರಂಗಜೇಬನು ವಿಜಾಪುರದವರ ಮೇಲೆ ಸಾಗಿ **ಬೇದರ, ಕಲ್ಯಾಣ ಈ** ಕೋಟೆಗಳನ್ನು ವಶಮಾಡಿಕೊಂಡನು. ಮೊಗಲರ ಸಾಮರ್ಥ್ಯವು ಹೆಚ್ಚಿನದೆಂದು ತಿಳಿದು ವಿಜಾಪುರದವರು ಬೇದರ, ಕಲ್ಯಾಣ ಮತ್ತು ಪಾರಿಂಡ ಕೋಟೆಗಳನ್ನೂ ಹೇರಳ ಕಪ್ಪನ್ನೂ ಕೊಟ್ಟು ಒಪ್ಪಂದ ಮಾಡಿಕೊಂಡರು. ಕ್ರಿ. ಶ. ೧೬೫೭. ಅಷ್ಟರಲ್ಲಿ ಷಾಹೆಜಹಾನನು ಬೇನೆಬಿದ್ದ ಸುದ್ದಿ ಬಂದದರಿಂದ ಔರಂಗಜೇಬನ ಮನಸ್ಸು ದಿಲ್ಲಿಯ ಕಡೆಗೆ ಹೊರಳಿತು.

೮. **ಪಟ್ಟದ ಸಂಬಂಧದ ಕೆಲಹಗಳು**:— ಮೊಗಲ ರಾಜ್ಯದಲ್ಲಿ ಯುವರಾಜನನ್ನು ಆರಿಸುವ ಪದ್ಧತಿಯು ಇಲ್ಲದ್ದರಿಂದ, ಅರಸುಮಕ್ಕಳಲ್ಲಿ ಬಲಿಷ್ಠರಾದವರೇ ರಾಜ್ಯಕ್ಕೆ ಒಡೆಯರಾಗುತ್ತಿದ್ದರು. ಷಾಹೆಜಹಾನನು ಬೇನೆ ಬೀಳಲು **ದಾರಾ, ಸುಜಾ, ಔರಂಗಜೇಬ** ಮತ್ತು **ಮುರಾದ** ಈ ನಾಲ್ವರು ಮಕ್ಕಳೂ ಪಟ್ಟದ ಸಲುವಾಗಿ ಜಗಳಾಡಹತ್ತಿದರು. ಹಿರಿಯವನಾದ ದಾರಾನು ಲಾಹೋರ ಕಾಬೂಲಗಳ ಸುಭೇದಾರಿಕೆಗೆ ಹೋಗುವದನ್ನು ತಪ್ಪಿಸಿ ಆಲ್ಯೆಕೆಯ ನೆವದಿಂದ ತಂದೆಯ ಬಳಿಯಲ್ಲಿದ್ದುಕೊಂಡು, ಉಳಿದವರು ತನಗಿಂತ ಬಲಿಷ್ಠ ರಾಗದಂತೆ ಪ್ರಯತ್ನದಲ್ಲಿದ್ದನು. ಇವನು ಜನಪ್ರಿಯನೂ ಸಹಿಷ್ಣುವೂ ಆಗಿದ್ದರೂ ತನ್ನ ಮಾತನ್ನೇ ನಡಿಸುವ ಹಟವಾದಿಯಾಗಿದ್ದನು. ಹಿತಚಿಂತಕರ ಮಾತು ಕೇಳುತ್ತಿದ್ದಿಲ್ಲ ಬಾದಷಾಹನು ಕಡೆ ಕಡೆಗಂತು ಇವನ ತಂತ್ರ ದಂತೆಯೇ ನಡೆಯಹತ್ತಿದನು. † 1 **ಸುಜಾನು** ಶೂರನಿದ್ದು ಬಂಗಾಲದ ಸುಭೇದಾರನಿದ್ದನು, ಇವನು ಸಾಹಸಿಯಲ್ಲ. **ಮುರಾದನು** ಶೂರನಿದ್ದರೂ ಜಾಣನಾಗಿರಲಿಲ್ಲ, ಇವನು ಗುಜರಾಥದ ಅಧಿಕಾರವನ್ನು ಪಡೆದಿದ್ದನು. **ಔರಂಗಜೇಬನು** ಮಾತ್ರ ಪರಾಕ್ರಮಿಯೂ ಚತುರನೂ ಎರಡನೆಯವರ ಆಟ ವನ್ನು ನಡೆಯಗೊಡದವನೂ ಆಗಿದ್ದನು. ಇವನು ಮುಸಲ್ಮಾನೀ ಧರ್ಮದ ಅಭಿಮಾನಿಯಾಗಿದ್ದನು ದಾರಾನನ್ನು ಇವನು ಸೇರುತ್ತಿದ್ದಿಲ್ಲ. ಏಕೆಂದರೆ ಔರಂಗಜೇಬನು ಬಲಿಷ್ಠನಾಗಬಾರದೆಂದು ಅವನು ಅನೇಕ ಕುಯುಕ್ತಿಗಳನ್ನು ಯೋಜಿಸಿದ್ದನು ರಾಜಧಾನಿಯಿಂದ ದೂರವಾಗಿರುವಂತೆ ಬೇಕೆಂದು ದೂರದ ಕೆಲಸಗಳ ಮೇಲೆ ಕಳುಹಲು ಸಾಹಸಪಡುತ್ತಿದ್ದನು. ಮತ್ತು ತಂದೆಯ ಬರೆಹದಂತೆ ಬರೆಹಗಳನ್ನು ಬರೆದು ಅಯೋಗ್ಯವಾದ ಅಪ್ಪಣೆಗಳನ್ನು ಕಳುಹಿ ಅಲ್ಲಲ್ಲಿ ವಿಘ್ನಗಳನ್ನು ಉಂಟುಮಾಡುತ್ತಿದ್ದನು. † 2 **ಜಹಾನ್ ಆರಾ** ದಾರಾ ನಿಗೂ **ರೋಷನ್ ಆರಾ** ಔರಂಗಜೇಬನಿಗೂ ಅನುಕೂಲರಾಗಿದ್ದರು. ರೋಷನ್ ಆರಾಳಿಂದ ದಾರಾನ ಕಾರಸ್ಥಾನವೆಲ್ಲ ಔರಂಗಜೇಬನಿಗೆ ತಿಳಿಯುತ್ತಿತ್ತು

† ಡಾಕ್ಟರ ಬರ್ನಿಯರ ಕೃತ ಸಫರನಾಮಾ ಭಾಗ ೧ ಪುಟ ೧೧.

†1 ಡಾಕ್ಟರ ಬರ್ನಿಯರ ಕೃತ ಸಫರನಾಮಾ ಭಾಗ ೧ ಪುಟ ೬೨.

†2 ಫಯಾಜುಲ್ ಕವಾನೀನ.

ಮುರಾದನು ಮೇಲಿಂದಮೇಲೆ ಪತ್ರ ಬರೆದು ದಿಲ್ಲಿಯ ಮೇಲೆ ಸಾಗುವ ದಕ್ಕಾಗಿ ಔರಂಗಜೇಬನ ಸಹಾಯವನ್ನು ಕೇಳಹತ್ತಿದನು. ಆಗ ಅವರಿಬ್ಬರು ರಾಜ್ಯವು ದೊರೆತ ಬಳಿಕ ಅದನ್ನು ಹೇಗೆ ಹಂಚಿಕೊಳ್ಳಬೇಕೆಂಬದನ್ನು * ಗೊತ್ತುಮಾಡಿಕೊಂಡರು. ಮತ್ತು ಮುರಾದನು ಗುಜರಾಥದಿಂದಲೂ ಔರಂಗಜೇಬನು ದಕ್ಷಿಣದಿಂದಲೂ ರಾಜಧಾನಿಯ ಕಡೆಗೆ ಸಾಗಿದರು. ದಾರಾನು ಔರಂಗಜೇಬನನ್ನು ಅಡ್ಡಗಟ್ಟುವದಕ್ಕಾಗಿ **ಜಸವಂತಸಿಂಗ**ನನ್ನು ಕಳುಹಿದ್ದನು. ಔರಂಗಜೇಬನು ಅವನನ್ನು **ಧರ್ಮತ್** ಎಂಬಲ್ಲಿ ಸೋಲಿಸಿ ಓಡಿಸಿದನು. ಅತ್ತ ದಾರಾನ ಮಗ **ಸುಲೇಮಾನ**ನೂ ಬಂಗಾಲದಿಂದ ಮುಂದಕ್ಕೆ ನಡೆದಿರಲು ದಾರಾನು **ಸಾಮುಗಡ**ದ ಹತ್ತಿರ ಇದಿರಾಗಿ ಸೋತು ಸಾಗಿಬಂದ **ಸುಜಾ**ನನ್ನು ನೋಲಿಸಿ ಹಿಂದಕ್ಕಟ್ಟಿದನು. ಮುರಾದನೂ ಔರಂಗಜೇಬನೂ ದಿಲ್ಲಿಯ ಕಡೆಗೆ ಸಾಗಿದ್ದರು. ಅಷ್ಟರಲ್ಲಿ ಷಾಹೆಜಹಾನನಿಂದ ಒಂದು ಪತ್ರವೂ **ಅಲಂಗೀರ** ಎಂದು ಹೆಸರು ಕೆಚ್ಚಿದ ಖಡ್ಗವೂ ಔರಂಗಜೇಬನ ಕೈಗೆ ಬಂದವು

ಇದೇ ಸಂಧಿಯಲ್ಲಿ ಜಹಾನ್ ಆರಾಳು ಔರಂಗಜೇಬನನ್ನು ಸೆರೆಹಿಡಿಯಬೇಕೆಂದು ರಾಜಮಂದಿರದಲ್ಲಿ ಸಶಸ್ತ್ರ ತಾರ್ತರಿ ಸ್ತ್ರೀಯರನ್ನು ಗುಪ್ತವಾಗಿಟ್ಟು ಸಂಗತಿಯ ಪತ್ರವೂ ಲಾಹೋರದಲ್ಲಿದ್ದ ದಾರಾನ ಪಕ್ಷಗಟ್ಟಿ ಔರಂಗಜೇಬ ಮುರಾದರ ಮೇಲೆ ದಂಡೆತ್ತಿ ಬರಬೇಕೆಂದು ಕಾಬೂಲದ ಸುಭೇದಾರನಾದ ಮಹಬತ್ ಖಾನನಿಗೆ ಷಾಹೆಜಹಾನನು ಬರೆದು ಕಳುಹಿದ ಪತ್ರವೂ ಔರಂಗಜೇಬನ ಕೈಗೆ ಸಿಕ್ಕವು. ಚತುರನಾದ ಔರಂಗಜೇಬನು ರಾಜಧಾನಿಗೆ ಹೋಗದೆ ತನ್ನ ಮಗ **ಮಹಮ್ಮದ ಅಜಮ**ನನ್ನು ಕಳುಹಿದನು. ಅವನು ಅರಮನೆ ಹೊಕ್ಕು ರೋಷನ್ ಆರಳ ಸಹಾಯದಿಂದ ತನ್ನ ಅಜ್ಜ ಷಾಹೆಜಹಾನನನ್ನು ಸೆರೆಯಲ್ಲಿಟ್ಟನು. ಇತ್ತ ಮುರಾದನು ಔರಂಗಜೇಬನ ಸರದಾರನನ್ನು ತನ್ನ ಕಡೆಗೆ ಒಲಿಸಿಕೊಳ್ಳುವ ಪ್ರಯತ್ನ ನಡಿಸಿದ್ದನು. ಔರಂಗಜೇಬನು ಮುರಾದನ

---

* "ಔರಂಗಜೇಬನಿಗೆ ರಾಜ್ಯವು ದೊರೆತರೆ ಸುಲಿಗೆಯ ಮೂರರಲ್ಲೊಂದು ಭಾಗವನ್ನೂ ಕಾಬೂಲ, ಪಂಜಾಬ ಮತ್ತು ಕಾಶ್ಮೀರ ಪ್ರಾಂತಗಳನ್ನೂ ಮುರಾದನಿಗೆ ಕೊಡತಕ್ಕದ್ದು" ಎಂದು ನಿರ್ಣಯವಾಗಿತ್ತು.

ಫಯಾಜುಲ್ ಕವಾನೀನ.

*, ಡಾಕ್ಟರ ಬರ್ನಿಯರ, ಕಾಫಿಖಾನ.

ಈ ತಂತ್ರವನ್ನು ತಿಳಿದು, ಅಮಲಿನಲ್ಲಿರುವಾಗ ಅವನನ್ನು ಹಿಡಿದು ಗ್ವಾಲ್ಹೇರ ದಲ್ಲಿ ಸೆರೆಯಿಟ್ಟನು. ಅಲ್ಲಿ ಕ್ರಿ. ಶ. ೧೬೬೧ರಲ್ಲಿ ಅವನ ಕೊಲೆಯಾಯಿತು. ಬಳಿಕ ಔರಂಗಜೇಬನು ದಾರಾನ ಮೇಲೆ ಸೈನ್ಯವನ್ನು ಕಳುಹಿ, ತಾನು ಸುಜಾನನ್ನು ಬೆನ್ನಟ್ಟಿ ಖಾಜವಾ ಎಂಬಲ್ಲಿ ಅವನನ್ನು ಸೋಲಿಸಿದನು. ಸುಜಾನು ಆರಾಕಾನದ ಕಡೆಗೆ ಹೋದವನು ತಿರುಗಲಿಲ್ಲ. ದುರ್ದೈವಿಯಾದ ದಾರಾನು ಅಜಮೀರದ ನೆರೆಯಲ್ಲಿ ಸೋತು ಓಡಿಹೋಗುವಾಗ **ಬೋಲನ್** ಕಣಿವೆಯಲ್ಲಿ ಹಿಡಿಯಲ್ಪಟ್ಟನು. ಔರಂಗಜೇಬನು ಅವನನ್ನು ಧರ್ಮದ್ರೋಹಿ ಎಂದು ನಿರ್ಣಯಿಸಿ ಕೊಲ್ಲಿಸಿದನು. ಇದಕ್ಕೂ ಸ್ವಲ್ಪ ದಿನ ಮೊದಲು ಔರಂಗಜೇಬನು **ದಿಲ್ಲಿ** ಯಲ್ಲಿ ಪಟ್ಟಕ್ಕೆ ಕುಳಿತನು. ಕ್ರಿ ಶ. ೧೬೫೯.

೯. ಷಾಹೆಜಹಾನನ ಮರಣ :— ಕ್ರಿ. ಶ. ೧೬೬೬ರಲ್ಲಿ ಷಾಹೆಜಹಾನನು ಮರಣಹೊಂದಿದನು ಅಲ್ಲಿಯವರೆಗೆ ಅವನು ಔರಂಗಜೇಬನ ಬಿಗಿಯಾದ ಕಾವಲಿನಲ್ಲಿಯೆ ಇದ್ದನು. ಆದರೂ ಔರಂಗಜೇಬನು ತಂದೆಯ † ಸುಖಸಾಧನಗಳಲ್ಲಿ ಕೊರತೆಯಾಗಗೊಡಲಿಲ್ಲ ಅತಿ ವೈಭವದಿಂದ ಬಾಳಿದ ಷಾಹೆಜಹಾನನಿಗೆ ಈ ಸ್ಥಿತಿಯು ಕೂಡ ದುಃಸಹವಾಯಿತು ಸಾಯುವಾಗ ಇವನಿಗೆ ೭೯ ವರ್ಷ ವಯಸ್ಸಾಗಿತ್ತು.

೧೦. ಷಾಹೆಜಹಾನನ ಯೋಗ್ಯತೆ :— ಇವನು ಕರ್ತೃತ್ವಶಾಲಿಯೂ ವೈಭವಸಂಪನ್ನನೂ ಸೊಬಗಿನವನೂ ಸಹಿಷ್ಣುವೂ ಆಗಿದ್ದನು. ಇವನ ಆಳಿಕೆಯಲ್ಲಿ ದೇಶದೊಳಗೆ ಶಾಂತತೆಯೂ ಅಭಿವೃದ್ಧಿಯೂ ಉಂಟಾಗಿದ್ದವು. ಕ್ರಿ. ಶ. ೧೬೩೦ರ ಸುಮಾರಕ್ಕೆ ಮಾತ್ರ ಒಂದು ಬರವು ಬಿದ್ದಿತ್ತು. ಈತನು ಕಲಾಕೌಶಲ್ಯಗಳಿಗೆ ಬಹಳ ಉತ್ತೇಜನ ಕೊಟ್ಟನು. **ಮಯೂರಾಸನ, ತಾಜ ಮಹಾಲ್, ಮೋತೀ ಮಸೀದೆ** ಇವು ಷಾಹೆಜಹಾನನು ಮಾಡಿಸಿದ ಕೆಲಸಗಳಾಗಿವೆ. ಮತ್ತು ದಿಲ್ಲಿ ಪಟ್ಟಣವನ್ನು ಹೊಸದಾಗಿ ನೆಲೆಸಿ, ಕಾಲುವೆಯಿಂದ ಪಟ್ಟಣಕ್ಕೆ ನೀರಿನ ಪೂರೈಕೆಯನ್ನು ಮಾಡಿದನು. ವಿದ್ಯೆಯ ಅಭಿಮಾನಿಯಾಗಿದ್ದು ಅನೇಕ ವಿದ್ವಾಂಸರಿಗೆ ಆಧಾರನಾಗಿದ್ದನು. ಕಾರ್ಯ ಕುಶಲರಾದ

† ಔರಂಗಜೇಬನು ಸೆರೆಯಲ್ಲಿದ್ದ ಷಾಹೆಜಹಾನನೊಡನೆ ಚಲೋ ರೀತಿಯಿಂದ ನಡೆದನು. ಮತ್ತು ಅವನಿಗೆ ಎಲ್ಲ ಅನುಕೂಲತೆಗಳನ್ನು ಒದಗಿಸಿಕೊಟ್ಟನು.

ಅಸಫ್‌ಖಾನ, ಸಾದುಲ್ಲಾಖಾನ ಎಂಬ ಮಂತ್ರಿಗಳ ನೆರವಿನಿಂದ ವ್ಯವಸ್ಥಿತವಾಗಿ ರಾಜ್ಯಕಾರಭಾರವನ್ನು ಸಾಗಿಸಿದ್ದನು. ಇವನ ರಾಜ್ಯದ ೨೨ ಸುಭೆಗಳ ಉತ್ಪನ್ನವು ೫೬ ಕೋಟಿ ರೂಪಾಯಿ ಇತ್ತು. ಕಟ್ಟಡ ಮುಂತಾದ ಕೆಲಸಗಳಿಗೆ ಕೋಟಿಗಟ್ಟಲೆ ಹಣ ವೆಚ್ಚವಾಗಿಯೂ ಇವನ ಬೊಕ್ಕಸದಲ್ಲಿ ಇಪ್ಪತ್ತು ಕೋಟಿ ರೂಪಾಯಿಗಳು ಸಿಲುಕು ಇದ್ದವು. ಇದರಿಂದ ಇವನ ಕಾಲದ ಐಶ್ವರ್ಯದ ಕಲ್ಪನೆಯು ಚೆನ್ನಾಗಿ ಆಗುವದು ಅಂತೆಯೇ ಷಾಹೆಜಹಾನನ ಕಾಲವು ಮೊಗಲರ ಆಳಿಕೆಯ ಸುವರ್ಣಕಾಲವೆನಿಸಿತು.

೭೧ನೆಯ ಪಾಠ

ಔರಂಗಜೇಬ

(ಕ್ರಿ. ಶ. ೧೬೫೮—೧೭೦೭)

೧. **ಸಾಮಾನ್ಯ ವಿಚಾರ** :- ಅಕ್‌ಬರನೂ ಔರಂಗಜೇಬನೂ ಮೊಗಲ ಬಾದಷಾಹರಲ್ಲೆಲ್ಲ ಹೆಸರಾದವರು ಇಬ್ಬರೂ ಶೂರರೂ ಪರಾಕ್ರಮಿಗಳೂ ಆಗಿ ಬಹು ವಿಸ್ತಾರವಾದ ರಾಜ್ಯವನ್ನು ಆಳಿದರು.

ಅಕ್‌ಬರನು ವಿಲಾಸ – ರಾಜವೈಭವಗಳನ್ನು ಮೆಚ್ಚಿದ್ದನು. ಇವನು ವಿದ್ಯಾವಂತನಾಗಿರಲಿಲ್ಲ; ಆದರೆ ವಿದ್ಯಾವಂತರಿಂದ ಶಾಸ್ತ್ರವಿಚಾರಗಳನ್ನು ಅರಿತು ಕೊಳ್ಳುತ್ತಿದ್ದನು. ಇವನ ಧರ್ಮಸಂಬಂಧದ ವಿಚಾರಗಳು ಸ್ವತಂತ್ರವಾಗಿದ್ದವು; ತನಗೆ ಸರಿಕಂಡ ರೀತಿಯಲ್ಲಿ ಆಚರಣೆಯನ್ನಿಡುತ್ತಿದ್ದನು. ಅಧಿಕಾರಿಗಳ ಮೇಲೆ ವಿಶ್ವಾಸವಿಟ್ಟು, ಯೋಗ್ಯತೆಯಂತೆ ಅವರಿಂದ ಕೆಲಸಗಳನ್ನು ಮಾಡಿಸಿಕೊಳ್ಳುತ್ತಿದ್ದನು. ಹಿಂದುಗಳ ಮೇಲಿನ **ಜಜಿಯಾ** ಕರವನ್ನು ತೆಗೆದುಹಾಕಿ ಅವರನ್ನು ಸಮತೆಯಿಂದ ನಡಿಸಿಕೊಂಡು, ಅವರ ಸಹಾನುಭೂತಿಯನ್ನೂ ನೆರವನ್ನೂ ಹೊಂದಿದನು.

† ಔರಂಗಜೇಬನು ವಿಲಾಸ – ರಾಜವೈಭವ – ದುಂದುಗಾರಿಕೆಗಳನ್ನು ಎಷ್ಟೋ ಸೇರಲಿಲ್ಲ; ತೀರ ‡ ಸಾದಾವೃತ್ತಿಯನನಾಗಿದ್ದನು. ವಿದ್ಯಾವಂತನಾಗಿ ಕಡೆತನಕ ಗ್ರಂಥಾವಲೋಕನವನ್ನು ಸಾಗಿಸಿದ್ದನು. ಇವನು ಮುಸಲ್ಮಾನೀ ಧರ್ಮವನ್ನು ನಿಷ್ಠೆಯಿಂದ ಪಾಲಿಸುತ್ತಿದ್ದನು. ಯಾವ ಅಧಿಕಾರಿಗಳ ಮೇಲೆಯೂ ಪೂರ್ಣ ವಿಶ್ವಾಸನನ್ನಿಡದೆ ಸಣ್ಣಪುಟ್ಟ ಕೆಲಸಗಳಲ್ಲಿಯೂ ತನ್ನ ವಿಚಾರ



ಔರಂಗಜೇಬ್

† ಇವನ ಮೂಲ ಹೆಸರು ಮುಹಮ್ಮದ ಮೋಹಿಯುದ್ದೀನ ಎಂದು ಇತ್ತು; ಪಾಪೆ ಇವನ ಪರಾಕ್ರಮವನ್ನು ಕಂಡು ಇವನನ್ನು ಆಲಂಗೀರ (ಜಗತ್ತನ್ನು ಗೆಲ್ಲುವವ) ಎಂದು ಕರೆದನು. ಮುಂದೆ ಇವನು ಪಟ್ಟಕ್ಕೆ ಕುಳಿತಾಗ ಔರಂಗಜೇಬ (ಸಿಂಹಾಸನಕ್ಕೆ ಒಪ್ಪುವವ) ಎಂಬ ಬಿರುದನ್ನು ಧರಿಸಿದನು.

‡ ಶ್ರೀ ಜದುನಾಥ ಸರಕಾರ, ಎಮ್. ಎ. ಇವರ 'ಹಿಸ್ಟರಿ ಆಫ್ ಔರಂಗಜೇಬ' ಎಂಬ ಗ್ರಂಥದ ೫ನೆಯ ವ್ಹಾಲ್ಯೂಮು (೫ಂಡ) ದ ಪುಟ ೪೭೩.

ದಂತೆಯೇ ಅವರನ್ನು ನಡೆಯಹಚ್ಚುತ್ತಿದ್ದನು. ಹಿಂದುಸ್ಥಾನದ ಪರಿಸ್ಥಿತಿಯನ್ನು ಚೆನ್ನಾಗಿ ವಿಚಾರಿಸಿ ಅಕ್‌ಬರನು ಜಜಿಯಾ ಕರವನ್ನು ನಿಲ್ಲಿಸಿದನು. ಜಹಾಂಗೀರ, ಷಾಹೆಜಹಾನರು ಈ ಕರವನ್ನು ಎತ್ತಲಿಲ್ಲ. ಆದರೆ ಔರಂಗಜೇಬನು ಮೂರು ತಲೆಗಳಿಂದ ನಿಂತುಹೋಗಿದ್ದ ಈ ಕರವನ್ನು ಮತ್ತೆ ಎತ್ತಲಾರಂಭಿಸಿ, ಹಿಂದುಗಳ ಸಹಾನುಭೂತಿ-ಸಹಾಯಗಳಿಗೆ ಎರವಾದನು.

ಸದಾಚರಣೆ, ವಿದ್ಯೆ ಇವುಗಳಲ್ಲಿ ಅಕ್‌ಬರನಿಗಿಂತ ಔರಂಗಜೇಬನೇ ಹೆಚ್ಚಿನವನು. ಆದರೆ ಅಕ್‌ಬರನು ಹಿಂದುಗಳೊಡನೆ ಉದಾರಬುದ್ಧಿಯಿಂದ ನಡೆದು ಯಶಸ್ಸು ಪಡೆದನು. ಔರಂಗಜೇಬನು ಅಕ್‌ಬರನ ಧೋರಣವನ್ನು ಬಿಟ್ಟದ್ದರಿಂದ ಕಡೆಗೆ ಅಯಶಸ್ವಿಯಾದನು

೨. ಮಿರಜುಮ್ಲಾನ ಮರಣ:— ಇವನು ಇರಾಣದ ಅರಸು ಮನೆತನಕ್ಕೆ ಸೇರಿದ ಶೂರ ಸರದಾರನು. ಕ್ರಿ. ಶ. ೧೬೩೦ರಲ್ಲಿ ಗೋವಳಕೊಂಡದಲ್ಲಿ ಹರಳಿನ ವ್ಯಾಪಾರಸ್ಥನೆಂದು ಹೆಸರಿಗೆ ಬಂದನು. ಮುಂದೆ ಕುತುಬಷಾಹನಲ್ಲಿ ನೌಕರಿಗೆ ನಿಂತು ಪರಾಕ್ರಮದಿಂದ ಅವನ ರಾಜ್ಯವನ್ನು ಬಲಿಸಿದನು. ಕಡೆಗೆ ತನ್ನ ದಳದೊಂದಿಗೆ ಔರಂಗಜೇಬನನ್ನು ಕೂಡಿಕೊಂಡನು ಔರಂಗಜೇಬನು ತನಗೆ ಪಟ್ಟವು ದೊರೆತ ಬಳಿಕ ಈ ಶೂರ ಸರದಾರನನ್ನು ದೂರದ ಬಂಗಾಲ ಪ್ರಾಂತದ ಸುಭೇದಾರನನ್ನು ಮಾಡಿದನು. ಮಿರಜುಮ್ಲಾನು ಆಸಾಮದವರು ಎಬ್ಬಿಸಿದ ಬಂಡಾಯವನ್ನು ಅಡಗಿಸಿ, **ಗೋಹತ್ತಿ**ಯನ್ನು ಗೆದ್ದುಕೊಂಡನು. ಆದರೆ ಅಲ್ಲಿಯ ಗುಡ್ಡುಗಾಡಿನ ಹವೆಯು ಇವನಿಗೆ ತಡೆಯದ್ದರಿಂದ ಬೇಸೆದು ಮರಣಹೊಂದಿದನು. ಕ್ರಿ. ಶ. ೧೬೬೩.

೩. ಪೋರ್ತುಗೀಜರ ಹಾವಳಿಯನ್ನು ತಡೆದದ್ದು:– ಮಿರಜುಮ್ಲಾನು ಸತ್ತಬಳಿಕ ಔರಂಗಜೇಬನ ಸೋದರಮಾವನಾದ **ಷಾಯಿಸ್ತೆಖಾನ**ನು ಬಂಗಾಲದ ಸುಭೇದಾರನಾಗಿ, ಮುಂದೆ ೨೦ ವರ್ಷ ಅಲ್ಲಿಯ ಕಾರಭಾರವನ್ನು ಸಾಗಿಸಿದನು. ಇವನು ಹೊಸ ಹಡಗುಪಡೆಯನ್ನು ಸಜ್ಜುಗೊಳಿಸಿಕೊಂಡು, ಪೋರ್ತುಗೀಜರನ್ನು ಸೋಲಿಸಿ, ಅವರಿಗೆ ನೆರವಾಗಿದ್ದ ಆರಾಕಾನದ ಅರಸನ ಚಿತಗಾಂಗದ ಸೀಮೆಯನ್ನು ಕಸಿದುಕೊಂಡನು.

೪. **ಧಾರ್ಮಿಕ ಬಂಡಾಯಗಳನ್ನು ಮುರಿದದ್ದು**:— ಹಿಂದುಗಳು ಜಜಿಯಾ ಕರವನ್ನು ಒಪ್ಪದಿರಲು ಔರಂಗಜೇಬನು ಸಿಟ್ಟಾದನು. ಕಾಶಿಯಲ್ಲಿಯ ಧಾರ್ಮಿಕ ಪ್ರವಚನಗಳಾಗುವ ಕೆಲವು ದೇವಾಲಯಗಳನ್ನೂ ಪಾಠಶಾಲೆಗಳನ್ನೂ ಕೆಡಹಿಸಿದನು. ಮಥುರಾದಲ್ಲಿಯ ಕೇಶವ ಮಂದಿರವನ್ನೂ ಅನೇಕ ಮೂರ್ತಿಗಳನ್ನೂ ಒಡೆಸಿದನು. ಆಗ ಅಲ್ಲಿಯ **ಗೋಕುಲ** ಎಂಬವನು ದೊಡ್ಡ ಬಂಡಾಯವನ್ನೆಬ್ಬಿಸಲು, ಇವನು ತನ್ನ ನಾಲ್ಕು ಸಾವಿರ ಸೈನಿಕರನ್ನು ಕಳಿದುಕೊಂಡು ಆ ಬಂಡಾಯವನ್ನು ಅಡಗಿಸಿದನು ಕ್ರಿ. ಶ. **೧೬೭೨**ರಲ್ಲಿ ಪತಿಯಾಲಾ ಸಂಸ್ಥಾನದ **ಸತನಾಮಿ** ಎಂಬ ಜನರು ದಂಗೆಯನ್ನೆಬ್ಬಿಸಲು ಅದನ್ನೂ ಬಹು ಶ್ರಮಬಟ್ಟು ಮುರಿದನು. ಮತ್ತು ಕ್ರಿ. ಶ **೧೬೭೬**ರಲ್ಲಿ ಶೀಖರ ಗುರುವಾದ **ತೇಜಬಹಾದ್ದೂರ**ನನ್ನು ಹಿಡಿದು ತರಿಸಿ, ಅವನನ್ನು ಸೆರೆಯಲ್ಲಿಟ್ಟನು. ಅವನು ಮುಂಪೆ ಅಲ್ಲಿಯೇ ಮರಣಹೊಂದಿದನು. ಅಲ್ಲದೆ, ಹಿಂದುಗಳ ಯಾತ್ರೆ-ಉತ್ಸವಗಳಿಗೆ ಎಷ್ಟೋ ಕಡೆಗಳಲ್ಲಿ ಪ್ರತಿಬಂಧವನ್ನಿಟ್ಟನು. ಇದರಿಂದ ಇವನ ಮೇಲೆ ಹಿಂದುಗಳ ಅಪ್ರೀತಿಯಾಯಿತು.

೫. **ನಾಯನ್ಯ ಸೀಮೆಯ ಯುದ್ಧ**:— ಇರಾಣದ ಷಾಪಾ ಅಬ್ಬಾಸನ ಬೆಂಬಲದಿಂದ ಅಫಗಾನರು ಬಂಡಾಯ ಹೂಡಿದರು. ಷಾಹನ ನ್ನೇಹಸಂಪಾದನೆಗಾಗಿ ಔರಂಗಜೇಬನು ಮಾಡಿದ ಪ್ರಯತ್ನವು ಕೈಗೂಡದಿರಲು, ಅವನು ಮುಹಬತ್ ಖಾನನನ್ನು ಅಫಗಾನರಮೇಲೆ ಕಳುಹಿಸಿದನು. ಮುಹಬತ್ ಖಾನನು ಮುಪ್ಪಿನವನಾಗಿ ಕ್ರಿ. ಶ. ೧೬೭೨ರಲ್ಲಿ ಸತ್ತಬಳಿಕ , **ಕಾಸೀಮುಖಾನ**ನು ಮುಖ್ಯನಾಗಿ ಅಫಗಾನರನ್ನು ನೋಲಿಸಿದನು. ಬಳಿಕ ಗುಜರಾಥದ ಮೇಲಿದ್ದ ಜಸವಂತಸಿಂಗನು ಕಾಬೂಲ ಅಧಿಕಾರಿಯಾದನು.

೬. **ರಾಜಾ ಛತ್ರಸಾಲ**:— (ಕ್ರಿ. ಶ ೧೬೬೪—೧೭೩೫). ಬುಂದೇಲಖಂಡದ ರಾಜನಾದ **ಚಂಪತರಾಯ**ನು ಪಟ್ಟದೊರೆಯಿಸುವ ಕೆಲಸದಲ್ಲಿ ಔರಂಗಜೇಬನ ಸಹಾಯಕನಾಗಿದ್ದನು. ಆದರೆ ಮುಂದೆ ಇಬ್ಬರಲ್ಲಿ ಹಗೆತನ ಉಂಟಾಗಲು, ಕ್ರಿ. ಶ. ೧೬೬೪ರಲ್ಲಿ ಆದ ಯುದ್ಧದಲ್ಲಿ ಚಂಪತರಾಯನು ಹತನಾದನು. ಆಗ ಅವನ ಮಗ ಛತ್ರಸಾಲನು ಹದಿನಾಲ್ಕು ವರುಷದವನಿದ್ದರೂ ಧೈರ್ಯದಿಂದ ಹೋರಾಡಿ ತನ್ನ ಸ್ವಾತಂತ್ರ್ಯವನ್ನು ಕಾದುಕೊಂಡನು. ಈ

ಛತ್ರಸಾಲನು ಜಯಸಿಂಗನೊಡನೆ ದಕ್ಷಿಣಕ್ಕೆ ಬಂದಾಗ ಶಿವಾಜಿಗೆ ಭೆಟ್ಟಿಯಾಗಿದ್ದನು. ಆಗಅವರಿಬ್ಬರೂ ಮೊಗಲರ ಊಳಿಗವನ್ನು ಬಿಟ್ಟು ಸ್ವಾಂತತ್ರ್ಯಕ್ಕಾಗಿ ಪ್ರಯತ್ನಮಾಡಬೇಕೆಂದು ಗೊತ್ತುಮಾಡಿಕೊಂಡಿದ್ದರು.

೭. ರಜಪುತರ ಕೊಡ ಆದ ಯುದ್ಧ:— ಕಾಬೂಲದ ಸುಭೇದಾರನಾದ **ಜಸವಂತಸಿಂಗನ** ಮರಣದ ತರುವಾಯ ಆತನ ರಾಣಿಯನ್ನೂ ಇಬ್ಬರು ಮಕ್ಕಳನ್ನೂ ಔರಂಗಜೇಬನು ತನ್ನ ಆಧೀನದಲ್ಲಿ ಇರಿಸಿಕೊಂಡನು. ಜಸವಂತಸಿಂಗನ ಶೂರ ಸರದಾರನಾದ **ದುರ್ಗಾದಾಸ**ನು ಯುಕ್ತಿಯಿಂದ ಇವರನ್ನು ಜೋಧಪುರಕ್ಕೆ ಕರೆದುತಂದು, **ಅಜಿತಸಿಂಹ**ನನ್ನು ಪಟ್ಟಕ್ಕೆ ಕುಳ್ಳಿರಿಸಿ, **ತಾನೇ** ಕಾರಭಾರವನ್ನು ಸಾಗಿಸಿದನು. **ರಾಣಾರಾಜಸಿಂಹ**ನು ದುರ್ಗಾದಾಸನಿಗೆ ಸಹಾಯವನ್ನಿತ್ತು, ಎಲ್ಲ ರಜಪುತರನ್ನು ಕಲೆಹಾಕಿ, **ಮೊಗಲರೊಡನೆ** ಕಾದಲು ಆನುವಾದನು. ಮೊಗಲರ ಸೈನ್ಯವು ಇವರ ಮೇಲೆ ಸಾಗಿಬಂದಿತು. ಕ್ರಿ. ಶ. ೧೬೭೯. ರಜಪುತರು ಅರವಲಿಯ ಬೆಟ್ಟವನ್ನು ಆಶ್ರಯಿಸಿ, ಗನೀಮೀ ಪದ್ಧತಿಯಿಂದ ಯುದ್ಧಮಾಡಹತ್ತಿದರು. ರಾಣಾ ರಾಜಸಿಂಹನು, ದಿಲ್ಲಿಯ ಪಟ್ಟವನ್ನು ದೊರೆಯಿಸಿಕೊಡುವೆನೆಂದು ವಚನ ಕೊಟ್ಟು ಔರಂಗಜೇಬನ ಮಗ **ಅಕ್‌ಬರ**ನನ್ನು ತನ್ನ ಕಡೆಗೆ ಮಾಡಿಕೋಡನು. ಮುಂದೆ ಅಕ್‌ಬರನು ಇಲ್ಲಿದ್ದರೆ ಗತಿ ನೆಟ್ಟಗಾಗದೆಂದು ತಿಳಿದು ಮರಾಟರ ರಾಜನಾದ **ಸಂಭಾಜಿಯ** ಆಶ್ರಯವನ್ನು ಹೊಂದಬೇಕೆಂದು ದಕ್ಷಿಣಕ್ಕೆ ಹೋದನು. ಅಕ್‌ಬರನು ಸಂಭಾಜಿಯನ್ನು ಕೂಡಿಕೊಂಡರೆ ಅನರ್ಥವಾದೀತೆಂದು ಬಗೆದು ರಜಪುತರೊಡನೆ ಒಪ್ಪಂದ ಮಾಡಿಕೊಂಡು ಔರಂಗಜೇಬನು ದಕ್ಷಿಣಕ್ಕೆ ಹೊರಟನು. ರಜಪುತರೊಡನೆ ಆದ ಒಪ್ಪಂದದಿಂದ ಬಾದಷಾಹನು ಅವರ ರಾಜ್ಯವನ್ನು ಅವರ ಕಡೆಗೆ ನಡೆಯಿಸಬೇಕೆಂದೂ ಜಜಿಯಾ ಕರವನ್ನು ನಿಲ್ಲಿಸಬೇಕೆಂದೂ ಎಂದಿನಂತೆ ರಜಪುತರು ಬಾದಷಾಹನ ಮನಸಬದಾರರಾಗಬೇಕೆಂದೂ ಗೊತ್ತಾಯಿತು. ಕ್ರಿ. ಶ. ೧೭೮೧.

೮. ದಕ್ಷಿಣ ಹಿಂದುಸ್ಥಾನದ ಪರಿಸ್ಥಿತಿ:— ಕ್ರಿ. ಶ. **೧೬೫೭** ರಲ್ಲಿ ಷಾಹೆಜಹಾನನಿಗೆ ಜಡ್ಡು ಆದಾಗ ಔರಂಗಜೇಬನು ದಕ್ಷಿಣದೇಶವನ್ನು ಬಿಟ್ಟು ದಿಲ್ಲಿಯ ಕಡೆಗೆ ಹೋದನು. ಕ್ರಿ. ಶ. ೧೬೮೧ರ ವರೆಗೆ ಇತ್ತ ಕಡೆಗೆ ಬಂದಿರ

ಲಿಲ್ಲ. ಈ ಅವಧಿಯಲ್ಲಿ **ಶಿವಾಜಿ**ಯು ವಿಜಾಪುರದವರೊಡನೆ ಹೋರಾಡಿ ತನ್ನ ರಾಜ್ಯವನ್ನು ಬಲಿಸಿದನು. ಆಲ್ಲದೆ ಕ್ರಿ. ಶ. ೧೬೬೦ ರಿಂದ ಅವನು ಮೊಗಲ ರಾಜ್ಯದ ಮೇಲೆಯೂ ಸಾಗಿಬರಹತ್ತಿದನು. ಇವನನ್ನು ತಗ್ಗಿಸುವದಕ್ಕಾಗಿ ಔರಂಗಜೇಬನು ಮೊದಲು **ಷಾಹಿಸ್ತೇಖಾನ**ನನ್ನೂ ಬಳಿಕ **ಜಯಸಿಂಗ-ದಿಲೇರಖಾನ**ರನ್ನೂ ಕಳುಹಿಸಿದನು ಎರಡನೆಯ ಸರತಿ ಶಿವಾಜಿಯು ಸೋತು


ಶಿವಾಜಿ

ಪುರಂದರದಲ್ಲಿ ಒಪ್ಪಂದ ಮಾಡಿಕೊಂಡು ಬಾದಷಾಹನ ಮನಸಬದಾರನಾದನು. ಮತ್ತು ಜಯಸಿಂಗ-ದೀಲೇರ ಖಾನರು ಆದಿಲಷಾಹಿಯ ಮೇಲೆ ಸಾಗಿ ಹೋದಾಗ ಶಿವಾಜಿಯು ಅವರಿಗೆ ಸಹಾಯಕನಾಗಿ ಬಾದಷಾಹನ ಪ್ರೀತಿಗೆ ಪಾತ್ರನಾದನು. ಕ್ರಿ. ಶ. ೧೬೬೦ರಲ್ಲಿ ಷಾಹೆಜಹಾನನು ಸಾಯಲು ಔರಂಗಜೇಬನು ತನ್ನ ಒಂಬತ್ತನೆಯ ರಾಜ್ಯಾರೋಹಣ ಸಮಾರಂಭವನ್ನು ಆಗ್ರಾದ ಅರಮನೆಯಲ್ಲಿ ಒಳ್ಳೆಯ ಸಡಗರದಿಂದ ಜರುಗಿಸಿದನು. ಆಗ ಶಿವಾಜಿಯೂ ಆ ದರ್ಬಾರಕ್ಕೆ ಹೋಗಿದ್ದನು ಆವರೆ ಅಲ್ಲಿ ತನಗೆ ತಕ್ಕ ಮರ್ಯಾದೆ ಸಿಗದ್ದರಿಂದ ದರಬಾರವನ್ನು ಬಿಟ್ಟುಹೋದನು ಆಗ ಬಾದಷಾಹನು ಶಿವಾಜಿಯು ಇಳಿದಿದ್ದ ಮನೆಯ ಮೇಲೆ ಕಾವಲನ್ನು ಇಟ್ಟನು ಶಿವಾಜಿಯು ಜಯಸಿಂಗನ ಮಗ **ರಾಮಸಿಂಗ**ನ ನೆರವಿನಿಂದ ಪಾರಾಗಿ ದಕ್ಷಿಣಕ್ಕೆ ಬಂದು ಸಂಗಡಿಗರ ಸಹಾಯದಿಂದ ಸ್ವತಂತ್ರ ರಾಜ್ಯವನ್ನೇ ಸ್ಥಾಪಿಸುವ ಉದ್ಯೋಗವನ್ನು ಆರಂಭಿಸಿ, ಆ ಮೇರೆಗೆ ರಾಜ್ಯವನ್ನು ಸ್ಥಾಪಿಸಿ ಕ್ರಿ. ಶ. **೧೬೭೪**ರಲ್ಲಿ ಪಟ್ಟಕ್ಕೆ ಕುಳಿತನು. ಇವನು ಕ್ರಿ ಶ. **೧೬೮೦**ರಲ್ಲಿ ಮರಣಹೊಂದಲು ಇವನ ಮಗ **ಸಂಭಾಜಿ**ಯು ಮರಾಟರ ಅರಸನಾಗಿದ್ದನು ಇವನು ಅತಿ ಶೂರನಿದ್ದರೂ ಹೆಟ್ಟಿಯೂ ದುರ್ವ್ಯಸನಿಯೂ ಆಗಿದ್ದರಿಂದ ತಂದೆಯ ಕಾಲದ ರಾಜ್ಯದ ಬಿಗುವು ಉಳಿದಿರಲಿಲ್ಲ.

ಮೊಗಲರು ಮತ್ತು ಮರಾಟರು ಮಾಡಿದ ದಾಳಿಗಳಿಂದ **ಆದಿಲಷಾಹಿ**ಯ ಕಸುವು ಕಡಿಮೆಯಾಗುತ್ತ ನಡೆದಿತ್ತು. **ಕುತುಬಷಾಹಿ**ಯು ಪರಚಕ್ರಗಳ ಕಾಟ ವಿಲ್ಲದ್ದರಿಂದ ಸುಸ್ಥಿತಿಯಲ್ಲಿತ್ತು. ಆ ಅರಸರು ಹಿಂದುಗಳನ್ನು ಪ್ರೇಮ-ವಿಶ್ವಾಸ ಗಳಿಂದ ಕಾಣುತ್ತಿದ್ದದರಿಂದ ಅವರ ಸಹಾಯವೂ ಈ ರಾಜ್ಯಕ್ಕೆ ದೊರೆತಿತ್ತು.

೯. ಔರಂಗಜೇಬನು ದಕ್ಷಿಣದೇಶಕ್ಕೆ ಬಂದದ್ದು:— ಕ್ರಿ. ಶ. ೧೬೮೧ ರಲ್ಲಿ ಔರಂಗಜೇಬನು ದಕ್ಷಿಣದಲ್ಲಿ ದಿಗ್ವಿಜಯಕ್ಕಾಗಿ ತನ್ನ ಮಹಾಸೇನೆಯೊಂದಿಗೆ **ಬರ್ಹಾಣಪುರ**ಕ್ಕೆ ಬಂದಿಳಿದನು. ಅಷ್ಟರಲ್ಲಿ ಅವನ ಮಗ **ಅಕ್ಬರ**ನು ತನಗೆ ಸಂಭಾಜಿಯ ಸಹಾಯವು ದೊರೆಯದೆ ಇದ್ದವರಿಂದ ಇರಾಣವ ಕಡೆಗೆ ಹೊರಟು ಹೋಗಿದ್ದನು. ಔರಂಗಜೇಬನು ತನ್ನ ಆಳಿಕೆಯ ಉತ್ತರಾರ್ಧವನ್ನು ಎಂದರೆ ಕೊನೆಯ ೨೬ ವರ್ಷಗಳನ್ನು ದಕ್ಷಿಣದಲ್ಲಿಯೆ ಕಳೆದನು. ಇವನು **ವಿಜಾಪೂರ, ಗೋವಳಕೊಂಡ** ರಾಜ್ಯಗಳನ್ನೂ ಮರಾಟರನ್ನೂ ಮುರಿಯುವ ಪ್ರಯತ್ನ-ದಲ್ಲಿಯೇ ಈ ಎಲ್ಲ ಕಾಲವನ್ನು ಕಳೆದನು.

೧೪ನೆಯ ಪಾಠ

ಔರಂಗಜೇಬ್ (ಮುಂದೆ ಸಾಗಿದ್ದು)

೧. ಮರಾಟರನ್ನು ಮುರಿಯುವ ಮೊದಲನೆಯ ಪ್ರಯತ್ನ–(ಕ್ರಿ. ಶ. ೧೬೮೧-೧೬೮೫) ಔರಂಗಜೇಬನು ದಕ್ಷಿಣಕ್ಕೆ ಬಂದ ಬಳಿಕ ಮೊದಲು ಮರಾಟರನ್ನು ಮುರಿಯುವ ಎತ್ತುಗಡೆಯನ್ನು ಮಾಡಿದನು. ರಾಜಪುತ್ರನಾದ **ಮುಅಜ್ಜಮ**ನು ಘಟ್ಟದ ಕೆಳಗಿನ ಕೊಂಕಣದ ಮೇಲೆಯೂ **ಅಜೀಮ**ನು ಘಟ್ಟದ ಮೇಲಿನ ದೇಶದ ಮೇಲೆಯೂ ಸಾಗಿದರು. ಮರಾಟರು ಆ ಸೈನ್ಯಗಳಿಗೆ ಪ್ರತ್ಯಕ್ಷ ಎದುರಾಗಿ ನಿಲ್ಲದೆ, ಅದರೊಡನೆ ಗನಿಮೀ ಯುದ್ಧವನ್ನು ಆರಂಭಿಸಿದರು. ಅವರು ಹೊತ್ತು ನೋಡಿ ಮೊಗಲರ ಸೀಮೆಗಳ ಮೇಲೆ ದಾಳಿ ಮಾಡಹತ್ತಿದರು.



ಮುಅಜ್ಜಮ


ಮತ್ತು ಮೊಗಲರ ಸೈನ್ಯವು ಮೈಮೇಲೆ ಬರಲು ನಾಲ್ಕೂ ಕಡೆಗೆ ಚದರಿ ಹೋಗಿ, ಸಹ್ಯಾದ್ರಿಯ ಅಡವಿಗಳನ್ನು ಸೇರುತ್ತಿದ್ದರು. ಅವರು ಮೊಗಲರ ಕೈಗೆ ಸಿಕ್ಕುತ್ತಿರಲಿಲ್ಲ. ಆಗ ಬಾದಷಾಹನು ಮರಾಟರನ್ನು ಮುರಿಯುವ ವಿಚಾರವನ್ನು ಹಿಂದಿಟ್ಟು, ವಿಜಾಪುರದ ಮೇಲೆ ಸಾಗಿದನು. ಕ್ರಿ. ಶ. **೧೬೮೩.**

೨. ಆದಿಲ್‌ಷಾಹಿಯನ್ನು ಮೊಗಲ ಸಾಮ್ರಾಜ್ಯಕ್ಕೆ ಕೂಡಿಸಿದ್ದು:— ವಿಜಾಪುರದ ಕೋಟೆಯು ಭದ್ರವಾದದ್ದು. ಅದರ ಮೇಲೆ ದೊಡ್ಡ ದೊಡ್ಡ ತೋಪುಗಳೂ ಇದ್ದವು. ಆ ಸೈನ್ಯದವರು, ಮೊಗಲ ಸೈನ್ಯಕ್ಕೆ ಕಾಳುಕಡಿಗಳು ಸಿಗದಂತೆ ಸುತ್ತಲಿನ ಪ್ರದೇಶವನ್ನು ಹಾಳುಗೆಡವಿದ್ದರು. ಆದರೂ ಔರಂಗಜೇಬನು ವಿಜಾಪುರವನ್ನು ೧೫ ತಿಂಗಳುತನಕ ಮುತ್ತಿಕೊಂಡಿದ್ದನು. ಕಡೆಗೆ ಸಿಕಂದರನು ಕೈಸೆರೆಯಾದನು. ಆತನು ಗ್ವಾಲ್ಹೇರಕ್ಕೆ ಕಳುಹಲ್ಪಟ್ಟನು. ಮುಂದೆ ಆತನು ಅಲ್ಲಿಯೇ ಮರಣಹೊಂದಿದನು. ಔರಂಗಜೇಬನು ಆದಿಲ್‌ಷಾಹಿಯ ರಾಜ್ಯವನ್ನು ತನ್ನ ರಾಜ್ಯಕ್ಕೆ ಕೂಡಿಸಿಕೊಂಡನು. ಕ್ರಿ. ಶ. **೧೬೮೬.**

೩. ಕುತುಬಷಾಹಿಯನ್ನು ಮುರಿದದ್ದು:— ವಿಜಾಪುರದ ಗತಿಯು ಹೀಗಾದ ಬಳಿಕ ಮೊಗಲ ಸೈನ್ಯವು ಗೋವಳಕೊಂಡಕ್ಕೆ ಸಾಗಿತು. ಶತ್ರು ಸೈನ್ಯವು ರಾಜಧಾನಿಯನ್ನು ಮುತ್ತಲು ಕುತುಬಷಾಹೀ ಸರದಾರನಾದ **ಅಬ್ದುಲ್ ರಜಾಕ**ನು ಶೌರ್ಯದಿಂದ ಕೋಟೆಯನ್ನು ಕಾದನು. ಮೊಗಲ ಸೇನಾಪತಿಗಳು ಹತಾಶರಾದರು ಏಕಂದರೆ ಕೋಟೆಯ ಭದ್ರವಾದ ಗೋಡೆಯನ್ನು ಒಡೆಯುವದಕ್ಕೆಂದು ಹೂಡಿದ ಸುರಂಗವೇ ಹಾರಿಬಂದು ಮೊಗಲರ ೧೧೦೦ ಜನರನ್ನು ಬಲಿಗೊಂಡಿತು. ಆದರೆ ಗೋವಳಕೊಂಡವಲ್ಲಿಯ ಮನೆ ಮುರುಕರು ಮೊಗಲ ಸೈನ್ಯಕ್ಕೆ ನೆರವಾದ್ದರಿಂದ ಕೋಟೆಯು ನಿರಾಯಾಸವಾಗಿ ಆವರ ಕೈಸೇರಿತು. ಅರಸನಾದ **ತಾನಾಷಾಹ್ ಅಬೂಹಸನ**ನು ಹಿಡಿಯಲ್ಪಟ್ಟನು. ರಾಜ್ಯವು ಮೊಗಲರ ವಶವಾಯಿತು. ಕ್ರಿ. ಶ. **೧೬೮೭.**

೪. ಮರಾಟರನ್ನು ಮುರಿಯುವ ಎರಡನೆಯ ಪ್ರಯತ್ನ:— (ಕ್ರಿ. ಶ. **೧೬೮೭-೧೭೦೭**). ವಿಜಾಪುರ-ಗೋವಳಕೊಂಡಗಳ ರಾಜ್ಯಗಳನ್ನು ಕೈಸೇರಿಸಿಕೊಂಡ ಬಳಿಕ, ಔರಂಗಜೇಬನು ಮರಾಟರನ್ನು ಮುರಿಯುವ ಉದ್ಯೋಗವನ್ನು ಮತ್ತೆ ಕೈಕೊಂಡನು. ಇವನು ಮರಾಟರ ರಾಜ್ಯದಲ್ಲಿ ನಾಲ್ಕೂ ಕಡೆಗೆ

ಸೈನ್ಯವನ್ನು ಕಳುಹಿದನು. **ಸಂಭಾಜಿ**ಯು ವ್ಯಸನದಲ್ಲಿ ಪೂರ್ಣ ಆಸಕ್ತನಾಗಿ **ಸಂಗಮೇಶ್ವರ**ದಲ್ಲಿ ಇರುವಾಗ, ಮೊಗಲ ಸರದಾರನಾದ **ಮುಕ್ರೆಬಖಾನ**ನು ಅವನನ್ನು ಸೆರೆಹಿಡಿದು ಔರಂಗಜೇಬನ ಎದುರಿಗೆ ತಂದನು. ಆಗ ಬಾದ ಷಾಹನು ಸಂಭಾಜಿಗೆ 'ನೀನು ಮುಸಲ್ಮಾನನಾದರೆ ನಿನ್ನನ್ನು ಕ್ಷಮಿಸುವೆನು'



ಎಂದು ತಿಳಿಸಲು, ಅವನು ಆ ಮಾತನ್ನು ಧಿಕ್ಕರಿಸಿದನು. ಆದದರಿಂದ ಬಾದ ಷಾಹನು ಕೋಪಾವಿಷ್ಟನಾಗಿ ಅತಿ ಕ್ರೂರತನದಿಂದ ಸಂಭಾಜಿಯನ್ನು ಕೊಲ್ಲಿಸಿ ದನು. ಕ್ರಿ. ಶ. ೧೬೮೯; ಮತ್ತು **ರಾಯಗಡ** ಕೋಟೆಯನ್ನು ವಶಮಾಡಿ ಕೊಂಡು ಅವನ ಹೆಂಡತಿಯನ್ನೂ ಮಗ **ಶಿವಾಜಿ**ಯನ್ನೂ ಸೆರೆಹಿಡಿದನು. ಕ್ರಿ. ಶ. ೧೬೯೦.

ಆದರೆ ಮರಾಟರ ಮೇಲಿನ ಈ ಗೆಲವು ಕ್ಷಣಿಕವಾಗಿತ್ತು. ಮರಾಟ ಸರದಾರರ ಸ್ವಾತಂತ್ರ್ಯ ಪ್ರೇಮವೂ ಶೌರ್ಯವೂ ಅಡಗಿರಲಿಲ್ಲ. 'ಸಂಭಾಜಿಯು ಪ್ರಾಣವನ್ನು ಕೊಟ್ಟನೇ ಹೊರತು ಸ್ವಧರ್ಮವನ್ನು ತ್ಯಜಿಸಲಿಲ್ಲ' ಎಂಬುದನ್ನು ನೆನಿಸಿ ಆತ್ಮವೀರರು ಆತನ ಅಭಿಮಾನವನ್ನು ತಾಳಿ ಮೊಗಲರ ಸೇಡು ತೀರಿಸಿಕೊಳ್ಳುವದಕ್ಕಾಗಿ ಟೊಂಕ ಕಟ್ಟಿದರು. ವಿಜಾಪುರ ಗೋವಳ ಕೊಂಡಗಳ ರಾಜ್ಯಗಳು ಮುರಿದದರಿಂದ ಬೇಕಾದತ್ತ ದಾಳಿಮಾಡಲು ಮರಾಟರಿಗೆ ಅನುಕೂಲವಾಯಿತು. ಮೊಗಲ ಸೈನ್ಯವು ಭೀಮಾನದಿಯನ್ನು ದಾಟಿ ಉತ್ತರಕ್ಕೆ ಹೋಗಲು ಮರಾಟರು ದಕ್ಷಿಣದಲ್ಲಿ ಕರ್ನಾಟಕದಲ್ಲಿ ಹಾವಳಿ ಮಾಡಬೇಕು; ಮತ್ತು ಅದು ದಕ್ಷಿಣಕ್ಕೆ ಬರಲು ಉತ್ತರದಲ್ಲಿ ಅಹಮ್ಮದನಗರ ಸೊಲ್ಲಾಪುರ ಪ್ರಾಂತಗಳನ್ನು ಸುಲಿಯಬೇಕು. ಮೊಗಲರು ಮರಾಟರ ಕೋಟೆಗಳನ್ನು ವಶಮಾಡಿಕೊಳ್ಳಬೇಕು; ಮರಾಟರು ಮತ್ತೆ ಅವನ್ನು ಕಸಿದುಕೊಳ್ಳಬೇಕು. ಈ ಕ್ರಮವೇ ಒಂದೇ ಸವನೆ ಸಾಗಿದ್ದರಿಂದ ಔರಂಗಜೇಬನು ಬೇಸರಗೊಂಡು ಅಹಮ್ಮದನಗರವಲ್ಲಿರಹತ್ತಿದನು. ಇವನು ೯೦ ವರ್ಷದವನಾಗಿ ಕ್ರಿ. ಶ ೧೭೦೭ರಲ್ಲಿ ಮರಣಹೊಂದಿದನು. ಔರಂಗಾಬಾದದ ನೆರೆಯಲ್ಲಿದ್ದ **ಖುಲ್ದಾಬಾದ** ಎಂಬಲ್ಲಿ ಇವನ ಗೋರಿ ಅದೆ.

೫. **ಔರಂಗಜೇಬನ ರಾಜ್ಯಪದ್ಧತಿ**:— ಹಿಂದಿನಿಂದ ನಡೆದು ಬಂದ ಅಕ್‌ಬರನ ರಾಜ್ಯಪದ್ಧತಿಯೇ ಇವನ ಕಾಲದಲ್ಲಿಯೂ ನಡೆದಿತ್ತು. ಆದರೆ ಔರಂಗಜೇಬ ಬಾದಷಾಹನು, ಮುಖ್ಯ ಮಂತ್ರಿಯನ್ನು ಮೊದಲುಗೊಂಡು ಎಲ್ಲ ಅಧಿಕಾರಿಗಳ ಸ್ವತಂತ್ರ ಅಧಿಕಾರಗಳನ್ನು ಕಸಿದುಕೊಂಡು ತನ್ನ ಕಡೆಗೆ ಇಟ್ಟುಕೊಂಡಿದ್ದನು ಇವನು ಹೇಳಿದಷ್ಟು ಕೆಲಸಗಳನ್ನು ಮಾಡುವದಿಷ್ಟೇ ಆ ಅಧಿಕಾರಿಗಳ ಕೆಲಸವಾಗಿತ್ತು. ಇವನ ರಾಜ್ಯವು ಅಕ್‌ಬರನ ರಾಜ್ಯಕ್ಕಿಂತ ದೊಡ್ಡದಿತ್ತು. ಉತ್ಪನ್ನವು ಅಕ್‌ಬರನ ಕಾಲದ ಇಮ್ಮಡಿಯಿತ್ತು.

೬. **ಔರಂಗಜೇಬನ *ನ್ಯಾಯಪದ್ಧತಿ**:— ಮುಸಲ್ಮಾನೀ ಧರ್ಮದ ಕಾಯಿದೆಗಳನ್ನು ಸಂಗ್ರಹಿಸಿ, ಇವನು **ಫತಾವಯೆ ಆಲಂಗೀರ** ಎಂಬ ಗ್ರಂಥವನ್ನು ರಚಿಸಿರುವನು. ಗೊತ್ತುಮಾಡಿದ ಕಾಯಿದೆಗಳಂತೆ ಇವನು ನಿಷ್ಪಕ್ಷಪಾತ

* ಲೇನಪೋಲ ಪು. ೭೫, ೭೬, ೭೭ (ಕಾಫಿಖಾನ ಕೃತ) ಹಾಲಾತೆ ಆಲಂಗೀರ ಪು. ೨೪೯.

ದಿಂದ ನ್ಯಾಯಗಳನ್ನು ತೀರಿಸುತ್ತಿದ್ದನು; ಯಾರ ದಾಕ್ಷಿಣ್ಯಕ್ಕೂ ಒಳಗಾಗುತ್ತಿರಲಿಲ್ಲ. ಪ್ರತಿ ಗುರುವಾರಕ್ಕೊಮ್ಮೆ ತನ್ನ ಕಡೆಗೆ ಬಂದ ಅಪೀಲುಗಳನ್ನು ವಿಚಾರಿಸುತ್ತಿದ್ದನು. ಜನರ ತಕರಾರೀ ಅರ್ಜಿಗಳನ್ನು ಸ್ವೀಕರಿಸುವದಕ್ಕಾಗಿ ಜಿಲ್ಹೆಗೊಬ್ಬ ಸ್ವತಂತ್ರ ಅಧಿಕಾರಿಗಳನ್ನು ನಿಯಮಿಸಿದ್ದನು ಸರಕಾರೀ ಅಧಿಕಾರಿಗಳ ಸಂಬಂಧವಾಗಿ ಪ್ರಜೆಗಳು ಮಾಡುವ ಟೀಕೆಯ ಅರ್ಜಿಗಳನ್ನು ವಿಚಾರಿಸಿ, ಅವುಗಳ ಹವಾಲಿ ಕೊಟ್ಟು ಅಧಿಕಾರಿಗಳ ತಪ್ಪುಗಳನ್ನು ತೋರಿಸಿಕೊಡುವನು. ಅಪರಾಧ ಮಾಡಿದ ಅಧಿಕಾರಿಗಳನ್ನು ತಪ್ಪದೆ ಶಿಕ್ಷಿಸುತ್ತಿದ್ದನು.

೭. **ಔರಂಗಜೇಬನ ಸುಧಾರಣೆಗಳು**:— **(ಅ) ರಾಜಕೀಯ ಸುಧಾರಣೆಗಳು**:— ಹಿಂದಿನ ಅರಸರು ರಾಜ್ಯಾರೋಹಣದ ನಿಮಿತ್ತದಿಂದ ಕೈಕೆಳಗಿನ ಸುಭೆದಾರ ಮೊದಲಾದವರಿಂದ ಬಂದ ಕಾಣಿಕೆಯನ್ನು ಸ್ವೀಕರಿಸುತ್ತಿದ್ದರು. ಅಧಿಕಾರಿಗಳು ತಮ್ಮ ಭಾಗದ ಪ್ರಜೆಗಳಿಂದ ಈ ಹಣವನ್ನು ಎತ್ತಿಕೊಂಡು ಬರುತ್ತಿದ್ದರು ಔರಂಗಜೇಬನು ಈ ಕಾಣಿಕೆಯ ಪದ್ಧತಿಯನ್ನು † ನಿಲ್ಲಿಸಿದನು. ರಾಜಧಾನಿಯ ಆಡಂಬರವನ್ನು ಕಡಿಮೆ ಮಾಡಿ ದುಂದುಗಾರಿಕೆಯಲ್ಲಿ ವೆಚ್ಚವಾಗುವ ಹಣವನ್ನು ಉಳಿಸಿದನು. ರಾಜ್ಯಕಾರಭಾರದ ಪ್ರತಿಯೊಂದು ಶಾಖೆಯ ಕಡೆಗೆ ಇವನ ಲಕ್ಷ್ಯವು ಪೂರ್ಣವಾಗಿತ್ತು. ರಣಭೂಮಿಯ ಮತ್ತು ಕೋಟೆಗಳ ನಕಾಶವನ್ನು ತೆಗೆಯಿಸಿ ಯುದ್ಧದಲ್ಲಿ ಮುಂದಿನ ಕಾರ್ಯಕ್ರಮವನ್ನು ತಾನೇ ಗೊತ್ತುಮಾಡಿಕೊಡುತ್ತಿದ್ದನು. ಎಲ್ಲ ಚಿಕ್ಕದೊಡ್ಡ ಅಧಿಕಾರಿಗಳನ್ನು ಇವನೇ ನಿಯಮಿಸುತ್ತಿದ್ದನು. ಗುಪ್ತಚಾರರ ಮುಖಾಂತರ ಅವರು ಸರಿಯಾಗಿ ಕೆಲಸ ಮಾಡುವರೋ ಇಲ್ಲವೋ ಎಂಬದನ್ನು ತಿಳಿದುಕೊಂಡು ಮೇಲಿಂದಮೇಲೆ ಅವಶ್ಯವಾದ ಸೂಚನೆಗಳನ್ನು ಕಳುಹುತ್ತಿದ್ದನು. ರಾಜ್ಯದಲ್ಲಿ ಒಂದು ವಾರದೊಳಗೆ ಟಪಾಲು ಮುಟ್ಟುವಂತೆ * ವ್ಯವಸ್ಥೆಯನ್ನಿಟ್ಟಿದ್ದನು. ಕಾಳುಕಡಿಗಳ ಮೇಲಿನ ಸುಂಕವನ್ನು ಇವನು ತೆಗೆದುಹಾಕಿದ್ದನು.

---

† (ಪ್ರೊ. ಷಿಜ್ಲಿ ಕೃತ) ಔರಂಗಜೇಬನ ಇತಿಹಾಸ. ಪು. ೯೫. ಕಾರ್ಯಿ - ಹಿಂದ (ಎಲ್ಫಿನ್‌ಸ್ಟನ್ ಕೃತ) ಪುಟ ೧೧೯, ೧೨೦.

* ಸಫರನಾಮಾ (ಹ್ಯಾಮಿಲ್ಟನ್ ಕೃತ) ಭಾಗ ೧ ಪುಟ ೧೪೯.

(ಅ) ಜನಹಿತದ ಸುಧಾರಣೆಗಳು :— ಇವನು †1 ಮಾದಕ ಪದಾರ್ಥಗಳ ಮಾರಾಟವನ್ನು ತಡೆದನು. ಆಲ್ಲಲ್ಲಿ ಧರ್ಮಶಾಲೆಗಳನ್ನೂ ವ್ಯಾಪಾರ ಸ್ಥರಿಗಾಗಿ ಇಳಿದುಕೊಳ್ಳುವ ಮನೆಗಳನ್ನೂ ಕಟ್ಟಿಸಿದನು. ಆಗ ಪ್ರವಾಸವು ನಿರ್ಭಯವಾಗಿ ಸಾಗುತ್ತಿತ್ತು. ಆಲ್ಲಲ್ಲಿ ಸಂಗ್ರಹಿಸಿಟ್ಟ ಧಾನ್ಯವು ಬರಗಾಲದಲ್ಲಿ ಜನರಿಗೆ ಪುಕ್ಕಟೆಯಾಗಿ ಹಂಚಲ್ಪಡುತ್ತಿತ್ತು.

†2 **ಧಾರ್ಮಿಕ ಸುಧಾರಣೆಗಳು** :— ಮುಸಲ್ಮಾನೀ ಧರ್ಮದ ಕಾಯಿದೆಗಳಂತೆ ತಾನು ನಡೆಯುವವರಲ್ಲಿಯೂ ಉಳಿದ ಮುಸಲ್ಮಾನರನ್ನು ನಡೆಯಿಸುವವರಲ್ಲಿಯೂ ಇವನ ಲಕ್ಷ್ಯವು ವಿಶೇಷವಾಗಿತ್ತು. **ಫಾರ್ಸೀ, ಅರಬೀ** ಭಾಷೆಗಳ ಪಾಠಶಾಲೆಗಳನ್ನು ಆ ಲ್ಲಲ್ಲಿ ಸ್ಥಾಪಿಸಿದ್ದನು. ಧರ್ಮಬಾಹ್ಯರಾಗಿ ನಡೆದ ಮುಸಲ್ಮಾನರನ್ನು ಧರ್ಮದ ಕಾ ಯ ದೆ ಗ ಳ ಂ ತೆ ಶಿಕ್ಷಿಸುತ್ತಿದ್ದನು. ಮೊಹರಮದಲ್ಲಿ **ಡೋಲಿ, ಪಂಜಾ**ಗಳನ್ನಿಡುವ ಪದ್ಧತಿಯನ್ನು ಮುರಿದನು. ನಾಚು-ರಂಗು-ತಮಾಷೆಗಳನ್ನು ಆಗಗೊಡುತ್ತಿರಲಿಲ್ಲ. ಅರಸನನ್ನು ದೇವರಿಗೆ ಸಮಾನನೆಂದು ವರ್ಣಿಸುವದನ್ನು ಇವನು ಬಿಡಿಸಿದನು. ನಮಸ್ಕಾರ ಮಾಡುವದಕ್ಕೆ ಬದಲಾಗಿ ಸಲಾಮ್ ಮಾಡುವ ಪದ್ಧತಿಯನ್ನು ಬಳಕೆಯಲ್ಲಿ ತಂದನು.

ಆ. ಆ ಕಾಲದ ಲೋಕಸ್ಥಿತಿ :— ರಾಜಕಾರಣಕ್ಕೆ ಸಂಬಂಧವಿಲ್ಲದ ಹಿಂದು-ಮುಸಲ್ಮಾನರಲ್ಲಿ ಪ್ರೇಮದ †3 ಬಳಿಕೆಯಿತ್ತು. ಅವರು ತಮ್ಮತಮ್ಮ ಧರ್ಮಗಳನ್ನು ಅನುಸರಿಸಿ ನಡೆಯುತ್ತಿದ್ದರು. ದೇಶದ ಸಾಂಪತ್ತಿಕ ಸ್ಥಿತಿಯು ಚೆನ್ನಾಗಿತ್ತು. ಕಾಳುಕಡಿಗಳು ಅ ಗ್ಗ ವಾ ಗಿ ದ್ದ ವು. ಉದ್ಯೋಗ – ಕಲೆಗಳು ಉತ್ತಮವಾಗಿ ನಡೆಯುತ್ತಿದ್ದವು. **ಮುಲ್ತಾನ**ವು ಬಿಲ್ಲು – ಬಾಣಗಳನ್ನು ಮಾಡುವ ಮತ್ತು ಹಡಗಗಳನ್ನು ಕಟ್ಟುವ ಕೆಲಸಗಳಿಗಾಗಿ ಹೆಸರಾಗಿತ್ತು. ನೂಲು-ರೇಶಿಮೆಗಳ ನಯವಾದ ಬಟ್ಟೆಗಳು ಹುಟ್ಟಿ †4 **ಇಂಗ್ಲಂಡ, ಪೇಗೂ, ಸುಮಾತ್ರಾ** ಮುಂತಾದ ಪರದೇಶಗಳಿಗೆ ಹೋಗುತ್ತಿದ್ದವು. **ಸುರತ, ರಾಜಾಪುರ, ಹುಗಳಿ** ಈ ಬಂದರಗಳಿಂದ ವ್ಯಾಪಾರಸ್ಥರು ಈ ದೇಶದ ಹಡಗುಗಳಲ್ಲಿಯೆ

---

†1 ಹಿಸ್ಟರಿ ಆಫ್ ಔರಂಗಜೇಬ (ಪ್ರೊ. ಜ. ಸರಕಾರ ಕೃತ) ೩ಂಡ ೩.

†2 (ಪ್ರೊ. ಷಿಬ್‌ಲಿ ಕೃತ) ಔರಂಗಜೇಬನ ಇತಿಹಾಸ ಪುಟ ೧೦೨.

†3 ಸಫರನಾಮಾ (ಹ್ಯಾಮಿಲ್ಟನ್ ಕೃತ) ಭಾಗ ೧ ಪುಟ ೧೨೭, ೧೨೮, ೧೬೨.

†4 ಕ್ಯಾ. ಹ್ಯಾಮಿಲ್ಟನ್ ಕೃತ ಸಫರನಾಮಾ ಭಾಗ ೧ ಪುಟ ೨೪೦, ೨೯೬, ೩೫೦.

ಸರಕುಗಳನ್ನು ಹೇರಿಕೊಂಡು ದೂರದೂರದ ದೇಶಗಳಿಗೆ ಹೋಗುತ್ತಿದ್ದರು. ಹಡಗಗಳ ರಕ್ಷಣೆಗಾಗಿ ರಾಜಾಪುರವಲ್ಲಿ ಒಂದು ಹಡಗುಪಡೆಯಿತ್ತು. ಅದರ ಮುಖ್ಯನಾದ ಸೈಯ್ಯದಖಾನನ ಕೈಕೆಳಗೆ ೩೦೦ದ ೪೦ ಸಾವಿರದ ವರೆಗೆ ಸೈನ್ಯವಿರುತ್ತಿತ್ತು.

೯. **ಔರಂಗಜೇಬನ ಗುಣ ಶೀಲ ಮತ್ತು ಯೋಗ್ಯತೆ** :— ಇವನು ಶೌರ್ಯ-ಚಾತುರ್ಯಗಳ ಬಲದಿಂದ ತನ್ನ ಅಣ್ಣತಮ್ಮಂದಿರು ಕಣ್ಣು ಇಟ್ಟಿದ್ದ ರಾಜ್ಯಪದವನ್ನು ಕೈವಶಮಾಡಿಕೊಂಡನು. ಮತ್ತು ಸತತ ಪ್ರಯತ್ನದಿಂದ ಅದನ್ನು ವಿಸ್ತರಿಸಿದನು. ವಿದ್ಯಾವಂತನಾಗಿ, ಮುಸಲ್ಮಾನೀ ಧರ್ಮವನ್ನು ಅಭ್ಯಾಸಿಸಿ, ಆ ಧರ್ಮದ ಮತ್ತು ಆ ಧರ್ಮದವರ ಏಳ್ಗೆಗಾಗಿ ಶಕ್ತಿಮೀರಿ ಪ್ರಯತ್ನಮಾಡಿದನು. ಇವನು ಧರ್ಮಾಚರಣಿಯೂ ನಿರ್ವ್ಯಸನಿಯೂ ತೀರ ಸಾದಾವೃತ್ತಿಯವನೂ ಆಗಿದ್ದನು. ದಿನಾಲು ಐದುಸಾರೆ ನಮಾಜುಮಾಡುವದು, ಉಪವಾಸವಿರುವದು, ದಾನಮಾಡುವದು ಮುಂತಾದ ನಿಯಮಗಳನ್ನು ನಿಷ್ಠೆಯಿಂದ ಪಾಲಿಸುತ್ತಿದ್ದನು. ದುರ್ವ್ಯಸನದ ಗಾಳಿಯು ಕೂಡ ಇವನನ್ನು ಸೋಂಕಲಿಲ್ಲ. ರಾಜವೈಭವವನ್ನು ಉಪಭೋಗಿಸದೆ, ಸಾಮಾನ್ಯರಂತೆ ಸಾದಾ ಉಡಿಗೆ - ತೊಡಿಗೆ - ಊಟ- ಉಪಚಾರಗಳಿಂದಲೇ ನಿರ್ವಾಹವನ್ನು ಸಾಗಿಸುತ್ತಿದ್ದನು. ಇವನು ಮಿತಾಹಾರಿಯಾಗಿದ್ದನು. ಕವಳಿಯ ಹಣ್ಣುಗಳ ಮೇಲೆ ಇವನ ಪ್ರೀತಿ ಬಹಳ! ಸ್ವಂತದ ವೆಚ್ಚದ ಸಲುವಾಗಿ ಕೆಲವು ಹಳ್ಳಿಗಳನ್ನೂ ಉಪ್ಪಿನ ಮಾಳಗಳನ್ನೂ ಮಾತ್ರ ಇಟ್ಟುಕೊಂಡಿದ್ದನು. *1 ತನ್ನ ಕೈಯಿಂದ ಬರೆದ ಕುರಾನದ ನಕಲುಗಳನ್ನೂ ಸ್ವತಃ ಹೆಣೆದ ಟೊಪ್ಪಿಗೆಗಳನ್ನೂ ಮಾರಿ, ಬಂದ ಹಣವನ್ನು ತನ್ನ ಅಂತ್ಯವಿಧಿಗಾಗಿ ಇವನು ಕಾದಿಟ್ಟಿದ್ದನು.

ರಜಪುತರ ಕೂಡ ಒಪ್ಪಂದ ಮಾಡಿಕೊಂಡ ಬಳಿಕ ಹಿಂದುಗಳೊಡನೆ ನಡೆಯುವ ಇವನ ಧೋರಣೆಯು ಸ್ವಲ್ಪ ಸೌಮ್ಯವಾದಂತೆ ತೋರುತ್ತದೆ. ಏಕಂದರೆ ಕಡೆಯ ೨೫ವರ್ಷಗಳನ್ನು ಇವನು ದಕ್ಷಿಣದಲ್ಲಿ ಕಳೆದಿದ್ದರೂ ಇಲ್ಲಿಯ ದೇವಾಲಯಗಳನ್ನು ಕೆಡವಿಸಿದ ಹಾಗೆ ಉಲ್ಲೇಖವಿಲ್ಲ. ಸಂಭಾಜಿಯನ್ನು ಕೊಲ್ಲಿಸಿದ ಬಳಿಕ ಅವನ ಮಗನನ್ನು ಪ್ರೀತಿಯಿಂದ ನಡೆಯಿಸಿಕೊಂಡನು.

---

*1 ಮಾಸುರುಲ್ ಆಲಂಗೀರ.

ಮತ್ತು ಕ್ರಿ. ಶ. ೧೭೦೫ರಲ್ಲಿ ಬ್ರಹ್ಮಪುರಿಯಲ್ಲಿ ಪಾಳಯಮೊಂದಿಗೆ ಇಳಿದಿರುವಾಗ ಎಲ್ಲ ಜನರು ತಮ್ಮ ತಮ್ಮ ಸ್ಥಳಗಳಿಗೆ ಬಂದು ನಿಶ್ಚಿಂತೆಯಿಂದ ಇರಬೇಕೆಂದು * ಡಂಗುರ ಸಾರಿದನು. ಕಡೆಕಡೆಗಂತು ತನ್ನ ರಾಜಕೀಯ ತಪ್ಪುಗಳಿಗಾಗಿ ಪಶ್ಚಾತ್ತಾಪ ಪಡುತ್ತಿದ್ದನು

ಶೂರ ಸೇನಾಪತಿಯೂ ಒಳ್ಳೆಯ ಎದೆಗಾರನೂ ಉದ್ಯೋಗನಿರತನೂ ದೇವಭಕ್ತನೂ ಆದ ಇವನನ್ನು ದುರಾಗ್ರಹ ಮತ್ತು ಸಂಕುಚಿತ ದೃಷ್ಟಿ ಎಂಬೆರಡು ಅವಗುಣಗಳು ಅಂಟಿಕೊಳ್ಳದೆ ಇದ್ದರೆ, ಮೊಗಲ ಸಾಮ್ರಾಜ್ಯವು ಹೆಚ್ಚು ಘನತೆಯನ್ನೂ ಔರಂಗಜೇಬನು ಹೆಚ್ಚಿನ ಕೀರ್ತಿಯನ್ನೂ ಪಡೆಯಬಹುದಾಗಿತ್ತು ! ಆದರೆ ಹಾಗೆ ಆಗಲಿಲ್ಲ !!

೧೯ನೆಯ ಪಾಠ

ಔರಂಗಜೇಬನ ತರುವಾಯದ ಮೊಗಲ ಸಾಮ್ರಾಜ್ಯ


(ಕ್ರಿ. ಶ ೧೭೦೭-೧೭೫೪)

೧. ಔರಂಗಜೇಬನ ಮರಣದ ತರುವಾಯದ ಪರಿಸ್ಥಿತಿ:— ಔರಂಗಜೇಬನ ತರುವಾಯ ಮೊಗಲ ಸಾಮ್ರಾಜ್ಯದ ಕಸುವು ಕಡಿಮೆಯಾಯಿತು. ಬೇರೆ ಬೇರೆ ಪ್ರಾಂತಗಳ ಸುಭೇದಾರರು ಹೆಸರಿಗೆ ಮಾತ್ರ ದಿಲ್ಲಿಯ ಬಾದಷಾಹನಿಗೆ ಅಂಕಿತರಾಗಿದ್ದು ತಮ್ಮ ತಮ್ಮ ಪ್ರಾಂತಗಳ ಕಾರಭಾರವನ್ನು ಸ್ವತಂತ್ರವಾಗಿ ನಡಿಸಹತ್ತಿದರು. ಮತ್ತು ಪ್ರಬಲರಾದವರು ಬಾದಷಾಹನನ್ನು ತಮ್ಮ ಕೈಯಲ್ಲಿಟ್ಟುಕೊಳ್ಳುವ ಪ್ರಯತ್ನದಲ್ಲಿದ್ದರು. ದಕ್ಷಿಣದಲ್ಲಿ ಮರಾಟರು ಪ್ರಬಲರಾಗಿ ಅವರೂ ದಿಲ್ಲಿಯ ಬಾದಷಾಹನನ್ನು ತಮ್ಮ ಕಡೆಗೆ ಒಲಿಸಿಕೊಳ್ಳಲು ಹವಣಿಸಹತ್ತಿದರು. ವಾಯವ್ಯ ದಿಕ್ಕಿನ ದಾಳಿಗಳು ೨೦೦ ವರ್ಷಗಳಿಂದ ನಿಂತು ಹೋಗಿದ್ದವು; ಅವು ಈಗ ಮತ್ತೆ ಬರಲಾರಂಭಿಸಿದವು. ಸೀಖರ ಅಧಿಕಾರವೂ ಹೆಚ್ಚುತ್ತ ನಡೆಯಿತು. ಕ್ರಿ. ಶ. ೧೭೦೭ರಿಂದ ೧೭೦೩ರ ವರೆಗೆ

---

* ಮಾಸುರುಲ್ ಉಲಂಗೀರ ಪುಟ ೫೦೭.


ಸಯ್ಯದರು **ನಿಜಾಮು ಉಲ್ಮುಲ್ಕ** ಮತ್ತು ಪೇಶ್ವೆಯವರು ದಿಲ್ಲಿಯ ದೊರೆಯ ಮೇಲೆ ತಮ್ಮ ವರ್ಚಸ್ಸನ್ನು ನೆಲೆಸಿದ್ದರು. ಕ್ರಿ. ಶ. **೧೭೫೮**ರಲ್ಲಿ ಕಡೆಯ ಬಾದಷಾಹನಾದ **ಬಹದ್ದೂರಷಾಹನು** ಬಂಡಾಯದಲ್ಲಿ ಸೇರಿದನೆಂದು ಇಂಗ್ಲಿಷರು



ನಾದಿರಷಾಹ

ಅವನನ್ನು ಸೆರೆಯಲ್ಲಿಟ್ಟರು. ಮುಂದೆ ಅವನು ಕ್ರಿ. ಶ. **೧೭೬೨**ರಲ್ಲಿ ಸಾಯಲು ಮೊಗಲವಂಶವು ನಿಂತುಹೋಯಿತು.

ಮೊಗಲ ಸಾಮ್ರಾಜ್ಯದ ಅಳಿಗಾಲದ ಕಾರಣಗಳು:— (೧) ಆಳುತ್ತಿರುವ ಬಾದಷಾಹನ ತರುವಾಯ ಯಾರು ಪಟ್ಟಕ್ಕೆ ಬರತಕ್ಕದ್ದೆಂಬ ನಿಯಮವಿಲ್ಲದ್ದರಿಂದ ಉಂಟಾದ ಮನೆಜಗಳಗಳು. (೨) ಔರಂಗಜೇಬನ ಅದೂರದೃಷ್ಟಿಯ ಧೋರಣ. (೩) ಮೊಗಲರ ಸುಭೇದಾರರು, ಮರಾಟರು, ಸೀಖರು, ರೋಹಿಲರು, ಜಾಟರು ಮತ್ತು ರಜಪುತರು ಸ್ವಾತಂತ್ರ್ಯಕ್ಕಾಗಿ ಮಾಡಿದ ಪ್ರಯತ್ನ. (೪) ಔರಂಗಜೇಬನ ತರುವಾಯದ ಮೊಗಲಬಾದಷಾಹರು ನುರ್ಬಲರಾದದ್ದು. (೫) ನಾದಿರಷಾಹ, ಅಹಮ್ಮದಷಾಹ ಅಬದಾಲಿ ಇವರ ದಾಳಿಗಳು. (೬) ಹೆಚ್ಚಿನ ಮುತ್ಸದ್ದಿತನ, ಸುಧಾರಿಸಿದ ಯುದ್ಧಸಾಧನ ಹಾಗು ಸುವ್ಯವಸ್ಥಿತ ಯುದ್ಧಪದ್ಧತಿಗಳಿಂದ ಸಮರ್ಥರಾದ ಇಂಗ್ಲಿಷರೆದುರಿಗೆ ತಡೆದು ನಿಲ್ಲುವ ಕಸುವು ಮೊಗಲರಲ್ಲಿ ಇಲ್ಲದಂತಾದುದು.



ನಿಜಾಮು ಉಲ್ಮುಲ್ಕ



ಅಹಮ್ಮದಷಾಹ ಅಬದಾಲಿ

ಮೊಗಲ ಬಾದಷಾಹರ ವಂಶಾವಳಿ. (ಕ್ರಿ ಶ. ೧೫೨೬—೧೮೫೮)

೧	ಬಾಬರ	ಕ್ರಿ. ಶ. ೧೫೨೬—೧೫೩೦
೨	ಹುಮಾಯೂನ ಕ್ರಿ ಶ. ೧೫೩೦—೪೦ ಮತ್ತು	೧೫೫೫—೧೫೫೬
೩	ಅಕ್‌ಬರ	ಕ್ರಿ. ಶ. ೧೫೫೬—೧೬೦೫
೪	ಜಹಾಂಗೀರ	,, ೧೬೦೫—೧೬೨೭
೫	ಷಾಹೆಜಹಾನ್	,, ೧೬೨೭—೧೬೫೮
೬	ಔರಂಗಜೇಬ್	,, ೧೬೫೮—೧೭೦೭
೭	ಉಳಿದ ಅರಸರು	,, ೧೭೦೭—೧೮೫೮

ಸೂರ ಮನೆತನ (ಕ್ರಿ ಶ ೧೫೪೦—೧೫೫೬)

೧	ಷೇರಷಾಹ	ಕ್ರಿ ಶ. ೧೫೪೦—೧೫೪೫
೨	ಸಲೀಮಷಾಹ	,, ೧೫೪೫—೧೫೫೩
೩	ಫಿರೋಜಷಾಹ ಮೊದಲಾದ ಮೂವರು	,, ೧೫೫೩—೧೫೫೪
೪	ಸಿಕಂದರಷಾಹ	,, ೧೫೫೪—೧೫೫೫

ಮೊಗಲರ ಆಳಿಕೆಯಲ್ಲಿಯ
ಮಹತ್ವದ ಸಂಗತಿಗಳ ಕಾಲಗಳು.

೧	ಮೊಗಲ ಸಾಮ್ರಾಜ್ಯ ಸ್ಥಾಪನೆ	ಕ್ರಿ. ಶ. ೧೫೨೬
೨	ಸಿಕ್ರಿಯ ಯುದ್ಧ	,, ೧೫೨೭
೩	ಷೇರಷಾಹನು ದಿಲ್ಲಿಯ ಒಡೆಯನಾದದ್ದು	,, ೧೫೪೦
೪	ಹುಮಾಯೂನನು ಮರಳಿ ರಾಜ್ಯವನ್ನು ಸಂಪಾದಿಸಿದ್ದು	,, ೧೫೫೫
೫	ಅಕ್‌ಬರನ ಮರಣ	,, ೧೬೦೫
೬	ನೂರಜಹಾನಳು ಕಾರಭಾರವನ್ನು ಕೈಕೊಂಡದ್ದು	,, ೧೬೧೧
೭	ಸರ್ ಟಾಮಸ್ ರೋ ಬಂದದ್ದು	,, ೧೬೧೫
೮	ನಿಜಾಮಷಾಹಿಯ ಕೊನೆ	,, ೧೬೩೭
೯	ಷಾಹೆಜಹಾನನ ಮರಣ	,, ೧೬೬೬
೧೦	ಔರಂಗಜೇಬ-ರಾಜಸಿಂಹರ ಒಪ್ಪಂದ	,, ೧೬೮೧
೧೧	ಆದಿಲಷಾಹಿಯ ಕೊನೆ	,, ೧೬೮೬

೧೨ ಕುತುಬಷಾಹಿಯ ಕೊನೆ ,, ೧೬೮೬
೧೩ ಸಂಭಾಜಿಯ ಕೊಲೆ ,, ೧೬೮೯
೧೪ ಔರಂಗಜೇಬನ ಮರಣ ,, ೧೭೦೭

ಮೊಗಲರ ಆಳಿಕೆಯ ಸಂಬಂಧದ ಆವರ್ತನೆಯ ಹಾಗು

ಪರೀಕ್ಷೆಯ ಪ್ರಶ್ನೆಗಳು

೧. ಬಾಬರ, ಷೇರಶಹ, ಪ್ರತಾಪಸಿಂಹ, ಷಾಹೆಜಹಾನ್ ಮತ್ತು ರಾಜಾ ತೋಡರಮಲ್ಲ ಈ ಐವರಲ್ಲಿ ಈರ್ವರ ಚರಿತ್ರೆಗಳನ್ನು ಬರೆಯಿರಿ.

೨. ಅಕ್‌ಬರನ ರಾಜ್ಯಪದ್ಧತಿ, ನೂರಜಹಾನಳ ಯೋಗ್ಯತೆ, ಮಲಿಕ್ ಅಂಬರನ ಸಾಹಸ ಇವುಗಳ ವಿಷಯವಾಗಿ ಗೊತ್ತಿರುವುದನ್ನು ಬರೆಯಿರಿ.


೩. (ಅ) ಹುಮಾಯೂನನು ತನ್ನ ರಾಜ್ಯವನ್ನು ಕಳೆದುಕೊಂಡ ಕಾರಣಗಳಾವವು.

(ಆ) ತಾಜ್‌ಮಹಾಲ, ಹಳದೀಘಾಟ, ಆಯಿನ್-ಎ-ಅಕ್‌ಬರಿ ಮತ್ತು ಪಾನಿಪತ ಇವುಗಳ ಸಂಬಂಧದ ಟಿಪ್ಪಣಿಗಳನ್ನು ಕೊಡಿರಿ

೪. ಮೊಗಲ ಬಾದಷಾಹರಿಗೆ ಹೆಚ್ಚಿನ ಸಹಾಯಕರಾದ ಮುತ್ಸದ್ದಿಗಳೂ ಪರಾಕ್ರಮಿಗಳೂ ಯಾರು ಯಾರು? ಅವರಲ್ಲಿಯ ಒಬ್ಬನು ಯಾರಿಗೆ ಹೇಗೆ ಸಹಾಯ ಮಾಡಿದನೆಂಬುದನ್ನು ವಿವರಿಸಿರಿ.

೫. ಮೊಗಲ ಬಾದಷಾಹರಲ್ಲಿ ಹೆಚ್ಚು ಪ್ರಸಿದ್ಧರಾದ ಇಬ್ಬರಲ್ಲಿಯ ಸಾಮ್ಯವೈಷಮ್ಯಗಳನ್ನು ಹೇಳಿರಿ.

೬. ಮೊಗಲ ಸಾಮ್ರಾಜ್ಯವು ಯಾವ ಯಾವ ಕಾರಣಗಳಿಂದ ಬಲ ಗುಂದುತ್ತ ನಡೆಯಿತು?



ಮಹಾರಾಷ್ಟ್ರ-ಇಂಗ್ಲಿಷರ ಆಳಿಕೆಯು

ಮಹಾರಾಷ್ಟ್ರ- ಇಂಗ್ಲಿಷರ ಆಳಿಕೆ

ಉ ಪೋ ದ್ಘಾ ತ

ಪ್ರಿಯ ವಿದ್ಯಾರ್ಥಿಗಳೇ! ನೀವು ಹಿಂದಿನ ಇಯತ್ತೆಯಲ್ಲಿ ಮುಸಲ್ಮಾನರ ಆಳಿಕೆಯ ಕಾಲದ ಇತಿಹಾಸವನ್ನು ಕಲಿತಿರುವಿರಿ. ಆ ಕಾಲದ ಮಧ್ಯದ ಸುಮಾರಕ್ಕೆ ಅಂದರೆ ಕ್ರಿ ಶ ೧೫ನೆಯ ಶತಕದ ಕೊನೆಗೆ **ಯುರೋಪದವರು** ಈ ದೇಶಕ್ಕೆ ಬರಹತ್ತಿದರು ಅವರಲ್ಲಿ ಎಲ್ಲರಿಗಿಂತ ಮೊದಲು ಬಂದವರು **ಪೋರ್ತುಗೀಜರು.** ಈ ಪೋರ್ತುಗೀಜರು ವಿಜಾಪುರದವರಿಂದ ಗೋವೆಯನ್ನು ಗೆದ್ದುಕೊಂಡದ್ದು, ಜಹಾಂಗೀರ-ಶಹಾಜಹಾನ-ಔರಂಗಜೇಬ ಈ ಬಾದಷಾಹರು ಪೋರ್ತುಗೀಜರನ್ನು ಬಲಗುಂದಿಸಿದ್ದು, ಇಂಗ್ಲಿಷ ಕಂಪನಿಯವರು ಜಹಾಂಗೀರನ ಅಪ್ಪಣೆಯನ್ನು ಪಡೆದು ತಮ್ಮ ವ್ಯಾಪಾರವನ್ನು ಬಲಿಸಿದ್ದು, ಈ ಸಂಗತಿಗಳನ್ನು ನೀವು ಅರಿತಿರುವಿರಿ. ಅಲ್ಲದೆ, ೧೭ನೆಯ ಶತಕದ ಆರಂಭದ ಸುಮಾರಿಗೆ ಅಹಮ್ಮದನಗರ ಮತ್ತು ವಿಜಾಪುರ ಈ ರಾಜ್ಯಗಳಲ್ಲಿ **ಮಾಲೋಜಿ, ಶಹಾಜಿ** ಮೊದಲಾದ ಮರಾಠ ಸರದಾರರು ಹೆಸರಾದರು. ಮುಂದೆ **ಶಿವಾಜಿ ಮಹಾರಾಜನು** ಮಾವಳಿ ಜನರನ್ನು ಕೂಡಿಕೊಂಡು ವಿಜಾಪುರದವರಿಗೂ ಮೊಗಲರಿಗೂ ಸೊಪ್ಪುಹಾಕದೆ, ಹೆಚ್ಚು ಹೆಚ್ಚು ಪ್ರಬಲನಾದನು; ಮತ್ತು ಕಡೆಗೆ ಔರಂಗಜೇಬನಂಥ ಬಲಾಢ್ಯನಾದ ಬಾದಷಾಹನು ವಿರೋಧಿಯಾಗಿರುವಾಗಲೇ ಇವನು ಮಹಾರಾಷ್ಟ್ರರ ಸ್ವತಂತ್ರ ರಾಜ್ಯವನ್ನು ಸ್ಥಾಪಿಸಿದನು. ಮುಂದೆ ಸಂಭಾಜಿಯ ಕೊಲೆಯಾದ ಮೇಲೆಯೂ ಮರಾಠರು ಹಿಂಜರಿಯದೆ ಅತಿ ಸಾಹಸದಿಂದ ತಮ್ಮ ರಾಜ್ಯವನ್ನು ಕಾದುಕೊಂಡರು; ಎಂಬ ಸಂಗತಿಗಳೂ ನಿಮಗೆ ಗೊತ್ತಾಗಿರುವವು

ಇನ್ನು ಮಹಾರಾಷ್ಟ್ರರು ಉದಯಹೊಂದಿದ ಮತ್ತು ಸ್ವರಾಜ್ಯವನ್ನು ಸ್ಥಾಪಿಸಿದ ಬಗೆಯು ಯಾವದು? ಔರಂಗಜೇಬನ ತರುವಾಯ ಮೊಗಲ ಸಾಮ್ರಾಜ್ಯದ ಸ್ಥಿತಿಯು ಹೇಗಾಯಿತು? ಪೇಶವೆಯರು ಮಹಾರಾಷ್ಟ್ರ ರಾಜ್ಯವನ್ನು ಹೇಗೆ ಹಬ್ಬಿಸಿದರು? ಯುರೋಪದ ಯಾವ ಯಾವ ದೇಶದವರು ಹಿಂದುಸ್ಥಾನಕ್ಕೆ ಬಂದರು; ಅವರು ಸಮುದ್ರ ಮಾರ್ಗವಾಗಿಯೆ ಏಕೆ ಬಂದರು? ತಮ್ಮ ವ್ಯಾಪಾರವನ್ನು ಹೇಗೆ ಸಾಗಿಸಿದರು? **ಫ್ರೆಂಚ-ಡಚ್ಚ** ಕಂಪನಿಗಳನ್ನು ಮೂಲೆಗೊತ್ತಿ, **ಇಂಗ್ಲಿಷ** ಕಂಪನಿಯವರು ವ್ಯಾಪಾರದಲ್ಲಿ ಹೇಗೆ ಮುಂದುವರಿದರು? ಮತ್ತು ವ್ಯಾಪಾರವನ್ನು ಮಾಡುತ್ತಿರುವ ಅವರು ರಾಜ್ಯವನ್ನು ಹೇಗೆ ಗಳಿಸಿದರು? ಕೊನೆಗೆ ಈ ಕಂಪನಿಯವರ ರಾಜ್ಯವನ್ನು ಇಂಗ್ಲಂಡದ ಸರಕಾರದವರು ತಮ್ಮ ವಶಕ್ಕೆ ತೆಗೆದುಕೊಂಡು ಯಾವ ರೀತಿಯಿಂದ ಆಳುತ್ತಲಿರುವರು? ಇಂಗ್ಲಿಷರ ಆಳಿಕೆಯಿಂದ ನಮ್ಮ ದೇಶದ ಮೇಲೆ ಏನೇನು ಪರಿಣಾಮಗಳಾದವು? ಮುಂತಾದ ಮುಖ್ಯ ಪ್ರಶ್ನೆಗಳ ಉತ್ತರಗಳಿಂದೊಡಗೂಡಿದ ಇದುವರೆಗಿನ ಇತಿಹಾಸವನ್ನು ನೀವು ಈ ಇಯತ್ತೆಯಲ್ಲಿ ಕಲಿಯುವದಿದೆ.



ಅನುಕ್ರಮಣಿಕೆ

ಮೊದಲನೆಯ ಭಾಗ

ಮಧ್ಯಕಾಲ. (ಕ್ರಿ. ಶ. ೧೫೦೦-೧೭೬೧)

ಪಾಠ	ಹೆಸರು	ಪುಟ
೧	ಮರಾಠರ ಉದಯ	೧
೨	ಸ್ವರಾಜ್ಯ ಸಂಸ್ಥಾಪನೆ	೭
೩	ಛತ್ರಪತಿ ಸಂಭಾಜಿ	೧೩
೪	ಛತ್ರಪತಿ ರಾಜಾರಾಮ	೧೬
೫	ಛತ್ರಪತಿ ೨ನೆಯ ಶಿವಾಜಿ ಮತ್ತು ಛತ್ರಪತಿ ಶಾಹೂರಾಜ	೧೯
೬	ಔರಂಗಜೇಬನ ನಂತರದ ಮೊಗಲ ಸಾಮ್ರಾಜ್ಯ	೨೨
೭	ಔರಂಗಜೇಬನ ನಂತರದ ,, ,, (ಮುಂದೆ:ಸಾ.)	೨೬
೮	ಬಾಳಾಜಿ ವಿಶ್ವನಾಥ	೩೦
೯	ಬಾಜೀರಾವ ಬಾಳಾಜಿ	೩೨
೧೦	ಬಾಳಾಜಿ ಬಾಜೀರಾಯ	೩೫
೧೧	,, ,, (ಮುಂದೆ ಸಾಗಿದ್ದು)	೩೮
೧೨	ಪಾಸಿಪತದ ೩ನೆಯ ಯುದ್ಧ	೪೧
೧೩	ಯುರೋಪಿನ ವ್ಯಾಪಾರಸ್ಥರ ಬರುವಿಕೆ	೪೭
೧೪	ಇಂಗ್ಲಿಷರೂ ಫ್ರೆಂಚರೂ	೫೧
೧೫	ಇಂಗ್ಲಿಷರಿಗೂ ಫ್ರೆಂಚರಿಗೂ ನಡೆದ ಯುದ್ಧಗಳು	೫೫
೧೬	ಬಂಗಾಲ ಪ್ರಾಂತದ ಅಧಿಕಾರವು ಇಂಗ್ಲಿಷರ ಕೈಸೇರಿದ್ದು	೬೦

ಎರಡನೆಯ ಭಾಗ

ಅರ್ವಾಚೀನಕಾಲ. (ಕ್ರಿ. ಶ. ೧೭೬೧-೧೯೩೯)

೧	ಬಂಗಾಲದಲ್ಲಿ ಇಂಗ್ಲಿಷರ ರಾಜ್ಯಸ್ಥಾಪನೆಯ ಆರಂಭ	೬೯
೨	ಕ್ಲೈವನ ತರುವಾಯದ ಕಂಪನಿಯ ಕಾರಭಾರ	೭೩

೩	ಮಾಧವರಾಯ	೭೮
೪	ನಾರಾಯಣರಾಯ	೮೩
೫	ವಾರನ್ ಹೆಸ್ಟಿಂಗ್ಸ	೮೬
೬	,, (ಮುಂದೆ ಸಾಗಿದ್ದು)	೯೦
೭	ಲಾರ್ಡ ಕಾರ್ನವಾಲೀಸ ಸರ್ ಜಾನ್ ಶೋರ	೯೫
೮	ಸವಾಯಿ ಮಾಧವರಾಯ	೯೯
೯	೨ನೆಯ ಬಾಜೀರಾಯ	೧೦೨
೧೦	ಲಾರ್ಡ ವೆಲಸ್ಲಿ	೧೦೬
೧೧	,, (ಮುಂದೆ ಸಾಗಿದ್ದು)	೧೧೧
೧೨	ಲಾರ್ಡ ಕಾರ್ನವಾಲೀಸ, ಸರ ಜಾನ ಬಾರ್ಲೋ, ಲಾರ್ಡ ಮಿಂಟೋ	೧೧೪
೧೩	ಮಾರ್ಕ್ವಿಸ್ ಆಫ್ ಹೆಸ್ಟಿಂಗ್ಸ, ಲಾರ್ಡ ಅಮಹರ್ಸ್ಟ	೧೧೭
೧೪	ಲಾರ್ಡ ಅಮಹರ್ಸ್ಟ (ಮುಂದೆ ಸಾಗಿದ್ದು) ಲಾರ್ಡ ಉಯಿಲಿಯಮ್ ಬೆಂಟಿಂಕ	೧೨೦
೧೫	ಲಾರ್ಡ ಉಯಿಲಿಯಮ್ ಬೆಂಟಿಂಕ (ಮುಂದೆ ಸಾಗಿದ್ದು) ಸರ ಚಾರ್ಲಸ ಮೆಟಕಾಫ್	೧೨೪
೧೬	ಲಾರ್ಡ ಆಕ್ಲಂಡ, ಲಾರ್ಡ ಎಲೆನಬರೋ	೧೩೭
೧೭	ಲಾರ್ಡ ಎಲೆನಬರೋ, ಲಾರ್ಡ ಹಾರ್ಡಿಂಜ	೧೩೧
೧೮	ಲಾರ್ಡ ಡಾಲಹೌಸಿ	೧೩೫
೧೯	ಲಾರ್ಡ ಕ್ಯಾನಿಂಗ	೧೪೧
೨೦	,, (ಮುಂದೆ ಸಾಗಿದ್ದು)	೧೪೭
೨೧	ಕ್ಯಾನಿಂಗನ ತರುವಾಯದ ನಾಲ್ವರು ವ್ಹಾಯಿಸರಾಯರು	೧೫೧
೨೨	ಲಾರ್ಡ ಲಿಟನ್, ಲಾರ್ಡ ರಿಪನ್, ಲಾರ್ಡ ಡಫರಿನ್	೧೫೪
೨೩	ಲಾರ್ಡ ಲ್ಯಾನ್ಸಡಾವುನ್, ಲಾ ಎಲ್ಜಿನ್, ಲಾ. ಕರ್ಝನ್	೧೫೯
೨೪	ಲಾರ್ಡ ಮಿಂಟೋ, ಲಾ. ಹಾರ್ಡಿಂಜ, ಲಾ. ಚೇಮ್ಸಫರ್ಡ	೧೬೪
೨೫	ಲಾರ್ಡ ರೀಡಿಂಗ, ಲಾ. ಆಯರ್ವಿನ್, ಲಾ. ವಿಲಿಂಗ್ಡನ್	೧೭೩
	ಲಾರ್ಡ ಲಿನ್‌ಲಿಥಗೋ	೧೮೩

ಮಹಾರಾಷ್ಟ್ರ — ಇಂಗ್ಲಿಷರ ಆಳಿಕೆ

ಮೊದಲನೆಯ ಭಾಗ

ಮಧ್ಯಕಾಲ

ಕ್ರಿ. ಶ. ೧೫೦೦ - ೧೭೬೧

೧ನೆಯ ಪಾಠ

ಮರಾಠರ ಉದಯ

೧. **ಮರಾಠರ ಪೂರ್ವೇತಿಹಾಸ**:— ಬೌದ್ಧ ಧರ್ಮದ ಪ್ರಸಾರವಾಗ ಹತ್ತಿದ ಕಾಲದಲ್ಲಿ ಮಗಧ ಸಾಮ್ರಾಜ್ಯದ ರಾಜರುಕೂಡ ಆ ಧರ್ಮವನ್ನು ಎತ್ತಿಹಿಡಿದರು. ಆಗ ಆ ಧರ್ಮವನ್ನು ಸೇರಲೊಲ್ಲದ ಬಹು ಜನರು ಮಗಧ ದೇಶವನ್ನು ಬಿಟ್ಟು ಬೇರೆ ಬೇರೆ ಪ್ರಾಂತಗಳಿಗೆ ಹೋದರು. ಅವರಲ್ಲಿಯ ಕೆಲವರು ಕ್ರಿ. ಶ. ೨ನೆಯ ೩ನೆಯ ಶತಕದ ಸುಮಾರಿಗೆ ದಕ್ಷಿಣಕ್ಕೆ ಬಂದು ನರ್ಮದಾ - ಗೋದಾವರಿಗಳ ಮಧ್ಯ ಪ್ರದೇಶದಲ್ಲಿ ನೆಲೆಗೊಂಡು ನಿಂತರು. ಈ ಜನರು ಮಗಧ ಸಾಮ್ರಾಜ್ಯದ ಅಭಿಮಾನಿಗಳಿದ್ದರಿಂದ ಮಹಾರಾಜಿಕರು ಅಥವಾ ಮಹಾರಾಷ್ಟ್ರಿಕರು (**ಮರಾಠರು**) ಎಂದೆನಿಸಿದರು. ಅವರು ನೆಲೆಗೊಂಡ ದೇಶಕ್ಕೆ **ಮಹಾರಾಷ್ಟ್ರ**ವೆಂಬ ಹೆಸರುಂಟಾಯಿತು.

ಈ ಮರಾಠರು ಊರುಗಳ ಪಟ್ಟಕೀಲ (**ಪಾಟೀಲ-ಗೌಡ**) ರಾಗಿ ಅರಸ ರಾಗಿರುವವರ ಊಳಿಗವನ್ನು ಮಾಡಿಕೊಂಡಿದ್ದರು. ಮುಂದೆ ಚಾಲುಕ್ಯ, ರಾಷ್ಟ್ರ-

ಕೂಟ, ದೇವಗಿರಿಯ ಯಾದವ ಈ ಅರಸರ ಕಾಲದಲ್ಲಿ ಎಷ್ಟೋ **ಕ್ಷತ್ರಿಯರು** (ಮರಾಠರು) ದಕ್ಷಿಣಕ್ಕೆ ಬಂದು **ದೇಶಮುಖಿ** (ನಾಡಗೌಡಿಕೆ) ಯ ಅಧಿಕಾರವನ್ನು ಪಡೆದು ತಮ್ಮ ಸೈನ್ಯದೊಂದಿಗೆ ಅರಸರ ಸಹಾಯಕರಾಗುತ್ತಿದ್ದರು.

೨. **ಮರಾಠರಲ್ಲಿ ಉಂಟಾದ ಜಾಗ್ರತೆ**:— ಕ್ರಿ. ಶ. ೧೬ ಮತ್ತು ೧೭ ಈ ಎರಡು ಶತಮಾನಗಳಲ್ಲಿ ಮಹಾರಾಷ್ಟ್ರದಲ್ಲಿ ಆಗಿಹೋದ ಮುಕುಂದ ರಾಜ, ಏಕನಾಥ, ಜ್ಞಾನದೇವ, ತುಕಾರಾಮ, ರಾಮದಾಸ ಮೊದಲಾದ ಸತ್ಪುರುಷರು ತಮ್ಮ ಪವಿತ್ರವಾದ ಆಚರಣೆಯಿಂದಲೂ ಸದುಪದೇಶದಿಂದಲೂ ಜನರಲ್ಲಿ ಸ್ವಧರ್ಮ, ಸ್ವದೇಶ ಇವುಗಳ ವಿಷಯವಾಗಿ ಜಾಗ್ರತೆಯನ್ನುಂಟು ಮಾಡಿದರು ಅವರ ಉಪದೇಶದ ಪರಿಣಾಮವು ಮರಾಠರ ಮನಸ್ಸಿನ ಮೇಲಾಗಿ ಅವರು ಆ ಕಾಲದಲ್ಲಿದ್ದ ಮುಸಲ್ಮಾನ ಬಾದಶಹರ ಅಪೂರ ದೃಷ್ಟಿಯ ಆಳಿಕೆಯಿಂದ ಸ್ವತಂತ್ರರಾಗಲು ಪ್ರಯತ್ನಿಸಹತ್ತಿದರು. ಕಡೆಗೆ ಇತಿಹಾಸ ಪ್ರಸಿದ್ಧನಾದ ಭೋಸಲೆ ಮನೆತನದ **ಶಿವಾಜಿ**ಯಂತಹ ಮುಂದಾಳು ದೊರೆತ ಕೂಡಲೆ ಮರಾಠರು ತನು-ಮನ-ಧನಗಳಿಂದ ಅತನಿಗೆ ನೆರವಾಗಿ ಸ್ವತಂತ್ರವಾದ ರಾಜ್ಯವನ್ನು ಸ್ಥಾಪಿಸಿದರು.

೩. **ಭೋಸಲೆ ಮನೆತನದ ಉದಯ**:— ಚಿತ್ತೂರ **ಲಕ್ಷ್ಮಣಸಿಂಹನ** ವೊಮ್ಮಗನಾದ **ಸುಜನಸಿಂಹನು** ಚಿತ್ತೂರನ್ನು ಬಿಟ್ಟು ಹೊರಟನು. ಈ ವಂಶದ **ದೇವರಾಜ**ನೆಂಬವನು ಕ್ರಿ. ಶ ೧೪೧೫ ರ ಸುಮಾರಿಗೆ ದಕ್ಷಿಣಕ್ಕೆ ಬಂದನು. ಮುಂದೆ **ಭೋಸಾಜಿ** ಎಂಬ ಪುರುಷನಿಂದ ಈ ಮನೆತನಕ್ಕೆ **ಭೋಸಲೆ** ಎಂಬ ಹೆಸರುಂಟಾಯಿತು ಈ ಭೋಸಲೆ ಮನೆತನದವರು **ಹಿಂಗಣಿ** ಮೊದಲಾದ ಗ್ರಾಮಗಳ ಗೌಡಿಕೆಯನ್ನು ಮಾಡಿಕೊಂಡಿದ್ದರು. ಕ್ರಿ. ಶ. ೧೫೫೦ ರಲ್ಲಿ ಹುಟ್ಟಿದ **ಮಾಲೋಜಿ**ಯು ದೊಡ್ಡ ಜಹಗೀರನ್ನು ಸಂಪಾದಿಸಿ, ಶೂರ ಸರದಾರನೆಂದು ಹೆಸರಾದನು. ಈ ಮಾಲೋಜಿಯ ಮಗನೇ **ಶಹಾಜಿ**ಯು. ನಿಜಾಮಶಾಹಿಯಲ್ಲಿಯ ಶೂರ ಸರದಾರನಾದ **ಲಖೂಜಿ ಜಾಧವರಾಯ**ನು ತನ್ನ ಮಗಳಾದ **ಜೀಜಾಬಾಯಿ**ಯನ್ನು ಶಹಾಜಿಗೆ ಕೊಟ್ಟಿದ್ದನು. ಈ ಶಹಾಜಿಯ ಮಗನೇ ಸ್ವರಾಜ್ಯ ಸಂಸ್ಥಾಪಕನಾದ **ಶಿವಾಜಿ**ಯು. ಮುಂದೆ ಶಹಾಜಿಯಾದರೂ ನಿಜಾಮಶಾಹಿಯಲ್ಲಿಯೇ ಸರದಾರನಾದನು.



ಶಿವಾಜಿ ಮಹಾರಾಜ

ಇವನು ಆಲ್ಲಿಯ ವಜೀರನಾದ **ಮಲಿಕಂಬರನ** ಕೈಯಲ್ಲಿ ನುರಿತು ರಾಜ್ಯಕಾರಭಾರದ ಅನುಭವವನ್ನು ಪಡೆದನು ಕ್ರಿ ಶ. ೧೬೩೭ ರಲ್ಲಿ ನಿಜಾಮುಶಾಹಿಯು ಮುಳುಗಿದ ಬಳಿಕ ವಿಜಾಪುರವರು ಇವನನ್ನು ಕರೆಯಿಸಿ ಕೊಂಡರು ಆಲ್ಲಿರುವಾಗ ಇವನು ಕರ್ನಾಟಕ ಪ್ರಾಂತವನ್ನು ಗೆದ್ದು ಆದಿಲಶಾಹಿಯ ಆಧಾರನೆನಿಸಿದನು ಶಹಾಜಿ ಮೊದಲಾದವರ ಪರಾಕ್ರಮವನ್ನು ಕಂಡು ಸ್ವತಂತ್ರ ರಾಜ್ಯವನ್ನು ಸ್ಥಾಪಿಸುವದು ಶಕ್ಯವಿದೆಯೆಂಬ ಆತ್ಮವಿಶ್ವಾಸವು ಮರಾಠರಲ್ಲಿ ಉಂಟಾಯಿತು.

೪. **ಶಿವಾಜಿಯ ಬಾಲ್ಯ ಮತ್ತು ಶಿಕ್ಷಣ** :— ಇವನು ಕ್ರಿ. ಶ. ೧೬೩೦ನೆಯ ಇಸ್ವಿ ಫೆಬ್ರುವರಿ ೧೯ನೆಯ ತಾರೀಖಿನ ದಿವಸ **ಶಿವನೇರಿ** ಕೋಟೆಯಲ್ಲಿ ಹುಟ್ಟಿದನು. ಶಹಾಜಿಯು ಆದಿಲಶಾಹಿಯ ಸರದಾರನಾದ ಬಳಿಕ ಜಿಜಾಬಾಯಿಯನ್ನೂ ಶಿವಾಜಿಯನ್ನೂ ವಿಜಾಪುರಕ್ಕೆ ಕರೆಯಿಸಿಕೊಂಡನು. ವೀರಕನ್ಯೆಯೂ ವೀರಪತ್ನಿಯೂ ಆದ ಜೀಜಾಬಾಯಿಯು **ರಾಮಾಯಣ-ಮಹಾಭಾರತ**ಗಳಲ್ಲಿಯ ವೀರರ ಮತ್ತು ಸತ್ಪುರುಷರ ಕಥೆಗಳನ್ನು ಮಗನಿಗೆ ಹೇಳಿ, ಆತನಲ್ಲಿ ವೀರವೃತ್ತಿಯನ್ನೂ ನೀತಿಧೈರ್ಯವನ್ನೂ ಉಂಟುಮಾಡಲು ಯತ್ನಿಸಿದಳು ಮುಂದೆ ಪುಣೆಗೆ ಬಂದಾಗ ಶಹಾಜಿಯ ಕಾರಭಾರಿಯಾದ ದಾದೋಜಿಕೊಂಡದೇವನು ಶಿವಾಜಿಗೆ ಗುರುವಾಗಿ ಯುದ್ಧ ವಿದ್ಯೆಗಳನ್ನು ಕಲಿಸಿದನು. ಮತ್ತು ರಾಜ್ಯಕಾರಭಾರದ ಪ್ರತ್ಯಕ್ಷ ಶಿಕ್ಷಣವನ್ನು ಕೊಟ್ಟನು.

೫. **ರಾಜ್ಯಸ್ಥಾಪನೆಯ ಸಿದ್ಧತೆ** :— ಶಿವಾಜಿಯು ರಾಜ್ಯಸ್ಥಾಪನೆಯ ಉದ್ದೇಶವನ್ನು ಸ್ಥಾಪಿಸುವದಕ್ಕಾಗಿ **ಏಸಾಜಿಕೆಂಕೆ, ತಾನಾಜಿ ಮಾಲಸುರೆ** ಮೊದಲಾದ ಮುಖ್ಯರು ಸಹಾಯಕರಾದರು. ಶಿವಾಜಿಯು ಮಾಳವ ಪ್ರದೇಶವನ್ನು ನಿರೀಕ್ಷಿಸಿ ಆಯಕಟ್ಟಿನ ಮೆಟ್ಟುಗಳನ್ನು ಗೊತ್ತುಮಾಡಿಕೊಂಡನು.

ವಶಮಾಡಿಕೊಂಡ **ತೋರಣ ಕೋಟೆ**ಯನ್ನು ಸರಿಪಡಿಸಿಕೊಳ್ಳುತ್ತಿರಲು ಹೊನ್ನುಗಳ ರಾಶಿಯೊಂದು ಅವನ ಕೈಗೆ ಸಿಕ್ಕಿತು. ಆ ಹಣದಿಂದ **ರಾಯಗಡ** ಕೋಟೆಯನ್ನು ಕ್ರಿ ಶ ೧೬೪೬ರಲ್ಲಿ ಕಟ್ಟಿಸಿದನು. ಮರುವರ್ಷ ದಾದಾಜಿಯು ತೀರಿಕೊಳ್ಳಲು ಪುಣೆಯ ಜಹಗೀರಿಯ ಕಾರಭಾರವನ್ನು ತಾನೇ ಸಾಗಿಸ ಹತ್ತಿದನು. ಮುಂಬೆ ಚಾಕಣ, ಕೊಂಢಾಣೆ (ಸಿಂಹಗಡ), ಪುರಂಧರ, ಕಲ್ಯಾಣ ರಾಯಗಡ, ಲೋಹಗಡ ಮುಂತಾದ ಕೋಟೆಗಳನ್ನೂ ರಾಜಾಪುರ ಬಂದರ ವನ್ನೂ ತೆಗೆದುಕೊಂಡನು. ಕಲ್ಯಾಣದ ಸುಭೇದಾರನಿಂದ ವಿಜಾಪುರದ ಕಡೆಗೆ ಸಾಗಿದ್ದ ಜೊಕ್ಕಸವೂ ಶಿವಾಜಿಯ ಕೈವಶವಾಯಿತು. ಗಟ್ಟಿಗರೂ ಗಸೀಮಿ ಯುದ್ಧದಲ್ಲಿ ಬಲ್ಲಿದರೂ ಆದ **ಮಾವಳೆ** ಜನರ ಬಲವಾದ ದಂಡು ಸಿದ್ಧ ವಾಯಿತು. ಆಗ **ಶ್ರೀ ಸಮರ್ಥ ರಾಮದಾಸ ಸ್ವಾಮಿಗಳು** ಧರ್ಮ ಜಾಗ್ರತೆ ಯನ್ನುಂಟು ಮಾಡುತ್ತ ಮಹಾರಾಷ್ಟ್ರದಲ್ಲಿ ಸಂಚರಿಸುತ್ತಿದ್ದರು ಶಿವಾಜಿಯು ಅವರ ಶಿಷ್ಯನಾದನು ರಾಜಕಾರಣ ಮೊದಲಾದ ಪ್ರಸಂಗಗಳಲ್ಲಿ ಅವರ ಸಹಾ ಯವು ಶಿವಾಜಿಗೆ ಬಹಳವಾಯಿತು.

೬. ಶಿವಾಜಿ – ಆದಿಲಶಾಹಿಯವರ ಮೊದಲನೆಯ ಯುದ್ಧ :— ಕ್ರಿ. ಶ ೧೬೫೯–೬೦ ಶಿವಾಜಿಯು ವಿಜಾಪುರದ ಸರದಾರನಾದ ಜಾವಳಿಯ **ಚಂದ್ರರಾವ ಮೋರೆ** ಎಂಬವನನ್ನು ಸೋಲಿಸಿ ಜಾವಳಿಯನ್ನು ವಶಮಾಡಿ ಕೊಂಡು ನೆರೆಯಲ್ಲಿಯೇ **ಪ್ರತಾಪಗಡ** ಎಂಬ ಕೋಟೆಯನ್ನು ಕಟ್ಟಿಸಿದನು. ಈ ಸುದ್ದಿಯನ್ನು ಕೇಳಿ ಆದಿಲಶಹನು **ಅಫಜಲಖಾನನೆಂಬ** ಗಟ್ಟಿಗನಾದ ಸರದಾರನನ್ನು ಮೊಡ್ಡ ಸೈನ್ಯದೊಂದಿಗೆ ಶಿವಾಜಿಯ ಮೇಲೆ ಕಳುಹಿದನು ಶಿವಾಜಿಯು ಒಪ್ಪಂದ ಮಾಡಿಕೊಳ್ಳಲು ಒಪ್ಪಿದನು. ಪ್ರತಾಪಗಡದ ಆಡಿಯಲ್ಲಿ ಸಿದ್ಧಗೊಳಿಸಿದ ಮಂಟಪದಲ್ಲಿ ಪರಸ್ಪರರ ಭೆಟ್ಟಿಯ ಕಾಲಕ್ಕೆ ಆತ್ಮರಕ್ಷಣೆಯ ಸಲುವಾಗಿ ಶಿವಾಜಿಯು ಅಫಜಲಖಾನನನ್ನು ಕೊಂದನು.

ಮರುದಿವಸ ಶಿವಾಜಿಯು ಪನ್ಹಾಳಗಡವನ್ನು ವಶಮಾಡಿಕೊಂಡನು. **ನೇತಾಜಿ ಪಾಲಕರನು** ವಿಜಾಪುರದ ಸೀಮೆಯನ್ನು ಹೊಕ್ಕು ಒಂದರಹಿಂದೊಂದು ಊರುಗಳನ್ನು ಹಿಡಕೊಳ್ಳಲಾರಂಭಿಸಿದನು. ಆಗ **ಸಿದ್ದೀ ಜೋಹರ** ಎಂಬ ಸರದಾರನು ಪನ್ಹಾಳಗಡದ ಕೊಟೆಗೆ ಮುತ್ತಿಗೆ ಹಾಕಿದನು. ಆಗ ಶಿವಾಜಿಯು

ಪನ್ಹಾಳಗಡದಲ್ಲಿದ್ದನು. ಇದೇ ಹೊತ್ತಿನಲ್ಲಿ **ಷಾಹಿಸ್ತೇಖಾನನು** ದಕ್ಷಿಣಕ್ಕೆ ದಂಡೆತ್ತಿಬಂದು ಪುಣೆಯನ್ನು ಕೈವಶಮಾಡಿಕೊಂಡು ಶಿವಾಜಿಯ ಅರಮನೆಯಲ್ಲಿಯೇ ಇರಹತ್ತಿದನು. ಒಂದೇ ಸಮಯದಲ್ಲಿ ವಿಜಾಪುರದವರೊಡನೆಯೂ ಮೊಗಲರೊಡನೆಯೂ ಕಾದುವ ಪ್ರಸಂಗವಿದ್ದರಿಂದ ಶಿವಾಜಿಯು ಜೋಹರನ ಕೂಡ ಒಪ್ಪಂದದ ಪ್ರಸ್ತಾಪವನ್ನು ನಡೆಯಿಸಿದನು. ಶಿವಾಜಿಯು ಶರಣು ಬರುವನೆಂದು ತಿಳಿದು ಜೋಹರನು ಮುತ್ತಿಗೆಯನ್ನು ಸಡಿಲಿಸಿದನು. ಮಧ್ಯರಾತ್ರಿಯ ಹೊತ್ತು ಸಾಧಿಸಿ ಆಯ್ದುಕೊಂಡ ಸರದಾರರೊಂದಿಗೆ ಆ ಲ್ಲಿಂದ ಜಾರಿ ಹೊರಟವನು ವಿಶಾಲಗಡದ ಕಡೆಗೆ ಸಾಗಿದನು. ಈ ಸುದ್ದಿಯನ್ನು ಕೇಳಿ ಜೋಹರನು ವಿಶಾಲಗಡದ ಮೇಲೆ ಸೈನ್ಯವನ್ನು ಕಳುಹಿದನು ಈ ಸೈನ್ಯವು ರಾಂಗಣಿ ಕೆಂಡಿಯಿಂದ ಹಾಯ್ದು ಹೋಗುವಾಗ್ಗೆ **ಬಾಜಿ ಘೋರಪಡೆ** ಎಂಬ ಸರದಾರನು ಅಡ್ಡಗಟ್ಟಿ, ಶಿವಾಜಿಯು ವಿಶಾಲಗಡಕ್ಕೆ ಸುರಕ್ಷಿತವಾಗಿ ಮುಟ್ಟುವವರೆಗೆ ಮುಸಲ್ಮಾನರ ಸೈನ್ಯವನ್ನು ತಿ ಸಾರಿ ಹಿಂದಕ್ಕಟ್ಟಿದನು. ಳನೆಯ ಸಾರೆ ಗುಂಡು ತಾಗಿ ಮರಣೋನ್ಮುಖನಾದನು. ಇತ್ತ ಶಿವಾಜಿಯು ವಿಶಾಲಗಡಕ್ಕೆ ಸುರಕ್ಷಿತವಾಗಿ ಮುಟ್ಟಿದ ಗುರುತಿಗಾಗಿ ಹಾರಿಸಿದ ತೋಪುಗಳ ಧ್ವನಿಯು ಕೇಳಿಸಿತು. ಆಗ " ಇನ್ನು ನಾನು ಸಮಾಧಾನದಿಂದ ಸಾಯುವೆನು " ಎಂದು ಉಸುರಿ ಬಾಜಿಯು ಅಸುದೊರೆದನು ! ಶಿವಾಜಿಯು ವಿಶಾಲಗಡದಿಂದ ರಾಯಗಡಕ್ಕೆ ಹೋದ ಬಳಿಕ ಪನ್ಹಾಳಗಡವನ್ನು ಜೋಹಾರನ ವಶಕ್ಕೆ ಕೊಟ್ಟು ವಿಜಾಪುರದವರೊಡನೆ ಒಪ್ಪಂದ ಮಾಡಿಕೊಂಡನು.

೭. **ಮೊಗಲರ ಕೂಡ ಆದ ೧ನೆಯ ಯುದ್ಧ** :— ವಿಜಾಪುರದವರೊಡನೆ ಒಪ್ಪಂದವಾದ ಬಳಿಕ ಶಿವಾಜಿಯು ತಕ್ಕಷ್ಟು ಸಹಾಯಕರೊಂದಿಗೆ ಒಂದು ಮೆರವಣಿಗೆಯ ಕೂಡ ಪುಣೆ ಪಟ್ಟಣವನ್ನು ಪ್ರವೇಶಿಸಿದನು. ರಾತ್ರಿಯಾಗಲು ಶಿವಾಜಿಯು ಅರಮನೆಯ ಗೊಡೆಯನ್ನು ಒಡೆದು **ಷಾಹಿಸ್ತೇಖಾನನು** ಇದ್ದ ಕೋಣೆಯನ್ನು ಹೊಕ್ಕನು. ಖಾನನು ಕಿಡಿಕೆಯಿಂದ ಪಾರಾಗಿ ಹೋಗುವಷ್ಟರಲ್ಲಿ ಶಿವಾಜಿಯ ಹೊಡೆತದಿಂದ ಅವನ ಒಂದು **ಕೈಯ** ಬೆರಳುಗಳು ಕತ್ತರಿಸಿದವು. ಖಾನನ ಮಗನು ಶಿವಾಜಿಯ ಕೈಗೆ ಸಿಕ್ಕು ಹತನಾದನು. ಬಳಿಕ ಶಿವಾಜಿಯು ಪಟ್ಟಣದಿಂದ ಹೊರಟು ಕತ್ತಲಲ್ಲಿಯೇ ಸಿಂಹ

ಗಡದ ಕಡೆಗೆ ನಡೆದನು. ಷಾಹಿಸ್ತೇಖಾನನು ಪುಣೆಯನ್ನು ಬಿಟ್ಟು ಔರಂಗಾಬಾದಕ್ಕೆ ಹೋದನು.

೮. ಸುರತವನ್ನು ಸುಲಿದದ್ದು :— ಬಳಿಕ ಶಿವಾಜಿಯು ಸುರತದ ಮೇಲೆ ಸಾಗಿದನು. ಅಲ್ಲಿಯ ಮೊಗಲ ಅಧಿಕಾರಿಯು ಶಿವಾಜಿಯನ್ನು ತಡೆಯಲಿಲ್ಲ. ಪಟ್ಟಣದಲ್ಲಿಯೇ ಬೇಕಾದಷ್ಟು ಸಂಪತ್ತು ದೊರೆತದ್ದರಿಂದ ಶಿವಾಜಿಯು ಇಂಗ್ಲೀಷರ ಗೋಜಿಗೆ ಹೋಗಲಿಲ್ಲ. ಅವನು ಮಕ್ಕೆಯ ಯಾತ್ರಿಕರಿಂದ ಕರವನ್ನೆತ್ತಿಕೊಂಡು ಹಿಂದಿರುಗಿದನು

೯. ಮೊಗಲರ ಕೂಡ ಆದ ೨ನೆಯ ಯುದ್ಧ :— ಶಿವಾಜಿಯು ಸುರತವನ್ನು ಸುಲಿದ ಸುದ್ದಿಯನ್ನು ಕೇಳಿ ಔರಂಗಜೇಬನು **ಜಯಸಿಂಗ-ದಿಲೇರಖಾನ**ರನ್ನು ದಕ್ಷಿಣಕ್ಕೆ ಕಳುಹಿದನು. ಕ್ರಿ. ಶ. **೧೬೬೫.** ಮೊಗಲ ಸೈನ್ಯವು ಪುರಂದರಗಡವನ್ನು ಮುತ್ತಿ ವಶಪಡಿಸಿಕೊಂಡಿತು. ಆಗ ಶಿವಾಜಿಯು ಉಪಾಯಗಾಣದೆ **೨೩** ಕೋಟೆಗಳನ್ನು ಕೊಡಲೊಪ್ಪಿದ್ದಲ್ಲದೆ ಪನ್ಹಾಳಗಡವನ್ನು ತನ್ನ ವಶಕ್ಕೆಟ್ಟುಕೊಳ್ಳಲು ಒಪ್ಪಿಗೆಯನ್ನಿತ್ತರೆ **೨೪** ಲಕ್ಷ ಹೊನ್ನುಗಳನ್ನು ಕೊಡಲು ಸಿದ್ಧನಾದನು ಜಯಸಿಂಗನು ಶಿವಾಜಿಯೊಡನೆ ಒಪ್ಪಂದ ಮಾಡಿಕೊಂಡನು. ಮೊಗಲರೂ ಮರಾಠರೂ ಕೂಡಿ ವಿಜಾಪುರದವರ ವಶದಲ್ಲಿದ್ದ ಪನ್ಹಾಳಗಡವನ್ನು ಮುತ್ತಿ ವಶಮಾಡಿಕೊಂಡರು

೧೦. ಶಿವಾಜಿಯು ಮೊಗಲರ ದರ್ಬಾರಿಗೆ ಹೋಗಿ ಸಾರಾಗಿ ಬಂದದ್ದು:— ಸರದಾರ ಜಯಸಿಂಗನ ಹೇಳಿಕೆಯಂತೆ ಶಿವಾಜಿಯು ಔರಂಗಜೇಬ ಬಾದಷಾಹನ ಭೆಟ್ಟಿಗೆ ಹೋಗಬೇಕೆಂದು ಗೊತ್ತಾಯಿತು. ಆಗ ಶಿವಾಜಿಯು ತನ್ನ ಮಗ ಸಂಭಾಜಿಯನ್ನೂ ಉಳಿದ ಕೆಲವರನ್ನೂ ಕರೆದುಕೊಂಡು ಆಗ್ರಾಕ್ಕೆ ಹೋದನು. ಕ್ರಿ. ಶ. **೧೬೬೬.** ಶಿವಾಜಿಯು ಜಯಸಿಂಗನ ಮಗನಾದ ರಾಮಸಿಂಗನೊಡನೆ ಸಭೆಗೆ ಹೋಗಿ ಕಾಣಿಕೆಯನ್ನು ಕೊಟ್ಟು ಬಾದಷಾಹನಿಗೆ ಸಲಾಮ್ ಮಾಡಲು ಅವನು ಶಿವಾಜಿಯನ್ನು ೩ನೆಯ ತರಗತಿಯ ಸರದಾರರಲ್ಲಿ ಕುಳ್ಳಿರಿಸ ಹೇಳಿದನು. ಆಗ ಶಿವಾಜಿಯು ಸಿಟ್ಟಿನಿಂದ "ನಾನು ಹೀಗೆ ಅಪಮಾನ ಹೊಂದಲು ಇಲ್ಲಿಗೆ ಬಂದವನಲ್ಲ" ಎಂದು ರಾಮಸಿಂಗನಿಗೆ

ಬಹಿರಂಗವಾಗಿ ಹೇಳಿದನು. ತರುವಾಯ ಶಿವಾಜಿಯ ಸಂತಾಪವು ತಲೆಗೇರಿ ಅವನು ಎಚ್ಚರದಪ್ಪಿದನು ರಾಮಸಿಂಗನು ಶಿವಾಜಿಯನ್ನು ಬಿಡಾರಕ್ಕೆ ಕರೆದೊಯ್ದನು ಶಿವಾಜಿಯ ಮನಸ್ಸಿನ ಸ್ಥಿತಿಯನ್ನು ತಿಳಿದ ಬಾದಷಾಹನು ಅವನಿಳಿದ ಮನೆಯ ಮೇಲೆ ಬಿಗುವಾದ ಕಾವಲನ್ನು ಇಟ್ಟನು. ಕೆಲವು ದಿವಸಗಳಾದ ಬಳಿಕ ಶಿವಾಜಿಯು ಬಾದಷಾಹನ ಅಪ್ಪಣೆಯಿಂದ ತನ್ನ ಕೂಡ ಬಂದವರಲ್ಲಿ ಹೆಚ್ಚಿನ ಜನರನ್ನು ದಕ್ಷಿಣಕ್ಕೆ ಕಳುಹಿಸಿದನು. ಅಲ್ಲಿ ಇರುವಾಗ ಸರದಾರರಿಗೂ ಬ್ರಾಹ್ಮಣರಿಗೂ ಮೇಲಿಂದ ಮೇಲೆ ಮಿಠಾಯಿಗಳನ್ನು ಕಳುಹುವ ಪದ್ಧತಿಯು ಶಿವಾಜಿಯದಿತ್ತು. ಮಿಠಾಯಿಗಳಿಂದ ತುಂಬಿದ ಬುಟ್ಟಿಗಳನ್ನು ಕಾವಲಗಾರರು ಮೊದ ಮೊದಲು ನೋಡಿ ನೋಡಿ ಬಿಡುತ್ತಿದ್ದರು ಮುಂದೆ ಅವರು ಸಂಶಯಗೊಳ್ಳದೆ ಅವನ್ನು ನೋಡದೆ ಬಿಡಹತ್ತಿದರು. ಒಂದು ದಿನ ಒಂದು ಬುಟ್ಟಿಯಲ್ಲಿ ಶಿವಾಜಿಯೂ ಮತ್ತೊಂದು ಬುಟ್ಟಿಯಲ್ಲಿ ಸಂಭಾಜಿಯೂ ಕುಳಿತು ಅವನ್ನು ಹೊರಿಸಿಕೊಂಡು ಆಗ್ರಾ ಪಟ್ಟಣವನ್ನು ದಾಟಿ ಅಲ್ಲಿ ಸಿದ್ಧವಾಗಿದ್ದ ಕುದುರೆಗಳನ್ನೇರಿ ಒತ್ತರದಿಂದ ನಡೆದರು. ಅವರು ಬೈರಾಗಿಗಳ ವೇಷವನ್ನು ತಾಳಿ ಕಾಶಿ, ಗಯಾ, ಜಗನ್ನಾಥಪುರಿ, ಹೈದರಾಬಾದಗಳ ಮಾರ್ಗವಾಗಿ ತಮ್ಮ ರಾಜ್ಯಕ್ಕೆ ಬಂದರು ಶಿವಾಜಿಯು ತಿರುಗಿ ಬರುವವರೆಗೆ ಆತನ ಜನರು ವೀರಮಾತೆಯಾದ ಜೀಜಾಬಾಯಿಯ ಅಂಕಿತರಾಗಿದ್ದು ರಾಜ್ಯವ್ಯವಸ್ಥೆಯನ್ನು ಚನ್ನಾಗಿ ಕಾಯ್ದುಕೊಂಡಿದ್ದರು

೨ನೆಯ ಪಾಠ

ಸ್ವರಾಜ್ಯ ಸಂಸ್ಥಾಪನೆ

೧. **ಮೊಗಲರೊಡನೆ ಆದ ಒಪ್ಪಂದ**:— ಶಿವಾಜಿಯು ಆಗ್ರಾದಿಂದ ಬಂದ ಕೂಡಲೇ ಮೊಗಲರ ವಿರೋಧವನ್ನು ಕಳೆಯುವದಕ್ಕಾಗಿ ಔರಂಗಾಬಾದವಲ್ಲಿದ್ದ **ಮುಅಜ್ಜಮ**ನೊಡನೆ ಒಪ್ಪಂದವನ್ನು ಮಾಡಿಕೊಂಡನು. ಈ ಒಪ್ಪಂದದಿಂದ ಔರಂಗಜೇಬನು ಶಿವಾಜಿಯು ರಾಜನೆಂದು ಒಪ್ಪಿದನು. ಸಂಭಾಜಿಗೆ **೫೦೦೦**ದ ಸರದಾರಿಕೆಯು ದೊರೆಯಿತು. ಶಿವಾಜಿಗೆ **ವ್ಹರಾಡವು** ಜಹಗೀರಾಗಿ ಸಿಕ್ಕಿತು. ಮತ್ತು **ಪ್ರತಾಪರಾವ ಗುಜರ** ಎಂಬ ಸೇನಾಪತಿಯು

ಒಂದು ಸಾವಿರ ಸೈನ್ಯದೊಂದಿಗೆ ಮೊಗಲರ ಕೈಕೆಳಗೆ ಇರಹತ್ತಿದನು ತರುವಾಯ ಶಿವಾಜಿಯು ರಾಜ್ಯದಲ್ಲಿ ಸುವ್ಯವಸ್ಥೆಯನ್ನು ನೆಲೆಗೊಳಿಸಿದನು

೨. ಮೊಗಲರಿಗೆ ಕೊಟ್ಟ ಕೋಟೆಗಳನ್ನು ಕೈವಶಮಾಡಿಕೊಂಡದ್ದು

ಮುಂದೆ ಮುಅಜ್ಜಮನೂ ಶಿವಾಜಿಯೂ ಒಂದಾಗಬಹುದೆಂಬ ಸಂಶಯವು ಔರಂಗಜೇಬನಿಗೆ ತಟ್ಟಿತು. ಆಗ ಅವನು ಮರಾಠರ ಮೇಲೆ ಸಾಗಿ ಹೋಗಲು ಮೊಗಲ ಸೈನ್ಯಕ್ಕೆ ಆಪ್ಪಣೆಕೊಟ್ಟನು. ಕೂಡಲೆ ಶಿವಾಜಿಯು ತನ್ನ ಸೈನ್ಯವನ್ನು ಹಿಂದಕ್ಕೆ ತರಿಸಿಕೊಂಡು ಮೊಗಲರಿಗೆ ಕೊಟ್ಟಿದ್ದ ಕೋಟೆಗಳನ್ನು ವಶಮಾಡಿಕೊಳ್ಳುವ ಕೆಲಸವನ್ನು ಕೈಕೊಂಡನು.

ಕೋಂಢಾಣೆ (ಸಿಂಹಗಡ) ಎಂಬ ಬಹು ಭವ್ಯವಾದ ಕೋಟೆಯನ್ನು **ಉದಯಭಾನು** ಎಂಬ ಕಿಲ್ಲೇದಾರನು ಕಾಯುತ್ತಿದ್ದನು ಅದನ್ನು ಗೆದ್ದುಕೊಳ್ಳುವ ಕೆಲಸವು **ತಾನ್ಹಾಜಿಗೆ** ಒಪ್ಪಿಸಲ್ಪಟ್ಟಿತು ತಾನ್ಹಾಜಿ ನುರಿತ ಮಾವಳೀ ಸೈನ್ಯ ಸಹಿತ ಸಿಂಹಗಡಕ್ಕೆ ಸಾಗಿ ಉಡದ ಸಹಾಯದಿಂದ ಕೆಲವು ಜನರೊಂದಿಗೆ ಕೋಟೆಯ ಗೋಡೆಯನ್ನೇರಿ ಹೋದ ಮೇಲೆ ರಜಪುತ-ಮರಾಠರಲ್ಲಿ ಘೋರ ಸಂಗ್ರಾಮವಾಯಿತು. ತಾನ್ಹಾಜಿಯೂ ಉದಯಭಾನುವೂ ಪರಸ್ಪರ ಹೊಡೆತದಿಂದ ಹತರಾದರು. ಮರಾಠರು ಎಸೆಗುಂದತ್ತಿರುವಷ್ಟರಲ್ಲಿ ತಾನ್ಹಾಜಿಯ ತಮ್ಮನಾದ **ಸೂರ್ಯಾಜಿಯು** ಅವರನ್ನು ಹುರಿದುಂಬಿಸಿ ಶೌರ್ಯದಿಂದ ಕಾದಿ ಕೋಟೆಯನ್ನು ವಶಮಾಡಿಕೊಂಡನು.

೩. **ಸಾಲ್ಹೇರದ ಯುದ್ಧ**:— ತರುವಾಯ ಶಿವಾಜಿಯು ಪುರಂದರ ಮೊದಲಾದ ಕೋಟೆಗಳನ್ನು ತೆಗೆದುಕೊಂಡು ಸುರತಕ್ಕೆ ಹೋಗಿ ಅದನ್ನು ಎರಡನೆಯ ಸರತಿ ಸುಲಿದನು. ನಂತರ ಮೊಗಲ ರಾಜ್ಯವನ್ನು ಹೊಕ್ಕು **ದಾವುದಖಾನನೆಂಬ** ಸರದಾರನನ್ನು ಸೋಲಿಸಿ ಪರ್ತಾಡದಲ್ಲಿಯ ಕಾರಂಜಾ ಪಟ್ಟಣವನ್ನು ಸುಲಿದನು. ಮುಂದೆ ಕ್ರಿ ಶ. ೧೬೭೨ರಲ್ಲಿ **ಸಾಲ್ಹೇರ** ಎಂಬಲ್ಲಿ ಮೊಗಲ-ಮರಾಠರಲ್ಲಿ ಘೋರವಾದ ಕಾಳಗವಾಯಿತು. ಅದರಲ್ಲಂತೂ ಮೊಗಲರು ಪೂರ್ಣವಾಗಿ ಸೋತರು ಮರಾಠರು ಮೊಗಲರೊಂದಿಗೆ ಬೈಲಿಗೆ ಸಿಂತು ಮಾಡಿದ ದೊಡ್ಡ ಕಾಳಗವು ಇದೆ

ಹುಬ್ಬಳ್ಳಿಯನ್ನು ಸುಲಿದದ್ದು:-- ಆ ಬಳಿಕ ಶಿವಾಜಿಯು ಮೊಗಲರ ಗೋಜೆಯನ್ನು ಬಿಟ್ಟು, ವಿಜಾಪುರದ ರಾಜ್ಯವನ್ನು ಹೊಕ್ಕು ಕರ್ನಾಟಕ ವರೆಗೆ ಸೀಮೆಯನ್ನು ಗೆದ್ದಕೊಂಡನು. ಆಗ ಪ್ರತಾಪರಾವ ಗುಜರನು ಹುಬ್ಬಳ್ಳಿ ಯನ್ನು ಸುಲಿದನು

೪. ರಾಜ್ಯಾರೋಹಣ ಸಮಾರಂಭ:- ಕ್ರಿ. ಶ. ೧೬೭೪ನೆಯ ಇಸ್ವಿಯ ಜೂನ ೬ನೆಯ ತಾರೀಖು ಎಂದರೆ, ಶಕೆ ೧೫೯೬ರ ಜೇಷ್ಠ ಶುದ್ಧ ೧೩ನೆಯ ದಿವಸ ರಾಯಗಡದಲ್ಲಿ ಶಿವಾಜಿಯ ರಾಜ್ಯಾರೋಹಣ ಸಮಾರಂಭವು ವಿಧಿ ಪೂರ್ವಕವಾಗಿ ಒಳ್ಳೆಯ ಸಡಗರದಿಂದ ಜರುಗಿತು. ಆಗ ಶಿವಾಜಿಯು **"ಕ್ಷತ್ರಿಯ ಕುಲಾವತಂಸ ಶ್ರೀ ಶಿವಛತ್ರಪತಿ ಮಹಾರಾಜ"** ಎಂದು ಬಿರುದನ್ನು ಧರಿಸಿದನು. ತನ್ನ ಹೆಸರಿನ ನಾಣ್ಯಗಳನ್ನು ಮುದ್ರಿಸಿದನು. ಅಂದಿನಿಂದ ರಾಜ್ಯಾಭಿಷೇಕ ಶಕವು ಆರಂಭವಾಯಿತು. ಮತ್ತು ಅಷ್ಟಪ್ರಧಾನರಿಂದೊಡ ಗೂಡಿದ ರಾಜ್ಯ ಪದ್ಧತಿಯಿಂದ ಕಾರಭಾರವು ಸಾಗಹತ್ತಿತು.

೫. ಕರ್ನಾಟಕವನ್ನು ಗೆದ್ದುಕೊಂಡದ್ದು:- ಮರುವರ್ಷ ಶಿವಾಜಿಯು ತಂಜಾವರದ ಮೇಲೆ ಸಾಗಿಹೋದನು. ವೆಂಕೋಜಿಯು ಆದಿಲ್‌ಶಾಹಿಯ ಸರದಾರನಾಗಿದ್ದುದರಿಂದ ಅವನು ಯುದ್ಧಕ್ಕೆ ಸಿಂತನು ಆಗ **ಹಂಬೀರರಾವ ನೋಹಿತೆ** ಎಂಬ ಸೇನಾಪತಿಯು ಅವನನ್ನು ಸೋಲಿಸಿದನು. ಆಗ ಶಿವಾಜಿಗೆ ವ್ಯಸನವಾಯಿತು. ಅವನು ತಮ್ಮನನ್ನು ಸಮಾಧಾನಬಡಿಸಿ ಆ ಜಹಗೀರನ್ನು ಅವನಿಗೆ ತಿರುಗಿ ಕೊಟ್ಟುಬಿಟ್ಟನು ತಿರುಗಿ ಬರುವಾಗ ಇವನಿಗೂ ಧಾರವಾಡದ ಹತ್ತರದ ಬೆಳವಡಿಯ ದೇಸಾಯಿಯಾದ **ಈಶಪ್ರಭುವಿಗೂ** ಯುದ್ಧವಾಗಿ ಅದರಲ್ಲಿ ಈಶಪ್ರಭು ಮಡಿದನು. ಅವನ ಹೆಂಡತಿಯಾದ **ಮಲ್ಲವ್ವನು** ಧೈರ್ಯ ದಿಂದ ಮರಾಠರ ಸೈನ್ಯವನ್ನು ಹೊಕ್ಕು ಕಾದಹತ್ತಿ ಕೆಲಹೊತ್ತಿನ ಮೇಲೆ ಗಾಯಹೊಂದಿ ಬಿದ್ದಳು. ಆಗ ಶಿವಾಜಿಯು ಕನಿಕರಬಟ್ಟು "ನೀವು ನಮ್ಮ ವೈರಿಗಳಾದರೂ ನಿಮ್ಮ ಕಲಿತನವನ್ನು ಕಂಡು ಕೌತುಕವೆನಿಸುತ್ತದೆ" ಹೀಗೆಂದು ಆ ವೀರ ಮಲ್ಲವ್ವನಿಗೆ ಎರಡು ಗ್ರಾಮಗಳನ್ನು ಉಂಬಳಿಯಾಗಿ ಕೊಟ್ಟನು.

೬. ವಿಜಾಪುರದವರನ್ನು ಕೂಡಿಕೊಂಡು ಮೊಗಲರನ್ನು ಮುರಿದದ್ದು: ಇಷ್ಟರಲ್ಲಿ ಔರಂಗಜೇಬನಿಂದ ಕಳುಹಲ್ಪಟ್ಟ **ಮುಅಜ್ಜಮನೂ** ಮತ್ತು **ದಿಲೇರ**

ಖಾನನೂ ವಿಜಾಪುರದ ಮೇಲೆ ದಂಡೆತ್ತಿಬಂದದರಿಂದ ಆದಿಲಶಾಹಿಯ ಮುಖ್ಯ ಮಂತ್ರಿಯಾದ **ಸಿದ್ದಿ ಮುಸಾಊದ**ನು ತನ್ನ ನೆರವಿಗೆ ಬರಬೇಕೆಂದು ಶಿವಾಜಿಯನ್ನು ಬಹಳವಾಗಿ ಕೇಳಿಕೊಂಡನು. ಆಗ ಶಿವಾಜಿಯು ಮುಸಾಊದನ ಸಹಾಯಕನಾಗಿ ದಿಲೇರಖಾನನನ್ನು ಸೋಲಿಸಿ ಓಡಿಸಿದನು. ಶಿವಾಜಿಯು ಮಾಡಿದ ಸಾಹಸಕ್ಕಾಗಿ ಆದಿಲಶಾಹಿಯವರು ವೆಂಕೋಜಿಯು ಸ್ವತಂತ್ರನೆಂದೂ ಕೃಷ್ಣೆಯಿಂದ ತಂಜಾವರದ ವರೆಗಿನ ನಾಡು ಶಿವಾಜಿಯದೆಂದೂ ಒಪ್ಪಿಕೊಂಡರು.

೭. **ಶಿವಾಜಿಯ ಮರಣ** :— ಮುಂದೆ ಶಿವಾಜಿಯು ಬಹು ದಿವಸ ಬಾಳಲಿಲ್ಲ. ವಯಸ್ಸಿನ ಹದಿನೈದನೆಯ ವರುಷದಿಂದ ಸುಮಾರು ಮೂರು ತಪಗಳ ವರೆಗೆ ಮಾಡಿದ ಅವಿಶ್ರಾಂತ ಶ್ರಮದ ಪರಿಣಾಮವು ಇವನ ಪ್ರಕೃತಿಯ ಮೇಲೆ ಆಗದೆ ಇರಲಿಲ್ಲ. ಇವನು ೧೬೮೦ನೆಯ ಇಸವಿಯ ಎಪ್ರಿಲದ ೬ನೆಯ ತಾರೀಖಿನ ದಿವಸ ಮರಣ ಹೊಂದಿದನು. ಇವನ ರಾಜ್ಯವು (ದಕ್ಷಿಣೋತ್ತರ) ೭೦೦ಮೈಲು ಉದ್ದವೂ (ಪೂರ್ವಪಶ್ಚಿಮ) ೧೫೦ಮೈಲು ಅಗಲವೂ ಇತ್ತು. ಶಿವಾಜಿಗೆ **ಸಂಭಾಜಿ, ರಾಜಾರಾಮ** ಎಂಬ ಇಬ್ಬರು ಮಕ್ಕಳೂ **ಸಖೂಬಾಯಿ** ಎಂಬ ಮಗಳೂ ಇದ್ದರು. ಇವನ ಹೆಂಡತಿಯರಲ್ಲಿ **ಪುತಳಾಬಾಯಿ** ಎಂಬಾಕೆಯು ಸತಿಹೋದಳು.

೮. **ಶಿವಾಜಿಯ ರಾಜ್ಯಪದ್ಧತಿ**:— ಶಿವಾಜಿಯ ರಾಜ್ಯಕಾರಭಾರವು ಎಂಟು ಖಾತೆಗಳ ಮುಖಾಂತರ ಸಾಗುತ್ತಿತ್ತು. ಪ್ರತಿಯೊಂದು ಖಾತೆಗೆ ಒಬ್ಬೊಬ್ಬ ಮುಖ್ಯ ಅಧಿಕಾರಿಯು ಇದ್ದನು. ಈ ಅಧಿಕಾರಿಗಳು ತಮ್ಮ ತಮ್ಮ ಖಾತೆಗಳ ಕಾರಭಾರವನ್ನು ಸ್ವತಂತ್ರವಾಗಿ ಸಾಗಿಸುತ್ತ ಛತ್ರಪತಿಯ ಮೇಲಧಿಕಾರಕ್ಕೆ ಒಳಗಾಗಿದ್ದರು. ಈ ಎಂಟು ಜನ ಅಧಿಕಾರಿಗಳಿಗೆ **ಅಷ್ಟಪ್ರಧಾನ**ರೆಂಬ ಸಂಜ್ಞೆ.

ಅಷ್ಟಪ್ರಧಾನರೂ ಅವರ ಕೆಲಸಗಳೂ

ಪ್ರಧಾನರು	ಕೆಲಸ
೧ ಪಂತಪ್ರಧಾನ (ಪೇಶವೆ)	ಮುಖ್ಯಪ್ರಧಾನಿಕೆ: ಅರಸನಿರದಿರುವಾಗ ಅವನ ಕೆಲಸ ನಡೆಸುವದು.
೨ ಪಂತಅಮಾತ್ಯ (ಸುಜುಮದಾರ)	ಜಣವನ್ನು ಎತ್ತುವದು, ಲೆಕ್ಕವನ್ನು ಇಡುವದು
೩ ಪಂತಸಚಿವ (ಸರನವೀಸ)	ಕಾಗದಪತ್ರ ಕಾದಿಡುವದು
೪ ಮಂತ್ರಿ (ವಾಕೆನವೀಸ)	ಅರಸನ ಸ್ವಂತದ ಕಾರಭಾರ
೫ ಸೇನಾಪತಿ (ಸರನೋಬತ)	ಸೈನ್ಯದ ವ್ಯವಸ್ಥೆ
೬ ಸುಮಂತ (ದಬೀರ)	ಪರರಾಜ್ಯ ವ್ಯವಹಾರ
೭ ನ್ಯಾಯಾಧೀಶ	ನ್ಯಾಯಖಾತೆಯ ಹೆಚ್ಚಿನ ಕೆಲಸ
೮ ಪಂಡಿತರಾವ	ಧರ್ಮಖಾತೆಯನ್ನು ನಡಿಸುವದು.

ಈ ಪ್ರಧಾನರೆಲ್ಲರು ಒಳ್ಳೆಯ ಯೋಗ್ಯತೆಯವರಾಗಿದ್ದರು. ಕಡೆಯ ಇಬ್ಬರನ್ನು ಬಿಟ್ಟು ಉಳಿದವರು ಯುದ್ಧಕಲೆಯಲ್ಲಿ ನಿಪುಣರಾಗಿದ್ದರು. ಶಿವಾಜಿಯು ಜಹಗೀರಿನ ಪದ್ಧತಿಯನ್ನು ತೆಗೆದುಹಾಕಿ, ಕೆಲಸಗಾರರಿಗೆ ಸಂಬಳವನ್ನು ಗೊತ್ತುಮಾಡಿ ಅದನ್ನು ಹೊತ್ತು ಹೊತ್ತಿಗೆ ಸಲ್ಲಿಸಹತ್ತಿದನು.

ಭೂಮಿಯ ಕಂದಾಯವು ಉತ್ಪನ್ನದ ಎರಡ್ಮೈದನೆಯಂಶದಷ್ಟು ಎತ್ತಲ್ಪಡುತ್ತಿತ್ತು. ಒಕ್ಕಲಿಗರ ಹಿತದ ಕಡೆಗೆ ವಿಶೇಷ ಲಕ್ಷ್ಯವಿತ್ತು. ನ್ಯಾಯ ನಿರ್ಣಯವು ಪಂಚಾಯತಿಯ ಪದ್ಧತಿಯಿಂದ ಆಗುತ್ತಿತ್ತು ಎಲ್ಲರೂ ತಮ್ಮ ತಮ್ಮ ಧರ್ಮದಂತೆ ನಡೆಯುವದು ಸುಲಭವಾಗಿತ್ತು.

೯. **ಸೈನ್ಯ ವ್ಯವಸ್ಥೆ**:— ರಾಜ್ಯದಲ್ಲಿ **ಸುಭೆ** ಮತ್ತು **ಮಹಾಲು** ಎಂಬ ಭಾಗಗಳಿದ್ದವು ಈ ಭಾಗಗಳಲ್ಲಿ ಅಲ್ಲಲ್ಲಿ ಭದ್ರವಾದ ಕೋಟೆಗಳಿದ್ದವು. ಪ್ರತಿಯೊಂದು ಕೋಟೆಯನ್ನು **ಹವಾಲದಾರ, ಸಬನೀಸ, ಕಾರಖನೀಸ** ಎಂಬ

ಅಧಿಕಾರಿಗಳು ರಕ್ಷಿಸುತ್ತಿದ್ದರು. ಸೈನ್ಯದಲ್ಲಿ ಕುದುರೆಯ ಸವಾರರು ಮತ್ತು ಕಾಲಾಳುಗಳು ಎಂಬೆರಡು ಭಾಗಗಳಿದ್ದವು. ಸೈನ್ಯದ ವ್ಯವಸ್ಥೆಯು ಚನ್ನಾಗಿತ್ತು. ಸ್ತ್ರೀಯರಿಗೂ ಶರೆಗಾರರಿಗೂ ಸೈನ್ಯದಲ್ಲಿ ಕಾಲಿಡಲು ಕಟ್ಟು ಇತ್ತು ಶಿವಾಜಿಯ ವೈಭವಕಾಲದಲ್ಲಿ ೬೦ ಸಾವಿರ ರಾಹುತರೂ ೧ ಲಕ್ಷ ಕಾಲಾಳುಗಳೂ ಆತನ ಸೈನ್ಯದಲ್ಲಿದ್ದರು.

೧೦. ಶಿವಾಜಿಯ ಹಡಗುಪಡೆ:— ಕೊಂಕಣಭಾಗದ ರಕ್ಷಣೆಯು ಹಡಗುಪಡೆಯಿಂದಲ್ಲದೆ ಶಕ್ಯವಿರಲಿಲ್ಲ ಅವದರಿಂದ, ಶಿವಾಜಿಯು ಮಾಲುವಣದ ಹತ್ತರ **ಸಿಂಧುದುರ್ಗ**ವೆಂಬ ಬಲವಾದ ಕೋಟೆಯನ್ನು ಕಟ್ಟಿಸಿ ಕೋಳೀ ಭಂಡಾರಿ, ಮುಸಲ್ಮಾನ ಈ ಜನರುಳ್ಳ ಹಡಗುಪಡೆಯನ್ನು ಸಿದ್ಧಪಡಿಸಿದನು. **ಸಿದ್ದೀಮಿಸ್ತ್ರೀ** ಎಂಬ ಹಬಸೀ ಸರದಾರನು ಈ ಪಡೆಯ ಮುಖ್ಯಾಧಿಕಾರಿಯಾಗಿದ್ದನು. ಕ್ರಿ ಶ ೧೬೭೧ರ ಸುಮಾರಿಗೆ ಶಿವಾಜಿಯ ಹಡಗುಪಡೆಯಲ್ಲಿ ೧೬೦ ಹಡಗಗಳಿದ್ದವು ಕುಲಾಬಾ ಕೋಟೆಯು ಹಡಗುಪಡೆಯ ಕೇಂದ್ರವಾಗಿತ್ತು

೧೧. ಶಿವಾಜಿಯ ಗುಣ, ಶೀಲ, ಮತ್ತು ಯೋಗ್ಯತೆ:- ಶಿವಾಜಿಯ ಸಂಗಡ ಕಡೆತನಕ ಹೋರಾಡಿದ ಔರಂಗಜೇಬನು-"ಶಿವಾಜಿಯು ಹೆಸರಾದ ವೀರನು; ಹಿಂದುಸ್ತಾನದ ಪ್ರಾಚೀನ ರಾಜ್ಯಗಳನ್ನು ನಾನು ಮುರಿಯುತ್ತಿರುವಾಗಲೆ ಇವನು ಹೊಸ ರಾಜ್ಯಸ್ಥಾಪನೆಯ ದೊಡ್ಡ ಕೆಲಸವನ್ನು ನೆರವೇರಿಸಿದನು; ನನ್ನ ಸೈನ್ಯವು ಈಗ ಹತ್ತೊಂಬತ್ತು ವರ್ಷಗಳ ವರೆಗೆ ಶಿವಾಜಿಯೊಡನೆ ಕಾದುತ್ತಿದ್ದರೂ ಇವನ ರಾಜ್ಯವು ಒಂದೇಸವನೆ ಹಬ್ಬುತ್ತ ನಡೆದಿದೆ. ಸಂಕಟ ಕಾಲದಲ್ಲಿ ಇವನೆಂದೂ ಎದೆಗೆಡಲಿಲ್ಲ" ಎಂದಿರುವನು. ಪ್ರಸಂಗಕ್ಕೆ ತಕ್ಕ ಹಂಚಿಕೆಗಳನ್ನು ಯೋಜಿಸುವದರಲ್ಲಿ ಶಿವಾಜಿಯು ಹೆಸರಾಗಿದ್ದನು. ಪ್ರೇಮ-ವಿಶ್ವಾಸಗಳಿಂದ ಇವನು ಮಾವಳಿ ಜನರನ್ನು ವಶಮಾಡಿಕೊಂಡನು. ಅವರು ಇವನಿಗಾಗಿ ತಮ್ಮ ಜೀವವನ್ನು ಹುಲ್ಲಿಗಿಂತ ಕಡೆಯೆಂದೆಣಿಸಿದ್ದರು. ಕೈಲಾದ ಮಟ್ಟಿಗೆ ಯುದ್ಧಪ್ರಸಂಗಗಳನ್ನು ತಪ್ಪಿಸಿಯೇ ಕಾರ್ಯವನ್ನು ಸಾಧಿಸುವನು. ಆದರೆ ಮಲೆತು ನಿಂತ ಶತ್ರುವನ್ನು ಹಣಿಯಲು ಇವನು ಹಿಂಜರಿಯುತ್ತಿರಲಿಲ್ಲ.

ಇವನು ಸ್ಥಾಪಿಸಿದ ಅಷ್ಟಪ್ರಧಾನರ ರಾಜ್ಯಪದ್ಧತಿಯು ಇವನ ಮುತ್ಸದ್ದಿತನದ ಸಾಕ್ಷಿಯಾಗಿದೆ. ಶಿವಾಜಿಯು ನೆರೆಸಿಕ್ಕ ಸಮಯದಲ್ಲಿ ಒಮ್ಮೆ ಮತ್ತು ಸಂಭಾಜಿಯ ಕೊಲೆಯಾದನಂತರ ಮತ್ತೊಮ್ಮೆ ಹೀಗೆ ಎರಡು ಪ್ರಸಂಗಗಳಲ್ಲಿ ಮರಾಠರ ರಾಜ್ಯವನ್ನು ಬದುಕಿಸಲು ಈ ಪದ್ಧತಿಯೇ ಕಾರಣವಾಯಿತು. ಶಿವಾಜಿಯು ಶುದ್ಧಾಚರಣಿಯಾಗಿದ್ದನೆಂದು ಇವನ ಹೆಗ್ಗಳು ಕೂಡ ಒಪ್ಪುವರು. ಇವನು ಸ್ವಧರ್ಮಾಭಿಮಾನಿಯಾಗಿದ್ದಂತೆ ಪರಧರ್ಮಸಹಿಷ್ಣುವೂ ಆಗಿದ್ದನು. ಮೇಲಾದ ಈಶ್ವರಭಕ್ತನೂ ಗುರುಹಿರಿಯರನ್ನು ಮನ್ನಿಸುವವನೂ ಆಗಿದ್ದನು.

ಸಾರಾಂಶ— ಮುತ್ಸದ್ದಿತನ, ಶೌರ್ಯ, ಶುದ್ಧಾಚರಣೆ ಈ ಸುಗುಣಗಳ ಸಂಗಮದಿಂದೊಪ್ಪುವ ಮಹಾಪುರುಷರು ಸಿಕ್ಕುವದು ಕಠಿಣ. ಶಿವಾಜಿ ಮಹಾರಾಜನು ಈ ಗುಣಗಳಿಂದೊಪ್ಪುವವನಾಗಿದ್ದುದರಿಂದ ಇವನನ್ನು ಮಹಾಪುರುಷನೆಂದು ಕರೆದುದು ಅರಿದಲ್ಲ

೩ನೆಯ ಪಾಠ

ಛತ್ರಪತಿ ಸಂಭಾಜಿ (ಕ್ರಿ. ಶ. ೧೬೮೧—೧೬೮೯)

೧. ಸಂಭಾಜಿಯ ರಾಜ್ಯಾರೋಹಣ:— ಸಂಭಾಜಿಯು ಶಿವಾಜಿಯ ಹಿರಿಯ ಮಗನು. ಇವನು ಕ್ರಿ. ಶ ೧೬೫೭ ರಲ್ಲಿ **ಪುರಂಧರ**ದಲ್ಲಿ ಹುಟ್ಟಿದನು. ಇವನು ಮೇಲಾದ ಕಲಿಯೂ, ಧರ್ಮಾಭಿಮಾನಿಯೂ, ಹಟವಾದಿಯೂ ಕ್ರೂರನೂ ಆಗಿದ್ದನು **ಕ್ರಿ. ಶ. ೧೬೮೦ ರಲ್ಲಿ** ಮೊಗಲರು ಶಿವಾಜಿಯ ಮೇಲೆ ದಂಡೆತ್ತಿ ಬಂದಾಗ, ಸಂಭಾಜಿಯು ತಂದೆಯನ್ನು ಬಿಟ್ಟು ಶತ್ರುಗಳನ್ನು ಕೂಡ ಹೋದನು. ಆದರೆ ಮೊಗಲರು ಇವನಿಗೆ ಆಸರಕೊಡಲಿಲ್ಲ. ಆಗ ಶಿವಾಜಿಯು ಮಗನನ್ನು ಹಿಡಿದುತರಿಸಿ ಪನ್ಹಾಳಗಡದಲ್ಲಿ ಕಾವಲಿನಲ್ಲಿ ಇಟ್ಟನು. ಶಿವಾಜಿಯೂ ಅವನ ಕೈಕೆಳಗಿನ ಅಧಿಕಾರಿಗಳೂ ಸಂಭಾಜಿಯ ಈ ವರ್ತನವು ರಾಜ್ಯಕ್ಕೆ ಎಲ್ಲಿ ಮುಳುವು ಆಗುವದೋ ಎಂದು ಭಯಗೊಂಡರು.

ಶಿವಾಜಿಯು ಮರಣ ಹೊಂದಿದ ಕೂಡಲೇ ಅತನ ೨ನೆಯ ಹೆಂಡಯಾದ **ಸೋಯರಾಬಾಯಿ**ಯು ತನ್ನ ಮಗನಾದ **ರಾಜಾರಾಮನನ್ನು**

ಪಟ್ಟಕ್ಕೆ ಕೂಡ್ರಿಸಬೇಕೆಂದು ಒಳಸಂಚು ನಡೆಸಿದಳು. ಪನ್ಹಾಳಗಡದಲ್ಲಿದ್ದ ಸಂಭಾಜಿಗೆ ಈ ಸುದ್ದಿ ತಿಳಿದು ಅಲ್ಲಿಂದ ರಾಯಗಡಕ್ಕೆ ಹೊರಟು ಸೇನಾಪತಿಯಾದ **ಹಂಬೀರರಾಯ**ನನ್ನು ಒಲಿಸಿಕೊಂಡು ಪಟ್ಟವನ್ನೇರಿದನು ಬಳಿಕ ಸೋಯರಾಬಾಯಿಯನ್ನು ಕೊಲ್ಲಿಸಿದನು. **ಮೋರೋಪಂತ, ಅಣ್ಣಾಜಿ** ಮೊದಲಾದ ಅಧಿಕಾರಿಗಳನ್ನು ಸೆರೆಯಲ್ಲಿಟ್ಟನು. ತಂದೆಯ ಕಾಲದ ಅಧಿಕಾರಿಗಳಿಲ್ಲರು ತನ್ನ ಕೇಡು ಬಗೆಯುವರೆಂಬ ವಿಚಾರವು ತಲೆಗೇರಿವ್ದರಿಂದ ಇವನು ನೂರಾರು ಜನರನ್ನು ಕ್ರೂರತನದಿಂದ ಕೊಲ್ಲಿಸಿದನು ತಂದೆಯ ಕಾಲದ ನುರಿತ ಜನರನ್ನು ಕಳೆದುಕೊಂಡ ಬಳಿಕ ಸಂಭಾಜಿಯು ತನ್ನ ಒಲವಿನಂತೆ ನಡೆಯುವ **ಕವಿಕುಲೇಶ** (ಕಲುಶ) ನೆಂಬ ಕಾಶ್ಮೀರದ ಬ್ರಾಹ್ಮಣನನ್ನು ತನ್ನ ಮಂತ್ರಿಯನ್ನು ಮಾಡಿದನು.

೨. **ಸಂಭಾಜಿಯ ಪರಾಕ್ರಮ**:— ಮೊಗಲರು, ಪೋರ್ತುಗೀಜರು ಮತ್ತು ಜಂಜೀರೆಯ ಸಿದ್ದಿ ಈ ಮೂವರು ಇವನ ಹಗೆಗಳಾಗಿದ್ದರು. ಔರಂಗಜೇಬನು ರಜಪುತರೊಡನೆ ಯುದ್ಧದಲ್ಲಿ ತೊಡಗಿದ ವೇಳೆಯಲ್ಲಿ ಸಂಭಾಜಿಯು **ಬರ್ಹಾಣಪುರ**ದವರೆಗೆ ಸಾಗಿಹೋಗಿ **ಬಹದ್ದೂರಪುರ**ವನ್ನು ಸುಲಿದನು.

ಜಂಜೀರೆಯ ಸಿದ್ಧಿಯು ಮರಾಠರ ರಾಜ್ಯವನ್ನು ಸೇರಿ ಉಪದ್ರವ ಕೊಡಲು ಸಂಭಾಜಿಯು ಅವನನ್ನು ಸೋಲಿಸಿ ಜಂಜೀರೆಯ ಕೋಟೆಯನ್ನು ತೆಗೆದುಕೊಳ್ಳುವ ಯತ್ನ ನಡೆಯಿಸಿದನು.

ಇದೇ ಹೊತ್ತಿಗೆ ಪೋರ್ತುಗೀಜರು ಮರಾಠರ ರಾಜ್ಯದಲ್ಲಿ ಹೊಕ್ಕು ಒತ್ತಾಯದಿಂದ ಧರ್ಮಪ್ರಸಾರವನ್ನು ಮಾಡಹತ್ತಿದರಲ್ಲದೆ **ಚೌಲ** ಎಂಬ ಬಂದರವನ್ನು ಹಿಡಿದುಕೊಂಡರು. ಆಗ ಸಂಭಾಜಿಯು **ವಸಯಿ** ಮುಂತಾದ ಸ್ಥಳಗಳನ್ನು ಹಾಳಗೆಡಹಿ **ಫೋಂಡಾದ** ಬಳಿಯಲ್ಲಿ ಅವರನ್ನು ಪೂರ್ಣವಾಗಿ ಸೋಲಿಸಿ ಅವರ ರಾಜಧಾನಿಯಾದ **ಗೋವೆ**ಯನ್ನು ಬಲವಾಗಿ ಮುತ್ತಿದನು.

ಈ ರೀತಿ ಇಬ್ಬರು ಹಗೆಗಳನ್ನು ಹಣ್ಣುಮಾಡುತ್ತಿರುವಷ್ಟರಲ್ಲಿ ಮೊಗಲ ಸೈನ್ಯವು ಒಳ್ಳೆಯ ಸಿದ್ಧತೆಯೊಂದಿಗೆ ತನ್ನ ಮೇಲೆ ಸಾಗಿಬರುವದೆಂಬ ಸುದ್ದಿಯು ಸಂಭಾಜಿಗೆ ತಿಳಿಯಿತು. ಕಾರಣ ಅವನು ನಿರುಪಾಯನಾಗಿ ತನ್ನ ಎಲ್ಲ ಸೈನ್ಯವನ್ನು ತೆಗೆದುಕೊಂಡು ಮೊಗಲರನ್ನು ತಡೆಯಲು ಹೊರಡಬೇಕಾಯಿತು.

ಜಂಜೀರೆಯ ಸಿದ್ದಿಯು ಮೊಗಲ ಸೈನ್ಯಕ್ಕೆ ಕಾಳುಕಡಿಗಳನ್ನು ಒದಗಿಸಲು ಹೊರಟಿದ್ದನ್ನು ಕೇಳಿ ಉತ್ತರಕ್ಕೆ ಸಾಗಿ ಶತ್ರುಸೈನ್ಯವು ಬರುವ ದಾರಿಯಲ್ಲಿಯ ಸೀಮೆಗಳನ್ನು ಹಾಳುಮಾಡಿ ಸಿದ್ದಿಯನ್ನು ಹಣಿದು ಅವನು ತಂದಿದ್ದ ಕಾಳುಕಡಿ ಮುಂತಾದವುಗಳನ್ನು ಸುಲಿದುಕೊಂಡನು. ಮರಾಠರು ಎಲ್ಲ ಆಯಕಟ್ಟಿನ ಸ್ಥಳಗಳನ್ನು ಕಾದುಕೊಂಡದ್ದರಿಂದ ಮೊಗಲ ಸೈನ್ಯದ ಆಟವು ನಡೆಯದಂತಾಯಿತು. ಆಗ ಬರ್ಹಾಣಪುರದಲ್ಲಿದ್ದ ಬಾದಷಾಹನು ತನ್ನ ಸೈನ್ಯವನ್ನು ಹಿಂದಕ್ಕೆ ಕರೆಯಿಸಿಕೊಂಡನು ಮರಾಠರ ಗೋಜು ಬಿಟ್ಟು ವಿಜಾಪುರ ಗೋವಳಕೊಂಡಗಳ ಮೇಲೆ ಸಾಗಿ ಕ್ರಿ ಶ. ೧೬೮೬ರಿಂದ ೮೭ರವರೆಗೆ ಆ ರಾಜ್ಯಗಳನ್ನು ಮುರಿದು ತನ್ನ ರಾಜ್ಯಕ್ಕೆ ಕೂಡಿಸಿಕೊಂಡನು.

೩. **ಸಂಭಾಜಿಯು ಕೈಸೆರೆಯಾಗಿದ್ದು** ಮತ್ತು **ಆತನಕೊಲೆ**:– ಔರಂಗಜೇಬನು **ವಿಜಾಪುರ–ಗೋವಳಕೊಂಡ**ಗಳನ್ನು ಕೈವಶ ಮಾಡಿಕೊಂಡ ಬಳಿಕ ಮರಾಠರ ಮೇಲೆ ಸಾಗಿಬಂದನು. ಮೊಗಲ ಸರದಾರನಾದ **ಸರ್ಜೇಖಾನ**ನಿಗೂ **ಹಂಬೀರರಾವ ಮೋಹಿತೆಗೂ** ವಾಯಿಯ ಬಳಿಯಲ್ಲಿ ಯುದ್ಧವಾಗಿ ಅದರಲ್ಲಿ ಮೋಹಿತೆಯು ಹತನಾದನು. ಕೂಡಲೆ ಮೊಗಲ ಸೈನ್ಯವು ಸಂಭಾಜಿಯನ್ನು ಹಿಡಿಯಹೊರಟಿತು. ಸಂಭಾಜಿಯು ಸಂಗಮೇಶ್ವರದಲ್ಲಿರುವನೆಂಬ ಸುದ್ದಿಯು ಗುಪ್ತಚಾರರಿಂದ ತಿಳಿಯಿತು. ಆಗ ಮುಕ್ರಬಖಾನ ಎಂಬ ಸರದಾರನು ೩ ಸಾವಿರ ಸೈನ್ಯದೊಂದಿಗೆ ದಿನಕ್ಕೆ ೩೦ ಮೈಲಿನಂತೆ ದಾರಿಯ ನಡೆದು ಮೂರು ದಿವಸಕ್ಕೆ **ಸಂಗಮೇಶ್ವರ**ವನ್ನು ಸೇರಿದನು. ಆಗ ಸಂಭಾಜಿಯ ಮೈಮೇಲೆ ಎಚ್ಚರವಿರಲಿಲ್ಲ. ಶತ್ರುಸೈನ್ಯವು ಬಂದ ಸುದ್ದಿಯನ್ನು ಹೇಳಿದ ಸೇವಕರ ಮೇಲೆಯೇ ಹರಿಹಾಯ್ದನು. ಕಲುಶನು ಮೊಗಲರೊಡನೆ ಕಾದಿ ಗಾಯ ಹೊಂದಿದ ಬಳಿಕ ಸಂಭಾಜಿಯೊಡನೆ ನೆಲಮನೆಯಲ್ಲಿ ಅಡಗಿಕೊಂಡನು. ಆದರೆ ಮುಕ್ರಬಖಾನನು ಅವರಿಬ್ಬರನ್ನು ಹುಡುಕಿ ಸೆರೆಹಿಡಿದು ತುಳಜಾಪುರದಲ್ಲಿದ್ದ ಬಾದಷಾಹನಲ್ಲಿಗೆ ಕಳುಹಿದನು.

ಸಂಭಾಜಿಯು ಶತ್ರುಗಳ ಕೈಗೆ ಸಿಕ್ಕಕೂಡಲೆ ಅವನ ತಲೆಯಲ್ಲಿ ಬೆಳಕು ಬಿದ್ದಿತು ತನ್ನ ಮೈವರೆವುತನವೇ ಮರಾಠರ ರಾಜ್ಯಕ್ಕೆ ಮುಳುವಾಯಿತೆಂದು ಆತನಿಗೆ ಹೊಳೆಯಿತು. ಹೀಗೆ ಮನಸ್ಸಿನ ಸ್ಥಿತಿಯಿರುವಾಗ ಔರಂಗಜೇಬನು

ಜೀವದಾಶೆಯು ನಿನಗಿದ್ದರೆ ಮುಸಲ್ಮಾನನಾಗು' ಎಂದು ಆತನಿಗೆ ಹೇಳಿದನು. ಆಗ ಸಂಭಾಜಿಯು ಜೀವದಾಶೆಯಿಂದ ದೀನನಾಗಿ ಬದುಕುವದಕ್ಕಿಂತ ಸಾಯುವದೇಲೇಸೆಂದು ಭಾವಿಸಿ ಬಾದಷಾಹನನ್ನು ಧಿಕ್ಕರಿಸಿ 'ನಿನ್ನ ಮಗಳನ್ನು ನನಗೆ ಕೊಟ್ಟರೆ ಮುಸಲ್ಮಾನನಾಗುವೆನು' ಎಂದು ಉತ್ತರ ಕೊಟ್ಟನು. ಆಗ ಔರಂಗಜೇಬನು ಸಂತಪ್ತನಾಗಿ ಸಂಭಾಜಿಯನ್ನು ಬಗೆಬಗೆಯಿಂದ ಗಾಯಗೊಳಿಸಿ ಕೊಲ್ಲಿಸಿದನು ಈ ಭಯಂಕರವಾದ ಕೊಲೆಯು ಕ್ರಿ ಶ. **೧೬೮೯**ರಲ್ಲಿ **ಕೋರೆಗಾವ**ದಲ್ಲಿ ಸಂಭವಿಸಿತು.

ಸಂಭಾಜಿಯ ಕೊಲೆಯಾದ ಕಾಲದ ಪರಿಸ್ಥಿತಿ:— ಸಂಭಾಜಿಯ ಮರಣದನಂತರ ಮರಾಠರ ರಾಜ್ಯವು ಮೊಗಲರ ಕೈಸೇರುವ ಸಂಭವವಿತ್ತು. ಆದರೆ ಸಂಭಾಜಿಯು ಧರ್ಮದ ಸಲುವಾಗಿ ಕ್ರೂರವಧೆಗೆ ಗುರಿಯಾಗಬೇಕಾದುದನ್ನು ನೆನೆದು, ಮರಾಠರು ಅವಸಿಗಾಗಿ ಬಹಳವಾಗಿ ಮಿಡುಕಿದರಲ್ಲದೆ ಮೊಗಲರ ಸೇಡು ತೀರಿಸಿಕೊಳ್ಳುವ ಹಟತೊಟ್ಟು ಧೈರ್ಯದಿಂದ ಅವರೊಡನೆ ಕಾದಲು ಅಣಿಯಾದನು. ಹೀಗೆ **ಯೇಸೂಬಾಯಿಯ** ದಕ್ಷತೆಯೂ ಸರದಾರರ ರಾಷ್ಟ್ರಹಿತ ಬುದ್ಧಿಯೂ ಮರಾಠರ ಸ್ವಾಭಿಮಾನವೂ ಮರಾಠರ ರಾಜ್ಯವನ್ನು ಬಂದ ಕುತ್ತಿನಿಂದ ಉಳಿಸಿಕೊಳ್ಳಲು ಕಾರಣವಾದವೆನ್ನಲು ಅಡ್ಡಿಯಿಲ್ಲ

೪ನೆಯ ಪಾಠ

ಛತ್ರಪತಿ ರಾಜಾರಾಮ (ಕ್ರಿ ಶ ೧೬೮೯—೧೭೦೦)

೧. **ಸಂಭಾಜಿಯ ತರುವಾಯದ ರಾಜ್ಯವ್ಯವಸ್ಥೆ**:— ಸಂಭಾಜಿಯ ತರುವಾಯ ಮುತ್ಸದ್ದಿಗಳೆಲ್ಲರೂ ರಾಯಗಡದಲ್ಲಿ ಕೂಡಿ ಅವನ ಮಗನಾದ ಶಿವಾಜಿ (ಶಾಹು) ಎಂಬ ಒಂಭತ್ತು ವರ್ಷದ ಬಾಲಕನ ಹೆಸರಿನಿಂದ ಕಾರಭಾರವನ್ನು ಸಾಗಿಸಹತ್ತಿದರು. ಮತ್ತು ಏಸೂಬಾಯಿಯ ಒಪ್ಪಿಗೆಯಿಂದ **ರಾಜಾರಾಮ**ನನ್ನು ರಾಜ್ಯರಕ್ಷಕನನ್ನು ಮಾಡಿಕೊಂಡು ಮರಾಠರ ರಾಜ್ಯವನ್ನು ಉಳಿಸಿಕೊಳ್ಳುವ ಉದ್ಯೋಗವನ್ನು ಕೈಕೊಂಡರು. ರಾಜಾರಾಮನು ಶಿವಾಜಿಯಂತೆ ಸಮರ್ಥನಲ್ಲದಿದ್ದರೂ ಯೋಗ್ಯತೆಯುಳ್ಳವರಿಗೆ ಉತ್ತೇಜನ ಕೊಟ್ಟು ಅವರಿಂದ ಕೆಲಸ ಮಾಡಿಸಿಕೊಳ್ಳುವ ಬಗೆಯನ್ನು ಚನ್ನಾಗಿ ಅರಿತವನಾಗಿದ್ದನು.

೨. ರಾಯಗಡವು ಮೊಗಲರ ವಶವಾದದ್ದು:— ಮೊಗಲ ಸರದಾರ ನಾದ **ಜುಲ್ಫಕ್ಕಾರಖಾನ**ನು ರಾಯಗಡವನ್ನು ಮುತ್ತಿದನು. ಆಗ ಮರಾಠರು ಅತಿ ಸಾಹಸದಿಂದ ಕೋಟೆಯನ್ನು ಕಾಯ್ದುಕೊಂಡದ್ದರಿಂದ ಜುಲ್ಫಕ್ಕಾರ ಖಾನನ ಆಟವು ಸಾಗದಾಯಿತು. ಆದರೆ **ಸೂರ್ಯಾಜಿ ಪಿಸಾಳೆ** ಎಂಬ ಮರಾಠ ಸರದಾರನು ವಾಯಿಯ ದೇಶಮುಖಿಯನ್ನು ಪೊರೆಯಿಸಿಕೊಳ್ಳುವ ಆಶೆಯಿಂದ ಕೋಟೆಯ ಕಳ್ಳದಾರಿಗಳನ್ನು ಶತ್ರುಗಳಿಗೆ ತೋರಿಸಿದನು. ಆಗ ಕೋಟೆಯು ಮೊಗಲರ ವಶವಾಯಿತು ಅಲ್ಲಿದ್ದ ಸಂಪತ್ತೂ ಅವರ ಕೈಸೇರಿತು. ಖಾನನು ಏಸೂಬಾಯಿಯನ್ನೂ ಶಿವಾಜಿಯನ್ನೂ ಸೆರೆಹಿಡಿದು ಬಾದಷಾಹನ ಕಡೆಗೆ ಕಳುಹಿದನು. ಅಲ್ಲಿ ಔರಂಗಜೇಬನ ಎರಡನೆಯ ಮಗಳಾದ **ಜೀನತ್-ಉನ್ನೀಸ**ಳು ಶಿವಾಜಿಯನ್ನು ಮಮತೆಯಿಂದ ಕಾಣಹತ್ತಿ, ಆ ತಾಯಿ-ಮಕ್ಕಳಿಗೆ ಯಾವ ಬಗೆಯ ಕೊರತೆಯೂ ಉಂಟಾಗದಂತೆ ವ್ಯವಸ್ಥೆಯನ್ನಿಡಿಸಿದಳು.

೩. ರಾಜಾರಾಮನು ಜಿಂಜಿಯನ್ನು ಆಶ್ರಯಿಸಿದ್ದು:— ಬಳಿಕ ಔರಂಗಜೇಬನು ಅಲ್ಲಲ್ಲಿ ಇದ್ದ ತನ್ನ ಸರದಾರರಿಗೆ ರಾಜಾರಾಮನನ್ನು ಹಿಡಿಯಲು ಅಪ್ಪಣೆಕೊಟ್ಟನು ಆ ಸರದಾರರು ಮರಾಠರ ಸೀಮೆಯನ್ನೆಲ್ಲ ವ್ಯಾಪಿಸಿದ್ದರಿಂದ ರಾಜಾರಾಮನು ಅವರ ಕೈಗೆ ಸಿಗದಂತೆ ಉಳಿಯುವದು ಕಠಿಣವಾಗಿತ್ತು. ಆದದರಿಂದ ಅವನು ತನ್ನ ಸಂಗಡಿಗರೊಂದಿಗೆ ಯಾತ್ರಿಕರ ವೇಷದಿಂದ ಪರಿಪರಿಯ ಕುತ್ತುಗಳನ್ನು ಅನುಭವಿಸುತ್ತ ಜಿಂಜಿಗೆ ತಲುಪಿದನು. ಜಿಂಜಿಯಲ್ಲಿ ರಾಜಾರಾಮನ ಪಟ್ಟಾಭಿಷೇಕವಾದ ಬಳಿಕ ಅವನು ಪಂತಪ್ರತಿನಿಧಿ, ಮುಖ್ಯ ಪ್ರಧಾನ, ಸೇನಾಪತಿ ಈ ಅಧಿಕಾರದ ಸ್ಥಳವನ್ನು ಅನುಕ್ರಮವಾಗಿ ಪ್ರಲ್ಹಾದ ನಿರಾಜಿ, ನಿಳೋ ಮೋರೆಶ್ವರ, ಸಂತಾಜಿ ಘೋರಪಡೆ ಎಂಬವರಿಗೆ ಕೊಟ್ಟನು.

೪. ಸಂತಾಜಿ ಮೊದಲಾದವರ ಪರಾಕ್ರಮ:— ಈ ರೀತಿಯಾಗಿ ರಾಜಾರಾಮನ ಕಾರಭಾರವು ಜಿಂಜಿಯಲ್ಲಿ ಸಾಗುತ್ತಿರಲು, ಅತ್ತ ಉತ್ತರದಲ್ಲಿ ಮೊಗಲರು ಪನ್ಹಾಳಗಡ, ವಿಶಾಲಗಡ ಕೋಟೆಗಳನ್ನೂ ಕೆಲವು ಸೀಮೆಗಳನ್ನೂ ವಶಮಾಡಿಕೊಂಡರು. ಆಗ ರಾಮಚಂದ್ರಪಂತನೊಬ್ಬನಿಂದ ಮೊಗಲರನ್ನು ತಡೆಯುವದಾಗದೆಂದು ತಿಳಿದು ರಾಜಾರಾಮನು ಸಂತಾಜಿಯನ್ನೂ

ಧನಾಜಿಯನ್ನೂ ಅವನ ನೆರವಿಗೆ ಕಳುಹಿದನು. ಈ ಇಬ್ಬರು ಸರದಾರರ ಪರಾಕ್ರಮದಿಂದ, ಮೊಗಲರು ಆಕ್ರಮಿಸಿದ ಸೀಮೆಗಳು ಒಂದೊಂದಾಗಿ ಮರಾಠರ ಕೈವಶವಾಗಹತ್ತಿದವು. ಬಳಿಕ ಮರಾಠರು ನರ್ಮದೆಯ ವರೆಗಿನ ಪ್ರದೇಶದಲ್ಲಿ ಹರಿಬಿದ್ದು, ಗನಿಮಿ ಪದ್ಧತಿಯಿಂದ ಮೊಗಲ ಸೈನ್ಯದ ಮೇಲೆ ಮಾಡಿದ ಹಾವಳಿಗಳಿಂದ ಅದು ಬೇಸರಗೊಂಡಿತು ಕಡೆಗೆ ಔರಂಗಜೇಬನು ರಾಜಾರಾಮನನ್ನು ಜಯಿಸದಿದ್ದರೆ ಮರಾಠರ ಉಪಪ್ರವು ತಪ್ಪದೆಂದು ತಿಳಿದು ಜಿಂಜಿಯನ್ನು ಮುತ್ತುವದಕ್ಕಾಗಿ ಜುಲ್ಫಕ್ಕಾರಖಾನನನ್ನು ಅಪ್ಪಣೆಕೊಟ್ಟು ಕಳುಹಿದನು. ಕ್ರಿ. ಶ. ೧೬೯೧

೫. ಜಿಂಜಿಯ ಮುತ್ತಿಗೆ:- ಹಿಂದುಸ್ಥಾನದ ಇತಿಹಾಸಪ್ರಸಿದ್ಧವಾದ ಮುತ್ತಿಗೆಗಳಲ್ಲಿ ಜಿಂಜಿಯ ಮುತ್ತಿಗೆಯು ಒಂದಾಗಿದೆ ಇದು ಏಳುವರ್ಷ ನಡೆಯಿತು ಆದವರಿಂದ ಬಾದಷಾಹನು ಸಿಟ್ಟಾಗಿ ಜುಲ್ಫಕ್ಕಾರಖಾನನಿಗೆ ಪತ್ರ ಬರೆದನು ಆಗ ಖಾನನು ರೊಚ್ಚಿಗೆದ್ದು ಮುತ್ತಿಗೆಯ ಕೆಲಸವನ್ನು ಛರದಿಂದ ಸಾಗಿಸಿದನು ಕೋಟೆಯು ಮೊಗಲರ ವಶವಾಗುವ ಲಕ್ಷಣವು ತೋರಹತ್ತಿತು ಆಗ **ಖಂಡೋಬಲ್ಲಾಳನು** ಯಾರಿಗೂ ಗೊತ್ತಾಗದಂತೆ ಮೊಗಲರನ್ನು ಕೂಡಿಕೊಂಡಿದ್ದ ಗಣೋಜಿ ಶಿರ್ಕೆಯ ಬಳಿಗೆ ಹೋಗಿ (ಸಂಭಾಜಿಯು ಶಿರ್ಕೆ ಮನೆತನದ ಸರದಾರರ ಕೊಲೆಗೊಳಿಸಿದಂದಿನಿಂದ ಗಣೋಜಿಯು ಮೊಗಲರ ಕಡೆಗಾಗಿದ್ದನು.) "ಸಂಭಾಜಿಯ ತಪ್ಪಿಗಾಗಿ ನೀವು ಮರಾಠರ ರಾಜ್ಯಕ್ಕೆ ಕೇಡನ್ನು ಬಗೆಯುವದು ಸರಿಯಾಗುವದಿಲ್ಲ; ದಯಮಾಡಿ ಆ ಹಟವನ್ನು ಬಿಟ್ಟು ನಮಗೆ ಅನುಕೂಲರಾಗಬೇಕು" ಎಂದು ಬಗೆಬಗೆಯಿಂದ ಹೇಳಿ-ಕೊಂಡನು. ಮತ್ತು ತನ್ನ **ದಾಭೋಳದ** ವತನವನ್ನು ಗಣೋಜಿಗೆ ಕೊಟ್ಟು ಅವನನ್ನು ತನ್ನ ಕಡೆಗೆ ಮಾಡಿಕೊಂಡನು. ಗಣೋಜಿಯು ನೆರವಾದದರಿಂದ ರಾಜಾರಾಮನು ತನ್ನ ಜನರೊಡನೆ ಜಿಂಜಿಯಿಂದ ಸುರಕ್ಷಿತವಾಗಿ ಪಾರಾಗಿ ಹೋದನು. ಬಳಿಕ ಕೋಟೆಯು ಮೊಗಲರ ವಶವಾಯಿತು. ಕ್ರಿ. ಶ. **೧೬೯೭**

೬. ರಾಜಾರಾಮನ ರಾಜ್ಯವಿಸ್ತಾರ:— ರಾಜಾರಾಮನು ರಾಯಗಡಕ್ಕೆ ಬದಲಾಗಿ ಸಾತಾರೆಯನ್ನು ತನ್ನ ರಾಜಧಾನಿಯನ್ನು ಮಾಡಿಕೊಂಡನು. ಪ್ರತಿನಿಧಿಯಾದ **ಪರಶುರಾಮಪಂತ,** ಸೇನಾಪತಿಯಾದ **ಧನಾಜಿ ಜಾಧವ** ಇವರ

ಸಹಾಯದಿಂದ ಉತ್ತರಕ್ಕೆ ದಂಡೆತ್ತಿಹೋಗಿ ವರ್ಹಾಡ, ಖಾನದೇಶ ವರೆಗಿನ ಸೀಮೆಗಳನ್ನು ವಶಮಾಡಿಕೊಂಡನು. ಮತ್ತು ಗೆದ್ದುಕೊಂಡ ಒಂದೊಂದು ಪ್ರಾಂತಕ್ಕೆ ಒಬ್ಬೊಬ್ಬ ಸರದಾರನನ್ನು ಅಧಿಕಾರಿಯನ್ನಾಗಿ ನಿಯಮಿಸಿ, ಅವರು ತಮ್ಮ ಭಾಗಗಳನ್ನು ಕಾಯ್ದುಕೊಂಡು ಉತ್ಪನ್ನದ ಇಂತಿಷ್ಟನೆಯ ಪಾಲನ್ನು ಸಾತಾರೆಗೆ ಕಳುಹಿಸತಕ್ಕದ್ದೆಂದು ಗೊತ್ತುಮಾಡಿದನು. ಇವನು ಯೇಸೂಬಾಯಿಯನ್ನೂ ಶಿವಾಜಿಯನ್ನೂ ಬಿಡಿಸುವ ಪ್ರಯತ್ನ ಮಾಡಿದನು. ಆದರೆ ಆ ಕೆಲಸವು ಸಾಧಿಸಲಿಲ್ಲ. ಪರಾಕ್ರಮವನ್ನು ಮಾಡಿದ ಸರದಾರರಿಗೆ ಅವರವರ ಯೋಗ್ಯತೆಯಂತೆ ಜಹಗೀರುಗಳನ್ನೂ ಇನಾಮುಗಳನ್ನೂ ಹಾಕಿಕೊಟ್ಟನು.

೭. ರಾಜಾರಾಮನ ಮರಣ ಮತ್ತು ಯೋಗ್ಯತೆ :— ರಾಜಾರಾಮನು ಜ್ವರ ಬಂದು ಸಿಂಹಗಡದಲ್ಲಿ ಮರಣಹೊಂದಿದನು ಕ್ರಿ. ಶ. ೧೭೦೦. ಇವನಿಗೆ ತಾರಾಬಾಯಿ, ರಾಜಸಬಾಯಿ ಎಂಬ ಇಬ್ಬರು ಹೆಂಡರೂ ಶಿವಾಜಿ-ಸಂಭಾಜಿ ಎಂಬ ಇಬ್ಬರು ಮಕ್ಕಳೂ ಇದ್ದರು. ಇವನು ಶಾಂತನೂ ಉದಾರನೂ ಸುವಿಚಾರಿಯೂ ಆಗಿದ್ದನು. ರಾಮಚಂದ್ರಪಂತ, ಖಂಡೋ ಬಲ್ಲಾಳ ಇವರಂಥ ನರರತ್ನಗಳನ್ನು ಸಂಗ್ರಹಿಸಿ, ಅವರಿಂದ ಮರಾಠರ ರಾಜ್ಯವನ್ನು ಬೆಳಗಿಸಿದ ಇವನ ಜಾಣ್ಮೆಯೂ ದಕ್ಷತೆಯೂ ಕಡಿಮೆಯದಲ್ಲ. ಸಂಭಾಜಿಯ ಶೌರ್ಯವು ಅವಿಚಾರದಮೂಲಕ ಕೆಲಸಕ್ಕೆ ಬಾರದೆ,ರಾಜ್ಯವು ಮುಳುಗುವ ಪ್ರಸಂಗವುಂಟಾಯಿತು; ಅದೇ ಅಷ್ಟು ಶೂರನಲ್ಲದ ರಾಜಾರಾಮನ ಸುವಿಚಾರವು ಮರಾಠರರಾಜ್ಯವನ್ನು ಕುತ್ತಿನಿಂದ ಉಳಿಸಿ, ಬೆಳೆಯಿಸಲು ಕಾರಣವಾಯಿತು.

೫ನೆಯ ಪಾಠ

ಛತ್ರಪತಿ ೨ನೆಯ ಶಿವಾಜಿ ಮತ್ತು ಛತ್ರಪತಿ ಶಾಹುರಾಜ

(ಕ್ರಿ ಶ. ೧೭೦೦—೧೭೦೭) (ಕ್ರಿ. ಶ. ೧೭೦೮—೧೭೪೯)

೧. ತಾರಾಬಾಯಿಯ ಮಗ ಶಿವಾಜಿಯು ಪಟ್ಟಕ್ಕೆ ಬಂದದ್ದು:— ರಾಜಾರಾಮನು ಸತ್ತ ತರುವಾಯ ಅವನ ಹೆಂಡತಿಯಾದ ತಾರಾಬಾಯಿಯು ತನ್ನ ಮಗನಾದ ಶಿವಾಜಿಗೆ ಪಟ್ಟವು ಮೊರೆಯಬೇಕೆಂದು ಹಟ ಹಿಡಿದಳು. ಶಾಹುವು ಮೊಗಲರ ವಶದಲ್ಲಿದ್ದವರಿಂದ ಸರದಾರರಾರೂ ಈಕೆಯನ್ನು ವಿರೋ

ಧಿಸಲಿಲ್ಲ. ಆದರಿಂದ ತಾರಾಬಾಯಿಯು ತನ್ನ ಹತ್ತು ವರ್ಷದ ಮಗನನ್ನು ಪಟ್ಟಗಟ್ಟಿ ತಾನೇ ಕಾರಭಾರವನ್ನು ಸಾಗಿಸಹತ್ತಿದಳು. ಸೇನಾಪತಿ ಹಂಬೀರ ರಾಯನ ಮಗಳಾದ ಈಕೆಯು ಚತುರಳೂ ಧೀರಳೂ ಶಿವಾಜಿ ಮಹಾರಾಜನ ಕಾಲದ ರಾಜಕಾರಣದ ಹಲವು ಪ್ರಸಂಗಗಳನ್ನು ನೋಡಿದವಳೂ ಆಗಿದ್ದಳು.

೨. ಮರಾಠರನ್ನು ಮುರಿಯುವ ದೀರ್ಘ ಪ್ರಯತ್ನ :— ಮರಾಠರು ಉತ್ತರಕ್ಕೆ ಬಂದು ವರ್ಚಾಡ, ಖಾನದೇಶಗಳವರೆಗಿನ ಸೀಮೆಗಳನ್ನು ವಶಮಾಡಿ ಕೊಂಡ ಸಂಗತಿಯನ್ನು ಹಿಂದಿನ ಪಾಠದಲ್ಲಿ ಹೇಳಿದೆ. ಈ ರೀತಿ ಅವರು ಮುಂದಡಿ ಇಡುವದನ್ನು ಕಂಡು ಔರಂಗಜೇಬನು ತನ್ನ ಜರ್ನ ನ್ಯಸ್ಯವನ್ನು ಜುಲ್‌ಫಕ್ಕಾರಖಾನನ ಕಡೆಗೆ ಕೊಟ್ಟು ಅವನನ್ನು ಮೊಗಲರ ಸೀಮೆಗಳಲ್ಲಿ ಚೌಥವನ್ನು ಎತ್ತುತ್ತಿದ್ದ ಮರಾಠರ ಮೇಲೆ ಕಳುಹಿಸಿದನು. ತಾನು ಉಳಿದರ್ಧ ಸೈನ್ಯದೊಡನೆ ಮರಾಠರ ಕೋಟೆಗಳ ಮೇಲೆ ಸಾಗಿದನು. ಅವನು ವಸಂತಗಡ ತೆಗೆದುಕೊಂಡು ಸಾತಾರೆಯನ್ನು ಮುತ್ತಿದನು. ತಾರಾಬಾಯಿಯು ಪ್ರಯತ್ನ ಪಟ್ಟರೂ ಸಾಧ್ಯವಾಗದೆ ಸಾತಾರೆಯು ಮೊಗಲರ ಕೈಸೇರಿತು. ತರುವಾಯ ಕ್ರಿ. ಶ ೧೭೦೫ ರವರೆಗೆ ವರ್ಧನಗಡ, ಸಿಂಹಗಡ, ತೋರಣ ಮುಂತಾದ ಕೋಟೆಗಳನ್ನು ವಶಪಡಿಸಿಕೊಂಡನು.

ಅಷ್ಟರಲ್ಲಿ **ಪೀರಾಜಿನಾಯಕ** ಎಂಬವನು ವಿಜಾಪುರ ಭಾಗದಲ್ಲಿ ಬಂಡಾಯವನ್ನೆಬ್ಬಿಸಿದ್ದು, ಅವನನ್ನು ತಡೆಯುವದು ಯಾವ ಸರದಾರನಿಂದಲೂ ಆಗಲೊಲ್ಲದು ಎಂಬ ಸುದ್ದಿಯು ಬಂದಿತು. ಆದರಿಂದ ಬಾದಷಾಹನೇ ಅತ್ತ ಕಡೆಗೆ ಹೋಗಬೇಕಾಯಿತು. ಬಾದಷಾಹನ ಬೆನ್ನು ಮರಾಠರ ಕಡೆಗಾಗುವ ದೊಂದೇ ತಡ, ಅವರು ಮೊಗಲರ ಕೈಸೇರಿದ್ದ ಕೋಟೆಗಳನ್ನು ಮರಳಿ ಕಸಿದು ಕೊಂಡರು. ಔರಂಗಜೇಬನು ಮರಾಠರನ್ನು ಮುರಿಯಬೇಕೆಂಬ ಮಾಡಿದ ಪ್ರಯತ್ನವು ನಿರರ್ಥಕವಾಯಿತು. ಮುಂದೆ ತುಸು ದಿವಸಗಳಲ್ಲಿ ಬಾದಷಾಹನು ಬೇನೆ ಬಿದ್ದು ಕ್ರಿ. ಶ. ೧೭೦೭ರಲ್ಲಿ ಮರಣ ಹೊಂದಿದನು. ಔರಂಗಜೇಬನು ೧೬೮೧ರಲ್ಲಿ ದಕ್ಷಿಣಕ್ಕೆ ಬಂದು ಮರಾಠರೊಡನೆ ಆರಂಭಿಸಿದ ಯುದ್ಧವು ಇಲ್ಲಿಗೆ ಮುಗಿಯಿತು. ಮೊಗಲರ ತಡೆಯು ತಪ್ಪಿದ್ದರಿಂದ ಮರಾಠರು ಮುಂದೆ ಹೆಚ್ಚು ಹೆಚ್ಚು ಪ್ರಬಲರಾದರು.

೩. **ಶಾಹುವಿನ ಬಿಡುಗಡೆ**:– ಔರಂಗಜೇಬನ ತರುವಾಯ ಬಾದಷಾಹನಾದ ಬಹದ್ದೂರಷಾಹನು ಜುಲ್ಫಕ್ಕಾರಖಾನನ ಹೇಳಿಕೆಯಂತೆ ಶಾಹುವಿನ ಬಿಡುಗಡೆ ಮಾಡಿದನು ಶಾಹುವು ಬರುವುದನ್ನು ತಿಳಿದು **ಧನಾಜಿ ಜಾಧವ, ಖಂಡೋ ಬಲ್ಲಾಳ** ಮೊದಲಾದ ಸರದಾರರು ಶಾಹುವನ್ನು ಕೂಡಿದರು. ಆಗ **ತಾರಾಬಾಯಿಯು** ತನ್ನ ಮಗನೊಡನೆ ಕೊಲ್ಲಾಪುರಕ್ಕೆ ಓಡಿಹೋಗಿ ಅಲ್ಲಿ ಹೊಸಮೊಂದು ಸಿಂಹಾಸನವನ್ನು ಸ್ಥಾಪಿಸಿದಳು ಶಾಹುವು ಸಾತಾರೆಯಲ್ಲಿ ಪಟ್ಟಕ್ಕೆ ಕುಳಿತ ಕೆಲವು ದಿವಸಗಳಲ್ಲಿ ಸೇನಾಪತಿಯಾದ ಧನಾಜಿ ಜಾಧವನು ಸಾಯಲು ಆ ಪದವು ಧನಾಜಿಯ ಮಗನಾದ ಚಂದ್ರಸೇನನಿಗೆ ಬೊರೆಯಜೆ **ಬಾಳಾಜಿ ವಿಶ್ವನಾಥನಿಗೆ** ದೊರೆಯಿತು. ಆದದರಿಂದ ಚಂದ್ರಸೇನನು ಸಿಟ್ಟಾಗಿ ಅವನು ತಾರಾಬಾಯಿಯ ಕಡೆಗಾಗಿದ್ದದರಿಂದ ಶಾಹುವಿಗೆ ಒಳ್ಳೆಯ ಕಠಿಣ ಪ್ರಸಂಗವಾಯಿತು. ಆಗ ಬಾಳಾಜಿಯು ಶೌರ್ಯ – ಚಾತುರ್ಯಗಳಿಂದ ಶಾಹುವಿನ ಅಧಿಕಾರವನ್ನು ಸ್ಥಿರಗೊಳಿಸಿದನು.

೪. **ಬಾಳಾಜಿ ವಿಶ್ವನಾಥನು ಪೇಶವೆಯಾದದ್ದು**:– ಇವನು ಶಿವಾಜಿ ಮಹಾರಾಜನ ಕಾಲದಲ್ಲಿ ಕೊಂಕಣದಿಂದ ಬಂದು ಧನಾಜಿಯ ಕೈಕೆಳಗೆ ಕೆಲಸಕ್ಕೆ ನಿಂತನು ಮುಂದೆ ಧನಾಜಿಯ ಪ್ರೀತಿಯನ್ನು ಸಂಪಾದಿಸಿ ಸರ-ಸುಭೇದಾರಿಯ ಅಧಿಕಾರವನ್ನು ಪಡೆದನು. ಧನಾಜಿಯ ತರುವಾಯ ಶಾಹುವು ಇವನನ್ನು ವಸೂಲಿ ಖಾತೆಯ ಮುಖ್ಯಸ್ಥನನ್ನು ಮಾಡಿದನು. ತರುವಾಯ ಸೇನಾಪತಿಯಾದನು. ಸೇನಾಪತಿಯಾಗಿದ್ದ ಕಾಲದಲ್ಲಿ ಪ್ರಬಲನಾದ **ಕಾನ್ಹೋಜಿ ಆಂಗ್ರೆ** ಎಂಬ ಸರದಾರನನ್ನು ಹಂಚಿಕೆಯಿಂದ ಶಾಹುವಿನ ಕಡೆಗೆ ಒಲಿಸಿ-ಕೊಂಡನು. ಶಾಹುವಿನ ವಿರುದ್ಧವಾಗಿದ್ದ ಖಟಾವಕರ ಮೊದಲಾದ ಸರದಾರರನ್ನು ಸೋಲಿಸಿದನು. ಆಗ ಶಾಹುವು ಸಂತುಷ್ಟನಾಗಿ ಬಾಳಾಜಿಗೆ ಪೇಶವೆಯ ಅಧಿಕಾರವನ್ನು ಕೊಟ್ಟು ರಾಜ್ಯದ ಎಲ್ಲ ಕಾರಭಾರವನ್ನು ಅವನ ಕಡೆಗೆ ಒಪ್ಪಿಸಿದನು. ಕ್ರಿ. ಶ. **೧೭೧೩**.

೫. **ಮರಾಠರ ಆಳಿಕೆಯ ಕೊನೆ**:— ಶಾಹುರಾಜನು ಸಂತತಿ ಇಲ್ಲದೆ ಕ್ರಿ. ಶ. **೧೭೪೯**ರಲ್ಲಿ ಸಾಯಲು ಅವನ ಇಚ್ಛೆಯಂತೆ ಬಾಳಾಜಿ ಬಾಜೀರಾಯನು ತಾರಾಬಾಯಿಯ ಮೊಮ್ಮಗನಾದ ರಾಮರಾಜನನ್ನು ಪಟ್ಟದ ಮೇಲೆ ಕೂಡ್ರಿಸಿ

ದನು. ರಾಮರಾಜನ ತರುವಾಯ ೨ನೆಯ ಶಾಹು, ಪ್ರತಾಪಸಿಂಹ, ಶಹಾಜಿ ಎಂಬವರು ಒಬ್ಬರ ಬಳಿಕೊಬ್ಬರು ಸಾತಾರೆಯ ಅರಸರಾದರು. ಕ್ರಿ. ಶ. **೧೭೧೭**ರಲ್ಲಿ ಕಡೆಯ ಪೇಶ್ವೆಯಾದ **೨ನೆಯ ಬಾಜೀರಾಯ**ನು ಸೋತು ಇಂಗ್ಲಿಷರ ಆಧೀನನಾದ ಬಳಿಕ ಅವರು ಆಗ ಅರಸನಾಗಿದ್ದ ಪ್ರತಾಪಸಿಂಹನ ಕಡೆಗೆ **೧೪ ಲಕ್ಷ**ದ ಜಹಗೀರನ್ನು ಇಟ್ಟು, ಉಳಿದ ರಾಜ್ಯವನ್ನೆಲ್ಲ ತಮ್ಮ ರಾಜ್ಯಕ್ಕೆ ಕೂಡಿಸಿಕೊಂಡರು. ಮುಂದೆ ಕ್ರಿ. ಶ. **೧೮೧೯**ರಲ್ಲಿ ಪ್ರತಾಪಸಿಂಹನು ತಮ್ಮ ವಿರುದ್ಧ ವರ್ತಿಸಿದನೆಂಬ ನೆವದಿಂದ ಇಂಗ್ಲಿಷರು ಅವನನ್ನು ತಳ್ಳಿ ಅವನ ತಮ್ಮನಾದ ಶಹಾಜಿಯನ್ನು ಅರಸನನ್ನು ಮಾಡಿದರು. ಈ ಶಹಾಜಿಯು ಕ್ರಿ ಶ ೧೮೪೯ರಲ್ಲಿ ಸಂತತಿಯಿಲ್ಲದೆ ಮರಣ ಹೊಂದಲು ಇಂಗ್ಲಿಷರು ಅವನು ತೆಗೆದು ಕೊಂಡ ದತ್ತಕಕ್ಕೆ ಒಪ್ಪಿಗೆಯನ್ನು ಕೊಡದೆ ಅವನ ಜಹಗೀರನ್ನು ತಮ್ಮ ರಾಜ್ಯಕ್ಕೆ ಸೇರಿಸಿಕೊಂಡರು.

೬. **ಮರಾಠರ ಅವನತಿಯ ಕಾರಣಗಳು**:— ೧. ಔರಂಗಜೇಬನಂಥ ಬಲಾಢ್ಯ ಶತ್ರುವಿನೊಡನೆ ಒಂದೇಸವನೆ ೨೫ ವರ್ಷಗಳವರೆಗೆ ಹೋರಾಡುವದರಲ್ಲಿ ಮರಾಠರ ಶಕ್ತಿಯು ಕ್ಷೀಣವಾಯಿತು ೨. ಸಂಭಾಜಿಯ ಅವಿಚಾರದ ಆಳಿಕೆಯಿಂದ ಶಿವಾಜಿಯ ಕಾಲದ ರಾಜ್ಯವ್ಯವಸ್ಥೆಯು ತಪ್ಪಿ, ಶತ್ರುಗಳಿಗೆ ಸಡಿಲು ಸಿಕ್ಕಿತು. ೩. ರಾಜಾರಾಮನ ಕಾಲದಲ್ಲಿ ಜಹಗೀರುಗಳನ್ನು ಪಡೆದ ಸರದಾರರು ಮುಂದೆ ರಾಜ್ಯದ ಹಿತವನ್ನು ಮರೆತು ಸ್ವಾರ್ಥವನ್ನು ಸಾಧಿಸಹತ್ತಿದರು. ೪. ತಾರಾಬಾಯಿ ಮತ್ತು ಶಾಹು ಇವರ ಜಗಳದಲ್ಲಿ ಎರಡೂ ಕಡೆಯ ಶೂರ ಮರಾಠರ ಸರದಾರರು ತಮ್ಮ ತಮ್ಮೊಳಗೆ ಬಡಿದಾಡಿ ಹಣ್ಣಾದರು. ೫. ಶಾಹುರಾಜನು ಎಲ್ಲ ಕಾರಭಾರವನ್ನು ಪೇಶವೆಯರ ಕಡೆಗೆ ಒಪ್ಪಿಸಿ ತಾನು ವಿಲಾಸದಲ್ಲಿರಹತ್ತಿದ್ದರಿಂದ ಸ್ವಾಭಾವಿಕವಾಗಿ ಪೇಶವೆಯವರ ಪರ್ಚಸ್ಸು ಹೆಚ್ಚಿತು. ೬. ಶಾಹುರಾಜನ ತರುವಾಯ ಪಟ್ಟಕ್ಕೆ ಬಂದ ಅರಸರು ದುರ್ಬಲರಾಗಿದ್ದರು.

೬ನೆಯ ಪಾಠ

ಔರಂಗಜೇಬನ ನಂತರದ ಮೊಗಲರ ಸಾಮ್ರಾಜ್ಯ

೧. **ಔರಂಗಜೇಬನ ತರುವಾಯದ ಪರಿಸ್ಥಿತಿ**:— ಔರಂಗಜೀಬನು ಮರಣ ಹೊಂದಿದ ಬಳಿಕ ಮೊಗಲ ಸಾಮ್ರಾಜ್ಯದ ಬಲವು ಕಡಿಮೆಯಾಯಿತು.

ದುರ್ಬಲರಾದ ಬಾದಷಾಹರು ಪಟ್ಟಕ್ಕೆ ಬರಹತ್ತಿದ್ದರಿಂದ ಬೇರೆ ಬೇರೆ ಪ್ರಾಂತಗಳ ಸುಭೇದಾರರು ಹೆಸರಿಗೆ ಮಾತ್ರ ದಿಲ್ಲಿಯ ಬಾದಷಾಹರಿಗೆ ಅಂಕಿತರಾಗಿದ್ದು ತಮ್ಮ ತಮ್ಮ ಪ್ರಾಂತಗಳ ಕಾರಭಾರವನ್ನು ಸ್ವತಂತ್ರವಾಗಿ ಸಾಗಿಸಹತ್ತಿದರು. ಗಟ್ಟಿಗರಾದ ಸರದಾರರು ಬಾದಷಾಹರನ್ನು ತಮ್ಮ ಅಂಕಿತದಲ್ಲಿ ಇಟ್ಟುಕೊಳ್ಳುವ ಸಾಹಸದಲ್ಲಿ ತೊಡಗಿದರು. ಪಂಜಾಬದಲ್ಲಿ ಶೀಖರು ಪ್ರಬಲರಾದರು ಮರಾಠರು ಉತ್ಕರ್ಷವನ್ನು ಹೊಂದಿ ಮೊಗಲ ಸರದಾರರ ಆಟವನ್ನು ಸಾಗಗೊಡದೆ ದಿಲ್ಲಿಯ ಒಡೆಯರನ್ನು ತಮ್ಮ ಅನುಮತಿಯಂತೆ ನಡೆಯಹಚ್ಚಿದರು ಇಂಗ್ಲಿಷರು ಹೆಚ್ಚಳವನ್ನು ಹೊಂದುತ್ತ ದಿಲ್ಲಿಯ ಬಾದಷಾಹರಿಂದ ಹೆಚ್ಚು ಹೆಚ್ಚು ಅಧಿಕಾರಗಳನ್ನು ಪಡೆಯಹತ್ತಿದರು ಮೊಗಲರ ಕಡೆಯ ಬಾದಷಾಹನಾದ ಬಹದ್ದೂರ ಷಾಹನು ಕ್ರಿ ಶ. ೧೭೫೫ರಲ್ಲಿ ಬಂಡಾಯದಲ್ಲಿ ಸೇರಿದನೆಂದು ಇಂಗ್ಲಿಷರು ಅವನನ್ನು ಸೆರೆಯಲ್ಲಿಟ್ಟರು ಅವನು ಕ್ರಿ. ಶ ೧೭೬೨ರಲ್ಲಿ ಸಾಯಲು ಮೊಗಲ ವಂಶವು ನಿಂತು ಹೋಯಿತು. ಔರಂಗಜೇಬನ ತರುವಾಯ ಒಟ್ಟಿಗೆ ಒಂಬತ್ತು ಜನ ಅರಸರು ದಿಲ್ಲಿಯ ಪಟ್ಟಕ್ಕೆ ಬಂದರು ಅವರೊಳಗಿನ ಮೊದಲಿನ ಆರು ಮಂದಿ ಕೆಲವು ಮಟ್ಟಿಗಾದರೂ ಸ್ವತಂತ್ರವಾಗಿ ಆಳಿದರು. ಕ್ರಿ. ಶ. ೧೭೬೧ರ ತರುವಾಯ ಆಳಿದ ಮೂವರು ಹೆಸರಿಗೆ ಮಾತ್ರ ಬಾದಷಾಹರಾಗಿದ್ದರು.

೨. ೧ನೆಯ ಬಹದ್ದೂರಷಾಹ:— ಕ್ರಿ. ಶ. ೧೭೦೭—೧೭೧೨. ಔರಂಗಜೇಬನು ಮರಣಹೊಂದಿದ ಬಳಿಕ ಕಾಬೂಲದಲ್ಲಿದ್ದ **ಮುಅಜ್ಜಮನು** ತಡಮಾಡದೆ ರಾಜಧಾನಿಗೆ ಬಂದು **ಬಹದ್ದೂರಷಾಹ** ಎಂಬ ಹೆಸರಿನಿಂದ ಪಟ್ಟಕ್ಕೆ ಕುಳಿತನು. ಬಹದ್ದೂರಷಾಹನು ಅಷ್ಟು ಪರಾಕ್ರಮಿಯಲ್ಲದಿದ್ದರೂ ಸಮರ್ಥರಾದ ಸರದಾರರನ್ನು ಯುಕ್ತಿಯಿಂದ ತನ್ನ ಕಡೆಗೆ ಒಲಿಸಿಕೊಂಡನು. ರಜಪುತರೊಡನೆ ಸ್ನೇಹವನ್ನು ಬಳೆಸಿದನು. ಮೊಗಲರ ವಿರುದ್ಧ ಹೋಗುವದಿಲ್ಲೆಂಬ ಒಪ್ಪಿಗೆ ತೆಗೆದುಕೊಂಡು ಶಾಹುವಿನ ಬಿಡುಗಡೆ ಮಾಡಿದನು. ಪಂಜಾಬದ ಶೀಖರೊಡನೆ ಯುದ್ಧಮಾಡಬೇಕಾಯಿತು ಈ ಯುದ್ಧದ ಸಂಗತಿಯನ್ನು ತಿಳಕೊಳ್ಳುವ ಮೊದಲು ಶೀಖರ ಪೂರ್ವೇತಿಹಾಸವನ್ನು ಅರಿತುಕೊಳ್ಳುವದು ಅವಶ್ಯವು.

ಶೀಖರ ಉದಯ:— ಶೀಖರು ಪಂಜಾಬದ ನಿವಾಸಿಗಳು. ಇವರ ಜನಸಂಖ್ಯೆಯು ಸುಮಾರು ಮೂವತ್ತು ಲಕ್ಷ ಇರುವದು. ಧರ್ಮಾಭಿಮಾನ,

ಶೌರ್ಯಗಳ ವಿಷಯವಾಗಿ ಈ ಜನಾಂಗವು ಒಳ್ಳೆಯ ಹೆಸರಾಗಿರುವದು. ಇವರ ಧರ್ಮಕ್ಕೆ **ಶೀಖ** ಧರ್ಮವೆನ್ನುವರು.

ಶೀಖ ಧರ್ಮದ ಸಂಸ್ಥಾಪಕನಾದ **ಗುರು ನಾನಕ**ನು ಕ್ರಿ. ಶ. **೧೪೬೯** ರಲ್ಲಿ ಹುಟ್ಟಿದನು. ಹಿಂದು – ಮುಸಲ್ಮಾನರಲ್ಲಿಯ ಹಗೆತನವನ್ನು ಇಲ್ಲದಂತೆ ಮಾಡುವದಕ್ಕಾಗಿ **ಕಬೀರದಾಸ**ನಂತೆಯೆ ಇವನು ಉಪದೇಶಮಾಡ ಹತ್ತಿದನು. "ದೇವರು ಒಬ್ಬನೇ; ಸತ್ಕರ್ಮಗಳಿಂದ ಆತನು ಪ್ರಸನ್ನನಾಗುವನು; ಒಬ್ಬರಕೂಡೊಬ್ಬರು ಪ್ರೇಮದಿಂದ ವರ್ತಿಸಬೇಕು; ಮೂರ್ತಿಯನ್ನು ಪೂಜಿಸಬಾರದು; ಗೋವಧೆಯನ್ನು ಮಾಡಲಾಗದು" ಎಂಬುದು ಇವನ ಉಪದೇಶದ ಸಾರವಾಗಿತ್ತು. ಈ ಉಪದೇಶದಂತೆ ಬಹುಜನರು ಈತನ ಅನುಯಾಯಿಗಳಾದರು. ಇವರೇ ಶಿಷ್ಯರು ಆಥವಾ **ಶೀಖರು** ಎಂಬ ಹೆಸರನ್ನು ಹೊಂದಿದರು. ಶೀಖಧರ್ಮದ ಆದಿಗುರುವೆನಿಸಿದ ಈ ನಾನಕನು ಕ್ರಿ. ಶ. **೧೫೩೯**ರಲ್ಲಿ ದೇಹವಿಟ್ಟನು.



ಗುರು ನಾನಕ

ಗುರು ನಾನಕನ ತರುವಾಯ ಶೀಖಧರ್ಮದ ಹತ್ತು ಜನ ಗುರುಗಳಾದರು. ಅಕ್ಬರನ ಆಳಿಕೆಯ ಕೊನೆಯ ವರೆಗೆ ಇವರು ಶಾಂತರೀತಿಯಿಂದ ಧರ್ಮಪ್ರಸಾರವನ್ನು ಮಾಡುತ್ತಿದ್ದರು. ೫ನೆಯ ಗುರುವಾದ **ಅರ್ಜುನಸಿಂಗ**ನು ಅಮೃತಸರದಲ್ಲಿ ಶೀಖರ ಪವಿತ್ರ ಸ್ಥಳವೆನಿಸಿದ **ಸುವರ್ಣ ಮಂದಿರ**ವನ್ನು ಕಟ್ಟಿಸಿದನು. ಇವನ ಆಜ್ಞೆಯಂತೆ **ಗ್ರಂಥಸಾಹೇಬ** ಎಂಬ ಧರ್ಮಗ್ರಂಥವು ಪಂಜಾಬೀ ಭಾಷೆಯಲ್ಲಿ ರಚಿಸಲ್ಪಟ್ಟಿತು.

ಜಹಾಂಗೀರನ ಕಾಲದಿಂದ ಮೊಗಲರಿಗೂ ಶೀಖರಿಗೂ ವಿರೋಧವುಂಟಾಯಿತು. ಗುರು ಅರ್ಜುನಸಿಂಗನು ಖುಸ್ರುವಿಗೆ ಸಹಾಯಮಾಡಿದನೆಂಬ

ತಪ್ಪುಹೊರಿಸಿ, ಜಹಾಂಗೀರನು ಅವನನ್ನು ಕೊಲ್ಲಿಸಿದನು. ಅದುವರೆಗೆ ಶಾಂತರಾಗಿದ್ದ ಶೀಖರು ಅಂದಿನಿಂದ ಉಗ್ರರಾದರು ಅವರು ಧರ್ಮರಕ್ಷಣೆಗಾಗಿ ಶಸ್ತ್ರವನ್ನು ಧರಿಸಿ ತಮ್ಮ ಸಾಮರ್ಥ್ಯವನ್ನು ಹೆಚ್ಚಿಸಿದರು. ಮುಂದೆ ಔರಂಗಜೇಬನು ಶೀಖರನನ್ನು ಬಹಳವಾಗಿ ಪೀಡಿಸಿ, ಅವರ ಒಂಬತ್ತನೆಯ ಗುರುವಾದ **ತೇಜಬಹಾದ್ದೂರ**ನನ್ನು ಸೆರೆಯಲ್ಲಿಡಲು ಅವನು ಅಲ್ಲಿಯೇ ಹತನಾದನು. ಬಳಿಕ ಹತ್ತನೆಯ ಗುರುವಾದ **ಗೋವಿಂದಸಿಂಗ**ನು ಶೀಖರಲ್ಲಿ ಹೊಸ ಚೈತನ್ಯವನ್ನುಂಟುಮಾಡಿ ಅವರಿಗೆ ಯುದ್ಧಕಲೆಯ ಶಿಕ್ಷಣವನ್ನು ಕೊಟ್ಟು ಬಲವಾದ ಸೈನ್ಯವನ್ನು ಸಜ್ಜುಗೊಳಿಸಿದನು. ಶೀಖರು ಮುಂದೆ ಹೆಸರಾದ ವೀರರೆನಿಸಿದರು. ಅವರು ಮೊಗಲರಸೈನ್ಯದೊಂದಿಗೆ ಆಗಾಗ್ಗೆ ಕಾದಬೇಕಾಯಿತು. ಔರಂಗಜೇಬನು ಗುರುಗೋವಿಂದಸಿಂಗನ ಇಬ್ಬರು ಮಕ್ಕಳನ್ನು *ಕೊಲ್ಲಿಸಿದನು. ಗೋವಿಂದಸಿಂಗನು ಅಡವಿಯ ಪಾಲಾಗಿ ಕಡೆಗೆ ದಕ್ಷಿಣಕ್ಕೆ ಬಂದಾಗ **ನಾಂದೇಡ**ದಲ್ಲಿ ಆಫಘಾನರಿಂದ ಹತನಾದನು. ಆದರೆ ಈ ತರದ ಛಲದಿಂದ ಶೀಖರು ಹಿಮ್ಮೆಟ್ಟಿಪೆ ಮತ್ತಿಷ್ಟು ಹಟದಿಂದ ಶತ್ರುಗಳೊಡನೆ ಕಾದಹತ್ತಿದರು.

ಬಹದ್ದೂರಷಾಹನ ಆಳಿಕೆಯಲ್ಲಿ **ಬಂದಾ** ಎಂಬವನು ಶೀಖರ ಮುಂದಾಳಾಗಿ, ಸರಹಿಂದದಲ್ಲಿ ಮುಸಲ್ಮಾನರ ಮೇಲೆ ಭಯಂಕರವಾದ ಸೇಡು ತೀರಿಸಿದನು. ಆಗ ಬಹದ್ದೂರಷಾಹನು ದೊಡ್ಡ ಸೈನ್ಯದೊಂದಿಗೆ ಶೀಖರ ಮೇಲೆ ಸಾಗಿ ಅವರನ್ನು ಚದರಿಸಿದನು. ಬಳಿಕ ಬಹದ್ದೂರಷಾಹನು ಸ್ವಲ್ಪ ದಿವಸಗಳಲ್ಲಿ ಮರಣಹೊಂದಿದನು. ಕ್ರಿ ಶ. ೧೭೧೨.

೩. **ಜಹಾಂದಾರಷಾಹ**:- ಕ್ರಿ. ಶ. **೧೭೧೨-೧೭೧೩**. ಮತ್ತು **ಫರುಕ್ ಶಿಯರ**:- ಕ್ರಿ. ಶ. **೧೭೧೩-೧೭೧೯**. ಬಹದ್ದೂರಷಾಹನ ತರುವಾಯ ಆತನ ಮಕ್ಕಳಲ್ಲಿ **ಜಹಾಂದಾರಷಾಹ** ಎಂಬವನು ಪಟ್ಟಕ್ಕೆ ಕುಳಿತನು. ಆದರೆ ಜಹಾಂದಾರಷಾಹನ ತಮ್ಮನ ಮಗನೂ ಬಂಗಾಲದ ಸುಭೇದಾರನೂ ಆಗಿದ್ದ ಫರುಕ್ ಶಿಯರನು **ಸಯ್ಯದ ಹುಶೇನ, ಸಯ್ಯದ ಅಬ್ದುಲ್ಲಾ** ಎಂಬ ಬಂಧುಗಳ ಸಹಾಯದಿಂದ ಜಹಾಂದಾರಷಾಹನನ್ನು ಸೋಲಿಸಿ ಪಟ್ಟವನ್ನು ಹಿಡಿದುಕೊಂಡನು. ಬಳಿಕ ಸಯ್ಯದ ಹುಶೇನನು ಸೇನಾಪತಿಯೂ ಸಯ್ಯದ ಅಬ್ದುಲ್‌ನು ಮಂತ್ರಿಯೂ

* ಜದುನಾಥ ಸರಕಾರ ಕೃತ ಹಿಸ್ಟರಿ ಆಫ್ ಔರಂಗಜೇಬ ಪಂಡ ಪುಟ ೩೧೯.

ಆದರು. ಆದರೆ ಮುಂದೆ ಈ ಸಯ್ಯದ ಬಂಧುಗಳ ಕೈಯಲ್ಲಿರುವದು ಫರುಕಶಿಯರನ ಮನಸ್ಸಿಗೆ ಬರಲಿಲ್ಲ. ಸಯ್ಯದ ಹುಸೇನನನ್ನು ದಕ್ಷಿಣದ ವ್ಯವಸ್ಥೆಗಾಗಿ ಕಳುಹಿ ಅವನನ್ನು ನಾಶಗೊಳಿಸಬೇಕೆಂದು ದಾವೂದಖಾನನಿಗೆ ಸೂಚಿಸಿದನು. ಆಲ್ಲಿ ಹುಸೇನನೇ ಗೆದ್ದದರಿಂದ ಬಾದಷಾಹನ ಈ ಪ್ರಯತ್ನವೂ ಹುಸಿಯಾಯಿತು. ಇಷ್ಟರಲ್ಲಿ ಬಾದಷಾಹನು ಸಯ್ಯದ ಅಬ್ದುಲ್‌ನನ್ನು ಮಂತ್ರಿ ಪದದಿಂದ ಕಿತ್ತಿಹಾಕುವ ಯೋಚನೆಯಲ್ಲಿರುವನೆಂಬುದು ಹುಸೇನನಿಗೆ ತಿಳಿಯಿತು. ಆಗ ಅವನು ಮರಾಠರ ಸಹಾಯವನ್ನು ಹೊಂದಿ ದಿಲ್ಲಿಯ ಮೇಲೆ ಸಾಗಿಬಂದನು. ಸಯ್ಯದ ಬಂಧುಗಳ ಅಧಿಕಾರವೂ ಮರಾಠರ ವರ್ಚಸ್ಸೂ ದಿಲ್ಲಿಯ ಮೇಲೆ ನೆಲೆಗೊಂಡಿತು. ಬಳಿಕ ಸಯ್ಯದರು ಫರುಕಶಿಯರನನ್ನು ಕೊಂದುಬಿಟ್ಟರು.

೭ನೇಯ ಪಾಠ

ಔರಂಗಜೇಬನ ನಂತರದ ಮೊಗಲರ ಸಾಮ್ರಾಜ್ಯ

(ಮುಂದೆ ಸಾಗಿದ್ದು)

೧. **ಮಹಮ್ಮದಷಾಹ**:— ಕ್ರಿ. ಶ **೧೭೧೯ – ೧೭೪೮.** ಫರುಕ್‌ಶಿಯರನ ಕೊಲೆಯಾದಬಳಿಕ ಬಾಹದ್ದೂರಷಾಹನ ೩ನೆಯ ಮೊಮ್ಮಗನಾದ ರೋಷನ ಅಖ್ತರ (ಮಹಮ್ಮದಷಾಹ) ನನ್ನು ಸಯ್ಯದ ಬಂಧುಗಳು ಪಟ್ಟಕ್ಕೆ ತಂದರು. ದಿಲ್ಲಿಗೆ ಬಂದ ಬಾಳಾಜಿವಿಶ್ವನಾಥ ಪೇಶವೆಯು ಸಂಭಾಜಿಯ ಹೆಂಡತಿಯಾದ ಯೇಸೂಬಾಯಿಯನ್ನು ಸೆರೆಯಿಂದ ಬಿಡಿಸಿಕೊಂಡು ದಕ್ಷಿಣಕ್ಕೆ ಬಂದನು. ಕ್ರಿ. ಶ. **೧೭೧೯.** ಮರಾಠರಿಗೆ ಮೊಗಲ ಬಾದಷಾಹನಿಂದ ಚೌಥಾಯಿ-ಸರದೇಶ ಮುಖಿ ಎಂಬ ಅಧಿಕಾರಿಗಳು ದೊರೆತವು.

ಸಯ್ಯದ ಬಂಧುಗಳ ಕೊಲೆ:— ಮರಾಠರ ನೆರವನ್ನು ಪಡೆದರೆಂಬ ನೆವ ತೋರಿಸಿ ಅವರ ಪಕ್ಷವನ್ನು ಬಿಟ್ಟ **ಕಮರುದ್ದೀನ** (ನಿಜಾಮಉಲ್ ಮುಲುಕ) ನು ದಕ್ಷಿಣಕ್ಕೆ ಬಂದು ಸಯದರ ವಿರುದ್ಧ ಬಂಡನ್ನೆಬ್ಬಿಸಿದನು. ಇವನನ್ನು ಶಿಕ್ಷಿಸುವದಕ್ಕೆಂದು ಸಯ್ಯದ ಹುಸೇನನು ಬಾದಷಾಹನೊಂದಿಗೆ ದಕ್ಷಿಣಕ್ಕೆ ಬಂದನು. ಆಗ ನಿಜಾಮನ ಕಡೆಯವರು ಹುಸೇನನನ್ನು ಕೊಂದರು. ಕೂಡಲೆ ಮಹಮ್ಮದಷಾಹನು ರಾಜಧಾನಿಗೆ ಹೋಗಿ ಸಯ್ಯದ

ಅಬ್ದುಲ್‌ನನ್ನು ಸೋಲಿಸಿದನು. ತಮಗೆ ಬೇಕಾದ ನಾಲ್ವರು ಬಾದಷಾಹರನ್ನು ಪಟ್ಟಕ್ಕೆ ಕುಳ್ಳರಿಸಿ, ಎಲ್ಲ ಅಧಿಕಾರವನ್ನು ತಾವೇ ಸಾಗಿಸುತ್ತ ಬಂದ ಸಯ್ಯದರ ಆಳಿಕೆಯು ಇಲ್ಲಿಗೆ ನಿಂತಿತು. ಕ್ರಿ ಶ **೧೭೨೦.**

ನಿಜಾಮ ಉಲ್‌ಮುಲುಕ :— ಮುಂದೆ ಕೆಲವು ದಿವಸ ನಿಜಾಮ ಉಲ್‌ಮುಲುಕನು ಬಾದಷಾಹನ ಮಂತ್ರಿಯಾಗಿದ್ದನು. ರಾಜ್ಯದೊಳಗಿನ ಅವ್ಯವಸ್ಥೆಯನ್ನು ಕಳೆದು ಮೊಗಲ ಬಾದಷಾಹಿಯನ್ನು ಸ್ಥಿರಗೊಳಿಸುವದಕ್ಕಾಗಿ ಇವನು ಬಹಳ ಹೆಣಗಿದನು. ಆದರೆ ವಿಲಾಸಿಯಾದ ಮಹಮ್ಮದಷಾಹನಿಗೂ ಅವನಂತಹ ಉಳಿದ ಸರದಾರರಿಗೂ ನಿಜಾಮನ ಕಾರಭಾರವು ಸರಿಬರಲಿಲ್ಲ. ಅವರು ಇವನನ್ನು ತೊಂದರೆಗೊಳಿಸಹತ್ತಿದರು ಕಡೆಗೆ ನಿಜಾಮನು ಬೇಸರಗೊಂಡು ದಿಲ್ಲಿಯಿಂದ ದಕ್ಷಿಣಕ್ಕೆ ಬಂದು ಹೆಸರಿಗೆ ಬಾದಷಾಹನ ಒಡೆತನ ವನ್ನೊಪ್ಪಿ ತನ್ನ ಪ್ರಾಂತದ ಕಾರಭಾರವನ್ನು ಸ್ವತಂತ್ರವಾಗಿ ಸಾಗಿಸಹತ್ತಿದನು. ಕ್ರಿ. ಶ. **೧೭೨೪** ಭಾಗಾನಗರ (ಹೈದರಾಬಾದ) ವನ್ನು ತನ್ನ ರಾಜಧಾನಿಯನ್ನು ಮಾಡಿಕೊಂಡನು.

ಮರಾಠರ ಪ್ರಾಬಲ್ಯ :— ಮಹಮದಷಾಹನ ಕಾಲದಲ್ಲಿ ಮರಾಠರು ಮೊದಲಿಗಿಂತ ಹೆಚ್ಚು ಪ್ರಬಲರಾದರು ಪೇಶ್ವೆಯಾದ ಮೊದಲನೇ ಬಾಜಿರಾಯನು ಭೋಪಾಳದ ಬಳಿಯಲ್ಲಿ ನಿಜಾಮ ಉಲ್‌ಮುಲುಕನನ್ನು ಸೋಲಿಸಿ ಮೊಗಲರಿಂದ ಚೌಥಾಯಿಯ ಹಕ್ಕನ್ನು ಪಡೆದುಕೊಂಡನು. ಕ್ರಿ. ಶ. **೧೭೩೯.**

ನಾದಿರಷಾಹನ ದಾಳಿ :— ಕ್ರಿ. ಶ. **೧೭೩೯**. ಮೊಗಲರ ಅಧಿಕಾರವು ಬಲಗುಂದುತ್ತ ನಡೆದಾಗ ಇರಾಣದ ಬಾದಷಾಹನಾದ ನಾದಿರಷಾಹನು ದಿಲ್ಲಿಯಮೇಲೆ ಸಾಗಿಬಂದು ಸಾವಿರಗಟ್ಟಲೆ ಜನರ ಕೊಲೆಮಾಡಿ ೨೫ ೩೦ ಕೋಟಿ ರೂಪಾಯಿಗಳನ್ನೂ ಷಾಹೆಜಹಾನನ ಮಯೂರಾಸನವನ್ನೂ ಕೋಹೆನೂರ (ಪರ್ವತದ ಪ್ರಕಾಶ) ಎಂಬ ರತ್ನವನ್ನೂ ಇರಾಣಕ್ಕೆ ಒಯ್ದನು.

ನಾದಿರಷಾಹನ ದಾಳಿಯ ನಂತರದ ಸ್ಥಿತಿ :— ೧೭೪೦—೧೭೪೪. ನಾದಿರಷಾಹನ ದಾಳಿಯಿಂದ ಮೊಗಲರ ಅಧಿಕಾರವು ತೀರ ಕಡಿಮೆಯಾಯಿತು. ಸಿಂಧು ನದದ ಆಚೆಯ ಸೀಮೆಯು ಇರಾಣದ ರಾಜ್ಯಕ್ಕೆ ಸೇರಿತು. ಪಂಜಾಬ

ದಲ್ಲಿ ಶೀಖರೂ, ರೋಹಿಲಖಂಡದಲ್ಲಿ ರೋಹಿಲರೂ ಪ್ರಬಲರಾದರು ಅಯೋಧ್ಯ ಬಂಗಾಲಗಳ ಸುಭೇದಾರರು ನವಾಬರೆಂಬ ಹೆಸರಿನಿಂದ ಸ್ವತಂತ್ರರಾದರು. ಮರಾಠರು ಕ್ರಿ. ಶ ೧೭೪೮ರ ವರೆಗೆ ಗುಜರಾಥ, ಮಾಳವ ಪ್ರಾಂತಗಳನ್ನು ವಶಮಾಡಿಕೊಂಡರು. ನಾದಿರಷಾಹನ ಮರಣದ ನಂತರ ಅವನ ಸೇನಾಪತಿಯಾದ ಅಹಮ್ಮದಷಾಹ ಅಬ್ದಾಲಿಯು ಕಾಬೂಲದ ಅರಸನಾಗಿ ಹಿಂದುಸ್ಥಾನದ ಮೇಲೆ ದಾಳಿ ಮಾಡಿದನು. ಕ್ರಿ ಶ ೧೭೪೮ರಲ್ಲಿ ಮಹಮ್ಮದಷಾಹನೂ ನಿಜಾಮನೂ, ಶಾಹೂರಾಜನೂ ಮರಣ ಹೊಂದಿದರು. ನಿಜಾಮ ಉಲ್‌ಮುಲುಕನ ಮಕ್ಕಳಲ್ಲಿ ಪಟ್ಟದ ಸಲುವಾಗಿ ಜಗಳ ಹಚ್ಚಿ ಇಂಗ್ಲಿಷರಿಗೂ ಫ್ರೆಂಚರಿಗೂ ಆಲ್ಲಿ ತಮ್ಮ ತಮ್ಮ ವರ್ಚಸ್ಸನ್ನು ನೆಲೆಗೊಳಿಸಲು ಅನುಕೂಲವುಂಟಾಯಿತು. ಆದದರಿಂದ ಹಿಂದುಸ್ಥಾನದ ಇತಿಹಾಸದಲ್ಲಿ **೧೭೪೮ ೪೯**ರ ವರೆಗಿನ ಕಾಲವು ಮಹತ್ವದ್ದೆಂದು ಹೇಳಬಹುದು

ಅಹಮ್ಮದಷಾಹ:— ಕ್ರಿ. ಶ **೧೭೪೮-೧೭೫೪.** ಇವನು ಮಹಮ್ಮದ ಷಾಹನ ಮಗನು. ಇವನ ಆಳಿಕೆಯಲ್ಲಿ ಅಬ್ದಾಲಿಯು ದಾಳಿಮಾಡಿ ಲಾಹೋರ, ಮುಲತಾನ ಎಂಬ ಸುಭೆಗಳನ್ನು ತನ್ನ ವಶಮಾಡಿಕೊಂಡನು ಕ್ರಿ.ಶ **೧೭೫೧.** ದಿಲ್ಲಿಯಲ್ಲಿ ಮೊಗಲ ಸುಭೇದಾರರಲ್ಲಿ ಜಗಳಗಳು ಉಂಟಾದವು. ನಿಜಾಮ ಉಲ್‌ಮುಲುಕನ ಮಗ **ಗಾಜೀಉದ್ದೀನ**ನೆಂಬ ವಜೀರನು ಅಹಮ್ಮದಷಾಹನನ್ನು ಕೊಂದು ಜಹಾಂದಾರಷಾಹನ ಮಗನಾದ **೨ನೆಯ ಆಲಂಗೀರ**ನನ್ನು ಪಟ್ಟಕ್ಕೆ ತಂದನು. ಕ್ರಿ. ಶ. ೧೭೫೪.

೨ನೆಯ ಆಲಂಗೀರ:— ಕ್ರಿ ಶ. **೧೭೫೪-೧೭೫೯.** ಗಾಜೀಉದ್ದೀನನ ಉತ್ಕರ್ಷವು ರೋಹಿಲರ **ನಜೀಬಖಾನ**ನಿಗೆ ತಡೆಯಲಿಲ್ಲ. ಅವನು ಗಾಜೀಉದ್ದೀನನ ನಾಶಕ್ಕಾಗಿ ಅಬ್ದಾಲಿಯನ್ನು ಕರೆಯಿಸಿದನು. ಅಬ್ದಾಲಿಯು ಬಂದು ನಜೀಬಖಾನನಿಗೆ ವಜೀರಿಯ ಕೆಲಸವನ್ನು ಕೊಡಿಸಿ ಪಂಜಾಬದ ಅಧಿಕಾರಿಯ ಸ್ಥಳಕ್ಕೆ ತನ್ನ ಮಗ **ತೈಮೂರಷಾಹ**ನನ್ನು ಗೊತ್ತುಮಾಡಿ ತನ್ನ ದೇಶಕ್ಕೆ ಹೋದನು. ಕೂಡಲೆ ಗಾಜೀಉದ್ದೀನನು ಮರಾಠರ ಸಹಾಯವನ್ನು ಪಡೆದು ಕಳೆದುಕೊಂಡಿದ್ದ ತನ್ನ ವಜೀರಿಯನ್ನು ಮರಳಿ ಸಂಪಾದಿಸಿದನು. ಇವನು ಚುಚ್ಚಿಕೊಟ್ಟದ್ದರಿಂದ ರಘುನಾಥರಾಯನು ಕ್ರಿ. ಶ. ೧೭೫೫ರಲ್ಲಿ ಪಂಜಾಬದ ಮೇಲೆ ದಾಳಿಯನ್ನು ಮಾಡಿ ತೈಮೂರಷಾಹನನ್ನು ಓಡಿಸಿ

ದನು. ಈ ದಾಳಿಯೇ ಕ್ರಿ. ಶ. ೧೭೬೧ರಲ್ಲಾದ ಪಾನಿಪತದ ಒನೇ ಯುದ್ಧದ ಕಾರಣವಾಯಿತು. ಈ ಯುದ್ಧದ ಸಂಗತಿಯು ಮುಂದೆ ವಿವರಿಸಲ್ಪಡುವದು. ಇತ್ತ ಗಾಜೀಉದ್ದೀನನು ತನೆಯ ಆಲಂಗೀರನನ್ನು ಕೊಂದು ಒಬ್ಬ ಅರಸು ಮಗನನ್ನು ಪಟ್ಟದಲ್ಲಿಟ್ಟನು.

ಇಲ್ಲಿಗೆ ಮೊಗಲಬಾದಷಾಹರ ಅಧಿಕಾರವು ಎಷ್ಟೂ ನಡೆಯುವಾಯಿತು. ಮುಂದಿನ ಮೂರು ನಾಲ್ಕು ಜನ ಅರಸರು ಹೆಸರಿಗೆ ಬಾದಷಾಹರೆನಿಸಿ, ಮರಾಠರ ಇಲ್ಲವೆ ಇಂಗ್ಲಿಷರ ಕೈಯೊಳಗಿನ ಗೊಂಬೆಗಳಂತೆ ಇದ್ದರು.

ಷಾಹೆ ಆಲಮ :— ಕ್ರಿ ಶ **೧೭೬೧ ೧೮೦೬.** ತನೆಯ ಆಲಮಗೀರನ ಕೊಲೆಯಾದಾಗ ಅವನ ಮಗನಾದ **ಅಲೀಗೌಹರನು** ಬಿಹಾರದ ಮೇಲೆ ದಂಡೆತ್ತಿಹೋಗಿದ್ದನು. ದಿಲ್ಲಿಯ ಅಧಿಕಾರವೆಲ್ಲ ಗಾಜೀ ಉದ್ದೀನನ ಕೈಸೇರಿದ್ದರಿಂದ ಇವನು ದಿಲ್ಲಿಗೆ ಬರಲಾಗದೆ ಅಲ್ಲಿಯೇ ಷಾಹೆಆಲಮ ಎಂಬ ಹೆಸರಿನಿಂದ ತಾನೇ ಬಾದಷಾಹನೆಂದು ಸಾರಿದನು ಮುಂದೆ ಕ್ರಿ. ಶ **೧೭೬೪**ರಲ್ಲಿ ಬಕ್ಸಾರದ ಬಳಿಯಲ್ಲಿ ಇಂಗ್ಲಿಷರ ಕೂಡ ಯುದ್ಧಮಾಡಿ ಸೋತು ಬಂಗಾಲ, ಬಿಹಾರ, ಒಡಿಸಾಗಳ ದಿವಾಣಿ ಅಧಿಕಾರವನ್ನು ಅವರಿಗೆ ಕೊಟ್ಟನು. ಕ್ರಿ. ಶ. **೧೭೭೧** ರಲ್ಲಿ **ಮಹದಾಜಿ ಶಿಂದೆಯು** ಪ್ರಬಲನಾಗಿ ಷಾಹೆಆಲಮನನ್ನು ದಿಲ್ಲಿಗೆ ಕರೆಯೊಯ್ದು ಪಟ್ಟಗಟ್ಟಿದನು. ಈ ಸಂಗತಿಯನ್ನು ಕೇಳಿ ನಜೀಬಖಾನನ ಮಗ ಗುಲಾಮಖಾದರನು ಷಾಹೆಆಲಮನ ಕಣ್ಣುಗಳನ್ನು ಕೀಳಿಸಿದನು. ಈ ಸುದ್ದಿಯು ಮಹಾದಾಜಿ ಸಿಂಧಿಗೆ ತಿಳಿಯಲು ಅವನು ಗುಲಾಮಖಾದರನನ್ನು ಹಿಡತರಿಸಿ ಕ್ರೂರತನದಿಂದ ಕೊಲ್ಲಿಸಿದನು. ಮುಂದೆ ಕ್ರಿ ಶ ೧೮೦೩ರವರೆಗೆ ಷಾಹೆಆಲಮನು ಮರಾಠರ ವಶದಲ್ಲಿದ್ದನು. ಮರಾಠರ ಬಲವು ಕುಗ್ಗಿದ ಒಳಿಕ ಇವನು ಇಂಗ್ಲಿಷರ ಅಧೀನನಾದನು. ಅವರು ಇವನಿಗೆ ವರ್ಷಕ್ಕೆ ೯ ಸಾವಿರ ರೂಪಾಯಿ ಪೆನ್ಶನವನ್ನು ಗೊತ್ತುಮಾಡಿ ಇವನ ರಾಜ್ಯವನ್ನು ತಮ್ಮ ವಶಕ್ಕೆ ತೆಗೆದುಕೊಂಡರು.

ಕ್ರಿ. ಶ. ೧೮೦೬ರಲ್ಲಿ ಷಾಹೆಆಲಮನು ಸತ್ತಬಳಿಕ **ಅಕ್‌ಬರನು** ಕ್ರಿ.ಶ. ೧೮೩೭ರ ವರೆಗೂ ಅಕ್‌ಬರನು ಸತ್ತಬಳಿಕ ಅವನ ಮಗ ಬಹದ್ದೂರಷಾಹನೂ ಕ್ರಿ. ಶ. ೧೮೫೭ರ ವರೆಗೂ ಈ ಪೆನ್ಶನವನ್ನು ಹೊಂದುತ್ತಿದ್ದರು. ಆದರೆ

ಬಹದ್ದೂರಷಾಹನು ಕ್ರಿ. ಶ. ೧೭೫೭ರ ಬಂಡಾಯದಲ್ಲಿ ಸೇರಿದನೆಂಬ ನೆವದಿಂದ ಇಂಗ್ಲಿಷರು ಅವನನ್ನು ರಂಗೂನದಲ್ಲಿ ಸೆರೆಯಿಟ್ಟರು. ಅಲ್ಲಿಯೇ ಅವನು **೧೭೬೨**ರಲ್ಲಿ ಸಾಯಲು ಮೊಗಲಮನೆತನವು ನಿಂತುಹೋಯಿತು ಕ್ರಿ.ಶ.**೧೭೬೨**.

ಏನೆಯ ಪಾಠ

ಪೇಶವೆಯರ ಆಳಿಕೆಯ ಆರಂಭ

ಮೊದಲನೆಯ ಪೇಶವೆ — ಬಾಳಾಜಿ ವಿಶ್ವನಾಥ

೧. **ಬಾಳಾಜಿಯ ರಾಜ್ಯವ್ಯವಸ್ಥೆಯು :—** ಇವರು **ಬಾಳಾಜಿಪಂತ ಭಾನೂ** ಎಂಬವನನ್ನು ತನ್ನ ಘಡನವೀಸನನ್ನು ಮಾಡಿಕೊಂಡನು ಮತ್ತು **ಖಂಡೇರಾವ ದಾಬಡೆ, ಕಾನ್ಹೋಜಿ ಆಂಗ್ರೆ** ಮೊದಲಾದ ಸರದಾರರನ್ನು ಕೂಡಿಕೊಂಡು ಖಾನದೇಶ, ವರ್ಹಾಡ, ಮಾಳವ ಮೊದಲಾದ ಪ್ರಾಂತಗಳಲ್ಲಿ ಮರಾಠರ ವರ್ಚಸ್ಸು ನೆಲೆಗೊಳಿಸಿದನು. ದಕ್ಷಿಣದ ಮೊಗಲ ಸುಭೇದಾರನಾದ ದಾವೂದಖಾನನಿಂದ ಮೊಗಲರ ದಕ್ಷಿಣದ ಆರು ಸುಭೆಗಳ ಚೌಥಾಯಿ ಯೆನ್ನೆತ್ತುವ ಅಧಿಕಾರವನ್ನು ಪಡೆದನು.

೨. **ಬಾಳಾಜಿಯು ಸಯ್ಯದ ಬಂಧುಗಳ ಸಹಾಯಕೆನಾಗಿ ಒಪ್ಪಂದ ಮಾಡಿಕೊಂಡದ್ದು:—** ಬಾಳಾಜಿ ವಿಶ್ವನಾಥನು ದಿಲ್ಲಿಯ ಬಾದಷಾಹನಾದ ಫರುಕ್‌ಶಿಯರನ ವಿರುದ್ಧವಾಗಿದ್ದ ಸಯ್ಯದ ಅಲಿಯ ಸಹಾಯಕನಾಗಿ ದಿಲ್ಲಿಗೆ ಹೋದನು. ಅಲ್ಲಿ ಸಯ್ಯದರಿಂದ ಫರಕ್‌ಶಿಯರನು ಕೊಲ್ಲಲ್ಪಟ್ಟು ಮಹಮ್ಮದ ಷಾಹನು ಪಟ್ಟವೇರಿದನು. ಆಗ ಬಾಳಾಜಿಯು ಸಯ್ಯದರ ಕೂಡ ತಾನು ಮಾಡಿಕೊಂಡ ಒಪ್ಪಂದಕ್ಕೆ ಮಹಮ್ಮದಷಾಹನಿಂದ ಒಪ್ಪಿಗೆಯನ್ನು ಪಡಕೊಂಡನು. ಮತ್ತು **ಸ್ವರಾಜ್ಯ, ಚೌಥಾಯಿ, ಸರದೇಶಮುಖಿ** ಇವುಗಳ ಸನದುಗಳನ್ನು ದೊರಕಿಸಿದನು. ಸಯ್ಯದರೊಡನೆ ಮಾಡಿಕೊಂಡ ಒಪ್ಪಂದದ ನಿಯಮಗಳು:—

೧. ಶಾಹೂರಾಜನು ಮರಾಠರ ರಾಜ್ಯದ ಒಡೆಯನೆಂದು ಮೊಗಲರು ಒಪ್ಪಬೇಕು.

೨. ಮೊಗಲರ ದಕ್ಷಿಣದ ಸುಭೆಗಳ ಚೌಥಾಯಿ-ಸರದೇಶ ಮುಖಿಗಳನ್ನೆತ್ತುವ ಅಧಿಕಾರವು ಮರಾಠರಿಗೆ ಇರಬೇಕು.

೩. ಮರಾಠರು ೧೫ ಸಾವಿರ ಸೈನ್ಯವನ್ನು ಮೊಗಲರ ನೆರವಿಗೆ ಇಡಬೇಕು.

೪. ದಕ್ಷಿಣದ ಸುಭೆಗಳ ಸಂರಕ್ಷಣೆಯನ್ನು ಮರಾಠರೇ ಮಾಡಬೇಕು.

೫. ಮರಾಠರು ಪ್ರತಿವರ್ಷ ೧೦ ಲಕ್ಷ ರೂಪಾಯಿಗಳನ್ನು ಮೊಗಲರಿಗೆ ಕೊಡಬೇಕು.

೬. ಯೇಸೂಬಾಯಿಯನ್ನು ಪರಿವಾರಸಮೇತ ಬಿಡಬೇಕು.

೩. **ಸರಂಜಾಮಿ ಪದ್ಧತಿ**:— ಬಾಳಾಜಿಯು ದಕ್ಷಿಣಕ್ಕೆ ಬಂದ ಬಳಿಕ ಪ್ರತಿಯೊಬ್ಬ ಸರದಾರನಿಗೆ ಒಂದೊಂದು ಪ್ರಾಂತವ ಜಹಗೀರನ್ನು ಹಾಕಿಕೊಟ್ಟನು. ದಾಭಾಡೆ ಖಂಡೇರಾಯನಿಗೆ ಖಾನದೇಶವೂ, ಕಾನ್ಹೋಜಿಗೆ ಕೊಂಕಣವೂ, ಪರಸೋಜಿಗೆ ವರ್ಹಾಡವೂ, ಉದಾಜಿ ಪವಾರನಿಗೆ ಮಾಳವವೂ, ಫತ್ತೆಸಿಂಗನಿಗೆ ಕರ್ನಾಟಕವೂ ಜಹಗೀರಾಗಿ ದೊರೆತವು. ಈ ಸರದಾರರು ಛತ್ರಪತಿಯೊಡನೆ ನಡೆದುಕೊಳ್ಳುವ ಬಗೆಯು ಗೊತ್ತು ಮಾಡಲ್ಪಟ್ಟಿತು. ಅದು ಹೇಗಂದರೆ— ೧. ಸರದಾರರು ತಮ್ಮ ಜಹಗೀರುಗಳ ಕಾರಭಾರವನ್ನು ತಾವೇ ನಾಗಸುತ್ತ ಉತ್ಪನ್ನವ ಗೊತ್ತಾದ ಪಾಲನ್ನು ಛತ್ರಪತಿಗೆ ಸಲ್ಲಿಸಬೇಕು. ೨. ಅರಸನ ಅಪ್ಪಣೆಯಂತೆ ತಮ್ಮ ಸೈನ್ಯಸಮೇತ ಅವನ ಸಹಾಯಕ್ಕೆ ಬರಬೇಕು. ೩ ಜಹಗೀರುಗಳ ಲೆಕ್ಕಪತ್ರಗಳನ್ನು ಛತ್ರಪತಿಗೆ ಒಪ್ಪಿಸಬೇಕು. **ಇದೇ ಸರಂಜಾಮಿ ಪದ್ಧತಿಯು** ಈ ಸರದಾರರ ಸಹಾಯದಿಂದ ಮರಾಠರ ರಾಜ್ಯವು ಸಾಮ್ರಾಜ್ಯವೆನಿಸಿ ದಿನದಿನಕ್ಕೆ ಬಲಿಯಹತ್ತಿತು.

೪. **ಬಾಳಾಜಿಯ ಯೋಗ್ಯತೆ**:— ದಕ್ಷಿಣಕ್ಕೆ ಮರಳಿ ಬಂದ ಬಳಿಕ ಬಾಳಾಜಿಯು ಬಹುದಿವಸ ಬಾಳಲಿಲ್ಲ; ಕ್ರಿ.ಶ ೧೭೨೦ರಲ್ಲಿ **ಸಾಸವಡ**ದಲ್ಲಿ ಮರಣಹೊಂದಿದನು. ಸಂಭಾಜಿಯು ಕಾಲದಿಂದ ರಾಜ್ಯದಲ್ಲಿ ಉಂಟಾಗಿದ್ದ ಅವ್ಯವಸ್ಥೆಯನ್ನು ಇಲ್ಲದಂತೆ ಮಾಡಿ, ಮರಾಠರ ರಾಜ್ಯವನ್ನು ಸ್ಥಿರಗೊಳಿಸಿ, ದಿಲ್ಲಿಯ ವರೆಗೆ ಅವರ ವರ್ಚಸ್ಸನ್ನು ನೆಲೆಗೊಳಿಸಿದನು. ಇವನು ಸ್ವಾಮಿ-ಭಕ್ತನೂ ಪರಾಕ್ರಮಿಯೂ ಮುತ್ಸದ್ದಿಯೂ ಆಗಿದ್ದನು. **ಬಾಜೀರಾವ, ಚಿನುಣಾಜಿ ಅಪ್ಪಾ** ಎಂಬವರಿಬ್ಬರು ಇವನ ಮಕ್ಕಳು.

೯ನೆಯ ಪಾಠ.

೨ನೆಯ ಪೇಶವೆ — ಬಾಜಿರಾವ ಬಾಳಾಜಿ

(ಕ್ರಿ. ಶ. ೧೭೨೦-೧೭೪೦)

೧. **ಬಾಜೀರಾಯನು ಪೇಶ್ವೆಯಾದದ್ದು**:— ಬಾಜೀರಾಯನು ಮರಣಹೊಂದಿದ ಬಳಿಕ ಶಾಹುರಾಜನು ಅವನ ಹಿರಿಯ ಮಗನಾದ ಬಾಜೀರಾಯನಿಗೆ ಪೇಶವೆಯ ಅಧಿಕಾರವನ್ನು ಕೊಟ್ಟನು. ಬಾಜೀರಾಯನು ಪೇಶವೆಯಾದ ಕೂಡಲೆ, ತನ್ನ ತಮ್ಮನಾದ ಚಿಮಣಾಜಿ, ಖಂಡೇರಾವ ಮೊದಲಾದ ಸರದಾರರ ನೆರವಿನಿಂದ, ತಂದೆಯು ಕೈಕೊಂಡಿದ್ದ ರಾಜ್ಯವನ್ನು ಹಬ್ಬಿಸುವ ಕೆಲಸವನ್ನು ಒತ್ತರದಿಂದ ಸಾಗಿಸಿದನು. ಇವನು ಕ್ರಿ. ಶ ೧೭೨೧ ೧೭೨೪ರ ವರೆಗೆ ಖಾನದ್ದೇಶದ ಮೇಲೆಯೂ ಕ್ರಿ. ಶ ೧೭೨೭ರಲ್ಲಿ ಕರ್ನಾಟಕದ ಮೇಲೆಯೂ ದಾಳಿಮಾಡಿ ಅಲ್ಲಿ ಚೌಥಾಯಿಯ ಅಧಿಕಾರವನ್ನು ಪಡೆದನು.

೨. **ಸಿಂಧೆ-ಹೋಳಕರರ ಉದಯ**:— **ರಾಣೋಜಿ ಸಿಂಧೆ**- ಇವನ ಪೂರ್ವಜರು ಸಾತಾರೆ ಜಿಲ್ಲೆಯಲ್ಲಿಯ ಒಂದು ಊರ ಗೌಡರು ಬಡತನದ ಸಲುವಾಗಿ ಇವನು ಬಾಜೀರಾಯನ ಬಳಿಯಲ್ಲಿ ಸಣ್ಣ ಕೆಲಸಕ್ಕೆ ನಿಂತನು. ಮುಂದೆ ಇವನು ಒಳ್ಳೆಯ ವ್ಯಾಪಾರಿಕನೆಂದು ಕಂಡದ್ದರಿಂದ ಬಾಜೀರಾಯನು ಇವನನ್ನು ದಂಡಿನಲ್ಲಿ ಸೇರಿಸಿ, ಹೋಳಕರನೊಡನೆ ಉತ್ತರಕ್ಕೆ ಕಳುಹಿದನು. **ಮಲ್ಹಾರರಾನ ಹೋಳಕರ**- ಇವನಾದರೂ ಗೌಡರ ಮನೆತನದವನೇ. ನೀರಾ ತೀರದಲ್ಲಿಯ **ಹೋಳ** ಎಂಬದು ಇವನ ಊರು. ಚಿಕ್ಕವನಿರುವಾಗ ಕುರಿಗಳನ್ನು ಕಾಯುತ್ತಿದ್ದನು. ಮುಂದೆ ಇವನು **ಖಾನದೇಶಕ್ಕೆ** ಹೋಗಿ ಪೇಶವೆಯ ದಂಡಿನಲ್ಲಿ ಸೇರಿದನು ಬಾಜೀರಾಯನು ಇವನ ಯೋಗ್ಯತೆಯನ್ನು ಕಂಡು, ಇವನಿಗೆ **೫ ಸಾವಿರದ ಸರದಾರಿಕೆ**ಯನ್ನು ಕೊಟ್ಟನು. **ಹೋಳಕರನು** ಇಂದೂರಲ್ಲಿಯೂ **ಸಿಂಧೆಯು** ಉಜ್ಜಯನಿಯಲ್ಲಿಯೂ ಇರಹತ್ತಿದರು.

೩. **ಬಾಜೀರಾಯನೂ ನಿಜಾಮನೂ**:— ಸಯ್ಯದರು ಬಲಗುಂದಿದ ಬಳಿಕ ಕ್ರಿ. ಶ. ೧೭೨೪ರಲ್ಲಿ ನಿಜಾಮು **ಉಲ್ಮುಲ್ಕನು** ದಕ್ಷಿಣಕ್ಕೆ ಬಂದು ಸ್ವತಂತ್ರನಾಗಿ ಆಳಹತ್ತಿದನು. ಆದದರಿಂದ ಮಹಮ್ಮದಷಾಹನು ನಿಜಾಮನ ಮೇಲೆ

ಸೈನ್ಯವನ್ನು ಕಳುಹಿದನು. ಆಗ ನಿಜಾಮನು ಬಾಜೀರಾಯನ **ಚೌಥಾಯಿ-ಸರ ದೇಶಮುಖಿ**ಗಳ ಅಧಿಕಾರವನ್ನೊಪ್ಪಿ, ಅವನ ನೆರವಿನಿಂದ ಮೊಗಲ ಸೈನ್ಯವನ್ನು ಹಿಂದಕ್ಕಟ್ಟಿದನು. ನಿಜಾಮನು ಚೌಥಾಯಿ-ಸರದೇಶಮುಖಿಗಳ ಅಧಿಕಾರವನ್ನು ನಿರುಪಾಯವೆಂದು ಒಪ್ಪಿದನು. ಆದದರಿಂದ ಅವನು ಸಾಧಿಸಿದಾಗೆಲ್ಲ ಆ ಅಧಿಕಾರವನ್ನು ಅಲ್ಲಗಳೆದು ಬಾಜೀರಾಯನನ್ನು ವಿರೋಧಿಸಹತ್ತಿದನು. ಆಗ ಬಾಜೀರಾಯನು ನಿಜಾಮನ ಮೇಲೆ ನಾಗಿ **ಪಾಲಖೇಡ** ಎಂಬಲ್ಲಿ ಅವನನ್ನು ಬಲವಾಗಿ ಮುತ್ತಿದನು ಕಡೆಗೆ ನಿಜಾಮನು ಸೋತು ಬಾಜೀರಾಯನೊಡನೆ ಒಪ್ಪಂದ ಮಾಡಿಕೊಂಡನು ಈ ಒಪ್ಪಂದದಿಂದ, ೧. ನಿಜಾಮನು ಚೌಥಾಯಿ ಸರದೇಶಮುಖಿಗಳ ಅಧಿಕಾರವನ್ನು ಒಪ್ಪಬೇಕು. ೨. ಅವನು ಮರಾಠರ ಒಳ ಜಗಳದಲ್ಲಿ ಕೈಹಾಕಬಾರದು. ೩. ಕೆಲವು ಕೋಟೆಗಳನ್ನು ಮರಾಠರಿಗೆ ಕೊಡ ಬೇಕು. ಎಂದು ಗೊತ್ತಾಯಿತು

೪. ಬಾಜೀರಾಯನ ವಿಜಯಗಳು:- **ಮಾಳವ**:— ಮಾಳವವು ಬೆಲೆಯುಳ್ಳ ಸೀಮೆಯು. ಅಲ್ಲದೆ ದಿಲ್ಲಿಯಿಂದ ದಕ್ಷಿಣಕ್ಕೆ ಬರುವ ಮಾರ್ಗಗಳೆಲ್ಲ ಈ ಪ್ರಾಂತದಲ್ಲಿಯೇ ಹಾಯ್ದಿರುತ್ತವೆ. ಮಾಳವದಲ್ಲಿ ತಮ್ಮ ಅಧಿಕಾರವಿದ್ದರೆ ಮೊಗಲ-ನಿಜಾಮರ ಸಂಬಂಧವು ಕಡಿಮೆಯಾಗುವದೆಂಬ ವಿಚಾರದಿಂದ ಬಾಜೀರಾಯನು ಆ ಪ್ರಾಂತದ ಮೇಲೆ ದಾಳಿ ಮಾಡಿದನು. ಕ್ರಿ. ಶ ೧೭೨೫ರಲ್ಲಿ ಚಿಮಣಾಜಿಯು ಅಲ್ಲಿಯ ಮೊಗಲ ಸುಭೇದಾರನಾದ **ಗಿರಿಧರ ಬಹದ್ದೂರ**ನನ್ನು ನೋಲಿಸಿದನು ಬಳಿಕ ಬಾಜೀರಾಯನಿಗೆ ಮಾಳವದ ಸನದು ದೊರೆಯಿತು.

೫. ಬುಂದೇಲಖಂಡ:— **ಛತ್ರಸಾಲನು** ಬುಂದೇಲಖಂಡದ ಅರಸ ನಾಗಿದ್ದನು. ಮೊಗಲ ಸರದಾರನಾದ **ಮಹಮ್ಮದಖಾನ ಬಂಗಷ** ಎಂಬವನು ಬುಂದೇಲಖಂಡದ ಮೇಲೆ ಒಂದೇಸವನೆ ದಾಳಿ ಮಾಡಹತ್ತಿದನು. ಆದದರಿಂದ ಛತ್ರಸಾಲನು ಬಾಜೀರಾಯನನ್ನು ನೆರವಿಗೆ ಕರೆದನು ಬಾಜೀರಾಯನು ಅತ್ತ ಹೋಗಿ **ಜೈತಪುರ** ಬಳಿಯಲ್ಲಿ ಬಂಗಷನನ್ನು ಸೋಲಿಸಿದನು. ಕ್ರಿ. ಶ. **೧೭೨೯.** ಆಗ ಛತ್ರಸಾಲನು ಸಮಾಧಾನ ಹೊಂದಿ ಝಂಸಿಯ ಬಳಿಯ ೫೦ ಲಕ್ಷದ ಸೀಮೆಯನ್ನು ಬಾಜೀರಾಯನಿಗೆ ಕೊಟ್ಟನು.

ಗುಜರಾಥ:— ಖಂಡೇರಾಯ ದಾಭಾಡೆಯ ತರುವಾಯ ಅವನ ಮಗ **ತ್ರ್ಯಂಬಕರಾಯನು** ಖಾನದೇಶದ ಅಧಿಕಾರಿಯಾದನು. ಅವನು

ಬಾಜೀರಾಯನ ಹಿರಿಯತನವನ್ನು ಒಪ್ಪದೆ ಸ್ವತಂತ್ರನಾಗಿರಹತ್ತಿದನು. ಬಾಜೀರಾಯನಿಗೂ ತ್ರ್ಯಂಬಕರಾಯನಿಗೂ ಕ್ರಿ ಶ. **೧೭೩೧**ರಲ್ಲಿ ಡಭಯಿ ಎಂಬಲ್ಲಿ ಕಾಳಗವಾಗಿ ತ್ರ್ಯಂಬಕರಾಯನು ಗುಂಡುತಾಕಿ ಮರಣಹೊಂದಿದನು. ಬಳಿಕ ಅವನ ತಮ್ಮನಾದ **ಯಶವಂತರಾಯನು** ಸರದಾರನಾದನು. ಈ ಸುದ್ದಿಯು ಶಾಹೂರಾಜನಿಗೆ ತಿಳಿಸಲು ಅವನು ಗುಜರಾಥದ ಉತ್ಪನ್ನವನ್ನು ದಾಭಾಡೆ, ಮತ್ತು ಬಾಜೀರಾವ ಇವರು ಸರಿಯಾಗಿ ಹಂಚಿಕೊಳ್ಳಬೇಕೆಂದು ಗೊತ್ತುಮಾಡಿ ಅವರನ್ನು ಸಮಾಧಾನಗೊಳಿಸಿದನು.

ಕೊಂಕಣ:— ಕ್ರಿ. ಶ. **೧೭೩೩**-**೩೬**ರವರೆಗೆ ಬಾಜೀರಾಯನು ಜಂಜಿರೆಯ ಸಿದ್ದಿಯ ಮೇಲೆ ದಾಳಿ ಮಾಡಿದ್ದರಿಂದ ಸಿದ್ದಿಯು ಒಪ್ಪಂದ ಮಾಡಿಕೊಂಡು ಮರಾಠರ ಮಾಂಡಲಿಕನಾದನು. ಬಳಿಕ ಬಾಜೀರಾಯನು ಚಿಮಣಾಜಿಯನ್ನು ಪೋರ್ತುಗೀಜರ ಮೇಲೆ ಕಳುಹಿ ತಾನು ದಿಲ್ಲಿಯ ಕಡೆಗೆ ಹೊರಟನು. ಚಿಮಣಾಜಿಯು ಪರಾಕ್ರಮದಿಂದ ಕಾದಿ ವಸಯಿ ಕೋಟೆಯನ್ನು ಪೋರ್ತುಗೀಜರ ಸ್ಥಾನಗಳನ್ನು ವಶಮಾಡಿಕೊಳ್ಳಲು ಅವರು ಆ ಭಾಗವನ್ನೇ ಬಿಟ್ಟು ಹೋದರು. ಕ್ರಿ ಶ **೧೭೩೯**.

ದಿಲ್ಲಿ:— ಬಾಜೀರಾಯನು ದಿಲ್ಲಿಯ ಮೇಲೆ ಸಾಗಿ ಈ ಮೊದಲು ಅತ್ತ ಕಡೆಗೆ ಬಂದ **ಸಿಂಧ್ಯೆ-ಹೋಳಕರರ** ನೆರವಿನಿಂದ ಬಾದಷಾಹನ ದಂಡನ್ನು ಸೋಲಿಸಿದನು. ಆಗ ಬಾದಷಾಹನು ೧೩ ಲಕ್ಷ ರೂಪಾಯಿಗಳನ್ನು ಕೊಟ್ಟು ಬಾಜೀರಾಯನನ್ನು ಸಮಾಧಾನಪಡಿಸಿದನು. ಈ ಸುದ್ದಿಯು ನಿಜಾಮನಿಗೆ ತಿಳಿಯಲು ಅವನು ಬಾದಷಾಹನ ನೆರವಿಗೆಂದು ಉತ್ತರಕ್ಕೆ ಸಾಗಿಬಂದನು. ಆದರೆ ಬಾಜೀರಾಯನು ಭೋಪಾಳದ ಬಳಿಯಲ್ಲಿ ಅವನನ್ನು ತರುಬಿ ಪೂರ್ಣವಾಗಿ ಸೋಲಿಸಿದನು. ಕ್ರಿ. ಶ. **೧೭೩೮**. ಈ ರೀತಿ ಚಂಬಲಾ ನದಿಯಿಂದ ನರ್ಮದೆಯವರೆಗಿನ ಸೀಮೆಯನ್ನು ವಶಮಾಡಿಕೊಂಡ ಬಳಿಕ ಬಾಜೀರಾಯನು ದಕ್ಷಿಣಕ್ಕೆ ಬಂದನು.

೬. ಬಾಜೀರಾಯನ ಮರಣ ಮತ್ತು ಯೋಗ್ಯತೆ:— ಇವನು ಕ್ರಿ. ಶ. **೧೭೪೦**ರಲ್ಲಿ ಮರಣಹೊಂದಿದನು. ಬಾಜೀರಾಯನು ಚಲುವನೂ, ಒಗ್ಗುಳ್ಳವನೂ ಮೇಲಾದ ಕಲಿಯೂ ಒಳ್ಳೆಯ ಎಪೆಗಾರನೂ ಇದ್ದನಲ್ಲದೆ ಆ ಕಾಲದ ಎಲ್ಲ ಯುದ್ಧವಿದ್ಯೆಗಳಲ್ಲಿ ಬಲ್ಲಿದನೆನಿಸಿದ್ದನು. ಇವನ ಇರುವು ತೀರ ಸಾದಾ ರೀತಿಯದಿತ್ತು ಸಾಮಾನ್ಯ ದಂಡಾಳಿನೊಡನೆ ಇದ್ದು ಬರಿಯ

ಬೆಳೆಸಗಳನ್ನು ತಿಂದು ಇರಲಿಕ್ಕೂ ಇವನು ಹಿಂಬರಿಯುತ್ತಿರಲಿಲ್ಲ ಇವನು ಯೋಗ್ಯತೆಯುಳ್ಳವರಿಗೆ ತಕ್ಕ ಅಧಿಕಾರಗಳನ್ನು ಕೊಟ್ಟು ಅವರ ನೆರವಿನಿಂದ ದಿಲ್ಲಿಯ ವರೆಗೆ ಸೀಮೆಯನ್ನು ವಶಮಾಡಿಕೊಂಡು ಮರಾಠರ ಸಾಮ್ರಾಜ್ಯವನ್ನು ಸ್ಥಾಪಿಸಿದನು. ದಿಲ್ಲಿಯಲ್ಲಿ ಮರಾಠರ ವರ್ಚಸ್ಸನ್ನು ನೆಲೆಗೊಳಿಸಬೇಕೆಂಬುದು ಇವನ ಹೆಗ್ಗುರಿಯಾಗಿತ್ತು. ಈ ಬಯಕೆಯನ್ನು ಈಡೇರಿಸುವ ಅಬ್ಬರದಲ್ಲಿ ಇವನು ರಾಜ್ಯಕಾರಭಾರದ ಕಡೆಗೂ ಸಿದ್ದಿ, ನಿಜಾಮ, ಫ್ರೆಂಚ ಮೊದಲಾದ ಪರಚಕ್ರಗಳ ಕಡೆಗೂ ವಿಶೇಷ ಲಕ್ಷ್ಯಗೊಡಲಿಲ್ಲ. ಇವನ ತಮ್ಮನಾದ ಚಿಮ್ಮಾಜಿಯು ಜಾಣತನದಿಂದ ಕಾರಭಾರವನ್ನು ಸಾಗಿಸಿಯೂ, ಪ್ರಸಂಗದಲ್ಲಿ ಪರಾಕ್ರಮದಿಂದ ಸಿದ್ದಿ, ನಿಜಾಮ, ಪೋರ್ತುಗೀಜ ಇವರನ್ನು ತಡೆದು ಸೋಲಿಸಿಯೂ ನೆರವಾದದರಿಂದಲೇ ಬಾಜೀರಾಯನ ವಿಜಯಪರಂಪರೆಯು ಅಖಂಡವಾಗಿ ಸಾಗಿತೆಂದು ಹೇಳಬಹುದು

ಇವನು ಪೇಶವೆ ಪದವನ್ನು ಪಡೆದು ವಿರೋಧಿಗಳನ್ನು ಬಗ್ಗುಬಡಿಯುತ್ತ ಇಪ್ಪತ್ತು ವರ್ಷಗಳ ವರೆಗೆ ಅಳಿ ಮರಾಠರ ಸಾಮರ್ಥ್ಯವನ್ನು ತೋರ್ಪಡಿಸಿದನು ಆಗಿನ ಪುಣೆ ಪಟ್ಟಣವನ್ನು ಇವನೇ ನೆಲೆಸಿ ಅಲ್ಲಿ **ಶನಿವಾರ ವಾಡೆ** ಎಂಬ ಅರಮನೆಯನ್ನು ಕಟ್ಟಿಸಿದನು ಇವನಿಗೆ **ಬಾಳಾಜಿ** ಉರ್ಫ **ನಾನಾಸಾಹೇಬ, ರಘುನಾಥರಾವ** ಉರ್ಫ **ರಾಘೋಬದಾದಾ** ಎಂಬ ಇಬ್ಬರು ಮಕ್ಕಳಿದ್ದರು

೧೦ನೆಯ ಪಾಠ

೩೫ನೆಯ ಪೇಶವೆ ಬಾಳಾಜಿ ಬಾಜೀರಾಯ

(ಕ್ರಿ. ಶ ೧೭೪೦-೧೭೬೧)

೧. **ಬಾಳಾಜಿಯು ಪೇಶವೆಯಾದದ್ದು :---** ಬಾಜೀರಾಯನು ಸತ್ತ ಬಳಿಕ **ರಘೂಜಿ ಭೋಸಲೆ, ದಮಾಜಿ ಗಾಯಕವಾಡ** ಇವರು **ಬಾಬಾಜಿ ನಾಯಿಕ** ಎಂಬವನನ್ನು ಮುಂದೆ ಮಾಡಿ, ಅವನಿಗೆ ಪೇಶವೆಯ ಅಧಿಕಾರವು ದೊರೆಯಬೇಕೆಂದು ಪ್ರಯತ್ನಮಾಡಿದರು ಪೇಶವೆಯ ಕೆಲಸವನ್ನು ತೂಗಿಸುವ ಯೋಗ್ಯತೆಯು ಬಾಬಾಜಿಯಲ್ಲಿರಲಿಲ್ಲ ಬಾಜೀರಾಯನ ಹಿರಿಯ

ಮಗ **ಬಾಳಾಜಿಯು** ತನ್ನ ಕಕ್ಕನಾದ ಚಿಮಣಾಜಿಯ ಕೈಯಲ್ಲಿ ಆಡಿ ಯುದ್ಧಕಲೆ-ರಾಜ್ಯಕಾರಭಾರಗಳಲ್ಲಿ ನುರಿತಿದ್ದನು. ಆದದರಿಂದ ಶಾಹೂ ರಾಜನು ಬಾಳಾಜಿಯ ಯೋಗ್ಯತೆಯನ್ನೂ ಬಾಜೀರಾಯನು ಮಾಡಿದ ಸೇವೆ ಯನ್ನೂ ನೆನೆದು ಇವನಿಗೆ ಪೇಶವೆಯ ಅಧಿಕಾರವನ್ನು ಕೊಟ್ಟನು. ಬಾಳಾಜಿಯು ಪೇಶವೆಯಾದುದಕ್ಕೆ ದಿಲ್ಲಿಯ ಬಾದಶಹನ ಒಪ್ಪಿಗೆಯೂ ದೊರೆತಿತ್ತು.

೨. ಮಾಳವ ಪ್ರಾಂತದ ಸನದು ಸಿಕ್ಕಿದ್ದು:-- ಬಾಳಾಜಿಯು ಪೇಶವೆಯಾದಂದಿನಿಂದ ರಘೋಜಿ ಮೊದಲಾದವರು ಇವನ ವಿರೋಧಿ-ಗಳಾದರು. ಮುಂದೆ ತುಸು ದಿವಸಗಳಲ್ಲಿ ಚಿಮಣಾಜಿಯು ಮರಣ ಹೊಂದಿದ್ದ ರಿಂದ ಈ ವಿರೋಧಿಗಳಿಗೆ ಮತ್ತಿಷ್ಟು ಸಡಿಲು ಸಿಕ್ಕಿತು. ಅವರು ಪೇಶವೆಯ ಮೇಲಧಿಕಾರವನ್ನು ಒಪ್ಪದೆ ಸ್ವತಂತ್ರವಾಗಿ ನಡೆಯಹತ್ತಿದರು ರಘೂಜಿಯು ಬಂಗಾಲ ಪ್ರಾಂತದ ಮೇಲೆ ಹಲವು ದೌಡುಗಳನ್ನು ಮಾಡಿ, ಅಲ್ಲಿಯ ಸುಭೇ-ದಾರನಾದ **ಅಲಿವರ್ದೀಖಾನ**ನನ್ನು ಪೂರ್ಣವಾಗಿ ಸೋಲಿಸಿ **ಮುರ್ಶಿದಾಬಾದ ಹುಗಳಿ** ಮೊದಲಾದ ಸಂಪತ್ತುಳ್ಳ ಪಟ್ಟಣಗಳನ್ನು ಸುಲಿದನು. ಅತ್ತ ಬಾಬಾ ಜಿಯೂ ದಮಾಜಿಯೂ ಪೇಶವೆಯ ಒಪ್ಪಿಗೆಯಿಲ್ಲದೆ ಮಾಳವದ ಮೇಲೆ ಸಾಗಿ ಹೋದರು. ಬಾಳಾಜಿಯು ಇವರನ್ನು ತಡೆಯುವ ವಿಚಾರದಲ್ಲಿದ್ದನು. ಅಷ್ಟರಲ್ಲಿ ಬಾದಷಾಹನಾದ **ಮಹಮ್ಮದಷಾಹನು** ಬಂಗಾಲ ಪ್ರಾಂತವನ್ನು ಸಂರಕ್ಷಿಸಿದರೆ ಮಾಳವದ ಸುಭೇದಾರಿಯು ದೊರೆಯುವದೆಂದು ಬಾಳಾಜಿಗೆ ತಿಳಿಸಿದನು. ಇದಕ್ಕೆ ಬಾಳಾಜಿಯು ಒಪ್ಪಿ ರಘೂಜಿಯನ್ನು ಸೋಲಿಸಿ ಹಿಂದಕಟ್ಟಲು ಅವನಿಗೆ ಬಾದಷಾಹನಿಂದ ಮಾಳವದ ಸನದು ದೊರೆಯಿತು ಕ್ರಿ. ಶ. **೧೭೪೨**

೩. ಬಾಳಾಜಿ ರಘೂಜಿ ಇವರಲ್ಲಿ ಉಂಟಾದ ಒಕ್ಕೆಟ್ಟು:— ರಘೂಜಿ ಮೊದಲಾದ ಸರದಾರರು ಪೇಶವೆಯ ಹಗೆಗಳಾಗಿರುವದು ರಾಜ್ಯಕ್ಕೆ ಹಿತಕರ ವಲ್ಲೆಂದು ತಿಳಿದು ಶಾಹೂರಾಜನು ಅವರೆಲ್ಲರನ್ನು ಸಾತಾರೆಗೆ ಕರೆಯಿಸಿಕೊಂಡು ಅವರಲ್ಲಿ ಒಕ್ಕಟ್ಟನ್ನುಂಟುಮಾಡಿದನು. ರಘೂಜಿಗೆ ಲಖನೌ, ಪಾಟಣಾ, ದಕ್ಷಿಣ ಬಂಗಾಲ, ಬಿಹಾರಗಳ ಅಧಿಕಾರವು ದೊರೆತದರಿಂದ ಅವನು ಸಮಾ ಧಾನದಿಂದ ಪೇಶವೆಯ ಅಂಕಿತನಾಗಿ ನಡೆಯಹತ್ತಿದನು. ಬಾಬಾಜಿಗೆ ಕರ್ನಾಟಕದ ಅಧಿಕಾರವನ್ನು ಕೊಟ್ಟಿದ್ದರಿಂದ ಅವನೂ ಸಂತುಷ್ಟನಾದನು.

ಮರಾಠರ ಕೆಂದಕ:— ಬಳಿಕ ಬಾಬಾಜಿಯು ತಾನೇ ಮಾಳವ ಪ್ರಾಂತದ ಮೇಲೆ ದಂಡೆತ್ತಿ ಹೋಗಿ ಬಹಳ ಹಣವನ್ನು ಎತ್ತಿಕೊಂಡು ಬಂದನು. ರಘೂಜಿಯು ಬಂಗಾಲ ಬಿಹಾರಗಳನ್ನು ಹೊಕ್ಕು ಅಲ್ಲಿ ಮರಾಠರ ವರ್ಚಸ್ಸನ್ನು ನೆಲೆಗೊಳಿಸಿದನು ಆಗ ಕಲಕತ್ತೆಯ ಇಂಗ್ಲಿಷರು ಹೆದರಿ ತಮ್ಮ ರಕ್ಷಣೆಗಾಗಿ ಒಂದು ಕಂದಕವನ್ನು ಕಡಿಸಿದರು. ಅದಕ್ಕೆ '**ಮರಾಠರ ಕೆಂದಕ**' ಎಂತಲೇ ಹೆಸರುಂಟಾಯಿತು. ಇತ್ತ ಚಿಮಣಾಜಿಯ ಮಗ ಸದಾಶಿವರಾಯನು ಕರ್ನಾಟಕದ ಮೇಲೆ ಸಾಗಿ ತುಂಗಭದ್ರೆಯ ವರೆಗೆ ಅಧಿಕಾರವನ್ನು ಹಬ್ಬಿಸಿದನು ಆಗ ಸವಣೂರ ನವಾಬನಿಂದ ೨೫ ಲಕ್ಷದ ನಾಡು ಮರಾಠರಿಗೆ ಸಿಕ್ಕಿತು.

೪. **ಸಿಂಧೆ ಹೋಳಕರರ ಹದಗೇಡಿತನ**:— ಜಯಪುರದ ಅರಸನಾದ ಜಯಸಿಂಗನು ಮರಾಠರ ಮಿತ್ರನಾಗಿದ್ದನು. ಅವನು ಕ್ರಿ ಶ. ೧೭೪೩ರಲ್ಲಿ ಸಾಯಲು **ಈಶ್ವರಸಿಂಗ, ಮಾಧವಸಿಂಗ** ಎಂಬ ಅವನ ಇಬ್ಬರು ಮಕ್ಕಳಲ್ಲಿ ಪಟ್ಟದ ಸಲುವಾಗಿ ಜಗಳ ಹುಟ್ಟಿತು. ಆಗ ಈಶ್ವರಸಿಂಗನು ಸಿಂಧೆ-ಹೋಳಕರರ ನೆರವಿನಿಂದ ಮಾಧವಸಿಂಗನನ್ನು ಸೋಲಿಸಿದನು ಬಳಿಕ ಸಿಂಧೆಯು ತಾನೊಬ್ಬನೇ ಈಶ್ವರಸಿಂಗನ ಸಹಾಯಕನಾಗಿ ಉಳಿದ ರಜಪುತ ಅರಸರನ್ನು ಅವನ ಅಂಕಿತದಲ್ಲಿ ತಂದುಕೊಟ್ಟನು. ಇದಕ್ಕಾಗಿ ಈಶ್ವರಸಿಂಗನಿಂದ ಸಿಂಧೆಗೆ ವಿಪುಲವಾದ ದ್ರವ್ಯವು ದೊರೆಯಿತು. ಸಿಂಧೆಯ ಈ ನಡತೆಯಿಂದ ಹೋಳಕರನು ರೊಚ್ಚಿಗೆದ್ದು ಮಾಧವಸಿಂಗನನ್ನು ಕೂಡಿಕೊಂಡನು ಇದರಿಂದ ಅವರಿಬ್ಬರಲ್ಲಿ ವೈಮನಸ್ಸುಂಟಾಯಿತು. ಪೇಶವೆಯಾದರೂ ಹೋಳಕರನ ಪಕ್ಷವನ್ನೇ ಎತ್ತಿಹಿಡಿದನು. ಆದದರಿಂದ ಈಶ್ವರಸಿಂಗನು ಮುಂದುಗಾಣದೆ ಆತ್ಮಹತ್ಯ ಮಾಡಿಕೊಂಡನು! ಶಿವಾಜಿಯ ಕಾಲದಿಂದ ಮರಾಠರ ವಿಷಯವಾಗಿ ರಜಪುತರಲ್ಲಿ ಉಂಟಾಗಿದ್ದ ಭಾವನೆಯು ಬದಲಾಗಿ ಅವರು ಮರಾಠರಿಗೆ ನೆರವಾಗುವದನ್ನು ಬಿಟ್ಟುಬಿಟ್ಟರು. ಮರಾಠ ಸರದಾರರ ಈ ಹದಗೇಡಿತನವು ಮುಂದೆ ಮರಾಠರ ರಾಜ್ಯಕ್ಕೆ ಮುಳುವಾಗದೆ ಇರಲಿಲ್ಲ!

೫. **ಶಾಹೂರಾಜನ ತರುವಾಯದ ಸ್ಥಿತಿ**:— ಕ್ರಿ. ಶ. ೧೭೪೯ರಲ್ಲಿ ಶಾಹೂರಾಜನು ಮರಣ ಹೊಂದಿದ ಬಳಿಕ ಬಾಳಾಜಿಯು ಅವನ ಇಚ್ಛೆಯಂತೆ ತಾರಾಬಾಯಿಯ ಮೊಮ್ಮಗನಾದ **ರಾಮರಾಜನನ್ನು** ಪಟ್ಟಕ್ಕೆ ತಂದನು. ರಾಮ

ರಾಜನು ಹೆಸರಿಗೆ ಅರಸನಾಗಿ ೬೫॥ ಲಕ್ಷದ ಸೀಮೆಯನ್ನು ತನಗಾಗಿ ಇಟ್ಟು ಕೊಂಡು ಎಲ್ಲ ಅಧಿಕಾರವನ್ನು ಪೇಶವೆಗೆ ಒಪ್ಪಿಸಿದನು. ಅಂದಿನಿಂದ ಪೇಶವೆಯು ಉಳಿದ ಸರದಾರರಿಗಿಂತ ಹೆಚ್ಚಿನವನೆಂದು ಎಣಿಸಲ್ಪಡಹತ್ತಿದನು. ಬಾಳಾಜಿಯ ಈ ಹೆಚ್ಚಳವು ತಾರಾಬಾಯಿಗೂ ಕೆಲವು ಸರದಾರರಿಗೂ ಸಹನವಾಗಲಿಲ್ಲ. ತಾರಾಬಾಯಿಯು ಬಾಳಾಜಿಯ ಅಧಿಕಾರಗಳನ್ನು ಕಸಿದುಕೊಳ್ಳಬೇಕೆಂದು ಎಷ್ಟು ಹೇಳಿದರೂ ರಾಮರಾಜನು ಕೇಳಲಿಲ್ಲ. ಆಗ ಆಕೆಯು ಅರಸನನ್ನು ಸೆರೆಯಿಟ್ಟು ಯಶವಂತರಾವ ದಾಭಾಡೆ, ದಮಾಜಿ ಗಾಯಕವಾಡ ಇವರನ್ನು ತನ್ನ ನೆರವಿಗಾಗಿ ಸಾತಾರೆಗೆ ಕರೆಯಿಸಿದಳು. ಇದನ್ನೆಲ್ಲ ತಿಳಿದು ಬಾಳಾಜಿಯು ದಾಭಾಡೆ-ಗಾಯಕವಾಡರನ್ನು ಸೆರೆಹಿಡಿದು ಪುಣೆಯಲ್ಲಿಟ್ಟು ರಾಮರಾಜನನ್ನು ಸೆರೆಬಿಡಿಸಿದನು. ಮತ್ತು ಬಲವಾದ ಸೈನ್ಯವನ್ನು ಸಾತಾರೆಯಲ್ಲಿಟ್ಟು ವಿರೋಧಿಗಳ ಕಾಟವನ್ನು ತಪ್ಪಿಸಿದನು.

೧೧ನೆಯ ಪಾಠ

ಬಾಳಾಜಿ ಬಾಜೀರಾಯ (ಮುಂದೆ ಸಾಗಿದ್ದು)

೧. **ದಕ್ಷಿಣದಲ್ಲಿಯ ರಾಜ್ಯ ವಿಸ್ತಾರದ ಪ್ರಯತ್ನಗಳು:—** (ಅ) ಕ್ರಿ. ಶ. ೧೭೫೭ರಲ್ಲಿ ಫ್ರೆಂಚ ಸೇನಾಪತಿಯಾದ ಬುಸಿಯ ಸಹಾಯದಿಂದ ನಿಜಾಮನ ಸೈನ್ಯವು ಮರಾಠರ ಮೇಲೆ ಸಾಗಿಬಂದಿತು. ಘೋಡ ನದಿಯ ಬಳಿಯಲ್ಲಿಯೂ ಮರುವರ್ಷ ಭಾಲಕಿ ಎಂಬಲ್ಲಿಯೂ ಯುದ್ಧವಾಗಿ ನಿಜಾಮನು ಸೋತು ತಾಪಿ-ಗೋದಾವರಿಗಳ ನಡುವಿನ ಸೀಮೆಯನ್ನು ಕೊಟ್ಟು ಬಾಳಾಜಿಯೊಡನೆ ಒಪ್ಪಂದ ಮಾಡಿಕೊಂಡನು (ಆ) ಕಡಪೆ, ಕರ್ನೂಲ, ಸವಣೂರ ಇವುಗಳ ನವಾಬರು ತುಂಗಭದ್ರೆಯ ತೀರದ ಮರಾಠರ ಸೀಮೆಯನ್ನು ತೆಗೆದು ಕೊಂಡಿದ್ದರು. ಬಾಳಾಜಿಯು ಅತ್ತ ಕಡೆಗೆ ಸಾಗಿ ನವಾಬರನ್ನು ಸೋಲಿಸಿ ತನ್ನ ಸೀಮೆಗಳನ್ನು ಕೈಸೇರಿಸಿಕೊಂಡನು. ಬಳಿಕ **ಶ್ರೀರಂಗ ಪಟ್ಟಣಕ್ಕೆ** ಹೋಗಿ ಅದನ್ನು ಮುತ್ತಿದನು. ಆಗ ಅಲ್ಲಿಯ ಅರಸನಾದ **ನಂದಿರಾಜನು** ೫ ಲಕ್ಷ ರೂಪಾಯಿ ಕಪ್ಪವನ್ನು ಕೊಟ್ಟನು. (೧೩) ಕುಲಾಬೆಯ **ಕಾನ್ಹೋಜಿ ಆಂಗ್ರೆಯ** ತರುವಾಯ **ತುಳಾಜಿ** ಎಂಬವನು ಅಧಿಕಾರಿಯಾದನು. ಇವನು

ಶೂರನೂ ಮುತ್ಸದ್ದಿಯೂ ಆಗಿದ್ದು ತನ್ನ ಹಡಗುಪಡೆಯನ್ನು ಚನ್ನಾಗಿ ಬಲಿಸಿದ್ದನು. ಅವನು ಬಾಳಾಜಿಯನ್ನು ಹೆಚ್ಚಾಗಿ ದ್ವೇಷಿಸುತ್ತಿದ್ದನು ಈ ತುಳಾಜಿಯು ಪಶ್ಚಿಮ ದಂಡೆಯಲ್ಲಿ ಇಂಗ್ಲಿಷರ ಮತ್ತು ಫ್ರೆಂಚರ ವರ್ಚಸ್ಸನ್ನು ನೆಲೆಗೊಳಿಸಲಿಕ್ಕೆ ಆಸ್ಪದ ಕೊಟ್ಟಿದ್ದಿಲ್ಲ ಬಾಳಾಜಿಯು ಅವನನ್ನು ಅಂಕಿತದಲ್ಲಿ ತರಬೇಕೆಂದು ನಿಶ್ಚಯಿಸಿ ಹಡಗುಪಡೆಗಾಗಿ ಇಂಗ್ಲಿಷರ ಸಹಾಯವನ್ನು ಕೇಳಿದನು. ಅವರು ಸಂತೋಷದಿಂದ ನೆರವಾಗಲೊಪ್ಪಿ ಹಡಗುಪಡೆಯ ಆಧಿಪತ್ಯವನ್ನು ತಾವೇ ವಹಿಸಿಕೊಂಡರು. ನೆಲದಾರಿಯಿಂದಲೂ ನೀರುದಾರಿಯಿಂದಲೂ ಇಬ್ಬರ ಸೈನ್ಯಗಳು ತುಳಾಜಿಯ ಮೇಲೆ ಸಾಗಿದವು. **ಸಿಂಧುದುರ್ಗ, ವಿಜಯದುರ್ಗಗಳು** ತುಳಾಜಿಯ ಕೈಬಿಟ್ಟ್ವರಿಂದ ತುಳಾಜಿಯ ಕೈಶೆರೆಯಾವನು. ಇಂಗ್ಲಿಷರು ತುಳಾಜಿಯ ಹಡಗುಪಡೆಯನ್ನು ಸುಟ್ಟು ಹಾಳು ಮಾಡಿದರು. ಈ ಯುದ್ಧದಿಂದ **ಬಾಣಕೋಟ** ಮುಂತಾವ ೫ ಬಂದರಗಳು ಇಂಗ್ಲಿಷರಿಗೆ ದೊರೆತವು **ವಿಜಯದುರ್ಗ** ಮೊದಲಾವ ಉಳಿದ ಪ್ರದೇಶವು ಬಾಳಾಜಿಯ ವಶವಾಯಿತು. ತುಳಾಜಿಯೊಡನೆ ಮರಾಠರ ಹಡಗುಪಡೆಯ ಕೀರ್ತಿಯು ಅಡಗಿಹೋಯಿತು! **(ಈ)** ರಘೂಜಿ ಭೊಸಲೆಯ ದಾಳಿಗೆ ಬಂಗಾಲವ ಸುಭೇದಾರನಾವ ಅಲಿವರ್ದೀ ಖಾನನು ಬೇಸತ್ತು ಮರಾಠರೊಡನೆ ಒಪ್ಪಂದ ಮಾಡಿಕೊಂಡನು. ಕ್ರಿ. ಶ. ೧೭೫೧ ಇದರಿಂದ ಕಟಕ ಪ್ರಾಂತವು ಮರಾಠರಿಗೆ ದೊರೆತದ್ದಲ್ಲದೆ ಬಂಗಾಲದ ಚೌಥಾಯಿಯೆಂದು ವರ್ಷಕ್ಕೆ ೧೨ ಲಕ್ಷ ರೂಪಾಯಿಗಳು ಸಿಗಹತ್ತಿದವು. ರಘೂಜಿ ಭೋಸಲೆ ಸತ್ತ ತರುವಾಯ ಅಧಿಕಾರದ ಸಲುವಾಗಿ ಅವನ ಮಕ್ಕಳಲ್ಲಿ ಒಳಜಗಳ ನಡೆದಾಗ ಅತ್ತ ಕ್ಲೈವನು ಪ್ಲಾಸೀ ಯುದ್ಧದಲ್ಲಿ ಜಯಹೊಂದಿ ಬಂಗಾಲದಲ್ಲಿ ಇಂಗ್ಲಿಷರ ಅಧಿಕಾರವನ್ನು ಸ್ಥಿರಗೊಳಿಸಿದನು. **(ಉ) ದಾಭಾಡೆ ಗಾಯಕವಾಡ** ಇವರು ಬಾಳಾಜಿಯೊಡನೆ ಒಪ್ಪಂದ ಮಾಡಿಕೊಂಡರು. ದಾಬಾಡೆಯು ವಾರ್ಷೀಕವೇತನ ಪಡೆದು ಸುಮ್ಮನಾದನು ಗಾಯಕವಾಡನು ಗುಜರಾಥದ ಅರ್ಧ ಭಾಗವನ್ನು ತೆಗೆದುಕೊಂಡು ಪೇಶವೆಯು ಕರೆದಾಗ ಸೈನ್ಯದೊಂದಿಗೆ ನೆರವಾಗಲೊಪ್ಪಿದನು **(ಊ) ಸಲಾಬತಜಂಗನು** ಕ್ರಿ. ಶ. ೧೭೫೬ ರಲ್ಲಿ ಸಿಂಧಖೇಡ ಎಂಬಲ್ಲಿ ಮರಾಠರಿಂದ ಸೋತು ೨೫ ಲಕ್ಷವ ಸೀಮೆಯನ್ನು ಕೆಲವು ಕೋಟೆಗಳನ್ನು ಕೊಡಲೊಪ್ಪಿದನು ಆದರೆ ಅವನು ಮುಂದೆ ಅದರಂತೆ ನಡೆಯಲಿಲ್ಲ. ಆಗ ಪೇಶವೆಯು ಸದಾಶಿವರಾಯನನ್ನು ನಿಜಾಮನ ಮೇಲೆ

ಕಳುಹಿಸಿದನು. ಉದಗೀರದ ಬಳಿ ಕಾಳಗವಾಯಿತು ಕ್ರಿ. ಶ. **೧೭೬೦** ನಿಜಾಮನು ಸೋತು **ಅಶೀರಗಡ** ಮುಂತಾದ ಕೋಟೆಗಳನ್ನು ೬೦ ಲಕ್ಷದ ಸೀಮೆಯನ್ನು ಮರಾಠರಿಗೆ ಕೊಡಬೇಕಾಯಿತು.

೨. **ಉತ್ತರದ ರಾಜ್ಯವಿಸ್ತಾರ**.— ದಿಲ್ಲಿಯ ಬಾದಷಾಹನಾದ ಅಹಮ್ಮದಷಾಹನು ಅಯೋಧ್ಯೆಯ ಸುಭೇದಾರನಾದ **ಸಫದರಜಂಗ**ನನ್ನು ತನ್ನ ವಜೀರನನ್ನು ಮಾಡಿಕೊಂಡನು. ಆಗ ರೋಹಿಲರೂ ಪಠಾಣರೂ ಸಫದರಜಂಗನನ್ನು ವಿರೋಧಿಸಿ ಅಯೋಧ್ಯಾ ಪ್ರಾಂತದ ಮೇಲೆ ದಾಳಿ ಮಾಡಿದರು. ವಜೀರನು ಸಿಂಧೆ-ಹೋಳಕರರ ನೆರವನ್ನು ಕೇಳಲು ಅವರು ಹೋಗಿ ಫರುಕಾಬ್ಹಾದದ ಬಳಿಯಲ್ಲಿ ರೋಹಿಲರನ್ನೂ ಪಠಾಣರನ್ನೂ ಸೋಲಿಸಿದರು. ಮರಾಠರ ಈ ಪರಾಕ್ರಮವನ್ನು ಕಂಡು ಬಾದಷಾಹನು ಅವರಿಗೆ ಗಂಗಾ-ಯಮುನೆಗಳ ನಡು ಸೀಮೆಯನ್ನೂ ಮುಲ್ತಾನ, ಪಂಜಾಬ, ರೋಹಿಲಖಂಡ, ರಜಪುತಸ್ಥಾನ ಇವುಗಳ ಚೌಥಾಯಿಯ ಅಧಿಕಾರವನ್ನೂ ಕೊಟ್ಟನು. ಇದರಿಂದ ಬಾದಷಾಹನ ಹಗೆಗಳನ್ನು ತಡೆಯುವ ಕೆಲಸವು ಮರಾಠರ ಪಾಲಿಗೆ ಬಂತು.

ಇತ್ತ ರಘುನಾಥರಾಯನು ಕ್ರಿ ಶ. **೧೭೫೦** ರಲ್ಲಿ ಗುಜರಾಥದಲ್ಲಿದ್ದ ಬಂಡನ್ನು ಮುರಿದು ರಜಪುತಸ್ಥಾನದ ಮೇಲೆ ದೌಡುಮಾಡಿ ಅಲ್ಲಿಯ ಅರಸರಿಂದ ಕಪ್ಪನ್ನೆತ್ತಿಕೊಂಡು ದಕ್ಷಿಣಕ್ಕೆ ಬಂದನು. ಕ್ರಿ. ಶ. ೧೭೫೨ರಲ್ಲಿ ಉತ್ತರಕ್ಕೆ ಸಾಗಿ ಭರತಖಂಡಕ್ಕೆ ಮುತ್ತಿಗೆ ಹಾಗಿ **ಸುರಜನುಲ್ಲ**ನಿಂದ ೩೦ ಲಕ್ಷ ರೂ. ಗಳನ್ನು ತಕ್ಕೊಂಡು ಬಂದನು ಆಮೇಲೆ ದಿಲ್ಲಿಗೆ ಹೋಗಿ ಗಾಜೀಉದ್ದೀನನಿಗೆ ನೆರವಾಗಿ ಮರಾಠರ ವರ್ಚಸ್ಸನ್ನು ನೆಲೆಗೊಳಿಸಿದನು.

ರಘುನಾಥರಾಯನು ದಕ್ಷಿಣಕ್ಕೆ ಬಂದ ಬಳಿಕ ಗಾಜೀಉದ್ದೀನನನ್ನು ಮುರಿಯುವದಕ್ಕಾಗಿ ನಜೀಬಖಾನನು ಅಬ್ದಾಲಿಯನ್ನು ಕರೆಯಿಸಿದನು. ಆಗ ಅಬ್ದಾಲಿಯು ಖಿನೆಯ ಸರತಿ ಹಿಂದುಸ್ತಾನವನ್ನು ಸೇರಿ ಮುಲ್ತಾನ-ಲಾಹೋರ ವಶಮಾಡಿಕೊಂಡು ಸಮದಖಾನ ಎಂಬವನನ್ನು ಅಲ್ಲಿಯ ಅಧಿಕಾರಿಯನ್ನು ಮಾಡಿ ದಿಲ್ಲಿಗೆ ಸಾಗಿ ನಜೀಬನನ್ನು ವಜೀರನನ್ನಾಗಿ ಮಾಡಿದನು. ತನ್ನ ಮಗನಾದ ತೈಮೂರಷಾಹನನ್ನು ಪಂಜಾಬದ ಅಧಿಕಾರಿಯನ್ನಾಗಿ ಮಾಡಿ ತನ್ನ ದೇಶಕ್ಕೆ ಹೋದನು.

ಅಬ್ದಾಲಿಯು ಬಂದ ಸುದ್ದಿಯನ್ನು ಕೇಳಿ ಪೇಶವೆಯು ರಘುನಾಥರಾಯನನ್ನು ಮತ್ತೆ ಉತ್ತರಕ್ಕೆ ಕಳುಹಿದನು. ರಘುನಾಥರಾಯನು ಸಿಂಧೆ-ಹೋಳಕರನನ್ನು ಕೂಡಿಕೊಂಡು ದಿಲ್ಲಿಗೆ ಹೋದನು. ಅಲ್ಲಿಂದ ಸಮದಖಾನನನ್ನು ಸೋಲಿಸಿ ಮುಲ್ತಾನ-ಲಾಹೋರಗಳನ್ನು ವಶಮಾಡಿಕೊಂಡನು ರಘುನಾಥರಾಯನು ಬರುವ ಸುದ್ದಿಯನ್ನು ಕೇಳಿ ತೈಮೂರಷಾಹನು ಓಡಿಹೋದನು ಬಳಿಕ ರಘುನಾಥರಾಯನು ಅಟಕ ನದಿಯ ದಂಡೆಯಲ್ಲಿ ಮರಾಠರ ನಿಶಾನೆಯನ್ನು ನಿಲ್ಲಿಸಿದನು! ಈ ರೀತಿಯಿಂದ ರಘುನಾಥರಾಯನು ಸಿಂಧೆ-ಹೋಳಕರರ ಸಹಾಯದಿಂದ ರೋಹಿಲ, ಪರಾಣ, ರಜಪೂತ ಇವರನ್ನೆಲ್ಲ ಸೋಲಿಸಿ ಉತ್ತರ ಹಿಂದುಸ್ಥಾನದಲ್ಲಿ ಮರಾಠರ ಸಾಮ್ರಾಜ್ಯವನ್ನು ಹಬ್ಬಿಸಿದನು.

೧೨ನೆಯ ಪಾಠ

ಮರಾಠರ ಸಾಮ್ರಾಜ್ಯಕ್ಕೆ ಬಡಿದ ಸಿಡಿಲು, ಅಥವಾ ಪಾನಿಪತದ ಮೂರನೆಯ ಯುದ್ಧ. ಕ್ರಿ. ಶ. ೧೭೬೧.

೧. ಹೋಳಕರನ ಮನೆಮುರುಕತನ:— ಬಾಜೀರಾಯನ ಕಾಲದಿಂದ ಉತ್ತರದ ಕಾರಭಾರವೆಲ್ಲ ಸಿಂಧೆ ಹೋಳಕರರ ಕೈಯಲ್ಲಿತ್ತು. ಅದು ರಘುನಾಥರಾಯನ ಕೈಸೇರಿದಂದಿನಿಂದ ಅವರ ಹಿರಿಯತನವು ಮೊದಲಿನಂತೆ ನಡೆಯದಾಯಿತು. ಆಗ ಮಲ್ಹಾರರಾಯನು ಪೇಶವೆಯ ವಿಷಯವಾಗಿ ಅಸೂಯೆಪಡಹತ್ತಿದನು.

ಉತ್ತರದ ವಿಜಯವನ್ನು ಸಂಪಾದಿಸಿ ಮರಳಿ ಬಂದ ಬಳಿಕ ದತ್ತಾಜಿಯೂ ಜನಕೋಜಿಯೂ ಪೇಶವೆಯ ಹೇಳಿಕೆಯಂತೆ ನಜೀಬಖಾನನ ಪಾರುಪತ್ಯಕ್ಕಾಗಿ ಹೊರಟರು. ಅಷ್ಟರಲ್ಲಿ ಹೋಳಕರ ಮಲ್ಹಾರರಾಯನು ಅವರನ್ನು ಕಂಡು— ನಿಮ್ಮದು ಮರಳುಬುದ್ಧಿ; ಅಟಕದಿಂದ ರಾಮೇಶ್ವರದವರೆಗೆ ಪೇಶವೆಯರ ಅಧಿರಾಜ್ಯವಾಗಿದೆ; ನೀವು ನಜೀಬನನ್ನಷ್ಟು ಗೊತ್ತಿಗೆ ಹಚ್ಚಿದರೆ ಪೇಶವೆಯರನ್ನು ತಡೆದವರೇ ಇಲ್ಲ; ಆಮೇಲೆ ಅವರು ನಮ್ಮನ್ನು ಕೇಳುವರೇ! ಅಂತೇ ನಜೀಬನನ್ನು ಕಾಯ್ದುಕೊಂಡೇ ಕೆಲಸಮಾಡಿರಿ!!

ಎಂದು ಹೇಳಿದನು. ಜನಕೋಜಿಗೆ ಹೋಳಕರನ ಈ ವಿಚಾರವು ಸರಿಬರಲಿಲ್ಲ; ದತ್ತಾಜಿಯು ಮಾತ್ರ ಕಿವಿಸೋತನು.

೨. **ನಜೀಬಖಾನನ ಕಾರಸ್ಥಾನ** :— ಬಳಿಕ ದತ್ತಾಜಿಯು ನಜೀಬ ಖಾನನ ಪಾರಿಪತ್ಯ ಮಾಡುವದನ್ನು ಬಿಟ್ಟು ಅವನೊಡನೆ ಸಲಿಗೆಯನ್ನು ಬೆಳೆಯಿಸಹತ್ತಿದನು. ಧೂರ್ತನಾದ ನಜೀಬಖಾನನು ದತ್ತಾಜಿಯೊಡನೆ ಸವಿಮಾತಾಡುತ್ತ ತೋರಿಕೆಯಲ್ಲಿ ಮರಾಠರ ಸಹಾಯಕನಂತೆ ಇರಹತ್ತಿದನು ಮತ್ತು **ಸುಜಾಉದ್ದೌಲನ** ಕೂಡ ಒಳಸಂಚು ಮಾಡಿ, ಅಬದಾಲಿಯನ್ನು ಮತ್ತೆ ಕರೆಕಳುಹಿದನು. ದತ್ತಾಜಿಯು ಮಾತ್ರ ನಜೀಬಖಾನನನ್ನು ನಂಬಿ ಸುಮ್ಮನಿದ್ದನು ಇಷ್ಟರಲ್ಲಿ ಅಬದಾಲಿಯು ಪಂಜಾಬಕ್ಕೆ ಬಂದ ಸುದ್ದಿ ಹತ್ತಿತು. ಅದನ್ನು ಕೇಳಿದ ಕೂಡಲೆ ಅಯೋಧ್ಯೆಯ ವಜೀರನಾದ ಸುಜಾ ಉದ್ದೌಲನು ನಜೀಬನನ್ನು ಕೂಡಿಕೊಂಡನು. ದತ್ತಾಜಿಯು ನಜೀಬನ ಈ ಕಾರಸ್ಥಾನವನ್ನು ಕಂಡು ಬೆರಗಾದನು.

೩. **ದತ್ತಾಜಿಯ ಸಾಹಸ** :— ಬಳಿಕ ದತ್ತಾಜಿಯು ಹೋಳಕರನಿಗೂ ಗೋವಿಂದಪಂತ ಬುಂದೇಲಿಗೂ ತನ್ನ ನೆರವಿಗೆ ಬರಬೇಕೆಂದು ಹೇಳಿ ಕಳುಹಿ, ತಾನು ತಡಮಾಡದೆ ಅಬದಾಲಿಯನ್ನು ತಡೆಯುವದಕ್ಕಾಗಿ ಉತ್ತರಕ್ಕೆ ಹೊರಟನು ಅಬದಾಲಿಯು ಗಂಗಾ-ಯಮುನೆಗಳ + ಅಂತರ್ವೇದಿಯನ್ನು ಸೇರಿ ನಜೀಬ-ವಜೀರನನ್ನು ಕೂಡಿಕೊಂಡು ದಿಲ್ಲಿಯ ಕಡೆಗೆ ಬರಹತ್ತಿದನು. ಇದನ್ನು ಕಂಡು ದತ್ತಾಜಿಯು ದಿಲ್ಲಿಗೆ ಬಂದು ಗಾಜೀಉದ್ದೀನನನ್ನು ಕೂಡಿದನು. ಹೋಳಕರನೂ ಬುಂದೇಲಿಯೂ ಅವನ ನೆರವಿಗೆ ಬರಲಿಲ್ಲ! ಆದದರಿಂದ ದತ್ತಾಜಿಯೊಬ್ಬನೇ ಎದೆಗೊಡಬೇಕಾಯಿತು. ಅಬದಾಲಿಯ ಕಡೆಯ ಸೈನ್ಯವು ಯಮುನಾ ನದಿಯನ್ನು ದಾಟಹತ್ತಿರಲು ದತ್ತಾಜಿಯು ಒಮ್ಮೆಲೆ ಅದರ ಮೇಲೆ ಬಿದ್ದನು. ಎರಡೂ ಸೈನ್ಯಗಳ ನಡುವೆ ಭಯಂಕರ ಯುದ್ಧವಾಗಿ ದತ್ತಾಜಿಯು ಮರಣ ಹೊಂದಿದನು. ಆಗ ಅವನ ಸೈನ್ಯವು ಎದೆಗುಂದಿ ಹಿಮ್ಮೆಟ್ಟಿತು. ಅಬದಾಲಿಯು ಜಯಹೊಂದಿದ ಬಳಿಕ ತನ್ನ ಸಂಗಡಿಗರೊಂದಿಗೆ ಅಂತರ್ವೇದಿಯಲ್ಲಿ ತಳವೂರಿದನು.

+ ಎರಡು (ಗಂಗಾ-ಯಮುನಾ) ನದಿಗಳ ನಡುವಿನ ಸೀಮೆ.

೪. **ಸೇಡಿನ ಸಿದ್ಧತೆ**:— ಆಗ ಸದಾಶಿವರಾಯನು ಉದಗೀರದಿಂದ ಹೊರಟವನು ಇನ್ನೂ ಪುಣೆಗೆ ಬಂದಿದ್ದಿಲ್ಲ. ಮೈಸೂರ ಕಡೆಗೆ ಹೈದರನೂ ಅರ್ಕಾಟದ ಕಡೆಗೆ ಇಂಗ್ಲಿಷರೂ ಪ್ರಬಲರಾಗುತ್ತ ನಡೆದಿದ್ದರು. ಮರಾಠರ ಅಂಕಿತರಾಗದಿದ್ದವರು ಅವರಿಬ್ಬರು ಉದಗೀರದ ಯುದ್ಧದನಂತರ ಅವರ ಕಡೆಗೆ ಹೊರಳುವ ವಿಚಾರವು ಬಾಳಾಜಿಯದಿತ್ತು ಅಷ್ಟರಲ್ಲಿ ದತ್ತಾಜಿಯ ಮರಣದ ವಾರ್ತೆಯು ಪುಣೆಗೆ ಮುಟ್ಟಿತು! ಆದದರಿಂದ ಬಾಳಾಜಿಯು ದಕ್ಷಿಣದ ಕೆಲಸಗಳನ್ನು ಬದಿಗಿಟ್ಟು ಸದಾಶಿವರಾಯನನ್ನು ಕಾಣಹೊರಟನು. ಪಟದೂರಲ್ಲಿ ಎಲ್ಲರೂ ಕೂಡಿದರು. ಸದಾಶಿವರಾಯನೇ ಸೇನಾಪತಿಯಾಗಬೇಕೆಂದು ಗೊತ್ತಾಯಿತು ವಿಶ್ವಾಸರಾಯ, ಬಳವಂತರಾವ ಮೆಹೇಂದಳೆ, ಇಬ್ರಾಹಿಮಖಾನ, ಸಮಶೇರ ಬಹದ್ದೂರ, ದಮಾಜಿ ಗಾಯಕವಾಡ ಮೊದಲಾದ ವೀರರು ಸಂಗಡ ಹೊರಟರು. ಜಾನೋಜಿಯು ಮಾತ್ರ ಹೋಗಲಿಲ್ಲ! ಮರಾಠ ಸೈನ್ಯವು ಬರ್ಹಾಣಪುರ, ಗ್ವಾಲೇರಗಳ ಮೇಲಿಂದ ಆಗ್ರಾಕ್ಕೆ ಮುಟ್ಟಿತು. ಅಲ್ಲಿ ಜನಕೋಜಿಯೂ ಮಲ್ಹಾರರಾಯನೂ ಬಂದು ಕೂಡಿದರು. ಆಗ ಎಲ್ಲರೂ ಹಿಂದಿನ ಹಟಿತಟಿಗಳನ್ನು ಮರೆತು, ಒಮ್ಮನಸ್ಸಿನಿಂದ ಅಬದಾಲಿಯ ಸೇಡು ತೀರಿಸಲು ಸಜ್ಜಾದರು. ಅಬದಾಲಿಯ ಸೈನ್ಯಕ್ಕೆ ಕಾಳು ಕಡಿಗಳು ಸಿಗದಂತೆಯೂ ನಜೀಬಖಾನ, ಸುಜಾಉದ್ದೌಲ ಇವರ ನೆರವು ಅವನಿಗೆ ದೊರೆಯದಂತೆಯೂ ಮಾಡುವ ಕೆಲಸವು ಗೋವಿಂದಪಂತನಿಗೆ ಒಪ್ಪಿಸಲ್ಪಟ್ಟಿತು


೫. **ಸದಾಶಿವರಾಯನ ಪರಾಕ್ರಮ**:— ಅಮೇಲೆ ಸದಾಶಿವರಾಯನು ಉತ್ತರಕ್ಕೆ ಸಾಗಿ ದಿಲ್ಲಿಯನ್ನು ವಶಮಾಡಿಕೊಂಡು, ಅಲ್ಲಿ ತನ್ನ ಅಧಿಕಾರವನ್ನು ನೆಲೆಸಿದನು. ಯಮುನಾ ನದಿಯ ಆಚೆಯ ದಂಡೆಯಲ್ಲಿ ಇದ್ದ ಅಬದಾಲಿಯು ಸದಾಶಿವರಾಯನ ಈ ಪರಾಕ್ರಮವನ್ನು ಕಣ್ಣುಬಿಟ್ಟು ನೋಡುತ್ತಿದ್ದನು. ಆಗ ಸುಜಾಉದ್ದೌಲನಿಗೆ ತಾನು ಅಬದಾಲಿ-ನಜೀಬಖಾನರನ್ನು ಕೂಡಿದ್ದಕ್ಕೆ ಪಶ್ಚಾತ್ತಾಪವೆನಿಸಿತು ಅಬದಾಲಿಯು ಸಹ ಯುದ್ಧದ ವಿಚಾರವನ್ನು ಬಿಟ್ಟುಕೊಟ್ಟು, ಒಪ್ಪಂದದ ಮಾತು ತೆಗೆದನು ಆದರೆ ಇಷ್ಟಕ್ಕೆ ಬಿಟ್ಟರೆ ಇವರ ಕಾಟವು ತಪ್ಪದೆಂದು ಬಗೆದು ಸದಾಶಿವರಾಯನು ಒಪ್ಪಂದಕ್ಕೆ ಒಪ್ಪಲಿಲ್ಲ. ಮುಂದೆ ಅವನು ದಿಲ್ಲಿಯ ಉತ್ತರಕ್ಕಿರುವ **ಕುಂಜಪುರಕ್ಕೆ** ನಡೆದನು ಕುಂಜ-

ಪುರವು ಅಬದಾಲಿಯ ಠಾಣ್ಯವಾಗಿದ್ದು ಅವನು ಅಲ್ಲಿಯೇ ನದಿಯನ್ನು ದಾಟಿ ಅಂತರ್ವೇದಿಯನ್ನು ಸೇರಿದ್ದನು. ಸದಾಶಿವರಾಯನು ಅಲ್ಲಿಯ ಸರದಾರನಾದ ಸಮದಖಾನನನ್ನು ಸೋಲಿಸಿ, ಕುಂಜಪುರವನ್ನು ಕಸಿದುಕೊಂಡನು ಕ್ರಿ. ಶ ೧೭೬೦

ಗೋವಿಂದಪಂತನಿಂದ ಮಾತ್ರ ಯಾವ ಕೆಲಸವೂ ನೆರವೇರಲಿಲ್ಲ. **ಇಟಾವಾ-ಕಾನಪುರ**ಗಳಲ್ಲಿ ಅಬದಾಲಿಯ ಬಲವು ಕಡಿಮೆ ಇದ್ದರೂ ಇವನು ಪ್ರಯತ್ನ ಮಾಡದೆ ಸುಮ್ಮನಿದ್ದನು.

೬. **ಪಾನೀಪತದ ಯುದ್ಧ**:— ಅಬದಾಲಿಯ ದಾರಿಯನ್ನು ಕಟ್ಟು ಮಾಡಿದ ಬಳಿಕ, ಮರಾಠರ ಸೈನ್ಯವು ಅಂತರ್ವೇದಿಯನ್ನು ಸೇರುವ ಹವಣಿಕೆಯಲ್ಲಿತ್ತು. ಇಷ್ಟರಲ್ಲಿ ಅಬದಾಲಿಯು ಒಳ್ಳೆಯ ಧೈರ್ಯದಿಂದ **ಧಾಗಪತದ** ಬಳಿಯಲ್ಲಿ ಯುಮನಾ ನದಿಯನ್ನು ದಾಟಿ, ದಿಲ್ಲಿ-ಕುಂಜಪುರಗಳ ನಡುವೆ, **ಪಾನೀಪತದ** ಹತ್ತರ ತಳವೂರಿದನು ಇದರಿಂದ ದಿಲ್ಲಿಗೂ ಸದಾಶಿವರಾಯನಿಗೂ ಇರುವ ಸಂಬಂಧವು ಕಡಿಯಿತು. ಆಗ ಸದಾಶಿವರಾಯನು ಕುಂಜಪುರದಿಂದ ದಕ್ಷಿಣಕ್ಕೆ ಬಂದು. ಇಬ್ರಾಹಿಮಖಾನನ ಹೇಳಿಕೆಯಂತೆ ಪಾನೀಪತದ ನೆರೆಯಲ್ಲಿಯೇ ಕಂದಕವನ್ನು ಅಗಿಸಿ ತಳವೂರಿದನು. ಕ್ರಿ ಶ ೧೭೬೦ನೆಯ ವರ್ಷದ ಕೊನೆಯ ಎರಡು ತಿಂಗಳಲ್ಲಿ ಕೆಲವು ಸಣ್ಣ ಕದನಗಳಾಗಿ ಅವುಗಳಲ್ಲಿ ಮರಾಠರು ಜಯಹೊಂದಿದರೂ ಬಳವಂತರಾಯನು ಹತನಾದನು. ಮುಂದೆ ಮರಾಠರಿಗೆ ಕಾಳುಕಡಿಗಳ ಕೊರತೆಯಾಗಹತ್ತಿತು. ಗೋವಿಂದಪಂತನು ದಿಲ್ಲಿಯಿಂದ ಸದಾಶಿವರಾಯನ ನೆರವಿಗೆ ಹೊರಟೆರಲು, ಅಬದಾಲಿಯು ಅವನನ್ನು ತಡೆದನು; ಆ ಯುದ್ಧದಲ್ಲಿ ಗೋವಿಂದಪಂತನೂ ಬಿದ್ದುಹೋದನು. ಅನ್ನ ಸಾಮಗ್ರಿಯು ಇಲ್ಲದಂತಾಗಲು ಸೈನ್ಯದಲ್ಲಿ ಗೊಂದಲವೇಳುವ ಸಂಭವವುಂಟಾಯಿತು. ಆಗ ಸದಾಶಿವರಾಯನು ಇನ್ನು ತಡೆದು ಸಿಲ್ಲುವದರಲ್ಲಿ ಅರ್ಥವಿಲ್ಲೆಂದು ತಿಳಿದು ಯುದ್ಧವನ್ನು ಆರಂಭಿಸಿದನು. ಕ್ರಿ ಶ. ೧೭೬೧ರ ಜನೇವರಿ ೧೪ನೆಯ ತಾರೀಖಿನ ಬೆಳಗಿನಿಂದ ಯುದ್ಧವು ನಡೆಯಿತು. ಮಧ್ಯಾಹ್ನದ ವರೆಗೆ ಮರಾಠರಿಗೇ ಗೆಲವಾಗುವ ತೋರಿಕೆಯಿತ್ತು. ಆದರೆ ಮುಂದೆ ವಿಶ್ವಾಸರಾಯನು ಗುಂಡುತಾಗಿ ಮಡಿದನು ಇದನ್ನು ಕಂಡು ಸದಾಶಿವರಾಯನು ಹೌಹಾರಿ, ಆನೆಯನ್ನಿಳಿದು ಕುದುರೆಯನ್ನೇರಿ ಸೈನಿಕರನ್ನು ಹುರುಪುಗೊಳಿ-

ಸುತ್ತ ಕಾದತೊಡಗಿದನು. ಕೆಲಹೊತ್ತಿನ ಮೇಲೆ ಅವನೂ ಕಾಣದಾದನು! ಇಬ್ಬರೂ ಹಿರಿಯಾಳುಗಳು ಪಡಗಲು ಮರಾಠರು ಎದೆಗುಂದಿ ಕಾಲ್ದೆಗೆದರು ಜನಕೋಜಿಯ ಪರಾಕ್ರಮವು ವ್ಯರ್ಥವಾಯಿತು. ಅಬದಾಲಿಗೆ ಜಯವೊರೆಯಿತು.



ಪಾನೀಪತ ಯುದ್ಧದ ನಕಾಶ

ಯುದ್ಧವು ಮುಗಿದ ಬಳಿಕ ಅಬದಾಲಿಯ ಸವಾರರು ಮರಾಠರನ್ನು ಬೆನ್ನಟ್ಟಿ ಸಾವಿರಾರು ಜನರ ಕೊಲೆಮಾಡಿದರು. ಮಲ್ಹಾರರಾವ, ದಾಮಾಜಿ, ಮಹಾದಾಜಿ ಸಿಂಧೆ, ನಾನಾಫಡಣವೀಸ ಮೊದಲಾದವರು ಪಾರಾಗಿ ಬಂದರು. ಬಾಳಾಜಿಯು ಸದಾಶಿವರಾಯನ ನೆರವಿಗೆಂದು ಸೈನ್ಯದೊಂದಿಗೆ ಹೊರಟು ಗ್ವಾಲ್ಹೇರದ ವರೆಗೆ ಬಂದಿರಲು, ಪಾನೀಪತದ ಅಪಜಯದ ಭಯಂಕರವಾದ ಸುದ್ದಿಯು ಅವನಿಗೆ ತಿಳಿಯಿತು. ಆಗ ಅವನು ಎದೆಯೊಡಕೊಂಡು ಹಿಂದಿರುಗಿದನು. ಪುಣೆಗೆ ಬಂದ ತುಸು ದಿವಸಗಳಲ್ಲಿಯೆ ಮರಣಹೊಂದಿದನು.

ಬಾಳಾಜಿಯು ಶೂರನೂ ಮುತ್ಸದ್ದಿಯೂ ಶಾಂತಸ್ವಭಾವದವನೂ ಆಗಿದ್ದನು. ಇವನ ರಾಜ್ಯಕಾರಭಾರದ ಚುಚ್ಚುಕಟ್ಟುತನವು ಹೊಗಳುವಂಥದಿತ್ತು.

೭. **ಪಾನೀಪತದ ಅಪಜಯದ ಕಾರಣಗಳು**:— ೧. ಸಿಂಧೆ-ಹೋಳಕರರು ಮರಾಠರ ಸ್ನೇಹಿತರಾದ ರಜಪುತರನ್ನೂ ಜಾಟರನ್ನೂ ನೋಯಿಸಿದ್ದರಿಂದ ಅವರು ಮರಾಠರಿಗೆ ನೆರವಾಗಲಿಲ್ಲ. ೨. ಗೋವಿರದ ಪಂತನು ಯಾವ ಸಾಹಸವನ್ನೂ ಮಾಡದೆಯಿದ್ದದರಿಂದ ಅಬದಾಲಿ, ನಜೀಬ ಖಾನ, ಸುಜಾಉದ್ದೌಲ ಇವರ ಸಂಧಾನಕ್ಕೆ ಅನುಕೂಲವಾಯಿತು. ೩. ಸ್ವದೇಶದ ದಾರಿಯು ಕಟ್ಟಾದದ್ದರಿಂದ ಅಬದಾಲಿಯು ಯುದ್ಧಮಾಡದೆ ಪಾರಾಗುವಂತೆ ಇದ್ದಿಲ್ಲ. ಅವನು ಧೀರನೂ ಅನುಭವಿಕನೂ ಆಗಿದ್ದದರಿಂದ ಅತಿ ಸಾಹಸದಿಂದಲೂ ಯುಕ್ತಿಯಿಂದಲೂ ಕಾದಿದನು. ೪. ದಿಲ್ಲಿ-ಕುಂಜಪುರಗಳ ನಡುವೆ ಅಬದಾಲಿಯ ಸೈನ್ಯವು ಸಿಕ್ಕಿದ್ದರೂ ಮರಾಠರು ಅವನ ಮೇಲೆ ಒಮ್ಮೆಲೆ ಎರಡೂ ನಿಟ್ಟಿನಿಂದ ಏರಿಬರಲಿಲ್ಲ. (?) ೫. ಮರಾಠರಿಗೆ ಕಾಳುಕಡಿಗಳು ಸಿಗದಂತಾದದರಿಂದ ಅವರು ಅವಸರದಿಂದ ಯುದ್ಧವನ್ನು ಆರಂಭಿಸಬೇಕಾಯಿತು. ೬. ಯುದ್ಧಪದ್ಧತಿ ಮತ್ತು ಯುದ್ಧಸಾಧನ ಇವುಗಳಲ್ಲಿ ಕಾಲಕ್ಕೆ ತಕ್ಕ ಸುಧಾರಣೆಗಳನ್ನು ಮಾಡಲಿಲ್ಲ; ತೋಪು-ತುಬಾಕಿಗಳನ್ನು ಉಪಯೋಗಿಸಹತ್ತಿದ ಮೇಲೆಯೂ ಆನೆಯ ಮೇಲೆ ಕುಳಿತು ಯುದ್ಧ ಮಾಡುವದನ್ನು ಬಿಡಲಿಲ್ಲ. ೭. ಮರಾಠರು ತಮ್ಮ ಸೈನಿಕರಿಗೆ ತೋಪುಗಾರಿಕೆಯ ಶಿಕ್ಷಣವನ್ನು ಕೊಡಲಿಲ್ಲ. ಕೆಲಸಗಾರನಾಗಿ ಬಂದ *ಗಾರ್ದಿ ಇಬ್ರಾಹಿಮಖಾನನ ತೋಪುಗಳನ್ನು ನಂಬಿ ಬೈಲುಯುದ್ಧಕ್ಕೆ ನಿಂತದ್ದರಿಂದ ಸದಾಶಿವರಾಯನು ಅವನ ಹೇಳಿಕೆಯಂತೆಯೇ ನಡೆಯಬೇಕಾಯಿತು! ೮. ವಿಶ್ವಾಸರಾಯನು ಬಿದ್ದಕೂಡಲೆ ಸದಾಶಿವರಾಯನು ರಾವುತುಂಬಿ ಶತ್ರುಗಳ ಮೇಲೆ ಹರಿದುಹೋದದ್ದರಿಂದ ಮರಾಠರ ಸೈನ್ಯದಲ್ಲಿ ಅವ್ಯವಸ್ಥೆಯುಂಟಾಯಿತು.

೮. **ಪಾನೀಪತದ ಯುದ್ಧದ ಪರಿಣಾಮ**:— ೧. ದಕ್ಷಿಣದಲ್ಲಿಯ ಸುಮಾರು ೧॥ ಲಕ್ಷ ದಂಡಾಳುಗಳು ಈ ಯುದ್ಧದಲ್ಲಿ ಮಡಿದದರಿಂದ ಮುಂದಿನ

---

* 'ಗಾರ್ದಿ' ಎಂಬದು 'ಗಾರ್ಡ್ಸ್' ಎಂಬದರ ರೂಪವು. ಇಬ್ರಾಹಿಮಖಾನನೊಡನೆ ಬಂದು ಮರಾಠರಲ್ಲಿ ಕೆಲಸಕ್ಕೆ ಸಿಂತ ಮುಜಫರಖಾನ ಗಾರ್ದಿಯು ಸದಾಶಿವರಾಯನ ಕೊಲೆಯ ಪ್ರಯತ್ನ ಮಾಡಿದ್ದನು ! ಸರದೇಸಾಯಿ ಕೃತ ಹಿಂ. ಸ. ಇತಿಹಾಸ ಪು. ೧೩೮.

ಕಾಲದಲ್ಲಿ ಕರ್ತೃತ್ವಶಾಲಿಗಳ ಕೊರತೆಯೆನಿಸಿತು. ೨. ಮರಾಠರ ಸಾಮ್ರಾಜ್ಯ ವೃಕ್ಷವು ಸೊಕ್ಕಿನಿಂದ ಬೆಳೆಯುತ್ತಿರುವಾಗಲೇ, ಪಾನೀಪತದ ಸೋಲೆಂಬ ಸಿಡಿಲು ಬಡಿದು ಅದು ಮುಸ್ಪಾಯಿತು. ೩. ಅಬದಾಲಿಯು ಜಯಹೊಂದಿದರೂ ಅವನು ಅಳತೆಗೆಟ್ಟ ಹಾನಿಗೆ ಗುರಿಯಾದುದರಿಂದ ಈ ದೇಶದ ಗೊಡವೆಯನ್ನು ಬಿಟ್ಟು ಹೊರಟುಹೋದನು. ೪. ನಜೀಬಖಾನ, ಸುಜಾಉದ್ದೌಲ ಇವರ ಕನಸು ಬಯಲಾಗಿ, ದಿಲ್ಲಿಯ ಸಾಮ್ರಾಜ್ಯವು ಮಾತ್ರ ತೀರ ಬಲಗುಂದಿತು. ೫ ಮರಾಠರೂ ಮುಸಲ್ಮಾನರೂ ಅರಸೊತ್ತಿಗೆಗಾಗಿ ಕಾದಿಕಾದಿ ದಣಿದು ಇಬ್ಬರೂ ಹಣ್ಣಾದರು; ಫ್ರೆಂಚರನ್ನು ಮೂಲೆಗೊತ್ತಿ ಅದೇ ಪ್ರಬಲರಾಗುತ್ತಿದ್ದ ಇಂಗ್ಲಿಷರಿಗೆ ಮಾತ್ರ ರಾಜ್ಯಸ್ಥಾಪನೆಗೆ ಇಂಬುದೊರೆಯಿತು.

೧೩ನೆಯ ಪಾಠ

ಯುರೋಪದ ವ್ಯಾಪಾರಸ್ಥರ ಬರುವಿಕೆ

೧. **ಯುರೋಪದವರು ಹಿಂದುಸ್ಥಾನಕ್ಕೆ ಬರುವ ಹೊಸ ಮಾರ್ಗ ಹುಡುಕುವ ಪ್ರಯತ್ನ** :— ಹಿಂದುಸ್ಥಾನದಲ್ಲಿ ಹುಟ್ಟುವ ಬಟ್ಟೆ, ಸಕ್ಕರೆ, ಹರಳು, ಮಸಾಲೆ ಮುಂತಾವ ಪದಾರ್ಥಗಳು ಪ್ರಾಚೀನ ಕಾಲದಿಂದಲೂ ಯುರೋಪಖಂಡಕ್ಕೆ ಹೋಗುತ್ತಿದ್ದವು ಇತಲಿದೇಶದ † **ಜಿನೋವಾ, ವೇನೀಸ** ಪಟ್ಟಣಗಳು ಆ ಕಾಲದಲ್ಲಿ ವ್ಯಾಪಾರಕ್ಕಾಗಿ ಒಳ್ಳೆಯ ಹೆಸರಾಗಿದ್ದವು. ಅಲ್ಲಿಯ ವ್ಯಾಪಾರಸ್ಥರು ತುರ್ಕಸ್ತಾನ, ಏಶಿಯಾಮೈನರ, ಇರಾಣ, ಅರಬೀಸಮುದ್ರ ಇವುಗಳ ಮಾರ್ಗವಾಗಿ ಹಿಂದುಸ್ಥಾನಕ್ಕೆ ಬಂದು, ಇಲ್ಲಿಯ ಸರಕುಗಳನ್ನು ಕೊಂಡುಕೊಂಡು ಹೋಗುತ್ತಿದ್ದರು. ಈ ಕ್ರಮವು ಕ್ರಿ. ಶ. ೧೫ನೆಯ ಶತಕದ ಮಧ್ಯಕಾಲದ ವರೆಗೂ ನಡೆದಿತ್ತು. ಆದರೆ ಕ್ರಿ. ಶ. **೧೫೪೩**ನೆಯ ವರುಷ ತುರ್ಕರು **ಕಾನಸ್ತಾಂತಿನೋಪಲ**ವನ್ನು ಗೆದ್ದುಕೊಂಡು ಗ್ರೀಕ ರಾಜ್ಯವನ್ನು ಮುಳುಗಿಸಿ, ಇತಲಿಯಿಂದ ಇರಾಣದ ವರೆಗೆ ತಮ್ಮ ರಾಜ್ಯವನ್ನು ಹಬ್ಬಿಸಿದರು. ಯುರೋಪದವರು ಹಿಂದುಸ್ಥಾನಕ್ಕೆ ಬರುವ ದಾರಿಯಲ್ಲಿ ಹತ್ತುವ ತುರ್ಕಸ್ತಾನ ಮುಂತಾದ ದೇಶಗಳೆಲ್ಲ ಹೀಗೆ ಮುಸಲ್ಮಾನರ ವಶವಾದದರಿಂದ ಯುರೋಪ

† ಪುಟ ೪೮ರಲ್ಲಿಯ ನಕಾಶ ನೋಡು.

ಯುರೋಪ-ಹಿಂದುಸ್ಥಾನ
ಗಳ ಹಳೆ-ಹೊಸ ದಾರಿಗಳು
ಭೂಮಾರ್ಗ
ಜಲ-ಮಾರ್ಗ
ಹಿಂದೀ ಮಹಾ ಸಾಗರ

ದವರ ವ್ಯಾಪಾರಕ್ಕೆ ತೊಂದರೆಯುಂಟಾಗಹತ್ತಿತು. ಮುಂದೆ ಯುರೋಪಿಯನರಿಗೂ ಮುಸಲ್ಮಾನರಿಗೂ ಧರ್ಮಸಂಬಂಧವಾದ ಹಲವು ಯುದ್ಧಗಳಾದದರಿಂದ ಈ ತೊಂದರೆಯು ಮತ್ತಿಷ್ಟು ಹೆಚ್ಚಿತು. ಯುರೋಪದವರಿಗೆ ಹಿಂದುಸ್ಥಾನದ ಸರಕುಗಳಂತೂ ಬೇಕೇಬೇಕಿದ್ದವು. ಆದದರಿಂದ ಅವರು ಹಿಂದುಸ್ಥಾನಕ್ಕೆ ಬರುವ ಹೊಸ ಮಾರ್ಗವನ್ನು ಹುಡುಕಬೇಕಾಯಿತು.

ಯುರೋಪ ಖಂಡದಲ್ಲಿ ಉಂಟಾದ ಜಾಗ್ರತಿ:—ಆ ಕಾಲದಲ್ಲಿ ಮುದ್ರಣ ಕಲೆಯ ಮೂಲಕ ಯುರೋಪದವರ ಜ್ಞಾನವು ಹೆಚ್ಚುತ್ತ ನಡೆದಿತ್ತು. ಭೂಮಿಯು ಗೋಲರೂಪವಾಗಿರುವದೆಂಬ ಮಾತು ಅವರಿಗೆ ಗೊತ್ತಾಗಿತ್ತು. ಹೋಕಾಯಂತ್ರದ ಶೋಧವಾಗಿತ್ತು. ಮದ್ದು ಮಾಡುವ ರೀತಿಯು ಗೊತ್ತಾಗಿತ್ತು.

ಹೊಸ ಮಾರ್ಗ ಹುಡುಕಿದ್ದು: ಸ್ಪೇನ-ಪೋರ್ತುಗಾಲ ದೇಶಗಳ ಅರಸರು ನಾವಿಕವಿದ್ಯೆಗೆ ಹೆಚ್ಚಾಗಿ ಉತ್ತೇಜನವನ್ನಿತ್ತರು. ಅವರ ಸಹಾಯವನ್ನು ಪಡೆದ ನಾವಿಕರು ಹಿಂದುಸ್ಥಾನಕ್ಕೆ ಬರುವ, ನೀರುದಾರಿಯನ್ನು ಹುಡುಕತೊಡಗಿದರು. ಕಡೆಗೆ **ವಾಸ್ಕೋಡಿಗಾಮ** ಎಂಬ ಪೋರ್ತುಗೀಜ ನಾವಿಕನು ಆಫ್ರಿಕಾಖಂಡವನ್ನು ಸುತ್ತುಹಾಕಿ ಕ್ರಿ. ಶ ೧೪೯೮ರಲ್ಲಿ ಹಿಂದುಸ್ಥಾನದ ಪಶ್ಚಿಮತೀರದಲ್ಲಿರುವ ಕಲ್ಲೀಕೋಟೆ (ಕಾಲಿಕತ) ಎಂಬ ಬಂದರಕ್ಕೆ ಬಂದಿಳಿದನು ಅಂದಿನಿಂದ ಯುರೋಪ-ಹಿಂದುಸ್ಥಾನಗಳ ವ್ಯಾಪಾರವು ಈ ಹೊಸ ಮಾರ್ಗದಿಂದ ಸಾಗಹತ್ತಿತು

೨. ಪೋರ್ತುಗೀಜರ ಉತ್ಕರ್ಷ:— ವಾಸ್ಕೋಡಿಗಾಮನು ಕಲ್ಲೀಕೋಟೆಯ **ಸಾಮೋರಿನ** ಎಂಬ ಅರಸನಿಂದ ವ್ಯಾಪಾರದ ಅಧಿಕಾರವನ್ನು ಪಡೆದು ಅಲ್ಲಿ ವ್ಯಾಪಾರವನ್ನು ಆರಂಭಿಸಿದನು. ಆದರೆ ಈ ಮೊದಲು ಅಲ್ಲಿ ವ್ಯಾಪಾರ ಮಾಡುತ್ತಿದ್ದ + ಮೂರರೆಂಬ ಆಫ್ರಿಕದ ಮುಸಲ್ಮಾನ ವ್ಯಾಪಾರಸ್ಥರ ವಿರೋಧ ಮೂಲಕ ಪೋರ್ತುಗೀಜರಿಗೆ ತೊಂದರೆಯಾಗಹತ್ತಿತು. ಕಡೆಗೆ ಅವರು ಸಾಮೋರಿನನ ಆಶ್ರಯವನ್ನು ಬಿಟ್ಟು ಕೋಚೀನದ ಅರಸನಾದ **ತ್ರಿಮುಂಪಾರನ** ಆಸರವನ್ನು ಹೊಂದಿದರು. ಬಳಿಕ ಬರಬರುತ್ತ ಪೋರ್ತುಗೀಜರ ವ್ಯಾಪಾರವು ಬೆಳೆಯಹತ್ತಿತು

+ ಇವರೇ ಮುಂದೆ ಮಲಬಾರದಲ್ಲಿ ಸ್ಥಿರಗೊಂಡು ನಿಂತು 'ಮೋಪಲಾ' ಎಂಬ ಹೆಸರು ಹೊಂದಿದರು.

ಆಲ್ಮಿಡಾ:— ಕ್ರಿ. ಶ. ೧೫೦೫–೧೫೦೯. ಪೋರ್ತುಗೀಜರ ವ್ಯಾಪಾರವು ಬೆಳೆಯುತ್ತ ನಡೆದಂತೆ ಅವರು ತಮ್ಮ ಸ್ಥಾನಗಳನ್ನು ರಕ್ಷಿಸಿಕೊಳ್ಳಬೇಕಾಯಿತು. ಅದಕ್ಕಾಗಿ ಅವರು **ಆಲ್ಮಿಡಾ** ಎಂಬವನನ್ನು ಮೊದಲನೆಯ ಗವ್ಹರ್ನರನನ್ನು ನಿಯಮಿಸಿದರು. ಇವನು ಮೂರರ ಬಲವನ್ನು ತಗ್ಗಿಸಿ ಬಲವಾದ ಒಂದು ಹಡಗುಪಡೆಯನ್ನು ಸಜ್ಜುಗೊಳಿಸಿದನು.

ಅಲ್ಬುಕರ್ಕ:— ಕ್ರಿ. ಶ. ೧೫೦೯–೧೫೧೫. **ಅಲ್ಬುಕರ್ಕ**ನು ಪೋರ್ತುಗೀಜರ ಎರಡನೆಯ ಗವ್ಹರ್ನರನು. ಇವನು ಈ ದೇಶದ ಅರಸರ ಜಗಳದಲ್ಲಿ ಸೇರಿ ರಾಜ್ಯವನ್ನು ಸ್ಥಾಪಿಸುವ ಪ್ರಯತ್ನ ಮಾಡಿದನು ಕ್ರಿ. ಶ. ೧೫೧೦ರಲ್ಲಿ ವಿಜಾಪುರದವರಿಂದ ಗೋವೆಯನ್ನು ಗೆದ್ದುಕೊಂಡು ಅದನ್ನು ಪೋರ್ತುಗೀಜರ ರಾಜಧಾನಿಯನ್ನು ಮಾಡಿದನು ಯುದ್ಧಕಲೆಯ ಶಿಕ್ಷಣವನ್ನು ಕೊಟ್ಟು ಈ ದೇಶದ ಜನರ ಸೈನ್ಯವನ್ನು ಸಿದ್ಧಪಡಿಸಿದನು ಇವನ ಕಾಲದಲ್ಲಿ ಸುರತ, ವಸಯಿ ಠಾಣೆ, ಮುಂಬಯಿ, ಮಂಗಳೂರ, ಕೋಲಂಬೋ ಇವು ಇವರ ಸ್ಥಾನಗಳಾಗಿದ್ದವು.

೩. ಪೋರ್ತುಗೀಜರ ಅವನತಿಯ ಕಾರಣಗಳು:—ಕ್ರಿ ಶ. ೧೫೦೦ರಲ್ಲಿ ಪೋರ್ತುಗಾಲವು ಸ್ಪೇನದವರ ವಶವಾವದರಿಂದ ಸ್ವದೇಶದ ಸಹಾಯವು ಹಿಂದುಸ್ಥಾನದಲ್ಲಿಯ ಪೋರ್ತುಗೀಜರಿಗೆ ಸಾಕಷ್ಟು ಸಿಗದಾಯಿತು ಅಲ್ಬುಕರ್ಕನ ತರುವಾಯ ಸಮರ್ಥರಾದ ಗವ್ಹರ್ನರರು ಯಾರೂ ಬರಲಿಲ್ಲ. ಪೋರ್ತುಗೀಜರು ತಮ್ಮ ಏರಿಕೆಯ ಕಾಲದಲ್ಲಿ ಧರ್ಮಪ್ರಸಾರಕ್ಕಾಗಿ ಒತ್ತಾಯದ ಮಾರ್ಗವನ್ನು ಅವಲಂಬಿಸಿದ್ದರಿಂದ ಈ ದೇಶದ ಜನರು ಅವರನ್ನು ದ್ವೇಷಿಸಹತ್ತಿದರು. ಕ್ರಿ. ಶ. **೧೬೦೪**ರಲ್ಲಿ ಆಂಬೋಯನಾ ದ್ವೀಪವನ್ನು ಡಚ್ಚರು ಕಸಿದುಕೊಂಡದರಿಂದ ಅತ್ತಕಡೆಯ ಪೋರ್ತುಗೀಜರ ವ್ಯಾಪಾರವು ಕುಗ್ಗಿತು. ಹಡಗುಪಡೆಯ ಸಾಮರ್ಥ್ಯದ ಹೆಮ್ಮೆಯಿಂದ ಜಹಾಂಗೀರನ ಸಂಬಂಧವುಳ್ಳ ಒಂದು ಹಡಗವನ್ನು ಇವರು ಸುಲಿದುಕೊಂಡರು. ಆದದರಿಂದ ಅವನು ಸಿಟ್ಟಾಗಿ ಇವರನ್ನು ಮುರಿಯುವ ಪ್ರಯತ್ನ ಮಾಡಹತ್ತಿದನು. ಕ್ರಿ. ಶ. **೧೬೧೭**ರಲ್ಲಿ ಇಂಗ್ಲಿಷರು ಸುವಾಲಿ ಎಂಬಲ್ಲಿ ಪೋರ್ತುಗೀಜರನ್ನು ಸೋಲಿಸಿದರು. ಬರಬರುತ್ತ ಪೋರ್ತುಗೀಜರ ಸ್ಥಾನಗಳು ಕೈಬಿಡಹತ್ತಿದವು. ಕ್ರಿ. ಶ. **೧೬೨೯**ರಲ್ಲಿ ಸಾಷ್ಟೀ ಪ್ರಾಂತವು ಪೇಶ್ವೆಯವರ ವಶವಾದ ಬಳಿಕ ಉತ್ತರ ಕೊಂಕಣದಿಂದ ಇವರು

ಕಾಲ್ದೆಗೆದರು. **ಗೋವೆ, ದೀವ, ದಮನ** ಇವು ಮಾತ್ರ ಇಂದಿಗೂ ಪೋರ್ತುಗೀಜರ ಅಧೀನದಲ್ಲಿರುವವು.

೪. **ಡಚ್ಚರ ವೃತ್ತಾಂತ**:— ಕ್ರಿ ಶ. **೧೬೦೨**ರಲ್ಲಿ ಡಚ್ಚರು ತಮ್ಮ ಮೊಂದು ಸಂಘವನ್ನು ಸ್ಥಾಪಿಸಿ ಸಮುದ್ರದ ಮೇಲೆ ವರ್ಚಸ್ಸನ್ನು ನೆಲಸಿ ಬರಬರುತ್ತ ಪೋರ್ತುಗೀಜರ ವ್ಯಾಪಾರವನ್ನು ಸೆಳೆದುಕೊಂಡರು ಒಳಿಕ **ಸುಮಾತ್ರಾ, ಜಾವಾ** ಮೊದಲಾದ ನಡುಗಡ್ಡೆಗಳನ್ನು ಗೆದ್ದುಕೊಂಡು ಪೂರ್ವದ ಕಡೆಯ ವ್ಯಾಪಾರದಿಂದ ವಿಪುಲವಾದ ಲಾಭವನ್ನು ಹೊಂದಹತ್ತಿದರು ಕ್ರಿ ಶ **೧೬೧೧**ರಲ್ಲಿ ಇವರು ಪೋರ್ತುಗೀಜರ ಹಡುಗುಪಡೆಯನ್ನು ಸೋಲಿಸಿ ಅವರ ಸುರತದ ಸ್ಥಾನವನ್ನು ತೆಗೆದುಕೊಂಡರು. **ನಾಗಾಪಟ್ಟಣ, ಚಿನಸುರಾ, ಸಿಲೋನ, ತ್ರಿಂಕೋಮಾಲಿ** ಇವು ಡಚ್ಚರ ವ್ಯಾಪಾರದ ಸ್ಥಾನಗಳಾಗಿದ್ದವು. ಕ್ರಿ. ಶ **೧೬೩೩**ರಲ್ಲಿ ಡಚ್ಚರಿಗೂ ಇಂಗ್ಲಿಷರಿಗೂ ಜಗಳವಹತ್ತಿದಾಗ ಡಚ್ಚರು **ಅಂಬೋಯನಾ**ದಲ್ಲಿ ಇಂಗ್ಲಿಷ ವ್ಯಾಪಾರಿಗಳನ್ನು ಕೊಲೆಗೊಳಿಸಿದರು. ಅಂದಿನಿಂದ ಇಂಗ್ಲಿಷರು ಅತ್ತಕಡೆಯ ತಮ್ಮ ವ್ಯಾಪಾರವನ್ನು ನಿಲ್ಲಿಸಿ ಹಿಂದುಸ್ಥಾನದಲ್ಲಿಯೆ ಸ್ಥಿರಗೊಳ್ಳುವ ಪ್ರಯತ್ನ ನಡೆಯಿಸಿದರು. ಕ್ರಿ. ಶ. **೧೬೫೨**ರಲ್ಲಿ ಯುರೋಪಖಂಡದಲ್ಲಿ ಇಂಗ್ಲಿಷರು ಡಚ್ಚರನ್ನು ಸೋಲಿಸಿದಂದಿನಿಂದ ಡಚ್ಚರ ಕಸುವು ಕುಂದಹತ್ತಿತು. ಹಿಂದುಸ್ಥಾನದಲ್ಲಿಯ ಡಚ್ಚರ ಸ್ಥಾನಗಳೆಲ್ಲ ಇಂಗ್ಲಿಷರ ವಶವಾದವು ಸುಮಾತ್ರಾ ಮೊದಲಾದ ಪೂರ್ವದ ನಡುಗಡ್ಡೆಗಳು ಮಾತ್ರ ಇಂದಿಗೂ ಡಚ್ಚರ ವಶದಲ್ಲಿವೆ

೧೪ನೆಯ ಪಾಠ

ಇಂಗ್ಲಿಷರೂ ಫ್ರೇಂಚರೂ

೧. **ಇಂಗ್ಲಿಷರ ಬರುವಿಕೆ**:— ಇಂಗ್ಲಂಡದ "**ಈಸ್ಟ ಇಂಡಿಯಾ ಕೆಂಪನಿ**" ಎಂಬ ವ್ಯಾಪಾರದ ಸಂಘದವರು ಕ್ರಿ. ಶ. **೧೬೦೦** ರಲ್ಲಿ ತಮ್ಮ ದೇಶದ ರಾಣಿಯಾದ **ಎಲಿಜಾಬೇಥ**ಳಿಂದ ಪೂರ್ವದ ಕಡೆಯ ದೇಶದ ಸಂಗಡ ವ್ಯಾಪಾರಮಾಡುವ ಅಪ್ಪಣೆಯನ್ನು ಪಡೆದರು. ಇವರು ಮೊದಲು **ಮಲಕ್ಕಾ** ಮುಂತಾದ ದ್ವೀಪಗಳ ಸಂಗಡ ವ್ಯಾಪಾರ ಮಾಡಲಾರಂಭಿಸಿದರು. ಆದರೆ

ಪೋರ್ತುಗೀಜರೂ ಡಚ್ಚರೂ ಇಂಗ್ಲಿಷ ವ್ಯಾಪಾರಿಗಳಿಗೆ ವಿರೋಧಿಗಳಾದದರಿಂದ ಇವರು ಅತ್ತಕಡೆಯ ವ್ಯಾಪಾರವನ್ನು ಬಿಟ್ಟುಕೊಟ್ಟು, ಹಿಂದುಸ್ಥಾನದಲ್ಲಿಯ ತಮ್ಮ ವ್ಯಾಪಾರವನ್ನೇ ಹೆಚ್ಚಿಸಹತ್ತಿದರು. ಕ್ರಿ. ಶ ೧೬೦೮ರಲ್ಲಿ ಕ್ಯಾಪ್ಟನ್ **ಹಾಕಿನ್ಸ** ಎಂಬ ಗೃಹಸ್ಥನು ಬರುವ ಸರಕಿನ ಮೇಲೆ ನೂರಕ್ಕೆ ಮೂರುವರೆಯಂತೆ ಸುಂಕವನ್ನು ಕೊಡಲೊಪ್ಪಿ **ಜಹಾಂಗೀರ** ಬಾದಷಾಹನಿಂದ, ಸುರತದಲ್ಲಿ ವ್ಯಾಪಾರಮಾಡುವ ಅಧಿಕಾರವನ್ನು ಪಡೆದನು. ಕ್ರಿ. ಶ. ೧೬೧೫ರಲ್ಲಿ ಇಂಗ್ಲಂಡ ಅರಸನಾದ **ಜೇಮ್ಸ**ನು ಸರ್ **ಥಾಮಸ್ ರೋ** ಎಂಬ ವಕೀಲನನ್ನು ಕಾಣಿಕೆಯೊಂದಿಗೆ ಜಹಾಂಗೀರನ ಓಲಗಕ್ಕೆ ಕಳುಹಿದನು. ರೋನ ಪ್ರಯತ್ನದಿಂದ ಹಿಂದುಸ್ಥಾನದ ದಂಡೆಗುಂಟ ವ್ಯಾಪಾರ ಮಾಡುವ ಅಧಿಕಾರವು ಕಂಪನಿಗೆ ದೊರೆಯಿತು.

ವಖಾರಗಳನ್ನು ಸ್ಥಾಪಿಸಿದ್ದು :— ಮುಂದಿನ ನೂರು ವರ್ಷಗಳಲ್ಲಿ ಕಂಪನಿಯವರು ಹಿಂದುಸ್ಥಾನದ ಪೂರ್ವ-ಪಶ್ಚಿಮ ದಂಡೆಗಳಲ್ಲಿ ಅಲ್ಲಲ್ಲಿ ತಮ್ಮ ವಖಾರುಗಳನ್ನು ಸ್ಥಾಪಿಸಿದರು. ಅವುಗಳಲ್ಲಿ **ಸುರತ, ಪೋರ್ಟಸೆಂಟ ಜಾರ್ಜ** (ಮದ್ರಾಸ) **ಪೋರ್ಟ ಉಯಿಲ್ಯಮ್** (ಹುಗಳಿ) ಇವು ಮುಖ್ಯವಾಗಿದ್ದವು. ಕ್ರಿ. ಶ. ೧೬೬೧ರಲ್ಲಿ ಪೋರ್ತುಗಾಲದ ರಾಜನು ತನ್ನ ಮಗಳನ್ನು ಇಂಗ್ಲಂಡದ ೨ನೆಯ ಚಾರ್ಲಸನಿಗೆ ಕೊಟ್ಟಾಗ ಮುಂಬಯಿ ನಡುಗಡ್ಡೆಯನ್ನು ಕಾಣಿಕೆಯಾಗಿ ಕೊಟ್ಟನು. ಮುಂದೆ ಚಾರ್ಲಸನು ಅದನ್ನು ವರ್ಷಕ್ಕೆ ೧೦ ಪೌಂಡು ಭಾಡಿಗೆಯಿಂದ ಕಂಪನಿಗೆ ಕೊಟ್ಟನು. ಕ್ರಿ ಶ. ೧೬೮೭ ರಲ್ಲಿ ಸುರತವನ್ನು ಬಿಟ್ಟು ಕಂಪನಿಯವರು ಮುಂಬಯಿಗೆ ಬಂದು, ಅದನ್ನೇ ವ್ಯಾಪಾರದ ಮುಖ್ಯ ಸ್ಥಳವನ್ನು ಮಾಡಿದರು.

ಯುನಾಯಿಟೆಡ್ ಈಸ್ಟ ಇಂಡಿಯಾ ಕಂಪನಿಯ ಸ್ಥಾಪನೆ :— ಕಂಪನಿಗಾಗುವ ಲಾಭವನ್ನು ಕಂಡು, ಉಳಿದವರು ತಾವೂ ವ್ಯಾಪಾರ ಮಾಡಬೇಕೆಂದು ಪ್ರಯತ್ನಿಸಹತ್ತಿದರು. ಆದುವರೆಗೆ ಹಿಂದುಸ್ಥಾನದ ಕೂಡ ಈಸ್ಟ ಇಂಡಿಯಾ ಕಂಪನಿಯವರು ಮಾತ್ರ ವ್ಯಾಪಾರ ಮಾಡಬೇಕೆಂಬ ನಿರ್ಬಂಧವಿತ್ತು. ಆದು ತಪ್ಪಿ ಬೇಕಾದವರು ವ್ಯಾಪಾರ ಮಾಡಬಹುದೆಂದು ಗೊತ್ತಾಯಿತು. ಕೂಡಲೆ ಬೇರೊಂದು ಕಂಪನಿಯು ಹುಟ್ಟಿ ಹಿಂದುಸ್ಥಾನದ ಕೂಡ ಅದರ ವ್ಯಾಪಾರವು ಆರಂಭವಾಯಿತು. ಎರಡೂ ಕಂಪನಿಗಳು ಏರಾಟಿ

ಕೆಯಿಂದ ತಮ್ಮ ಸರಕುಗಳನ್ನು ಮಾರಹತ್ತಿದ್ದರಿಂದ ಲಾಭದ ಮಾನವು ಕಡಿಮೆಯಾಗಹತ್ತಿತು. ಈ ಕ್ರಮವು ಕೆಲವು ವರ್ಷ ನಡೆದ ಬಳಿಕ ಒಕ್ಕಟ್ಟಿನಿಂದ ವ್ಯಾಪಾರ ಮಾಡುವದೇ ಕ್ಷೇಮವೆಂದು ಮನಗಂಡು, ಎರಡೂ ಕಂಪನಿಯವರು ಒಟ್ಟಾಗಿ '**ಯುನಾಯಿಟೆಡ್ ಈಸ್ಟ ಇಂಡಿಯಾ ಕಂಪನಿ**' ಎಂಬ ಹೆಸರಿನಿಂದ ವ್ಯಾಪಾರ ಮಾಡಹತ್ತಿದರು. ಕ್ರಿ ಶ. ೧೭೦೨. ಅಂದಿನಿಂದ ಇಂಗ್ಲಿಷರು ದಿನದಿನಕ್ಕೆ ಏಳ್ಗೆಯನ್ನು ಹೊಂದಹತ್ತಿದರು.

ಬಂಗಾಲದಲ್ಲಿ ಕಂಪನಿಯ ಏಳ್ಗೆ:-- ೧೭೧೫ ರಲ್ಲಿ ಬಂಗಾಲದ ಮೊಗಲ ಸುಭೇದಾರನಾದ **ಮುರ್ಶಿದ ಕುಲೀಖಾನನ** ವಿರುದ್ಧವಾಗಿ ದೂರಿಕೊಳ್ಳಲಿಕ್ಕೆಂದು ಕಂಪನಿಯವರು ಬಾದಷಹನಲ್ಲಿಗೆ ಕೆಲ ವಕೀಲರನ್ನು ಕಳುಹಿದರು. ಅವರು ದಿಲ್ಲಿಗೆ ಹೋದಾಗ **ಫರಕ್‌ಶಿಯರ**ನಿಗೆ ಜಡ್ಡಾಗಿತ್ತು. ವಕೀಲರಲ್ಲೊಬ್ಬನಾದ **ಸರ್ಜನ್ ಹ್ಯಾಮಿಲ್ಟನನ** ಉಪಾಯದಿಂದ ಬಾದಷಹನಿಗೆ ಗುಣವಾಗಲು ಅವನು ಇಂಗ್ಲಿಷ ಕಂಪನಿಯವರಿಗೆ ೩೮ ಊರುಗಳನ್ನು ಕೊಟ್ಟನಲ್ಲದೆ, ಅವರ ಸರಕಿನ ಮೇಲಿನ ಸುಂಕವನ್ನು ತೆಗೆಮುಹಾಕಿದನು. ಅಂದಿನಿಂದ ಬಂಗಾಲದಲ್ಲಿ ಕಂಪನಿಯವರು ಪ್ರಬಲರಾಗಹತ್ತಿದರು.

೨. ಫ್ರೇಂಚರ ವೃತ್ತಾಂತ:— ಕ್ರಿ. ಶ. ೧೬೬೦ ರಲ್ಲಿ '**ಫ್ರೇಂಚ ಈಸ್ಟ ಇಂಡಿಯಾ ಕಂಪನಿ**'ಯು ಉಂಟಾಗಿ ಅದು ಹಿಂದುಸ್ಥಾನದ ಕೂಡ ವ್ಯಾಪಾರ ಮಾಡಹತ್ತಿತು ಫ್ರೇಂಚರಿಗೆ ಆರಂಭದಿಂದಲೇ ರಾಜಾಶ್ರಯವಿದ್ದ ದರಿಂದ, ಉಳಿದವರಿಗಿಂತ ಶೀಘ್ರವಾಗಿ ಅವರ ವ್ಯಾಪಾರವು ಹೆಚ್ಚಿತು. **ಸುರತ, ಮಚ್ಛಲೀಪಟ್ಟಣ, ಪಾಂಡೀಚೇರಿ, ಚಂದ್ರನಗರ, ಮಾಹಿಮ, ಕಾರೀಕೆಲ್** ಮುಂತಾದವು ಫ್ರೇಂಚರ ವ್ಯಾಪಾರದ ಸ್ಥಳಗಳಾಗಿದ್ದವು. ಫ್ರೇಂಚ ಗವ್ಹರ್ನರನಾದ **ಮೊದಲನೆಯ ಮಾರ್ಟಿನನು** ಕ್ರಿ ಶ. ೧೬೭೪ರಲ್ಲಿ ಪಾಂಡೀಚೇರಿಯನ್ನು ಫ್ರೇಂಚರ ಮುಖ್ಯ ಪಟ್ಟಣವನ್ನು ಮಾಡಿ ಅದನ್ನು ಚೆನ್ನಾಗಿ ಬಲಿಸಿದನು ಮತ್ತು **ಶಿವಾಜಿ**ಯು ಕರ್ನಾಟಕದ ಮೇಲೆ ದಂಡೆತ್ತಿ ಬಂದಾಗ ಅವನೊಡನೆ ಸಖ್ಯವನ್ನು ಬೆಳೆಸಿ, ವ್ಯಾಪಾರದ ಅನುಕೂಲತೆಗಳನ್ನು ಪಡೆದನು. ಚಂದ್ರನಗರದ ವಖಾರು ಇವನ ಕಾಲದಲ್ಲಿಯೇ, ಕ್ರಿ. ಶ. ೧೬೯೦-೯೨ರ ವರೆಗೆ ಸ್ಥಾಪಿಸಲ್ಪಟ್ಟಿತು. ಮೂನೆಯ ಗವ್ಹರ್ನರನಾದ **ಲೆನ್ವಾರನು** ಕಂಪ-

ನಿಯ ಕಾರಭಾರದಲ್ಲುಂಟಾದ ಅವ್ಯವಸ್ಥೆಯನ್ನು ಇಲ್ಲದಂತೆ ಮಾಡಿ ವ್ಯಾಪಾರವನ್ನು ಬೆಳಸಿದನು.

ಇವನ ತರುವಾಯ, ಕ್ರಿ ಶ. ೧೭೩೫-೪೦ ರವರೆಗೆ **ಡ್ಯೂಮಾಸನು** ಸನೆಯ ಗವ್ಹರ್ನರನಾದನು ಇವನು ಜಾಣನೂ ಸುಸ್ವಭಾವವುಳ್ಳವನೂ ಆಗಿದ್ದು ಅರ್ಕಾಟದ ನವಾಬನನ್ನು ಒಲಿಸಿಕೊಂಡು ಫ್ರೆಂಚರ ಮಹತ್ವವನ್ನು ಹೆಚ್ಚಿಸಿದನು ಇವನು ನವಾಬನಿಗೆ ಧನಸಹಾಯಮಾಡಿ, ಅವನಿಂದ ನಾಣ್ಯಗಳನ್ನು ಮುದ್ರಿಸುವ ಅಧಿಕಾರವನ್ನೂ **ಕಾರಿಕೆಲ್** ಬಂದರವನ್ನೂ ಸಂಪಾದಿಸಿದನು. ಕ್ರಿ. ಶ. **೧೭೩೯** ರಲ್ಲಿ ರಘೂಜಿ ಭೋಸಲೆಯು ಅರ್ಕಾಟದ ಮೇಲೆ ಸಾಗಿಬಂದು **ದೋಸ್ತ್‌ಅಲಿ**ಯನ್ನು ಕೊಲ್ಲಲು, ಅವನ ಅಳಿಯ **ಚಂದಾಸಾಹೇಬನು** ತನ್ನ ಜನರೊಂದಿಗೆ, ಪಾಂಡೀಚೇರಿಗೆ ಹೋಗಿ ಡ್ಯೂಮಾಸನ ಆಶ್ರಯದಲ್ಲಿರಹತ್ತಿದನು

ಡ್ಯೂಮಾಸನ ತರುವಾಯ ಕ್ರಿ. ಶ. **೧೭೪೧** ರಲ್ಲಿ ಇತಿಹಾಸ ಪ್ರಸಿದ್ಧನಾದ **ಡ್ಯೂಪ್ಲೆಯು** ಗವ್ಹರ್ನರನಾದನು. " ಹಿಂದುಸ್ಥಾನದ ಜನರಲ್ಲಿ ಒಕ್ಕಟ್ಟಿಲ್ಲ ಸಂಬಳ ಕೊಟ್ಟವರ ಊಳಿಗ ಮಾಡಲು ಇಲ್ಲಿ ಬೇಕಾದಷ್ಟು ಜನರು ಸಿಗುವರು; ಈ ದೇಶದ ಅರಸರು ತಮ್ಮ ತಮ್ಮೊಳಗೆ ಜಗಳಾಡುತ್ತಿರುವರು. ಯುದ್ಧಕಲೆಯ ಶಿಕ್ಷಣವನ್ನು ಕೊಟ್ಟರೆ ಉತ್ತಮ ಸೈನಿಕರಾಗಲು ಈ ಜನರು ತಕ್ಕವರಿರುವರು; ಅಮೇರಿಕೆ-ಆಫ್ರಿಕೆಗಳ ನಿವಾಸಿಗಳ ಹಾಗೆ ಕಾಡುಸ್ಥಿತಿಯವರೂ ಪುಕ್ಕರೂ ಇವರಲ್ಲ; ಫ್ರೆಂಚ ರಾಷ್ಟ್ರವು ತಕ್ಕ ಸಹಾಯವನ್ನು ಮಾಡಿದರೆ, ಹಿಂದೀಯರ ನೆಲವಿನಿಂದಲೇ ಹಿಂದುಸ್ಥಾನದಲ್ಲಿ ಫ್ರೆಂಚರ ಸಾಮ್ರಾಜ್ಯವನ್ನು ಸ್ಥಾಪಿಸಲಿಕ್ಕಾಗುವದು. " ಎಂಬೀ ತನ್ನ ಅಭಿಪ್ರಾಯವನ್ನು ಡ್ಯೂಪ್ಲೆಯು ವ್ಯಕ್ತಪಡಿಸಿದನು.

ಆಗ ಫ್ರಾನ್ಸಿನ ಪರಿಸ್ಥಿತಿಯು ನೆಟ್ಟಗಿದ್ದಿಲ್ಲ; ಆದದರಿಂದ ಹಿಂದುಸ್ಥಾನದ ಕಡೆಗೆ ಲಕ್ಷ್ಯಕೊಡುವದು ಅದಕ್ಕೆ ಸಾಧಿಸಲಿಲ್ಲ. ಹೀಗಿದ್ದರೂ ಡ್ಯೂಪ್ಲೆಯು ತನ್ನ ಸ್ವಂತದ ಸಂಪತ್ತನ್ನೆಲ್ಲ ಸೂರೆಮಾಡಿ, ಹಿಂದುಸ್ಥಾನದಲ್ಲಿ ಫ್ರೆಂಚರ ಸಾಮ್ರಾಜ್ಯವನ್ನು ಸ್ಥಾಪಿಸುವದಕ್ಕಾಗಿ ಬಹಳವಾಗಿ ಹೆಣಗಿದನು. ಈ ಕೆಲಸದಲ್ಲಿ ಇವನ ಹೆಂಡತಿಯು ಇವನಿಗೆ ಬಹಳ ನೆರವಾದಳು. ಈಕೆಯು ಒಳ್ಳೆಯ ಚತುರಳೂ ಹಿಂದುಸ್ಥಾನದ ಅನೇಕ ಭಾಷೆಗಳನ್ನು ತಿಳಿದವಳೂ

ಆಗಿದ್ದಳು. ಡ್ಯೂಪ್ಲೆಯ ಕಾಲದಲ್ಲಿಯೇ ಇಂಗ್ಲಿಷರಿಗೂ ಫ್ರೇಂಚರಿಗೂ ಯುದ್ಧವು ಆರಂಭವಾಯಿತು. ಉಭಯತರಲ್ಲಿ ಕ್ರಿ. ಶ. ೧೭೪೪ರಿಂದ ೧೭೬೦ರ ವರೆಗೆ ಮೂರು ಯುದ್ಧಗಳಾದವು. ೨ನೆಯ ಯುದ್ಧವು ನಡೆದಿರುವಾಗ ಫ್ರಾನ್ಸ್‌ದವರು ಡ್ಯೂಪ್ಲೆಯನ್ನು ತಮ್ಮ ದೇಶಕ್ಕೆ ಕರೆಯಿಸಿಕೊಂಡರು. ಮುಂದೆ ಡ್ಯೂಪ್ಲೆಯು ತನ್ನ ಆಯುಷ್ಯವನ್ನು ಬಡತನದಲ್ಲಿ ಕಳೆಯುತ್ತಿರಲು ಕ್ರಿ. ಶ. ೧೭೬೩ರಲ್ಲಿ ಮರಣಹೊಂದಿದನು. ಕಡೆಯದಾದ **ವಾಂಡಿವಾಸ**ದ ಕಾಳಗದಿಂದ ಫ್ರೇಂಚರ ಅಧಿಕಾರವು ನಷ್ಟವಾಯಿತು. ಡ್ಯೂಪ್ಲೆಯ ಕಲ್ಪನೆಗಳ ಲಾಭವು ಫ್ರಾನ್ಸ್ ದೇಶಕ್ಕಾಗಲಿಲ್ಲ. ಇಂಗ್ಲಿಷರು ಮಾತ್ರ ಅವೇ ಕಲ್ಪನೆಗಳನ್ನು ಎತ್ತಿಕೊಂಡು ಬರಬರುತ್ತ ಪ್ರಬಲರಾಗಿ ಈ ದೇಶದ ಸೀಮೆಗಳನ್ನು ಒಂದೊಂದಾಗಿ ಕೈವಶ ಮಾಡಿಕೊಳ್ಳಹತ್ತಿದರು.

೧೫ನೆಯ ಪಾಠ

ಇಂಗ್ಲಿಷರಿಗೂ ಫ್ರೇಚರಿಗೂ ನಡೆದ ಯುದ್ಧಗಳು
ಕ್ರಿ. ಶ. ೧೭೪೦-೧೭೬೧

೧. **ಇಂಗ್ಲಿಷ ಮತ್ತು ಫ್ರೇಂಚ ಕಂಪನಿಗಳ ಪರಿಸ್ಥಿತಿ**:— ಕ್ರಿ. ಶ. ೧೭೪೦ರ ಸುಮಾರಕ್ಕೆ † ತುಳಾಜಿ ಆಂಗ್ರೆಯು ಬಲಗುಂದಿದ ಬಳಿಕ ಪಶ್ಚಿಮ ದಂಡೆಯಲ್ಲಿ ಇಂಗ್ಲಿಷರು ಪ್ರಬಲರಾಗುತ್ತ ನಡೆದರು. **ಮದ್ರಾಸದ** ಕಡೆಯಲ್ಲಿ ಅವರ ವ್ಯಾಪಾರವು ಒತ್ತರದಿಂದ ಬೆಳೆಯ ತೊಡಗಿತು; ಮತ್ತು **ಬಂಗಾಲ**-ದಲ್ಲಿಯೂ ಮುಂದುವರಿಯಹತ್ತಿದರು.

ಫ್ರೇಂಚರ ವ್ಯಾಪಾರವೂ ಸುಸೂತ್ರವಾಗಿ ಸಾಗಿತ್ತು. **ಪಾಂಡಿಚೇರಿಯ** ಗವ್ಹರ್ನರನಾದ **ಡ್ಯೂಪ್ಲೆಯು** ಫ್ರೇಂಚರ ರಾಜ್ಯವನ್ನು ಹಿಂದುಸ್ಥಾನದಲ್ಲಿ ಸ್ಥಾಪಿಸುವ ಮಹತ್ವಾಕಾಂಕ್ಷೆಯನ್ನು ತಾಳಿ, ಅದಕ್ಕಾಗಿ ಒಳ್ಳೆಯ ಸಾಹಸ-ವನ್ನು ನಡೆಯಿಸಿದ್ದನು. ಅಲ್ಲದೆ ಇಂಗ್ಲೀಷರನ್ನು ಈ ದೇಶದಿಂದ ಹೊರದೂಡುವ ವಿಚಾರವೂ ಅವನದಿತ್ತು.

ಆಗ ಮೊಗಲ ಸಾಮ್ರಾಜ್ಯವು ತೀರ ಬಲಗುಂದಿತ್ತು. ಮರಾಠರ ಲಕ್ಷವು ದಿಲ್ಲಿಯ ಕಡೆಗೆ ತೊಡಗಿಕೊಂಡಿತ್ತು. ಇಂಗ್ಲೀಷರೂ ಫ್ರೇಂಚರೂ

† ಈ ಸಂಗತಿಯು ಹಿಂದೆ ೩೯ನೆಯ ಪುಟದಲ್ಲಿ ಹೇಳಿದೆ.

ನಿಜಾಮ ಮೊದಲಾದ ಅರಸರಿಗೆ ನೆರವಾಗಿ, ಇಲ್ಲನೆ ಅವರ ಜಗಳದಲ್ಲಿ ಕೈಹಾಕಿ, ತಮ್ಮ ತಮ್ಮ ಸಾಮರ್ಥ್ಯವನ್ನು ಹೆಚ್ಚಿಸುವ ಕ್ರಮವನ್ನು ಕೈಕೊಂಡಿದ್ದರು. ಮತ್ತು ಇಂಗ್ಲಿಷರ ವ್ಯಾಪಾರವನ್ನು ಕುಗ್ಗಿಸಬೇಕೆಂದು ಫ್ರೆಂಚರೂ, ಫ್ರೆಂಚರ ಬಲವನ್ನು ಮುರಿಯಬೇಕೆಂದು ಇಂಗ್ಲಿಷರೂ ಹವಣಿಸುತ್ತಿದ್ದರು.

೨. ಇಂಗ್ಲಿಷರಿಗೂ ಫ್ರೆಂಚರಿಗೂ ಆದ ಮೊದಲನೆಯ ಯುದ್ಧ : ಕ್ರಿ. ಶ. ೧೭೪೪-೧೭೪೮ **ಪಾಂಡಿಚೇರಿ**ಯು ಫ್ರೆಂಚರ ಮುಖ್ಯ ಠಾಣ್ಯವೂ **ಮದ್ರಾಸವು** ಇಂಗ್ಲಿಷರ ಮುಖ್ಯ ಠಾಣ್ಯವೂ ಆಗಿದ್ದವು. ಯುರೋಪ ಖಂಡದಲ್ಲಿ ಇಂಗ್ಲಿಷ-ಫ್ರೆಂಚರಲ್ಲಿ ಯುದ್ಧವು ಆರಂಭವಾದ ಬಳಿಕ ಕ್ರಿ. ಶ. **೧೭೪೬**ರಲ್ಲಿ ಫ್ರಾನ್ಸಿನವರು **ಲಾಬರ್ಡೋನೆ** ಎಂಬ ಶೂರ ಸೇನಾಪತಿಯನ್ನು ಬಲವಾದ ಹಡಗುಪಡೆಯೊಂದಿಗೆ ಹಿಂದುಸ್ಥಾನಕ್ಕೆ ಕಳುಹಿದರು. ಅವನು ಬಂದಕೂಡಲೆ ಮದ್ರಾಸವನ್ನು ಮುತ್ತಿ ಅದನ್ನು ವಶಮಾಡಿಕೊಂಡನು. **ಸೆಂಟ ಡೆವಿಡ್ಡ**ವು ಮಾತ್ರ ಇಂಗ್ಲಿಷರ ಕಡೆಗೆ ಉಳಿಯಿತು. ಇಷ್ಟರಲ್ಲಿ ಯುರೋಪದಲ್ಲಿ ಇಂಗ್ಲಿಷರಿಗೂ ಫ್ರೆಂಚರಿಗೂ **ಎಕ್ಸಲಾ ಶಾಪೆಲ** ಎಂಬಲ್ಲಿ ಒಪ್ಪಂದವಾದದರಿಂದ ಈ ದೇಶದ ಯುದ್ಧವನ್ನು ನಿಲ್ಲಿಸಬೇಕಾಯಿತು. + ಮದ್ರಾಸವು ಇಂಗ್ಲಿಷರಿಗೆ ಮರಳಿ ದೊರೆಯಿತು.

೩. ಹೈದರಾಬಾದ - ಅರ್ಕಾಟಗಳ ಪಟ್ಟದ ಸಲುವಾಗಿ ನಡೆದ ಯುದ್ಧ :— ಕ್ರಿ ಶ. ೧೭೪೦-೧೭೫೪. ಯುದ್ಧವು ನಿಂತರೂ ಎರಡೂ ಕಂಪನಿಗಳ ಹಗೆತನವು ಹೆಚ್ಚಾಗುತ್ತಲೇ ಇತ್ತು. ಅವರು ಒಬ್ಬರನ್ನೊಬ್ಬರು ನಾಶಪಡಿಸುವ ದಾರಿಯನ್ನೇ ಹುಡುಕುತ್ತಿದ್ದರು. ಇದೇ ಹೊತ್ತಿಗೆ ದಕ್ಷಿಣ ದೇಶದಲ್ಲಿ ಎರಡು ಕಡೆಗಳಲ್ಲಿ ಪಟ್ಟದ ಸಲುವಾಗಿ ಜಗಳಗಳು ಹುಟ್ಟಿದವು.

೧. ದೋಸ್ತ ಅಲ್ಲಿಯ ತರುವಾಯ ಅವನ ಮಗ ಸಫದರಅಲ್ಲಿಯು **ಅರ್ಕಾಟ**ದ ನವಾಬನಾದನು. ಮುಂದೆ ಅವನ ಕೊಲೆಯಾದ ಬಳಿಕ, ನಿಜಾಮ ನಿಂದ ನಿಯಮಿಸಲ್ಪಟ್ಟ **ಅನ್ವರುದ್ದೀನ**ನೆಂಬ ಕಾರಭಾರಿಯೇ ಅಲ್ಲಿಯ ನವಾಬ

+ ಫ್ರೆಂಚರು ಮದ್ರಾಸವನ್ನು ಹಿಡಿದುಕೊಂಡಂತೆ, ಅತ್ತ ಅಮೇರಿಕೆಯ ಯುದ್ಧದಲ್ಲಿ ಇಂಗ್ಲಿಷರು ಫ್ರೆಂಚರ ಲುಯಿಬರ್ಗವನ್ನು ತೆಗೆದುಕೊಂಡಿದ್ದರು. ಆ ಲುಯಿಬರ್ಗವನ್ನು ಉಳಿಸಿಕೊಳ್ಳುವದಕ್ಕಾಗಿ ಫ್ರೆಂಚರು ಮದ್ರಾಸವನ್ನು ಬಿಟ್ಟುಕೊಡಬೇಕಾಯಿತು.

ನಾದನು. ಆಗ ದೋಸ್ತ್ ಅಲ್ಲಿಯ ಅಳಿಯನಾದ **ಚಂದಾಸಾಹೇಬನು** ತಾನು ನವಾಬನಾಗಬೇಕೆಂದು ಫ್ರೆಂಚರ ಸಹಾಯವನ್ನು ಬೇಡಿದನು. ಮಹತ್ವಾಕಾಂಕ್ಷಿಯಾದ ಡ್ಯೂಪ್ಲೆಯು ಚಂದಾಸಾಹೇಬನ ಬೆನ್ನು ಕಟ್ಟಿದನು. ೨. ಕ್ರಿ ಶ. ೧೭೪೮ರಲ್ಲಿ ನಿಜಾಮ ಉಲ್ಮುಲ್ಕನು ಸಾಯಲು ಅವನ ಮಗನಾದ **ನಾಸಿರಜಂಗ** ನಿಗೂ ಅವನ ಅಣ್ಣನ ಮಗನಾದ **ಮುಜಫರಜಂಗ**ನಿಗೂ ಪಟ್ಟದ ಸಲುವಾಗಿ ಜಗಳಹತ್ತಿದವು. ಆಗ ಮುಜಫರಜಂಗನು ಡೂಪ್ಲೆಯ ಸಹಾಯವನ್ನು ಪಡೆದನು. ಇಂಗ್ಲಿಷರು ಅನ್ವರುದ್ದೀನ ಮತ್ತು ನಾಸಿರಜಂಗ ಇವರ ಪಕ್ಷವನ್ನು ವಹಿಸಿದರು.

ಆಮೇಲೆ ಫ್ರೆಂಚರು ಮುಜಫರಜಂಗ, ಚಂದಾಸಾಹೇಬ ಇವರನ್ನು ಕೂಡಿಕೊಂಡು ಅನ್ವರುದ್ದೀನನ ಮೇಲೆ ಸಾಗಿಹೋದರು ಕ್ರಿ. ಶ ೧೭೪೯ರಲ್ಲಿ ಅಂಬೂರ ಎಂಬಲ್ಲಿ ಯುದ್ಧವಾಗಿ ನವಾಬನು ಸೋತು ಹತನಾದನು; ಅವನ ಮಗ ಮಹಮ್ಮದ ಅಲ್ಲಿಯು **ತ್ರಿಚಿನಾಪಳ್ಳಿ**ಗೆ ಓಡಿಹೋದನು; ಚಂದಾಸಾಹೇಬನು ಅರ್ಕಾಟದ ನವಾಬನಾದನು. ಮುಂದೆ ಫ್ರೆಂಚರು ಮೊದಲಾದವರು ಹೈದರಾಬಾದದ ಕಡೆಗೆ ಹೊರಟರು. ಅಷ್ಟರಲ್ಲಿ ನಾಸಿರಜಂಗನು ಕೊಲ್ಲಲ್ಪಟ್ಟಿದ್ದರಿಂದ ಮುಜಫರಜಂಗನಿಗೆ ಅನಾಯಾಸವಾಗಿ ಪಟ್ಟ ದೊರೆಯಿತು. ಕ್ರಿ. ಶ. ೧೭೫೧ರಲ್ಲಿ ಫ್ರೆಂಚ ಸೇನಾಪತಿಯಾದ **ಬುಸಿಯೊಡನೆ** ಮುಜಫರಜಂಗನು ತನ್ನ ರಾಜಧಾನಿಯ ಕಡೆಗೆ ಸಾಗಿರಲು, ಬುಸಿಯು ಹಿಂದೆ ಉಳಿದ ಹೊತ್ತು ಸಾಧಿಸಿ, **ಕಡಪೆ**ಯ ನವಾಬನು ಮುಜಫರಜಂಗನನ್ನು ಕೊಲ್ಲಿಸಿದನು. ಬುಸಿಯು ಪ್ರಸಂಗವನ್ನು ತಿಳಿದು ನಿಜಾಮನ ಇನ್ನೊಬ್ಬ ಮಗನಾದ **ಸಲಾಬತಜಂಗ**ನನ್ನು ಪಟ್ಟಕ್ಕೆ ಕುಳ್ಳಿರಿಸಿ, ತಾನು ಏಳು ವರ್ಷಗಳ ವರೆಗೆ ಹೈದರಾಬಾದದಲ್ಲಿ ನಿಂತು ಅಲ್ಲಿ ಫ್ರೆಂಚರ ವರ್ಚಸ್ಸನ್ನು ನೆಲೆಗೊಳಿಸಿದನು. ಸಲಾಬತಜಂಗನು ಸೈನ್ಯದ ವೆಚ್ಚಕ್ಕಾಗಿ ಉತ್ತರ ಸರಕಾರ ಎಂಬ ಪ್ರಾಂತವನ್ನು ಫ್ರೆಂಚರಿಗೆ ಕೊಟ್ಟನು. ಡೂಪ್ಲೆಯು, ನಾಸಿರಜಂಗನ ಕೊಲೆಯಾದ ಸ್ಥಳದಲ್ಲಿ **ಡೂಪ್ಲೆಫತಾಬಾದ** ಎಂಬ ಪಟ್ಟಣವನ್ನು ನೆಲೆಸಿದನು. ಫ್ರೆಂಚರು ಸಮರ್ಥರೆಂದು ದೇಶದಲ್ಲೆಲ್ಲ ಹೆಸರಾದರು.

ಅರ್ಕಾಟದ ಮುತ್ತಿಗೆ :— (ಕ್ರಿ. ಶ. ೧೭೫೧.) ಬುಸಿಯು ಹೈದರಾಬಾದದಲ್ಲಿರುವಾಗ ಇತ್ತ ಚಂದಾಸಾಹೇಬನು ತ್ರಿಚಿನಾಪಳ್ಳಿಗೆ ಮುತ್ತಿಗೆ

ಹಾಕಿದನು. ತ್ರಿಚಿನಾಪಳ್ಳಿಯೊಂದು ಕೈಸೇರಿದರೆ ಅರ್ಕಾಟವ ಪ್ರಾಂತವೆಲ್ಲ ಫ್ರೆಂಚರ ಆಧೀನವಾಗುವದೆಂದು ನೆನೆದು ಇಂಗ್ಲಿಷರ ಕಡೆಯ ಕ್ಯಾಪ್ಟನ್ ಕ್ಲೈವನು "**ಚಂದಾಸಾಹೇಬನ ರಾಜಧಾನಿಯಾದ ಅರ್ಕಾಟವನ್ನು ಈಗ ನಾವು ವಶಮಾಡಿಕೊಂಡರೆ, ಆ ದನ್ನು ಉಳಿಸಿಕೊಳ್ಳುವದಕ್ಕಾಗಿ** ಅವನು ತ್ರಿಚಿನಾಪಳ್ಳಿಯನ್ನು ಬಿಟ್ಟುಬರುವನು. ಇದರಿಂದ ಸಹಜವಾಗಿ ಮಹಮ್ಮದಲ್ಲಿಯ ಬಿಡುಗಡೆಯಾಗುವದು; ಅಪ್ಪಣೆಯಾದರೆ ಈ ಕೆಲಸವನ್ನು ಕೈಕೊಳ್ಳಲು ಸಿದ್ಧ ನಿರುವೆನು" ಎಂದು ಮದ್ರಾಸವ ಗನ್ನರ್ನರನಾವ ಸಾಂಡರ್ಸನಿಗೆ ತಿಳುಹಿದನು. ಕ್ಲೈವನು ಮೊದಲು ಕಾರಕೂನನಾಗಿದ್ದನು. ಅವನು ಆ ಕೆಲಸವನ್ನು ಬಿಟ್ಟು, ಸೈನ್ಯದಲ್ಲಿ ಸೇರಿ ಹಲವು ಸಾಹಸಗಳನ್ನು ಮಾಡಿ, ಹೆಸರಾದ ಕ್ಯಾಪ್ಟನನೆನಿಸಿದ್ದನು. ಆದದರಿಂದ ಸಾಂಡರ್ಸನು ಅವನ ಕಡೆಗೆ ಅರ್ಕಾಟದ ಮುತ್ತಿಗೆಯ ಕೆಲಸವನ್ನು ಒಪ್ಪಿಸಿದನು. ಕೂಡಲೆ ಕ್ಲೈವನು ಒಳ್ಳೆಯ ಹುರುಪಿನಿಂದ ೫೦೦ ರಾಹುತರೊಡನೆ ಅರ್ಕಾಟದಮೇಲೆ ಬಿದ್ದು ಅದನ್ನು ವಶಮಾಡಿಕೊಂಡನು.

ಅರ್ಕಾಟವು ಇಂಗ್ಲಿಷರ ವಶವಾಗಲು, ಚಂದಾಸಾಹೇಬನು ತನ್ನ ಮಗನಾದ **ರಾಜಾಸಾಹೇಬನ** ಸಂಗಡ ದೊಡ್ಡ ದಂಡನ್ನು ಕೊಟ್ಟು ಕಳುಹಲು, ಅವನು ಬಂದು ಅರ್ಕಾಟವನ್ನು ಮುತ್ತಿದನು. ಆದರೆ ಕ್ಲೈವನು ೫೩ ದಿವಸಗಳ ವರೆಗೆ ಒಳ್ಳೆಯ ಧೈರ್ಯದಿಂದ ಆ ಮುತ್ತಿಗೆಯನ್ನು ತಡೆದನು ಆಗ ಅರ್ಕಾಟದ ಆಶೆಯನ್ನು ಬಿಟ್ಟು ರಾಜಾಸಾಹೇಬನು ಹೊರಟುಹೋದನು.

ಆರ್ಣಿ, ಕಾವೇರಿಪಾಕೆಗಳ ಯುದ್ಧ:— ಅಷ್ಟರಲ್ಲಿ ಮದ್ರಾಸದಿಂದ ಹೊರಟ ಹೊಸ ದಂಡು ಅರ್ಕಾಟಕ್ಕೆ ಮುಟ್ಟಿತು. ಬಳಿಕ ಕ್ಲೈವನು ರಾಜಾಸಾಹೇಬನನ್ನು ಬೆನ್ನಟ್ಟಿ ಆರ್ಣಿಯ ಹತ್ತರ ಅವನನ್ನು ಸೋಲಿಸಿ, **ಕಾಂಜಿವರಮ**ವನ್ನು ತೆಗೆದುಕೊಂಡನು. ಮುಂದೆ ರಾಜಾಸಾಹೇಬನು ಮದ್ರಾಸದ ಮೇಲೆ ಸಾಗಿಹೋಗುತ್ತಿರಲು ಕ್ಲೈವನು ಮತ್ತೆ ಅವನನ್ನು ಬೆನ್ನಟ್ಟಿ **ಕಾವೇರಿಪಾಕ** ಎಂಬಲ್ಲಿ ಸೋಲಿಸಿ ಡೂಪ್ಲೆಫತಾಬಾದವನ್ನು ಹಾಳುಮಾಡಿದನು.

ಬಳಿಕ ಮೇಜರ **ಲಾರೇನ್ಸನೂ** ಕ್ಲೈವನೂ ತ್ರಿಚನಾಪಳ್ಳಿಯನ್ನು ಮುತ್ತಿದ್ದ ಚಂದಾಸಾಹೇಬನ ಮೇಲೆ ಸಾಗಿಹೋದರು. ಡೂಪ್ಲೆಯು **ಲಾ** ಎಂಬ ಸೇನಾಪತಿಯನ್ನು ಚಂದಾಸಾಹೇಬನ ಸಹಾಯಕ್ಕೆ ಕಳುಹಿದನು **ಶ್ರೀರಂಗಂ**

ಎಂಬಲ್ಲಿ ಯುದ್ಧವಾಗಿ ಚಂದಾಸಾಹೇಬನು ಸೋತು, ತಂಜಾವರದ ಅರಸನ ಆಶ್ರಯಕ್ಕೆ ಹೋದನು ಆದರೆ ಮುಂದೆ ಆ ಅರಸನೇ ಅವನನ್ನು ಕೊಲ್ಲಿಸಿದನು. ಆತ್ತ ಇಂಗ್ಲಿಷರಿಗೂ ಫ್ರೆಂಚರಿಗೂ **ಬಾಹೂರ** ಎಂಬಲ್ಲಿ ಯುದ್ಧವಾಗಿ ಫ್ರೆಂಚರು ಸೋತರು. ಮಹಮ್ಮದಲ್ಲಿಯು ನವಾಬನಾದನು. ಕ್ರಿ. ಶ. ೧೭೫೨.

ಅರ್ಕಾಟಿನ ಯುದ್ಧದಿಂದ ಫ್ರೆಂಚರ ಬೊಕ್ಕಸವು ಬರಿದಾಯಿತು. **ಆಗ** ಡೂಪ್ಲೆಯ ಅಪೇಕ್ಷೆಯಂತೆ ಫ್ರೆಂಚ ಸರಕಾರವು ಅವನಿಗೆ ನೆರವಾಗಲಿಲ್ಲ. ಡೂಪ್ಲೆಯು ಒಪ್ಪಿಗೆಯಿಲ್ಲದೆ ಯುದ್ಧವನ್ನು ಆರಂಭಿಸಿದನೆಂಬ ತಪ್ಪು ಹೊರಿಸಿ, ಆವರು ಅವನನ್ನು ಫ್ರಾನ್ಸಿಗೆ ಕರೆಯಿಸಿಕೊಂಡರು. ಡೂಪ್ಲೆಯ ತರುವಾಯ **ಗೋಡೆಹು** ಎಂಬವನನ್ನು ಗವ್ಹರ್ನರನಾಗಿ ಬಂದು ಇಂಗ್ಲಿಷರ ಕೂಡ ಪಾಂಡಿಚೇರಿಯಲ್ಲಿ ಒಪ್ಪಂದ ಮಾಡಿಕೊಂಡನು ಕ್ರಿ. ಶ ೧೭೫೫.

೪. **ಇಂಗ್ಲಿಷ-ಫ್ರೆಂಚರ ಕೊನೆಯ ಯುದ್ಧ**:— ಕ್ರಿ. ಶ. **೧೭೫೮-೧೭೬೧.** ಕ್ರಿ ಶ. **೧೭೫೬**ರಲ್ಲಿ ಯುರೋಪಖಂಡದಲ್ಲಿ ಇಂಗ್ಲಿಷ ಫ್ರೆಂಚರ ನಡುವೆ ಯುದ್ಧವು ಆರಂಭವಾಯಿತು. ಆಗ ಫ್ರೆಂಚರು **ಕಾವ್ರುಂಟ್ ಲಾಲಿ** ಎಂಬವನನ್ನು ದೊಡ್ಡ ಹಡಗುಪಡೆಯೊಂದಿಗೆ ಹಿಂದುಸ್ಥಾನಕ್ಕೆ ಕಳುಹಿದರು. ಅವನು ಈ ದೇಶಕ್ಕೆ ಬಂದಕೂಡಲೆ ಪೋರ್ಟಸೆಂಟ್ ಡೆವ್ಹಿಡವನ್ನು ವಶಮಾಡಿಕೊಂಡನು. ಬಳಿಕ ಉತ್ತರ ಸರಕಾರದಲ್ಲಿದ್ದ ಬುಸಿಯನ್ನು ತನ್ನ ನೆರವಿಗೆ ಕರೆದುಕೊಂಡು ಮದ್ರಾಸಿನ ಕಡೆಗೆ ಸಾಗಿದನು. ಅಷ್ಟರಲ್ಲಿ ಇಂಗ್ಲಿಷ ಸೇನಾಪತಿಯಾದ ಸರ್ **ಆಯರ್‌ಕೂಟ್** ಎಂಬವನು ಅವನನ್ನು ತಡೆದನು. **ವಾಂಡಿವಾಶ**ದಲ್ಲಾದ ಯುದ್ಧದಲ್ಲಿ ಲಾಲಿಯು ಸೋತು ಪಾಂಡಿಚೇರಿಗೆ ಬಂದನು. **ಆದರೆ ಕೂಟನು** ಬೆನ್ನಟ್ಟಿ ಬಂದು ಅವನ್ನೂ ವಶಮಾಡಿಕೊಂಡನು. ಕ್ರಿ. ಶ. **೧೭೬೧.** ಬಳಿಕ ಲಾಲಿಯು ಸೆರೆಸಿಕ್ಕು ಇಂಗ್ಲಂಡಕ್ಕೆ ಕಳುಹಲ್ಪಟ್ಟನು. **ಈ** ಮೊದಲೇ, ಇಂಗ್ಲಿಷರ ಕಡೆಯ ಕರ್ನಲ **ಫ್ಲೋರ್ಡನು** ಉತ್ತರ ಸರಕಾರವನ್ನೂ ಕ್ಲೈವನು ಚಂದ್ರನಗರವನ್ನೂ ವಶಮಾಡಿಕೊಂಡರು ಪಾಂಡಿಚೇರಿಯು ಕೈಬಿಟ್ಟಿದ್ದರಿಂದ ಹಿಂದುಸ್ಥಾನದಲ್ಲಿಯ ಫ್ರೆಂಚರ ವರ್ಚಸ್ಸು ನಷ್ಟವಾಯಿತು. ಕ್ರಿ. ಶ. ೧೭೬೩ರಲ್ಲಿ **ಪಾರೀಸ**ದಲ್ಲಿ ಒಪ್ಪಂದವಾಗಿ, ಯುರೋಪದಲ್ಲಿ ಇಂಗ್ಲಿಷ-ಫ್ರೆಂಚರ ನಡುವೆ ನಡೆದ ಯುದ್ಧವು ಶಾಂತವಾಯಿತು. ಆಗ ಪಾಂಡಿಚೇರಿ

ಚಂದ್ರನಗರಗಳು ಮರಳಿ ಫ್ರೆಂಚರಿಗೆ ದೊರೆತವು. ಅಂದಿನಿಂದ ಅವರು ರಾಜ್ಯ ದಾಶೆಯನ್ನು ಬಿಟ್ಟು ಬರಿಯ ವ್ಯಾಪಾರವನ್ನು ಮಾಡಹತ್ತಿದರು.

೫. ಇಂಗ್ಲಿಷ ಮತ್ತು ಫ್ರೆಂಚರ ಜಯಾಪಜಯಗಳ ಕಾರಣಗಳು:— **ಇಂಗ್ಲಿಷ ಕಂಪನಿ**ಯವರು ವ್ಯಾಪಾರವನ್ನು ಒಳ್ಳೆಯ ಜಾಣತನದಿಂದ ಸಾಗಿಸಿದ್ದರು ಇವರ ರಾಜಕಾರಣದಲ್ಲಿಯೂ ವ್ಯಾಪಾರದ ಬೆಳವಣಿಗೆಯು ಮುಖ್ಯ ಉದ್ದೇಶವಾಗಿತ್ತು. ಆದದರಿಂದ ಇವರು ಬಹುಶಃ ಹಣದ ತೊಂದರೆಯಲ್ಲಿ ಸಿಲುಕಲಿಲ್ಲ. ಇಂಗ್ಲಂಡದ ಸರಕಾರವು ತಮ್ಮ ಕಂಪನಿಯವರಿಗೆ ಎಲ್ಲ ರೀತಿಯಿಂದ ನೆರವಾಗಹತ್ತಿತು. **ರೊ, ಹ್ಯಾಮಿಲ್ಟನ್, ಹಾಕಿನ್ಸ, ಕ್ಲೈವ, ಲಾರೆನ್ಸ, ಕೂಟ** ಮೊದಲಾದ ಕೆಲಸಗಾರರು ತಮ್ಮ ದೇಶದ ಕಂಪನಿಯ ಏಳ್ಗೆಗಾಗಿ ಮನಮುಟ್ಟಿ ದುಡಿದರು ಇಂಗ್ಲಂಡದ ಹಡಗುಪಡೆಯ ಸಾಮರ್ಥ್ಯವು ಹೆಚ್ಚಿನದಿದ್ದದರಿಂದ ಹಿಂದುಸ್ಥಾನದಲ್ಲಿ ಫ್ರೆಂಚರನ್ನು ಸೋಲಿಸಲು ಹೆಚ್ಚು ಅನುಕೂಲವಾಯಿತು.

ಫ್ರೆಂಚ ಕಂಪನಿಯವರು ವ್ಯಾಪಾರಕ್ಕಿಂತ ರಾಜಕಾರಣದಲ್ಲಿ ಹೆಚ್ಚು ಮನಸುಹಾಕಿದರು. ಇದರಿಂದ ಹಣದ ಕೊರತೆಯುಂಟಾಗಿ ಅವರು ಫ್ರೆಂಚ ಸರಕಾರವನ್ನು ಹೆಚ್ಚಾಗಿ ಆವಲಂಬಿಸಬೇಕಾಯಿತು. ಆ ಸರಕಾರವು ಯೊರೋಪದ ರಾಜಕಾರಣದಲ್ಲಿ ತೊಡಗಿದ್ದರಿಂದ ಅದು ತಮ್ಮ ಕಂಪನಿಯವರಿಗೆ ಹೊತ್ತಿಗೆ ನೆರವಾಗಲಿಲ್ಲ. ಕಂಪನಿಯ ವ್ಯವಸ್ಥಾಪಕರು ಯೋಗ್ಯರಾದವರನ್ನು ಕೆಲಸಗಾರರನ್ನಾಗಿ ಕಳಿಹಿಸಲಿಲ್ಲ. ದುರಾಗ್ರಹ, ಅಸೂಯೆ ಇವುಗಳ ಮೂಲಕ ಕೆಲಸಗಾರರಲ್ಲಿ ಒಡಕು ಹುಟ್ಟಿದ್ದರಿಂದ ಶತ್ರುಗಳಿಗೆ ಸಡಿಲು ಸಿಕ್ಕಿತು. ಲಾಲಿಯು ಉತ್ತರ ಸರಕಾರದಲ್ಲಿದ್ದ ಬುಸಿಯನ್ನು ಕರೆಯಿಸಿಕೊಂಡದ್ದರಿಂದ ಆ ಪ್ರಾಂತವು ಕೈಬಿಟ್ಟಿತು ಫ್ರೆಂಚರ ಹಡುಗುಪಡೆಯು ಕಡಿಮೆಯದಿದ್ದದರಿಂದ ಇಂಗ್ಲಿಷರ ಮುಂದೆ ತಡೆದು ನಿಲ್ಲುವದು ಅವರಿಂದಾಗಲಿಲ್ಲ.

೧೬ನೆಯ ಪಾಠ

ಬಂಗಾಲ ಪ್ರಾಂತದ ಅಧಿಕಾರವು ಇಂಗ್ಲಿಷರ ಕೈಸೇರಿದ್ದು.

೧. ಬಂಗಾಲ ಪ್ರಾಂತದ ಪರಿಸ್ಥಿತಿ:— ಅಲಿವರ್ದೀಖಾನನು ಮೊದಲು ಬಂಗಾಲದ ಮೊಗಲ ಸುಭೇದಾರನಾಗಿದ್ದನು ಮುಂದೆ ಮೊಗಲರು

ದುರ್ಬಲರಾಗಲು ಸ್ವತಂತ್ರನಾಗಿ ಆ ಪ್ರಾಂತದ ನವಾಬನೆನಿಸಿದನು. ಇವನು ಜಾಣತನದಿಂದಲೂ ದಕ್ಷತೆಯಿಂದಲೂ ಕಾರಭಾರವನ್ನು ಸಾಗಿಸಿದ್ದನು. ಡಚ್ಚ, ಇಂಗ್ಲಿಷ, ಫ್ರೆಂಚ ಈ ಯೂರೋಪದ ವ್ಯಾಪಾರಸ್ಥರ ಚಿನ್ಸುರಾ, ಕಲಕತ್ತೆ, ಚಂದ್ರನಗರ ಮುಂತಾದ ಸ್ಥಾನಗಳು ಇವನ ಸೀಮೆಯೊಳಗಿದ್ದವು ಈ ಪರಕೀಯರನ್ನು ಹೆಚ್ಚಿಗೆ ಬಲಿಯಬಿಟ್ಟರೆ ಇವರಿಂದ ರಾಜ್ಯಕ್ಕೆ ಅಪಾಯವಾಗಬಹುದೆಂದು ತಿಳಿದು, ನವಾಬನು ಇವರ ಸುಳಿದಾಟವನ್ನು ನಿರೀಕ್ಷಿಸುತ್ತಿದ್ದನು. ತನ್ನ ಅಪ್ಪಣೆಯ ಹೊರತು ಯಾರಿಗೂ ಕೋಟೆಕೊತ್ತಳಗಳನ್ನು ಕಟ್ಟಗೊಡುತ್ತಿರಲಿಲ್ಲ. ಇಂಗ್ಲಿಷರ ಮೇಲಂತೂ ಇವನ ಲಕ್ಷವು ವಿಶೇಷವಾಗಿತ್ತು. ಕ್ರಿ. ಶ. ೧೭೧೫ರಲ್ಲಿ ದಿಲ್ಲಿಯ ಬಾದಷಹನಿಂದ ಇಂಗ್ಲಿಷ ಕಂಪನಿಯ ಸರಕಿನ ಮೇಲಿನ ಸುಂಕಕ್ಕೆ ಬಿಡುವು ದೊರೆತಿತ್ತು ಆದರೆ ಬರಬರುತ್ತ ಕಂಪನಿಯ ಕೆಲಸಗಾರರು ಸ್ವಂತದ ಸರಕನ್ನು ಸಹ ಸುಂಕವಿಲ್ಲದೆ ತರಹತ್ತಿದರು. ನವಾಬನು ಕೆಲಸಗಾರರ ಈ ದಬ್ಬಾಟವನ್ನು ತಡೆಯಲು ಪ್ರಯತ್ನಿಸುತ್ತಿದ್ದನು. ಆದರೆ ಇವನು ಮರಾಠರ ದಾಳಿಗಳಿಂದ ಹಣ್ಣಾದದ್ದರಿಂದ ಈ ಜನರನ್ನು ದಾರಿಗೆ ಹಚ್ಚುವ ಕೆಲಸವು ಇವನಿಗೆ ಸಾಧಿಸಲಿಲ್ಲ. ಕ್ರಿ. ಶ. ೧೭೫೬ ರಲ್ಲಿ ಅಲಿವರ್ದಿಖಾನನು ಮರಣಹೊಂದಿದನು ಬಳಿಕ ಇವನ ಮೊಮ್ಮಗನಾದ **ಸಿರಾಜಉದ್ದೌಲನು** ನವಾಬನಾದನು

೨. ಸಿರಾಜಉದ್ದೌಲನು ಕಲಕತ್ತೆಯನ್ನು ಕೆಸಿದದ್ದು:— ಸಿರಾಜಉದ್ದೌಲನು ಮೊದಲೇ ಇಂಗ್ಲಿಷರನ್ನು ಸೇರುತ್ತಿರಲಿಲ್ಲ. ಇವನಿಗೆ ಬೇಡಾದ **ಕಿಸನದಾಸ** ಎಂಬೊಬ್ಬ ಸಾವುಕಾರನು ತನ್ನ ಬದುಕನ್ನೆಲ್ಲ ಕಟ್ಟಿಕೊಂಡು ಕಲಕತ್ತೆಗೆ ಬಂದು ಇಂಗ್ಲಿಷರ ಆಶ್ರಯದಲ್ಲಿರಹತ್ತಿದನು. ಮತ್ತು ಕಲಕತ್ತೆಯ ಗವ್ರ್ನರನಾದ **ಡ್ರೇಕನು** ನವಾಬನ ಒಪ್ಪಿಗೆಯನ್ನು ಪಡೆದು ಕೊಳ್ಳದೆ ಕೋಟೆಯನ್ನು ಭದ್ರಪಡಿಸಹತ್ತಿದನು ಆದರಿಂದ ನವಾಬನು ಡ್ರೇಕನಿಗೆ ಕಿಸನದಾಸನನ್ನು ನಮ್ಮ ವಶಕ್ಕೆ ಕೊಡಬೇಕು, ಕೋಟೆಯ ಹೊಸದಾಗಿ ಕಟ್ಟಿಸಿದ ಭಾಗವನ್ನು ಕೆಡವಿಸಬೇಕು ಎಂದು ತಿಳುಹಿಸಿದನು. ಆಗ ಡ್ರೇಕನು ಕಿಸನದಾಸನ ವಿಷಯವಾಗಿ ಏನೂ ಬರೆಯದೆ, ಫ್ರೆಂಚರು ಏರಿಬರುವ ಸಂಭವವಿದ್ದದರಿಂದ ಕೋಟೆಯ ಗೀಳಾದ ಭಾಗವನ್ನಷ್ಟೇ ಸರಿಪಡಿಸಿದ್ದೇವೆ. ಹೊಸ ಕೆಲಸವನ್ನೇನು ಮಾಡಿಸಲಿಲ್ಲ. ಎಂದು ಉತ್ತರ ಬರೆದನು. ಇದರಿಂದ

ನವಾಬನು ಸಿಟ್ಟಾಗಿ ಇಂಗ್ಲಿಷರ ಸ್ಥಾನಗಳನ್ನೆಲ್ಲ ಕಸಿದುಕೊಳ್ಳಬೇಕೆಂದು ಅಪ್ಪಣೆ ಕೊಟ್ಟನು. ಆಗ ಅವನ ಅಧಿಕಾರಿಗಳು **ಕಾಸಿಮುಬಝಾರ**ವನ್ನು ಕೈಸೇರಿಸಿಕೊಂಡು, ಅಲ್ಲಿದ್ದ ಇಂಗ್ಲಿಷರನ್ನು ಸೆರೆಹಿಡಿದು, ಕಲಕತ್ತೆಯ ಕಡೆಗೆ ಸಾಗಿಸಿದರು. ಡ್ರೇಕನು ನವಾಬನ ಸೈನ್ಯವನ್ನು ಸೋಲಿಸಿಬಿಡಬಹುದೆಂದು ತಿಳಿದಿದ್ದನು. ಆದರೆ ಸಿರಾಜುದ್ದೌಲನು ದೊಡ್ಡ ಸೈನ್ಯದೊಂದಿಗೆ ಒತ್ತರದಿಂದ ಕಲಕತ್ತೆಗೆ ಬರಲು ಡ್ರೇಕನು ಹೆದರಿದನು. ಕೂಡಲೆ ಅವನೂ ಬಹುಜನ ಇಂಗ್ಲಿಷರೂ ಕೋಟೆಯಿಂದ ಸಾರಾಗಿ ಹಡಗಗಳನ್ನೇರಿ ಮುಖದ ಹತ್ತರ **ಫುಲ್ಟಾ** ಎಂಬಲ್ಲಿ ಹೋಗಿ ನಿಂತುಕೊಂಡರು. ಹಿಂದೆ ಕೋಟೆಯಲ್ಲಿ ಉಳಿದ ೧೭೦ ಜನರು ನವಾಬನ ಸೈನ್ಯಕ್ಕೆ ಇದಿರಾಗಿ ಹೋಗಿ ಸೋತರು ಕೋಟೆಯು ನವಾಬನ ಕೈಸೇರಿತು. ಆಲ್ಲಿದ್ದ † ೧೪೬ ಜನರು ಸೆರೆಹಿಡಿಯಲ್ಪಟ್ಟರು.

೩. **ಇಂಗ್ಲಿಷರು ಮರಳಿ ಕಲಕತ್ತೆಯನ್ನು ತೆಗೆದಕೊಂಡಿದ್ದು** :— ಕಲಕತ್ತೆಯು ಕೈಬಿಟ್ಟ ಸುದ್ದಿಯು ಮದ್ರಾಸಕ್ಕೆ ಮುಟ್ಟಿತು ಅಲ್ಲಿ ಎರಡು ತಿಂಗಳ ವರೆಗೆ ವಿಚಾರವಾಗಿ ಬಂಗಾಲಕ್ಕೆ ಸೈನ್ಯವನ್ನು ಕಳುಹಿಸಬೇಕೆಂದು ಗೊತ್ತಾಯಿತು. ಆ ಮೇರೆಗೆ **ವಾಟ್ಸನ**ನೂ **ಕ್ಲೈವ**ನೂ ಮದ್ರಾಸದಿಂದ ಹೊರಟು ಕ್ರಿ. ಶ ೧೭೫೭ರ ಕೊನೆಗೆ ಫುಲ್ಟಾಕ್ಕೆ ಬಂದರು. ಆಗ ದಿಲ್ಲಿಯ ಬಾದಷಹನ ಮಗನು ಬಂಗಾಲದ ಮೇಲೆ ದಂಡೆತ್ತಿ ಬರತಕ್ಕವನಿರುವನೆಂದು ತಿಳಿದದ್ದರಿಂದ ಸಿರಾಜುದ್ದೌಲನ ಲಕ್ಷವು ಕಲಕತ್ತೆಯ ಕಡೆಗೆ ಇರಲಿಲ್ಲ. ಕ್ಲೈವನು ಹೊತ್ತು ಸಾಧಿಸಿ ಕಲಕತ್ತೆಯನ್ನು ವಶಮಾಡಿಕೊಂಡನು. ಈ

---

† "ನವಾಬನ ಕಡೆಯವರು ಈ ೧೪೬ ಜನರನ್ನು ೧೮ ಅಡಿ ಚೌರಸಾಕಾರದ ಕತ್ತಲೆಯ ಕೋಣೆ (ಬ್ಲಾಕ್ ಹೋಲ್) ಯಲ್ಲಿ ಹಾಕಿದರು; ಆಲ್ಲಿ ಹಸಿಯಾಡಲು ಪಾರಿಯಿಲ್ಲದ್ದರಿಂದ ಅವರಲ್ಲಿಯ ೧೨೩ ಜನರು ಮರುದಿನ ಬೆಳಗಾಗುವಷ್ಟರಲ್ಲಿ ಸತ್ತುಹೋದರು." ಎಂದು ಹೇಳುವ ರೂಢಿಯುಂಟು. ಆದರೆ ಈ ಬ್ಲಾಕ್ ಹೋಲದ ಸಂಗತಿಯು ನಿಜವಲ್ಲೆಂದು ಹಲವು ಇತಿಹಾಸಜ್ಞರ ಮತವಿವೆ.

ಮೇಜರ ಬಸ ಎಂಬವರು 'ರಾಯಿಜ್ ಆಫ್ ಕ್ರಿಶ್ಚನ್ ಪಾವರ್ ಇನ್ ಇಂಡಿಯಾ' ಎಂಬ ಪುಸ್ತಕದಲ್ಲಿ "ಈ ಕೋಣೆಯಲ್ಲಿ ಒಂಬತ್ತೇ ಜನರನ್ನು ಇಟ್ಟಿದ್ದರು ಅವರಲ್ಲಿ ಒಬ್ಬನು ಬೇನೆಯವನೂ ಇಬ್ಬರು ಗಾಯಹೊಂದಿದವರೂ ಇದ್ದರು. ಅವರೇ ಮೂವರು ಸತ್ತರು. ಉಳಿದ ಆರೂ ಜನರು ಬದುಕಿದ್ದರು" ಎಂದು ಬರೆದಿರುವರು.


(ಒತೂರಕರರ ಹಿಂ. ಇ. ಪುಟ ೩೨೧)

ಸುದ್ದಿಯನ್ನು ಕೇಳಿ ಸಿರಾಜಉದ್ದೌಲನು ಇಂಗ್ಲಿಷರನ್ನು ತಡೆಯ ಹೊರಟು ಡವ್‌ಡವ್ ಎಂಬಲ್ಲಿ ನೋತು ಅವರೊಡನೆ ಒಪ್ಪಂದಮಾಡಿಕೊಂಡನು. ಇದರಿಂದ ಅವನು ಇಂಗ್ಲಿಷರ ಸ್ಥಾನಗಳನ್ನು ಬಿಟ್ಟಕೊಟ್ಟು ಕಲಕತ್ತೆಯಲ್ಲಾದ ಹಾನಿಯನ್ನು ತುಂಬಿಕೊಡಬೇಕಾಯಿತು

೪. ಸಿರಾಜಉದ್ದೌಲನ ವಿರುದ್ಧವಾಗಿ ಕ್ಲೈವನು ಮಾಡಿದ ಒಳಸಂಚು :— ಇಷ್ಟರಲ್ಲಿ ಇಂಗ್ಲಿಷ – ಫ್ರೆಂಚರ ಕೊನೆಯ ಯುದ್ಧವು ಪ್ರಾರಂಭವಾಯಿತು. ಆಗ ಕ್ಲೈವನು ಚಂದ್ರನಗರವನ್ನು ಹಿಡಿದುಕೊಂಡು ಫ್ರೆಂಚರ ಉಳಿದ ಸ್ಥಳಗಳನ್ನು ವಶಮಾಡಿಕೊಳ್ಳಲು ನೆರವಾಗಬೇಕೆಂದು ಸಿರಾಜಉದ್ದೌಲನನ್ನು ಕೇಳಿದನು. ಆಗ ಸಿರಾಜಉದ್ದೌಲನು ಇಂಗ್ಲಿಷರು ಹೀಗೆ ಬಲಿಷ್ಠರಾಗುವದನ್ನು ಕಂಡು ಅವರೊಡನೆಯೆ ಯುದ್ಧಮಾಡಬೇಕೆಂದು ಗೊತ್ತುಮಾಡಿ ಫ್ರೆಂಚರನ್ನು ನೆರವಿಗೆ ಕರೆದನು

ಅಲಿವರ್ದಿಖಾನನ ಅಳಿಯನಾದ **ಮೀರಜಾಫರ**ನೆಂಬವನು ಸಿರಾಜ ಉದ್ದೌಲನ ಸೇನಾಪತಿಯಾಗಿದ್ದನು. ಅವನಿಗೂ ಸಿರಾಜಉದ್ದೌಲನಿಗೂ ನೆಟ್ಟಗಿದ್ದಿಲ್ಲ. ಇದನ್ನು ತಿಳಿದು ಕ್ಲೈವನು ಮೀರಜಾಫರನಿಗೆ ಪಟ್ಟದಾಶೆಯನ್ನು ಹಚ್ಚಿ, ಸಿರಾಜಉದ್ದೌಲನನ್ನು ತಳ್ಳುವ ಒಳಸಂಚು ಮಾಡಿದನು ಅವರಲ್ಲಿ " ಕ್ಲೈವನು ಸಿರಾಜಉದ್ದೌಲನ ಮೇಲೆ ಸಾಗಿಬರಬೇಕು; ಆಯತ ಹೊತ್ತಿನಲ್ಲಿ ಮೀರಜಾಫರನು ಸೈನ್ಯದೊಂದಿಗೆ ಕ್ಲೈವನನ್ನು ಕೂಡಿಕೊಳ್ಳಬೇಕು " ಎಂದು ಗೊತ್ತಾಯಿತು. ಈ ಪ್ರಸಂಗದಲ್ಲಿ ಒಳಸಂಚಿಗೆ ನೆರವಾದದ್ದಕ್ಕಾಗಿ ಉಮಿಚಂದನೆಂಬ ಮುರ್ಶಿದಾಬಾದದ ಸಾವುಕಾರನೊಬ್ಬನು ೩೦ ಲಕ್ಷ ರೂಪಾಯಿಗಳನ್ನು ಬೇಡಹತ್ತಿದನು. ಆಗ ಕ್ಲೈವನು ತನಗೂ ಮೀರಜಾಫರನಿಗೂ ಆದ ಕರಾರಪತ್ರದ ನಕಲನ್ನು ಒಂದು ಕೆಂಪು ಕಾಗದದ ಮೇಲೆ ಮಾಡಿಸಿ, ಅದರಲ್ಲಿ ಮಾತ್ರ 'ಉಮಿಚಂದನಿಗೆ ೩೦ ಲಕ್ಷ ರೂಪಾಯಿಗಳನ್ನು ಕೊಡತಕ್ಕದ್ದು' ಎಂಬ ಸಂಗತಿಯನ್ನು ಕಾಣಿಸಿದನು. ಆ ಸುಳ್ಳು ಕಾಗದಕ್ಕೆ ಗವ್ಹರ್ನರನಾದ ವಾಟ್ಸನನು ಸಹಿ ಹಾಕಲು ಒಪ್ಪಲಿಲ್ಲ. ಆದದರಿಂದ ಕ್ಲೈವನು ಲುಶಿಂಗಟನ್ ಎಂಬವನಿಂದ ವಾಟ್ಸನನ ಸಹಿಮಾಡಿಸಿ ಆ ಕಾಗದವನ್ನು ಉಮಿಚಂದನಿಗೆ ತೋರಿಸಿ ಅವನನ್ನು ಸುಮ್ಮನಿರಿಸಿದನು.

೫. **ಪ್ಲಾಸಿಯ ಯುದ್ಧ** :— ಕ್ರಿ ಶ. ೧೭೫೭. ಬಳಿಕ ಕ್ಲೈವನು ಸಿರಾಜಉದ್ದೌಲನ ಮೇಲೆ ಸಾಗಿದನು. **ಪ್ಲಾಸಿ** ಎಂಬಲ್ಲಿ ಎರಡೂ ಸೈನ್ಯಗಳು ಇದಿರಾದವು ವಿಶ್ವಾಸಘಾತನು ತನ್ನ ಸೈನ್ಯದೊಂದಿಗೆ ಬದಿಗಾದನು. ಆದರೆ ಅವನು ಕ್ಲೈವನನ್ನು ಕೂಡಿಕೊಳ್ಳಲಿಲ್ಲ. ಮುಂದೆ ಯುದ್ಧವು ನಡೆದು ಸಿರಾಜಉದ್ದೌಲನ ನಂಬುಗೆಯವನಾದ ಮೀರಮದನನು ಸಾಯಲು ಸಿರಾಜ



ಲಾರ್ಡ ಕ್ಲೈವ

ಉದ್ದೌಲನು ಎದೆಗುಂದಿ ಓಡಿಹೋದನು. ಕ್ಲೈವನಿಗೆ ಜಯದೊರೆಯಿತು. ಕೂಡಲೆ ಅವನು, ಮೀರಜಾಫರನು ತನ್ನನ್ನು ಕೂಡದೆ ಇದ್ದದರ ಸಿಟ್ಟನ್ನು ತೋರಗೊಡದೆ ಅವನಿಗೆ ತಲೆಬಾಗಿ ಸಲಾಮುಮಾಡಿ, ಅವನನ್ನು ಮುರಶಿದಾ ಬಾದಕ್ಕೆ ಕರೆದೊಯ್ದು ನವಾಬನನ್ನು ಮಾಡಿದನು. ಸಿರಾಜಉದ್ದೌಲನು ಕೈಗೆ

ಸಿಗಲು, ಮೀರಜಾಫರನ ಮಗ ಮೀರನನು ಅವನನ್ನು ಕ್ರೂರತನದಿಂದ ಕೊಲ್ಲಿಸಿದನು.

ಆ ಮೇಲೆ, ಮೀರಜಾಫರನು ಮೊದಲು ಒಪ್ಪಿದಂತೆ, ಕಂಪನಿಗೂ ಅದರ ಕೆಲಸಗಾರರಿಗೂ ಕೂಡಿ ೨ ಕೋಟಿ ೨೦ ಲಕ್ಷ ರೂಪಾಯಿಗಳನ್ನು ಕೊಟ್ಟನು. ಅವುಗಳಲ್ಲಿಯ ೨೩ ಲಕ್ಷ ರೂಪಾಯಿಗಳು ಕ್ಲೈವನ ಪಾಲಿಗೆ ಬಂದವು. ನಡುವೆ ಓಡಾಡಿದ ಉಮಿಚಂದ್ರನಿಗೆ ಮಾತ್ರ ಏನೂ ಸಿಗಲಿಲ್ಲ! ಅವನು ತನ್ನ ಹಣವನ್ನು ಬೇಡಲು, ಕ್ಲೈವನು– ಕರಾರಪತ್ರದಲ್ಲಿ ನಿಮಗೆ ಹಣ ಕೊಡಬೇಕೆಂದು ಬರೆದಿಲ್ಲ; ಕೆಂಪು ಕಾಗದವು ಸುಳ್ಳು ಅದೆ. ಆದದರಿಂದ ಹಣ ಸಿಗಲಾರದು ಎಂದು ಹೇಳಿದನು

೬. **ಪ್ಲಾಸಿಯ ಯುದ್ಧದ ಪರಿಣಾಮ:**-- ಇಂಗ್ಲಿಷರು ರಾಜ್ಯಸ್ಥಾಪನೆಗಾಗಿ ಕೈಕೊಂಡ ಯುದ್ಧಗಳಲ್ಲಿ ಪ್ಲಾಸಿಯ ಯುದ್ಧವೇ ಮೊದಲನೆಯದು! ಪ್ಲಾಸಿಯ ಜಯದ ನಂತರ ಬಂಗಾಲದಲ್ಲಿ ಇಂಗ್ಲಿಷರ ಅಧಿಕಾರವು ಸ್ಥಿರವಾಯಿತು; ಇದೇ ಜಯದ ಬಲದಿಂದ ಅವರು ವಾಂಡಿವಾಶದಲ್ಲಿ ಫ್ರೆಂಚರನ್ನು ಪೂರ್ಣವಾಗಿ ಸೋಲಿಸಿ ಆರ್ಕಾಟ ಪ್ರಾಂತವನ್ನು ಕೈಸೇರಿಸಿಕೊಂಡರು. ಮರಾಠರೂ ಮೊಗಲರೂ ಅಬದಾಲಿಯ ದಾಳಿಯನ್ನು ತಡೆಯುತ್ತಿರುವಾಗ ಇತ್ತ ಬಂಗಾಲ-ಆರ್ಕಾಟ ಪ್ರಾಂತಗಳಲ್ಲಿ ನೆಲೆಯೂರಿದ ಇಂಗ್ಲಿಷರು ಪ್ಲಾಸಿಯ ಗೆಲವಿನಿಂದ ಹುರುಪುಗೊಂಡು ತಮ್ಮ ಅಧಿಕಾರವನ್ನು ಬೆಳೆಯಿಸಹತ್ತಿದರು.

೭. **ಮೀರಜಾಫರನ ಅಳಿಕೆಯೂ ಇಂಗ್ಲಿಷರ ಏಳಿಗೆಯೂ:**—ಮೀರಜಾಫರನು ನವಾಬನಾದದ್ದು ದಿಲ್ಲಿಯ ಬಾದಷಾಹನಿಗೆ ಸೇರಲಿಲ್ಲ. ಅವನು ತನ್ನ ಮಗನಾದ ಅಲ್ಲೀಗೋಹರನನ್ನು ಅಯೋಧ್ಯೆಯ ಸುಜಾಉದ್ದೌಲನೊಡನೆ ಬಂಗಾಲದ ಮೇಲೆ ಕಳುಹಿದನು. ಆಗ ಕ್ಲೈವನು ಯುದ್ಧದ ಗೋಜಿಗೆ ಹೋಗದೆ ಮೀರಜಾಫರನಿಂದ ಬಾದಷಾಹನಿಗೆ ಕಾಣಿಕೆಯನ್ನು ಕೊಡಿಸಿದನು. ಆದದರಿಂದ ಬಾದಷಾಹನು ಸಮಾಧಾನ ಹೊಂದಿ, ಮೀರಜಾಫರನನ್ನು ನವಾಬನೆಂದು ಒಪ್ಪಿದ್ದಲ್ಲದೆ, ಕ್ಲೈವನಿಗೆ **ಅಮೀರ** ಎಂಬ ಪದವಿಯನ್ನೂ ೧೧ ಸಾವಿರದ ಮನಸಬದಾರಿಕೆಯನ್ನೂ ಕೊಟ್ಟನು.

ಆದರೆ ಮಿರಜಾಫರನ ಆಳಿಕೆಯು ಸುಸೂತ್ರವಾಗಿ ಸಾಗಲಿಲ್ಲ. ಅವನು ಇಂಗ್ಲಿಷ ಕಂಪನಿಗೆ ಹಣ ಕೊಡುವವರಲ್ಲಿಯೆ ಹಣ್ಣಾದನು. ಹೊತ್ತು ಹೊತ್ತಿಗೆ ಸಂಬಳ ಸಿಗದೆಯಿದ್ದದರಿಂದ ಅವನ ಕೈಕೆಳಗಿನ ಜನರು ಅಸಂತುಷ್ಟರಾದರು. ಆಗ ಅವನು ಇಂಗ್ಲಿಷರ ಸಂಬಂಧವನ್ನು ತಪ್ಪಿಸುವದಕ್ಕಾಗಿ **ಚಿನ್ಸುರೆ**ಯಲ್ಲಿದ್ದ ಡಚ್ಚರೊಡನೆ ಒಳಸಂಚು ನಡೆಸಿದನು. ತುಸು ದಿವಸಗಳಲ್ಲಿ ಡಚ್ಚರ ಹೊಸ ದಂಡು ಚಿನ್ಸುರೆಗೆ ಬಂದಿಳಿಯಿತು. ಇದನ್ನು ತಿಳಿದು ಕ್ಲೈವನು ಕರ್ನಲ ಫೋರ್ಡನನ್ನು ಕಳುಹಿ ಡಚ್ಚರನ್ನು ಸೋಲಿಸಿ ಅವರ ಹಡಗುಪಡೆಯನ್ನು ನಾಶಗೊಳಿಸಿದನು. ಅಂದಿನಿಂದ ಡಚ್ಚರ ವರ್ಚಸ್ಸು ಅತಗಿ, ಅವರು ಹಿಂದು ಸ್ಥಾನದಲ್ಲಿ ಬರಿಯ ವ್ಯಾಪಾರವನ್ನು ಮಾಡಿಕೊಂಡು ಇರಹತ್ತಿದರು

ಬಳಿಕ ಕ್ರಿ. ಶ. ೧೭೬೦ರಲ್ಲಿ ಕ್ಲೈವನು ಇಂಗ್ಲಂಡಕ್ಕೆ ಹೋಗಲು **ವಾನ್ಸಿಟಾರ್ಟನು** ಕಲಕತ್ತೆಯ ಗವ್ಹರ್ನರನಾದನು. ಆಗ ಷಾಹೆಆಲಮನೂ ಸುಜಾ ಉದ್ದೌಲನೂ ಮತ್ತೆ ಬಂಗಾಲದ ಮೇಲೆ ದಂಡೆತ್ತಿಬಂದರು ಆದರೆ ಕರ್ನಲ್ **ಕೋಲಿಅಡ್, ಮಿರನ,** ಕ್ಯಾಪ್ಟನ್ **ನಾಕ್ಸ್** ಇವರು ಅವರನ್ನು ಪೂರ್ಣವಾಗಿ ಸೋಲಿಸಿದರು. ಆದರೆ ಈ ಯುದ್ಧವು ನಡೆದಿರುವಾಗ ಮಿರಜಾಫರನ ಒಬ್ಬನೇ ಮಗನಾಗಿದ್ದ ಮಿರನನು ಸಿಡಿಲುಬಡಿದು ಸತ್ತನು.

ಮಿರಜಾಫರನು ಹೆಸರಿಗೆ ನವಾಬನಾಗಿದ್ದು ಅಧಿಕಾರವೆಲ್ಲ ಕಂಪನಿಯ ಕೈಸೇರಿತ್ತು. ಮಿರನನು ಸತ್ತಬಳಿಕ ಮಿರಜಾಫರನ ಅಳಿಯನಾದ **ಮಿರ ಕಾಶೀಮನು** ತನ್ನನ್ನು ನವಾಬನನ್ನು ಮಾಡಜೇಕೆಂದು ಕಂಪನಿಯವರಿಗೆ ಹೇಳಿಕೊಂಡನು ಆಗ ವಾನ್ಸಿಟಾರ್ಟನು ಮಿರಜಾಫರನನ್ನು ತಳ್ಳಿ ಮಿರ ಕಾಸೀಮನನ್ನು ಪಟ್ಟಕ್ಕೆ ಕುಳ್ಳಿರಿಸಿದನು. ಇದಕ್ಕಾಗಿ ಮಿರಕಾಸೀಮನು ಮಿರ ಜಾಫರನ ಕಾಲದ ಸಾಲವನ್ನು ತೀರಿಸಿದ್ದಲ್ಲದೆ **ಬರದ್ವಾನ, ಮಿದನಾಪೂರ, ಚಿತಗಾಂಗ** ಎಂಬ ಮೂರು ಪರಗಣೆಗಳನ್ನು ಕಂಪನಿಯವರಿಗೆ ಕೊಟ್ಟನು. ಈ ಬಗೆಯಿಂದ ಬಂಗಾಲದಲ್ಲಿ ನವಾಬನ ಅಧಿಕಾರವು ಕಡಿಮೆಯಾಗುತ್ತಲೂ ಇಂಗ್ಲಿಷರ ಅಧಿಕಾರವು ಹೆಚ್ಚುತ್ತಲೂ ನಡೆಯಿತು.

೮. **ಮಧ್ಯಕಾಲದ ಇತಿಹಾಸದ ಸಿಂಹಾವಲೋಕನ**:— ಕ್ರಿ. ಶ. ೧೭೦೬ರಲ್ಲಿ ಆರಂಭವಾದ ಮಧ್ಯಕಾಲದ ಇತಿಹಾಸವು ಕ್ರಿ ಶ ೧೭೬೧ಕ್ಕೆ

ಮುಗಿಯುವದು. **ಈ** ಕಾಲದಲ್ಲಿ ಮೊದಲು ಉತ್ತರದಲ್ಲಿ **ಪಠಾಣರ** ಸಾಮ್ರಾಜ್ಯವು ನೆಲೆಗೊಂಡು ಬೆಳೆದು, ಅಳಿಯಿತು. ದಕ್ಷಿಣದಲ್ಲಿ **ವಿಜಯನಗರದ ಸಾಮ್ರಾಜ್ಯವು ಮೂಡಿ**, ಬೆಳಗಿ, ಮುಳುಗಿತು: ಪಠಾಣರ ತರುವಾಯ **ಮೊಗಲರು** ದಿಲ್ಲಿಯ ಒಡೆಯರಾಗಿ, ಅಬ್ಬರದಿಂದ ಬಾಳಿ, ಕಡೆಗೆ ಹೆಸರಿಗೆ ಬಾದಷಾಹರಾಗಿ ಉಳಿದರು. ಮತ್ತು ಮೊಗಲರು ಬಲಗುಂದಿದ ಕಾಲದಲ್ಲಿ **ಮರಾಠರು** ಪ್ರಬಲರಾಗಿ ಸಾಮ್ರಾಜ್ಯ ವೈಭವದಿಂದ ಮೆರೆಯುತ್ತಿರಲು ಪಾನಿಪತದ ಯುದ್ಧದ ಆಘಾತದಿಂದ ಹಿಂಜರಿದು ನಿಂತರು

ಪಠಾಣರೂ ಮೊಗಲರೂ ಜಂಗೀಜಖಾನ, ನಾದಿರಷಾಹ, ಅಬದಾಲಿ ಮುಂತಾದ ದಾಳಿಗಾರರೂ ವಾಯವ್ಯ ಮಾರ್ಗವಾಗಿ ಈ ದೇಶವನ್ನು ಸೇರಿದರು. ಈ ದಾರಿಯಿಂದ ಪರಚಕ್ರಗಳು ಬರುವ ಕ್ರಮವು ಮಧ್ಯಕಾಲದ ಆರಂಭದಿಂದ ಕೊನೆಯವರೆಗೆ ನಡೆಯಿತು. ಅವರಿಂದ ದಿಲ್ಲಿಯ ಒಡೆಯರಾಗಿದ್ದವರಿಗೆ ಈ ದಾಳಿಗಾರರನ್ನು ತಡೆಯುವದೊಂದು ಮಹತ್ವದ ಕೆಲಸವಾಗಿತ್ತು.

ಕ್ರಿ ಶ ೧೫೫೦ನೆಯ ಶತಕದ ಕಡೆಯಿಂದ ಈಚೆಗೆ ಪೋರ್ತುಗೀಜ ಮೊದಲಾದ ಯುರೋಪಿಯನರು ಸಮುದ್ರ ಮಾರ್ಗವಾಗಿ ಬಂದು ಈ ದೇಶದಲ್ಲಿ ನೆಲೆಗೊಂಡರು. ಇವರು ವಾಯವ್ಯ ದಿಕ್ಕಿನಿಂದ ಬಂದ ಪಠಾಣ ಮುಂತಾದವರಂತೆ ಸುಲಿಗೆಯ ಇಲ್ಲವೆ ರಾಜ್ಯದ ಆಶೆಯಿಂದ ಬಂದವರಲ್ಲ; ವ್ಯಾಪಾರವು ಇವರ ಉದ್ದೇಶವಾಗಿತ್ತು ಆದರೆ ಮುಂದೆ ಎಲ್ಲರಿಗೂ ಹೆಚ್ಚು ಕಡಿಮೆ ಪ್ರಮಾಣದಿಂದ ರಾಜ್ಯದಾಶೆ ಹುಟ್ಟಿತು ಇವರಲ್ಲಿಯ ಪೋರ್ತುಗೀಜ, ಡಚ್ಚರ ಆಶೆಯು ವ್ಯರ್ಥವಾದ ಬಳಿಕ ಕ್ರಿ ಶ ೧೭೫೦ನೆಯ ಶತಕದ ಮಧ್ಯದ ಸುಮಾರಕ್ಕೆ ಫ್ರೆಂಚರೂ ಇಂಗ್ಲಿಷರೂ ರಾಜ್ಯವಿಸ್ತಾರಕ್ಕಾಗಿ ಸಾಹಸ ಮಾಡಹತ್ತಿದರು. ಕಡೆಗೆ ಇಂಗ್ಲಿಷರು ಫ್ರೆಂಚರನ್ನು ಮುರಿದು ಬಂಗಾಲ-ಕರ್ನಾಟ ಪ್ರಾಂತಗಳಲ್ಲಿಯೂ ಕೆಲಮಟ್ಟಿಗೆ ಪಶ್ಚಿಮ ತೀರದಲ್ಲಿಯೂ ಸ್ಥಿರಗೊಂಡರು.

ಈ ಮಧ್ಯಕಾಲದಲ್ಲಿ ಹಿಂದುಸ್ಥಾನದಲ್ಲಿಯ ಪ್ರಾಚೀನ ಕಾಲದಲ್ಲಿ ನೆಲೆಗೊಂಡಿದ್ದ ಸ್ವಾಸ್ಥ್ಯವು ಇಲ್ಲದಾಯಿತು; ದೇಶಕ್ಕೆ ಹಲವು ಕುತ್ತುಗಳೊದಗಿದವು; ದಾಳಿಗಾರರು ಅಗಣಿತ ಸಂಪತ್ತನ್ನು ಸುಲಿದೊಯ್ದರು; ಸಾವಿರಗಟ್ಟಲೆ ಜನರು ಕ್ರೂರ ಕೊಲೆಗೆ ಗುರಿಯಾದರು; ಒಂದಿಲ್ಲೊಂದು ಕಡೆಯಲ್ಲಿ ಧರ್ಮದ ಬಲು

ಮೆಯು ನಡವೇ ಇದ್ದಿತು. ಮುಸಲ್ಮಾನರೂ ಪೋರ್ತುಗೀಜರೂ ತಮ್ಮ ಧರ್ಮ ವನ್ನೂ ರಾಜ್ಯವನ್ನೂ ಹಬ್ಬಿಸುವದಕ್ಕಾಗಿ ಮಿತಿಮೀರಿ ಪ್ರಯತ್ನ ಮಾಡಿದರು. ಹಿಂದುಗಳು ಧರ್ಮ ಮತ್ತು ಸ್ವಾತಂತ್ರ್ಯ ಇವುಗಳನ್ನು ಕಾಯ್ದುಕೊಳ್ಳುವದ ಕ್ಕಾಗಿ ಹೆಣಗಿದರು. ಪೋರ್ತುಗೀಜರು ನೀಗದ ಕೆಲಸಕ್ಕೆ ಕೈಹಾಕಿ ನಿರಾಶ ರಾದರು. ಹಿಂದು-ಮುಸಲ್ಮಾನರಿಬ್ಬರೂ ಕಾದಿಕಾದಿ ದಣಿದರು. ಪಾನಿಪತದ ಯುದ್ಧವಾದ ಎರಡೇ ದಿವಸಕ್ಕೆ ಪಾಂಡಿಚೇರಿಯಲ್ಲಿ ವಿಜಯಿಗಳಾದ ಇಂಗ್ಲಿಷರು ರಾಜ್ಯಸ್ಥಾಪನೆಯ ಉದ್ಯೋಗವನ್ನು ಕೈಕೊಂಡರು.

ಮಧ್ಯಕಾಲದ ಇತಿಹಾಸವು ಇಲ್ಲಿಗೆ ಮುಗಿಯಿತು ಇನ್ನು ಮುಂದೆ ಅರ್ವಾಚೀನ ಕಾಲದ ಇತಿಹಾಸವು ಆರಂಭವಾಗುವದು

೨ನೆಯ ಭಾಗ

ಅರ್ವಾಚೀನ ಕಾಲ

(ಕ್ರಿ. ಶ. ೧೭೬೧—೧೯೩೯)

೧ನೆಯ ಪಾಠ

ಬಂಗಾಲದಲ್ಲಿ ಇಂಗ್ಲಿಷರ ರಾಜ್ಯಸ್ಥಾಪನೆಯ ಆರಂಭ

೧ **ಮೀರಕಾಸೀಮನ ಆಳಿಕೆ**:— ಮೀರಕಾಸೀಮನು ನವಾಬನಾದ ಬಳಿಕ ತನ್ನ ರಾಜಧಾನಿಯನ್ನು ಮುರ್ಶಿದಾಬಾದದಿಂದ **ಮೋಂಗೀರಕ್ಕೆ** ಒಯ್ದು ಹಿಡಿತದಿಂದ ಕಾರಭಾರವನ್ನು ಸಾಗಿಸಿ, ಕಂಪನಿಯ ಸಾಲವನ್ನು ತೀರಿಸಿದನು. ಕಂಪನಿಯ ಅಳುಕಿನಲ್ಲಿರುವದು ಅವನಿಗೆ ಬೇಡೆನಿಸಿತು. ಅವನು ತನ್ನ ಸೈನ್ಯವನ್ನು ತಿದ್ದಿಕೊಂಡು ತೋಪು-ತುಬಾಕೆಗಳ ಕಾರಖಾನೆಯನ್ನು ಸಹ ಹಾಕಿದನು.

ನವಾಬನ ರಾಜ್ಯದಲ್ಲಿ ಕಂಪನಿಯ ಸರಕೆಗೆ ಸುಂಕವಿದ್ದಿಲ್ಲ. ಆದರೆ ಆದರ ಕೆಲಸಗಾರರು ಸ್ವಂತದ ಸರಕನ್ನೂ ಸುಂಕವಿಲ್ಲದೆ ಮಾರಹತ್ತಿದರು. ಇದರಿಂದ ರಾಜ್ಯದ ಉತ್ಪನ್ನವು ಕಡಿಮೆಯಾಗಹತ್ತಿದ್ದಲ್ಲದೆ ಸುಂಕ ಕೊಡುತ್ತಿದ್ದ ದೇಶೀಯ ವ್ಯಾಪಾರಸ್ಥರ ವ್ಯಾಪಾರವು ಕಟ್ಟಾಗಹತ್ತಿತು. ಆದದರಿಂದ ನವಾಬನು ಕೆಲಸಗಾರರ ಈ ಅನ್ಯಾಯವನ್ನು ತಡೆಯಬೇಕೆಂದು ವಾನ್ಸಿಟಾರ್ಟನಿಗೆ ತಿಳಿಸಿದನು. ಆದರೆ ಅದರಿಂದ ಉಪಯೋಗವಾಗಲಿಲ್ಲ. ಆಗ ಮೀರಕಾಸೀಮನು ದೇಶೀಯ ವ್ಯಾಪಾರಸ್ಥರ ಸರಕೆಗೂ ಸುಂಕದ ಬಿಡುವು ಕೊಟ್ಟನು. ಇದು ಕಂಪನಿಯವರಿಗೆ ಸರಿಬರಲಿಲ್ಲ. ಅವರು ನವಾಬನಿಗೆ ಹೀಗೆ ಬಿಡುವು ಕೊಡುವ ಅಧಿಕಾರವಿಲ್ಲೆಂದು ನಿರ್ಣಯಿಸಿದರು.

೨. **ಬಕ್ಸಾರದ ಯುದ್ಧ**:— ಕ್ರಿ. ಶ. ೧೭೬೪. ಬಳಿಕ **ಪಾಟಣಾ**ದಲ್ಲಿದ್ದ **ಎಲಿಸ** ಎಂಬ ಇಂಗ್ಲಿಷ ಅಧಿಕಾರಿಯು ನವಾಬನ ಕೆಲವು ಅಧಿಕಾರಿಗಳನ್ನು

ಸೆರೆಯಲ್ಲಿಟ್ಟನು. ಕೂಡಲೆ ನವಾಬನು ದಂಡನ್ನು ಕಳುಹಿ ಎಲಿಸನನ್ನೂ ಅವನ ನೂರಾರು ಜನರನ್ನೂ ಸೆರೆಹಿಡಿದನು. ಇಂಗ್ಲಿಷ ಕಂಪನಿಯ ನೈನ್ಯವು ಪಾಟ ಣಾದ ಮೇಲೆ ಸಾಗಿಬಂದಿತು. **ಘೇರಿಯಾ** ಎಂಬಲ್ಲಿ ಯುದ್ಧವಾಗಿ ಮೀರ ಕಾಸೀಮನು ಸೋಲಲು, ಅವನು ರೇಗಿಗೆದ್ದು ತನ್ನ ಸೆರೆಯಲ್ಲಿದ್ದ ಎಲಿಸ ಮುಂತಾದವರನ್ನೆಲ್ಲ ಕೊಲ್ಲಿಸಿದನು ಮತ್ತು ಅಲ್ಲಿಂದ ಓಡಿಹೋಗಿ **ಷಾಹೆ ಆಲಮ, ಸುಜಾಉದ್ದೌಲ** ಇವರನ್ನು ಕೂಡಿಕೊಂಡು ಪಾಟಣಾದ ಕಡೆಗೆ ಸಾಗಿ ಬಂದನು. ಇಷ್ಟರಲ್ಲಿ ಕಂಪನಿಯವರು **ಮೀರಜಾಫರ**ನನ್ನು ಮತ್ತೆ ಪಟ್ಟಗಟ್ಟಿ, ತಮ್ಮ ಅಧಿಕಾರವನ್ನು ಸ್ಥಿರಪಡಿಸಿಕೊಂಡಿದ್ದರು ಅವರ ಕಡೆಯ ಮೇಜರ **ಮನ್ರೊ** ಎಂಬವನು **ಬಕ್ಸಾರ** ದಬಳಿಯಲ್ಲಿ ಮೀರಕಾಸೀಮ ನೊದಲಾದವರನ್ನು ಪೂರ್ಣವಾಗಿ ಸೋಪಸಿ, ಲಖನೌ ಮುಂತಾದ ಪಟ್ಟಣಗಳನ್ನು ವಶಮಾಡಿ ಕೊಂಡನು.

೩. **ಅಲಹಾಬಾದದ ಒಪ್ಪಂದ**:— ಕ್ರಿ ಶ. **೧೭೬೫** ಕ್ರಿ. ಶ **೧೭೬೦** ರಲ್ಲಿ ಕ್ಲೈವನು ಇಂಗ್ಲಂಡಕ್ಕೆ ಹೋದ ಸಂಗತಿಯನ್ನು ಹಿಂದೆ ಹೇಳಿದೆ. ಇವನು ಇಂಗ್ಲಂಡದಲ್ಲಿಯ ಒಬ್ಬ ವಕೀಲರ ಮಗನು. ಚಿಕ್ಕಂದಿನಲ್ಲಿ ಅಭ್ಯಾಸ ಕ್ಕಿಂತ ಆಟ-ನೋಟಗಳ ಕಡೆಗೆ ಇವನ ಲಕ್ಷ್ಯವು ವಿಶೇಷವಿತ್ತು. ವಿದ್ಯೆಯಲ್ಲಿ ಮುಂದುವರಿಯನೆಂದು ತಿಳಿದು ಇವನ ತಾಯಿ-ತಂದೆಗಳು ಇವನನ್ನು ಈಸ್ಟ ಇಂಡಿಯಾ ಕಂಪನಿಯಲ್ಲಿ ಸೇರಿಸಿದರು ಇವನು ಮದ್ರಾಸದಲ್ಲಿ ಕೆಲವು ದಿವಸ ಕಾರಕೂನನಾಗಿದ್ದ ಬಳಿಕ ಆ ಕೆಲಸವನ್ನು ಮಾಡಲು ಮನಸ್ಸು ಒಪ್ಪದೆ ಇದ್ದುದರಿಂದ ಅದನ್ನು ಬಿಟ್ಟು ಸೈನ್ಯದಲ್ಲಿ ಸೇರಿದನು ಮೇಲಾದ ಸೇನಾಪತಿ ಯೆನಿಸಿದನು. ಮತ್ತು ಪ್ಲಾಸಿಯ ಯುದ್ಧದಲ್ಲಿ ಸಿರಾಜಉದ್ದೌಲನನ್ನು ಸೋಲಿಸಿ, ಬಂಗಾಲದಲ್ಲಿ ಕಂಪನಿಯ ಅಧಿಕಾರವನ್ನು ನೆಲೆಸಿದನು ಇವನು ಇಂಗ್ಲಂಡಕ್ಕೆ ಹೋದಾಗ ಒಳ್ಳೇ ಮರ್ಯಾದೆಯನ್ನೂ ಲಾರ್ಡ ಪದವಿ ಯನ್ನೂ ಪಡೆದನು. ವಾಸ್ಸಿಟಾರ್ಟನ ತರುವಾಯ ಕಂಪನಿಯವರು ಇವನನ್ನೇ ಬಂಗಾಲದ ಗವ್ಹರ್ನರನನ್ನಾಗಿ ಮಾಡಿ ಕಳುಹಿದರು.

ಕ್ಲೈವನು ಮರಳಿ ಬರುವಷ್ಟರಲ್ಲಿ ಬಕ್ಸಾರದ ಯುದ್ಧವು ಮುಗಿದು ಬಂಗಾಲ ಪ್ರಾಂತವು ಪೂರ್ಣವಾಗಿ ಕಂಪನಿಯ ಕೈಸೇರಿತ್ತು. ಆಗ ಕಂಪ-ನಿಯ ರಾಜ್ಯವನ್ನು ಸ್ಥಾಪಿಸುವದು ಶಕ್ಯವಿದ್ದರೂ ಅದಕ್ಕೆ ಡಾಯರೆಕ್ಟರರು

ಒಪ್ಪಿಗೆಯನ್ನು ಕೊಡಲಿಲ್ಲ. ಆದರಿಂದ ಕ್ಲೈವನು **ಅಲಹಾಬಾದಕ್ಕೆ** ಹೋಗಿ ಷಾಹೆ ಆಲಮು ಮತ್ತು ಸುಜಾಉದ್ದೌಲ ಇವರ ಸಂಗಡ ಒಪ್ಪಂದ ಮಾಡಿಕೊಂಡನು. ಕ್ರಿ. ಶ. ೧೭೬೫.

ಷಾಹೆಆಲಮನೊಡನೆ ಆದ ಒಪ್ಪಂದ :- ೧. ಬಾದಷಾಹನು **ಬಂಗಾಲ, ಬಿಹಾರ, ಓಡಿಸಾ** ಈ ಪ್ರಾಂತಗಳ ದಿವಾಣೀ ಅಧಿಕಾರವನ್ನು ಕಂಪನಿಗೆ ಕೊಡಬೇಕು. ೨. ಕಂಪನಿಯವರು **ಕೋರಾ, ಅಲಹಾಬಾದ** ಜಿಲ್ಲೆಗಳನ್ನೂ ವರ್ಷಕ್ಕೆ ೭೬ ಲಕ್ಷ ರೂ. ಕಾಣಿಕೆಯನ್ನೂ ಬಾದಷಾಹನಿಗೆ ಕೊಡಬೇಕು.



ಲಾರ್ಡ ಕ್ಲೈವನು ಷಾಹೆ ಆಲಮನಿಂದ ದಿವಾಣ ಅಧಿಕಾರ ಪಡೆದದ್ದು.

೩. ಕಂಪನಿಯವರು ನಿಜಾಮನಿಂದ ಉತ್ತರ ಸರಕಾರವನ್ನು ಪಡೆದುಕೊಂಡ ದ್ದಕ್ಕೆ ಬಾದಷಾಹನು ಒಪ್ಪಿಗೆಯನ್ನು ಕೊಡಬೇಕು.

ಸುಜಾಉದ್ದೌಲನ ಕೂಡ ಆದ ಒಪ್ಪಂದ:— ೧. ವಜೀರನು ಕಾರಣ ವಿಲ್ಲದೆ ಯುದ್ಧಮಾಡಿದ್ದರಿಂದ ೫೦ ಲಕ್ಷ ರೂಪಾಯಿಗಳನ್ನು **ಕೋರಾ ಅಲಹಾಬಾದ** ಜಿಲ್ಲೆಗಳನ್ನೂ ಕಂಪನಿಗೆ ಕೊಡಬೇಕು. ೨. ತನ್ನ ರಾಜ್ಯದಲ್ಲಿ ಕಂಪನಿಯ ಸರತಿನ ಮೇಲೆ ಸುಂಕವನ್ನೆತ್ತಬಾರದು. ೩. ಮಾಂಡಲಿಕನಾಗಿದ್ದ

ಕಾಶಿಯ ಅರಸನಾದ **ಬಲವಂತಸಿಂಗ**ನ ಮೇಲಿನ ತನ್ನ ಒಡೆತನವನ್ನು ವಜೀರನು ಬಿಟ್ಟುಬಿಡಬೇಕು.

೪. **ಕ್ಲೈವನ ಇಬ್ಬಗೆಯ ಆಳಿಕೆ** :— ಅಲಹಾಬಾದಿನ ಒಪ್ಪಂದದ ನಂತರ ಕ್ಲೈವನು ಬಂಗಾಲದ ಕಂದಾಯದ ಹಣವನ್ನೆತ್ತುವ ಅಧಿಕಾರವನ್ನೂ ಸೈನ್ಯದ ವ್ಯವಸ್ಥೆಯನ್ನೂ ಕಂಪನಿಯ ಕೈಯಲ್ಲಿಟ್ಟುಕೊಂಡನು; ಮತ್ತು ನ್ಯಾಯತೀರಿಸುವದು ಮುಂತಾದ ಅಧಿಕಾರಗಳನ್ನು ನವಾಬನ ಕಡೆಗೆ ಒಪ್ಪಿಸಿದನು. ಆಗ ಬಂಗಾಲದ ಉತ್ಪನ್ನವು ೪ ಕೋಟಿಯಿತ್ತು. ನವಾಬನ ಕಾರಭಾರದ ವೆಚ್ಚಕ್ಕಾಗಿ ೫೩ ಲಕ್ಷ ರೂಪಾಯಿಗಳನ್ನು ಕಂಪನಿಯವರು ಅವನಿಗೆ ಕೊಡಬೇಕೆಂದು ಗೊತ್ತುಮಾಡಿದನು. ಈ ರೀತಿಯಿಂದ ಎರಡು ಬಗೆಯ ಆಳಿಕೆಯು ಬಂಗಾಲದ ಮೇಲೆ ನಡೆಯಹತ್ತಿತು. ಈ ಆಳಿಕೆಗೆ '**ಕ್ಲೈವನ ಇಬ್ಬಗೆಯ ಆಳಿಕೆ**' (ದಿ ಡಬಲ್ ಗವ್ರ್ನರ್ಮೆಂಟ್) ಎಂಬ ಹೆಸರು.

೫. **ಕಂಪನಿಯ ಕಾರಭಾರದಲ್ಲಿ ಆದ ಸುಧಾರಣೆಗಳು** :— ಮೀರ-ಜಾಫರನ ಕಾಲದಿಂದ, ಕಾಣಿಕೆಗಳನ್ನು ತೆಗೆದುಕೊಳ್ಳುವ ಚಟವು ಕಂಪನಿಯ ಕೆಲಸಗಾರರ ಮೈಯ್ಯುಂಡಿತ್ತು; ಅವರು ಸ್ವಂತದ ವ್ಯಾಪಾರವನ್ನು ಬಲಿಸಿ ಒಳ್ಳೆಯ ರೊಕ್ಕಸ್ತರಾಗಿದ್ದರು. ಅಲ್ಲದೆ, ಯುದ್ಧಕಾಲದಲ್ಲಿ ಸಿಗತಕ್ಕ ಇಮ್ಮಡಿ ಭತ್ತೆಯನ್ನು ಉಳಿವ ಕಾಲದಲ್ಲಿಯೂ ಅವರು ತೆಗದುಕೊಳ್ಳುತ್ತಿದ್ದರು ಆದನರಿಂದ ಕ್ಲೈವನು, ಕೆಲಸಗಾರರು ಕಾಣಿಕೆಗಳನ್ನು ತೆಗೆದುಕೊಳ್ಳಬಾರ-ದೆಂದೂ ಸ್ವಂತದ ವ್ಯಾಪಾರವನ್ನು ಇಂತಿಷ್ಟಕ್ಕಿಂತ ಹೆಚ್ಚಿಸಕೂಡದೆಂದೂ ಕಟ್ಟುಮಾಡಿದನು; ಮತ್ತು ಇಮ್ಮಡಿ ಭತ್ತೆಯನ್ನು ನಿಲ್ಲಿಸಿಬಿಟ್ಟನು.

ಇವರಿಂದ ಕೆಲಸಗಾರರು ಕ್ಲೈವನನ್ನು ದೂಷಿಸಹತ್ತಿದರು. ಹಲವರು ಕೆಲಸಗಳನ್ನು ಬಿಟ್ಟುಕೊಟ್ಟರು. ಸೈನ್ಯದೊಳಗಿನ ಯುರೋಪಿಯನರು ದಂಗೆ ಯೆಬ್ಬಿಸಿದರು. ಆವರೆ ಕ್ಲೈವನು ಹಿಂಜರಿಯದೆ ದೇಶೀಯ ಸೈನಿಕರ ಸಹಾಯ ದಿಂದ ದಂಗೆಯನ್ನು ಅಡಗಿಸಿದನು. ಕಡೆಗೆ ಕೆಲಸಗಾರರ ಸಂಬಳವನ್ನು ಹೆಚ್ಚಿಸಿ ಸುಧಾರಣೆಗಳನ್ನು ಸ್ಥಿರಪಡಿಸಿದನು.

೬. **ಕ್ಲೈವನ ನ್ಯಾಯವಿಚಾರಣೆ ಮತ್ತು ಕೊನೆ**:— ಬಳಿಕ ಕ್ಲೈವನು ಕ್ರಿ. ಶ. ೧೭೬೭ರಲ್ಲಿ ಸ್ವದೇಶಕ್ಕೆ ಹೋದನು. ಅವನು ಕಂಪನಿಯ ಹಿತವನ್ನು

ಸಾಧಿಸುವದಕ್ಕಾಗಿ ಹಲವು ಅನ್ಯಾಯಗಳನ್ನು ದೂಡಿದ್ದನು. ಅವನ್ನೇ ಮುಂದು ಮಾಡಿ, ಅವನ ವಿರೋಧಿಗಳು ಅವನನ್ನು ಪಾರ್ಲಿಮೆಂಟಿನ ನ್ಯಾಯವಿಚಾರಣೆಗೆ ಗುರಿಮಾಡಿದರು. ವಿಚಾರಣೆಯ ಕಾಲಕ್ಕೆ ಆ ವಿರೋಧಿಗಳು, ಕ್ಲೈವನು ಸುಳ್ಳು ಸಹಿ ಮಾಡಿಸಿದ್ದು, ಉಮಿಚಂದನನ್ನು ಮೋಸಗೊಳಿಸಿದ್ದು, ನವಾಬರಿಂದ ಕಾಣಿಕೆಗಳನ್ನು ತಕ್ಕೊಂಡದ್ದು ಮುಂತಾದ ಅಪರಾಧಗಳನ್ನು ಮುಂದಿಟ್ಟು ಇವನು ಇಂಗ್ಲಿಷರ ಕೀರ್ತಿಗೆ ಕುಂದುತಂದನೆಂದು ಹೇಳಿದರು ಮತ್ತೆ ಕೆಲವರು ಇವನು ಇಕ್ಕಟ್ಟಿನ ಪ್ರಸಂಗದಲ್ಲಿ ಮುಂದಾಗಿ ಕಂಪನಿಯ ಅಧಿಕಾರವನ್ನು ಉಳಿಸುವದಕ್ಕೂ ಬೆಳೆಸುವದಕ್ಕೂ ಕ್ಲೈವನೇ ಕಾರಣನಾದ್ದರಿಂದ ಇವನು ನಿರ್ದೋಷಿಯೆಂದು ಸಾಧಿಸಿದರು. ಕೊನೆಗೆ ಅವನ ಹೊಗಳಿಕೆಯ ಗೊತ್ತು ವಳಯೇ ಪಾರ್ಲಮೆಂಟಿನಲ್ಲಿ ಪಾಸಾಯಿತು! ಆದರೂ ಜನರು ಅವನನ್ನು ಆಡಿ ಕೊಳ್ಳುವದು ತಪ್ಪಲಿಲ್ಲ. ಆದದರಿಂದ ಅವನು ಜೀವಕ್ಕೆ ಬೇಸರಗೊಂಡು ಕಡೆಗೆ ಆತ್ಮಹತ್ಯ ಮಾಡಿಕೊಂಡನು. ಕ್ರಿ. ಶ ೧೭೭೪.

೨ನೆಯ ಪಾಠ

ಕ್ಲೈವನ ತರುವಾಯದ ಕಂಪನಿಯ ಕಾರಭಾರ

(ಕ್ರಿ ಶ ೧೭೬೭ – ೧೭೭೨)

೧. ಇಬ್ಬಗೆಯ ಆಳಿಕೆಯ ಪರಿಣಾಮ:– ಬಂಗಾಲದಲ್ಲಿಯ ದಿವಾಣಿ ಅಧಿಕಾರವು ತಮ್ಮ ಕೈಸೇರಿದ ಬಳಿಕ, ಕಂಪನಿಯವರು ಜನರ ಸ್ಥಿತಿಗತಿಯನ್ನು ಲಕ್ಷಿಸದೆ ಕಂದಾಯದ ಹಣವನ್ನು ಎತ್ತತೊಡಗಿದರು. ಇದರಿಂದ ಜನರ ಮೇಲೆ ಅನ್ಯಾಯವಾಗಹತ್ತಿತು. ಈ ಅನ್ಯಾಯಗಳನ್ನು ಜನರು ನವಾಬನ ನ್ಯಾಯಾಸನದ ಮುಂದೆ ಮೂರಿಕೊಂಡರೂ ಉಪಯೋಗವಾಗುತ್ತಿರಲಿಲ್ಲ. ಏಕಂದರೆ ಕಂಪನಿಯವರ ನೆರವಿನಿಂದ ನವಾಬನಾದವನು ಅವರ ವಿರುದ್ಧವಾಗಿ ತೀರ್ಪು ಕೊಡುವದೂ ಆ ತೀರ್ಪಿನಂತೆ ಅವರನ್ನು ನಡೆಯಹಚ್ಚುವದೂ ಶಕ್ಯವಿರಲಿಲ್ಲ. ಹೀಗೆ ಅನ್ಯಾಯಗಳಿಗೆ ತಡೆಯಿಲ್ಲದಂತಾದದರಿಂದ ಕಂಪನಿಯ ಅಧಿಕಾರಿಗಳು ತಕರಾರಿ ಜನರಿಂದ ಒತ್ತಾಯದಿಂದ ಹಣವೆತ್ತತಹತ್ತಿದರು.

ಕಂಪನಿಯವರು, ನವಾಬನಿಗೆ ಕೊಡತಕ್ಕ ಹಣವನ್ನು ಬರಬರುತ್ತ ಕಡಿಮೆ ಮಾಡಹೆತ್ತಿದರು. ಕ್ರಿ. ಶ. ೧೭೬೯ರಲ್ಲಿ ಅದು ೩೨ ಲಕ್ಷ ಆಯಿತು. ಇದರಿಂದ ನವಾಬನೂ ಅವನ ಕೈಕೆಳಗಿನವರೂ ತಮ್ಮ ಅಧಿಕಾರವು ಎಲ್ಲಿ ಕೈಬಿಡುವದೋ

ಎಂದು ಹೆದರಿ, ಸಾಧಿಸಿದಷ್ಟು ಹಣವನ್ನು ಜನರಿಂದ ಸೆಳಕೊಳ್ಳಹತ್ತಿದರು. ಈ ಪ್ರಕಾರ ಇಬ್ಬಗೆಯ ಆಳಿಕೆಯಲ್ಲಿ ರೈತರ ಸ್ಥಿತಿಯು ತೀರ ಕೀಳಾಯಿತು.

೨. ಬಂಗಾಲದಲ್ಲಿ ಉಂಟಾದ ಹಾಹಾಕಾರ:— ಕ್ರಿ. ಶ. ೧೭೬೯ರಲ್ಲಿ ಮಳೆಯಾಗದ್ದರಿಂದ ಅಲ್ಲಿ ಭಯಂಕರವಾದ ಬರಬಿದ್ದಿತು. ಆಗ ಅಲ್ಲಿಯ ಒಂದು ಮೂರನೆಯಂಶ ಜನಸಂಖ್ಯೆಯು ಲಯ ಹೊಂದಿತು! ಬರಬಿದ್ದ ವರ್ಷ ಕಂಪನಿಯವರು ೧೦೦ಕ್ಕೆ ೫ರಂತೆ ಬಿಡುವು ಕೊಟ್ಟು ಮರುವರ್ಷ ೧೦೦ಕ್ಕೆ ೧೦ರಂತೆ ಹೆಚ್ಚು ಹಣವನ್ನೆತ್ತಿ ತಮ್ಮ ಲಾಭವನ್ನೇ ಸಾಧಿಸಿಕೊಂಡರು. ಇಲ್ಲಿಂದ ರೇಶಿಮೆಯನ್ನು ಇಂಗ್ಲಂಡಕ್ಕೆ ಒಯ್ದು ಅಲ್ಲಿಂದ ಸಿದ್ಧವಾದ ಬಟ್ಟೆಗಳನ್ನು ಇಲ್ಲಿ ತರಿಸಿ ಮಾರಹತ್ತಿದ್ದರಿಂದ ಬಂಗಾಲದಲ್ಲಿ ಢಾಕಾ ಮುಂತಾದ ಸ್ಥಳಗಳಲ್ಲಿ ನೆಯಕಾರಿಕೆಗೆ ಬಲವಾದ ತಡೆಯುಂಟಾಯಿತು.

೩. ಹೈದರನ ಉದಯ:— ಹೈದರನು ಕ್ರಿ. ಶ. ೧೭೨೦ರಲ್ಲಿ **ಬೂದಿಕೋಟೆ**ಯಲ್ಲಿ ಹುಟ್ಟಿದನು. ಇವನ ತಂದೆಯಾದ **ಫತ್ತೆಮಹಮ್ಮದನು** ಕೋಲಾರದ ಫೌಜದಾರನಿದ್ದನು. ಬೂದಿಕೋಟೆಯು ಅವನಿಗೆ ಉಂಬಳಿಯಾಗಿತ್ತು. ಹೈದರನು ೮ ವರ್ಷದವನಿರುವಾಗ ಇವನ ತಂದೆಯು ತೀರಿದನು. ಮುಂಚೆ ಹೈದರನು ವಯಸ್ಸಿಗೆ ಬಂದ ಬಳಿಕ ಬೆಂಗಳೂರಿಗೆ ಹೋಗಿ ಮೈಸೂರ ದಂಡಿನಲ್ಲಿ ಸೇರಿದನು.



ಹೈದರ ಅಲಿ

ಕ್ರಿ. ಶ. ೧೭೦೪ರಿಂದ ಮೈಸೂರಿನ ಒಡೆಯರು ಹೆಸರಿಗೆ ಅರಸರಾಗಿ ಕಾರಭಾರವನ್ನೆಲ್ಲ ದಳವಾಯಿಗಳೂ ಸರ್ವಾಧಿಕಾರಿಗಳೂ ಸಾಗಿಸುತ್ತ ಬಂದಿದ್ದರು. **ನಂಜರಾಜಯ್ಯನು** ಸರ್ವಾಧಿಕಾರಿಯಾಗುವಾಗ, ಅವನು ಹೈದರನ ಶೌರ್ಯಕ್ಕೆ ಮೆಚ್ಚಿ ಇವನಿಗೆ ದಿಂಡಿಗಲ್ಲಿನ ಫೌಜದಾರಿಕೆಯನ್ನು ಕೊಟ್ಟನು. ಕ್ರಿ. ಶ. ೧೭೫೯ರ ಸುಮಾರಿಗೆ ಮರಾಠರಿಗೂ ಮೈಸೂರಿನವರಿಗೂ ನಡೆದ ಯುದ್ಧದಲ್ಲಿ ಹೈದರನು ಹೆಚ್ಚಿನ ಸಾಹಸವನ್ನು ತೋರಿಸಿದ್ದರಿಂದ ಇವನಿಗೆ **೧೩ ಗಡಿಗಳೂ ಬಹದ್ದೂರ** ಎಂಬ ಬಿರುದೂ ಜೊರೆತವು. ಅಂದಿನಿಂದ ಹೈದರನು ಹೆಚ್ಚು ಹೆಚ್ಚು ಪ್ರಬಲನಾಗಹತ್ತಿದನು. ಇವನು ಕ್ರಿ. ಶ. ೧೭೬೦ರಲ್ಲಿ **ಖಂಡೇರಾಯ**ನೆಂಬ ಸರದಾರನ ಸಹಾಯ

ದಿಂದ ನಂಜರಾಜಯ್ಯನನ್ನು ತಳ್ಳಿ ತಾನು ಸರ್ವಾಧಿಕಾರಿಯಾದನು ಕಡೆಗೆ ಖಂಡೇರಾಯನನ್ನೂ ಸೆರೆಯಿಟ್ಟು, ಅರಸನ ವೆಚ್ಚಕ್ಕೆ ೩ ಲಕ್ಷ ವರಹಗಳ ಸೀಮೆಯನ್ನು ಕಾದಿಟ್ಟು ರಾಜ್ಯದ ಅಧಿಕಾರವನ್ನು ತಾನೇ ಸಾಗಿಸಹತ್ತಿದನು.

ಆ ಬಳಿಕ ಹೈದರನು ನಿಜಾಮನೊಡನೆ ಸ್ನೇಹಬೆಳೆಸಿದನು. ಮರಾಠರನ್ನು ಮಾತಾಡಿಸಹೋಗಲು, ಆಗಿನ ಪೇಶವೆಯಾದ **ಮಾಧವರಾಯನು** ಇವನ ಮಾತಿಗೆ ಕಿವಿಗೊಡಲಿಲ್ಲ. ಆಗ ಹೈದರನು ತುಂಗಭದ್ರೆಯನ್ನು ದಾಟಿ ಧಾರವಾಡದ ವರೆಗಿನ ಸೀಮೆಯನ್ನು ಗೆದ್ದುಕೊಂಡನು. ಆದರೆ ಮಾಧವರಾಯನು ಪೊಡ್ತ ದಂಡಿನೊಡನೆ ಮೈಸೂರ ರಾಜ್ಯವನ್ನು ಸೇರಿ **ಬಿದನೂರ ಕೋಟೆಗೆ** ಕೈಹಾಕಲು, ಹೈದರನು ಕೃಷ್ಣಾ–ತುಂಗಭದ್ರೆಗಳ ನಡುಸೀಮೆಯನ್ನೂ ೨೨ ಲಕ್ಷ ರೂಪಾಯಿಗಳನ್ನೂ ಕೊಟ್ಟು ಅವನೊಡನೆ ಒಪ್ಪಂದ ಮಾಡಿಕೊಂಡನು. ಕ್ರಿ. ಶ. ೧೭೬೫

ಇಷ್ಟರಲ್ಲಿ ಮೈಸೂರ ಅರಸನಾದ **ಇಮ್ಮಡಿ ಕೃಷ್ಣರಾಜನು** ಮರಣ ಹೊಂದಲು, ಹೈದರನು ಅವನ ಹಿರಿಯ ಮಗನಾದ **ನಂಜರಾಜನನ್ನು** ಪಟ್ಟಗಟ್ಟಿದನು. ಆದರೆ ಮರುವರುಷ ಅರಸನ ಕಡೆಗಿದ್ದ ೩ ಲಕ್ಷದ ಸೀಮೆಯನ್ನು ತನ್ನ ವಶಕ್ಕೆ ತೆಗೆದುಕೊಂಡದ್ದಲ್ಲದೆ ಅರಮನೆಯೊಳಗಿನ ಬೆಲೆಯುಳ್ಳ ಒಡನೆಗಳನ್ನೆಲ್ಲ ಕಸಿದುಕೊಂಡನು. ಮತ್ತು ಅರಮನೆಯ ಕೆಲಸಕ್ಕೆ ತನ್ನ ಕಡೆಯ ಜನರನ್ನು ನಿಯಮಿಸಿದನು.

೪. ಮೈಸೂರ ಮೊದಲನೆಯ ಯುದ್ಧ :— ಕ್ರಿ. ಶ. ೧೭೬೭–೧೭೬೯ ಹೈದರನ ಏಳಿಗೆಯನ್ನು ಕಂಡು ಇಂಗ್ಲಿಷರು, ಪೇಶವೆ, ನಿಜಾಮ ಈ ಮೂವರು ಕೂಡಿ ಇವನನ್ನು ಹಣಿಯಬೇಕೆಂದು ಹಂಚಿಕೆ ಹಾಕಿದರು. ಮುಂದೆ ಪೇಶವೇ ಮಾಧವರಾಯನು ಬಂದು **ಸೀರಾ** ಪಟ್ಟಣವನ್ನು ಗೆದ್ದುಕೊಳ್ಳಲು; ಹೈದರನು ೩೫ ಲಕ್ಷ ರೂಪಾಯಿಗಳನ್ನು ಕೊಟ್ಟು ಅವನನ್ನು ಹಿಂದಕ್ಕೆ ಕಳುಹಿದನು. ಅತ್ತ ನಿಜಾಮನು ಇಂಗ್ಲಿಷರೊಡನೆ **ಕೋಲಾರದ** ವರೆಗೆ ಬಂದಿರಲು, ಅವನನ್ನೂ ಹಂಚಿಕೆಯಿಂದ ತನ್ನ ಕಡೆಗೆ ಮಾಡಿಕೊಂಡು ಇಬ್ಬರೂ ಕೂಡಿ ಇಂಗ್ಲಿಷರನೇಲೆ ಸಾಗಿದರು **ಕರ್ನಲ್ ಸ್ಮಿಥ**ನಿಗೂ ಹೈದರನಿಗೂ **ಚಂಗಮ, ತ್ರಿನೋಮಾಲಿ** ಇವುಗಳ ಬಳಿಯಲ್ಲಿ ಯುದ್ಧಗಳಾದವು. ಮೊದಲನೆಯದರಲ್ಲಿ ಸ್ಮಿಥನೂ ಎರಡನೆಯದರಲ್ಲಿ ಹೈದರನೂ ಹಿಮ್ಮೆಟ್ಟಿದರು. ಇದೇ ಸಮಯಕ್ಕೆ

ಬಂಗಾಲದ ಇಂಗ್ಲೀಷರ ಪಂಡು ನಿಜಾಮನ ರಾಜ್ಯದ ಮೇಲೆ ಸಾಗಿಬಂದದ ರಿಂದ, ಅವನು ಹೆದರಿ ಹೈದರನನ್ನು ಬಿಟ್ಟು ಇಂಗ್ಲಿಷರ ಕೂಡ ಒಪ್ಪಂದ ಮಾಡಿದನು. ಕ್ರಿ. ಶ. **೧೭೬೯.** ಇತ್ತ ಹೈದರನು ತನ್ನ ಮ ಗ ನಾ ವ ಟೀಪುವಿನ ಸೈನ್ಯವನ್ನು ಕೂಡಿಕೊಂಡು **ಅಂಬೂರಿಗೆ** ಮುತ್ತಿಗೆ ಹಾಕಿದನು. ಆದರೆ ಇವನ ಆಟವು ಸಾಗಲಿಲ್ಲ ಆದದರಿಂದ ಅಲ್ಲಿಂದ ಹಿಂದಿರುಗಿ ಪಶ್ಚಿಮಕ್ಕೆ ಸಾಗಿ **ಮಂಗಳೂರ, ಹೊನ್ನಾವರ**ಗಳನ್ನು ಆಕ್ರಮಿಸಿದ್ದ ಮುಂಬಯಿಯ ಇಂಗ್ಲಿಷರ ದಂಡನ್ನು ಇವನು ಚದುರಿಸಿದನು ಆಮೇಲೆ ಮದ್ರಾಸದಿಂದ ಬರುತ್ತಲಿದ್ದ ಕರ್ನಲ್ **ವುಡ್** ಎಂಬವನ ಕೈಕೆಳಗಿನ ಸೈನ್ಯವನ್ನು ಎರಡು ಕಡೆ ಗಳಲ್ಲಿ ಸೋಲಿಸಿ ತ್ರಿಚನಾಪಳ್ಳಿ, ಮಧುರೆ, ತಿನೆವೆಲ್ಲಿ ಈ ಪ್ರದೇಶಗಳನ್ನು ಹಾಳು ಗೆಡುವುತ್ತ ಅಕಸ್ಮಿಕವಾಗಿ ಮದ್ರಾಸಕ್ಕೆ ಬಂದನು ಆಗ ಮದ್ರಾಸದ ಗವ್ಹರ್ನರ ನು ಹೈದರನೊಡನೆ ಒಪ್ಪಂದ ಮಾಡಿಕೊಂಡನು. ಕ್ರಿ. ಶ **೧೭೬೯** ಈ ಮದ್ರಾಸ ಒಪ್ಪಂದದ ಕಲಮುಗಳು: - ೧. ಯುದ್ಧದಲ್ಲಿ ಗೆದ್ದುಕೊಂಡ ಸೀಮೆ ಗಳನ್ನು ಇಬ್ಬರೂ ಬಿಟ್ಟುಕೊಡಬೇಕು. ೨. ಬೇರೆಯವರು ಏರಿಬಂದಾಗ ಒಬ್ಬರಿಗೊಬ್ಬರು ನೆರವಾಗಬೇಕು. ೩ ಯುದ್ಧವ ವೆಚ್ಚವನ್ನು ಇಂಗ್ಲಿಷರು ವಹಿಸಬೇಕು.

೫. ಕಂಪನಿಯ ಪರಿಸ್ಥಿತಿ:— ಬಂಗಾಲದ ಪರಿಸ್ಥಿತಿಯ ಪರಿ-ಣಾಮವು ಕಂಪನಿಯ ಮೇಲೆ ಆಗದೆ ಇರಲಿಲ್ಲ ಅದರ ವ್ಯಾಪಾರವು ತೀರ ಕಡಿಮೆಯಾಯಿತು. ಕಂದಾಯವು ಕಟ್ಟಾಯಿತು. ಮೈಸೂರ ಯುದ್ಧದಲ್ಲಿ ನಿರರ್ಥಕವಾಗಿ ಬಹಳ ಹಣವು ವೆಚ್ಚವಾಯಿತು ಇಂಗ್ಲಂಡದ ಸರಕಾರಕ್ಕೆ ಪ್ರತಿವರ್ಷ ಕೊಡತಕ್ಕ ೪೦ ಸಾವಿರ ಪೌಂಡುಗಳನ್ನು ಕೊಡುವದಾಗಲಿಲ್ಲ. ಕಂಪನಿಯ ಕಠೋರವಾದ ಆಳಿಕೆಯೇ ಈ ದುಸ್ಥಿತಿಗೆ ಕಾರಣವೆಂದು ಬೊಬ್ಬಾ ಟಾಯಿತು. ಆದದರಿಂದ ಡಾಯರೆಕ್ಟರರು ಕಂಪನಿಯ ಸ್ಥಿತಿಯನ್ನು ಸುಧಾರಿ ಸುವದಕ್ಕಾಗಿ **ವಾರನ್ ಹೆಸ್ಟಿಂಗ್ಸ** ಎಂಬವನನ್ನು ಕಲಕತ್ತೆಯ ಗವ್ಹರ್ನರ ನನ್ನಾಗಿ ಮಾಡಿದರು. ಕ್ರಿ. ಶ ೧೭೭೨.

೬. ಹೆಸ್ಟಿಂಗ್ಸನ ಹಣಕೂಡಿಸುವ ಹಂಚಿಕೆಗಳು:— ಹೆಸ್ಟಿಂಗ್ಸನು ಜಾಣನೂ ಸಾಹಸಿಯೂ ಕ್ಲೈವನ ಕೈಯಲ್ಲಿ ಆಡಿದವನೂ ಆಗಿದ್ದನು. ಇವನು ಹದಿನೆಂಟು ವರ್ಷದವನಿರುವಾಗ ಕಂಪನಿಯ ಕಾರಕೂನನಾಗಿ ಮುಂದೆ

ಏರುತ್ತೇರುತ್ತ ಆಲೋಚನಾ ಸಭೆಯ ಸಭಿಕನಾಗಿದ್ದನು. ಇವನು ಗವ್ಹರ್ನರ ನಾದ ಕೂಡಲೆ ಹಲವು ಹಂಚಿಕೆಗಳಿಂದ ಹಣಕೂಡಿಸಿದನು; ಆಲ್ಲದೆ ಕಾರಭಾರ ದಲ್ಲಿ ಹಲವು ಸುಧಾರಣೆಗಳನ್ನು ಮಾಡಿ ಕಂಪನಿಯ ಅಧಿಕಾರವನ್ನು ಬಲಿಸಿದನು. ನವಾಬನ ಅಧಿಕಾರವನ್ನು ಕಡಿಮೆಮಾಡಿ ಅದನ್ನು ಮೀರಜಾಫರನ ಹೆಂಡತಿ ಯಾದ **ಮಣಿಬೇಗಮಳ** ಕಡೆಗೆ ಕೊಟ್ಟನು. ಮತ್ತು ನವಾಬನಿಗೆ ೩೨ ಲಕ್ಷಕ್ಕೆ ಬದಲಾಗಿ ೧೬ ಲಕ್ಷ ರೂಪಾಯಿಗಳನ್ನು ಕೊಡತಕ್ಕದ್ದೆಂದು ಗೊತ್ತುಮಾಡಿದನು. ಡೆಪ್ಯೂಟಿ ನವಾಬರನ್ನು ತೆಗೆದುಹಾಕಿ, **ಕಲೆಕ್ಟರ**ರೆಂಬ ಇಂಗ್ಲಿಷ ಅಧಿಕಾರಿ ಗಳನ್ನು ಹಣವೆತ್ತುವ ಕೆಲಸಕ್ಕೆ ನಿಯಮಿಸಿ, ಅವರಿಗೆ **ದಿವಾಣಿ** ಮತ್ತು **ಫೌಜದಾರಿ** ಅಧಿಕಾರಗಳನ್ನು ಕೊಟ್ಟನು. ರಾಜಧಾನಿಯನ್ನು ಮುರ್ಶಿದಾಬಾದ ದಿಂದ ಕಲಕತ್ತೆಗೆ ತಂದು ಅಲ್ಲಿ ಅಪೀಲ ಕೋರ್ಟುಗಳನ್ನು ಸ್ಥಾಪಿಸಿದನು. ಕಂದಾಯವನ್ನು ಹೆಚ್ಚಿಸುವದಕ್ಕಾಗಿ ಐದೈದು ವರ್ಷದ ಕರಾರಿನಿಂದ ಭೂಮಿ ಗಳನ್ನು ಗುತ್ತಿಗೆಕೊಟ್ಟನು

ಇದೇ ಹೊತ್ತಿಗೆ ಮರಾಠರು ಮತ್ತೆ ದಿಲ್ಲಿಯಲ್ಲಿ ತಮ್ಮ ವರ್ಚಸ್ಸನ್ನು ನೆಲೆ ಸಿದರು. ಆಗ ಷಾಹೆಆಲಮನು ಅಲಾಹಾಬಾದದಿಂದ ದಿಲ್ಲಿಗೆ ಹೋಗಿ ಮರಾ ಠರ ಆಶ್ರಯವನ್ನು ಬಯಿಸಿದನು. ಈ ಕಾರಣವನ್ನು ತೋರಿಸಿ, ಹೆಸ್ಟಿಂಗ್ಸನು ಅವನಿಗೆ ಸಲ್ಲುತ್ತಿದ್ದ ೨೬ ಲಕ್ಷ ರೂ. ಗಳ ಕಾಣಿಕೆಯನ್ನು ನಿಲ್ಲಿಸಿದ್ದಲ್ಲದೆ, ಕೋರಾ ಅಲಹಾಬಾದಗಳನ್ನು ಕಸಿದುಕೊಂಡು ಅವನನ್ನು ೫೦ ಲಕ್ಷ ರೂ. ಗಳಿಗೆ ಅಯೋ ಧ್ಯೆಯ ವಜೀರನಿಗೆ ಮಾರಿದನು.

ದಿಲ್ಲಿಯಲ್ಲಿ ಮೆಟ್ಟಾದ ಬಳಿಕ, ಮರಾಠರು ರೋಹಿಲಖಂಡವನ್ನು ಹೊಕ್ಕು ಕೆಲವು ಕೋಟೆಗಳನ್ನು ವಶಮಾಡಿಕೊಂಡರು. ಆಗ ರೋಹಿಲರು ವಜೀರನಿಗೆ ೪೦ ಲಕ್ಷ ರೂಪಾಯಿಗಳನ್ನು ಕೊಡಲೊಪ್ಪಿ ಅವನನ್ನು ನೆರವಿಗೆ ಕರೆದು ಕೊಂಡರು. ಅಷ್ಟರಲ್ಲಿ ಪೇಶವೆಯಾದ ಮಾಧವರಾಯನು ಮರಣಹೊಂದಿದ ಸುದ್ದಿಯು ಬಂದದರಿಂದ ಮರಾಠರ ಸೈನ್ಯವು ರೋಹಿಲಖಂಡವನ್ನು ಬಿಟ್ಟು ಹೋಯಿತು. ಅನಾಯಾಸವಾಗಿ ಮರಾಠರ ದಾಳಿಯು ತಪ್ಪಿದ್ದರಿಂದ ವಜೀರನ ನೆರವಿನ ಅವಶ್ಯವಿರಲಿಲ್ಲ. ಆದರೂ ಗೊತ್ತಾದ ಹಣವನ್ನು ಅವನು ಬೇಡಹತ್ತಿ ದನು. ರೋಹಿಲರು ಆ ಮಾತಿಗೆ ಒಪ್ಪದಿರಲು ಅವರನ್ನು ನಾಶಗೊಳಿಸಿ

ರೋಹಿಲಖಂಡವನ್ನೇ ವಶಮಾಡಿಕೊಳ್ಳಬೇಕೆಂದು ವಜೀರನು ಹಟತೊಟ್ಟನು. ಮತ್ತು ೪೦ ಲಕ್ಷ ರೂಪಾಯಿಗಳನ್ನು ಕೊಡುವೆನೆಂದು ಹೇಳಿ, ಹೆಸ್ಟಿಂಗ್ಸನನ್ನು ನೆರವಿಗೆ ಕರೆದನು ಆಗ ಹೆಸ್ಟಿಂಗ್ಸನು- 'ಈ ಹಣವಲ್ಲದೆ ರೋಹಿಲಖಂಡವು ವಜೀರನದಾವರೆ, ಕಂಪನಿಯ ವ್ಯಾಪಾರಕ್ಕೆ ಅದೊಂದು ಹೊಸ ಸೀಮೆಯು ಸಿಗುವದು;' ಎಂದು ನೆನೆದು ಆನಂದದಿಂದ ನೆರವಾಗಲೊಪ್ಪಿದನು ಬಳಿಕ ಕಂಪನಿಯ ಸೈನ್ಯವು ರೋಹಿಲರನ್ನು ಸೋಲಿಸಿ ಓಡಿಸಲು ರೋಹಿಲಖಂಡವು ವಜೀರನ ವಶವಾಯಿತು.

೩ನೆಯ ಪಾಠ

೪ನೆಯ ಪೇಶವೆ

ಮಾಧವರಾಯ (ಕ್ರಿ. ಶ. ೧೭೬೧ - ೭೨)

೧. ಮಾಧವರಾಯನು ಪೇಶವೆಯಾದ ಕಾಲದ ಸ್ಥಿತಿ:— ೩ನೆಯ ಪೇಶವೆಯಾದ ಬಾಳಾಜಿ ಬಾಜೀರಾಯನು ಪಾಸಿಪತದ ಆಪಜಯದ ದುರ್ವಾರ್ತೆಯನ್ನು ಕೇಳಿ ಮಡಿದ ಸಂಗತಿಯು ಹಿಂದೆ ಮಧ್ಯಭಾಗದ ೧೨ನೆಯ ಪಾಠದಲ್ಲಿ ಹೇಳಿದೆ. ಆ ಬಳಿಕ ಅವನ ೨ನೆಯ ಮಗನಾದ **ಮಾಧವರಾಯನು** ಪೇಶವೆಯಾದನು. ಆಗ ಅವನು ೧೬ ವರ್ಷದವನಿದ್ದುದರಿಂದ ಕಾರಭಾರವನ್ನು ರಘುನಾಥರಾಯನು ಸಾಗಿಸಹತ್ತಿದನು. ರಘುನಾಥರಾಯನು ಒಳ್ಳೆಯ ಶೂರನು; ಆದರೆ ರಾಜಕಾರಣ ಧುರೀಣನಲ್ಲ. ದುರಭಿಮಾನ, ಚಂಚಲತೆ ಈ ಅವಗುಣಗಳು ಅವನಲ್ಲಿ ಅಡಕವಾಗಿದ್ದವು. ಆದದರಿಂದ ಅವನು ಕಾರಭಾರವನ್ನು ಸಾಗಿಸುವದು ಹಲವು ಮುತ್ಸದ್ದಿಗಳ ಮನಸ್ಸಿಗೆ ಬರಲಿಲ್ಲ.



ಪೇಶವೆ ಮಾಧವರಾಯ

ಪಾನಿಪತದ ಅಪಜಯದ ನಂತರ ಮರಾಠರ ಶತ್ರುಗಳು ಪೇಶವೆಯರನ್ನು ಮೂರಿ ನಡೆಯಹತ್ತಿದರು. ನಿಜಾಮನು ಉದಯಗಿರದ ಕಾಳಗವಾದ ಬಳಿಕ ಕೊಡಲೊಪ್ಪಿದ ಸೀಮೆಯನ್ನು ಕೊಡದಾದನು. ಮೂಳವದ ಆಚೆಗೆ ಪೇಶವೆಯರ ಅಧಿಕಾರವು ನಡೆಯದಾಯಿತು. ಅಲ್ಲಿ ರೋಹಿಲರು, ಜಾಟರು ಮೊದಲಾದವರು ಪ್ರಬಲರಾದರು. ಜಾನೋಜಿ ಭೋಸಲೆಯು ನಿಜಾಮನನ್ನು ಕೂಡಿಕೊಂಡು ಸಾತಾರೆಯ ಪಟ್ಟವನ್ನು ಹಿಡಿದುಕೊಳ್ಳುವ ಸಾಹಸಕ್ಕೆ ಕೈಹಾಕಿದನು.

೨. **ಮನೆ ಜಗಳದ ಆರಂಭ**:— ಇದೇ ಹೊತ್ತಿಗೆ ಪೇಶವೆಯರ ಮನೆಯಲ್ಲಿಯೆ ಜಗಳ ಹುಟ್ಟಿತು. ರಘುನಾಥರಾಯನ ಹೆಂಡತಿಯಾದ **ಆನಂದೀಬಾಯಿಗೂ** ಮಾಧವರಾಯನ ತಾಯಿಯಾದ **ಗೋಪಿಕಾಬಾಯಿಗೂ** ಕೂಡಿ ನಡೆಯುದಂತಾಯಿತು ಆನಂದೀಬಾಯಿಗೆ ರಾಜ್ಯದಾಶೆ ಹುಟ್ಟಿದ್ದರಿಂದ ಆಗ ಮಾಧವರಾಯನ ವಿಷಯವಾಗಿ ರಘುನಾಥರಾಯನ ಮನಸ್ಸನ್ನು ಕೆಡಿಸಿದಳು. ಆಗ ರಘುನಾಥರಾಯನು **ಸಖಾರಾಮಬಾಪು** ಮೊದಲಾದ ಸರದಾರರ ನೆರವಿನಿಂದ ಮಾಧವರಾಯನನ್ನು ಕಾವಲಿನಲ್ಲಿಟ್ಟನು. ಮಾಧವರಾಯನ ಪಕ್ಷದ ತ್ರ್ಯಂಬಕರಾಯ, ಹರಿಪಂತ, ನಾನಾಫಡಣವೀಸ ಮೊದಲಾದ ಮುತ್ಸದ್ದಿಗಳು ರಘುನಾಥರಾಯನನ್ನೇ ಅಧಿಕಾರದಿಂದ ತೆಗೆದುಹಾಕಬೇಕೆಂದು ಪ್ರಯತ್ನಿಸಹತ್ತಿದರು.

೩. **ರಾಕ್ಷಸಭುವನದ ಕಾಳಗ**:— ಕ್ರಿ ಶ. ೧೭೬೩. ನಿಜಾಮನು ತನ್ನ ಬಲವನ್ನು ಹೆಚ್ಚಿಸಿಕೊಂಡು ಮರಾಠರನ್ನು ಮುರಿಯುವ ಹವಣಿಕೆಯಲ್ಲಿರಲು ಪೇಶವೆಯು ಹೋಳಕರನಿಗೆ ೧೦ ಲಕ್ಷದ ಹೊಸ ಜಹಗೀರನ್ನು ಕೊಟ್ಟು ಅವನನ್ನು ತನ್ನ ನೆರವಿಗೆ ಕರೆದುಕೊಂಡನು. ಬಳಿಕ ಅವನು, ನಿಜಾಮ-ಭೋಸಲೆ ಇವರ ಸೀಮೆಯಲ್ಲಿಯೂ, ಭೋಸಲೆಯು ಪುಣೆ ಪ್ರಾಂತದಲ್ಲಿಯೂ ಕೊಳ್ಳಿ-ಸುಲಿಗೆಗಳನ್ನು ಮಾಡಹತ್ತಿದರು. ಕಡೆಗೆ ಭೋಸಲೆಯು 'ನಿಜಾಮನ ಕಡೆಗಾದದರಿಂದ ಉಪಯೋಗವಾಗದು' ಎಂದು ತಿಳಿದು ೩೨ ಲಕ್ಷದ ಸೀಮೆಯನ್ನು ತೆಗೆದುಕೊಂಡು ಮರಾಠರ ಕಡೆಗಾದನು. ಆಗ ನಿಜಾಮನ ಬಲವು ಕುಂದಿತು. ಮುಂದೆ ರಘುನಾಥರಾಯನು ನಿಜಾಮನ ಮೇಲೆ ಸಾಗಿಹೋದನು. **ರಾಕ್ಷಸಭುವನ** ಎಂಬಲ್ಲಿ ಭಯಂಕರವಾದ ಕಾಳಗವಾಗಿ ನಿಜಾಮನು ಪೂರ್ಣವಾಗಿ ಸೋತು ೮೨ ಲಕ್ಷದ ಸೀಮೆಯನ್ನು ಕೊಟ್ಟು ಮರಾಠರೊಡನೆ ಒಪ್ಪಂದ

ಮಾಡಿಕೊಂಡನು. ಆಯತ ವೇಳೆಯಲ್ಲಿ ಮಾಧವರಾಯನು ಮುಂದಾಗಿ ಪರಾಕ್ರಮದಿಂದ ಕಾದಿ ಜಯವನ್ನು ಸಂಪಾದಿಸಿದನು. ಆದದರಿಂದ ರಘುನಾಥರಾಯನ ಮನಸ್ಸು ತಿರುಗಿತು. ಅವನು ಕಾರಭಾರವನ್ನು ಮಾಧವರಾಯನಿಗೊಪ್ಪಿಸಿ ತಾನು ನಾಶಿಕದಲ್ಲಿರಹತ್ತಿದನು

೪. ಮಾಧವರಾಯನ ರಾಜ್ಯವಿಸ್ತಾರ:— ಮೈಸೂರ ಅಧಿಕಾರವನ್ನು ಕೈಕೊಂಡ ಬಳಿಕ ಹೈದರನು ಪ್ರಬಲನಾಗಿ ತುಂಗಭದ್ರೆಯನ್ನು ದಾಟಿ ಧಾರವಾಡದ ವರೆಗಿನ ಮರಾಠರ ಸೀಮೆಯನ್ನು ಹಿಡಿದುಕೊಂಡನು. ಕ್ರಿ. ಶ ೧೭೬೫ ರಲ್ಲಿ ಮಾಧವರಾಯನು ಅವನನ್ನು ಎದುರಿಸಿ ಸೋಲಿಸಿದನು. ಆಗ ಹೈದರನು ಕೃಷ್ಣಾ-ತುಂಗಭದ್ರೆಗಳ ನಡುವಿನ ಸೀಮೆಯನ್ನೂ ೩೩ ಲಕ್ಷ ರೂಪಾಯಿ ಕಪ್ಪವನ್ನೂ ಕೊಟ್ಟು ಒಡಂಬಡಿಕೆ ಮಾಡಿಕೊಂಡನು.

ರಘುನಾಥರಾಯನನ್ನು ಶರೆಹಿಡಿದದ್ದು:— ರಾಜ್ಯದಲ್ಲಿ ಪಾಲು ಕೊಡಲಿಲ್ಲೆಂಬ ನೆವದಿಂದ ರಘುನಾಥರಾಯನು ಸಿಟ್ಟಾಗಿ ನಾಶಿಕದ ಬಳಿಯ ಆನಂದವಲ್ಲಿ ಎಂಬಲ್ಲಿ ನಿಂತು ಸೈನ್ಯವನ್ನು ಕೂಡಿಸಹತ್ತಿದನು. ಅಲ್ಲಪೆ ಭೋಸಲೆ-ಗಾಯಕವಾಡರನ್ನು ನೆರವಿಗೆ ಕರೆದನು. ಅವರೂ ಬರಲು ಒಪ್ಪಿದರು. ಈ ಸುದ್ದಿಯು ಹತ್ತಿದ ಕೂಡಲೆ ಮಾಧವರಾಯನು ರಘುನಾಥರಾಯನನ್ನು ಮುತ್ತಿ ಸೆರೆಹಿಡಿದು ಪುಣೆಯ ಅರಮನೆಯಲ್ಲಿ ಕಟ್ಟಿನಲ್ಲಿಟ್ಟನು. ಬಳಿಕ ಭೋಸಲೆ ಗಾಯಕವಾಡರನ್ನು ಹಣ್ಣುಮಾಡಿ ಅವರನ್ನು ತನ್ನ ಹೇಳಿಕೆಯಂತೆ ನಡೆಯಹಚ್ಚಿದನು.

ಮರಾಠರು ಶ್ರೀರಂಗ ಪಟ್ಟಣಕ್ಕೆ ಮುತ್ತಿಗೆ ಹಾಕಿದ್ದು:— ಈ ರೀತಿ ೩-೪ ವರ್ಷಗಳ ಕಾಲವು ಮನೆಜಗಳದಲ್ಲಿ ಕಳೆದುಹೋಗುತ್ತಿರಲು ಅತ್ತ ಹೈದರನು ಮರಾಠರನ್ನು ತಡೆಯಬೇಕೆಂದು ಸಿದ್ಧತೆಯನ್ನು ನಡೆಸಿದ್ದನು. ಇಷ್ಟರಲ್ಲಿ ಮಾಧವರಾಯನೇ ಹೈದರನ ಮೇಲೆ ಸಾಗಿ ಒಂದೊಂದು ಸೀಮೆಯನ್ನು ವಶಮಾಡಿಕೊಳ್ಳುತ್ತ ಶ್ರೀರಂಗ ಪಟ್ಟಣದ ಕಡೆಗೆ ಸಾಗಿದನು ಹೀಗಿರುವಾಗ ಕ್ರಿ. ಶ. ೧೭೬೦ರಲ್ಲಿ ಮಾಧವರಾಯನಿಗೆ ಜಡ್ಡಾಯಿತು. ಆದದರಿಂದ ಅವನು ಯುದ್ಧದ ಕೆಲಸವನ್ನು ತ್ರ್ಯಂಬಕರಾಯನಿಗೆ ಒಪ್ಪಿಸಿ ತನ್ನ ರಾಜಧಾನಿಗೆ ಬಂದನು. ಮುಂದೆ ಮರಾಠರಿಗೂ ಹೈದರನಿಗೂ ಯುದ್ಧವಾಯಿತು. ಆದರೂ


ಹೈದರನು ಮಣಿಯಲಿಲ್ಲ. ಆದದರಿಂದ ಮರಾಠರು ಶ್ರೀರಂಗ ಪಟ್ಟಣಕ್ಕೆ ಮುತ್ತಿಗೆ ಹಾಕಿದರು. ಇಷ್ಟರಲ್ಲಿ ಮಾಧವರಾಯನಿಂದ 'ನಾನು ಈ ಬೇನೆಯಿಂದ ಪಾರಾಗುವ ಲಕ್ಷಣವಿಲ್ಲ' ಎಂದು ಪತ್ರ ಬಂದಿತು. ಆದಕ್ಕಾಗಿ ತ್ರ್ಯಂಬಕ ರಾಯನು ಹೈದರನೊಡನೆ ಒಪ್ಪಂದ ಮಾಡಿಕೊಂಡು ಸೈನ್ಯಸಮೇತ ಹಿಂದಿರುಗಿದನು. ಈ ಒಪ್ಪಂದದಿಂದ ಹೈದರನು ಮರಾಠರವೆಂದೆನಿಸಿದ್ದ ಸೀಮೆಗಳನ್ನೂ ಯುದ್ಧದ ವೆಚ್ಚವೆಂದು ೫೦ ಲಕ್ಷ ರೂಪಾಯಿಗಳನ್ನೂ ಕೊಟ್ಟನಲ್ಲದೆ ಪ್ರತಿವರ್ಷ ೧೪ ಲಕ್ಷ ರೂ. ಕಪ್ಪವನ್ನು ಕೊಡಲೊಪ್ಪಿದನು ಕ್ರಿ. ಶ. ೧೭೭೨.

ಮಾಧವರಾಯನು ದಕ್ಷಿಣಕ್ಕೆ ಹೊರಡುವಾಗ ಉತ್ತರದ ದಿಗ್ವಿಜಯಕ್ಕಾಗಿ ಒಳ್ಳೆಯ ಸಜ್ಜಾದ ಸೈನ್ಯವನ್ನು ಕಳುಹಿದ್ದನು. **ರಾಮಚಂದ್ರಪಂತ, ವಿಸಾಜಿ ಪಂತ** ಎಂಬವರು ಅದರ ಸೇನಾಪತಿಗಳಾಗಿದ್ದರು. ಅವರು ಮಹಾದಾಜಿ ಸಿಂಧ್ಯೆ, ತುಕೋಜಿ ಹೋಳಕರ ಈ ಸರದಾರರನ್ನು ಕೂಡಿಕೊಂಡು ರಜಪುತರಿಂದಲೂ ಜಾಟರಿಂದಲೂ ಕಪ್ಪವನ್ನು ತೆಗೆದುಕೊಂಡ ಬಳಿಕ ಆಗ್ರಾ ಪ್ರಾಂತವನ್ನು ವಶ ಮಾಡಿಕೊಂಡರು. ಈ ಸುದ್ದಿಯನ್ನು ಕೇಳಿ ನಜೀಬಖಾನನು ಗಾಬರಿಯಾಗಿ ಇನ್ನು ಮರಾಠರು ಪಾನಿಪತದ ಸೇಡನ್ನು ತೀರಿಸಬೆ ಬಿಡರೆಂದು ತಿಳಿದು ಒಡಂಬಡಿಕೆಗೆ ಸಿದ್ಧನಾದನು. ಮರಾಠರು ಒಡಂಬಡಿಕೆ ಮಾಡಿಕೊಂಡು ಅವನ ನೆರವಿನಿಂದ ಅಂತರ್ವೇದಿಯ ಪಠಾಣರನ್ನು ಬಗ್ಗುಬಡಿದರು. ೯ ಮೇಲೆ ಅಲಹಾಬಾದದಲ್ಲಿ ವಜೀರನ ರಕ್ಷಣೆಗೆ ಒಳಗಾಗಿದ್ದ ಷಾಹೆಆಲಮ ಬಾದಷಾಹನನ್ನು ದಿಲ್ಲಿಗೆ ಕರೆ ಮೊಯ್ದು ಪಟ್ಟಕ್ಕೆ ಕುಳ್ಳಿರಿಸಿದರು. ಕ್ರಿ. ಶ ೧೭೭೧. ಅಂದಿನಿಂದ ದಿಲ್ಲಿಯ ಸೂತ್ರಗಳೆಲ್ಲ ಮತ್ತೆ ಮರಾಠರ ಕೈಸೇರಿದವು. ಮಹಾದಾಜಿಯ ಕರ್ತೃತ್ವವು ಈ ಪ್ರಸಂಗದಲ್ಲಿ ಚೆನ್ನಾಗಿ ವ್ಯಕ್ತವಾಯಿತು. ಮುಂದೆ ಮರಾಠರು ರೋಹಿಲ ಖಂಡವನ್ನು ಸೇರಿ ನಜೀಬಖಾನನ ಮಗನಾದ ಜಬೇತಖಾನನನ್ನು ಸೋಲಿಸಿದರು. ಮತ್ತು ರೋಹಿಲರು ಪಾನಿಪತದಲ್ಲಿ ಸುಲಿದು ತಂದಿದ್ದ ಮರಾಠರ ಸಂಪತ್ತನ್ನು ಮರಳಿ ಕಸಿದುಕೊಂಡರು. ಇಷ್ಟರಲ್ಲಿ ಮಾಧವರಾಯನು ಮರಣ ಹೊಂದಿದ ಸುದ್ದಿಯು ಬಂದದರಿಂದ ಮರಾಠ ಸೈನ್ಯವೆಲ್ಲ ದಕ್ಷಿಣಕ್ಕೆ ಬಂದು ಬಿಟ್ಟಿತು.

೫. ಮಾಧವರಾಯನ ಮರಣವೂ ಯೋಗ್ಯತೆಯೂ:— ದಕ್ಷಿಣದಿಂದ ಬಂದಬಳಿಕ ಮಾಧರಾಯನ ಪ್ರಕೃತಿಯು ದಿನದಿನಕ್ಕೆ ಅಶಕ್ತವಾಗ

ಹತ್ತಿತು. ಕಡೆಗೆ ಅವನು ಕ್ರಿ ಶ ೧೭೭೨ರಲ್ಲಿ **ಥೆವ್ಹೂರ** ಎಂಬಲ್ಲಿ ಮರಣ ಹೊಂದಿದನು. ಸಾ ಯು ವ ಮೊ ದ ಲು ಇವನು ರಘುನಾಥರಾಯನನ್ನು ಬಿಡುಗಡೆಮಾಡಿದನು. ಮತ್ತು ತನ್ನ ತರುವಾಯ ನಾರಾಯಣರಾಯನನ್ನು ಪೇಶವೆಯನ್ನು ಮಾಡಿ "ನೀವು ನಾನಾಫಡಣವೀಸ, ಸಖಾರಾಮ ಬಾಪು ಈ ಮುತ್ಸದ್ದಿಗಳ ನೆರವಿನಿಂದ ಕಾರಭಾರವನ್ನು ಸಾಗಿಸಬೇಕು" ಎ ಂ ದು ರಘುನಾಥರಾಯನಿಗೆ ಹೇಳಿದನು. ಆಗ ಅವನು ಈ ಮಾತಿಗೆ ಒಪ್ಪಿಕೊಂಡು ನಾರಾಯಣರಾಯನಿಗೆ ಅಭಯವನ್ನಿತ್ತನು.

ಮಾಧವರಾಯನು ಶೂರನೂ ಚತುರನೂ ಸದಾಚರಣಿಯೂ ಆಗಿ ದ್ದನು. ಚಿಕ್ಕವಯಸ್ಸಿನಲ್ಲಿಯೇ ಇವನು ನೆರವೇರಿಸಿದ ಕಾರ್ಯಗಳನ್ನು ನೋಡಿದರೆ ಇವನ ಎದೆಗಾರಿಕೆಯ ಕಲ್ಪನೆಯು ಚೆನ್ನಾಗಿ ಆಗುವಂತಿದೆ. ಜನರ ಯೊಗ್ಯತೆಯನ್ನು ಕಂಡುಹಿಡಿಯುವಲ್ಲಿ ಇವನು ಒಳ್ಳೆಯ ಹೆಸರಾಗಿದ್ದನು. ಮನೆಜಗಳಗಳನ್ನು ಯುಕ್ತಿಯಿಂದ ಮುರಿದು ರಾಜ್ಯವನ್ನು ಸಂರಕ್ಷಿಸಿದನು. ಪಾನಿಪತದ ಯುದ್ಧದ ನಂತರ ಹಿಮ್ಮೆಟ್ಟು ತ್ತಲಿದ್ದ ಮರಾಠರ ಸಾ ಮ್ರಾ ಜ್ಯ ವ ನ್ನು ಇವನು ಮತ್ತೆ ಊರ್ಜಿತಸ್ಥಿತಿಗೆ ತಂದನು ನ್ಯಾಯ ನೀತಿವಿಶಾರದನೂ ನಿಸ್ಪೃಹನೂ ಆದ **ರಾಮಶಾಸ್ತ್ರಿಯೂ** ಹೆಸರಾದ ಮುತ್ಸ ದ್ದಿಯೆನಿಸಿದ **ನಾನಾಫಡಣವೀಸನೂ** ಕರ್ತೃತ್ವ ತ ಶಾ ಲಿ ಯಾ ದ **ಮಹಾದಾ ಜಿಯೂ** ಪ್ರ ಸಿ ದ್ಧ ಸೇನಾಪತಿಗಳಾದ **ತ್ರ್ಯಂಬಕರಾಯ, ಹರಿಪಂತ, ವಿಸಾಜಿ ಪಂತ, ರಾಮಚಂದ್ರಪಂತ,** ಮೊದಲಾಗ ಸರದಾರರೂ ಈ ಮಾಧವರಾಯನ ಕಾಲ ದಲ್ಲಿ ಹೆಸರಿಗೆ ಬಂದರು.



ನಾನಾಫಡಣವೀಸ

೪ನೆಯ ಪಾಠ

೫ನೆಯ ಪೇಶವೆ ನಾರಾಯಣರಾಯ

(ಕ್ರಿ ಶ. ೧೭೭೨-೧೭೭೩)

೧. ನಾರಾಯಣರಾಯನು ಪೇಶವೆಯಾದದ್ದು:— ಮಾಧವರಾಯನಿಗೆ ಮಕ್ಕಳಿಲ್ಲ. ಆದುದರಿಂದ ಅವನ ತರುವಾಯ ಅವನ ತಮ್ಮನಾದ **ನಾರಾಯಣರಾಯ**ನಿಗೆ ಪೇಶವೆಪದವು ದೊರೆಯಿತು. ನಾರಾಯಣರಾಯನಾದರೂ ಚಿಕ್ಕವನಿದ್ದದರಿಂದ ರಘುನಾಥರಾಯನೇ ಕಾರಭಾರವನ್ನು ಸಾಗಿಸಹತ್ತಿದನು. ಕೆಲದಿನ ಕಕ್ಕ-ಮಕ್ಕಳು ಪ್ರೇಮದಿಂದ ನಡೆದುಕೊಂಡರು.

ಆದರೆ ನಾರಾಯಣರಾಯನು ಪೇಶವೆಯಾದದ್ದು ಆನಂದೀಬಾಯಿಗೆ ಸಹನವಾಗಲಿಲ್ಲ. ಆಕೆಯ ದುರಾಗ್ರಹಕ್ಕೆ ಬಲಿಬಿದ್ದು ರಘುನಾಥರಾಯನು ತಾನು ಪೇಶವೆಯಾಗಬೇಕೆಂದು ಪುನಃ ಪ್ರಯತ್ನಿಸಹತ್ತಿದನು. ಇದಕ್ಕಾಗಿ ಅವನು ಹೈದರ-ನಿಜಾಮರೊಡನೆ ಒಳಸಂಚು ನಡೆಸಿದನು. ಈ ಸುದ್ದಿಯು ನಾರಾಯಣರಾಯನಿಗೆ ತಿಳಿಯಲು ಅವನು ಸಿಟ್ಟಾಗಿ ರಘುನಾಥರಾಯನನ್ನು ಬಿಗಿಯಾಗಿ ಸೆರೆಯಲ್ಲಿಟ್ಟನು.

ನಾರಾಯಣರಾಯನಲ್ಲಿ ಕರ್ತೃತ್ವವಾಗಲಿ, ಸಮಾಧಾನದಿಂದಲೂ ಯುಕ್ತಿಯಿಂದಲೂ ಕೆಲಸ ಮಾಡಿಕೊಳ್ಳುವ ಗುಣವಾಗಲಿ ಇರಲಿಲ್ಲ. ಅಲ್ಲದೆ ಇವನು ದುರಾಗ್ರಹಿಯೂ ಸಿಟ್ಟಿನವನೂ ಆಗಿದ್ದನು. ಆದದರಿಂದ ಅಧಿಕಾರಿಗಳ ಮೇಲೆ ಇವನ ವರ್ಚಸ್ಸು ನೆಲೆಗೊಳ್ಳಲಿಲ್ಲ.

೨. ನಾರಾಯಣರಾಯನನ್ನು ತಳ್ಳುವ ಒಳಸಂಚು:— ಸಖಾರಾಮಬಾಪು ಮೊದಲಾದ ಸರದಾರರು ರಘುನಾಥರಾಯನನ್ನು ಸೌಮ್ಯತನದಿಂದ ನಡೆಯಿಸಿಕೊಳ್ಳಬೇಕೆಂದು ನಾರಾಯಣರಾಯನಿಗೆ ತಿಳಿಸಿದರೂ ಅವನು ಕೇಳಲಿಲ್ಲ. ಆಗ ಸಖಾರಾಮಬಾಪು, ಚಿಂತೋ ವಿಠ್ಠಲ, ಆನಂದೀಬಾಯಿ ಮೊದಲಾದವರು ರಘುನಾಥರಾಯನನ್ನು ಬಿಡಿಸಿಕೊಂಡು ನಾರಾಯಣರಾಯನನ್ನೇ ಸೆರೆಹಿಡಿಯುವ ಒಳಸಂಚನ್ನು ಹೂಡಿದರು. ಇದಕ್ಕಾಗಿ ಅವರು ಗಾರ್ದಿಗಳಲ್ಲಿ ಮುಖ್ಯಸ್ಥರಾದ **ಸುಮೇರಸಿಂಗ** ಮೊದಲಾದವರನ್ನು ತಮ್ಮ ಕಡೆಗೆ ಮಾಡಿಕೊಂಡು, ಪೇಶವೆಯನ್ನು ಸೆರೆಹಿಡಿಯುವ ಕೆಲಸವನ್ನು

ಕಡೆಗಾಣಿಸಿದರೆ ೫ ಲಕ್ಷ ರೂಪಾಯಿಗಳನ್ನು ಅವರಿಗೆ ಕೊಡತಕ್ಕದ್ದೆಂದು ಗೊತ್ತುಮಾಡಿದರು. ಬಳಿಕ ಈ ಸಂಚುಗಾರರು ನಾರಾಯಣರಾಯನನ್ನು ಹಿಡಿಯಬೇಕೆನ್ನುವ ಹಾಗೆ ರಘುನಾಥರಾಯನಿಂದ ಹುಕುಮನ್ನು ಸಹ ಬರೆಯಿಸಿಕೊಂಡರು.

೩. **ನಾರಾಯಣರಾಯನ ಕೊಲೆ:-** ನಾರಾಯಣರಾಯನನ್ನು ಹಿಡಿಯಬೇಕು ಎಂದು ಬರೆದ ಹುಕುಮು ಗಾರ್ದಿಗಳ ಕೈಗೆ ಇನ್ನೂ ಬಿದ್ದಿರಲಿಲ್ಲ. ಆನಂದಿಬಾಯಿಯು ಹೊತ್ತುಸಾಧಿಸಿ ಆ ಹುಕುಮಿನೊಳಗಿದ್ದ **ಧರಾವೆ** (ಹಿಡಿಯಬೇಕು) ಎಂಬವರಲ್ಲಿಯ **ಧ** ಕಾರವನ್ನು ತೆಗೆದು ಅಲ್ಲಿ **ಮಾ** (ಮಾರಾವೆ=ಕೊಲ್ಲಬೇಕು) ಕಾರವನ್ನು ಬರೆದು ಅದನ್ನು ಗಾರ್ದಿಗಳಿಗೆ ಕೊಟ್ಟು, ಇವರಂತೆ ನೀವು ಕೆಲಸ ಪಾರುಗಾಣಿಸಿರಿ; ನಿಮಗೆ ೫ ಲಕ್ಷ ರೂಪಾಯಿಗಳ ಜೊತೆಗೆ ಸಾಷ್ಟಿ, ಪುರಂದರ, ಅಹಮ್ಮದನಗರ ಈ ಮೂರು ಕೋಟೆಗಳನ್ನು ಕೊಡುವೆನು; ಎಂದು ಹೇಳಿದಳು. ಗಾರ್ದಿಗಳು ನಾರಾಯಣರಾಯನನ್ನು ಕೊಲ್ಲುವ ನಿಶ್ಚಯ ಮಾಡಿದರು. ಒಂದುದಿನ ಮಧ್ಯಾನ್ಹದಲ್ಲಿ ಅವರು ಅಕಸ್ಮಾತ್ತಾಗಿ ಅರಮನೆಯ ಕಾವಲುಗಾರರ ಮೇಲೆ ಬಿದ್ದು, ಅವರನ್ನು ಕೊಂದು ಅರಮನೆಯನ್ನು ಹೊಕ್ಕು, ನೆಟ್ಟಗೆ ನಾರಾಯಣರಾಯನಿದ್ದೆಡೆಗೆ ಹೊಗಿ ಅವನನ್ನು ಹಿಡಿದೆಳೆದು ಕಡಿದು ಹಾಕಿದರು! ಸ್ವಾಮಿನಿಷ್ಠ ಸೇವಕನಾವ **ಚಾಫಾಜಿಯು** ನಡುವೆ ಬರಲು ಅವನ ಗತಿಯೂ ನಾರಾಯಣರಾಯನಂತೆಯೇ ಆಯಿತು!!

೪. **ಬಾರಾಭಾಯಿಗಳ ಆಳಿಕೆ:—** ನಾರಾಯಣರಾಯನ ನಂತರ ಪೇಶವೆಪದವು ರಘುನಾಥರಾಯನಿಗೆ ಸಿಕ್ಕಿತು. ಆದರೂ ಜನರು ‡ 'ಕೊಲೆಗಡಕ ಪೇಶವೆ' ಎಂದು ಧಿಕ್ಕರಿಸುತ್ತಿರುವಾಗ ಅಲ್ಲಿ ಮೋರೆಯತ್ತಿಕೊಂಡು ಇರುವದು ಅವನಿಗೆ ಅಸಾಧ್ಯವಾಯಿತು. ಆದದರಿಂದ ಅವನು ಕೆಲವು ದಿನಗಳ ವರೆಗಾದರೂ ಪುಣೆಯಲ್ಲಿರಬಾರದೆಂದು ಹವಣಿಸಹತ್ತಿದನು. ಪೇಶನೆಯರ ಮನೆಜಗಳದ ಹೊತ್ತನ್ನು ಸಾಧಿಸಿ ನಿಜಾಮನೂ ಹೈದರನೂ

---

‡ ಮಾಧವರಾಯನ ಕಾಲದಿಂದ ನ್ಯಾಯಾಧೀಶನಾಗಿದ್ದ ರಾಮಶಾಸ್ತ್ರಿಯು ಪಂಚರನ್ನು ಕರೆಯಿಸಿ, ನಾರಾಯಣರಾಯನ ಕೊಲೆಯ ವಿಚಾರಣೆಯನ್ನು ಮಾಡಿ, "ರಘುನಾಥರಾಯನಿಗೆ ಮರಣದ ಶಿಕ್ಷೆಯೇ ತಕ್ಕದ್ದಾಗಿದೆ" ಎಂದು ನಿರ್ಣಯವನ್ನು ಹೇಳಿದನು.

ಮರಾಠರ ಸೀಮೆಗಳನ್ನು ಆಕ್ರಮಿಸಹತ್ತಿದರು. ಅವರನ್ನು ಹಿಮ್ಮೆಟ್ಟಿಸುವ ನೆವದಿಂದ ರಘುನಾಥರಾಯನು ಪುಣೆಯಿಂದ ಹೊರಬಿದ್ದನು. ನಾರಾಯಣ ರಾಯನ ಕೊಲೆಯಾದಂದಿನಿಂದ ಅವನ ಪಕ್ಷದ ನಾನಾಫಡಣವೀಸ ಮೊದ ಲಾದವರು ಹಗಲಿರುಳು ಕುದಿಯುತ್ತಿದ್ದರು ಸಖಾರಾಮಬಾಪುವು ಸಹ ರಘುನಾಥರಾಯನ ಪಕ್ಷವನ್ನು ಬಿಟ್ಟುಕೊಟ್ಟು ಅವನ ಪೇಶವೆಪದವನ್ನು ಕಸಿದು ಕೊಳ್ಳುವ ಕಾರಸ್ಥಾನವನ್ನು ನಡೆಸಿದನು ಆಗ ನಾನಾಫಡಣವೀಸನು ಸಖಾ-ರಾಮ ಬಾಪುವಿನ ಕಡೆಗೆ ಹಿರಿಯತನವನ್ನೊಪ್ಪಿಸಿದನು. ಬಳಿಕ ಈ ಹನ್ನೆರಡು ಜನ ಮುತ್ಸದ್ದಿಗಳು ಕೂಡಿಕೊಂಡು ರಘುನಾಥರಾಯನ ಅಧಿಕಾರವನ್ನು ಕಿತ್ತಿಹಾಕಿದರು. ಮತ್ತು ಛತ್ರಪತಿಯ ಒಪ್ಪಿಗೆಯನ್ನು ಪಡೆದು, ನಾರಾಯಣ ರಾಯನ ಹೆಂಡತಿಯಾದ *ಗಂಗಾಬಾಯಿಯ ಹೆಸರಿನಿಂದ ಕಾರಭಾರವನ್ನು ನಡಿಸಹತ್ತಿದರು.

ಪುಣೆಯಲ್ಲಿ ತನ್ನ ವಿರುದ್ಧವಾಗಿ ನಡೆದ ಕಾರಸ್ಥಾನದ ಸುದ್ದಿಯು ರಘು-ನಾಥರಾಯನಿಗೆ ತಿಳಿದಕೂಡಲೆ ಅವನು ಹೈದರನೊಡನೆ ಸ್ನೇಹದ ಒಪ್ಪಂದ ವನ್ನು ಮಾಡಿಕೊಂಡು ಹಿಂದಿರುಗಿದನು ಅವನಿಗೂ ಬಾರಾಭಾಯಿಗಳ ನೈನ್ಯಕ್ಕೂ **ಪಂಢರಪುರದ** ನೆರೆಯಲ್ಲಿ ಯುದ್ಧವಾಯಿತು ಅವರಲ್ಲಿ ತ್ರ್ಯಂಬಕ ರಾಯನು ಸತ್ತನು ಆದರೂ ರಘುನಾಥರಾಯನು ಪುಣೆಯ ಕಡೆಗೆ ಬರುವದು ಅಶಕ್ಯವಾಯಿತು. ಆದದರಿಂದ ಅವನು ಸಿಂಧೆ-ಹೋಳಕರರ ನೆರವಿನ ಆಶೆ ಯಿಂದ ಉತ್ತರಕ್ಕೆ ಹೋದನು. ಬಳವಂತರಾಯನು ಅವನ ಬೆನ್ನು ಬಿಟ್ಟುರಲಿಲ್ಲ. ರಘುನಾಥರಾಯನು ಸಿಂಧೆ-ಹೋಳಕರರ ನೆರವು ಸಿಗದೆಯಿದ್ದದರಿಂದ ಗುಜರಾಥ ವಲ್ಲಿ ಅತ್ತಿತ್ತ ಅಲೆದಾಡುತ್ತಿದ್ದನು. ಮಹೀನದಿಯ ತೀರದಲ್ಲಿ ಬಳವಂತರಾಯನು ರಘುನಾಥರಾಯನನ್ನು ಪೂರ್ಣವಾಗಿ ಸೋಲಿಸಿದನು ಆಮೇಲೆ ರಘುನಾಥ ರಾಯನು ಇಂಗ್ಲಿಷರ ಸಹಾಯವನ್ನು ಪಡೆಯುವ ಆಶೆಯಿಂದ ಸುರತಕ್ಕೆ ಹೋದನು.

ಇತ್ತ ಬಾರಾಭಾಯಿಗಳು ಗಂಗಾಬಾಯಿಯ ಹೆಸರಿನಿಂದ ನಡೆಯುತ್ತಿದ್ದ ಕಾರಭಾರವನ್ನು ಬಾಲಪೇಶವೆಯಾದ **ಸವಾಯಿ ಮಾಧವರಾಯನ** ಹೆಸರಿ ನಿಂದ ಅವನು ಹುಟ್ಟಿದ ೪೦ನೆಯ ದಿವಸದಿಂದ ಸಾಗಿಸಹತ್ತಿದರು. ಈ ಸವಾಯಿ ಮಾಧವರಾಯನೇ ಆರನೆಯ ಪೇಶವೆಯು.

* ನಾರಾಯಣರಾಯನು ಸಾಯುವಾಗ ಅವನ ಹೆಂಡತಿ ಗಂಗಾಬಾಯಿ ಬಸರಿದ್ದಳು. ಸುದ್ಯವದಿಂದ ಆಕೆಗೆ ಗಂಡು ಕೂಸು ಹುಟ್ಟಿತು. ಆ ಕೂಸಿಗೆ ಸವಾಯಿ ಮಾಧವರಾಯ ಎಂದು ಹೆಸರಿಟ್ಟರು.


೫೯ನೆಯ ಪಾಠ

ಮೊದಲನೆಯ ಗವ್ಹರ್ನರ ಜನರಲ್ ವಾರನ್ ಹೆಸ್ಟಿಂಗ್ಸ

(ಕ್ರಿ. ಶ. ೧೭೭೪—೧೭೮೫)

೧. **ರೆಗ್ಯೂಲೇಟಿಂಗ ಆಕ್ಟ್** :— ಕ್ರಿ. ಶ. ೧೭೭೩ ಹೆಸ್ಟಿಂಗ್ಸನು ಈ ಪರಿಯ ಸಾಹಸಗಳಿಳ್ನು ಮಾಡಿ ಹಣ ಕೂಡಿಸಿದರೂ ಕಂಪನಿಯ ಸ್ಥಿತಿಯು ಸುಧಾರಿಸಲಿಲ್ಲ. ಆದದರಿಂದ ಡಾಯರೆಕ್ಟರರು ಇಂಗ್ಲಡದ ಸರಕಾರದಲ್ಲಿ ಸಾಲ ಬೇಡಬೇಕಾಯಿತು. ಆಗ ಅವರು ಕಂಪನಿಯ ಕಾರಭಾರದ ವಿಚಾರಣೆಯನ್ನು ಮಾಡಿಸಿ, ಅವರ ನಿಜಸ್ಥಿತಿಯನ್ನು ಅರಿತು ಕೊಂಡರು. ಮತ್ತು ಪಾರ್ಲಿಮೆಂಟಿನಲ್ಲಿ ಪಾಸಾದ **ರೆಗ್ಯೂಲೇಟಿಂಗ ಆಕ್ಟ್** ಎಂಬ ಕಾಯದೆಯಂತೆ ಕಂಪನಿಯ ಮೇಲ್ವಿಚಾರಣೆಯ ಅಧಿಕಾರವನ್ನು ತಮ್ಮಕಡೆಗೆ ಇಟ್ಟುಕೊಂಡು ೧ ಕೋಟಿ ರೂಪಾಯಿ ಸಾಲಕೊಟ್ಟರು. ಈ ರೆಗ್ಯೂ-ಆಕ್ಟಿನ ಕಲಮುಗಳು:- ೧ ಬಂಗಾಲದ ಗವ್ಹರ್ನರನೇ **ಗವ್ಹರ್ನರ ಜನರಲ್** ಎಂಬ ಹೆಸರಿನಿಂದ ಮುಂಬಯಿ, ಮದ್ರಾಸ ಇವುಗಳ ಗವ್ಹರ್ನರರ ಮೇಲಧಿಕಾರಿಯಾಗಿರಬೇಕು. ೨ ಗವ್ಹರ್ನರ ಜನರಲ್ ಮತ್ತು ಬೇರೆ ನಾಲ್ವರು ಸಭಾಸದರು, ಈ ಐದು ಜನರಿಂದ ಕೂಡಿದ **ಆಲೋಚನಾ ಸಭೆಯಲ್ಲಿ** ಬಹುಮತದಿಂದ ನಿರ್ಣಯವಾದಂತೆಯೆ ಗವ್ಹರ್ನರ ಜನರಲನು ಕಾರಭಾರವನ್ನು ಸಾಗಿಸಬೇಕು. ೩ ಕಲಕತ್ತೆಯಲ್ಲಿ ಒಂದು **ವರಿಷ್ಠ ನ್ಯಾಯಾಸನವು** (ಸುಪ್ರೀಮ ಕೋರ್ಟು) ಸ್ಥಾಪಿಸಲ್ಪಡಬೇಕು; ಕಂಪನಿಯ ಕೆಲಸಗಾರರ ವಿರುದ್ಧ ಬಂದ ತಕರಾರುಗಳ ವಿಚಾರಣೆಯ ಅಧಿಕಾರವೂ ಇದಕ್ಕೆ ಇರಬೇಕು. ೪. ಗವ್ಹರ್ನರ ಜನರಲ್, ಆಲೋಚನಾ ಸಭೆಯ ಸಭಿಕರು, ನ್ಯಾಯಾಧೀಶರು ಇವರನ್ನೆಲ್ಲ ಇಂಗ್ಲಂಡಿನ ಸರಕಾರದವರೇ ನಿಯಮಿಸಬೇಕು. ೫. ಕಂಪನಿಯ ಕೆಲಸಗಾರರು ಕಾಣಿಕೆ, ಲಂಚ ಮುಂತಾದವುಗಳನ್ನು ತೆಗೆದುಕೊಳ್ಳಲಾಗದು. ೬. ಕಂಪನಿಯ ಡಾಯರೆಕ್ಟರರನ್ನು ಆಗಾಗ್ಗೆ ಬದಲಿಸಬೇಕು: ಕಂಪನಿಯ ಯಾವ ಸಭಾಸದನಿಗೂ ನಾಲ್ಕಕ್ಕಿಂತ ಹೆಚ್ಚು ಮತಗಳು ಇರಕೂಡದು; ಹಿಂದುಸ್ಥಾನದಿಂದ ಬಂದ ಪ್ರಕರ್ಣಗಳನ್ನು ಸರಕಾರಕ್ಕೆ ತೋರಸಬೇಕು. ೭. ಇಪ್ಪತ್ತು ವರ್ಷಕ್ಕೊಮ್ಮೆ ಕಂಪನಿಯ ಸನದಿನ ಪುನರ್ವಿಚಾರಣೆಯಾಗತಕ್ಕದ್ದು

೨. **ಹೆಸ್ಟಿಂಗ್ಸನ ತೊಂದರೆಗಳು:**— ರೆಗ್ಯುಲೇಟಿಂಗ ಆಕ್ಟಿನಂತೆ, ವಾರನ್ ಹೆಸ್ಟಿಂಗ್ಸನು ಗವ್ಹರ್ನರ ಜನರಲನಾದನು; ಫ್ರ್ಯಾನ್ಸಿಸ್, ಕ್ಲ್ಯಾವ್ಹರಿಂಗ, ಮಾನ್ಸನ್, ಬಾರ್ವೆಲ್ ಎಂಬವರು ಆಲೋಚನಾ ಸಭೆಯ ಸಭಾ ಸದರಾಗಿಯೂ ಇಂಪೇ ಎಂಬವನು ಮುಖ್ಯ ನ್ಯಾಯಾಧೀಶನಾಗಿಯೂ ನಿಯಮಿಸಲ್ಪಟ್ಟರು. ಮೊದಲಿನ ಮೂವರು ಸಭಾಸದರಿಗೆ ಹೆಸ್ಟಿಂಗ್ಸನ ಆಳಿಕೆಯ



ವಾರನ್ ಹೆಸ್ಟಿಂಗ್ಸ

ಧೋರಣವು ಒಪ್ಪಿರಲಿಲ್ಲ ಅವರಲ್ಲಿಯ ಫ್ರ್ಯಾನ್ಸಿಸನು ಮುಂದಾಗಿ ಬಹುಮತವನ್ನು ತನ್ನ ಕಡೆಗೆ ಮಾಡಿಕೊಂಡದ್ದರಿಂದ ಹೆಸ್ಟಿಂಗ್ಸನು ತನ್ನ ಇಚ್ಛೆಯಂತೆ ಕಾರಭಾರ ಸಾಗಿಸುವದು ಕಠಿಣವಾಯಿತು. ಆದರೆ ಮುಂದೆ ಕ್ರಿ. ಶ. ೧೭೭೬ರಲ್ಲಿ ಮಾನ್ಸನನೂ ಮರುವರುಷ ಕ್ಲ್ಯಾವ್ಹರಿಂಗನೂ ಸಾಯಲು ಹೆಸ್ಟಿಂಗ್ಸನ ಕಡೆಗೆ ಬಹುಮತವಾಗಿ ಅವನಿಗಾಗುತ್ತಿದ್ದ ತೊಂದರೆಯು ಇಲ್ಲದಾಯಿತು. ಫ್ರ್ಯಾನ್ಸಿಸನ ವಿರೋಧವು ಮಾತ್ರ ತಪ್ಪಲಿಲ್ಲ.

೩. **ನಂದಕುಮಾರ** :— ಹೆಸ್ಟಿಂಗ್ಸನಿಗೂ ಸಭಾಸದರಿಗೂ ನೆಟ್ಟಗಿಲ್ಲೆಂಬುದನ್ನು ತಿಳಿದು ಹಲವರು ಅವನ ತಪ್ಪುಗಳನ್ನು ಆರಿಸಹತ್ತಿದರು. **ರಾಜಾ ನಂದಕುಮಾರ** ಎಂಬ ಶ್ರೀಮಂತ ಗೃಹಸ್ಥನು ಡೆಪ್ಯೂಟಿ ನವಾಬರನ್ನು ತೆಗೆದುಹಾಕುವ ಕೆಲಸದಲ್ಲಿ ಹೆಸ್ಟಿಂಗ್ಸನಿಗೆ ನೆರವಾಗಿದ್ದನು. ಆ ಅಧಿಕಾರವು ತನಗೆ ಸಿಗಬೇಕೆಂದು ನಂದಕುಮಾರನ ಅಪೇಕ್ಷೆಯಿತ್ತು ಆದರೆ ಹೆಸ್ಟಿಂಗ್ಸನು ಡೆಪ್ಯೂಟಿ ನವಾಬರ ಬದಲು ಇಂಗ್ಲಿಷ ಕಲೆಕ್ಟರರನ್ನು ನಿಯಮಿಸಿ ವಸೂಲಿಯ ಕೆಲಸವನ್ನು ಸಾಗಿಸಿದ್ದನು. ಅಂದಿನಿಂದ ನಂದಕುಮಾರನು ಹೆಸ್ಟಿಂಗ್ಸನನ್ನು ದ್ವೇಷಿಸಹತ್ತಿದನು. ಈಗ ಅವನು, ಹೆಸ್ಟಿಂಗ್ಸನು ಮೀರಜಾಫರನ ಹೆಂಡತಿಯಿಂದ ಲಂಚ ತೆಗೆದುಕೊಂಡನೆಂದು ದೂರಿಕೊಂಡನು ಫ್ರಾನ್ಸಿಸ್ ಮೊದಲಾದವರು ಹೆಸ್ಟಿಂಗ್ಸನು ತಿಂದ ಹಣವನ್ನು ಮರಳಿ ತುಂಬಬೇಕೆಂದು ನಿರ್ಣಯಿಸಿದರೂ ಅವನು ಸೊಪ್ಪುಹಾಕಲಿಲ್ಲ. ಆದದರಿಂದ ಈ ಪ್ರಕರ್ಣವು ಡಾಯರೆಕ್ಟರರ ಕಡೆಗೆ ಹೋಯಿತು ಇತ್ತ ನಂದಕುಮಾರನ ಮೇಲೆ ಸುಳ್ಳು ಕಾಗದ ಮಾಡಿದ ಒಂದು ಆರೋಪವು ಹೊರಿಸಲ್ಪಟ್ಟಿತು. ಮುಖ್ಯ ನ್ಯಾಯಾಧೀಶನಾದ ಇಂಪೆಯು ಈ ವಿಷಯವಾಗಿ ನಂದಕುಮಾರನ ವಿಚಾರಣೆಯನ್ನು ಸಾಗಿಸಿ ಅವನಿಗೆ ಮರಣದ ಶಿಕ್ಷೆಯನ್ನು ಹೇಳಿದನು ಕೂಡಲೆ ನಂದಕುಮಾರನು ಗಲ್ಲಿಗೇರಿಸಲ್ಪಟ್ಟನು. ಕ್ರಿ ಶ. ೧೭೭೮.

೪. **ಚೇತಸಿಂಗನನ್ನು ಮುರಿದದ್ದು** :— ಕ್ರಿ ಶ. ೧೭೭೫ರಲ್ಲಿ ಕಾಶಿಯ ಅರಸನಾದ **ಚೇತಸಿಂಗನು** ಇಂಗ್ಲಿಷರ ಮಾಂಡಲಿಕನಾಗಿ ಅವರಿಗೆ ವರ್ಷಕ್ಕೆ ೨೨॥ ಲಕ್ಷ ರೂ. ಕಪ್ಪ ಕೊಡಹತ್ತಿದ್ದನು ಕ್ರಿ. ಶ ೧೭೭೮ರಲ್ಲಿ ಕಪ್ಪವಲ್ಲದೆ ೫ ಲಕ್ಷ ರೂ. ಗಳನ್ನು ಹೆಸ್ಟಿಂಗ್ಸನು ಹೆಚ್ಚಿಗೆ ತೆಗೆದುಕೊಂಡನು ಮತ್ತು ಮರುವರ್ಷ ಅಷ್ಟು ಹಣವನ್ನು ಹೆಚ್ಚಿಗೆ ಬೇಡಿದ್ದಲ್ಲದೆ ಸ್ವಂತದ ವೆಚ್ಚದಿಂದ ಎರಡು ಸಾವಿರ ಕುದುರೆಯ ಸವಾರರನ್ನು ಇಂಗ್ಲಿಷರಿಗೆ ಪೂರೈಸಬೇಕೆಂದು ತಿಳಿಸಿದನು. ಇಷ್ಟು ಸಹಾಯ ಮಾಡುವದು ಚೇತಸಿಂಗನಿಗೆ ಸಾಧ್ಯವಾಗಲಿಲ್ಲ ಆಗ ಹೆಸ್ಟಿಂಗ್ಸನು ಅವನಿಗೆ ೫೦ ಲಕ್ಷ ರೂ. ದಂಡಕಟ್ಟು ಅದನ್ನು ಎತ್ತುವದಕ್ಕಾಗಿ ಕಾಶಿಗೆ ಬಂದು ಚೇತಸಿಂಗನನ್ನು ಸೆರೆಹಿಡಿಯಬೇಕೆಂದು ಅಪ್ಪಣೆಕೊಟ್ಟನು. ಆಗ ಚೇತಸಿಂಗನ ಕಡೆಯವರು ಅವನನ್ನು ಉಳಿಸಿಕೊಂಡು ಹೆಸ್ಟಿಂಗ್ಸನ ಮೇಲೆ ಏರಿಹೋದರು. ಆಗ ಅವನು ಪಾರಾಗಿಹೋಗಿ ಹೊಸ ಸೈನ್ಯವನ್ನು ಕರೆಯಿಸಿ

ಕೊಂಡು ಚೇತಸಿಂಗನನ್ನು ತಳ್ಳಿ ಅವನ ರಾಜ್ಯವನ್ನು ಅವನ ತಮ್ಮನ ಮಗನಿಗೆ ಕೊಟ್ಟು ಅವನಿಂದ ೪೦ ಲಕ್ಷ ರೂಪಾಯಿ ಕಪ್ಪವನ್ನು ಸೆಳೆದುಕೊಂಡನು.

೫. **ಬೇಗಮರ ಸುಲಿಗೆ**:— ಸುಜಾಉದ್ದೌಲನ ತರುವಾಯ ಕ್ರಿ. ಶ. ೧೭೭೫ರಲ್ಲಿ ಅವನ ಮಗನಾದ **ಅಸಫುದ್ದೌಲನು** ಅಯೋಧ್ಯೆಯ ವಜೀರನಾದನು. ಅವನು ದುರ್ಬಲನಿದ್ದದರಿಂದ ತನ್ನ ರಕ್ಷಣೆಗಾಗಿ ಇಂಗ್ಲಿಷ ಸೈನ್ಯವನ್ನು ಇಟ್ಟುಕೊಂಡನು ಆ ಸೈನ್ಯದ ವೆಚ್ಚದ ಹಣವನ್ನು ಹೊತ್ತು ಹೊತ್ತಿಗೆ ಕೊಡುವದು ಸಹ ಅವನಿಂದ ಆಗುತ್ತಿದ್ದಿಲ್ಲ. ಆದದರಿಂದ ಅವನು + ಬೇಗಮಂತಾದ ತನ್ನ ತಾಯಿ-ತಮ್ಮಂದಿರಲ್ಲಿ ಹಣ ಬೇಡಹತ್ತಿದನು ಅವರು ವಜೀರನಿಗೆ ಒಮ್ಮೆ ೨೬ ಲಕ್ಷ ರೂಪಾಯಿಗಳನ್ನೂ, ಇನ್ನು ಹಣ ಬೇಡುವದಿಲ್ಲೆಂದು ಒಪ್ಪಿಕೊಂಡಿದ್ದರಿಂದ ಮತ್ತೊಮ್ಮೆ ೩೦ ಲಕ್ಷ ರೂಪಾಯಿಗಳನ್ನೂ ಕೊಟ್ಟರು ಆದರೂ ಅವನ ತೊಂದರೆಯು ತಪ್ಪಲಿಲ್ಲ. ವಜೀರನು ೧ ಕೋಟಿ ರೂಪಾಯಿಗಳನ್ನು ಹೆಸ್ಟಿಂಗ್ಸನಿಗೆ ಕೊಡಬೇಕಾಯಿತು. ಆಗ ಅವನು ಬೇಗಮರ ಹಣವನ್ನು ಒತ್ತಾಯದಿಂದ ಸೆಳೆದುಕೊಳ್ಳುವದಕ್ಕಾಗಿ ಹೆಸ್ಟಿಂಗ್ಸನ ಒಪ್ಪಿಗೆಯಿಂದ ಇಂಗ್ಲಿಷ ಸೈನಿಕರನ್ನು ನೆರವಿಗೆ ಕರೆಯಿಸಿಕೊಂಡನು ಬಳಿಕ ಆ ಸೈನಿಕರು ಬೇಗಮರನ್ನೂ ಅವರ ಪರಿವಾರವನ್ನೂ ಪರಿಪರಿಯಿಂದ ಕಾಡಿ ಅವರಿಂದ ೭೫ ಲಕ್ಷ ರೂ. ಗಳನ್ನು ಸೆಳೆದುಕೊಂಡರು ಈ ಪ್ರಸಂಗದಲ್ಲಿ ಬೇಗಮರ ದುಸ್ಥಿತಿಯನ್ನು ಕಂಡು ವಜೀರನಿಗೆ ಕಳವಳವೆನಿಸಿದರೂ ಆ ಕಷ್ಟವನ್ನು ತಪ್ಪಿಸುವದು ಅವನಿಗೂ ಅಸಾಧ್ಯವಾಯಿತು ಬೇಗಮರಿಂದ ಸೆಳೆದುಕೊಂಡ ಹಣವು ವಜೀರನದಾಗಿ ಹೆಸ್ಟಿಂಗ್ಸನ ಕೈಸೇರಿತು.

---

೧ ಬೇಗಮರು ತಮ್ಮ ಸಂಪತ್ತನ್ನು ಕಾದುಕೊಂಡು ಫೈಜಾಬಾದದಲ್ಲಿ ಇರಹತ್ತಿದರು.

೬ನೆಯ ಪಾಠ

ವಾರನ್ ಹೆಸ್ಟಿಂಗ್ಸ (ಮುಂದೆ ಸಾಗಿದ್ದು)

೧. **ಮರಾಠರ ಮೊದಲನೆಯ ಯುದ್ಧ** :— ಕ್ರಿ. ಶ. **೧೭೭೫-೧೭೮೨** ರಘುನಾಥರಾಯನು + ಸುರತಕ್ಕೆ ಬಂದು ಇಂಗ್ಲಿಷರೊಡನೆ ಒಪ್ಪಂದಮಾಡಿಕೊಂಡನು. ರೆಗ್ಯುಲೇಟಿಂಗ ಆಕ್ಟಿನಿಂದ, ಮುಂಬಯಿಯ ಗವ್ಹರ್ನರನು ಕಲಕತ್ತೆಯ ಗವ್ಹರ್ನರ ಜನರಲನಿಗೆ ಅಂಕಿತನಾಗಿ ನಡೆಯಬೇಕೆಂದು ಗೊತ್ತಾಗಿತ್ತು; ಎಂದರೆ ಸುರತದ ಒಪ್ಪಂದವನ್ನಾಗಲಿ ಮರಾಠರೊಡನೆ ಯುದ್ಧವನ್ನಾಗಲಿ ಅವನು ಗವ್ಹ. ಜನರಲ್ಲನ ಒಪ್ಪಿಗೆಯಿಂದಲೇ ಮಾಡಬೇಕಿತ್ತು ಆದರೆ ಅವನು ಹಾಗೆ ಮಾಡಲಿಲ್ಲ; ಆದದರಿಂದ ಗವ್ಹ. ಜನರಲ್ಲನಾದ ವಾರನ್ ಹೆಸ್ಟಿಂಗ್ಸನು 'ರಘುನಾಥರಾಯನ ಪಕ್ಷವನ್ನು ಬಿಡಬೇಕು' ಎಂದು ಮುಂಬಯಿಯ ಗವ್ಹರ್ನರನಿಗೆ ತಿಳಿಸಿ **ಆಪ್ಟನ್** ಎಂಬವನನ್ನು ಪುರಂದರಕ್ಕೆ ಕಳುಹಿ, ಪುಣೆಯ ದರಬಾರಿನವರೊಡನೆ ಒಪ್ಪಂದ ಮಾಡಿಕೊಂಡನು. ಕ್ರಿ. ಶ. **೧೭೭೬. ಪುರಂದರದ ಒಪ್ಪಂದ**ದಿಂದ ೧. ಇಂಗ್ಲಿಷರು ರಘುನಾಥರಾಯನ ಪಕ್ಷವನ್ನು ಬಿಡಬೇಕು. ೨. ಸಾಷ್ಟಿ ಪ್ರಾಂತವನ್ನೂ ೧೨ ಲಕ್ಷ ರೂ. ಗಳನ್ನೂ ದರಬಾರಿನವರು ಇಂಗ್ಲಿಷರಿಗೆ ಕೊಡಬೇಕು; ಎಂದು ಗೊತ್ತಾಯಿತು

ಆದರೆ **ಪುರಂದರದ ಒಪ್ಪಂದ**ದಂತೆ ಮುಂಬಯಿಯ ಗವ್ಹರ್ನರನು ರಘುನಾಥರಾಯನ ಪಕ್ಷವನ್ನು ಬಿಡಲಿಲ್ಲ. ಅವನು **ಸುರತದ ಒಪ್ಪಂದಕ್ಕೆ** ಇಂಗ್ಲಂಡ ಸರಕಾರದ ಸಮ್ಮತಿಯನ್ನು ಪಡೆದು ಯುದ್ಧವನ್ನು ಸಾಗುಮಾಡಿದನು. **ಸ್ಟುಆರ್ಟ** ಎಂಬವನು ಬೋರಘಟ್ಟದ ಮಾರ್ಗವಾಗಿ ಪುಣೆಯ ಕಡೆಗೆ ಸಾಗಿಬಂದನು. **ಕಾರ್ಲಿಯ** ಹತ್ತರ ಮರಾಠರೊಡನೆ ಆದ ಯುದ್ಧದಲ್ಲಿ ಸ್ಟುಆರ್ಟನು ಕೊಲ್ಲಲ್ಪಟ್ಟನು. ಆ ಮೇಲೆಯೂ ಅವನ ಸೈನ್ಯವು ತಳೆಗಾವದವರೆಗೆ ಮುಂದರಿದು ಬಂದಿತು. ಆದರೆ ಅಲ್ಲಿ ಮರಾಠ ಸೈನ್ಯವು ಅದನ್ನು ಸುತ್ತುಗಟ್ಟಿದ್ದರಿಂದ ಮುಂದು ಗಾಣದೆ ಇಂಗ್ಲಿಷರು **ವಢಗಾವದ** ಒಪ್ಪಂದ ಮಾಡಿಕೊಂಡರು. ಈ ಒಪ್ಪಂದದ

+ ಇಂಗ್ಲಿಷರು ರಘುನಾಥರಾಯನಿಗೆ ಪೇಶವೆ ಪದವನ್ನು ಕೊಡಿಸಬೇಕು. ರಘುನಾಥರಾಯನು ಪ್ರತಿಫಲಿಂಗಳಿಗೆ ಸೈನ್ಯದ ವೆಚ್ಚಕ್ಕಾಗಿ ೧೫ ಲಕ್ಷ ರೂಪಾಯಿಗಳನ್ನು ಕೊಡಬೇಕಲ್ಲದೆ ಸಾಷ್ಟಿ-ವಸಯಿ ಗಳನ್ನೂ, ಭಡೋಡ ಮುಂತಾನ ೧೯ ಲಕ್ಷದ ಸೀಮೆಯನ್ನೂ ಇಂಗ್ಲಿಷರಿಗೆ ಕೊಡತಕ್ಕದ್ದು.

ಕರಾರುಗಳು- ೧. ಇಂಗ್ಲಿಷರು ರಘುನಾಥರಾಯನನ್ನು ಪೇಶವೆಯ ಕಡೆಗೆ ಒಪ್ಪಿಸಬೇಕು. ೨. ಸಾಷ್ಟಿ ಮೊದಲಾದ ಎಲ್ಲ ಸ್ಥಾನಗಳನ್ನು ಬಿಟ್ಟುಕೊಡಬೇಕು. ೩ ಕಲಕತ್ತೆಯಿಂದ ಬರುತ್ತಿದ್ದ ಇಂಗ್ಲಿಷ ಸೈನ್ಯವನ್ನು ಮರಳಿಸಬೇಕು ಈ ಕರಾರುಗಳು ಪೂರ್ಣವಾಗುವ ವರೆಗೆ ಇಬ್ಬರು ಇಂಗ್ಲಿಷ ಅಧಿಕಾರಿಗಳನ್ನು ಮರಾಠರ ವಶಕ್ಕೆ ಕೊಡಬೇಕು.

ಈ ಒಪ್ಪಂದದಂತೆಯೂ ಇಂಗ್ಲಿಷರು ನಡೆಯಲಿಲ್ಲ. ಆದದರಿಂದ ನಾನಾ ಫಡಣವೀಸನು ಹೈದರ-ನಿಜಾಮರೊಡನೆ ಒಕ್ಕಟ್ಟು ಮಾಡಿಕೊಂಡು ಇಂಗ್ಲಿಷರಿಗೆ ಚಿನ್ನಾಗಿ ಕೈತೋರಿಸಬೇಕೆಂದು ನಿಶ್ಚಯಿಸಿದನು. ಹೈದರ-ನಿಜಾಮರು ಮದ್ರಾಸಿನ ಮೇಲೆ, ಸಿಂಧೆ-ಭೋಸಲೆಯರು ಬಂಗಾಲದ ಮೇಲೆ, ಪೇಶವೆಯರು ಮುಂಬಯಿಯ ಮೇಲೆ ಸಾಗತಕ್ಕದ್ದೆಂದು ಗೊತ್ತಾಯಿತು ಆದರೆ ಇಂಗ್ಲಿಷರು ಗುಂಟೂರ ಪ್ರಾಂತವನ್ನು ಮರಳಿ ಕೊಟ್ಟದ್ದರಿಂದ ನಿಜಾಮನೂ ೧೬ ಲಕ್ಷ ರೂಪಾಯಿಗಳನ್ನು ಕೊಟ್ಟದ್ದರಿಂದ ಭೋಸಲೆಯೂ ಈ ಕಟ್ಟಿನಿಂದ ಜಾರಿ ಸುಮ್ಮನಾದರು.

ಉತ್ತರದಲ್ಲಿ **ಘೋಷ್ಯಾಮನು** ಗ್ವಾಲ್ಹೇರ ಕೋಟೆಯನ್ನು ಹಿಡಿದು ಕೊಂಡು ಮಾಳವದ ಮೇಲೆ ಸಾಗಿಬಂದನು ಆಗ ಸಿಂಧೆಯು ಅತ್ತ ಸಾಗಿ ಅವನನ್ನು ಹಿಮ್ಮೆಟ್ಟಿಸಿದನು. ಗಾಡರ್ಡನು ಗುಜರಾಥದಿಂದ ದಕ್ಷಿಣಕ್ಕೆ ಬಂದು ಮುಂಬಯಿಯ ಸೈನ್ಯವನ್ನು ಕೂಡಿಕೊಂಡು ಪುಣೆಯ ಕಡೆಗೆ ಬರಹತ್ತಿದನು. ಅವನು ಖಂಡಾಳೆಯ ಬಳಿಯಲ್ಲಿರುವಾಗ ಹಿಂದುಗಡೆಯಿಂದ ಹೋಳಕರ-ಪಟವರ್ಧನರೂ ಮುಂದುಗಡೆಯಿಂದ ಹರಿಪಂತನೂ ಅವನ ಸೈನ್ಯವನ್ನು ಧುಮುಕಿದರು. ಮುಂಬಯಿಯಿಂದ ಇಂಗ್ಲಿಷ ಸೈನ್ಯಕ್ಕೆ ಸಿಗುವ ನೆರವು ಕಟ್ಟಾಯಿತು ಹೀಗೆ ಇಕ್ಕಟ್ಟಿನಲ್ಲಿ ಸಿಕ್ಕದ್ದರಿಂದ ಗಾಡರ್ಡನು ಹಿಂದಿರುಗಿ ಹಂಚಿಕೆಯಿಂದ ಪಾರಾಗಿ ಸೈನ್ಯದೊಂದಿಗೆ ಮುಂಬಯಿಗೆ ನಿಲುಕಿದನು.

ಹಲವು ಸರತಿ ಪ್ರಯತ್ನಿಸಿದರೂ ಮರಾಠರನ್ನು ಮುರಿಯಲು ಆಗಲಿಲ್ಲ. ಅಲ್ಲದೆ ಇದೇ ಹೊತ್ತಿಗೆ ಹೈದರನು ಮದ್ರಾಸದ ಮೇಲೆ ಸಾಗಿಬರಹತ್ತಿದ್ದನು. ಆದದರಿಂದ ವಾರನ್ ಹೇಸ್ಟಿಂಗ್ಸನು ಮಹದಾಜಿಯ ದಿಲ್ಲಿಯ ವರ್ಚಸ್ಸಿಗೆ ಒಪ್ಪಿ, ಅವನನ್ನು ಸಮಾಧಾನಗೊಳಿಸಿ, ಅವನ ಸಹಾಯದಿಂದ ಪೇಶವೆಯೊಡನೆ

ಸಾಲಬಾಯಿ ಎಂಬಲ್ಲಿ † ಒಪ್ಪಂದ ಮಾಡಿಕೊಂಡನು. ಕ್ರಿ. ಶ. ೧೭೮೨. ಈ ಒಪ್ಪಂದದ ಕರಾರುಗಳು- ೧ ಇಂಗ್ಲಿಷರು ರಘುನಾಥರಾಯನ ಪಕ್ಷವನ್ನು ಬಿಡಬೇಕು. ಅವನು ವರ್ಷಕ್ಕೆ ೩೦ ಲಕ್ಷರೂಪಾಯಿ ವೇತನಹೊಂದಿ ಕೋಪರ ಗಾವದಲ್ಲಿ ಸ್ವಸ್ಥವಾಗಿ ಇರಬೇಕು ೨. ಸಾಷ್ಟಿಯೊಂದನ್ನು ಮಾತ್ರ ಇಂಗ್ಲಿಷರು ಇಟ್ಟುಕೊಂಡು ಉಳಿದ ಸೀಮೆಗಳನ್ನು ಬಿಟ್ಟುಬಿಡಬೇಕು ೩ ಗಾಯಕವಾಡನು ಪೇಶೆವೆಯರಿಗೆ ಕಪ್ಪವನ್ನುಕೊಟ್ಟು ತನ್ನ ಸೀಮೆಯ ಕಾರಭಾರವನ್ನು ಸಾಗಿಸಬೇಕು ೪. ಒಬ್ಬರ ಶತ್ರುಗಳಿಗೆ ಇನ್ನೊಬ್ಬರು ನೆರವಾಗಕೂಡದು.

೨. ಮೈಸೂರಿನ ಎರಡನೆಯ ಯುದ್ಧ :- ಕ್ರಿ ಶ. ೧೭೮೦-೧೭೮೪

ಕಾರಣ- ಮಾಧವರಾಯನು ಹಲವು ಸಾರೆ ಸಾಗಿ ಬಂದರೂ ಮದ್ರಾಸದ ಒಪ್ಪಂದದಂತೆ ಇಂಗ್ಲಿಷರು ಹೈದರನಿಗೆ ನೆರವಾಗಲಿಲ್ಲ. ಇದರಿಂದ ಹೈದರನು ಅವರ ಮೇಲೆ ಸಿಟ್ಟಾಗಿದ್ದನು. ಯುರೋಪದಲ್ಲಿ ಇಂಗ್ಲಿಷ-ಫ್ರೆಂಚರಲ್ಲಿ ಯುದ್ಧವು ಆರಂಭವಾಗಲು ಇಂಗ್ಲಿಷರು ಹೈದರನ ಒಪ್ಪಿಗೆಯಿಲ್ಲದೆ ಅವನ ರಾಜ್ಯದೊಳಗಿಂದ ಫ್ರೆಂಚರ **ಮಾಹಿ** ಬಂದರವನ್ನು ವಶಮಾಡಿಕೊಂಡರು. ಹೈದರನಿಗೆ **ಈ** ಮಾಹಿ ಬಂದರದಿಂದ ಯುದ್ಧ ಸಾಮಗ್ರಿಯು ದೊರೆಯುತ್ತಿತ್ತು. ಮರಾಠರೂ ನಿಜಾಮನೂ ಇಂಗ್ಲಿಷರ ಮೇಲೆ ಸಾಗಲು ಒಪ್ಪಿದ್ದರಿಂದ ಹೈದರನು ಹುರುಪುಗೊಂಡು ಇಂಗ್ಲಿಷರ ಕೂಡ ಯುದ್ಧಮಾಡಲು ಅನುವಾದನು.

ಯುದ್ಧಗಳು :— ಹೈದರನು ಮದ್ರಾಸದ ಕಡೆಗೆ ಸಾಗುತ್ತಿರಲು ದಾರಿಯಲ್ಲಿ ಎದುರಾದ **ಬೇಲಿ** ಎಂಬವನ ಸೈನ್ಯವನ್ನು ನಾಶಗೊಳಿಸಿ ಅವನನ್ನು ಸೆರೆಹಿಡಿದನು. ಬಳಿಕ ಹೈದರನು ಅರ್ಕಾಟ್, ವೆಲೂರುಗಳನ್ನು ವಶಮಾಡಿಕೊಂಡು **ಪಾಂಡಿಚೇರಿ**ಯನ್ನು ಮುತ್ತಿದನು.

ಈ ರೀತಿ ಹೈದರನು ಪ್ರಬಲನಾಗುವದನ್ನು ಕಂಡು ವಾರನ್ ಹೆಸ್ಟಿಂಗ್ಸನು ಮರಾಠರ ಸಂಗಡ ನಡೆದ ಯುದ್ಧವನ್ನು ನಿಲ್ಲಿಸಿ **ಸರ್ ಅಯರ ಕೂಟನನ್ನು** ಮದ್ರಾಸಿಗೆ ಕಳುಹಿದನು. ಕೂಟನು ಶೌರ್ಯದಿಂದ ಕಾದಿ ಹೈದರನನ್ನು

† ಹೈದರನಿಗೆ ತಿಳಿಸದೆ ಒಪ್ಪಂದದ ಕಾಗದಕ್ಕೆ ಸಹಿಹಾಕಬಾರದೆಂದು ನಾನಾಫಡಣವೀಸನ ಮನಸ್ಸಿನಲ್ಲಿತ್ತು. ಆದಕ್ಕಾಗಿ ಅವನು ಸಹಿಮಾಡುವದನ್ನು ಬಿಟ್ಟಿದ್ದನು. ಆದರೆ ಅಷ್ಟರಲ್ಲಿ ಹೈದರನು ಸುಗಣಹೊಂದಿದ ಸುದ್ದಿಯು ತಿಳಿಯಿತು ಆಮೇಲೆಯೇ ಒಪ್ಪಂದಕ್ಕೆ ಸಹಿಹಾಕಿದನು.

ಪೋರ್ಟನೋವ, ಪೋಲಿಲೂರ, ಸೋಲಿಮಗಡ ಇವುಗಳ ಬಳಿಯಲ್ಲಿ ಸೋಲಿಸಿದನು. ಆದರೂ ಹೈದರನು ಎದೆಗುಂದಲಿಲ್ಲ. ಅಷ್ಟರಲ್ಲಿ ಅವನಿಗೆ ಫ್ರೆಂಚರ ನೆರವೂ ಸಿಕ್ಕಿತು. ಆಗ ಅವನು ಅವರ ನೆರವಿನಿಂದ ಕಡಲೂರನ್ನು ವಶಮಾಡಿಕೊಂಡನು. ಟೀಪುವು ತಂಜಾವರದಲ್ಲಿದ್ದ **ಬ್ರೇಥವೇಟನ** ಸೈನ್ಯವನ್ನು ನುಗ್ಗುಮಾಡಿದನು.

ಹೀಗಿರಲು ಕ್ರಿ ಶ. **೧೭೮೩**ನೆಯ ವರುಷದ ಕಡೆಯ ಸುಮಾರಕ್ಕೆ ಹೈದರನು ಅಕಸ್ಮಿಕವಾಗಿ ಮರಣಹೊಂದಿದನು. ಇದೇ ಸಮಯಕ್ಕೆ ಶೂರನಾದ ಸರ್ **ಆಯರ್ ಕೂಟ**ನೂ ಮಡಿದನು ಸಾಲ್ಬಾಯಿ ಒಪ್ಪಂದವಾದ ಬಳಿಕ ಮುಂಬಯಿಯ ಇಂಗ್ಲಿಷ ಸೈನ್ಯವು ಮಲಬಾರ ದಂಡೆಗೆ ಬಂದು ಟೀಪುವಿನ ರಾಜ್ಯವನ್ನು ಸೇರಿತು. ಆಗ ಟೀಪುವು ಭರದಿಂದ ಪಶ್ಚಿಮಕ್ಕೆ ಸಾಗಿ ಆ ಸೈನ್ಯವನ್ನು ಎದುರಿಸುತ್ತ ಮಂಗಳೂರನ್ನು ಹಿಡಿದುಕೊಂಡನು. ಇತ್ತ ಮದ್ರಾಸದ ಸೈನ್ಯವು ಶ್ರೀರಂಗಪಟ್ಟಣದ ವರೆಗೆ ಸಾಗಿ ಬಂದಿತು. ಆದರೆ ಈ ಹೊತ್ತಿಗೆ ಎರಡೂ ಪಕ್ಷದವರಿಗೆ ಯುದ್ಧವು ಬೇಸರವೆನಿಸಿತ್ತು. ಆದದರಿಂದ ಮಂಗಳೂರಲ್ಲಿ ಒಪ್ಪಂದವಾಗಿ, ಹಿಡಿದುಕೊಂಡ ಸೀಮೆಗಳನ್ನೂ ಸೆರೆಯಾಳುಗಳನ್ನೂ ಇಬ್ಬರೂ ಬಿಟ್ಟುಬಿಡಬೇಕೆಂದು ಗೊತ್ತಾಯಿತು. ಕ್ರಿ. ಶ. **೧೭೮೪**.

೩. ಹೈದರನ ಯೋಗ್ಯತೆ:— ಇವನು ಹೆಸರಾದ ವೀರನೂ ಕರ್ತೃತ್ವಶಾಲಿಯೂ ಆಗಿದ್ದನು. ಸ್ವಪರಾಕ್ರಮದಿಂದಲೇ ರಾಜ್ಯಾಧಿಕಾರವನ್ನು ಪಡೆದನು ಪೂರ್ವ ವಯಸ್ಸಿನಲ್ಲಿ ಬಡತನ ಕಷ್ಟಗಳನ್ನು ಅನುಭವಿಸಿದ್ದರಿಂದ ಅನುಭವಿಕನೂ ಎದೆಗಾರನೂ ಆಗಿದ್ದನು. ಮುತ್ಸದ್ದಿ ಎನಿಸಿ ಚಾತುರ್ಯದಿಂದ ಕಾರಭಾರವನ್ನು ಸಾಗಿಸಿದನು. ಓದು-ಬರೆಹಗಳನ್ನು ಕಲಿತವನಲ್ಲದಿದ್ದರೂ ಕನ್ನಡ, ತೆಲಗು, ತಮಿಳ, ಮರಾಠಿ, ಹಿಂದಿ ಈ ಭಾಷೆಗಳನ್ನು ಅರಿತಿದ್ದನು. ಸುಧಾರಿಸಿದ ಯುದ್ಧಪದ್ಧತಿ ಮತ್ತು ಯುದ್ಧಸಾಧನ ಇವುಗಳಿಂದ ತನ್ನ ಸೈನ್ಯಕ್ಕೆ ಹೊಸರೂಪವನ್ನು ಕೊಟ್ಟ ಮೊದಲನೇ ಹಿಂದೀ ವೀರನು ಇವನೇ.

೪. ಪಿಟ್ಟನ ಇಂಡಿಯಾ ಬಿಲ್ಲು:— ಹೆಸ್ಟಿಂಗ್ಸನು ಅನ್ಯಾಯ ಒತ್ತಾಯಗಳನ್ನು ಬಹಳವಾಗಿ ನಡೆಸಿರುವನೆಂಬ ಬೊಬ್ಬಾಟವು ಇಂಗ್ಲಂಡದಲ್ಲಿಯೂ ಆಯಿತು. ಅದೇ ಸಮಯಕ್ಕೆ ಎಂದರೆ ಕ್ರಿ. ಶ. **೧೭೮೩**ರಲ್ಲಿ

ಅಮೇರಿಕೆಯು ಇಂಗ್ಲಂಡದ ಮೇಲಧಿಕಾರವನ್ನು ಬಿಸುಟಿ ಸ್ವತಂತ್ರವಾಯಿತು. ಆದದರಿಂದ ಪಾರ್ಲಮೆಂಟಿನ ಲಕ್ಷ್ಯವು ಹಿಂದುಸ್ತಾನದ ಕಡೆಗೆ ಎಳೆಯಿತು. ಆ ಕಾಲದ ಮುಖ್ಯ ಮಂತ್ರಿಯಾದ **ಪಿಟ್** ಎಂಬವನು ಹಿಂದುಸ್ತಾನದ ಸಂಬಂಧದ ಒಂದು ಮಸೂದೆಯನ್ನು ಪಾರ್ಲಮೆಂಟದಲ್ಲಿ ಪಾಸು ಮಾಡಿಸಿ ಕೊಂಡನು. ಇದೇ **ಪಿಟ್ಟನ ಇಂಡಿಯಾ ಬಿಲ್** ಎಂಬ ಕಾಯದೆಯು. **ಇದರ ಕೆಲವುಗಳು** :— ೧. ಕಂಪನಿಯವರು ಎಂದಿನಂತೆ ವ್ಯಾಪಾರವನ್ನು ತಾವೇ ಸಾಗಿಸಬೇಕು. ೨ ರಾಜ್ಯಕಾರಭಾರವನ್ನಾದರೂ ಅವರೇ ಸಾಗಿಸ ಬೇಕು. ಆದರೆ ಅವರ ಮೇಲ್ವಿಚಾರಣೆಯ ಅಧಿಕಾರವು ಪಾರ್ಲಮೆಂಟಿನಿಂದ ಗೊತ್ತುಮಾಡಲ್ಪಟ್ಟ ೬ ಜನರುಳ್ಳ **ಬೋರ್ಡ ಆಫ್ ಕಂಟ್ರೋಲ** ಎಂಬ ಮಂಡಲದ ಕಡೆಗೆ ಇರಬೇಕು. ಈ ಮಂಡಲದ ಒಪ್ಪಿಗೆಯಿಲ್ಲದೆ ಕಂಪನಿ ಯವರು ಯುದ್ಧವನ್ನಾಗಲಿ ಒಪ್ಪಂದವನ್ನಾಗಲಿ ಮಾಡಕೂಡದು. ೩. ಗವ್ಹರ್ನರ ಜನರಲ್ ಮತ್ತು ಸೇನಾಪತಿ ಇವರನ್ನು ಪಾರ್ಲಮೆಂಟಿನವರೇ ನಿಯಮಿ ಸಬೇಕು ೪. ಗವ್ಹರ್ನರ ಜನರಲ್‌ನು ಸಾಧ್ಯವಿರುವ ವರೆಗೆ ದೇಶೀಯ ಅರಸರ ಜಗಳದಲ್ಲಿ ಕೈಹಾಕಬಾರದು.

೫. **ಹೆಸ್ಟಿಂಗ್ಸನ ವಿಚಾರಣೆ** :— ಹೊಸ ಕಾಯದೆಯು ಹೆಸ್ಟಿಂಗ್ಸನಿಗೆ ಸರಿಬರಲಿಲ್ಲ ಕಾಯದೆಯು ಪಾಸಾಯಿತೆಂದು ತಿಳಿದ ಕೂಡಲೇ ಅವನು ಕೌನ್ಸಿಲ್ ಸಭಿಕನಾದ **ಮ್ಯಾಕ್‌ಫರಸನ್ನ**ನಿಗೆ ಕೆಲಸವನ್ನೊಪ್ಪಿಸಿ ಇಂಗ್ಲಂಡಕ್ಕೆ ಹೊರಟುಹೋದನು ಅಲ್ಲಿ ಅವನ ಮೇಲಿನ ಆರೋಪಗಳ ವಿಚಾರಣೆಯು ನಡೆಯಿತು. ಫ್ರಾನ್ಸಿಸನು, ಹೆಸ್ಟಿಂಗ್ಸನು ತಪ್ಪುಗಾರನೆಂಬುದನ್ನು ಸಿದ್ಧಮಾಡಿ ದನು; ಬರ್ಕ ಮೊದಲಾದ ಮುತ್ಸದ್ದಿಗಳು ಹೆಸ್ಟಿಂಗ್ಸನ ಕೃತಿಗಳನ್ನು ಕಣ್ಣು ಮುಂದೆ ಕಟ್ಟುವಂತೆ ವರ್ಣಿಸಲು ಅದನ್ನು ಕೇಳಿ ಜನರು ದಿಗಿಲುಗೊಂಡರು. ಈ ವಿಚಾರಣೆಯು ಕ್ರಿ. ಶ. **೧೭೮೮** ರಿಂದ ಏಳು ವರ್ಷ ಸಾಗಿತು. ಆದರೂ ಕಡೆಗೆ ಹೆಸ್ಟಿಂಗ್ಸನು ಎಲ್ಲ ಆರೋಪಗಳಿಂದ ಮುಕ್ತನಾದನು ! ಈ ಕೆಲಸದಲ್ಲಿ ೧೦ ಲಕ್ಷ ರೂಪಾಯಿಗಳು ಅವನ ಕೈಬಿಟ್ಟವು. ಮುಂದೆ ತೀರ ಬಡತನದಲ್ಲಿ ಕಾಲಕಳೆಯುತ್ತಿರಲು ಅವನು ಕ್ರಿ. ಶ. ೧೮೧೮ ರಲ್ಲಿ ಮರಣಹೊಂದಿದನು.

೬. **ಹೆಸ್ಟಿಂಗ್ಸನ ಯೋಗ್ಯತೆ** :— ಕ್ಲೈವನ ಕೈಯಲ್ಲಿ ನುರಿತ ಇವನು ಕ್ಲೈವನಂತೆಯೆ ಮಹಾತ್ವಾಕಾಂಕ್ಷೆಯನ್ನು ತಾಳಿ ಅವನು ಹಾಕಿದ ತಳಹದಿಯ

ಮೇಲೆ **ಕಂಪನಿಯರಾಜ್ಯ**ವೆಂಬ ಕಟ್ಟಡವನ್ನು ಕಟ್ಟಲಾರಂಭಿಸಿದನು. ತನ್ನ ಆಕಾಂಕ್ಷೆಯನ್ನು ಕಡೆಗಾಣಿಸುವಾಗ ಕ್ಲೈವನಂತೆ ಇವನೂ ಎಂಥ ಕಠಿಣವಾದ ಉಪಾಯವನ್ನಾದರೂ ಅವಲಂಬಿಸಲು ಹಿಂಜರಿಯಲಿಲ್ಲ ಇಬ್ಬಗೆಯ ಆಳಿಕೆಯಿಂದ ಉಂಟಾದ ಅವ್ಯವಸ್ಥೆಯನ್ನು ಕಳೆದು, ಕಾರಭಾರವನ್ನು ಸುಸೂತ್ರವಾಗಿ ಸಾಗಿಸುವ ಬಿಗಿಯಾದ ಕೆಲಸವನ್ನು ಇವನು ನೆರವೇಸಿದನು. ಇವನು ಇಂಗ್ಲಿಷರ ರಾಜ್ಯವನ್ನು ದೃಢೀಕರಿಸುವ ಮಹತ್ವದ ಕೆಲಸವನ್ನು ಮಾಡಿದ ನೆಂಬವನ್ನು ನೆನೆದುಕೊಂಡು ಇವನ ಆಳಿಕೆಯಲ್ಲಾದ ಉಳಿದ ತಪ್ಪುಗಳನ್ನು ಕಣ್ಮರೆಮಾಡಿ ಇಂಗ್ಲಿಷ ಜನಾಂಗದವರು ಇವನನ್ನು ನಿರ್ದೋಷಿಯೆಂದು ಬಿಟ್ಟುಬಿಟ್ಟರು

೭ನೆಯ ಪಾಠ

ಲಾರ್ಡ್ ಕಾರ್ನವಾಲೀಸ. (ಕ್ರಿ. ಶ. ೧೭೮೬-೧೭೯೩)

ಸರ್ ಜಾನ್ ಶೋಅರ. (ಕ್ರಿ ಶ ೧೭೯೩-೧೭೯೮)

೧. **ಕಾರ್ನವಾಲೀಸನು ಗ. ಜ. ಆದ ಕಾಲದ ಪರಿಸ್ಥಿತಿ**:— ವಾರನ್ ಹೆಸ್ಟಿಂಗ್ಸನು ಕೆಲಸವನ್ನು ಬಿಟ್ಟುಹೋದ ಬಳಿಕ, ಪಾರ್ಲಿಮೆಂಟಿನವರು **ಲಾರ್ಡ್ ಕಾರ್ನವಾಲೀಸ** ಎಂಬವನನ್ನು ಗ. ಜನರಲನ ಕೆಲಸಕ್ಕೆ ಆರಿಸಿದರು. ಆಗ ಅವನು, "ಪ್ರಸಂಗದಲ್ಲಿ ಕೌನ್ಸಿಲಿನ ಒಪ್ಪಿಗೆಯಿಲ್ಲದೆ ಗ. ಜನರಲನು ತನ್ನ ಅಪೇಕ್ಷೆಯಂತೆ ನಡೆಯಲು ಶಕ್ಯವಾದರೆ ಮಾತ್ರ ನಾನು ಕೆಲಸಮಾಡಲು ಒಪ್ಪುವೆನು" ಎಂದು ಸ್ಪಷ್ಟವಾಗಿ ತಿಳಿಸಿದನು ಆಗ **ಅನೆಂಡಿಂಗ ಆಕ್ಟ್** ಎಂಬ ಕಾಯಿದೆಯು ಪಾಸಾಗಿ ಕಾರ್ನವಾಲೀಸನ ಬೇಡಿಕೆಯು ಪೂರೈಸಲ್ಪಟ್ಟಿತು. ಆಲ್ಲದೆ, ಇವನು ಅಮೇರಿಕೆಯ ಯುದ್ಧದಲ್ಲಿ ಮಹತ್ವದ ಕೆಲಸಗಳನ್ನು ನೆರವೇರಿಸಿದ್ದನಾದುದರಿಂದ ಸೇನಾಪತಿಯ ಅಧಿಕಾರವು ಸಹ ಇವನಿಗೆ ಕೊಡಲ್ಪಟ್ಟಿತು. ಆ ಬಳಿಕ ಇವನು ಗ ಜ. ಆಗಿ ಹಿಂದುಸ್ಥಾನಕ್ಕೆ ಬಂದನು.

ಆಗ ಈ ದೇಶದಲ್ಲಿ ಮರಾಠರೂ ಟೀಪುವೂ ಬಹಳ ಪ್ರಬಲರಾಗಿದ್ದರು. ಅವರು ಕವಾಯಿತು ಕಲಿತ ಸೈನ್ಯವನ್ನೂ ತೋಪುಗಳನ್ನೂ ಇಟ್ಟುಕೊಂಡು

ತಮ್ಮ ತಮ್ಮ ರಾಜ್ಯಗಳನ್ನು ಹಬ್ಬಿಸುವ ಹಂಬಲದಲ್ಲಿದ್ದರು. ನಿಜಾಮ, ಭೋಸಲೆ, ಅಯೋಧ್ಯೆಯ ವಜೀರ ಇವರು ಬಲಹೀನರಾಗಿದ್ದರು.

೨. **ಕಾರ್ನವಾಲೀಸನು ಮಾಡಿದ ಸುಧಾರಣೆಗಳು** :— ರಾಜ್ಯವನ್ನು ಹಬ್ಬಿಸುವದಕ್ಕಿಂತ ಇದ್ದ ರಾಜ್ಯವೆಲ್ಲಿ ಸುವ್ಯವಸ್ಥೆಯನ್ನು ನೆಲೆಗೊಳಿಸುವದು ಮಹತ್ವದ ಕೆಲಸವೆಂದು ತಿಳಿದು, ಕಾರ್ನವಾಲೀಸನು ರಾಜ್ಯಕಾರಭಾರದಲ್ಲಿ ಹಲವು ಸುಧಾರಣೆಗಳನ್ನು ಮಾಡಿದನು. ಅವುಗಳ ವಿವರ:- ೧. ಪ್ರತಿಯೊಂದು ಪ್ರಾಂತದಲ್ಲಿ **ಜಿಲ್ಲೆ** ಎಂಬ ಭಾಗಗಳನ್ನು ಮಾಡಿ, ಆ ಪ್ರತಿಯೊಂದು ಭಾಗಕ್ಕೆ ಒಬ್ಬೊಬ್ಬ **ಕಲೆಕ್ಟರನನ್ನು** ನಿಯಮಿಸಿದನು ೨. ಆವರೆ ಕಲೆಕ್ಟರರ ಕಡೆಗೆ ಇದ್ದ ನ್ಯಾಯತೀರಿಸುವ ಅಧಿಕಾರವನ್ನು ಕಡಿಮೆಮಾಡಿ ಆ ಕೆಲಸಕ್ಕೆ **ಜಜ್ಜರೆಂಬ** ಸ್ವತಂತ್ರ ಅಧಿಕಾರಿಗಳನ್ನು ನಿಯಮಿಸಿದನು. ೩. ಕಲಕತ್ತೆ ಮೊದಲಾದ ನಾಲ್ಕು ಸ್ಥಳಗಳಲ್ಲಿ **ಅಪೀಲ ಕೋರ್ಟು**ಗಳನ್ನು ಸ್ಥಾಪಿಸಿದನು ೪. ಹೆಸ್ಟಿಂಗ್ಸನ ಕಾಲದ ಫೌಜದಾರೀ ಕಾಯಿದೆಯನ್ನು ಸುಧಾರಿಸಿದನು. ಇದಕ್ಕೆ '**ಕಾರ್ನವಾಲೀಸ ಕೋಡ**' ಎಂಬ ಹೆಸರುಂಟಾಯಿತು ೫. ಕೆಲಸಗಾರರು ಲಂಚ ತೆಗೆದುಕೊಳ್ಳಲಾಗದು; ಮತ್ತು ಕಂಪನಿಯ ಹಣವನ್ನು ಸ್ವಂತದ ಸಲುವಾಗಿ ಬಳಸಲಾಗದು ಎಂಬ ನಿಯಮವನ್ನು ಮಾಡಿ ಅವರ ಸಂಬಳವನ್ನು ಹೆಚ್ಚಿಸಿದನು. ೬ ಬಂಗಾಲದಲ್ಲಿ ಸ್ಥಿರ ಕಂದಾಯ ಪದ್ಧತಿಯನ್ನು ಆರಂಭಿಸಿದನು.

೩. **ಸ್ಥಿರ-ಕಂದಾಯ ಪದ್ಧತಿಯೂ ಅದರ ಪರಿಣಾಮವೂ** :— ವಾರನ್ ಹೆಸ್ಟಿಂಗ್ಸನ ಕಾಲದಲ್ಲಿ, ಹೆಚ್ಚು ಹಣ ಕೊಟ್ಟವರಿಗೆ ಐದೈದು ವರ್ಷದ ಕರಾರದಿಂದ ಭೂಮಿಗಳು ಕೊಡಲ್ಪಡುತ್ತಿದ್ದವು. ಐದು ವರ್ಷಗಳಾದ ಬಳಿಕ ಭೂಮಿಯು ಕೈಬಿಡುವ ಸಂಭವವಿದ್ದದರಿಂದ ಗುತ್ತಿಗೆಗಾರರು ಭೂಮಿಯ ಸಾಗುವಳಿಯನ್ನಾಗಲಿ ಸುಧಾರಣೆಯನ್ನಾಗಲಿ ಚೆನ್ನಾಗಿ ಮಾಡುತ್ತಿರಲಿಲ್ಲ ಆದದರಿಂದ ಭೂಮಿಗಳು ಕೆಡಹತ್ತಿದವು ಅವು ಕೆಡುತ್ತ ನಡೆದ ಹಾಗೆಲ್ಲ ಗುತ್ತಿಗೆಯ ಹಣವು ಕಡಿಮೆ ಬರಹತ್ತಿತು. ಕಾರ್ನವಾಲೀಸನು ಈ ದುಸ್ಥಿತಿಯನ್ನು ಸುಧಾರಿಸುವದಕ್ಕಾಗಿ ಪಾರ್ಲಿಮೆಂಟಿನ ಒಪ್ಪಿಗೆಯನ್ನು ಪಡೆದು ಈ ಸ್ಥಿರಕಂದಾಯ ಪದ್ಧತಿಯನ್ನು ಬಳಕೆಯಲ್ಲಿ ತಂದನು. ಇದರಿಂದ ೧. ಭೂಮಿಗಳ ಒಡೆತನವು ಜಮೀನದಾರರದಾಗಿದೆ; ೨. ಒಮ್ಮೆ ಈಗ ಗೊತ್ತುಮಾಡಿದ ಕಂದಾಯವನ್ನು ಎಂದೂ ಹೆಚ್ಚಿಸತಕ್ಕದ್ದಲ್ಲ; ಎಂದು ಗೊತ್ತಾಯಿತು.

ಭೂಮಿಗಳ ಒಡೆತನವು ಜೊರೆಯಲು ಜಮೀನದಾರರು ಆಸ್ಥೆಯಿಂದ ಭೂಮಿಗಳನ್ನು ಸುಧಾರಿಸಿ ಉತ್ಪನ್ನವನ್ನು ಹೆಚ್ಚಿಸಿಕೊಂಡರು. ಉತ್ಪನ್ನವು ಹೆಚ್ಚುತ್ತ ನಡೆದಂತೆ ಕಂದಾಯವನ್ನು ಕೊಡುವದು ಹಗುರೆನಿಸಿದ್ದರಿಂದ ಅದು ಸುಸೂತ್ರವಾಗಿ ಕಲೆಯಹತ್ತಿತು. ಶ್ರೀಮಂತರಾದ ಜಮೀನದಾರರು ಕಂಪನಿ ಸರಕಾರದ ಹಿತಚಿಂತಕರಾದದರಿಂದ ಬಂಗಾಲದ ಆಡಳಿತವು ಎಡರಿಲ್ಲದೆ ಸಾಗತೊಡಗಿತು.

೪. ಮೈಸೂರಿನ ೩ನೆಯ ಯುದ್ಧ:— ಕ್ರಿ. ಶ. ೧೭೯೦ – ೧೭೯೨. ಟೀಪುವಿನ ಮಹತ್ವಾಕಾಂಕ್ಷೆಯು ಹೆಚ್ಚಿನದಾಗಿತ್ತು. ಮಂಗಳೂರ ಒಪ್ಪಂದವಾದ ಬಳಿಕ ಅವನು, ನಿಜಾಮ, ಮರಾಠ ಇವರನ್ನು ಹಿಮ್ಮೆಟ್ಟಿಸಿ ತಾನು ಪ್ರಬಲನಾಗಬೇಕೆಂದು ಪ್ರಯತ್ನಿಸಹತ್ತಿದನು. ಇದಕ್ಕಾಗಿ ಅವನು ಫ್ರೆಂಚರ ನೆರವಿನಿಂದ ಸುಧಾರಿಸಿದ ಶಸ್ತ್ರಾಸ್ತ್ರಗಳಿಂದ ಕೂಡಿದ ಕವಾಯಿತು ಕಲಿತ ೧೫ ಲಕ್ಷ ಸೈನ್ಯವನ್ನು ಸಿದ್ಧಗೊಳಿಸಿದನು. ಅಲ್ಲದೆ ಕೋಟೆಕೊತ್ತಳಗಳನ್ನು ಭದ್ರಪಡಿಸಿ ಬಲವಾದ ತೋಪುಗಳನ್ನು ಒದಗಿಸಿಕೊಂಡನು. ಅತ್ತ ಕಾರ್ನವಾಲೀಸನು ಸದ್ದಿಲ್ಲದೆ ಯುದ್ಧದ ಸಿದ್ಧತೆಯನ್ನು ಮಾಡಿಕೊಂಡು ಇಂಗ್ಲಂಡದಿಂದ ಹೊಸ ಸೈನ್ಯವನ್ನು ತರಿಸಿಕೊಂಡಿದ್ದನು.



ಟೀಪು ಸುಲ್ತಾನ

ಇದೇ ಸಮಯಕ್ಕೆ **ತ್ರಾವಣಕ್ಕೋರ, ಕೋಚೀನ**ಗಳ ಅರಸರಲ್ಲಿ ಜಗಳ ಹತ್ತಲು ಟೀಪುವು ಕೋಚೀನದ ಅರಸನ ಪಕ್ಷಹಿಡಿದು ತ್ರಾವಣಕೋರದ ಮೇಲೆ ಸಾಗಿಹೋದನು. ಮೊದಲು ಟೀಪುವಿನ ಮಾಂಡಲಿಕನಾಗಿದ್ದ ಈ ತ್ರಾವಣಕೋರದ ಅರಸನು ಇತ್ತೀಚಿಗೆ ಅವನನ್ನು ಬಿಟ್ಟು ಇಂಗ್ಲಿಷರ ಮಾಂಡಲಿಕನಾಗಿದ್ದನು ಆದ್ದರಿಂದ ಕಾರ್ನವಾಲೀಸನು ತಮ್ಮ ಆಶ್ರಿತನ ರಕ್ಷಣೆಯ ನೆವದಿಂದ ಟೀಪುವಿನ ಮೇಲೆ ಶಸ್ತ್ರವನ್ನೆತ್ತಿದನು. ನಿಜಾಮ-ಮರಾಠರಿಗೆ ಕೂಡ ಟೀಪುವು ಹಣ್ಣಾಗುವದು ಬೇಕಿತ್ತು. ಕಾರಣ

ಅವರೂ ಕಾರ್ನವಾಲೀಸನನ್ನು ಕೂಡಿಕೊಂಡರು. ಮೂವರು ಕೂಡಿ ಟೀಪುವನ್ನು ಹಣಿದು ಅವನ ಸೀಮೆಯನ್ನು ಸರಿಯಾಗಿ ಹಂಚಿಕೊಳ್ಳಬೇಕೆಂದು ಗೊತ್ತುಮಾಡಿದರು ಮೂವರ ಸೈನ್ಯಗಳು ಟೀಪುವಿನ ಮೇಲೆ ಸಾಗಿದವು.

ಕಾರ್ನವಾಲೀಸನು ತಾನೇ ಸೇನಾಪತಿಯಾಗಿ ಯುದ್ಧಕ್ಕೆ ಹೊರಟನು. ಅವನು **ಬೆಂಗಳೂರ** ಕೋಟೆಯನ್ನು ತೆಗೆದುಕೊಂಡು **ಅರಕೇರಿಯ** ಕದನದಲ್ಲಿ ಟೀಪುವನ್ನು ಸೋಲಿಸಿದನು. ಆದರೆ ಬಳಿಯಲ್ಲಿಯ ಕಾಳು-ಕಡಿಗಳು ತೀರಿದ್ದರಿಂದ ಅವನು ಹತಾಶನಾಗಿ ಹಿಂದಿರುಗುವ ಹೊತ್ತು ಒದಗಿತು. ಅಷ್ಟರಲ್ಲಿ ಟೀಪುವಿನ ಸರದಾರನಿಂದ ಧಾರವಾಡವನ್ನು ವಶಮಾಡಿಕೊಂಡು ಪರಶುರಾಮ ಪಂತನು ನೆರವಿಗೆ ಬಂದನು ಬಳಿಕ **ಇಂಗ್ಲಿಷ-ನಿಜಾಮ-ಮರಾಠಾ** ಸೈನ್ಯಗಳು ಒಟ್ಟಾಗಿ ಶ್ರೀರಂಗಪಟ್ಟಣದ ಕೋಟೆಯನ್ನು ಮುತ್ತಿದವು. ಆಗ ಟೀಪುವು ಮುಂದುಗಾಣದೆ ಒಪ್ಪಂದಕ್ಕೆ ಒಪ್ಪಿದನು. **ಶ್ರೀರಂಗಪಟ್ಟಣದ ಒಪ್ಪಂದ—** ಕ್ರಿ. ಶ. ೧೭೯೨. **೧.** ಟೀಪುವು ಅರ್ಧ ರಾಜ್ಯವನ್ನು ಬಿಟ್ಟು ಕೊಡಬೇಕು. **೨.** ಯುದ್ಧದ ವೆಚ್ಚವೆಂದು ೩ ಕೋಟಿ ರೂಪಾಯಿಗಳನ್ನು ಕೊಡಬೇಕು. **೩.** ಈ ಕರಾರುಗಳನ್ನು ಪೂರೈಸುವ ವರೆಗೆ ಇಬ್ಬರು ಮಕ್ಕಳನ್ನು ಇಂಗ್ಲಿಷರ ವಶಕ್ಕೆ ಕೊಡಬೇಕು.

ಟೀಪುವಿನಿಂದ ದೊರೆತ ರಾಜ್ಯದಲ್ಲಿ **ಕುರ್ಗ-ದಿಂಡಿಗಲ್ಲು** ಪ್ರಾಂತಗಳನ್ನು ಇಂಗ್ಲಿಷರೂ **ಬಳ್ಳಾರಿ-ಕಡಪೆ**ಗಳನ್ನು ನಿಜಾಮನೂ ಮಲಪ್ರಭೆ-ತುಂಗಭದ್ರೆಗಳ ನಡುಸೀಮೆಯನ್ನು ಮರಾಠರೂ ತೆಗೆದುಕೊಂಡರು.

೫. ಸರ್ ಜಾನ್ ಶೋರ:— **(ಕ್ರಿ. ಶ. ೧೭೯೩-೯೮)** ಲಾರ್ಡ ಕಾರ್ನವಾಲೀಸನ ತರುವಾಯ ಅವನ ಕೌನ್ಸಿಲಿನ ಸಭಾಸದನಾದ **ಸರ್ ಜಾನ್ ಶೋರ**ನು ಗ. ಜ. ನಾಗಿ ನಿಯೋಜಿತನಾದನು. ಇವನ ಆಳಿಕೆಯಲ್ಲಿಯ ಮಹತ್ವದ ಸಂಗತಿಗಳು:- **೧. ಕಂಪನಿಯ ಸನದಿನ ವಿಚಾರಣೆ**= ೧೭೯೩. ರೆಗ್ಯುಲೇ. ಆಕ್ಟವಾದ ಕಾಲಕ್ಕೆ ಇಪ್ಪತ್ತು ವರ್ಷಕ್ಕೊಮ್ಮೆ ಕಂಪನಿಯ ಸನದಿನ ವಿಚಾರಣೆಯಾಗಬೇಕೆಂದು ಗೊತ್ತಾಗಿದ್ದಿತು ಆ ಮೇರೆಗೆ ಪಾರ್ಲಿಮೆಂಟಿನಲ್ಲಿ ವಿಚಾರಣೆಯಾಗಿ ಕಂಪನಿಯ ವ್ಯಾಪಾರದ ಅವಧಿಯು ಮುರಳ ೨೦ ವರ್ಷ ಹೆಚ್ಚಿಸಲ್ಪಟ್ಟಿತು. ಹಿಂದುಸ್ಥಾನದೊಡನೆ ಈಸ್ಟ ಇಂ. ಕಂಪನಿಯವರು ಮಾತ್ರ ವ್ಯಾಪಾರ ಮಾಡಬೇಕೆಂದು ಇದ್ದ ಕಟ್ಟು ತಪ್ಪಿ, ಇಂಗ್ಲಂಡದ

ಉಳಿದ ವ್ಯಾಪಾರಸ್ಥರು ಹಿಂದುಸ್ಥಾನದಕೂಡ ಸಣ್ಣ ಪ್ರಮಾಣದಿಂದ ವ್ಯಾಪಾರ ಮಾಡಬಹುದೆಂದು ಗೊತ್ತಾಯಿತು. **೨. ಅಯೋಧ್ಯ ಪ್ರಕರಣ**:— ಕ್ರಿ. ಶ. ೧೭೯೭ರಲ್ಲಿ ಅಸಫಉದ್ದೌಲನು ಸಾಯಲು ಅವನ ದಾಸಿಪುತ್ರನಾದ **ವಜೀರ ಅಲಿ**ಯು ಇಂಗ್ಲಿಷರ ನೆರವಿನಿಂದ ವಜೀರನಾದನು. ಆದರೆ ಅವನಿಗೆ ಜನರ ಬೆಂಬಲವೆಷ್ಟೂ ಇರಲಿಲ್ಲ. ಆದದರಿಂದ ಶೋಅರನು ಅಸಫಉದ್ದೌಲನ ತಮ್ಮನಾದ **ಸಾದತ ಅಲಿ**ಯನ್ನು ವಜೀರನನ್ನು ಮಾಡಿ, ಅವನೊಡನೆ ಒಪ್ಪಂದವನ್ನು ಮಾಡಿದನು. ಇದರಿಂದ ಅಲಿಯು ೭೫ ಲಕ್ಷದ ವೆಚ್ಚದ ಸಹಾಯಕ ಸೈನ್ಯವನ್ನು ಇಟ್ಟುಕೊಳ್ಳಲು ಒಪ್ಪಿದ್ದಲ್ಲದೆ ಆ ಸೈನ್ಯದ ಖರ್ಚಿಗಾಗಿ ಎಂದು **ಅಲಹಾಬಾದ** ಪಟ್ಟಣವನ್ನು ಇಂಗ್ಲಿಷರಿಗೆ ಕೊಟ್ಟನು. ಕ್ರಿ ಶ. ೧೭೯೮. **೩. ಬಂಗಾಲದ ಸೈನಿಕರ ಅಸಂತೋಷ**:— ದಂಡಿನ ಶಿಸ್ತಾಯಿಗಳು ತಮ್ಮ ಪಗಾರ ಚ್ಚಿಸಬೇಕೆಂದು ಬೇಡಿಕೊಂಡರು. ಅವರು ಮಾಡಿಕೊಂಡ ಅರ್ಜಿಗಳಲ್ಲಿ ಈ ಬೇಡಿಕೆಯನ್ನು ಪೂರೈಸದಿದ್ದಲ್ಲಿ ಬಂಡಾಯವೆಬ್ಬಿಸುವೆವು; ಎಂದು ಬರೆದುಕೊಂಡಿದ್ದರು ಆದರೆ ಶೋಅರನು ಹಂಚಿಕೆಯಿಂದ ದಂಡಿನವರನ್ನು ಅಳವಿನಲ್ಲಿ ತಂದು ಶಾಂತತೆಯನ್ನು ಕಾಯ್ದುಕೊಂಡನು.

ಏನೆಯ ಪಾಠ

೫ನೆಯ ಪೇಶವೆ ಸವಾಯಿ ಮಾಧವರಾಯ.

(ಕ್ರಿ. ಶ ೧೭೭೪-೧೭೯೫.)

ಸವಾಯಿ ಮಾಧವರಾಯನ ಆಳಿಕೆಯ ಸ್ವರೂಪ:- ಸಾಲ್ಬಾಯಿಯ ಒಪ್ಪಂದವಾದ ಬಳಿಕ ರಘುನಾಥರಾಯನ ವಿರೋಧವು ತಪ್ಪಲು ಸವಾಯಿ ಮಾಧವರಾಯನ ಆಳಿಕೆಯು ಸುಸೂತ್ರವಾಗಿ ಸಾಗಹತ್ತಿತು ಪೇಶವೆಯು ಚಿಕ್ಕವನಿದ್ದದರಿಂದ ಕಾರಭಾರವನ್ನು **ನಾನಾಫಡಣವೀಸನೇ** ಸಾಗಿಸುತ್ತಿದ್ದನು. ನಾನಾನ ಮುತ್ಸದ್ದಿತನಕ್ಕೆ ಮಹದಾಜಿಯ ಪರಾಕ್ರಮದ ಬೆಂಬಲವು ದೊರೆತದರಿಂದ ಮರಾಠ ರಾಜ್ಯವು ದಿನದಿನಕ್ಕೆ ಉತ್ಕರ್ಷವನ್ನು ಹೊಂದಹತ್ತಿತು. ಈ ಇಬ್ಬರ ಸಾಹಸದಿಂದ ಮನೆಜಗಳದ ಕಾಲದಲ್ಲಿ ಕೈಬಿಟ್ಟಿದ್ದ ಸೀಮೆಗಳೆಲ್ಲ ಮರಳಿ ಮರಾಠರ ರಾಜ್ಯಕ್ಕೆ ಸೇರಿದವು. ಸವಾಯಿ ಮಾಧವರಾಯನ ಆಳಿಕೆಯ ವರ್ಣನೆಯಂದರೆ ನಾನಾ-ಮಹದಾಜಿಯವರ ಕರ್ತೃತ್ವದ ವರ್ಣನೆಯೇ ಸರಿ.

೨. ಟೀಪುವಿನೊಡನೆ ಆದ ಮೊದಲನೆಯ ಯುದ್ಧ:— ಕ್ರಿ. ಶ. **೧೭೮೪-೮೨** ಟೀಪುವು ತನ್ನ ಸಾಮರ್ಥ್ಯವನ್ನು ಹೆಚ್ಚಿಸಿಕೊಂಡು ನಿಜಾಮ, ಮರಾಠ ಇವರ ಸೀಮೆಗಳನ್ನು ಆಕ್ರಮಿಸತೊಡಗಿದನು. ಆಗ ನಾನಾಫಡಣವೀಸನು ನಿಜಾಮನನ್ನು ಕೂಡಿಕೊಂಡು ಟೀಪುವನ್ನು ತಡೆಯಹೊರಟನು. ಟೀಪುವು ಇವರಿಬ್ಬರನ್ನು ಹಣಿಯುವಷ್ಟು ಬಲವುಳ್ಳವನಾಗಿದ್ದನು. ಆದರೆ ಅಷ್ಟರಲ್ಲಿ ಇಂಗ್ಲಿಷರು ಯುದ್ಧಮಾಡಲು ಸಿದ್ಧರಿರುವರೆಂಬ ಸುದ್ದಿಯು ಬಂದದರಿಂದ ಅವನು ಮರಾಠರೊಡನೆ ಒಪ್ಪಂದ ಮಾಡಿಕೊಂಡನು. ಆಗ ಅವನು ಮರಾಠರ ಸೀಮೆಗಳನ್ನು ಬಿಟ್ಟುಕೊಟ್ಟದ್ದಲ್ಲದೆ ೩೨ ಲಕ್ಷ ರೂಪಾಯಿಗಳನ್ನು ಕೊಟ್ಟನು.

೩. ಶ್ರೀರಂಗಪಟ್ಟಣದ ಮುತ್ತಿಗೆ: ೧೭೯೦-೯೨. ಪುಟ ೯೮ ನೋಡಿರಿ.

ಮಹದಾಜಿಯ ಉತ್ತರದ ದಿಗ್ವಿಜಯ:— ಮರಾಠ – ಇಂಗ್ಲಿಷರ ಮೊದಲನೆಯ ಯುದ್ಧ ಮುಗಿದ ಬಳಿಕ ಮಹದಾಜಿ ಸಿಂಧೆಯು ಉತ್ತರದ ರಾಜ್ಯವಿಸ್ತಾರದ ಕೆಲಸವನ್ನು ಕೈಕೊಂಡನು. **ಡಿಬಾಯಿನ್** ಎಂಬ ಫ್ರೆಂಚ ಸೇನಾಪತಿಯನ್ನು ತನ್ನಲ್ಲಿಟ್ಟುಕೊಂಡು ಸೈನ್ಯವನ್ನು ಸುಧಾರಿಸಿದನು. ಹಿರಿಯ ನಾರಾಯಣರಾಯನ ತರುವಾಯ ದಿಲ್ಲಿಯಲ್ಲಿ ಮರಾಠರ ಅಧಿಕಾರವು ಕಡಿಮೆಯಾಗಹತ್ತಿತು. ಆ ಕಾಲದಲ್ಲಿ **ನಜಫ ಖಾನ** ಮೊದಲಾದ ಸರದಾರರು ಆ ಅಧಿಕಾರವನ್ನು ಸೆಳೆದುಕೊಳ್ಳುವದಕ್ಕಾಗಿ ಹವಣಿಸುತ್ತಿದ್ದರು.



ಮಹದಾಜಿ ಸಿಂಧೆ

ಕಡೆಗೆ ಮಹದಾಜಿಯು ಪುಣೆಯಿಂದ ದಂಡನ್ನು ತರಿಸಿಕೊಂಡು ಇಸ್ಮಾಯಿಲ ಬೇಗನನ್ನು ಸೋಲಿಸಿ, ದಿಲ್ಲಿಗೆ ಹೋಗಿ ಬಾದಷಾಹನಿಂದ ಸನದು ಪಡೆದನು.

ಬಳಿಕ, ಬಾದಷಾಹನ ಕಣ್ಣುಗಳನ್ನು ಕೀಳಿಸಿದ ಗುಲಾಮಕಾದರನನ್ನು ಹಿಡಿಸಿ ಪರಿಪರಿಯಿಂದ ನೋಯಿಸಿ ಕೊಲ್ಲಿಸಿದನು. ಆಮೇಲೆ ರಜಪುತ, ಜಾಟ, ಸೀಖ ಮುಂತಾದವರನ್ನು ಸೋಲಿಸಿ ಅವರಿಂದ ಕಪ್ಪವನ್ನೆತ್ತಿಕೊಂಡು ಬಾದಷಾಹನ ವರ್ಚಸ್ಸನ್ನು ಸ್ಥಿರಗೊಳಿಸಿದನು. ಇದರಿಂದ ಬಾದಷಾಹನು ಸಂತುಷ್ಟನಾಗಿ ಮಹದಾಜಿಗೆ **ನಕೀಲ-ಈ-ಮುತಾಲಿಕೆ** ಎಂಬ ಪದವಿಯನ್ನು ಕೊಡಮಾಡಿದನು ಆದರೆ ಅವನು ಆ ಪದವಿಯನ್ನು ಪೇಶವೆಯರಿಗಾಗಿ ತೆಗೆದುಕೊಂಡು ತಾನು ಪೇಶವೆಯರ ಪ್ರತಿನಿಧಿಯಾಗಿ ಕೆಲಸ ಮಾಡಹತ್ತಿದನು. ಹೀಗೆ ಉತ್ತರದಲ್ಲಿ ಶಾಂತತೆಯನ್ನು ನೆಲೆಗೊಳಿಸಿದ ಬಳಿಕ ಮಹದಾಜಿಯು ಪುಣೆಗೆ ಬಂದು, ದೊಡ್ಡ ದರಬಾರ ನಡೆದಿರುವಾಗ ಬಾದಷಾಹನಿಂದ ತಂದ ಪದವಿಯನ್ನೂ ವಸ್ತ್ರಗಳನ್ನೂ ಸ ಮಾಧವರಾಯನಿಗೆ ಅರ್ಪಿಸಿದನು. ಪೇಶವೆಯು, ಸ್ವಾಮಿನಿಷ್ಠನೂ ಪರಾಕ್ರಮಿಯೂ ಆದ ಮಹದಾಜಿಯನ್ನು ಪ್ರೀತಿಯಿಂದಲೂ ಮರ್ಯಾದೆಯಿಂದಲೂ ಕಾಣುವವನಾದನು.

೫. **ಖರಡೆಯ ಕಾಳಗ**:— **೧೭೯೫.** ಹೀಗೆ ಸ್ಥಿತಿಯಿರುವಾಗ ಕ್ರಿ.ಶ. ೧೭೯೪ರಲ್ಲಿ ಮಹದಾಜಿಯು ವಾನವಡಿಯಲ್ಲಿ ಜ್ವರದಿಂದ ಮರಣಹೊಂದಿದನು. ಅದೇ ಸಮಯಕ್ಕೆ ಶೂರ ನೇನಾಪತಿಯಾದ ಹರಿಪಂತನೂ ತೀರಿದನು. ಇದರಿಂದ ಮಹಾರಾಷ್ಟ್ರಕ್ಕೆ ದೊಡ್ಡ ಪೆಟ್ಟು ತಗಲಿದಂತಾಯಿತು. ಮಹದಾಜಿಯು ದಿಲ್ಲಿಯಲ್ಲಿ ಪಡೆದಿದ್ದ ಹೆಚ್ಚಳವನ್ನು ನೋಡಿ ಕಸಿವಿಸಿಗೊಳ್ಳುತ್ತಿದ್ದ ನಿಜಾಮನು ಈಗ ಮರಾಠರೊಡನೆ ಇದಿರುಹೂಡಿದನು. ಅವನು ಮರಾಠರಿಗೆ ಕೊಡತಕ್ಕ ಹಣವನ್ನು ಕೊಡಲಿಲ್ಲ

ಆಗ ಸ. ಮಾಧವರಾಯನು ನಿಜಾಮನ ಮೇಲೆ ಸಾಗಿದನು **ಖರಡೆ** ಎಂಬಲ್ಲಿ ಘೋರ ಕಾಳಗವಾಗಿ ನಿಜಾಮನು ಒಪ್ಪಂದ ಮಾಡಿಕೊಂಡು ೩೭ ಲಕ್ಷ ಉತ್ಪನ್ನದ ಸೀಮೆಯನ್ನೂ **ದೌಲತಾಬಾದ** ಕೋಟೆಯನ್ನೂ ಬಿಟ್ಟು ಕೊಟ್ಟನಲ್ಲದೆ ಹಿಂದಿನ ಹಣಸಹಿತ ೩ ಕೋಟಿ ರೂ.ಗಳನ್ನು ಕೊಡಲೊಪ್ಪಿದನು.

೬. **ಸವಾಯಿ ಮಾಧವರಾಯನ ಮರಣ ಮತ್ತು ಮರಾಠರ ದುರ್ದೈವ**:— ಖರಡೆ ಕಾಳಗದ ವಿಜಯದ ನಂತರ ಮರಾಠ ಸರದಾರರು ತಮ್ಮ ತಮ್ಮ ಸೀಮೆಗಳಿಗೆ ಹೋದರು. ರಘುನಾಥರಾಯನು ಮರಣಹೊಂದಿದ

ಬಳಿಕ ಅವನ ಮಕ್ಕಳನ್ನು ನಾನಾಫಡಣವೀಸನು **ಜುನ್ನರ**ಕ್ಕೆ ತಂದು ಕಾವಲಿನಲ್ಲಿಟ್ಟಿದ್ದನು. ಮುಂದೆ ರಘುನಾಥರಾಯನ ಹಿರಿಯ ಮಗನಾದ ಬಾಜೀರಾಯನಿಗೂ ಸವಾಯಿ ಮಾಧವರಾಯನಿಗೂ ಪತ್ರವ್ಯವಹಾರವು ನಡೆದು ಇಬ್ಬರಲ್ಲಿ ಪ್ರೀತಿಯುಂಟಾಯಿತು. ಬರಬರುತ್ತ ಬಾಜೀರಾಯನು ನಾನಾಫಡಣವೀಸನ ವಿಷಯವಾಗಿ ಸ. ಮಾಧವರಾಯನ ಮನಸ್ಸನ್ನು ಕೆಡಿಸಹತ್ತಿದನು ಇದನ್ನು ಕಂಡು ನಾನಾಫಡಣವೀಸನು ಬಾಜೀರಾಯನ ಮೇಲಿನ ಕಾವಲನ್ನು ಬಿಗಿ ಮಾಡಿದನು ಮತ್ತು ಬಾಜೀರಾಯನ ಸಲಿಗೆಯನ್ನು ಮಾಡಬಾರದೆಂದು ಸ. ಮಾಧವರಾಯನನ್ನು ಉಪದೇಶಿಸಿದನು. ಆದರೆ ಇದರ ಪರಿಣಾಮವು ಮಾತ್ರ ವಿಪರೀತವಾಯಿತು! ಸ. ಮಾಧವರಾಯನು ಈ ಮಾತನ್ನು ಮನಸಿಗೆ ಹಚ್ಚಿಕೊಂಡು ಕೊರಗಹತ್ತಿದನು. ಮುಂದೆ ಒಂದು ದಿನ ವಾಯುವಿಕಾರದ ಭರದಲ್ಲಿ ಇವನು ಆರಮನೆಯ ಮೇಲಂತಸ್ತಿನ ಕಿಡಿಕಿಯಿಂದ, ಕೆಳಗಿರುವ ಕಾರಂಜಿಯ ಮೇಲೆ ಹಾರಿದನು. ಇದರಿಂದ ಭಯಂಕರ ಗಾಯವಾಗಿ ಇವನು ಮರಣಹೊಂದಿದನು. ಕಿ. ಶ. ೧೭೯೫.

ಮಾಧವರಾಯನ ಮರಣದೊಂದಿಗೆ ಮರಾಠರ ರಾಜ್ಯದ ದುರ್ದೈವವು ಒದಗಿದಂತೆ ತೋರುತ್ತದೆ. ಕ್ರಿ ಶ. ೧೭೯೪ರಿಂದ ನಾಲ್ಕಾರು ವರ್ಷಗಳಲ್ಲಿಯೆ **ರಾಮಶಾಸ್ತ್ರಿ, ಅಹಲ್ಯಾಬಾಯಿ, ಮಹದಾಜಿ, ಹರಿಪಂತ, ಪರಶುರಾಮಭಾವು ತುಕೋಜಿ ಹೋಳಕರ** ಇವರು ಮರಣಹೊಂದಿದರು. ರಾಜ್ಯಕ್ಕೆ ಆಧಾರವೆನಿಸಿದ ಸ್ತ್ರೀ ಪುರುಷರು ಹೀಗೆ ಪಟಪಟನೆ ಕಾಲವಶರಾಗುವದು ಆ ರಾಜ್ಯದ ದುರ್ದೈವವಲ್ಲದೆ ಮತ್ತೇನು?

೯ನೆಯ ಪಾಠ

೬ನೆಯ ಮತ್ತು ಕೊನೆಯ ಪೇಶವೆ ೨ನೇ ಬಾಜೀರಾಯ

ಅಥವಾ

ಮಹಾರಾಷ್ಟ್ರ ರಾಜ್ಯದ ಅಳಿಗಾಲ

೧. ೨ನೆಯ ಬಾಜೀರಾಯನು ಪೇಶನೆಯಾದುದು:— ಸವಾಯಿ ಮಾಧವರಾಯನಿಗೆ ಮಕ್ಕಳಿರಲಿಲ್ಲ. ಆದದರಿಂದ ಅವನ ತರುವಾಯ ಪೇಶವೆ ಪದದ ಬಾಧ್ಯತೆಯು ೨ನೆಯ ಬಾಜೀರಾಯನಿಗೆ ಉಂಟಾಯಿತು.

೨. ೨ನೆಯ ಬಾಜೀರಾಯನ ಆಳಿಕೆ ಮತ್ತು ಸರದಾರರಲ್ಲಿಯ ಒಡಕು:— ಬಾಜೀರಾಯನು ಪೇಶವೆಯಾದ ಕೂಡಲೆ ದೌಲತರಾಯ ಸಿಂಧ್ಯನಿಗೆ ೨ ಕೋಟಿ ರೂಪಾಯಿಗಳನ್ನು ಕೊಡಲೊಪ್ಪಿ ಅವನಿಂದ ನಾನಾನನ್ನು ಸಿರೆಹಿಡಿಸಿ ಅಹಮ್ಮದನಗರದಲ್ಲಿ ಸೆರೆಯಿಟ್ಟನು. ಮುಂದೆ ದೌಲತರಾಯ-ಬಾಜೀರಾಯರಲ್ಲಿಯೂ ವೈಮನಸ್ಸುಂಟಾಯಿತು. ಆಗ ದೌಲತರಾಯನು ಬಾಜೀರಾಯನನ್ನು ದಾರಿಗೆ ತರುವದಕ್ಕಾಗಿ ನಾನಾನನ್ನು ಬಿಡುಗಡೆಮಾಡಿದನು ಬಾಜೀರಾಯನು **ಬುಡವಿಲ್ಲದ ಕೊಡದಂತೆ** ಬೇಕಾದತ್ತ ಉರುಳುವವನು. ಅವನು ತಡವಿಲ್ಲದೆ ನಾನಾನನ್ನು ಕರೆಯಿಸಿಕೊಂಡು ಅವನನ್ನೇ ಅಧಿಕಾರಿಯನ್ನು ಮಾಡಿಕೊಂಡನು ಆದರೂ ಆ ಬಳಿಕ ನಾನಾನಿಗೆ ಕೆಲಸದಲ್ಲಿ ಹುರುಳಿಸಿಸಲಿಲ್ಲ ಹೀಗೆ ಉದಾಶೀನನಾಗಿ ಕಾಲಕಳೆಯುತ್ತಿರಲು ಅವನು ಮುಂದೆ ತುಸು ದಿವಸಗಳಲ್ಲಿ ಎಂದರೆ ಕ್ರಿ. ಶ ೧೭೨೦ರಲ್ಲಿ ಮರಣಹೊಂದಿದನು. ಹಿರಿಯ ಮಾಧವರಾಯನ ತರುವಾಯ ಮರಾಠ ರಾಜ್ಯವನ್ನು ಹಲವು ಕುತ್ತುಗಳಿಂದ ಉಳಿಸಿ ಮರಾಠ ಸರದಾರರಲ್ಲಿ ಒಕ್ಕಟ್ಟನ್ನು ಬೆಳಿಸಿ, ತುಂಗಭದ್ರೆಯಿಂದ ದಿಲ್ಲಿಯ ವರೆಗೆ ಮರಾಠರ ಅಧಿಕಾರವನ್ನು ನೆಲೆಗೊಳಿಸಿದ ಶ್ರೇಯಸ್ಸಿನ ಬಹುಭಾಗವು ಈ ನಾನಾಫಡಣವೀಸನಿಗೆ ಸಲ್ಲುವದು ರಾಜ್ಯಕಾರಭಾರದಲ್ಲಿಯ ಇವನ ಧೋರಣ ಅಚ್ಚುಕಟ್ಟುತನ ಪದ್ಧತಿ ಇವು ಒಳ್ಳೆಯ ಅನುಕರಣೀಯವಾಗಿದ್ದವು. ಮರಾಠ ರಾಜ್ಯವು ಉಳಿಯುವ ಆಶೆಯು ಇವನ ಸಂಗಡಲೆ ಇಲ್ಲವಂತಾಯಿತು

ನಾನಾನು ಹೋದ ಬಳಿಕ ೨ನೆಯ ಬಾಜೀರಾಯನಿಗೆ ಮಾರ್ಗದರ್ಶಕರಾರೂ ಉಳಿಯಲಿಲ್ಲ. ಅನುಭವಿಕ ಸರದಾರರ ನೆರವಿನಿಂದ ರಾಜ್ಯವಾಳುವದನ್ನು ಬಿಟ್ಟು ಅವರೆಲ್ಲರನ್ನು ಅಗದದವೆಂದು ತಿಳಿದು ಅವರ ಮೇಲೆ ಸೇಡುತೀರಿಸಹತ್ತಿದನು. ದೌಲತರಾಯನು ತನಗೆ ಸಲ್ಲತಕ್ಕ ೨ಕೋಟಿ ರೂಪಾಯಿಗಳನ್ನು ಕೇಳಲು ಬಾಜೀರಾಯನು ಅವನಿಂದ ಪುಣೆಯಲ್ಲಿಯ ಸರದಾರರನ್ನೂ ಸೆಟ್ಟ-ಸಾವುಕಾರರನ್ನೂ ಸುಲಿಸಿದನು. ಹೋಳಕರ **ಯಶವಂತರಾಯನ** ತಮ್ಮನಾದ **ವಿಠೂಜಿ**ಯನ್ನು ಆನೆಯ ಕಾಲಿಗೆ ಹಾಕಿಸಿ ಕೊಲ್ಲಿಸಿದನು.

ತಮ್ಮನ ಕೊಲೆಯ ಸುದ್ದಿಯು ಹತ್ತಲು ಹೋಳಕರನು ಸಿಂಧ್ಯೆ-ಪೇಶವೆಯರ ಮೇಲೆ ಸಿಟ್ಟಾದನು. ಅವನು ಸಿಂಧ್ಯೆಯ **ಉಜ್ಜಯನಿ** ಪಟ್ಟಣವನ್ನು

ಸುಲಿದು ಪುಣೆಯ ಮೇಲೆ ಸಾಗಿಬರಹತ್ತಿದನು. ಆಗ ಸಿಂಧೆ-ಪೇಶವೆಯರ ಸೈನ್ಯಗಳು ಅವನನ್ನು ಎದುರಿಸಿದವು ಯುದ್ಧದಲ್ಲಿ ಹೋಳ್ಕರನು ಜಯಹೊಂದಿ ಪುಣೆಗೆ ಬರಲು ಬಾಜೀರಾಯನು ಇಂಗ್ಲಿಷರ ನೆರವು ಪಡೆಯಲು **ವಸಯಿಯ** ದಾರಿಹಿಡಿದನು. ಆಗ ರಘುನಾಥರಾಯನ ದತ್ತಕ ಮಗನಾದ **ಅಮೃತರಾಯ** ನನ್ನು ಪಟ್ಟಗಟ್ಟಿ ಹೋಳ್ಕರನು ತನ್ನ ಸೀಮೆಗೆ ಹೋದನು.

೩. **ವಸಯಿಯ ಒಪ್ಪಂದ**:— ಕ್ರಿ ಶ ೧೮೦೨ ಬಾಜೀರಾಯನು ಇಂಗ್ಲಿಷರ ಮರೆಹೊಕ್ಕು ಅವರೊಡನೆ ಒಪ್ಪಂದ ಮಾಡಿಕೊಂಡನು. ಇಂಗಿಷರು ಬಾಜೀರಾಯನಿಗೆ ಪೇಶವೆಪದವನ್ನು ಕೊಡಿಸಬೇಕು. ಪೇಶವೆಯು ಅವರ ಸಹಾಯಕ ಸೈನ್ಯವನ್ನಿಟ್ಟುಕೊಂಡು ೨೬ ಲಕ್ಷದ ಸೀಮೆಯನ್ನು ಅವರಿಗೆ ಕೊಡಬೇಕು ಎಂದು ಗೊತ್ತಾಯಿತು. ಅಂದು ಪೇಶವೆಯ ವರ್ಚಸ್ಸು ಅಡಗಿ ಅವನು ಇಂಗ್ಲಿಷರ ಮಾಂಡಲಿಕನಾದನು ಈ ಒಪ್ಪಂದವಾದ ಕೂಡಲೆ ಬಾಜೀರಾಯನು ಇಂಗ್ಲಿಷರ ಕಡೆಯ **ಆರ್ಥರ ವೆಲ್ಲಸ್ಲಿ** ಎಂಬ ಸೇನಾಪತಿಯೊಡನೆ ಪುಣೆಗೆ ಬಂದು ಮರಳಿ ಪೇಶವೆಯಾದನು.

೪. **ಬಾಜೀರಾಯನ ರಾಜ್ಯ ವ್ಯವಸ್ಥೆ**:— ಕ್ರಿ. ಶ. ೧೮೦೫ ರಿಂದ **೧೮೧೫**ರ ವರೆಗಿನ ಕಾಲವು ಬಾಜೀರಾಯನಿಗೆ ನಿಶ್ಚಿಂತೆಯಾಗಿದ್ದಿತು. ಏಕೆಂದರೆ ಈ ಕಾಲದಲ್ಲಿ ಇಂಗ್ಲಿಷರು ಈ ದೇಶದ ಅರಸರ ಕಾರಭಾರದಲ್ಲಿ ಕೈಹಾಕಲಿಲ್ಲ. ಈ ಅನುಕೂಲವಿರುವಾಗಲೂ ಬಾಜೀರಾಯನು ಸರಿಯಾಗಿ ರಾಜ್ಯವಾಳಲಿಲ್ಲ. ಅಯೋಗ್ಯನಾದ **ಸದಾಶಿವ ಮಾಣಕೇಶ್ವರನಿಗೆ** ಮುಖ್ಯ ಅಧಿಕಾರವನ್ನು ಕೊಟ್ಟನು. ಸಹಾಯಕ ಸೈನ್ಯದ ಬಲದಿಂದ **ಪಟವರ್ಧನ, ರಾಸ್ತೆ** ಮೊದಲಾದ ಸರದಾರರನ್ನು ನೋಯಿಸಿದನು. ಕಂದಾಯವನ್ನು ಎತ್ತುವದನ್ನು ಬಿಟ್ಟು ಊರುಗಳನ್ನು ಗುತ್ತಿಗೆಯಿಂದ ಕೊಟ್ಟು ಪ್ರಜೆಗಳಿಗೆ ತೊಂದರೆಯನ್ನುಂಟು-ಮಾಡಿದನು ಅನೀತಿಯಿಂದ ನಡೆಯುವವನೂ ಮರುಳಧಾರ್ಮಿಕನೂ ಆಗಿ ವಿಲಾಸ-ಭೋಜನ ಸಮಾರಂಭಗಳಲ್ಲಿ ಕಾಲಕಳೆದನು. ರಾಜ್ಯದಲ್ಲಿಯ ಆವ್ಯವಸ್ಥೆಗಂತೂ ನೆಲೆಯಿರಲಿಲ್ಲ. ತಾನಾಗಿಯೇ ಇಂಗ್ಲಿಷರ ಆಧೀನನಾದ ಇವನು ಹಿಂದಿನಿಂದ ಅವರನ್ನು ದ್ವೇಷಿಸಹತ್ತಿದನು ಆದರೆ ತಕ್ಕ ಸಾಮರ್ಥ್ಯವಿಲ್ಲದುದರಿಂದ ಮೇಲೆ ಮೇಲೆ ಮಿತ್ರನಂತೆ ನಡೆಯುತ್ತ, ಗುಪ್ತವಾಗಿ ಯುದ್ಧದ ಸಿದ್ಧತೆ

ಯನ್ನು ನಡೆಯಿಸಿದ್ದನಲ್ಲದೆ ಹೋಳಕರ ಮೊದಲಾದ ಸರದಾರರೊಡನೆ ಒಳಸಂಚು ಮಾಡಹತ್ತಿದನು.

೬. **ಮರಾಠ ರಾಜ್ಯದ ಕೊನೆ (ಮರಾಠರ ಕಡೆಯ ಯುದ್ಧ)**:— ಬಾಜೀರಾಯನ ಮನದೆಣಿಕೆಯು ಇಂಗ್ಲಿಷರಿಗೆ ತಿಳಿಯದೆ ಇರಲಿಲ್ಲ. ಯುರೋಪದಲ್ಲಿ ನೆಪೋಲಿಯನನಿಗೂ ಇಂಗ್ಲಿಷರಿಗೂ ನಡೆದ ಯುದ್ಧವು ಕ್ರಿ. ಶ. ೧೮೧೫ರಲ್ಲಿ ಮುಗಿಯಲು ಅವರು ಈ ದೇಶದ ರಾಜ್ಯವಿಸ್ತಾರದ ಕೆಲಸವನ್ನು ಮತ್ತೆ ಕೈಕೊಂಡರು. ಅವರು ಬಾಜೀರಾಯನನ್ನು ದಾರಿಹಿಡಿಸುವ ಸಿದ್ಧತೆಯನ್ನು ಮಾಡಿ, ಇಂಗ್ಲಿಷ ಸೈನ್ಯವು ಪುಣೆಯ ಕಡೆಗೆ ಸಾಗಿಬಂದಿತು. ಶೂರನೂ ಏಕನಿಷ್ಠನೂ ಆದ **ಬಾಪು ಗೋಖಲೆ**ಯು ಮರಾಠರ ಸೇನಾಪತಿಯಾಗಿದ್ದನು. ಅವನಿಗೂ ಇಂಗ್ಲಿಷರಿಗೂ **ಖಡಕಿ, ಕೋರೆಗಾವ, ಅಷ್ಟೆ** ಎಂಬೆಡೆಗಳಲ್ಲಿ ಘೋರವಾದ ಯುದ್ಧಗಳಾದವು. ಎರಡನೆಯ ಯುದ್ಧದಲ್ಲಿ ಇಂಗ್ಲಿಷರಿಗೆ ಹೆಚ್ಚಿನ ಹಾನಿಯಾಯಿತು. ಆದರೆ ಕೊನೆಯ ಯುದ್ಧದಲ್ಲಿ ಬಾಪೂ ಗೋಖಲೆಯು ಹತನಾಗಲು ಮರಾಠ ಸೈನ್ಯವು ಸೋತಿತು. ಈ ಸುದ್ದಿಯನ್ನು ಕೇಳಿ ಬಾಜೀರಾಯನು ಸಿಂಧೆ ಹೋಳಕರರ ನೆರವು ಹೊಂದಬೇಕೆಂದು ಉತ್ತರಕ್ಕೆ ಓಡಿ ಹೋಗುತ್ತಿರಲು ಇಂಗ್ಲಿಷರ ಕೈಗೆ ಸಿಕ್ಕನು.

ಅತ್ತ ಹೋಳಕರ–ಭೋಸಲೆಯರು ಬಾಜೀರಾಯನ ನೆರವಿಗೆ ಬರಲು ಸಜ್ಜಾಗಿದ್ದರು. ಆಗ ಇಂಗ್ಲಿಷರು ಹೋಳಕರನನ್ನು **ಮಹಿದಪುರ**ದ ಬಳಿಯಲ್ಲಿಯೂ ಭೋಸಲೆಯನ್ನು **ಸೀತಾಬರಡಿ**ಯ ಬಳಿಯಲ್ಲಿಯೂ ಸೋಲಿಸಲು ಇಬ್ಬರೂ ಸಹಾಯಕ ಸೈನ್ಯವನ್ನಿಟ್ಟುಕೊಳ್ಳಲು ಒಪ್ಪಿದರು.

ಬಳಿಕ ಇಂಗ್ಲಿಷರು ಬಾಜೀರಾಯನಿಗೆ ವರ್ಷಕ್ಕೆ ೮ ಲಕ್ಷ ರೂಪಾಯಿ ಉಂಬಳಿಯನ್ನು ಗೊತ್ತುಮಾಡಿ ಅವನನ್ನು **ಬಿಠೂರ** ಎಂಬಲ್ಲಿ ಇಡಿಸಿದರು. ಮತ್ತು ಸಾತಾರೆಯ ಪ್ರತಾಪಸಿಂಹನಿಗೆ ೧೩ ಲಕ್ಷದ ಜಹಗೀರನ್ನು ಉಳಿಸಿ, ಉಳಿದ ಮರಾಠ ರಾಜ್ಯವನ್ನೆಲ್ಲ ತಮ್ಮ ರಾಜ್ಯಕ್ಕೆ ಕೂಡಿಸಿಕೊಂಡರು. ಕ್ರಿ. ಶ ೧೮೧೮.

೭. **ಮರಾಠರ ರಾಜ್ಯದ ಅಳಿಗಾಲದ ಕಾರಣಗಳು**:— ೧. ಶಿವಾಜಿ ಮಹಾರಾಜನಲ್ಲಿಯ ರಾಷ್ಟ್ರಾಭಿಮಾನ, ಸ್ವಾರ್ಥತ್ಯಾಗ ಈ ಗುಣಗಳು ಮುಂದಿನ ಅರಸರಲ್ಲಿ, ಪೇಶವೆಯರಲ್ಲಿ ಮತ್ತು ಸರದಾರರಲ್ಲಿ ಇರಲಿಲ್ಲ. ೨. ಸರಂಜಾಮು

ಗಳನ್ನು ಪಡೆದ ಸರದಾರರು ತಮ್ಮತಮ್ಮ ಮಣ್ಣು-ಹೊನ್ನುಗಳನ್ನು ಹೆಚ್ಚಿಸುವ ಅಬ್ಬರದಲ್ಲಿ ಪ್ರಜಾಹಿತವನ್ನೂ ಮಧ್ಯವರ್ತಿ ಸರಕಾರದ ಹಿತಾಹಿತಗಳನ್ನೂ ಲಕ್ಷಿಸಲಿಲ್ಲ. ೩. ಸ್ವಾರ್ಥ, ಮತ್ಸರ ಇವುಗಳ ಮೂಲಕ ಸರದಾರರು ತಮ್ಮ ತಮ್ಮೊಳಗೂ ಪೇಶವೆಯೊಡನೆಯೂ ಕಾದುತ್ತಿದ್ದುದರಿಂದ ಒಟ್ಟಿನಮೇಲೆ ಮರಾಠ ರಾಜ್ಯದ ಕಸುವು ಕುಂದಿತು. ೪. ಪಾನಿಪತದ ಯುದ್ಧದಲ್ಲಿ ಮಹಾರಾಷ್ಟ್ರದಲ್ಲಿಯ ಲಕ್ಷಾಂತರ ವೀರರು ಗತಿಸಿದ್ದರಿಂದ ಉಂಟಾದ ಶಾರೀರಿಕ-ಬೌದ್ಧಿಕ ಸಾಮರ್ಥ್ಯಗಳ ಕೊರತೆ, ೫ ಹಿರಿಯ ಮಾಧವರಾಯನ ತರುವಾಯ ಸರದಾರರನ್ನು ಅಂಕಿತದಲ್ಲಿಟ್ಟುಕೊಳ್ಳುವಂಥ ಸಮರ್ಥನಾದ ಪೇಶವೆಯು ಯಾವನೂ ಆಗಲಿಲ್ಲ. ೬. ಮರಾಠ ರಾಜ್ಯವು ಸುಧಾರಿಸಿತೆನ್ನುವಷ್ಟರಲ್ಲಿ ಸ. ಮಾಧವರಾಯನೂ ರಾಜ್ಯಕ್ಕೆ ಆಧಾರವೆನಿಸಿದ ವೀರರೂ ಮುತ್ಸದ್ದಿಗಳೂ ಮರಣಹೊಂದಿದರು. ೭. ಹಡಗುಪಡೆ, ಭೂಸೈನ್ಯ, ಶಸ್ತ್ರಾಸ್ತ್ರಗಳು ಇವುಗಳ ಸಂಬಂಧದ ಹೆಚ್ಚಿನ ಶಿಕ್ಷಣದಲ್ಲಿ ತಮ್ಮವರನ್ನು ತರಬೇತು ಮಾಡದೆ, ಪೆಟ್ಟು ತಿಂದು ಎಚ್ಚರಾದ ಬಳಿಕ, ಫ್ರೆಂಚ ಮೊದಲಾದ ಪರಕೀಯ ಅಧಿಕಾರಿಗಳಿಂದ ಸೈನ್ಯವನ್ನು ತಿದ್ದುವ ಪ್ರಯತ್ನಮಾಡಿದರು. ಈ ಪರಾವಲಂಬನವು ಪ್ರಸಂಗದಲ್ಲಿ ಮುಳುವಾಯಿತು. ೮. ಅವಿವೇಕಿಯೂ ಹೇಡಿಯೂ ಆದ ಎರಡನೆಯ ಬಾಜೀರಾಯನು ಪೇಶವೆಯಾಗಿ ಕಾಲಾಂತರದಲ್ಲಿ ಮುಳುಗಬಹುದಾಗಿದ್ದ ರಾಜ್ಯವನ್ನು ಬೇಗ ಮುಳುಗಿಸಿದನು.

೧೦ನೆಯ ಪಾಠ

ಲಾರ್ಡ ವೆಲಸ್ಲಿ (೧೭೯೮—೧೮೦೫)

೧. ವೆಲಸ್ಲಿಯು ಬರಲು ಕಾರಣ ಮತ್ತು ಆ ಕಾಲದ ಹಿಂದುಸ್ಥಾನದ ಸ್ಥಿತಿ:— ೧. ಕೆ. ಶ. ೧೭೯೯ರಲ್ಲಿ **ಫ್ರಾನ್ಸಿನ** ರಾಜ್ಯಕ್ರಾಂತಿಯಾದ ನಂತರ **ನೆಪೋಲಿಯನ್‌ನು** ಆ ದೇಶದ ಒಡೆಯನಾದನು. ಅವನು ಇಂಗ್ಲಿಷರನ್ನು ಹಿಮ್ಮೆಟ್ಟಿಸಿ ಯುರೋಪದಲ್ಲಿ ಫ್ರಾನ್ಸಿನ ವರ್ಚಸ್ಸನ್ನು ನೆಲೆಗೊಳಿಸುವ ಮಹಾತ್ವಾಕಾಂಕ್ಷೆಯನ್ನು ತಾಳಿ, ಅವರೊಡನೆ ಯುದ್ಧವನ್ನು ಹೂಡಿದ್ದನು. ಯುರೋಪದಲ್ಲಿ ಇಂಗ್ಲಿಷರ ಕಸುವು ಕುಂದಬೇಕಾದರೆ ಹಿಂದುಸ್ಥಾನದಲ್ಲಿಯ

ಅವರ ವರ್ಚಸ್ಸನ್ನು ನಾಶಗೊಳಿಸುವದು ಅವಶ್ಯವೆಂದೆಸಿಸಿದ್ದರಿಂದ ಅವನು **ಇಜಿಪ್ತ-ಏಪಿಯಾಮೈನರ**ಗಳನ್ನು ವಶಮಾಡಿಕೊಂಡ ಬಳಿಕ ಹಿಂದುಸ್ಥಾನಕ್ಕೆ ಬರಲು ಹವಣಿಸುತ್ತಿದ್ದನು.



ನಪೋಲಿಯನ್ ಭೋನಾಪಾರ್ಟ

೨. ಮರಾಠರು ೩ರಡೆಯ ಕಾಳಗದಲ್ಲಿ ನಿಜಾಮನನ್ನು ಸೋಲಿಸಿ ಅವನ ಅರ್ಧ ರಾಜ್ಯವನ್ನು ಕಸಿದುಕೊಂಡು ಪ್ರಬಲರಾಗಿದ್ದರು. ೩. **ಸಿಂಧೆ, ಹೋಳಕರ, ಭೋಸಲೆ** ಇವರು ಫ್ರೆಂಚ ಅಧಿಕಾರಿಗಳಿಂದ ತಮ್ಮ ಸೈನ್ಯವನ್ನು ತಿದ್ದಿಕೊಂಡು ಒಗರಿನಿಂದ ನಡೆಯುವವರಾಗಿದ್ದರು. ಆದರೂ ಅವರಲ್ಲಿ ಒಳಜಗಳಗಳು ಮತ್ತೆ ಬೆಳೆಯತೊಡಗಿದ್ದವು. ೪. ಇಂಗ್ಲಿಷರು ಹೊತ್ತಿಗೆ ನೆರವಾಗಲಿಲ್ಲೆಂದು ಸಿಟ್ಟಿಗೆದ್ದ **ನಿಜಾಮನು** ಫ್ರೆಂಚರಿಂದ ೧೪ ಸಾವಿರ ಸೈನ್ಯ

ವನ್ನು ಸಜ್ಜುಗೊಳಿಸಿದ್ದನು **೫. ಟೀಪುವು** ಭಾರಿಯಾದ ಸೈನ್ಯವನ್ನಿಟ್ಟುಕೊಂಡು ಕಳೆದುಹೋದ ರಾಜ್ಯವನ್ನು ಗಳಿಸಲು ಹೊಂಚುಹಾಕಿಕೊಂಡಿದ್ದನು. ಅಯೋಧ್ಯೆಯ **ವಜೀರನು** ಮಾತ್ರ ತೀರ ದುರ್ಬಲನಾಗಿದ್ದನು. ಎಲ್ಲ ಅರಸರ ಬಳಿಯಲ್ಲಿ ಫ್ರೆಂಚರ ಸುಳಿದಾಟವೇ ಹೆಚ್ಚಾಗಿದ್ದಿತು.

ಹೀಗೆ ಪರಿಸ್ಥಿತಿಯಿರಲು ತಟಸ್ಥವೃತ್ತಿಯ ಘೋರಣೆಯಿಂದ ಕೆಲಸ ವಾಗದೆಂದು ಇಂಗ್ಲಿಷ ಮುತ್ಸದ್ದಿಗಳೂ ಡಾಯರೆಕ್ಟರರೂ ಅರಿತುಕೊಂಡರು. ಅವರು ಸರ್ ಜಾನ್ ಶೋರನನ್ನು ಕರೆಯಿಸಿಕೊಂಡು **ವೆಲಸ್ಲಿ**ಯನ್ನು ಗ. ಜನರಲನನ್ನಾಗಿ ಅರಿಸಿ ಕಳುಹಿದರು.

೨. ಸಹಾಯಕ ಸೈನ್ಯ (ಸಬ್ ಸಿಡಿಯರಿ) **ಪದ್ಧತಿ**:— ಹಿಂದು-ಸ್ಥಾನಕ್ಕೆ ಬಂದ ಬಳಿಕ, ವೆಲಸ್ಲಿಯು ಇಲ್ಲಿಯ ಸ್ಥಿತಿಗತಿಯನ್ನು ಚೆನ್ನಾಗಿ ನೋಡಿಕೊಂಡನು. ಮತ್ತು ಫ್ರೆಂಚರನ್ನು ಕುಗ್ಗಿಸಿ, ಈ ದೇಶದ ಅರಸರನ್ನು ತಮ್ಮ ಅಂಕಿತದಲ್ಲಿಟ್ಟುಕೊಳ್ಳಲು ಅನುಕೂಲವಾಗುವಂಥ ಒಂದು ಯೋಜನೆ ಯನ್ನು ಕಂಡುಹಿಡಿದನು. ಈ ಯೋಜನೆಗೆ **ಸಹಾಯಕ ಸೈನ್ಯ ಪದ್ಧತಿ** ಎಂಬ ಹೆಸರು. ಇದಕ್ಕೆ ಒಳಗಾದ ಅರಸರು **ಅನುಸರಿಸತಕ್ಕ ನಿಯಮಗಳು**– **೧.** ಈ ದೇಶದ ಅರಸರು ತಮ್ಮ ರಕ್ಷಣೆಗಾಗಿ ಇಂಗ್ಲಿಷರ ಸೈನ್ಯವನ್ನು ಇಟ್ಟು ಕೊಳ್ಳಬೇಕು. **೨.** ಆ ಸೈನ್ಯದ ವೆಚ್ಚಕ್ಕಾಗಿ ತಕ್ಕಷ್ಟು ಸೀಮೆಯನ್ನು ಹಂಚಿ ಕೊಡಬೇಕು. **೩.** ಇಂಗ್ಲಿಷರ ಹೊರತಾಗಿ ಬೇರೆ ಯುರೋಪಿಯನರನ್ನು ಕೆಲಸಕ್ಕೆ ಇಟ್ಟುಕೊಳ್ಳಲಾಗದು. **೪.** ಇಂಗ್ಲಿಷ **ರೆಸಿಡೆಂಟ**ನನ್ನು ತನ್ನಲ್ಲಿ ಇಟ್ಟುಕೊಳ್ಳ ಬೇಕು. **೫.** ಇಂಗ್ಲಿಷರ ಒಪ್ಪಿಗೆಯನ್ನು ಪಡೆದುಕೊಳ್ಳದೆ ಬೇರೆಯವರ ಕೂಡ ಯುದ್ಧ–ಒಪ್ಪಂದಗಳನ್ನು ಮಾಡಕೂಡದು. **೬.** ತಮಗೂ ಬೇರೆ ಅರಸರಿಗೂ ಜಗಳ ಹತ್ತಿದಲ್ಲಿ ಅದನ್ನು ಇಂಗ್ಲಿಷರ ಮುಂದಿಟ್ಟು ತೀರಿಸಿಕೊಳ್ಳಬೇಕು.


೩. ಸಹಾಯಕ ಸೈನ್ಯ ಪದ್ಧತಿಯ ಬಳಕೆ:— ಮೊದಲು ವೆಲಸ್ಲಿಯು **ನಿಜಾಮ**ನಿಗೆ ಈ ಪದ್ಧತಿಗೆ ಒಳಗಾಗಬೇಕೆಂದು ತಿಳಿಸಿದನು. ಇಂಗ್ಲಿಷರ ಮೇಲೆ ಅವನು ಸಿಟ್ಟಾಗಿದ್ದರೂ ವಿರೋಧಿಸುವ ಸಾಮರ್ಥ್ಯವಿಲ್ಲದುದರಿಂದ ನಿರುಪಾಯ ನಾಗಿ ಸಹಾಯಕ ಸೈನ್ಯವನ್ನು ಇಟ್ಟುಕೊಂಡು ಅವರ ಮಾಂಡಲಿಕನಾದನು. ಕ್ರಿ. ಶ. ೧೭೯೫. **ಅಯೋಧ್ಯೆಯ ವಜೀರ**ನಿಗೆ ಸೈನ್ಯದ ನೆರವು ಕೊಟ್ಟು

ವೆಚ್ಚವನ್ನು ಅವನಿಂದ ತೆಗೆದುಕೊಳ್ಳುವ ರೀತಿಯು ಹೆಸ್ಟಿಂಗ್ಸನ ಕಾಲದಿಂದ ನಡೆದಿತ್ತು. ಶೋಅರನ ಆಳಿಕೆಯಲ್ಲಿ ವಜೀರನು ಇಂಗ್ಲಿಷರ ಸೈನ್ಯವನ್ನು ತನ್ನ ನೆರವಿಗೆ ಇಟ್ಟುಕೊಂಡಿದ್ದನು. ಈಗ ವೆಲಸ್ಲಿಯು ಅದೇ ಸೈನ್ಯವನ್ನು ಹೆಚ್ಚಿಸಿ ಅವರ ವೆಚ್ಚಕ್ಕೆಂದು **ಕೋರಾ, ಅಲಹಾಬಾದ, ರೋಹಿಲಖಂಡ** ಎಂಬ ಪ್ರಾಂತಗಳನ್ನು ವಜೀರನಾದ ಸಾದತ ಅಲಿಯಿಂದ ತೆಗೆದುಕೊಂಡನು. (೧೮೦೧) **ಗಾಯಕವಾಡದ ಆನಂದರಾಯನು** ದುರ್ಬಲನಾಗಿದ್ದುದರಿಂದ ಅವನೂ ಸ. ಸೈನ್ಯ ಪದ್ಧತಿಯನ್ನು ಒಪ್ಪಿಕೊಂಡನು ಮುಂದೆ ತುಸು ದಿನಗಳಲ್ಲಿಯೆ **ಪೇಶ್ವೆಯ ಬಾಜೀರಾಯನು** ವಸಯಿಗೆ ಓಡಿಹೋಗಿ ವೆಲಸ್ಲಿಯ ಸ. ಸೈನ್ಯ ಪದ್ಧತಿಗೆ ಒಳಗಾದನು. ಕ್ರಿ. ಶ. ೧೮೦೨.

೪. ಮೈಸೂರಿನ ನಾಲ್ಕನೆಯ ಯುದ್ಧ :— ಕ್ರಿ. ಶ. **೧೭೯೯**. ಟೀಪುವು ಕಳೆದುಕೊಂಡ ರಾಜ್ಯವನ್ನು ಗಳಿಸುವ ನಿಶ್ಚಯದಿಂದ ತನ್ನ ಸೈನ್ಯವನ್ನು ಬೆಳೆಸಿ, ತಿದ್ದಿಲ್ಲದ್ದದೆ ಫ್ರೆಂಚ ಸೈನ್ಯದ ನೆರವನ್ನೂ ಪಡೆದಿದ್ದನು. ನೆರವಿಗಾಗಿ ನಿಜಾಮ - ವಜೀರರ ಸಂಗಡ ಒಳಸಂಚು ನಡೆಸಿದ್ದನು. ಅಲ್ಲದೆ **ನೆಪೋಲಿಯನನಿಗೂ** ಅಫಗಾನಿಸ್ಥಾನದ **ಝುನಾನಷಾಹನಿಗೂ** ಹಿಂದುಸ್ಥಾನದ ಮೇಲೆ ಸಾಗಿ ಬರಲು ತಿಳಿಸಿದ್ದನು.

ಹೀಗಿರಲು ನಿಜಾಮನನ್ನು ವಶಮಾಡಿಕೊಂಡು ಬಳಿಕ ವೆಲಸ್ಲಿಯು ಟೀಪುವಿಗೆ ಸ. ಸೈನ್ಯವನ್ನು ಇಟ್ಟುಕೊಳ್ಳಬೇಕೆಂದು ತಿಳಿಸಿದನು. ಟೀಪುವು ಈ ಮಾತನ್ನು ಧಿಕ್ಕರಿಸಲು, ವೆಲಸ್ಲಿಯು ನಿಜಾಮ-ಮರಾಠರನ್ನು ನೆರವಿಗೆ ಕರೆದು ಯುದ್ಧಕ್ಕೆ ಅಣಿಯಾದನು. ನಿಜಾಮನು ನೆರವಾದನು. ಮನೆಜಗಳದ ಮೂಲಕ ಮರಾಠರ ನೆರವು ಸಿಗಲಿಲ್ಲ. ಬಳಿಕ ವೆಲಸ್ಲಿಯು ಮದ್ರಾಸಕ್ಕೆ ಬಂದು, ಜನರಲ್ **ಹ್ಯಾರಿಸನ** ಸೈನ್ಯವನ್ನು ಟೀಪುವಿನ ಮೇಲೆ ಬಿಟ್ಟನು. ಮುಂಬಯಿಯಿಂದ ಹೊರಟ ಸ್ಟುಅರ್ಟನ ಸೈನ್ಯವು ಸಮುದ್ರ ಮಾರ್ಗವಾಗಿ ಕುರ್ಗ (ಕೊಡಗು) ಪ್ರಾಂತಕ್ಕೆ ಬಂದು ಟೀಪುವಿನ ಮೇಲೆ ಸಾಗಿತು. ಎರಡೂ ಇಂಗ್ಲಿಷ ಸೈನ್ಯಗಳು ಕೂಡುವ ಮೊದಲೆ ಟೀಪುವು ಸ್ಟುಅರ್ಟನ ಸೈನ್ಯವನ್ನು ಎರಗಿ ತಾನೇ ಸೋತನು. ಬಳಿಕ ಅವನು ಹ್ಯಾರಿಸನ ಸೈನ್ಯಕ್ಕೆ ಇದಿರಾಗಿ ಮಳವಳ್ಳಿಯ ಬಳಿಯಲ್ಲಿ ಮತ್ತೆ ಸೋತು, ಹಿಮ್ಮೆಟ್ಟಿ

ಶ್ರೀರಂಗಪಟ್ಟಣದ ಕೋಟೆಯನ್ನು ಆಶ್ರಯಿಸಿದನು. ಬಳಿಕ ವೆಲಸ್ಲಿಯ ತಮ್ಮನಾದ **ಆರ್ಥರ ವೆಲಸ್ಲಿ**ಯು ಮುಂದಾಗಿ ಕೋಟೆಯನ್ನು ಮುತ್ತಿದನು ಟೀಪುವು ಧೈರ್ಯದಿಂದ ಮುತ್ತಿಗೆಯನ್ನು ತಡೆದನು. ಕಡೆಗೆ ತೋಪುಗಳ ಹೊಡೆತಕ್ಕೆ ಗೋಡೆಯು ಒಡೆಯಲು ಇಂಗ್ಲಿಷ ಸೈನ್ಯವು ಒಳನುಗ್ಗಿತು ಅಲ್ಲಿ ಘೋರ ಕಾಳಗವಾಗಿ ಇಂಗ್ಲಿಷರಿಗೆ ಜಯ ದೊರೆಯಿತು. ಬಳಿಕ ಆರ್ಥರ ವೆಲಸ್ಲಿಯು ಟೀಪುವನ್ನು ಹುಡುಕುತ್ತ ಅರಮನೆಗೆ ಹೋದನು. ಕಡೆಗೆ ಟೀಪುವಿನ ಶವವು ಉತ್ತರದ ಅಗಸೆಯ ಬಾಗಿಲ ಬಳಿಯಲ್ಲಿ ಸಿಕ್ಕಿತು. ಅವನಿಗೆ ಗುಂಡು ತಾಗಿದ್ದಲ್ಲದೆ ಹಲವು ಗಾಯಗಳಾಗಿದ್ದವು. ಆ ಶವವು ಮರುದಿನ ಮಯಾದೆಯಿಂದ ಹೈದರನ ಗೋರಿಯ ಹತ್ತರವೇ ಹುಗಿಯಲ್ಪಟ್ಟಿತು.



ಆರ್ಥರ ವೆಲಸ್ಲಿ

೫. ಮೈಸೂರಿನ ರಾಜ್ಯದ ವ್ಯವಸ್ಥೆ:— ಟೀಪುವಿನ ಅರ್ಧ ರಾಜ್ಯವು ಇಂಗ್ಲಿಷರಿಗೂ ಅರ್ಧ ರಾಜ್ಯವು ನಿಜಾಮನಿಗೂ ಸಲ್ಲತಕ್ಕದ್ದು ಆದರೆ ವೆಲಸ್ಲಿಯು ಮೈಸೂರಿನ ಮುಂಚಿನ ಅರಸರ ವಂಶಜನಾದ **ಮುಮ್ಮಡಿ ಕೃಷ್ಣರಾಜ** ಎಂಬ ೫ ವರ್ಷದ ಹುಡುಗನನ್ನು ಮೈಸೂರಿನ ಅರಸನನ್ನು ಮಾಡಿದನು. ಮತ್ತು ಹೈದರ-ಟೀಪು ಇವರು ಹೊಸದಾಗಿ ಆ ರಾಜ್ಯಕ್ಕೆ ಸೇರಿಸಿಕೊಂಡ ಸೀಮೆಗಳನ್ನಷ್ಟೆ ಇಂಗ್ಲಿಷ ನಿಜಾಮರಲ್ಲಿ ಹಂಚಿದನು. ಮೈಸೂರಿನ ಒಡೆಯರು ಸ. ಸೈ. ಪದ್ಧತಿಗೆ ಒಪ್ಪಿ ಇಂಗ್ಲಿಷರ ಆಧೀನರಾದರು. ಟೀಪುವಿನ ಮಕ್ಕಳು ವಷ್ಟಾಸನವನ್ನು ಪಡೆದು ವೆಲೂರಲ್ಲಿ ಇರಿಸಲ್ಪಟ್ಟರು.

೧೧ನೆಯ ಪಾಠ

ಲಾರ್ಡ್ ವೆಲಸ್ಲಿ (ಮುಂದೆ ಸಾಗಿದ್ದು)

೧. **ಮೈಸೂರಿನ ಯುದ್ಧದ ಪರಿಣಾಮ:**— ಟೀಪುವಿನಂಥ ಬಲವುಳ್ಳ ಹಗೆಯನ್ನು ಅಡಗಿಸಿದ್ದರಿಂದ ವೆಲಸ್ಲಿಗೆ **ಮಾರ್ಕ್ವಿಸ್** ಎಂಬ ಬಿರುದು ಸಿಕ್ಕಿತು. ಫ್ರೆಂಚರು ಹಿಂದುಸ್ಥಾನದಲ್ಲಿ ಬಲಗೊಳ್ಳುವ ಹೆದರಿಕೆಯು ತಪ್ಪಿತು. ಟೀಪುವಿನಂತೆ ವಿರೋಧಿಗಳಾಗುವವರನ್ನು ಹಣಿಯುವದು ಹಗುರಾಯಿತು.

೨. **ಟೀಪುವಿನ ಸ್ವಭಾವವೂ ಯೋಗ್ಯತೆಯೂ:**— ಇವನು ಹೆಸರಾದ ಸೇನಾಪತಿಯಾಗಿದ್ದನು ಇವನ ಮೈಕಸುವೂ ಕಲಿತನವೂ ಹೆಚ್ಚಿನವಿದ್ದವು ಇವನನ್ನು ಒಬ್ಬರೇ ಸೋಲಿಸಲು ಯಾರೂ ಶಕ್ತರಿರಲಿಲ್ಲ. ಆದುದರಿಂದಲೆ ಇವನೊಡನೆ ಆದ ಎರಡು ಯುದ್ಧಗಳಲ್ಲಿ ಇಂಗ್ಲಿಷರು ನಿಜಾಮ-ಮರಾಠರ ನೆರವನ್ನು ಬಯಸಬೇಕಾಯಿತು. ಕೊಡಗಿನ ಬಹು ಜನರನ್ನು ಮುಸಲ್ಮಾನರನ್ನು ಮಾಡಿದ ಸಂಗತಿಯು ಇವನ ಧರ್ಮಪ್ರಸಾರದ ಹಂಬಲವನ್ನು ತೋರಿಸುವದು. ಆದರೆ ತನ್ನ ರಾಜ್ಯದಲ್ಲಿ ಇಂಥ ಕೆಲಸಗಳಿಗೆ ಕೈಹಾಕದೆ ಅಲ್ಲಿ ಇವನು ಶಾಂತತೆಯನ್ನು ಕಾದುಕೊಂಡಿದ್ದನು. ಮಹಮ್ಮದೀಯ ಸಂಸ್ಕೃತಿಯನ್ನು ಅನುಸರಿಸಿದ ಹೊಸ ತೂಕ, ಅಳತೆ. ಕಾಲುಗಣನೆ ಇವುಗಳನ್ನು ಬಳಕೆಯಲ್ಲಿ ತರಲು ಪ್ರಯತ್ನಿಸಿದನು. ಓದು-ಬರೆಹಗಳನ್ನು ಚನ್ನಾಗಿ ಅರಿತಿದ್ದನು. ಇವನ ಗ್ರಂಥಸಂಗ್ರಹವನ್ನು ಇವನ ತರುವಾಯ ವೆಲಸ್ಲಿಯು ಕಲಕತ್ತೆಗೆ ಒಯ್ದನು. '**ಆಡಾಗಿ ಇನ್ನೂರು ವರ್ಷ ಬದುಕುವದಕ್ಕಿಂತ ಹುಲಿಯಾಗಿ ಎರಡು ದಿನಸ ಬಾಳುವದು ಲೇಸು;**' ಎಂಬುವದು ಇವನ ವಿಚಾರ ಅಂತೇ ಸಹಾಯಕ ಸೈನ್ಯ ಪದ್ಧತಿಯನ್ನು ಮೆಚ್ಚಲಿಲ್ಲ '**ಗೆಲ್ಲುವೆನು ಇಲ್ಲವೆ ಸಾಯುವೆನು**' ಎಂಬ ನಿಶ್ಚಯದಿಂದ ಕಾದಿದನು. ದುರಾಗ್ರಹಿಯೂ ಧೂರ್ತತನವಿಲ್ಲದವನೂ ಆದದರಿಂದ ಇವನ ಸುತ್ತಲೆಲ್ಲ ಹಗೆಗಳುಂಟಾದರು. ಈ ಹಗೆಗಳು ಒಟ್ಟಾಗಿ ಏರಿಬಂದದರಿಂದಲೂ ಫ್ರೆಂಚರ ನೆರವು ಹೊತ್ತಿಗೆ ಸಿಗದ್ದರಿಂದಲೂ ಇವನ ಪ್ರಯತ್ನಗಳೆಲ್ಲ ಹುಸಿಯಾದವು. **ಹೈದರನು** ತನ್ನ ಮಗನ ಸ್ವಭಾವದೋಷವನ್ನರಿತು, 'ಇವನು ಎಲ್ಲಿ ರಾಜ್ಯವನ್ನು ಕಳೆದುಕೊಳ್ಳುವನೋ!' ಎಂದು ಸಂಶಯಗೊಂಡಿದ್ದನು. ಆ ಸಂಶಯವು ಸುಳ್ಳಾಗಲಿಲ್ಲ. ಟೀಪುವು ೧೮ ವರ್ಷ ರಾಜ್ಯವಾಳಿ ೫೦ ವರ್ಷದವನಿರಲು ಹತನಾದನು.

೩. ವೆಲಸ್ಲಿಯು ಕಸಿದುಕೊಂಡ ರಾಜ್ಯಗಳು :— **೧. ತಂಜಾವರ.** ಕ್ರಿ. ಶ. **೧೭೭೭** ರಲ್ಲಿ ಆರಸನಾಗಿದ್ದ ತುಳಜಾಜಿಯು ಸಾ ಯ ಲು ಪಟ್ಟದ ಸಲುವಾಗಿ ಜಗಳಗಳು ನಡೆದವು. ವೆಲಸ್ಲಿಯು ಪರಸೋಜಿಯ ಬಾಧ್ಯತೆಯನ್ನು ಒಪ್ಪಿ ಅವನಿಗೆ ವರ್ಷಾಶನವನ್ನು ಗೊತ್ತುಮಾಡಿ, ಆ ರಾಜ್ಯವನ್ನು ಕಂಪನಿಯ ರಾಜ್ಯಕ್ಕೆ ಕೂಡಿಸಿದನು. ಕ್ರಿ ಶ. **೧೭೯೯. ೨. ಸುರತ-** ಸುರತದ ನವಾಬನು ಕ್ರಿ. ಶ. **೧೭೯೯** ರಲ್ಲಿ ಸಾಯಲು ಅವನ ವಾರಸದಾರರಿಗೆ ವರ್ಷಾಶನವನ್ನು ಕೊಟ್ಟು ವೆಲಸ್ಲಿಯು ಆ ರಾಜ್ಯವನ್ನು ಕಸಿದುಕೊಂಡನು. **೩. ಆರ್ಕಾಟ-** ಕ್ರಿ. ಶ. ೧೭೯೫ರಲ್ಲಿ ನು ಹ ಮ್ಮ ದ ಲಿ ಯು ಸಾಯಲು ಅವನ ಮಗನಾದ **ಉಮದತ್-ಉಲ್-ಉಮರನು** ನವಾಬನಾದನು. ಇವನೂ ಕ್ರಿ ಶ. ೧೮೦೧ ರಲ್ಲಿ ಸತ್ತನು. ಇವನು ಟೀಪುವಿನೊಡನೆ ಒಳಸಂಚು ನಡೆಸಿದ್ದನೆಂಬ ನೆವದಿಂದ ವೆಲಸ್ಲಿಯು ಇವನ ರಾಜ್ಯವನ್ನು ಕಸಿದುಕೊಂಡು ಇವನ ಮಕ್ಕಳಿಗೆ ವರ್ಷಾಶ-ನವನ್ನು ಗೊತ್ತುಮಾಡಿದನು.

೪. ಮರಾಠರ ಎರಡನೆಯ ಯುದ್ಧ :— ಕ್ರಿ. ಶ. **೧೮೦೨—೧೮೦೫.** ೨ನೆಯ ಬಾಜೀರಾಯನು ವಸಯಿಯ ಒಪ್ಪಂದದಿಂದ ಇಂಗ್ಲಿಷರ ವಶನಾದ ಬಳಿಕ ವೆಲಸ್ಲಿಯು ಸಿಂಧೆ, ಭೋಸಲೆ, ಹೋಳಕರರಿಗೆ ನೀವೂ ಸಹಾಯಕ ಸೈನ್ಯವನ್ನು ಇಟ್ಟುಕೊಳ್ಳಬೇಕೆಂದು ತಿಳಿಸಿದನು· ಸಿಂಧೆ-ಭೋಸಲೆ ಯರು ಇದಕ್ಕೊಪ್ಪಲಿಲ್ಲ ಆದುದರಿಂದ ಯುದ್ಧವು ಆರಂಭವಾಯಿತು. ಆರ್ಥರ ವೆಲಸ್ಲಿಯು ಸಿಂದೆಯ ಆಹಮದನಗರವನ್ನು ವಶಮಾಡಿಕೊಂಡು ಮುಂದೆ ಸಾಗಿ ಸಿಂದೆ, ಭೋಸಲೆ ಇವರ ಒಟ್ಟು ಸೈನ್ಯಕ್ಕೆ ಇದಿರಾಗಿ ಆದನ್ನು **ಆಸಯಿ** ಎಂಬಲ್ಲಿ ಸೋಲಿಸಿದನು. ಬಳಿಕ ಭೋಸಲೆಯೊಬ್ಬನ ಸೈನ್ಯವನ್ನು **ಅಡಗಾವದ** ಬಳಿಯಲ್ಲಿ ಸೋಲಿಸಿ, **ಗಾವಿಲಗಡವನ್ನು** ತೆಗೆದುಕೊಂಡನು. ಆಗ ಭೋಸಲೆಯು **ದೇವಗಾನ** ಎಂಬಲ್ಲಿ ಒಪ್ಪಂದ ಮಾಡಿಕೊಂಡನು. ಕ್ರಿ ಶ. **೧೮೦೩.** ಈ ಒಪ್ಪಂದದಿಂದ ಭೋಸಲೆಯು ಸ ಸೈನ್ಯ ಪದ್ಧತಿಗೆ ಒಳಗಾಗಿ **ಕಟಕ, ಬಾಲಾಸೋರ** ಎಂಬ ಪ್ರಾಂತಗಳನ್ನು ಇಂಗ್ಲಿಷರಿಗೆ ಕೊಟ್ಟನು. ಉತ್ತರದಲ್ಲಿ ಲೇಕನು **ಅಶೀರಗಡ, ಬರ್ಹಾಣಪುರ** ಇವುಗಳನ್ನು ಕೈಸೇರಿಸಿ ಕೊಂಡು **ಲಾಸವಾರಿಯ** ಕೊನೆಯ ಯುದ್ಧದಲ್ಲಿ ಸಿಂದೆಯನ್ನು ಸೋಲಿಸಿದನು. ಆಗ ಸಿಂದೆಯು **ಸುರ್ಜಿ-ಅಂಜನಗಾವ** ಎಂಬಲ್ಲಿ ಒಡಂಬಡಿಕೆ ಮಾಡಿಕೊಂಡನು.

ಕ್ರಿ. ಶ. **೧೮೦೩**. ಇದರಿಂದ ಇವನು ಸಹಾಯಕ ಸೈನ್ಯವನ್ನಿಟ್ಟುಕೊಂಡು ಗಂಗಾ ಯಮುನೆಗಳ ನಡುಸೀಮೆ ಮುಂತಾದವುಗಳನ್ನು ಇಂಗ್ಲಿಷರಿಗೆ ಕೊಟ್ಟನು. ಅಲ್ಲದೆ ಷಾಹೆಆಲಮ, ಪೇಶವೆ, ನಿಜಾಮ ಇವರ ಮೇಲೆ ತನ್ನ ವರ್ಚಸ್ಸನ್ನು ನಡೆಯಿಸುವದಿಲ್ಲೆಂದು ಒಪ್ಪಿಕೊಂಡನು.

ಇಷ್ಟಾದ ಬಳಿಕ ಹೋಳಕರನು ಇಂಗ್ಲಿಷರೊಡನೆ ಯುದ್ಧಕ್ಕೆ ನಿಂತನು ಇವನು ಗನೀಮಿ ಪದ್ಧತಿಯಿಂದ ಯುದ್ಧ ಮಾಡುತ್ತ **ಮಾನ್ಸನನ** ಸೈನ್ಯದ ಮೇಲೆ ಬಿದ್ದು ಅದನ್ನು ಸೋಲಿಸಿದನು ಆಗ ಇಂಗ್ಲಿಷರ ಮೂವರು ಸೇನಾಪತಿಗಳು ಮೂರು ಕಡೆಗಳಿಂದ ಇವನ ಮೇಲೆ ಸಾಗಿದರು. ಮುಂದೆ ಲೇಕನು **ಡೀಗ, ಫರುಕಾಬಾದ** ಇವುಗಳ ಬಳಿಯಲ್ಲಿ ಹೋಳಕರನನ್ನು ಸೋಲಿಸಲು ಅವನು ಶೀಖರ ಕಡೆಗೆ ಪಂಜಾಬಕ್ಕೆ ಓಡಿಹೋದನು ಹೋಳಕರನು ಮಾನ್ಸನನನ್ನು ಸೋಲಿಸಿದ್ದನ್ನು ಕೇಳಿ ಸಿಂದೆಯು ಮತ್ತೆ ಯುದ್ಧದ ಸಿದ್ಧತೆಯನ್ನು ಮಾಡಲು ವೆಲಸ್ಲಿಯು ಅವನಿಗೆ **ಗ್ವಾಲ್ಹೇರ** ಪ್ರಾಂತವನ್ನು ಮರಳಿ ಕೊಟ್ಟು ಸಮಾಧಾನಗೊಳಿಸಿದನು. ಹೋಳಕರನನ್ನು ಸೋಲಿಸಿದ ಬಳಿಕ ಲೇಕನು ಅವನ ಸಹಾಯಕನಾದ ಭರತಪುರದ ಜಾಟನ ಮೇಲೆ ಸಾಗಿ ನಾಲ್ಕು ಸರತಿ ಅಪಜಯ ಹೊಂದಿದನು

ಮಾನ್ಸನ್, ಲೇಕ ಇವರ ಅಪಜಯದ ಸುದ್ದಿಯು ಇಂಗ್ಲಂಡಕ್ಕೆ ಮುಟ್ಟಿತು ವೆಲಸ್ಲಿಯ ರಾಜ್ಯವಿಸ್ತಾರದ ಧೋರಣೆಯನ್ನು ತಡೆಯುವದೆ ವಿಹಿತವೆಂದು ಡಾಯರೆಕ್ಟರರು ಅವನನ್ನು ಕರೆಯಿಸಿಕೊಂಡರು. ಮತ್ತು ಕಾರ್ನವಾಲೀಸನನ್ನು ಎರಡನೆಯ ಸರತಿ ಗವರ್ನರಜನರಲನ ಕೆಲಸಕ್ಕೆ ನಿಯಮಿಸಿ, ಮರಾಠರ ಯುದ್ಧವನ್ನು ಮುಗಿಸಿ ಅವರೊಡನೆ ಸ್ನೇಹದ ಒಡಂಬಡಿಕೆ ಮಾಡಿಕೊಳ್ಳುವಂತೆ ಅಪ್ಪಣೆ ಕೊಟ್ಟರು. ಆ ಮೇರೆಗೆ ಹೋಳಕರ, ಭರತಪುರದ ಅರಸು, ಸಿಂದೆ ಇವರೊಡನೆ ಒಪ್ಪಂದವಾಗಲು ಯುದ್ಧವು ಮುಗಿಯಿತು. ಕ್ರಿ. ಶ. **೧೮೦೫.**

೫. ವೆಲಸ್ಲಿಯ ಯೋಗ್ಯತೆ:— ಸಹಾಯಕ ಸೈನ್ಯ ಪದ್ಧತಿಯ ಯೋಜನೆಯು ವೆಲಸ್ಲಿಯ ಧೈರ್ಯ, ಮುತ್ಸದ್ದಿತನ, ನಿಶ್ಚಯ ಶಕ್ತಿಗಳ ಸಾಕ್ಷಿಯಾಗಿದೆ ಇವನು ಕೈಕೆಳಗಿನವರ ಯೋಗ್ಯತೆಯನ್ನು ಕಂಡುಹಿಡಿದು ಅವರಿಂದ ಮಹತ್ವದ ಕೆಲಸಗಳನ್ನು ಕಡೆಗಾಣಿಸಿದನು. ತನ್ನ ಬುದ್ಧಿ-ಸಾಹಸಗಳ ಬಲ

ದಿಂದಲೂ ಸರ್ ಜಾನ್ **ಮಾಲಕಮ್, ಲೀಕ, ಅರ್ಥರ ವೆಲಸ್ಲಿ** ಮೊದಲಾದ ಸಂಗಡಿಗರ ನೆರವಿನಿಂದಲೂ ಹಿಂದುಸ್ಥಾನದಲ್ಲಿಯ ಇಂಗ್ಲಿಷರ ರಾಜ್ಯವನ್ನು ಬೆಳೆಸಿ, ಸ್ಥಿರಗೊಳಿಸಿದನು. **ಮರಾಠರು** ತಮ್ಮ ಸಾಮ್ರಾಜ್ಯವನ್ನು ಹಬ್ಬಿಸುವದ ಕ್ಕಾಗಿ **ಚೌಥಾಯಿ, ಸರದೇಶಮುಖಿಗಳ** ಪದ್ಧತಿಯನ್ನು ಅವಲಂಬಿಸಿದರು: ವೆಲಸ್ಲಿಯು ಅದಕ್ಕಾಗಿಯೆ **ಸ. ಸೈನ್ಯ** ಪದ್ಧತಿಯನ್ನು ಯೋಜಿಸಿದನು ವೈರಿಗಳ ಬಲದಿಂದಲೆ ವೈರಿಗಳನ್ನು ಅಂಕಿತದಲ್ಲಿ ತರುವದು ಎರಡೂ ಪದ್ಧತಿಗಳ ಉದ್ದೇಶವಾಗಿದೆ.

೧೨ನೆಯ ಪಾಠ

ಲಾರ್ಡ ಕಾರ್ನವಾಲೀಸ. (೨ನೆಯ ಸರತಿ ಕ್ರಿ ಶ. ೧೮೦೫) **ಸರ್ ಜಾರ್ಜ ಬಾರ್ಲೊ.** (೧೮೦೫-೧೮೦೭) **(ಲಾರ್ಡ ಮಿಂಟೋ** ೧೮೦೭-೧೮೧೩)

೧. ಲಾರ್ಡ ಕಾರ್ನವಾಲೀಸ:— ವೆಲಸ್ಲಿಯ ತರುವಾಯ ಕಾರ್ನ ವಾಲೀಸನು ಮರಳಿ ಗ. ಜ. ಆಗಿಬಂದನು ಶಾಂತತೆಯ ಧೋರಣೆಯಿಂದ ಕಾರಭಾರವನ್ನು ಸಾಗಿಸಹತ್ತಿರಲು ತುಸು ದಿನಗಳಲ್ಲಿಯೆ ಗಾಜೀಪುರದಲ್ಲಿ ಮರಣಹೊಂದಿದನು.

೨. ಸರ್ ಜಾರ್ಜ ಬಾರ್ಲೊ: — ಕಾರ್ನವಾಲೀಸನ ಬಳಿಕ ಕೌನ್ಸಿಲಿನ ಸಭಾಸದನಾದ **ಬಾರ್ಲೊನು** ಗ. ಜನರಲ್ ಆದನು. ಇವನು ಡಾಯರೆಕ್ಟರರ ಆಪ್ಪಣೆಯಂತೆ ಸಿಂಧೆ, ಹೋಳಕರ, ಜಾಟ ಇವರೊಡನೆ ಮಿತ್ರತ್ವದ ಒಡಂಬಡಿಕೆಯನ್ನು ಮಾಡಿಕೊಂಡು ಯುದ್ಧವನ್ನು ನಿಲ್ಲಿಸಿದನು. **ವೇಲೂರ ದಂಗೆ-** (೧೮೦೬) ಮದ್ರಾಸ ಇಲಾಖೆಯ **ವೇಲೂರಲ್ಲಿ** ಇಂಗ್ಲಿಷರ ದಂಡು ಇತ್ತು. ಅವರಲ್ಲಿಯ ಹಿಂದಿ ಸೈನಿಕರು, ಹಣೆಗೆ ಗಂಧವನ್ನು ಹಚ್ಚಬಾರದು; ಕೂದಲುಗಳನ್ನು ಒಂದೇ ತರಹದಿಂದ ಕತ್ತರಿಸಬೇಕು; ಇಂಗ್ಲಿಷ ಪದ್ಧತಿಯ ಟೊಪ್ಪಿಗೆಗಳನ್ನು ಹಾಕಿಕೊಳ್ಳಬೇಕು; ಎಂಬ ನಿಯಮ ಗಳಾದವು. ಆಗ ಆ ಸೈನ್ಯಿಕರು ತಮ್ಮ ಜಾತಿಯನ್ನು ಕೆಡಿಸಲು ಈ ನಿಯಮ ಗಳನ್ನು ಮಾಡಿದರೆಂದು ಸಿಟ್ಟಿಗೆದ್ದು ದಂಗೆಯನ್ನು ಹೂಡಿದರು. ಆಗ ಮದ್ರಾಸದ ಗವ್ಹರ್ನರನಾದ **ಉಯಿಲ್ಯಮ್ ಬೆಂಟಿಂಕನು** ಸೈನ್ಯವನ್ನು ಕಳುಹಿ

ದಂಗೆಯನ್ನು ಅಡಗಿಸಿದನು. ವೇಲೂರಲ್ಲಿದ್ದ ಟೀಪುವಿನ ಮಕ್ಕಳ ಬೆಂಬಲವು ಈ ದಂಗೆಗಾರರಿಗೆ ಉಂಟೆಂಬ ಸಂಶಯದಿಂದ ಅವರು ಕಲಕತ್ತೆಗೆ ಕಳುಹಲ್ಪಟ್ಟರು. ಮುಂದೆ ಈ ವಿಷಯದಲ್ಲಿ ಬಾರ್ಲೋನೂ ಬೆಂಟಿಂಕನೂ ತಪ್ಪು ಮಾಡಿದರೆಂದು ನಿರ್ಣಯವಾಗಿ, ಬಾರ್ಲೋನನ್ನು ಮದ್ರಾಸದ ಗ ಕೆಲಸಕ್ಕೆ ಕಳುಹಿ, ಬೆಂಟಿಂಕನನ್ನು ಕೆಲಸದಿಂದ ತೆಗೆದರು. ಬಳಿಕ **ಲಾರ್ಡ್ ಮಿಂಟೋ** ಎಂಬನನು ಗ. ಜ ಆದನು.

೩. **ಲಾರ್ಡ್ ಮಿಂಟೋ** :— ಕ್ರಿ ಶ. ೧೮೦೭-೧೮೧೩ ಇವನಾದರೂ ಹಿಂದುಸ್ಥಾನದ ಕಾರಭಾರದ ವಿಷಯದಲ್ಲಿ ಶಾಂತತೆಯ ಧೋರಣೆಯನ್ನೇ ಕಾದುಕೊಂಡನು ಆದದರಿಂದ ಇವನ ಆಳಿಕೆಯಲ್ಲಿ ಯುದ್ಧಗಳು ಸಂಭವಿಸಲಿಲ್ಲ ಶಾಂತತೆ, ಸುವ್ಯವಸ್ಥೆಗಳನ್ನು ನೆಲೆಸುವದಕ್ಕಾಗಿ ಹಲಕೆಲವು ಉಪಾಯಗಳನ್ನು ಇವನು ಕೈಕೊಳ್ಳಬೇಕಾಯಿತು

೪. **ಫ್ರೇಂಚರ ದಾಳಿಯನ್ನು ತಡೆಯುವ ಪ್ರಯತ್ನ** :— ಕ್ರಿ. ಶ. ೧೮೦೭ರಲ್ಲಿ ನೆಪೋಲಿಯನನೂ ರಶಿಯದ **ಝಾರನೂ** ತುರ್ಕಸ್ಥಾನ, ಇರಾಣಗಳ ಷಾಹರೂ ಒಂದಾಗಿ ಇರಾಣ-ಅಫಗಾಣಿಸ್ಥಾನಗಳ ಮಾರ್ಗವಾಗಿ ಹಿಂದುಸ್ಥಾನದ ಮೇಲೆ ಸಾಗಿಬರಬೇಕೆಂದು ಗೊತ್ತುಮಾಡಿದರು. ಆಗ ಇಂಗ್ಲಂಡದ ಮಂತ್ರಿಮಂಡಲದವರು **ಇರಾಣ, ಅಫಗಾಣಿಸ್ಥಾನ, ಪಂಜಾಬ** ಈ ಅರಸರ ಕೂಡ ಸ್ನೇಹ ಬೆಳೆಸಿ ಒಪ್ಪಂದ ಮಾಡಿಕೊಳ್ಳುವಂತೆ ಮಿಂಟೋನಿಗೆ ಸೂಚಿಸಿದರು. ಆಗ ಇವನು ತನ್ನ ವಕೀಲರನ್ನು ಮೇಲೆ ಹೇಳಿದ ಅರಸರಲ್ಲಿಗೆ ಕಳುಹಿದನು. **ಇರಾಣದ ಒಪ್ಪಂದ**– ಸರ್ ಜಾನ್ ಮಾಲಕಮನು ಇರಾಣಕ್ಕೆ ಹೋಗಿ ಅಲ್ಲಿಯ ಷಾಹನೊಡನೆ ಒಪ್ಪಂದ ಮಾಡಿಕೊಂಡನು. ಆಗ ಷಾಹನು ನೆಪೋಲಿಯನನಿಗೆ ಹಿಂದುಸ್ಥಾನಕ್ಕೆ ಬರಲು ದಾರಿಯನ್ನು ಕೊಡಬಾರದು. ಪ್ರಸಂಗದಲ್ಲಿ ಇಂಗ್ಲಿಷರು ಷಾಹನಿಗೆ ಧನಸಹಾಯವನ್ನು ಮಾಡಬೇಕು; ಎಂದು ಗೊತ್ತಾಯಿತು. **ಮೌಂಟ್ ಸ್ಟುಅರ್ಟ ಎಲ್ಫಿನ್‌ಸ್ಟನನು** ಅಫಗಾಣಿಸ್ಥಾನಕ್ಕೆ ಹೋದವನು ಅಲ್ಲಿ ಒಳಜಗಳು ನಡೆದದರಿಂದ ಹಾಗೆಯೆ ಮರಳಿ ಬಂದನು. **ಅಮೃತಸರದ ಒಪ್ಪಂದ**– ಕ್ರಿ. ಶ ೧೮೦೯. ಮೊಗಲ ರಾಜ್ಯವು ಮುರಿದನಂತರ ಸೀಖರು ಸ್ವತಂತ್ರರಾಗಿ ಪಂಜಾಬದಲ್ಲಿ ಸಣ್ಣ ಸಣ್ಣ ರಾಜ್ಯಗಳನ್ನು ಸ್ಥಾಪಿಸಿದರು. **ರಣಜಿತಸಿಂಗನು** ಸೀಖ ಅರಸರಲ್ಲೆಲ್ಲ ಮುಖ್ಯನಾದನು ಆದರೆ ಸತಲಜದ ಪೂರ್ವದ

ಒಬ್ಬಿಬ್ಬರು ಅರಸರು ಅವನ ಹಿರಿಯತನಕ್ಕೊಪ್ಪದೆ ಅವನ ವಿರುದ್ಧವಾಗಿ ಇಂಗ್ಲಿಷರ ನೆರವು ಬಯಸಿದರು ಮಿಂಟೋನು **ಸರ್ ಚಾರ್ಲಸ ಮೆಟ್‌ಕಾಫ್** ಎಂಬವನನ್ನು ನೈನ್ಯದೊಂದಿಗೆ ಪಂಜಾಬಕ್ಕೆ ಕಳುಹಿದನು. ಮೆಟ್‌ಕಾಫನು ರಣಜಿತಸಿಂಗನೊಡನೆ ಅಮೃತಸರದಲ್ಲಿ ಒಪ್ಪಂದ ಮಾಡಿಕೊಂಡನು. ಸತಲಜ ನದಿಯು ತನ್ನ ರಾಜ್ಯದ ಮೇರೆಯೆಂದೂ **ಲುಧಿಯಾನಾ**ದಲ್ಲಿ ಇಂಗ್ಲಿಷರು ತಮ್ಮ ಸೈನ್ಯವನ್ನು ಇಡಬಹುದೆಂದೂ ರಣಜಿತಸಿಂಗನು ಒಪ್ಪಿದನು **ಫ್ರೆಂಚ-ಡಚ್ಚರ ಠಾಣ್ಯಗಳನ್ನು ಕಸಿದದ್ದು**- ಮಿಂಟೋನು ಬಲವಾದ ಹಡಗುಪಡೆಯನ್ನು ಕಳುಹಿ ಆಫ್ರಿಕದ ಪೂರ್ವಕ್ಕೆರುವ **ಮಾರಿಶಸ್ ಬುರ್ಬೋನ್** +ಎಂಬ ಫ್ರೆಂಚರ ಠಾಣ್ಯಗಳನ್ನೂ, **ಕೇಪ್ ಆಫ್ ಗುಡ್‌ಹೋಪ್** ಮತ್ತು **ಜಾವಾ** ಎಂಬ ಡಚ್ಚರ ಠಾಣ್ಯಗಳನ್ನೂ ವಶಮಾಡಿಕೊಂಡನು.

೫. **ಮಿಂಟೋನ ಕಾಲದ ಬಂಡಾಯಗಳು**:— **ಬುಂದೇಲಖಂಡ**ದಲ್ಲಿಯೂ, **ತ್ರಾವಣಕೋರ**ದಲ್ಲಿಯೂ ಒಂಡಾಯಗಳು ಏಳಲು ಮಿಂಟೋನು ಅವುಗಳನ್ನು ಅಡಗಿಸಿದನು ಮದ್ರಾಸಿನ ಯುರೋಪಿಯನ್ ದಂಡಾಳುಗಳು ಯುದ್ಧಕಾಲದ ಭತ್ತೆಯನ್ನು ಕಟ್ಟುಮಾಡಿದ್ದಕ್ಕಾಗಿ ಬಂಡು ಹೂಡಿದರು. ಮಿಂಟೋನು ಮದ್ರಾಸಕ್ಕೆ ಬರುವಷ್ಟರಲ್ಲಿಯೆ ಅದು ಅಡಗಿದ್ದಿತು

೬. **ಕಂಪನಿಯ ಸನದಿನ ವಿಚಾರಣೆ**:- ಕ್ರಿ. ಶ ೧೮೧೩ ಕಂಪನಿಯ ಸನದಿನ ೨೦ ವರ್ಷದ ಅವಧಿಯು ಮುಗಿದದರಿಂದ ಪಾರ್ಲಮೆಂಟಿನಲ್ಲಿ ಇದರ ವಿಚಾರಣೆಯು ನಡೆಯಿತು. ಕೊನೆಗೆ, ಕಂಪನಿಯವರಂತೆ ಬೇಕಾದೆ ಇಂಗ್ಲಿಷರು ಹಿಂದುಸ್ಥಾನದೊಡನೆ ವ್ಯಾಪಾರ ಮಾಡಬಹುದು; ಚೀನದೊಡನೆಯ ವ್ಯಾಪಾರವನ್ನು ಮಾತ್ರ ಕಂಪನಿಯವರೇ ಸಾಗಿಸಬೇಕು ಎಂದು ನಿರ್ಣಯವಾಯಿತು.

೭. **ಮಿಂಟೋನ ಆಳಿಕೆಯ ಕೊನೆ**:— ಕ್ರಿ. ಶ. ೧೮೧೩ರಲ್ಲಿ ಮಿಂಟೋನು ವಿಲಾಯತಿಗೆ ಹೋದನು. ಇವನ ಆಳಿಕೆಯಲ್ಲಿ ಮದ್ರಾಸದಲ್ಲಿ **ರಯತವಾರಿ** ಪದ್ಧತಿಯು ಆರಂಭವಾಯಿತು. ಈ ದೇಶದ ಶಿಕ್ಷಣದ ಸಂಸ್ಥೆ

+ ಕ್ರಿ. ಶ. ೧೮೧೩ರಲ್ಲಿ ಇಂಗ್ಲಿಷ-ಫ್ರೆಂಚರಲ್ಲಿ ಒಪ್ಪಂದವಾಗಿ ಬುರ್ಬೋನವು ಫ್ರೆಂಚರಿಗೂ ಜಾವಾ ನಡುಗಡ್ಡೆಯು ಫ್ರೆಂಚರ ಅಂಕಿತರಾಗಿದ್ದ ಡಚ್ಚರಿಗೂ ಮರಳಿ ಬೊರೆತವು.

ಗಳಿಗೆ ಕಂಪನಿಯವರಿಂದ ಹಣದ ನೆರವು ಸಿಗಹತ್ತಿತು. ಕ್ರೈಸ್ತ ಧರ್ಮ ಪ್ರಸಾರಕ್ಕಾಗಿ ಕಲಕತ್ತೆಯಲ್ಲಿ ಒಂದು ಸಂಸ್ಥೆಯು ಉಂಟಾಯಿತು

೧೩ನೆಯ ಪಾಠ

ಮಾರ್ಕ್ವಿಸ್ ಆಫ್ ಹೆಸ್ಟಿಂಗ್ಸ್.

(ಕ್ರಿ. ಶ ೧೭೧೩-೧೭೭೩)

೧. **ಹೆಸ್ಟಿಂಗ್ಸನ ಆಳಿಕೆಯ ಧೋರಣೆ**:- ಮಿಂಟೋನ ತರುವಾಯ ಹೆಸ್ಟಿಂಗ್ಸನು ಗ ಜನರಲನಾದನು ಇವನು ಅಮೇರಿಕೆ, ಯುರೋಪಗಳಲ್ಲಾದ ಯುದ್ಧಗಳಲ್ಲಿ ಒಳ್ಳೆಯ ಅನುಭವ ಹೊಂದಿದ್ದನು. ಶಾಂತತೆಯ ಧೋರಣೆಯನ್ನು ಸಮರ್ಥಿಸುತ್ತ ವೆಲಸ್ಲಿಗೆ ಹೆಸರಿಡುವದರಲ್ಲಿ ಇವನೊಬ್ಬನಾಗಿದ್ದನು. ಆದರೆ ಹಿಂದುಸ್ಥಾನಕ್ಕೆ ಬಂದ ಬಳಿಕ ಬಾರ್ಲೊ-ಮಿಂಟೋ ಇವರ ಶಾಂತತೆಯ ಧೋರಣೆಯೇ ಗುರ್ಖರು, ಪೆಂಡಾರಿಗಳು, ಮರಾಠರು ಬಲಗೊಳ್ಳಲು ಕಾರಣವಾಯಿತು. ಎಂದು ಮನಗಂಡನು. ಆದದರಿಂದ ಇವನು ತನ್ನ ಮೂಲ ಧೋರಣೆಯನ್ನು ಬದಿಗಿಟ್ಟು, ವೆಲಸ್ಲಿಯ ಮುಂದಡಿಯ ಧೋರಣೆಯನ್ನೇ ಕೈಕೊಂಡನು; ಮತ್ತು ವೆಲಸ್ಲಿಯ ಕಾಲದಲ್ಲಿ ಅರೆಕಳಿಯಾಗಿದ್ದ ರಾಜ್ಯವಿಸ್ತಾರದ ಕೆಲಸವನ್ನು ಕಡೆಗಾಣಿಸಿದನು ಇವನಿರುವಾಗ ನೇಪಾಳದ ಯುದ್ಧ, ಮರಾಠರ ಕೊನೆಯ ಯುದ್ಧ ಹೀಗೆ ಮೂರು ಯುದ್ಧಗಳಾದವು.

೨. **ನೇಪಾಳದ ಗುರ್ಖರು**:— ಇವರು ಮೇಲಾದ ಕಲಿಗಳು. ಪಾಶ್ಚಾತ್ಯ ಯುದ್ಧಕಲೆಯನ್ನು ಅರಿತುಕೊಂಡಬಳಿಕ ರಾಜ್ಯವನ್ನು ಹಬ್ಬಿಸುವ ಇಚ್ಛೆಯಿಂದ ಇವರು ತಿಬೇಟ, ಭೂತಾನ, ಸಿಕಿಮ ಮುಂತಾದ ದೇಶಗಳ ಮೇಲೆ ದಾಳಿಮಾಡಹತ್ತಿದರು. ತಿಬೇಟದ **ಲ್ಹಾಸಾ** ಪಟ್ಟಣವನ್ನು ಸುಲಿದು ಕೊಳ್ಳಲು, ಚೀನದ ಬಾದಷಾಹನು ಸಿಟ್ಟಾಗಿ, ದೊಡ್ಡ ದಂಡನ್ನು ಕಳುಹಿ ಇವರನ್ನು ಸೋಲಿಸಿದನು. ಹೀಗೆ ಉತ್ತರದ ದಾರಿ ಕಟ್ಟಾಗಲು ಗುರ್ಖರು ದಕ್ಷಿಣದಲ್ಲಿ ತಮ್ಮ ರಾಜ್ಯವನ್ನು ಹಬ್ಬಿಸತೊಡಗಿದರು.

ಯುದ್ಧದ ಕಾರಣ:- **ಗೋರಖಪುರ, ಶೇನರಾಜ** ಎಂಬ ಜಿಲ್ಲೆಯೊಳಗಿನ ಕೆಲವು ಊರುಗಳ ಸಲುವಾಗಿ ಗುರ್ಖರಿಗೂ ಇಂಗ್ಲಿಷರಿಗೂ ಜಗಳ

ಹುಟ್ಟಿತು ಬಾರ್ಲೋ-ಮಿಂಟೋ ಇವರು ಆ ಊರುಗಳನ್ನು ಬಿಟ್ಟು ಕೊಡಬೇಕೆಂದು ಕೇಳಿದರೂ ಗುರ್ಖರು ಒಪ್ಪಲಿಲ್ಲ. ಆದರೆ ಇಂಗ್ಲಿಷರ ಆಗಿನ ಶಾಂತತೆಯ ಧೋರಣೆಯ ಮೂಲಕ ಯುದ್ಧವು ಸಂಭವಿಸಲಿಲ್ಲ. ಹೆಸ್ಟಿಂಗ್ಸನು ಬಂದಕೂಡಲೆ ಯುದ್ಧಕ್ಕೆ ಆರಂಭವಾಯಿತು.

ನೇಪಾಳದ ಯುದ್ಧ :— ಕ್ರಿ. ಶ. ೧೮೧೪ – ೧೮೧೬. ಹೆಸ್ಟಿಂಗ್ಸನು ಗುರ್ಖರ ಸೈನ್ಯಕ್ಕಿಂತ ದೊಡ್ಡದಾದ ಸೈನ್ಯವನ್ನು ಸಜ್ಜುಗೊಳಿಸಿ, ಅದನ್ನು ನಾಲ್ಕು ಭಾಗಮಾಡಿ, ನಾಲ್ವರು ಸೇನಾಪತಿಗಳ ಕಡೆಗೆ ಕೊಟ್ಟು, ಅವರನ್ನು ಬೇರೆಬೇರೆಯಾಗಿ ನೇಪಾಳದ ಮೇಲೆ ಸಾಗಿದನು. ಅವರಲ್ಲಿಯ **ಗಿಲ್ಲೆಸ್ಪಿ**ಯು ಗುರ್ಖರ **ಕಲುಂಗ** ಕೋಟೆಯ ಮೇಲೆ ಬಿದ್ದು ೫೦೦ ಜನರೊಂದಿಗೆ ಹತನಾದನು. **ಮಾರ್ಡಿಡೇಲ**ನು ಜಯಟಕವನ್ನೇರಿ ಸೋತನು. **ಮೋರ್ಲೆ**ಯು ಪೂರ್ವದಿಕ್ಕಿನಿಂದ ಗುರ್ಖರನ್ನು ಎದುರಿಸಿ ತನ್ನ ದಂಡಿನ ಎರಡೂ ತಂಡಗಳನ್ನು ಕಳೆದುಕೊಂಡನು ಇದನ್ನು ತಿಳಿದು ಹೆಸ್ಟಿಂಗ್ಸನು ಹೊಸ ಸೈನ್ಯವನ್ನು **ಮಾಲೋನ**ವ ಮೇಲೆ ಕಳುಹಿದನು. ಪಶ್ಚಿಮದಿಂದ ಸಾಗಿಬಂದ **ಆಕ್ಟರ್ಲೋನಿ**ಯು ಈ ಹೊಸ ಸೈನ್ಯವನ್ನು ಕೂಡಿಕೊಂಡು ಮಾಲೋನದ ಬಳಿಯಲ್ಲಿ ಗುರ್ಖ ಸರದಾರನಾದ **ಅಮರಸಿಂಗ**ನನ್ನು ಸೋಲಿಸಿದನು. ಅಮರಸಿಂಗನು ಹಿಂಜರಿದು ರಾಜಧಾನಿಗೆ ಹೋಗಿ ಗುರ್ಖರನ್ನು ಹುರುಪುಗೊಳಿಸಿ ಮತ್ತೆ ಯುದ್ಧಕ್ಕೆ ಅಣಿಯಾದನು. ಕೂಡಲೆ ಆಕ್ಟರಲೋನಿಯು ಮುಂದಕ್ಕೆಸಾಗಿ **ಮಕ್ವಾನಪುರ**ದ ಯುದ್ಧದಲ್ಲಿ ಗುರ್ಖರನ್ನು ಮತ್ತೆ ಸೋಲಿಸಿದನು. ಆಗ ಗುರ್ಖರು ಒಪ್ಪಂದ ಮಾಡಿಕೊಂಡರು.

ಸೇಗಾವುಲಿಯ ಒಪ್ಪಂದ :— ಕ್ರಿ. ಶ. ೧೮೧೬. ೧. **ಕೆಮಾವುನ್ ಗಢವಾಲ** ಈ ಪ್ರಾಂತಗಳನ್ನೂ **ತರಾಯಿ** ಅರಣ್ಯವನ್ನೂ ಗುರ್ಖರು ಇಂಗ್ಲಿಷರಿಗೆ ಕೊಡಬೇಕು. ೨. ತರಾಯಿಯ ಬದಲಾಗಿ ಇಂಗ್ಲಿಷರು ವರ್ಷಕ್ಕೆ ಎರಡು ಲಕ್ಷ ರೂಪಾಯಿಗಳನ್ನು ಗುರ್ಖರಿಗೆ ಕೊಡಬೇಕು. ೩. **ಸಿಕಿಮ**ದ ಅರಸನ ಮೇಲಿನ ಅಧಿಕಾರವನ್ನು ಗುರ್ಖರು ಬಿಡಬೇಕು. ೪. ಕಾಟಮಾಂಡುವಿನಲ್ಲಿ ಒಬ್ಬ ಇಂಗ್ಲಿಷ ರೆಸಿಡೆಂಟನು ಇರಬೇಕು.

೩. **ಪೆಂಡಾರಿಗಳ ಯುದ್ಧ :—** ಕ್ರಿ. ಶ. ೧೮೧೭. ಸಹಾಯಕ ಸೈನ್ಯ ಪದ್ಧತಿಗೆ ಒಳಗಾದ ಅರಸರ ಸಂರಕ್ಷಣೆಗೆ ಇಂಗ್ಲಿಷರು ಕೊಣೆಗಾರರಾಗಿರಲು

ಆ ಅರಸರು ತಮ್ಮ ಸೈನಿಕರನ್ನು ಕೆಲಸದಿಂದ ತೆಗೆಯುತ್ತಿದರು. ಹೀಗೆ ಸೈನ್ಯದಿಂದ ಹೊರದೂಡಲ್ಪಟ್ಟ ಜನರಿಗೆ ಕೆಲಸವಿಲ್ಲದಾಗಲು ಅವರಲ್ಲಿಯ ಬಹು ಜನರು ಒಟ್ಟಾಗಿ ದೇಶದಲ್ಲಿ ಕಳವು – ಸುಲಿಗೆಗಳನ್ನು ಮಾಡತೊಡಗಿದರು. ಕ್ರಿ ಶ. ೧೮೧೭ರ ಸುಮಾರಿಗೆ ಇಂಥ ಜನರ ಸಂಖ್ಯೆಯು ೬೦ ಸಾವಿರಕ್ಕೆ ಸಮೀಪಿಸಿತು ಇವರಿಗೆ **ಪೆಂಡಾರಿಗಳೆಂಬ** ಹೆಸರು. ಮುಸಲ್ಮಾನ, ಜಾಟ, ಮರಾಠ, ಮುಂತಾದ ಹಲವು ಬಗೆಯ ಜನರು ಈ ತಂಡದಲ್ಲಿ ಸೇರಿ ಕೊಂಡಿದ್ದರು ಮಧ್ಯಹಿಂದುಸ್ಥಾನದಲ್ಲಿ ಅರಾಜಕತೆಯು ಹೆಚ್ಚು ಇದ್ದದ ರಿಂದ ಅಲ್ಲಿ ಈ ಪೆಂಡಾರಿಗಳು ಮೆಟ್ಟಾಗಿದ್ದರು

ನೇಪಾಳದ ಯುದ್ಧವು ನಡೆದಾಗ ಪೆಂಡಾರಿಗಳ ಉಪಟಳವು ಹೆಚ್ಚಾ-ಯಿತು. ಆದದರಿಂದ ಆ ಯುದ್ಧವು ಮುಗಿದೊಡನೆ ಹೆಸ್ಟಿಂಗ್ಸನು ಇವರನ್ನು ತಗ್ಗಿಸುವ ನಿಶ್ಚಯಮಾಡಿ, ಚಿಕ್ಕ ದೊಡ್ಡ ಅರಸರ ನೆರವಿನಿಂದ ಒಂದು ಲಕ್ಷ ೨೦ ಸಾವಿರ ಸೈನ್ಯವನ್ನು ಸಜ್ಜುಗೊಳಿಸಿದನು ಈ ದೊಡ್ಡ ಸೈನ್ಯವು ಮೂರು ಭಾಗವಾಗಿ ಹೊರಟು ಪೆಂಡಾರಿಗಳನ್ನು ಮಾಳವದಲ್ಲಿ ಸುತ್ತುಗಟ್ಟಿತು. ಆಗ ಅವರು ಹಣ್ಣಾದರು. ಅವರ ಮುಂದಾಳುಗಳಲ್ಲಿ **ಕರೀಮಖಾನ, ಅಮೀರಖಾನ** ಇವರು ಶರಣು ಬಂದುದರಿಂದ ಹೆಸ್ಟಿಂಗ್ಸನು ಇವರಿಗೆ ಜಹಗೀರು ಹಾಕಿಕೊಟ್ಟನು. ಉಳಿದ ಪೆಂಡಾರಿಗಳು ಊರುಗಳನ್ನು ಹೊಂದಿ ಕೊಂಡು ಉದ್ಯೋಗದಿಂದ ಜೀವಿಸಹತ್ತಿದರು ಹೀಗಾಗಿ ಪೆಂಡಾರಿಗಳ ಹಾವಳಿಯು ಅಡಗಿತು.

೪. **ಮರಾಠರ ಮೂರನೆಯ ಯುದ್ಧ** :— ಕ್ರಿ. ಶ ೧೮೧೭–೧೮೧೮. **ಕಾರಣಗಳು**— ೧. ಕಳೆದುಕೊಂಡ ಸ್ವಾತಂತ್ರ್ಯವನ್ನು ಮರಳಿ ಗಳಿಸುವ ಇಚ್ಛೆಯು ಪೇಶವೆಗೂ ಸರದಾರರಿಗೂ ಉಂಟಾಯಿತು ೨. ಗಾಯಕವಾಡನ ವಕೀಲನಾದ ಗಂಗಾಧರಶಾಸ್ತ್ರಿಯ ಕೊಲೆಯನ್ನು ಬಾಜೀರಾಯನೇ ತ್ರ್ಯಂಬ-ಕಜಿಯಿಂದ ಮಾಡಿಸಿದನೆಂದು ಇಂಗ್ಲಿಷರು ತಿಳಿದುಕೊಂಡರು ೩. ಬಾಜೀ-ರಾಯನು ಸಿಂಧೆ, ಹೋಳಕರ, ಭೋಸಲೆ ಇವರನ್ನು ಇಂಗ್ಲಿಷರ ಕೂಡ ಕಾದಲು ಹುರಿದುಂಬಿಸುತ್ತಿದ್ದನು **ಯುದ್ಧಗಳು** :— ಇಂಗ್ಲಿಷರ ದಂಡು ಪುಣೆಯ ಮೇಲೆ ಸಾಗಿಬಂದಿತು. ಖಡಕಿ, ಕೋರೆಗಾವ, ಅಷ್ಟಿ ಎಂಬಲ್ಲಿ ಯುದ್ಧಗಳಾದವು. ಕೊನೆಯ ಯುದ್ಧದಲ್ಲಿ ಪೇಶವೆಯ ಸೇನಾಪತಿಯಾದ

ಬಾವು ಗೋಖಲೆಯು ಬೀಳಲು ಇಂಗ್ಲಿಷರಿಗೆ ಜಯದೊರೆಯಿತು. ಬಳಿಕ ಅವರು ಬಾಜೀರಾಯಸಿಗೆ ನರ್ಷಾಶನವನ್ನು ಗೊತ್ತುಮಾಡಿ ಅವನನ್ನು ಬಿಠೂರದಲ್ಲಿ ಇಟ್ಟರು. ಮತ್ತು ಮರಾಠರ ರಾಜ್ಯವನ್ನು ತಮ್ಮ ರಾಜ್ಯಕ್ಕೆ ಕೂಡಿಸಿಕೊಂಡರು

೫. ಹೆಸ್ಟಿಂಗ್ಸನ ಸುಧಾರಣೆಗಳೂ ಯೋಗ್ಯತೆಯೂ:— ಹೆಸ್ಟಿಂಗ್ಸನು ಹೊಸ ರಾಜಮಾರ್ಗಗಳನ್ನೂ ಪೂಲುಗಳನ್ನೂ ಕಟ್ಟಿಸಿದನು. ಶಾಲೆ-ಕಾಲೇಜುಗಳನ್ನು ಉಂಟುಮಾಡಿ ಶಿಕ್ಷಣಕ್ಕೆ ಅನುಕೂಲ ಮಾಡಿಕೊಟ್ಟನು. ವರ್ತಮಾನ ಪತ್ರದ ಸಂಬಂಧದ ನಿರ್ಬಂಧಗಳನ್ನು ತೆಗೆದುಹಾಕಿ, ಅವುಗಳಿಗೆ ಉತ್ತೇಜನ ಕೊಟ್ಟನು. ತಫೆಲಖ ಫಿರೋಜಷಾಹನು ಕಟ್ಟಿಸಿದ್ದ ಯಮುನೆಯ ಕಾಲುವೆಯನ್ನು ಸರಿಪಡಿಸಿ ಒಕ್ಕಲತನಕ್ಕೆ ಸಹಾಯ ಮಾಡಿದನು.

ವೆಲಸ್ಲಿಯ ಕಾಲಕ್ಕೆ ಉಳಿದಿದ್ದ ರಾಜ್ಯವಿಸ್ತಾರದ ಕೆಲಸವನ್ನು ಇವನು ಕೈಕೊಂಡು ಪೂರ್ಣಗೊಳಿಸಿದನು. ಇಂಗ್ಲಿಷರೇ ಈ ದೇಶದ ಸಮ್ರಾಜರೆಂಬ ಮಾತು ಇವನ ಆಳಿಕೆಯಲ್ಲಿ ನಿಶ್ಚಿತವಾಯಿತು. ವೆಲಸ್ಲಿಯಂತೆ ಬರಿಯ ರಾಜ್ಯವಿಸ್ತಾರದಿಂದ ಇವನು ಸಮಾಧಾನ ಪಡದೆ, ಹಲವು ಜನಹಿತದ ಕೆಲಸಗಳನ್ನು ಮಾಡಿ, ಈ ದೇಶದ ಜನರು ಇಂಗ್ಲಿಷರ ಹಿತಚಿಂತಕರಾಗುವಂತೆ ಯತ್ನಿಸಿದನು. ಇವನ ಸಹಾಯಕರಾದ ಎಲ್ಫಿನ್ಸ್ಟನ್, ಮಾಲಕಮ್, ಮೆಟ್‌ಕಾಫ್, ಆಕ್ಟರ ಲೋನಿ ಇವರು ಶೌರ್ಯ-ಚಾತುರ್ಯಗಳಿಂದ ಕೈಕೊಂಡ ಕೆಲಸಗಳನ್ನು ನೆರವೇರಿಸಿದುದರಿಂದಲೇ ಇವನ ಆಳಿಕೆಯು ಹೆಸರಾಯಿತೆಂದು ಹೇಳಬಹುದು. ಕೆಲಸದ ಅವಧಿಯನ್ನು ಮುಗಿಸಿ ಇವನು ಇಂಗ್ಲಂಡಿಗೆ ಹೋದ ಬಳಿಕ **ಲಾರ್ಡ** ಎಂಬ ಪದವಿಯನ್ನು ಪಡೆದನು. ಇವನ ತರುವಾಯ **ಅಮ್ಹರ್ಸ್ಟನು** ಗವರ್ನರ ಜನರಾದನು.

೧೪ನೆಯ ಪಾಠ

ಲಾರ್ಡ ಆಮ್ಹರ್ಸ್ಟ (ಕ್ರಿ. ಶ. ೧೮೨೩-೧೮೨೮)


ಲಾರ್ಡ ಉಯಿಲಿಯಮ್ ಬೆಂಟಿಂಕ (ಕ್ರಿ ಶ. ೧೮೨೮-೧೮೩೫)

೧. ಬ್ರಹ್ಮದೇಶದ ಮೊದಲನೆಯ ಯುದ್ಧ:— ಕ್ರಿ. ಶ. ೧೮೨೪-೧೮೨೬. **ಬ್ರಹ್ಮದೇಶದ ಪೂರ್ವವೃತ್ತ**- ಬ್ರಹ್ಮದೇಶದಲ್ಲಿ ಬಹುಕಾಲದಿಂದ

ಬ್ರಹ್ಮೀಜನರ ಸಣ್ಣ ಸಣ್ಣ ರಾಜ್ಯಗಳಿದ್ದವು. ಅವುಗಳಲ್ಲಿ **ಅವಾ** ಮತ್ತು **ಪೇಗೂ** ಇವೆರಡು ಮುಖ್ಯವಾಗಿದ್ದವು. ಮೊದಲು ಪೇಗು ಪ್ರಾಂತದವರು ಅವಾದ ಮೇಲೆ ತಮ್ಮ ವರ್ಚಸ್ಸನ್ನು ನೆಲೆಸಿದ್ದರು. ಆದರೆ ಕ್ರಿ ಶ. **೧೭೬೦**ರ ಸುಮಾರಿಗೆ **ಅಲೊಂಪ್ರಾ** ಎಂಬವನು ಪ್ರಬಲನಾಗಿ ಅವಾ ಪ್ರಾಂತಕ್ಕೆ ಸ್ವಾತಂತ್ರ್ಯವನ್ನು ಒದಗಿಸಿಕೊಟ್ಟನಲ್ಲದೆ ಪೇಗು ಸಹಿತ ಇಡೀ ಬ್ರಹ್ಮದೇಶವನ್ನು ಗೆದ್ದು ತನ್ನ ರಾಜ್ಯವನ್ನು ಬಲಿಸಿದನು. ಈ ಸಮಯದಲ್ಲಿ ಇಂಗ್ಲಿಷರು ಪೇಗು ಪ್ರಾಂತದವರಿಗೆ ಮದ್ದು-ಗುಂಡುಗಳನ್ನು ಪೂರೈಸಿದ್ದಕ್ಕೆ ಇವನು ಸಿಟ್ಟಾಗಿ ಹಲವು ಜನ ಇಂಗ್ಲಿಷರನ್ನು ಕೊಲ್ಲಿಸಿದನು ಇವನ ತರುವಾಯ ಇವನ ಮಗನ ಮತ್ತು ಮೊಮ್ಮಗನ ಕಾಲದಲ್ಲಿ ಬ್ರಹ್ಮೀಜನರು **ಆರಾಕಾನ್, ಅಸಾಮು, ಮಣಿಪುರ** ಈ ಪ್ರಾಂತಗಳನ್ನು ವಶಮಾಡಿಕೊಂಡರು. ಆಗ ಅಲ್ಲಿಯ ಹಲವು ಜನರು **ಚಿತ್ತಗಾಂಗ** ಜಿಲ್ಲೆಯಲ್ಲಿದ್ದ ಇಂಗ್ಲಿಷರ ಬೆನ್ನು ಬಿದ್ದರು. ಅವರನ್ನು ಕಳುಹಿರೆಂದು ಬ್ರಹ್ಮೀಜನರು **ಕೇಳಿದ್ದಕ್ಕೆ** ವೆಲಸ್ಲಿಯೂ ಹೆಸ್ಟಿಂಗ್ಸನೂ ಒಪ್ಪಿರಲಿಲ್ಲ **ಯುದ್ಧದ ಕಾರಣಗಳು**:- ಹೀಗಿರಲು ಕ್ರಿ. ಶ **೧೮೨೪**ರಲ್ಲಿ ಬ್ರಹ್ಮೀಜನರು **ಶಾಹುಪುರಿ** ಎಂಬ ನಡುಗಡ್ಡೆಯನ್ನು ಹಿಡಿದುಕೊಂಡು ಅಲ್ಲಿದ್ದ ಇಂಗ್ಲಿಷರನ್ನು ಓಡಿಸಿದರು. ಆಗ **ಅಮ್ಹರ್ಸ್ಟ್**ನು ಬ್ರಹ್ಮೀಗಳೊಡನೆ ಯುದ್ಧವನ್ನು ಸಾರಿದನು. **ಯುದ್ಧದ ಪ್ರಸಂಗಗಳು**:- ಇಂಗ್ಲಿಷರ ದಂಡು ಮೂರು ದಾರಿಗಳಿಂದ ಬ್ರಹ್ಮದೇಶದ ಮೇಲೆ ಸಾಗಿತು. ಅಸಾಮದ ದಾರಿಯಿಂದ ಹೊರಟ ದಂಡು ಕೆಡಕು ದಾರಿ ಕೆಟ್ಟ ಹವೆ ಇವುಗಳ ಮೂಲಕ ಹಿಂದುರಿಗಿತು. ಆರಾಕಾನದ ಕಡೆಯಿಂದ ಹೋದ ದಂಡು ಬ್ರಹ್ಮದೇಶದ ಸೇನಾಪತಿಯಾದ **ಮಹಾಬಂದೂಲ**ನಿಂದ ಸೋಲಿಸಲ್ಪಟ್ಟಿತು. ಆದರೆ ಮದ್ರಾಸದಿಂದ ಜಲಮಾರ್ಗವಾಗಿ ಸಾಗಿದ **ಆರ್ಚಿಬಾಲ್ಡ ಕ್ಯಾಂಬೇಲ**ನಿಗೆ ಮಾತ್ರ ಜಯವಾಯಿತು. ಅವನು ಇರಾವತಿಯ ಮುಖದಗುಂಟ ಉತ್ತರಕ್ಕೆ ಸಾಗಿ **ರಂಗೂನ** ಪಟ್ಟಣವನ್ನು ಹಿಡಿದುಕೊಂಡನು. ಇದನ್ನು ತಿಳಿದು ಮಹಾಬಂದೂಲನು ಕ್ಯಾಂಬೇಲನ ಮೇಲೆ ಸಾಗಿಬಂದನು. ಆದರೆ **ಡೊನ್ಯಾಬು** ಎಂಬಲ್ಲಿ ಯುದ್ಧವಾಗಿ ಮಹಾಬಂದೂಲನು ಗುಂಡುತಾಗಿ ಸತ್ತನು. ಕ್ರಿ ಶ. **೧೮೨೫**. ಬಳಿಕ ಕ್ಯಾಂಬೇಲನು ಮುಂದೆ ಸಾಗಿ **ಪ್ರೋಮ** ಪಟ್ಟಣವನ್ನು ಹಿಡಿದುಕೊಂಡು **ಪಾಘನ** ಎಂಬಲ್ಲಿ ಬ್ರಹ್ಮೀ ಸೈನ್ಯವನ್ನು ಮತ್ತೆ ಸೋಲಿಸಲು ಬ್ರಹ್ಮೀ ಅರಸನು ಒಪ್ಪಂದಮಾಡಿಕೊಂಡನು. **ಎಂದಬು**

ಒಪ್ಪಂದ— ಕ್ರಿ. ಶ **೧೮೨೬.** ೧. ಬ್ರಹ್ಮೀ ಅರಸನು ಆಸಾಮು, ಅರಾಕಾನ ತೇನಾಸರೀಮು ಎಂಬ ಪ್ರಾಂತಗಳನ್ನೂ ಒಂದುಕೋಟಿ ರೂಪಾಯಿಗಳನ್ನೂ ಇಂಗ್ಲಿಷರಿಗೆ ಕೊಡಬೇಕು. ೨. ಇಂಗ್ಲಿಷರ ವಕೀಲನನ್ನು ತಮ್ಮಲ್ಲಿಟ್ಟುಕೊಳ್ಳಬೇಕು. ೩. ಕಾಚರ, ಮಣಿಪುರ ಮುಂತಾದವುಗಳ ಅರಸರ ಮೇಲೆ ಅಧಿಕಾರ ನಡೆಯಿಸಬಾರದು.

೨. ಬರಾಕಪುರದ ದಂಗೆ:— ಬ್ರಹ್ಮದೇಶದ ಯುದ್ಧವು ನಡೆದಾಗ ಕಲಕತ್ತೆಯ ನೆರೆಯ **ಬರಾಕಪುರ**ದ ಸೈನ್ಯವನ್ನು ಸಮುದ್ರಮಾರ್ಗವಾಗಿ ಇರಾವತಿಯ ಮುಖದ ಕಡೆಗೆ ಕಳಿಸುವದಿದ್ದಿತು. ಆದರೆ ಆ ಸೈನ್ಯದಲ್ಲಿಯ ಹಿಂದೀ ಸೈನಿಕರಲ್ಲಿ ' ಸಮುದ್ರ ಪ್ರವಾಸದಿಂದ ಧರ್ಮವು ಕೆಡುವದು ' ಎಂಬ ಕಲ್ಪನೆಯಿದ್ದುದರಿಂದ ಅವರು ಹೋಗಲೊಪ್ಪದೆ ದಂಗೆಯನ್ನು ಎಬ್ಬಿಸಿದರು. ಕೂಡಲೆ ಅಧಿಕಾರಿಗಳು ಬಹು ಜನರನ್ನು ತೋಪಿನ ಬಾಯಿಗೆ ಕೊಟ್ಟು ದಂಗೆಯನ್ನು ಅಡಗಿಸಿದರು.



ಭರತಪುರದ ಕೋಟೆ

೩. ಭರತಪುರದ ಮುತ್ತಿಗೆ:— ಕ್ರಿ. ಶ. **೧೮೨೬.** ಭರತಪುರದ ಅರಸರು **ಜಾಟ** ಎಂಬ ಕುಲದವರು. ಹದಿನೆಂಟನೆಯ ಶತಕದ ಮಧ್ಯದ

ಸುಮಾರಿಗೆ ಇಲ್ಲಿಯ ಅರಸನಾದ ಸುರಜಮಲನೆಂಬವನು ಒಳ್ಳೇ ಶೂರನೆಂದು ಹೆಸರಾಗಿದ್ದನು ಇವನು **ಭರತಪುರ, ಡೀಗ** ಮುಂತಾದ ಬಲವಾದ ಕೋಟೆಗಳನ್ನು ಕಟ್ಟಿಸಿದ್ದನು ಭರತಪುರದ ಕೋಟೆಯಂತು ತೋಪುಗಳ ಹೊಡೆತಕ್ಕೂ ಮಣಿಯಲಿಲ್ಲ. ಕ್ರಿ. ಶ. **೧೮೦೪**ರಲ್ಲಿ ಜನರಲ್ ಲೇಕನು ಭರತಪುರವನ್ನು ಮುತ್ತಿ ನಾಲ್ಕು ಸರತಿ ಸೋತ ಸಂಗತಿಯು ಹಿಂದೆ ಹೇಳಿದೆ. ಮುಂದೆ ಕ್ರಿ. ಶ. **೧೮೨೫**ರಲ್ಲಿ ಇಲ್ಲಿಯ ಅರಸನಾದ ರಣಜಿತಸಿಂಗನು ಸಾಯಲು ಅವನ ಮಗನಾದ ೭ ವರ್ಷದ **ಬಲವಂತಸಿಂಗ** ಎಂಬವನಿಗೆ ಪಟ್ಟವಾಯಿತು. ಆದರೆ ಇವನ ಚಿಕ್ಕಪ್ಪನ ಮಗನಾದ **ದುರ್ಜನಸಾಲ**ನು ಇವನನ್ನು ತಳ್ಳಿ ಪಟ್ಟವನ್ನು ಹಿಡಿದು ಕೊಂಡನು. ಆಗ ಆವ್ಹರ್ಸ್ಟನು ಬಲವಂತಸಿಂಗನ ಕಡೆಗಾಗಿ, ಭರತಪುರವನ್ನು ಮುತ್ತಲು ಸೇನಾಪತಿ **ಕಾಂಬರಮೂರ**ನನ್ನು ಕಳುಹಿದನು. ಈ ಸರತಿಗೂ ತೋಪುಗಳ ಉಪಯೋಗವಾಗಲಿಲ್ಲ. ಆಗ ಹದಿನೈದು ಖಂಡಗಪಷ್ಟು ಮದ್ದು ತುಂಬಿ ಸುರಂಗಹಚ್ಚಲು ಗೋಡೆಯು ಒಡೆಯಿತು. ಬಳಿಕ ಇಂಗ್ಲಿಷ ಸೈನ್ಯವು ಕೋಟೆಯನ್ನು ಹೊಕ್ಕು, ದುರ್ಜನಸಾಲನನ್ನು ಸೆರೆಹಿಡಿದು ಕೋಟೆಯನ್ನು ನೆಲಸಮಮಾಡಿತು. ಬಲವಂತಸಿಂಗನು ಇಂಗ್ಲಿಷರ ಮಾಂಡಲಿಕನಾದನು.

೪. ಬೆಂಟಿಂಕನು ಗ. ಜನರಲನಾದದ್ದು :— ಲಾರ್ಡ ಆಮ್ಹರ್ಸ್ಟನ ತರುವಾಯ **ಲಾರ್ಡ ಉಯಿಲಿಯಮ್ ಬೆಂಟಿಂಕ**ನು ಗ. ಜನರಲನಾಗಿ ಬಂದನು. ಕ್ರಿ ಶ **೧೮೨೮.** ಮೊದಲು ಇವನು ಮದ್ರಾಸದ ಗವ್ಹರ್ನರನಾಗಿದ್ದು ವೆಲೂರ ದಂಗೆಯ ಪ್ರಸಂಗದಲ್ಲಿ ಕೆಲಸದಿಂದ ತೆಗೆಯಲ್ಪಟ್ಟಿದ್ದನು. ಆದರೆ ಮುಂದೆ ನೆಪೋಲಿಯನನೊಡನೆ ಆದ ಯುದ್ಧದಲ್ಲಿ ಮಹತ್ವದ ಕೆಲಸಗಳನ್ನು ಮಾಡಿ ಹೆಸರಾದನು. ಇವನು ಬರುವಷ್ಟರಲ್ಲಿ ರಾಜ್ಯವಿಸ್ತಾರದ ಮತ್ತು ಗಡಿನಾಡುಗಳ ಭದ್ರತೆಯ ಕೆಲಸಗಳು ಮುಗಿದಿದ್ದವು. ಅಲ್ಲದೆ ಇವನು ಶಾಂತತೆಯನ್ನು ಕಾದುಕೊಂಡು ಸುಧಾರಣೆಗಳನ್ನು ಮಾಡುವಲ್ಲಿ ಹೆಚ್ಚು ಮನಸ್ಸುಳ್ಳವನಾಗಿದ್ದನು. ಆದದರಿಂದ ಇವನ ಕಾಲದಲ್ಲಿ ಯುದ್ಧಗಳು ಉಂಟಾಗಲಿಲ್ಲ.

೫. ಬೆಂಟಿಂಕನ ರಾಜಕೀಯ ಸುಧಾರಣೆಗಳು :— **೧. ಹಣದ ತೊಂದರೆಯನ್ನು ತಪ್ಪಿಸಿದ್ದು**– ಬ್ರಹ್ಮದೇಶದ ಯುದ್ಧಕ್ಕೆ ಸುಮಾರು ೧೦॥ ಕೋಟಿ ರೂಪಾಯಿಗಳು ವೆಚ್ಚವಾದುದರಿಂದ ಕಂಪನಿ ಸರಕಾರಕ್ಕೆ ಬಹಳ

ಸಾಲವಾಗಿತ್ತು. ಬೆಂಟಿಂಕನು ಸೈನ್ಯದ ಅಧಿಕಾರಿಗಳ ಭತ್ತೆಯನ್ನು ನಿಲ್ಲಿಸಿಯೂ ಮುಲಕಿ ಅಧಿಕಾರಿಗಳ ಸಂಬಳವನ್ನು ಕಡಿಮೆಮಾಡಿಯೂ ವೆಚ್ಚವನ್ನು ಉಳಿಸಿದನು. ಮತ್ತು ಆಗ್ರಾ, ಅಯೋಧ್ಯಾ ಈ ಪ್ರಾಂತಗಳ ಭೂಮಿಯನ್ನು ಅಳೆದು ತೆರಿಗೆಯನ್ನು ಗೊತ್ತುಮಾಡಿಯೂ ಸರಕಾರಕ್ಕೆ ಹಣಕೊಟ್ಟು ಗುತ್ತಿಗೆ ಹಿಡಿದವರೇ ಜಪ್ತುವಿನ ಮಾರಾಟಮಾಡಬೇಕೆಂಬ ಕಟ್ಟುಮಾಡಿಯೂ ಉತ್ಪನ್ನವನ್ನು ಹೆಚ್ಚಿಸಿದನು. ಇದರಿಂದ ಕಂಪನಿಯ ಸಾಲವು ತೀರಿ, ಖಜಾನೆಯಲ್ಲಿ ಶಿಲುಕು ಉಳಿಯಹತ್ತಿತು. **೨. ನ್ಯಾಯಪದ್ಧತಿ**— ಬೆಂಟಿಂಕನು ಕಾರ್ನವಾಲೀಸನ ಕಾಲದ ಪ್ರಾಂತಿಕ ಅಪೀಲು ಕೋರ್ಟುಗಳನ್ನು ತೆಗೆದುಹಾಕಿ ಜಿಲ್ಲೆಯ **ಜಜ್ಜರ** ಅಧಿಕಾರಿಗಳನ್ನು ಹೆಚ್ಚಿಸಿದನು. ಮತ್ತು ಕಲೆಕ್ಟರರಿಗೆ **ಮ್ಯಾಜಿಸ್ಟ್ರೇಟನ** ಅಧಿಕಾರವನ್ನು ಕೊಟ್ಟನು. **೩. ಹಿಂದೀ ಜನರಿಗೆ ಅಧಿಕಾರದ ಸ್ಥಳಗಳನ್ನು ಕೊಟ್ಟದ್ದು**— ಯೋಗ್ಯತೆಯುಳ್ಳ ಹಿಂದೀ ಜನರಿಗೆ ಅಧಿಕಾರದ ಸ್ಥಳಗಳು ದೊರೆಯಹತ್ತಿದವು. ನ್ಯಾಯಖಾತೆಯಲ್ಲಂತು ಹಿಂದೀಯರನ್ನು ನಿಯಮಿಸಿಕೊಳ್ಳುವದು ಬೆಂಟಿಂಕನಿಗೆ ಅನಿವಾರ್ಯವೆನಿಸಿತು **೪. ಸರಕಾರೀ ಲೆಕ್ಕಪತ್ರಗಳಲ್ಲಿ ದೇಶೀಯ ಭಾಷೆಯ ಉಪಯೋಗ**— ಮುಸಲ್ಮಾನರ ಆಳಿಕೆಯಿಂದ ಸರಕಾರಿ ಲೆಕ್ಕಪತ್ರಗಳೆಲ್ಲ **ಪಾರ್ಸೀ** ಭಾಷೆಯಲ್ಲಿಯೇ ಬರೆಯಲ್ಪಡುತ್ತಿದ್ದವು ಅದು ತಪ್ಪಿ ದೇಶೀಯ ಭಾಷೆಗಳಲ್ಲಿಯೇ ಅವುಗಳನ್ನು ಬರೆಯಲು ಆರಂಭವಾಯಿತು.

೧೫ನೆಯ ಪಾಠ

ಲಾರ್ಡ ಉ. ಬೆಂಟಿಂಕ. **ಸರ್ ಚಾರ್ಲಸ ಮೆಟ್‌ಕಾಫ್.**

(ಮುಂದೆ ಸಾಗಿದೆ) (ಕ್ರಿ. ಶ. ೧೮೩೫-೧೮೩೬)

೧. ಬೆಂಟಿಂಕನ ರಾಜ್ಯವಿಸ್ತಾರ:— ಸಹಾಯಕ ಸೈನ್ಯಪದ್ಧತಿಗೆ ಒಳಗಾದಂದಿನಿಂದ ದೇಶೀಯ ಅರಸರಿಗೆ ಸಂರಕ್ಷಣೆಯ ಕೆಲಸವು ಇಲ್ಲದಾಯಿತು. ಇದರಿಂದ ಬಹುಜನ ಅರಸರು ವಿಲಾಸಿಗಳೂ ದುರ್ವ್ಯಸನಿಗಳೂ ಆದರು. ಆವರೊಳಗಿನ ಕೆಲವರಂತು ಪ್ರಜೆಗಳನ್ನು ಪೀಡಿಸಿ ಹಣವೆತ್ತಹತ್ತಿದರು

ಈ ರೀತಿ ಅವ್ಯವಸ್ಥಿತವಾದ ಕೆಲವು ಸಂಸ್ಥಾನಗಳ ಕಾರಭಾರವಲ್ಲಿ ಬೆಂಟಿಂಕನು ಕೈಹಾಕಿದನು. ಅವುಗಳ ವಿವರ :— **೧. ಮೈಸೂರು**- ಮುಮ್ಮಡಿ

ಕೃಷ್ಣರಾಜನು ಸರಿಯಾಗಿ ಆಳದೆ ಪ್ರಜೆಗಳನ್ನು ಪೀಡಿಸಿದ್ದರಿಂದ ಬೆಂಟಿಂಕನು ಅವನನ್ನು ಪಟ್ಟದಿಂದ ದೂರಮಾಡಿ ಮೈಸೂರ ಕಾರಭಾರವನ್ನು ರೆಸಿಡೆಂಟನಿಂದ ಸಾಗಿಸಿದನು. **೧೮೩೧. ೨. ಕೂರ್ಗ (ಕೊಡಗು)**– ಕೊಡಗಿನ ಅರಸನಾದ ವೀರರಾಜೇಂದ್ರನು ದುರ್ವ್ಯಸನಿಯೂ ತಲೆತಿರಕನೂ ಆದದರಿಂದ ಅವನನ್ನು ತಳ್ಳಿ ಆ ಸೀಮೆಯನ್ನು ಬೆಂಟಿಂಕನು ಇಂಗ್ಲಿಷರ ರಾಜ್ಯಕ್ಕೆ ಕೂಡಿಸಿದನು- ಕ್ರಿ. ಶ. **೧೮೩೪. ೩. ಸಿಲ್ಹೆಟ**- ಅಲ್ಲಿಯ ಅರಸು ಬಂಗಾಲ ಪ್ರಾಂತದ ಹಲವರನ್ನು ಕೊಲೆಗೊಳಿಸಿದ್ದರಿಂದ ಅದು ಖಾಲಸಾತ ಆಯಿತು. **೪. ಕಾಚಾರ**– ಈ ಸಂಸ್ಥಾನದ ಅರಸನು ಕ್ರಿ. ಶ. ೧೮೩೦ರಲ್ಲಿ ಸತ್ತನು. ಆಗ ಪಟ್ಟದ ಹಕ್ಕುದಾರರಿಲ್ಲದ್ದರಿಂದ ಈ ರಾಜ್ಯವೂ ಇಂಗ್ಲಿಷರ ವಶವಾಯಿತು

೨. ಜನಹಿತದ ಸುಧಾರಣೆಗಳು:— **೧. ಸತಿಹೋಗುವದನ್ನು ತಡೆದದ್ದು**— 'ಸತಿಹೋಗುವದು' ಎಂದರೆ, ಗಂಡನು ಸಾಯಲು ಹೆಂಡತಿಯು ಅವನ ಚಿತೆಯಲ್ಲಿ ಹಾರಿಕೊಂಡು ಸಾಯುವದು ಈ ಪದ್ಧತಿಯು ನಮ್ಮದೇಶದಲ್ಲಿ ಬಹುಕಾಲದಿಂದ ರೂಢಿಯಲ್ಲಿತ್ತು ಮೊದಲು ಸ್ತ್ರೀಯರನ್ನು ಸತಿಹೋಗಲು ಯಾರೂ ಒತ್ತಾಯಪಡಿಸುತ್ತಿರಲಿಲ್ಲ. ಸ್ವೇಚ್ಛೆಯಿಂದ ಸತಿಹೋಗುವ ಪತಿವ್ರತಾ ಸ್ತ್ರೀಯರನ್ನು ಒಳ್ಳೆಯ ಗೌರವದಿಂದ ಕಾಣುತ್ತಿದ್ದರು ಆದರೆ ಮುಂದಿನ ಕಾಲದಲ್ಲಿ ಸತಿಹೋಗುವದು ಒಂದು ಸಾಂಪ್ರದಾಯವಾಯಿತು. ಇಚ್ಛೆಯಿಲ್ಲದ ಸ್ತ್ರೀಯರನ್ನು ಸತಿಹೋಗಲು ಒತ್ತಾಯಪಡಿಸಹತ್ತಿದರು. ಅಕಬರನ ಕಾಲದಲ್ಲಿ ಈ ಪದ್ಧತಿಯನ್ನು ತಡೆಯುವ ಪ್ರಯತ್ನವಾಗಿತ್ತು. ಆದರೆ ಯಶವು ಸಿಗಲಿಲ್ಲ. ಬೆಂಟಿಂಕನು ಮಾತ್ರ ಈ ಪದ್ಧತಿಯನ್ನು ನಿರ್ಮೂಲ ಸುವ ನಿಶ್ಚಯಮಾಡಿದನು. ಅವನು **ರಾಜಾರಾಮಮೋಹನರಾಯ**ರಂಥ ಸುಶಿಕ್ಷಿತರ ಬೆಂಬಲವನ್ನು ಪಡೆದು 'ಸತಿಹೋದ ಸ್ತ್ರೀಯಳ ಸಂಬಂಧಿಕರು ಕೊಲೆಯ ಸಹಾಯಕರೆಂದು ತಿಳಿದು ವಿಚಾರಣೆಗೆ ಗುರಿಮಾಡಲ್ಪಡುವರು' ಎಂಬರ್ಥದ ಕಾಯದೆಯನ್ನು ಮಾಡಿದನು. ಆಗ ಸತಿಹೋಗುವದು ಕಟ್ಟಾಯಿತು **೨. ಠಕ್ಕರ ನಾಶ**– ಠಕ್ಕರು ದೇವಿಯ ಪೂಜಕರು. ಇವರು ತೋರಿಕೆಯಲ್ಲಿ ಹಳ್ಳಿಯ ದಾರಿಕಾರರಂತೆ ಇದ್ದು, ಉಳಿದ ದಾರಿಕಾರರನ್ನು ಕೂಡಿಕೊಂಡು ಮುಂದೆ ಸಾಗಿ ಇಕ್ಕಟ್ಟಿನ ಸ್ಥಳದಲ್ಲಿ ಅವರಲ್ಲಿಯ ಶ್ರೀಮಂತರನ್ನು ಕೊಂದು ಅವರ ಆಸ್ತಿಯನ್ನು ಎತ್ತಿಕೊಳ್ಳುತ್ತಿದ್ದರು. ಇವರು ತಮ್ಮದೊಂದು ಸ್ವತಂತ್ರವಾದ ಭಾಷೆಯನ್ನೇ

ಕಲ್ಪಿಸಿಕೊಂಡಿದ್ದರು. ಬೆಂಟಿಂಕನ ಕಾಲದಲ್ಲಿ ಈ ಠಕ್ಕರ ಕಾಟವು ಹೆಚ್ಚಾಯಿತು ಆಗ ಸ್ಲೀಮನ್ ಎಂಬ ಅಧಿಕಾರಿಯು ೨-೩ಸಾವಿರ ಠಕ್ಕರನ್ನು ಹಿಡಿದು ಅಪರಾಧಕ್ಕೆ ತಕ್ಕಂತೆ ಕೆಲವರಿಗೆ ಮರಣದ ಶಿಕ್ಷೆಯನ್ನೂ, ಉಳಿದವರಿಗೆ ಕಠಿಣಶಿಕ್ಷೆಯನ್ನೂ ಕೊಡಲು ಆವರ ಕಾಟವು ತಪ್ಪಿಹೋಯಿತು. **೩. ಮಾರ್ಗಗಳೂ ಕಾಲುವೆಗಳೂ**— ಮುಂಬಯಿಯಿಂದ ಆಗ್ರಾದ ವರೆಗೆ ಒಂದು ಮತ್ತು ದಿಲ್ಲಿಯಿಂದ ಕಲಕತ್ತೆಯ ವರೆಗೆ ಒಂದು ಹೀಗೆ ಎರಡು ರಾಜಮಾರ್ಗಗಳು ಆದವು. ಕಾಲುವೆಗಳನ್ನು ಕಟ್ಟಿಸುವ ಕೆಲಸವು ಹೆಚ್ಚಿಗೆ ಸಾಗಹತ್ತಿತು. **೪. ಶಿಕ್ಷಣ**— ಇಂಗ್ಲಿಷ ಭಾಷೆಯನ್ನೂ ಅದರ ಮುಖಾಂತರವಾಗಿ ಉಳಿದ ಪಾಶ್ಚಾತ್ಯ ವಿದ್ಯೆಗಳನ್ನೂ ಈ ದೇಶದವರಿಗೆ ಕಲಿಸಬೇಕೆಂದು ಗೊತ್ತಾಯಿತು. ಕೂಡಲೆ ಅಲ್ಲಲ್ಲಿ ಇಂಗ್ಲಿಷ ಶಾಲೆಗಳುಂಟಾದವು. ಕಲಕತ್ತೆಯಲ್ಲಿ ಪಾಶ್ಚಾತ್ಯ ವೈದ್ಯಕ ಶಾಲೆಯೊಂದು ಸ್ಥಾಪಿಸಲ್ಪಟ್ಟಿತು.

೩. ಕಂಪನಿಯ ಸನದಿನ ವಿಚಾರಣೆ:- ಕ್ರಿ. ಶ ೧೮೩೩ ಪಾರ್ಲಮೆಂಟ ಸಭೆಯಲ್ಲಿ ಕಂಪನಿಯ ಸನದಿನ ಚರ್ಚೆಯು ನಡೆದು, ೧. ಕಂಪನಿಯವರು ವ್ಯಾಪಾರವನ್ನು ಬಿಟ್ಟುಕೊಟ್ಟು ಬರಿಯ ರಾಜ್ಯಕಾರಭಾರವನ್ನು ಸಾಗಿಸಬೇಕು. ೨. ಈಸ್ಟ ಇಂಡಿಯಾ ಕಂಪನಿಯ ಪಾಲುಗಾರರಿಗೆ ಹಿಂದುಸ್ಥಾನದ ಖಜಾನೆಯಿಂದ ೧೦೦ಕ್ಕೆ ೧೦೫ಯಂತೆ ಬಡ್ಡಿಯನ್ನು ಕೊಡತಕ್ಕದ್ದು. ೩. ಚೀನದ ಕೂಡ ಬೇಕಾದವರು ವ್ಯಾಪಾರ ಮಾಡಬಹುದು. ೪. ಆಗ್ರಾ ಪ್ರಾಂತವನ್ನು ಬಂಗಾಲ ಇಲಾಖೆಯಿಂದ ಬೇರ್ಪಡಿಸಿ ' ವಾಯವ್ಯಪ್ರಾಂತ ' ಎಂಬ ಹೆಸರಿಟ್ಟು ಅದಕ್ಕೊಬ್ಬ ಸ್ವತಂತ್ರ ಅಧಿಕಾರಿಯನ್ನು ನಿಯಮಿಸಬೇಕು. ೫. ಇಡೀ ಹಿಂದುಸ್ತಾನ ಸಂಬಂಧ ಕಾಯದೆ ಮಾಡುವ ಅಧಿಕಾರವು ಗವರ್ನರ್ ಜನರಲ್‌ನಿಗೆ ಇರಬೇಕು. ಅವನ ನೆರವಿಗೆ ಒಬ್ಬ ಕಾಯದೆ ಪಂಡಿತನನ್ನು ಕೊಡಬೇಕು.

೪. ಬೆಂಟಿಂಕನ ಯೋಗ್ಯತೆ:— ಇವನು ಉದಾರನೂ ಶಾಂತತಾಪ್ರೀಯನೂ ಮುತ್ಸದ್ದಿಯೂ ಆಗಿದ್ದನು. 'ಪ್ರಜೆಗಳ ಹಿತವನ್ನು ಸಾಧಿಸುವದು ಸರಕಾರದ ಕರ್ತವ್ಯವು' ಎಂಬ ಮಾತನ್ನು ಲಕ್ಷ್ಯದಲ್ಲಿಟ್ಟು ಇವನು ಕಾರಭಾರವನ್ನು ಸಾಗಿಸಿದನು. ಇವನ ಆಳಿಕೆಯಲ್ಲಿ ಇಂಗ್ಲಿಷರ ರಾಜ್ಯದ ವಿಷಯವಾಗಿ ಜನರಲ್ಲಿ ಸಹಾನಭೂತಿಯು ಉಂಟಾಗಹತ್ತಿತು. ಇವನು ಕ್ರಿ. ಶ. ೧೮೩೫ರಲ್ಲಿ ತನ್ನ ದೇಶಕ್ಕೆ ಹೋದನು.

೫. ಸರ್ ಚಾರ್ಲಸ್ ಮೆಟ್‌ಕಾಫ್:— ಕ್ರಿ. ಶ. ೧೮೩೫ರಲ್ಲಿ ಇವನು ವಾಯವ್ಯಪ್ರಾಂತದ ಲೆಫ್ಟನೆಂಟ ಗವ್ಹರ್ನರನಾಗಿದ್ದನು. ಇವನು ಯೋಗ್ಯತೆಯುಳ್ಳವನಿದ್ದುದರಿಂದ ಬೆಂಟಿಂಕನ ತರುವಾಯ ಗವ್ಹರ್ನರ ಜನರಲನಾದನು.

ವಾರನ್ ಹೆಸ್ಟಿಂಗ್ಸನ ಕಾಲದಿಂದ ವರ್ತಮಾನ ಪತ್ರಗಳಮೇಲೆ ಒಂದಿಲ್ಲೊಂದು ಬಗೆಯಿಂದ ನಿರ್ಬಂಧಗಳಿದ್ದವು. ಮೆಟ್‌ಕಾಫ್‌ನು ಈ ನಿರ್ಬಂಧಗಳನ್ನು ತೆಗೆದುಹಾಕಿ ವರ್ತಮಾನಪತ್ರಗಳಿಗೆ ಪೂರ್ಣ ಸ್ವಾತಂತ್ರ್ಯವನ್ನು ಕೊಟ್ಟನು. ಇವನ ಈ ಧೋರಣೆಯು ಡಾಯರೆಕ್ಟರರ ಮನಸ್ಸಿಗೆ ಬರಲಿಲ್ಲ. ಆದದರಿಂದ ಇವನು ಕೆಲಸಬಿಟ್ಟು ಇಂಗ್ಲಂಡಿಗೆ ಹೋದನು. ಲಾರ್ಡ ಆಕ್ಲಂಡನು ಗ. ಜನರಲನಾದನು. ಕ್ರಿ. ಶ. ೧೮೩೬.

೧೬ನೆಯ ಪಾಠ.

ಲಾರ್ಡ ಆಕ್ಲಂಡ. (ಕ್ರಿ. ಶ ೧೮೩೬—೧೮೪೨)

ಲಾರ್ಡ ಎಲೆನಬರೊ. (ಕ್ರಿ. ಶ. ೧೮೪೨—೧೮೪೪)

೧. ಆಕ್ಲಂಡನು ಬಂದ ಕಾಲದ ಸ್ಥಿತಿ:— ಈಸ್ಟ ಇಂಡಿಯಾ ಕಂಪನಿಯ ನವಕರನೊಬ್ಬನು ಗ. ಜನರಲನಾಗಿರುವದು ಪಾರ್ಲಮೆಂಟಿನವರ ಮನಸ್ಸಿಗೆ ಒಪ್ಪಲಿಲ್ಲ. ಆದದರಿಂದ ಅವರು ಮೆಟ್‌ಕಾಫ್‌ನನ್ನು ತೆಗೆಯುವ ಭರದಲ್ಲಿ **ಲಾರ್ಡ ಆಕ್ಲಂಡ್** ಎಂಬ ಹೆಚ್ಚಿನ ಯೋಗ್ಯತೆಯಿಲ್ಲದ ಮನುಷ್ಯನನ್ನು ಗ. ಜ. ನನ್ನಾಗಿ ಆರಿಸಿದರು. ಆಕ್ಲಂಡನು ಬಂದಾಗ ದೇಶದಲ್ಲಿ ಶಾಂತತೆಯಿತ್ತು. ಕ್ರಿ. ಶ. ೧೮೧೫ರಲ್ಲಿ **ವಾಟರ್ಲು** ಕಾಳಗದಲ್ಲಿ ನೆಪೋಲಿಯನನು ಸೋತಂದಿನಿಂದ, ವಾಯವ್ಯ ದಿಕ್ಕಿನಿಂದ ಫ್ರೇಂಚರು ಬರುವ ಹೆದರಿಕೆಯು ಇಲ್ಲದಾಗಿದ್ದಿತು. ರಶಿಯದ **ಝಾರನು** ಮಾತ್ರ ಪ್ರಬಲನಾಗಿ ತನ್ನ ರಾಜ್ಯವನ್ನು ಇರಾಣ, ಆಫಗಾಣಿಸ್ತಾನ ಈ ದೇಶಗಳಿಗೆ ನಿಲುಕಿಸಿದ್ದನು. ಅವನು ಹಿಂದುಸ್ಥಾನಕ್ಕೆ ಬರುವ ಮನಸ್ಸುಳ್ಳವನಾಗಿದ್ದರೂ ದಾರಿಯಲ್ಲಿರುವ ಇರಾಣ, ಆಫಗಾಣಿಸ್ಥಾನ, ಪಂಜಾಬ ಈ ದೇಶಗಳನ್ನು ದಾಟಿ ಇಷ್ಟರಲ್ಲಿ ಬರುವದು ಶಕ್ಯವಿರಲಿಲ್ಲ.

೨. **ಅಫಗಾಣಸ್ಥಾನದಲ್ಲಿಯ ಪಟ್ಟದ ಜಗಳ** :— ಅಫಗಾಣಿಸ್ಥಾನದ ವಜೀರನಾದ **ಫತ್ತೇಖಾನ**ನು ಅಲ್ಲಿಯ ಬಾದಶಹನಾದ ಝುಮಾನಷಾಹನ ಕಣ್ಣುಕೀಳಿಸಿ ಅವನನ್ನು ತಳ್ಳಿ ಪಟ್ಟವನ್ನು ಹಿಡಿದುಕೊಂಡನು. ಕ್ರಿ. ಶ. **೧೮೧೦.** ಆಗ ಝುಮಾನಷಾಹನ ತಮ್ಮ **ಷಾಹೆಸೂಜನು** ಅಣ್ಣನೊಡನೆ **ಲುಧಿಯಾನೆಗೆ** ಬಂದು ಇಂಗ್ಲಿಷರ ಆಶ್ರಯದಲ್ಲಿರಹತ್ತಿದನು. ಫತ್ತೇಖಾನನು ಶೂರನೂ ಜಾಣನೂ ಜನಪ್ರೀಯನೂ ಇದ್ದದರಿಂದ ಅವನ ಆಳಿಕೆಯಲ್ಲಿ ಅಫಗಾನ ದೇಶವು ಏಳ್ಗೆಯನ್ನು ಹೊಂದಿತು. ಮುಂದೆ ಕ್ರಿ. ಶ. **೧೮೨೫**ರಲ್ಲಿ ಫತ್ತೇಖಾನನ ಕೊಲೆಯಾಗಲು ಅವನ ತಮ್ಮನಾದ **ದೋಸ್ತಮಹಮ್ಮದ**ನು ಆರಸನಾದನು ಆಗ ಷಾಹೆಸೂಜನು ಇದು ಅನುಕೂಲ ಕಾಲವೆಂದು ಇಂಗ್ಲಿಷರ ಸ್ನೇಹಿತನಾಗಿದ್ದ ರಣಜಿತಸಿಂಗನಿಗೆ **ಕೋಹಿನೂರ** ರತ್ನವನ್ನು ಕೊಟ್ಟು, ಅವನ ನೆರವನ್ನು ಹೊಂದಿ, ದೋಸ್ತಮಹಮ್ಮದನ ಮೇಲೆ ಸಾಗಿಹೋದನು. ಆದರೆ ಅಫಗಾನರು ಒಟ್ಟಾಗಿ ವಿರೋಧಿಸಿದ್ದರಿಂದ ಇವನು ಸೋತು ಹಿಂದಿರುಗಿದನು. ರಣಜಿತಸಿಂಗನು ಮಾತ್ರ **ಪೇಶಾವರ** ಪ್ರಾಂತವನ್ನು ತನ್ನ ಕೈಸೇರಿಸಿಕೊಂಡನು

೩. **ಅಫಗಾಣಿಸ್ಥಾನದ ಮೊದಲನೆಯ ಯುದ್ಧ** :— ಕ್ರಿ. ಶ. **೧೮೩೮-೧೮೪೨. ಕಾರಣಗಳು**— ಅಫಗಾಣಿಸ್ಥಾನದ ಆರಸನೊಡನೆ ಸ್ನೇಹದ ಒಪ್ಪಂದಮಾಡಿಕೊಳ್ಳಬೇಕೆಂದು, ಆಕ್ಲಂಡನಿಗೆ ಆಪ್ಪಣೆಯಾಗಿತ್ತು. ಇಂಗ್ಲಿಷರ ಆಶ್ರಿತನಾಗಿದ್ದ ಷಾಹೆಸೂಜನ ಪ್ರಯತ್ನವು ಕೈಗೂಡಿ ಅವನಿಗೆ ಅಫಗಾನ ರಾಜ್ಯವು ಮರಳಿ ದೊರೆತಿದ್ದರೆ ಬೇರೆ ಒಪ್ಪಂದದ ಅವಶ್ಯವಿರಲಿಲ್ಲ. ಆದರೆ ಹಾಗೆ ಆಗದೆಯಿದ್ದದರಿಂದ ಆಕ್ಲಂಡನು ದೋಸ್ತಮಹಮ್ಮದನ ಕಡೆಗೆ ವಕೀಲನನ್ನು ಕಳುಹಿದನು. ದೋಸ್ತಮಹಮ್ಮದನು ಆ ವಕೀಲನನ್ನು ಬರಮಾಡಿಕೊಂಡು, ' ರಣಜಿತಸಿಂಗನ ವಶದಲ್ಲಿದ್ದ ಪೇಶಾವರ ಪ್ರಾಂತವನ್ನು ತೆಗೆದುಕೊಳ್ಳಲು ನೆರವಾಗುತ್ತಿದ್ದರೆ ಮಾತ್ರ ಇಂಗ್ಲಿಷರೊಡನೆ ಒಪ್ಪಂದ ಮಾಡುವೆನು' ಎಂದು ಹೇಳಿದನು. ಆಗ ವಕೀಲನು ರಣಜಿತಸಿಂಗನ ವಿರುದ್ಧ ಹೋಗುವದು ಒಳಿತಲ್ಲೆಂದು ಬಗೆದು ಸುಮ್ಮನೆ ಹಿಂದಿರುಗಿದನು. ಇಂಗ್ಲಿಷರ ಸ್ನೇಹದ ಆಶೆ ತಪ್ಪಲು ದೋಸ್ತಮಹಮ್ಮದನು ರಶಿಯವದರ ಕೂಡ ಒಡಂಬಡಿಕೆ ಮಾಡಿಕೊಂಡನು. ಕ್ರಿ. ಶ. **೧೮೩೮. ಯುದ್ಧ**- ಬಳಿಕ ಇಂಗ್ಲಿಷರು ಷಾಹೆಸೂಜ

ನೊಡನೆ * **ಲಾಹೋರಕ್ಕೆ** ಹೋಗಿ ರಣಜಿತಸಿಂಗನ **ಕೂಡ** ಒಪ್ಪಂದಮಾಡಿಕೊಂಡು ಅವನ ಸಹಾಯವನ್ನು ಪಡೆದರು. ಮತ್ತು ದೋಸ್ತಮಹಮ್ಮದನನ್ನು ತಳ್ಳಿ ಷಾಹೆಸೂಜನನ್ನು ಪಟ್ಟಕ್ಕೆ ಕುಳ್ಳಿರಿಸಬೇಕೆಂದು ನಿಶ್ಚಯಿಸಿ ಯುದ್ಧವನ್ನು ಸಾರಿದರು. ಬಂಗಾಲದಿಂದಲೂ ಮುಂಬಯಿಯಿಂದಲೂ ಇಂಗ್ಲಿಷರ ಸೈನ್ಯಗಳು ಅಫಗಾಣಿಸ್ಥಾನದ ಕಡೆಗೆ ಹೊರಟವು. ಅವೆರಡೂ ಕಂದಹಾರದಲ್ಲಿ ಒಟ್ಟಾಗಿ **ಸರ್ ಜಾನ್ ಕೀನನ** ಕೈಕೆಳಗೆ **ಗಝ್ನಿ**ಯ ಮೇಲೆ ಸಾಗಿದವು. ಕೀನನು ಶೌರ್ಯದಿಂದ ಕಾದಿ ಆ ಕೋಟೆಯನ್ನು ವಶಮಾಡಿಕೊಂಡನು. ಆಲ್ಲಿ ವಿಪುಲವಾದ ಯುದ್ಧಸಾಹಿತ್ಯವು ಇಂಗ್ಲಿಷರಿಗೆ ದೊರೆಯಿತು. ಆಮೇಲೆ ಇಂಗ್ಲಿಷ ಸೈನ್ಯವು **ಕಾಬೂಲ**ದ ಕಡೆಗೆ ಸಾಗಲು ದೋಸ್ತಮಹಮ್ಮದನು ಓಡಿಹೋದನು. ಯುದ್ಧವಾಗದೆ ಕಾಬೂಲ ಪಟ್ಟಣವು ವಶವಾಯಿತು. ಷಾಹೆಸೂಜನು ಅಫಗಾಣಿಸ್ಥಾನದ ಅರಸನಾದನು. ಕ್ರಿ ಶ. ೧೮೩೯.

೪. ಯುದ್ಧದ ತರುವಾಯದ ಸ್ಥಿತಿ:— ಷಾಹೆಸೂಜನು ಅರಸನಾದರೂ ಜನರು ಅವನನ್ನು ಪ್ರೀತಿಸಲಿಲ್ಲ. ಆದದರಿಂದ ಅವನು ಇಂಗ್ಲಿಷರ ಸೈನ್ಯದ ಬೆಂಬಲವನ್ನು ಕಾದುಕೊಳ್ಳಬೇಕಾಯಿತು. ಇಂಗ್ಲಿಷ ಅಧಿಕಾರಿಗಳೂ ಸೈನ್ಯಗಳೂ **ಕಾಬೂಲ – ಕಂದಹಾರ – ಜಲಾಲಾಬಾದ**ಗಳಲ್ಲಿ ಇರಹತ್ತಿದರು. ಮುಂದೆ ಅಲ್ಲಿ ಬಹಳ ದಿವಸ ಇರಬೇಕಾದುದರಿಂದಲೂ ಅಲ್ಲಿಯ ತಂಪು ಹವೆಯು ಸೊಗಸೆನಿಸಿದ್ದರಿಂದಲೂ ಇಂಗ್ಲಿಷರು ತಮ್ಮ ಹೆಂಡಿರು ಮಕ್ಕಳನ್ನು ಕೂಡ ಅತ್ತ ಕರೆಯಿಸಿಕೊಂಡರು. ಓಡಿಹೋಗಿದ್ದ ದೋಸ್ತಮಹಮ್ಮದನು ಯಾರ ನೆರವೂ ಸಿಗದೆಯಿದ್ದದರಿಂದ ಇಂಗ್ಲಿಷರ ಕೈಸೇರಿದನು. ಅವರು ಅವನನ್ನು ಕಲಕತ್ತೆಯಲ್ಲಿ ಇಟ್ಟರು.

೫. ಅಕಬರಖಾನನ ಬಂಡಾಯ:— ದೋಸ್ತಮಹಮ್ಮದನ ಮಗ ಅಕಬರಖಾನನು ಅಫಗಾಣಿಸ್ಥಾನದಲ್ಲಿಯ ಜನರನ್ನು ಕೂಡಿಸಿಕೊಂಡು ಮುಖ್ಯ

---

* ಲಾಹೋರದ ಒಪ್ಪಂದವು ಇಂಗ್ಲಿಷರು, ಷಾಹೆಸೂಜ, ರಣಜಿತಸಿಂಗ ಈ ಮೂವರಲ್ಲಾಯಿತು. ಇದರ ಕರಾರುಗಳು— ೧. ಇಂಗ್ಲಿಷರು ಷಾಹಸೂಜನನ್ನು ಕಾಬೂಲ ಪಟ್ಟಕ್ಕೆ ಕುಳ್ಳಿರಿಸಬೇಕು. ೨. ಷಾಹೆಸೂಜನು ಹಿಂದುಸ್ತಾನಕ್ಕೆ ಪರಚಕ್ರಗಳ ದಾಳಿ ತಟ್ಟದಂತೆ ಕಾದುಕೊಂಡಿರಬೇಕು. ೩. ರಣಜಿತಸಿಂಗನಿಗೆ ಪೇಶಾವರ ಮತ್ತು ಸಿಂಧದ ವರೆಗಿನ ಸೀಮೆಯನ್ನು ಕೊಡಬೇಕು. ೪. ಇಂಗ್ಲಿಷರ ವಕೀಲನನ್ನು ಕಾಬೂಲದಲ್ಲಿ ಇಟ್ಟುಕೊಳ್ಳಬೇಕು.

ವಾಗಿ ಇಂಗ್ಲಿಷ ರೆಸಿಡೆಂಟನನ್ನು ಕೊಂದು ಅವರ ಸೈನ್ಯಕ್ಕೆ ಕಾಳುಕಡಿಗಳು ಸಿಗದಂತೆ ಮಾಡಿದನು. ಈ ಪ್ರಸಂಗದಲ್ಲಿ ಎಲ್ಲ ಕಡೆಗೆ ಅಸ್ವಸ್ಥತೆಯಿದ್ದದರಿಂದ ಕಂದಹಾರ, ಜಲಾಲಾಬಾದಗಳಿಂದಲೂ ನೆರವು ದೊರೆಯುವದು ಅಶಕ್ಯವಾಯಿತು. ಆದದರಿಂದ ಕಾಬೂಲದ ಇಂಗ್ಲಿಷ ಅಧಿಕಾರಿಗಳು ಹೆದರಿ ಅಕಬರ ಖಾನನಿಗೆ ಶರಣುಹೋಗಿ ಯಾವತ್ತು ಶಸ್ತ್ರಾಸ್ತ್ರಗಳನ್ನು ಒಪ್ಪಿಸಿದರು. ಹೆಂಡರು ಮಕ್ಕಳನ್ನೂ ಜಡ್ಡಿನವರನ್ನೂ ಅವನ ವಶಕ್ಕೆ ಕೊಟ್ಟು ಹಿಂದುಸ್ಥಾನದ ದಾರಿಯ ಹಿಡಿದರು. ಆದರೆ ಈ ಜನರು ಗುಡ್ಡುಗಾಡು ಸೀಮೆಯಲ್ಲಿಯೂ ಇಕ್ಕಟ್ಟಾದ ಕಣಿವೆಗಳಲ್ಲಿಯೂ ಹಾದು ಬರುತ್ತಿರಲು ಅಫಗಾನರು ಅವರ ಮೇಲೆ ಬಿದ್ದು ಎಲ್ಲರನ್ನು ಕೊಂದುಹಾಕಿದರು. ಹದಿನಾರು ಹದಿನೇಳು ಸಾವಿರ ಜನರಲ್ಲಿ ಡಾ. **ಬ್ರಾಯಡನ್** ಎಂಬವನೊಬ್ಬನು ಮಾತ್ರ ಸತ್ತುಕೆಟ್ಟು ಜಲಾಲಾಬಾದಕ್ಕೆ ಬಂದು ಮುಟ್ಟಿದನು. ಕ್ರಿ. ಶ **೧೮೪೨.** ಬಳಿಕ ಅಫಗಾನರು ಜಲಾಲಾಬಾದವನ್ನೂ ಮುತ್ತಿದರು. ಅತ್ತ ಕಾಬೂಲದವರು ಷಾಹೆಸೂಜನನ್ನು ಕೊಂದರು.

೬. **ಅಕ್ಲೆಂಡನು ಹೋಗಿ ಲಾರ್ಡ ಎಲೆನಬರೋನು ಬಂದದ್ದು** :— ಅಫಗಾಣಿಸ್ಥಾನದಲ್ಲಿ ಹೀಗೆ ಅನರ್ಥವಾಗಿರಲು ಲಾರ್ಡ ಆಕ್ಲೆಂಡನು ಹೋಗಿ ಲಾರ್ಡ ಎಲಿನಬರೋನು ಗ. ಜನರಲನಾಗಿ ಬಂದನು. ಅಫಗಾನ ಯುದ್ಧವನ್ನು ಮುಗಿಸುವ ಹೊರೆಯು ಇವನ ಪಾಲಿಗೆ ಬಂದಿತು.

೭. **ಅಫಗಾನ ಯುದ್ಧದ ಕೊನೆ** :— ಎಲೆನಬರೋನು ಬಂದೊಡನೆ ಪೋಲಾಕನನ್ನು ಅಫಗಾಣಿಸ್ಥಾನದ ಮೇಲೆ ಕಳುಹಿದನ:. ಪೋಲಾಕನು ಖೈಬರಘಟ್ಟದ ದಾರಿಯಿಂದ ಜಲಾಲಾಬಾದಕ್ಕೆ ಮುಟ್ಟಿ ಸೇಲನಿಗೆ ನೆರವಾಗಿ ಕಾಬೂಲದ ಕಡೆಗೆ ಸಾಗಿದನು. ಇಷ್ಟರಲ್ಲಿ ನಾಟನು ಕಂದಾಹಾರದಿಂದ ಹೊರಟು ಗಝನಿಯನ್ನು ಗೆದ್ದುಕೊಂಡು ಮುಂದೆ ಸಾಗಿ ಪೋಲಾಕನನ್ನು ಕೂಡಿಕೊಂಡನು ಬಳಿಕ ಪೋಲಾಕನು ಅಕಬರಖಾನನ ವಶದಲ್ಲಿದ್ದ ತಮ್ಮ ಜನರನ್ನು ಕೂಡಿಕೊಂಡು, ಕಾಬೂಲ ಪೇಟೆಯನ್ನು ಹಾಳುಮಾಡಿ, ಅಲ್ಲಿ ದೊರೆತ ಸುಲಿಗೆಯನ್ನೂ ಗಝನಿಯ ಮಸೀದೆಯ ಬಾಗಿಲುಗಳನ್ನೂ ತೆಗೆದು ಕೊಂಡು ಹಿಂದುಸ್ಥಾನಕ್ಕೆ ಬಂದನು.

೮. **ದೋಸ್ತಮಹಮ್ಮದನ ಬಿಡುಗಡೆ** :— ಪೋಲಾಕನು ಬಂದ ಸುದ್ದಿಯನ್ನು ಕೇಳಿ, ಎಲೆನಬರೋನು ದೋಸ್ತಮಹಮ್ಮದನನ್ನು ಸಂಗಡ

ಕರೆದುಕೊಂಡು ಫಿರೋಜಪುರಕ್ಕೆ ಹೋದನು. ಮತ್ತು ಹಲವು ಮಾಂಡಲಿಕರನ್ನು ಅಲ್ಲಿಗೆ ಕರೆಯಿಸಿಕೊಂಡು ಸುಲಿಗೆಯ ಸಂಪತ್ತಿನ ಮೆರವಣಿಗೆ ಮಾಡಿಸಿದನು. ಬಳಿಕ ಅಫಗಾಣಿಸ್ಥಾನದ ಕಾರಭಾರದಲ್ಲಿ ಕೈಹಾಕುವದಿಲ್ಲೆಂದು ಹೇಳಿ ದೋಸ್ತಮಹಮ್ಮದನ ಬಿಡುಗಡೆ ಮಾಡಿದನು. ಮುಂದೆ ದೋಸ್ತಮಹಮ್ಮದನು ತನ್ನ ದೇಶದ ಅಮೀರನಾಗಿ ಕ್ರಿ. ಶ. ೧೮೬೩ ರ ವರೆಗೆ ಆಳಿದನು.

೧೭ನೆಯ ಪಾಠ.

ಲಾರ್ಡ ಎಲೆನಬರೋ. (ಮುಂದೆ ಸಾಗಿದ್ದು) **ಲಾರ್ಡ ಹಾರ್ಡಿಂಜ.** (ಕ್ರಿ. ಶ. ೧೮೪೪-೧೮೪೮)

೧. **ಸಿಂಧಪ್ರಾಂತವನ್ನು ಕಸಿದುಕೊಂಡದ್ದು** :— ಕ್ರಿ. ಶ. ೧೮೪೩. ಕ್ರಿ. ಶ. ೧೮ನೆಯ ಶತಕದ ಕೊನೆಯ ಭಾಗದಲ್ಲಿ **ಬಲೂಚಿ** ಜನರು ಸಿಂಧ ಪ್ರಾಂತದಲ್ಲಿ ಹೈದರಾಬಾದ, ಖೈರಪುರ, ಮೀರಪುರ ಈ ರಾಜ್ಯಗಳನ್ನು ಸ್ಥಾಪಿಸಿದರು. ಇವರು ಅಫಗಾಣಿಸ್ಥಾನದ ಅರಸನಿಗೆ ಕಪ್ಪಕೊಡುತ್ತಿದ್ದರು. ಈ ಅರಸರಿಗೆ **ಅಮೀರ** ಎಂಬ ಹೆಸರು. ಕ್ರಿ. ಶ. ೧೮೮೯ರಲ್ಲಿ ಇಂಗ್ಲಿಷರು ಸಿಂಧದ ಅಮೀರನೊಡನೆ ಸ್ನೇಹದ ಒಪ್ಪಂದಮಾಡಿದರು. ಕ್ರಿ. ಶ. ೧೮೩೨ರಲ್ಲಿ ವ್ಯಾಪಾರ ಮಾಡಲು ಅಪ್ಪಣೆ ಪಡೆದು, ಸಿಂಧುನದಿಯೊಳಗಿಂದ ಸೈನ್ಯವನ್ನು ಒಯ್ಯುವದಿಲ್ಲೆಂದು ಒಪ್ಪಿಕೊಂಡರು. ಆದರೆ ಮುಂದೆ ಅಫಗಾನ ಯುದ್ಧವು ಹತ್ತಲು ಮುಂಬಯಿ ಸೈನ್ಯವನ್ನು ಕರಾರು ಮುರಿದು ಸಿಂಧುನದಿಯ ದಾರಿಯಿಂದ ಒಯ್ದರು. ಅಲ್ಲದೆ ಷಾಹೆಸೂಜನನ್ನು ಪಟ್ಟಗಟ್ಟಿದ ಕೂಡಲೆ ಹಿಂದಿನ ೩೦ ವರ್ಷದ ಕಪ್ಪವನ್ನು ಅವನ ಹೆಸರಿನಿಂದ ಅಮೀರನನ್ನು ಕೇಳಿದರು. ಅಮೀರರು ಅದನ್ನು ಕೊಟ್ಟರು. ಮುಂದೆ ಕ್ರಿ. ಶ. ೧೮೫೯ರಲ್ಲಿ ಸಹಾಯಕಸೈನ್ಯವು ಅಮೀರರ ಕಡೆಗೆ ಇಡಲ್ಪಟ್ಟಿತು. **ಅಮೀರರೊಡನೆ ಯುದ್ಧ**– ಈ ಸಹಾಯಕ ಸೈನ್ಯದ ಸೇನಾಪತಿಯು ಸರ್ **ಚಾರ್ಲಸ್ ನೇಪಿಯರ**ನೆಂಬವನಿದ್ದನು. ಅವನು ಕ್ರಿ. ಶ. ೧೮೪೩ರಲ್ಲಿ ಅಮೀರರಿಗೆ– ೧. ನೀವು ಸೈನ್ಯವೆಚ್ಚಕ್ಕಾಗಿ ಕೊಡತಕ್ಕ ೩ ಲಕ್ಷ ರೂಪಾಯಿಗಳ ಬದಲಾಗಿ ಸೀಮೆಯನ್ನು ಕೊಡಬೇಕು. ೨. ನಿಮ್ಮ ಹೆಸರಿನ ನಾಣ್ಯಗಳನ್ನು ಹೊರಡಿಸದೆ ಕಂಪನಿಯ ರೂಪಾಯಿಗಳನ್ನೇ

ಉಪಯೋಗಿಸಬೇಕು. ೩. ಕಂಪನಿ ಸರಕಾರದ ಹಡಗಗಳಿಗೆ ಉರಿವಲವನ್ನು ಪೂರೈಸಬೇಕು; ಎಂದು ತಿಳಿಸಿದರು. **ಯುದ್ಧ**– ಈ ಕರಾರುಗಳನ್ನು ಕೇಳಿ ಬಲುಚಿ ಸೈನ್ಯವು ಇಂಗ್ಲಿಷರ ವಕೀಲನಾದ **ಬೆಟ್ಯಾಮನ** ಮೇಲೆ ಏರಿ-ಹೋಯಿತು. ಆಗ ಅವನು ಓಡಿಹೋಗಿ ನೇಪಿಯರನನ್ನು ಕೂಡಿಕೊಂಡನು. **ಕೂಡಲೆ ನೇಪಿಯರನು ಮಿಯಾನಿ, ಹೈದರಾಬಾದ**ಗಳ ಯುದ್ಧದಲ್ಲಿ ಅಮೀರರ ಸೈನ್ಯವನ್ನು ಸೋಲಿಸಿ, ಸಿಂಧಪ್ರಾಂತವನ್ನು ಖಾಲಸಾ ಮಾಡಿದನು. ನೇಪಿಯರನೇ ಆ ಪ್ರಾಂತದ ಮೊದಲನೆಯ ಗವ್ಹರ್ನರನಾದನು ಅಲ್ಲದೆ ಅವನಿಗೆ ೭೦ ಸಾವಿರ ಪೌಂಡು ಮೆಚ್ಚುಗೆ ಸಿಕ್ಕಿತು

೨. ಸಿಂದೆಯ ಬಲವನ್ನು ಮುರಿದದ್ದು :— ಸಿಂದೆ ದೌಲತರಾಯನು ಕ್ರಿ. ಶ. ೧೮೨೭ರಲ್ಲಿ ಸಾಯಲು ಅವನ ಮಗ **ಜನಕೋಜಿಯು** ಕ್ರಿ ಶ ೧೮೪೩ ರವರೆಗೆ ಆಳಿ ಮರಣಹೊಂದಿದನು. ಆಗ ಅವನ ಹೆಂಡತಿಯಾದ ತಾರಾಬಾಯಿಯು **ಜಯಾಜಿರಾಯ**ನನ್ನು ದತ್ತಕ ಮಾಡಿಕೊಂಡು ತಾನು ಕಾರಭಾರವನ್ನು ಸಾಗಿಸಹತ್ತಿದಳು. ಗ್ವಾಲೇರ ರಾಜ್ಯದಲ್ಲಿ ಆಗ ೪೦ ಸಾವಿರ ನುರಿತ ಸೈನ್ಯವೂ ೨೦೦ ತೋಪುಗಳೂ ಇದ್ದವು ರಣಜಿತಸಿಂಗನ ತರುವಾಯ ಅವನ ೮೦ ಸಾವಿರ ಸೈನ್ಯವು ಪಂಜಾಬದಲ್ಲಿ ಪ್ರಬಲವಾಗುತ್ತಲಿದ್ದಿತು. ಈ ಎರಡು ಸೈನ್ಯಗಳು ಬೇರೆ ಬೇರೆಯಾಗಿ ಇಲ್ಲವೆ ಒಟ್ಟಾಗಿ ಇಂಗ್ಲಿಷರನ್ನು ವಿರೋಧಿಸಬಹುದೆಂದು ಗ. ಜನರಲನಿಗೆ ಎನಿಸಿದ್ದರಿಂದ ಅವನು ಮೊದಲು ಸಿಂದೆಯನ್ನು ಅಳತೆಯಲ್ಲಿ ತರಲು ನಿಶ್ಚಯಿಸಿ ಸರ್ **ಹ್ಯೂಗೋನ**ನ್ನು ಸೈನ್ಯದೊಂದಿಗೆ ಕಳುಹಿದನು. ಹ್ಯೂಗೋನು ಚಂಬಳಾನದಿಯನ್ನು ದಾಟುತ್ತಲೆ ಸಿಂದೆಯ ಸೈನ್ಯವು ಅವನನ್ನು ತಡೆಯಿತು. ಆದರೆ **ಮಹಾರಾಜಪುರ, ಪನಿಯಾರ** ಈ ಯುದ್ಧಗಳಲ್ಲಿ ಅದು ಸೋತಿತು. ಆದದರಿಂದ ಸಿಂದೆಯು ಇಂಗ್ಲಿಷರ ಹೇಳಿಕೆಯಂತೆ ಒಡಂಬಡಿಕೆ ಮಾಡಿಕೊಂಡನು. **ಗ್ವಾಲೇರದ ಒಡಂಬಡಿಕೆ**-- ಕ್ರಿ. ಶ. **೧೮೪೩. ೧.** ಸಿಂದೆಯು ಯುದ್ಧದ ವೆಚ್ಚವನ್ನು ಇಂಗ್ಲಿಷರಿಗೆ ಕೊಡಬೇಕು. **೨.** ಸೈನ್ಯವನ್ನು ೯ ಸಾವಿರಕ್ಕಿಂತ, ತೋಪುಗಳನ್ನು ೩೨ಕ್ಕಿಂತ ಹೆಚ್ಚಿಗೆ ಇಡಕೂಡದು. **೩.** ೧೦ ಸಾವಿರ ಸ. ಸೈನ್ಯವನ್ನಿಟ್ಟುಕೊಂಡು ಅದರ ವೆಚ್ಚಕ್ಕಾಗಿ ಸೀನೆಯನ್ನು ಹಂಚಿಕೊಡಬೇಕು. **೪.** ಸಯಾಜಿರಾಯನು ವಯಸ್ಸಿಗೆ ಬರುವವರೆಗೆ ಇಂಗ್ಲಿಷ ರೆಸಿಡೆಂಟನು ಕಾರಭಾರವನ್ನು ಸಾಗಿಸಬೇಕು.

೩. **ಲಾರ್ಡ್ ಹಾರ್ಡಿಂಜನು ಗ. ಜನರಲನಾದನು**:— ಎಲೆನ ಬರೋನ ಎರಡೇ ವರ್ಷಗಳ ಆಳಿಕೆಯಲ್ಲಿ ಮೂರು ಯುದ್ಧಗಳಾದವು. ಈ ರೀತಿಯನ್ನು ಸಾಗಗೊಡುವದು ಸರಿಯೆನಿಸದೆ ಇದ್ದುದರಿಂದ ಡಾಯರೆಕ್ಟರರು ಇವನನ್ನು ಕರೆಯಿಸಿಕೊಂಡರು. ಇವನ ಆಳಿಕೆಯಲ್ಲಿ ಗುಲಾಮರ ವ್ಯಾಪಾರವನ್ನೂ ಲಾಟರಿಗಳನ್ನೂ ತ ಡೆ ಯು ವ ಕಾಯದೆಗಳಾದವು. ಇವನ ಬಳಿಕ ಯುದ್ಧಕಲೆಯಲ್ಲಿ ನುರಿತು ಹೆಸರಾದ **ಲಾರ್ಡ್ ಹಾರ್ಡಿಂಜನು** ಗ. ಜನರಲನಾಗಿ ಬಂದನು. ೬೦ ವರ್ಷದ ವಯಸ್ಸಿನವನಾಗಿದ್ದರೂ ಇವನ ಹುರುಪು ಕುಂದಿರಲಿಲ್ಲ.

೪. **ರಣಜಿತಸಿಂಗನ ತರುವಾಯದ ಪಂಜಾಬದ ಸ್ಥಿತಿ**:— ಕ್ರಿ. ಶ. ೧೮೦೯ರಲ್ಲಿ ಅಮೃತಸರದ ಒಪ್ಪಂದವಾಗಿ, ರಣಜಿತಸಿಂಗನು ಸತಲಜನದಿಯ ದಕ್ಷಿಣಕ್ಕೆ ತನ್ನ ರಾಜ್ಯವನ್ನು ಹಬ್ಬಿಸುವದಿಲ್ಲೆಂದು ಒಪ್ಪಿಕೊಂಡಿದ್ದನು. ಆಬಳಿಕ ಅವನು **ಪೇಶಾವರ, ಕಾಶ್ಮೀರ** ಮೊದಲಾದ ಉತ್ತರದ ಸೀಮೆಗಳನ್ನು ಗೆಲೆದು ಅತ್ತ ತನ್ನ ರಾಜ್ಯವನ್ನು ಬೆಳೆಯಿಸಿದನು. ಇಂಗ್ಲಿಷರ ಸಾಮರ್ಥ್ಯ ಮತ್ತು ಧೋರಣೆ ಇವುಗಳ ಅರಿವು ಅವನಿಗಿದ್ದುದರಿಂದ ಕಾರಣವಿಲ್ಲದೆ ಅವರನ್ನು ತಡಹುತ್ತಿರಲಿಲ್ಲ. ರಣಜಿತಸಿಂಗನಿರುವ ವರೆಗೆ ಇಂಗ್ಲಿಷರಾದರೂ ಅವನ ವಿರುದ್ಧ ಹೋಗುವ ಸಾಹಸಕ್ಕೆ ಕೈಹಾಕಲಿಲ್ಲ.

ಆದರೆ ಕ್ರಿ ಶ. ೧೮೩೯ರಲ್ಲಿ ರಣಜಿತಸಿಂಗನು ಸಾಯಲು ಅವನ ಇಬ್ಬರು ಮಕ್ಕಳು ಒಬ್ಬರ ಬಳಿಕೊಬ್ಬರು ಪಟ್ಟಕ್ಕೆ ಬಂದು ಕೊಲ್ಲಲ್ಪಟ್ಟರು ಬಳಿಕ ಅವನ ದಾಪುತ್ರನಾದ **ಧುಲೀಪಸಿಂಗನು** ಅರಸನಾದನು. ಈ ಧುಲೀಪಸಿಂಗನು ಚಿಕ್ಕವನಿದ್ದುದರಿಂದ ಅವನ ತಾಯಿಯು **ಲಾಲಸಿಂಗ**ನೆಂಬ ಸರದಾರನ ನೆರವಿನಿಂದ ಕಾರಭಾರವನ್ನು ಸಾಗಿಸಿದಳು. ಆದರೆ ಸೈನ್ಯದ ಒಡೆತನವು ಸೈನಿಕರಿಂದ ಆರಿಸಲ್ಪಟ್ಟ ಮಂಡಲದ ಕೈಗೆ ಹೋಯಿತು. ಸೀಖ ಸೈನ್ಯದಲ್ಲಿ ೮೦ ಸಾವಿರ ಸೈನಿಕರೂ ನಾಲ್ಕೈದುನೂರು ತೋಪುಗಳೂ ಇದ್ದವು.

೫. **ಸೀಖರ ಮೊದಲನೆಯ ಯುದ್ಧ**:— ಕ್ರಿ. ಶ. **೧೮೪೫–೧೮೪೬. ಕಾರಣಗಳು- ೧.** ಸೀಖ ಸೈನ್ಯವು ಇಂಗ್ಲಿಷರೊಡನೆ ಕಾದಲು ಹವಣಿಸುತ್ತಿತ್ತು. **೨.** ಇಂಗ್ಲಿಷರಾದರೂ, ತಮ್ಮನ್ನೆದುರಿಸಲು ಸೀಖ ಸೈನ್ಯವು ಸಮರ್ಥವಾಗಿರುವ

ದೆಂದು ತಿಳಿದು, ಸಿಂಧುನದಿಯ ಮಾರ್ಗವಾಗಿ ಯುದ್ಧಸಾಹಿತ್ಯವನ್ನು ಒದಗಿಸಿಕೊಂಡು, ಸತಲಜ ನದಿಯ ದಕ್ಷಿಣಕ್ಕೆ ಸೈನ್ಯವನ್ನು ಸಜ್ಜುಗೊಳಿಸಿದ್ದರು. ೩. ಇಂಗ್ಲಿಷರು ಸಿಂಧಪ್ರಾಂತವನ್ನು ಕಸಿದರು. ಸಿಂಧೆಯ ಬಲವನ್ನು ಕುಗ್ಗಿಸಿದರು ಇನ್ನು ಅವರು ತಮ್ಮ ಮೇಲೆ ಸಾಗಿಬರುವದು ಸಹಜ. ಆದದರಿಂದ ತಾವೇ ಅವರನ್ನು ಕೆಣಕಬೇಕೆಂದು ಸೀಖರು ಗೊತ್ತುಮಾಡಿದರು. **ಯುದ್ಧಗಳು**— ಸೀಖಸೈನ್ಯವು ಸತಲಜ ನದಿಯನ್ನು ದಾಟಿ ಇಂಗ್ಲಿಷರ ಮೇಲೆ ಸಾಗಿತು. **ಮುಡಕಿ** ಎಂಬಲ್ಲಿ ಯುದ್ಧವಾಗಿ ಇಂಗ್ಲಿಷರಿಗೆ ಜಯವಾಯಿತು; ಆದರೂ ಸೀಖರ ತೋಪುಗಳ ಹೊಡೆತದದಿಂದ ಇಂಗ್ಲಿಷ ಸೈನ್ಯಕ್ಕೂ ಬಹಳ ನಷ್ಟವಾಯಿತು. ಬಳಿಕ ಸೀಖ ಸೈನ್ಯವು ಹಿಮ್ಮೆಟ್ಟಿ **ಫಿರೋಜಶಹ** ಎಂಬಲ್ಲಿಯ ತಮ್ಮ ಸೈನ್ಯವನ್ನು ಕೂಡಿಕೊಂಡಿತು ಆಗ ಲಾರ್ಡ ಹಾರ್ಡಿಂಜನೂ ಸೇನಾನಾಪತಿಯಾದ ಸರ್ ಹ್ಯೂಗೋನೂ ಸೀಖರ ಮೇಲೆ ಏರಿಹೋಗಲು ಕಡುಗದನವಾಗಿ ಇಂಗ್ಲಿಷರ ಕಡೆಯ ಎರಡು ಸಾವಿರ ಜನರು ಬಿದ್ದರು. ಜಯಾಪಜಯಗಳು ಅನಿಶ್ಚಿತವಾಗಿರುವಷ್ಟರಲ್ಲಿ ಸೀಖ ಆಧಿಕಾರಿಗಳಲ್ಲಿ ಜಗಳಹತ್ತಿದ್ದರಿಂದ ಅವರೇ ಹಿಮ್ಮೆಟ್ಟಿ ನದಿಯ ಉತ್ತರ ತೀರಕ್ಕೆ ಹೋದರು ಮತ್ತು ಕೆಲದಿನಗಳ ನಂತರ ತಾವೇ ನದಿಯನ್ನು ದಾಟಿ ಇಂಗ್ಲಿಷರ ಸೈನ್ಯವನ್ನು ಎದುರಿಸಿದರು. **ಅಲಿವಾಲ, ಸೋಬ್ರಾವುನ್** ಎಂಬ ಎರಡು ಕಡೆಗಳಲ್ಲಿ ಭಯಂಕರವಾದ ಯುದ್ಧಗಳಾಗಿ ಸೀಖರು ಪೂರ್ಣವಾಗಿ ಸೋತರು ಬಳಿಕ ಇಂಗ್ಲಿಷರು ಲಾಹೋರಪ ಕಡೆಗೆ ಸಾಗಿ ಹೋಗಲು ಅಲ್ಲಿ ಒಪ್ಪಂದವಾಯಿತು. **ಲಾಹೋರದ ಒಪ್ಪಂದ**— ಸತಲಜ-ಬಿಯಾಸಗಳ ನಡುಸೀಮೆಯನ್ನು ಸೀಖರು ಇಂಗ್ಲಿಷರಿಗೆ ಕೊಡಬೇಕು ೨. ಧುಲೀಪಸಿಂಗನು ಗುಲಾಬಸಿಂಗನಿಂದ ೧ ಕೋಟಿ ರೂಪಾಯಿ ಇಸಿದು ಕೊಂಡು ಅವನಿಗೆ ಕಾಶ್ಮೀರ ಪ್ರಾಂತವನ್ನು ಕೊಡಬೇಕು. ೩. ಯುದ್ಧದ ವೆಚ್ಚಕ್ಕಾಗಿ ೧೫ ಕೋಟಿ ರೂಪಾಯಿಗಳು ಇಂಗ್ಲಿಷರಿಗೆ ಸಲ್ಲಿಸಬೇಕು ೪. ಸೀಖ ಸೈನ್ಯವು ಒಟ್ಟು ೩೨ ಸಾವಿರಕ್ಕೆ ಮಿಕ್ಕಕೂಡದು. ೫. ರಾಜ್ಯದಲ್ಲಿ ಶಾಂತತೆಯುಂಟಾಗುವ ತನಕ ಇಂಗ್ಲಿಷರ ದಂಡೂ ರೆಸಿಡೆಂಟನೂ ಲಾಹೋರದಲ್ಲಿ ಇರಬೇಕು.

ಸೀಖರ ವೊದಲನೆಯ ಯುದ್ಧವು ಮುಗಿದ ಕೂಡಲೆ ಲಾರ್ಡ ಹಾರ್ಡಿಂಜನು ವಿಲಾಯತಿಗೆ ಹೋದನು. ಇವನ ಕಾಲದಲ್ಲಿ ಸಂಸ್ಥಾನಗಳ

ಲ್ಲಿಯ ಸತಿಹೋಗುವ ಪದ್ಧತಿಯು ಕಟ್ಟಾಯಿತು. ಗಂಗಾನದಿಯ ಕಾಲುವೆಯ ಕೆಲಸವು ಆರಂಭವಾಯಿತು

೧೮ನೆಯ ಪಾಠ.

ಲಾರ್ಡ ಡಾಲಹೌಸಿ

(ಕ್ರಿ ಶ ೧೮೪೮—೧೮೫೬)

೧. ಲಾರ್ಡ ಡಾಲಹೌಸಿಯೂ ಅವನ ಆಳಿಕೆಯ ಸ್ವರೂಪವೂ :- ಇವನು ವಯಸ್ಸಿನ ೩೫ನೆಯ ವರ್ಷ ಇಂಗ್ಲಂಡದ ಪಾರ್ಲಮೆಂಟಿನ ಸಭಾಸದ ನಾಗಿಯೂ ಮುಂದೆ ವ್ಯಾಪಾರಖಾತೆಯ ಮಂತ್ರಿಯಾಗಿಯೂ ಮನಸುಗೊಟ್ಟು ಕೆಲಸಮಾಡಿ ಹೆಸರಾಗಿದ್ದನು. ಕ್ರಿ ಶ. ೧೮೪೮ರಲ್ಲಿ ಗ ಜ ನಾಗಿ ಈ ದೇಶಕ್ಕೆ ಬಂದನು. ಇವನು ಮೊದಲು ಸೀಖರ ೨ನೆಯ ಯುದ್ಧವನ್ನಾಡಿ ಪಂಜಾಬ ಪ್ರಾಂತವನ್ನು ಇಂಗ್ಲಿಷರ ರಾಜ್ಯಕ್ಕೆ ಕೂಡಿಸಿ, ಇಂಗ್ಲಿಷ ರಾಜ್ಯದ ಮೇರೆಯನ್ನು ಅಫಘಾಣಿಸ್ಥಾನಕ್ಕೆ ನಿಲುಕಿಸಿದನು ಆಗ ಇಂಗ್ಲಿಷರಿಗೆ ತಡೆಯನ್ನುಂಟು ಮಾಡುವ ಕಸುವು ಈ ದೇಶದಲ್ಲಿ ಯಾರಲ್ಲಿಯೂ ಇಲ್ಲದಾಯಿತು ಆ ಬಳಿಕ ಡಾಲಹೌಸಿಯು ಇಂಗ್ಲಿಷರ ಸಾಮ್ರಾಜ್ಯರಕ್ಷಣೆಗೂ ವ್ಯಾಪಾರದ ಬೆಳವಣಿಗೆಗೂ ಅನುಕೂಲವಾಗುವಂತೆ **ಉಗೆಬಂಡಿ, ತಾರಾಯಂತ್ರ, ಪೋಸ್ಟ ಆಫೀಸ** ನೊದಲಾದ ಹೊಸ ಸಾಧನಗಳನ್ನು ಈ ದೇಶದಲ್ಲಿ ನೆಲೆಯಿಸುವ ಕೆಲಸವನ್ನು ಕೈಕೊಂಡು ಅದನ್ನು ಒತ್ತರದಿಂದ ಸಾಗಿಸಿದನು ಈ ಸಾಧನಗಳನ್ನೆ ದೇಶದ ತುಂಬ ಹರಡುವುದಾದರೆ ನಡುನಡುವೆ ಇರುವ ದೇಶೀಯ ರಾಜ್ಯಗಳ ಸವಲನ್ನು ಅಡಗಿಸುವದು ಅವಶ್ಯವೆಂದೆನಿಸಿದ್ದರಿಂದ ಇವನು ಹಲವು ಕಾರಣ ಗಳನ್ನು ಮುಂದೆ ಮಾಡಿ ಎಷ್ಟೋ ರಾಜ್ಯಗಳನ್ನು ಖಾಲಸಾ ಮಾಡಿದನು. ಅಲ್ಲದೆ ರಾಜ್ಯಕಾರಭಾರದಲ್ಲಿಯೂ ಬಹಳ ಸುಧಾರಣೆಗಳನ್ನು ಮಾಡಿದನು. ಒಟ್ಟಿನ ಮೇಲೆ ಇವನ ಆಳಿಕೆಯಲ್ಲಿ ಹಿಂದುಸ್ಥಾನದ ಸ್ವರೂಪವೇ ಬದಲಾಯಿ-ತೆಂದು ಹೇಳಬಹುದು.

೨. ಸೀಖರ ಎರಡನೆಯ ಯುದ್ಧ:— ಕ್ರಿ ಶ. **೧೮೪೮ - ೧೮೪೯. ಕಾರಣಗಳು**-ಲಾಹೋರದ ಒಪ್ಪಂದವಾದ ತುಸು ದಿನಗಳಲ್ಲಿಯೇ ಮತ್ತೊಂದು

ಒಪ್ಪಂದವಾಗಿ, ಧುಲೀಪಸಿಂಗನು ವಯಸ್ಸಿಗೆ ಬರುವ ತನಕ ಎಂಟು ಜನರಿರುವ ಮಂಡಲದ ನೆರವಿನಿಂದ ಇಂಗ್ಲಿಷ ರೆಸಿಡೆಂಟನೇ ಪಂಜಾಬದ ಕಾರಭಾರವನ್ನು ಸಾಗಿಸಬೇಕೆಂದು ಗೊತ್ತಾಯಿತು. ಆದರೆ ಮುಂದೆ, ಹೀಗೆ ತನ್ನ ಅಧಿಕಾರವನ್ನು ಕಳೆದುಕೊಂಡದ್ದು ಧುಲೀಪಸಿಂಗನ ತಾಯಿಯ ಮನಸ್ಸಿಗೆ ಬರಲಿಲ್ಲ; ಆಕೆಯು ಇಂಗ್ಲಿಷರ ವಿರುದ್ಧವಾಗಿ ಒಳಸಂಚು ನಡೆಸಿದಳು. ಸೀಖ ಜನರಿಗೂ ಹೊಸ ಆಳಿಕೆಯು ಸೇರಲಿಲ್ಲ. ಇದೇ ಹೊತ್ತಿಗೆ ಮಂಡಲದವರು **ಮುಲತಾನ**ದ ಸುಭೇದಾರನಾದ **ಮೂಲರಾಜ**ನಿಗೆ ಕಪ್ಪವನ್ನು ಕೇಳಿದರು. ಅವನು ಕಪ್ಪವನ್ನು ಕೊಡದೆ, ಮುಲತಾನವನ್ನೇ ಬಿಟ್ಟುಕೊಡುವೆನೆಂದು ಹೇಳಿದನು. ಕೂಡಲೆ ರೆಸಿಡೆಂಟನಾದ **ಸರ್ ಹೆನ್ರಿ ಲಾರೆನ್ಸ್**ನು ಇಬ್ಬರು ಇಂಗ್ಲಿಷ ಅಧಿಕಾರಿಗಳೊಡನೆ ಬೇರೊಬ್ಬ ಸುಭೇದಾರನನ್ನು ಮುಲತಾನಕ್ಕೆ ಕಳುಹಿದನು. ಆದರೆ ಅಲ್ಲಿ ಆ ಅಧಿಕಾರಿಗಳು ಕೊಲ್ಲಲ್ಪಟ್ಟರು. ಆಗ ಲಾಹೋರದಿಂದ ಒಂದು ದಂಡು ಮುಲತಾನದ ಮೇಲೆ ಸಾಗಿಸಲ್ಪಡಲು ಅದು ಮೂಲರಾಜನೊಡನೆ ಕಾದುವದನ್ನು ಬಿಟ್ಟು ಅವನನ್ನೇ ಕೂಡಿಕೊಂಡಿತು ಇದನ್ನು ಕಂಡು ಎಲ್ಲ ಸೀಖ ಜನರು ಇಂಗ್ಲಿಷರೊಡನೆ ಕಾದಲು ಅಣಿಯಾದರು

ಯುದ್ಧಗಳು— ಮುಂಬಯಿಯ ಇಂಗ್ಲಿಷ ಸೈನ್ಯವು ಮುಲತಾನವನ್ನು ಮುತ್ತಿತು. ಹ್ಯೂಗೋನು ೨೦ ಸಾವಿರ ಸೈನ್ಯದೊಂದಿಗೆ ಸೀಖರ ಸೀಮೆಯನ್ನು ಹೊಕ್ಕನು. ಆದರೆ **ರಾಮನಗರದ** ಯುದ್ಧದಲ್ಲಿ ಸೀಖರು ಇವನನ್ನು ಸೋಲಿಸಿದರು. ಬಳಿಕ ಇವನು ಒಳ್ಳೆಯ ಆವೇಶದಿಂದ **ಚಿಲಿಯಾನವಾಲಾ** ಎಂಬಲ್ಲಿಯ ಸೀಖರ ಪಾಳಯವನ್ನು ನುಗ್ಗಿದನು. ಆದರೆ ಅಲ್ಲಿಯೂ ಸೀಖರ ತೋಪುಗಳ ಹೊಡೆತಕ್ಕೆ ಹ್ಯೂಗೋನ ಸೈನ್ಯವು ನುಗ್ಗಾಯಿತು. ಅಷ್ಟರಲ್ಲಿ ಮುಂಬಯಿಯ ಸೈನ್ಯವು ಮುಲತಾನವನ್ನು ವಶಮಾಡಿಕೊಂಡು ಹ್ಯೂಗೋನ ನೆರವಿಗೆ ಬಂದಿತು. ಬಳಿಕ **ಗುಜರಾತ** ಎಂಬಲ್ಲಿ ಮತ್ತೊಂದು ಯುದ್ಧವಾಯಿತು. ಅಲ್ಲಿ ಮಾತ್ರ ಸೀಖರು ಪೂರ್ಣವಾಗಿ ಸೋತರು. ಸೀಖರ ನಾಯಕನಾದ **ಶೇರಸಿಂಗನು** ಇಂಗ್ಲಿಷರ ಕೈಗೆ ಸಿಕ್ಕನು.


೩. ಯುದ್ಧದ ತರುವಾಯದ ಪಂಜಾಬದ ವ್ಯವಸ್ಥೆ:— ಡಾಲ ಹೌಸಿಯು × ಧುಲೀಪಸಿಂಗನಿಗೆ ೫ ಲಕ್ಷ ರೂಪಾಯಿ ವರ್ಷಾಶನವನ್ನು

× ಬಳಿಕ ಧುಲೀಪಸಿಂಗನು ಇಂಗ್ಲಂಡಕ್ಕೆ ಹೋಗಿ ಕ್ರಿಸ್ತಧರ್ಮವನ್ನು ಸೇರಿ ಅಲ್ಲಿಯೇ ಕಾಲ ಕಳೆದನು. ಕೋಹಿನೂರರತ್ನವು ಇವನಿಂದಲೇ ವಿಕ್ಟೋರಿಯಾ ಮಹಾರಾಣಿಯವರಿಗೆ ಕೊಡಲ್ಪಟ್ಟಿತು.

ಗೊತ್ತುಮಾಡಿ ಪಂಜಾಬ ಪ್ರಾಂತವನ್ನು ಇಂಗ್ಲಿಷರ ರಾಜ್ಯಕ್ಕೆ ಕೂಡಿಸಿದನು; ಮೂಲರಾಜನನ್ನು ಗಡಿದಾಟಿಸಿದನು. ಬಳಿಕ ಸೀಖರ ರೆಸಿಡೆಂಟನಾಗಿದ್ದ ಹೆನ್ರಿ ಲಾರೆನ್ಸ ಮತ್ತು ಅವನ ತಮ್ಮ **ಸರ್ ಜಾನ್ ಲಾರೆನ್ಸ** ಇವರಿಬ್ಬರ ಕಡೆಗೆ ಪಂಜಾಬದ ಕಾರಭಾರವು ಒಪ್ಪಿಸಲ್ಪಟ್ಟಿತು. ಪಂಜಾಬದ ಎಲ್ಲ ಜನರ ಶಸ್ತ್ರಗಳು ಕಸಿಯಲ್ಪಟ್ಟವು. ಪಂಜಾಬದಲ್ಲಿ ಶಾಂತತೆಯುಂಟಾಗಿ ಇಂಗ್ಲಿಷರ ಆಳಿಕೆಯು ಆರಂಭವಾಯಿತು.

೪. **ಬ್ರಹ್ಮದೇಶದ ೨ನೆಯ ಯುದ್ಧ**:— ಕ್ರಿ. ಶ. ೧೮೫೨. **ಕಾರಣ**—**ಎಂದಬು** ಒಪ್ಪಂದವಾದಂದಿನಿಂದ ಇಂಗ್ಲಿಷರ ವಕೀಲನು **ಅವಾ**ದಲ್ಲಿ ಇರಹತ್ತಿದನು ಆದರೆ ಅಲ್ಲಿಯ ಓಲಗದವರು ಅವನೊಡನೆ ತಕ್ಕ ರೀತಿಯಲ್ಲಿ ನಡೆಯುತ್ತಿರಲಿಲ್ಲ. ಕೆಶ ೧೮೪೧ಗಳ್ಲಂತೂ ಅವರು ಇಂಗ್ಲಿಷ ವಕೀಲನನ್ನು ತಮ್ಮಲ್ಲಿಂದ ಹೊರಡಿಸಿಬಿಟ್ಟರು. ಆಗ ಅಫಘಾಣಿಸ್ಥಾನದ ಯುದ್ಧದ ಪ್ರಸಂಗ ವಿದ್ದುದರಿಂದ ಗ. ಜ ನಾಗಿದ್ದ ಆಕ್ಲಂಡನು ಈ ಅಪಮಾನದ ಸೇಡು ತೀರಿಸುವ ಗೋಜಿಗೆ ಹೋಗಲಿಲ್ಲ **ರಂಗೂನ**ದಲ್ಲಿಯ ಬ್ರಹ್ಮೀ ವ್ಯಾಪಾರಸ್ಥರಿಗೂ ಇಂಗ್ಲಿಷ ವ್ಯಾಪಾರಸ್ಥರಿಗೂ ಮೇಲಿಂದಮೇಲೆ ಜಗಳಗಳಾಗುತ್ತಿದ್ದವು. ಡಾಲಹೌಸಿಯ ಕಾಲದಲ್ಲಿ ಇಂಗ್ಲಿಷ ವ್ಯಾಪಾರಸ್ಥರು ತಮಗಾಗುವ ತೊಂದರೆಗಳನ್ನು ಮೂರಿ-ಕೊಂಡರು ಆಗ ಡಾಲಹೌಸಿಯು 'ರಂಗೂನದ ಅಧಿಕಾರಿಗಳನ್ನು ತೆಗೆದುಹಾಕಿ ನಮ್ಮವರ ಹಾನಿಯನ್ನು ತುಂಬಿಕೊಡಬೇಕು' ಎಂದು ಬ್ರಹ್ಮದೇಶದ ಅರಸನಿಗೆ ತಿಳಿಸಿದನು ಆದರೆ ಅದಕ್ಕೆ ಉತ್ತರವು ಕೂಡ ಬರದೆಯಿದ್ದುದರಿಂದ ಯುದ್ಧವು ಆರಂಭವಾಯಿತು. **ಯುದ್ಧ**:— ಇಂಗ್ಲಿಷರ ಹಡಗುಪಡೆಯೂ ಸೈನ್ಯವೂ ಹೊರಟು **ಮಾರ್ತಾಬಾನ** ಬಂದರವನ್ನೂ ರಂಗೂನಪಟ್ಟಣವನ್ನೂ ಹಿಡಿದು-ಕೊಂಡವು. ಬಳಿಕ **ಪ್ರೋಮ** ಪಟ್ಟಣವೂ ಇಂಗ್ಲಿಷರ ಕೈಸೇರಿತು ಆದರೂ ಆ ದೇಶದ ಅರಸನು ಒಪ್ಪಂದಕ್ಕೆ ಒಪ್ಪಲಿಲ್ಲ. ಆದದರಿಂದ ಡಾಲಹೌಸಿಯು **ಪೇಗೂ** ಪ್ರಾಂತವು ಇಂಗ್ಲಿಷರ ರಾಜ್ಯಕ್ಕೆ ಕೂಡಿಸಲ್ಪಟ್ಟಿತೆಂದು ಸಾರಿ ಅಲ್ಲಿ ತಮ್ಮ ಅಧಿಕಾರಿಗಳನ್ನು ನಿಯಮಿಸಿದನು. ಬಂಗಾಲದ ಉಪಸಾಗರಕ್ಕೆ ಹೊಂದಿದ ಬ್ರಹ್ಮದೇಶದ ದಂಡೆಯ ಪ್ರದೇಶವೆಲ್ಲ ಇಂಗ್ಲಿಷರ ವಶವಾದಂತಾಯಿತು.

೫. **ಡಾಲಹೌಸಿಯು ಕೆಸಿದುಕೊಂಡ ರಾಜ್ಯಗಳು**:— **(ಅ) ದತ್ತಕ ಮಗನ ಅಧಿಕಾರವನ್ನು ಒಪ್ಪದೆ ಕೆಸಿದುಕೊಂಡ ರಾಜ್ಯಗಳು**—



ಬ್ರಿಟಿಶರ ರಾಜ್ಯವಿಸ್ತಾರ

೧. **ಸಾತಾರೆ**- ೨ನೆಯ ಶಾಹೂರಾಜನು ಕ್ರಿ ಶ ೧೮೪೮ರಲ್ಲಿ ಸಾಯಲು, ಅವನು ಮಾಡಿಕೊಂಡ ಮ ಗ ನಿ ಗೆ ರಾಜ್ಯವನ್ನು ನಡೆಯಿಸವೆ ಅದನ್ನು ಡಾಲಹೌಸಿಯು ಇಂಗ್ಲಿಷರ ರಾಜ್ಯಕ್ಕೆ ಕೂಡಿಸಿದನು. ೨. **ಝಾಂಸಿ**- ಕ್ರಿ ಶ ೧೮೫೩ರಲ್ಲಿ ಇಲ್ಲಿಯ ಅರಸನಾದ ಗಂಗಾಧರರಾಯನು ಸಾಯಲು, ದತ್ತಕ ಮಗನ ಬಾಧ್ಯತೆಯನ್ನೊಪ್ಪದೆ ಆ ರಾಜ್ಯವನ್ನು ಕಸಿದುಕೊಂಡನು. ೩. **೨ನೆಯ ಬಾಜೀರಾಯನ ವರ್ಷಾಶನ**— ಬಾಜಿರಾಯನು ಕ್ರಿ ಶ. ೧೮೫೩ರಲ್ಲಿ ಸತ್ತ ಕೂಡಲೆ ಅವನಿಗೆ ಸಲ್ಲುತ್ತಿದ್ದ ೮ ಲಕ್ಷ ರೂ. ವರ್ಷಾಶನಕ್ಕೆ ದತ್ತಕ ಮ ಗ ನಾ ದ ನಾನಾಸಾಹೇಬನು ಅಧಿಕಾರಿಯಾಗನೆಂದು ಹೇಳಿ ಅದನ್ನು ಪೂ ರ್ಣ ವಾ ಗಿ ನಿಲ್ಲಿಸಿದನು. **(ಆ) ದತ್ತಕ ಮಾಡಿಕೊಳ್ಳಲು ಒಪ್ಪಿಗೆ ಕೊಡದೆ ಕಸಿದುಕೊಂಡ ರಾಜ್ಯಗಳು**— ೧. **ನಾಗಪುರ**— ರಘೂಜಿ ಭೋಸಲೆಯು ಮಕ್ಕಳಿಲ್ಲದೆ ಸಾಯಲು ನಾಗಪುರ ರಾಜ್ಯವು ಇಂಗ್ಲಿಷರಿಗೆ ಆಯಿತು ೨. **ತಂಜಾವರ, * ಉದೇಪುರ, ಜೈತಪುರ, ಸಂಬಳಪುರ** ಈ ರಾಜ್ಯಗಳ ಅ ರ ಸ ರು ಮಕ್ಕಳಿಲ್ಲದೆ ತೀರಿಕೊಳ್ಳಲು ಇವು ಇಂಗ್ಲಿಷರ ರಾಜ್ಯಕ್ಕೆ ಸೇರಿಸಲ್ಪಟ್ಟವು. ೩. **ಕರ್ನಾಟಕದ ನವಾಬನ ವರ್ಷಾಶನ**— ಕರ್ನಾಟಕದ ನವಾಬನ ವಂಶಜನಾದ **ಗೌಸಖಾನ** ಎಂಬವನು ಸಂತತಿಯಿಲ್ಲದೆ ಸಾ ಯ ಲು ಆ ಮನೆತನಕ್ಕೆ ಸಲ್ಲುತ್ತ ಬಂದಿದ್ದ ವರ್ಷಾಶನವು ಕಟ್ಟಾಯಿತು. **(ಇ) ಅನ್ಯನಸ್ಥಿಯಿದ್ದ ನೆವದಿಂದ ಕಸಿದುಕೊಂಡ ರಾಜ್ಯಗಳು**— ೧. **ಅಯೋಧ್ಯೆ**— ವಜೀರನು ಚೆನ್ನಾಗಿ ಆಳಲು ಅಸಮರ್ಥನಾಗಿದ್ದನು; ಅವನ ರಾಜ್ಯದಲ್ಲಿ ತಾಲೂಕದಾರರು ರೈತರನ್ನು ಪೀಡಿಸುತ್ತಿದ್ದರು. ಆದದರಿಂದ ಈ ರಾಜ್ಯವು ಇಂಗ್ಲಿಷ ರಾಜ್ಯಕ್ಕೆ ಕೂಡಿತು. ೨. **ಖೈರಪುರ**- ಇಲ್ಲಿಯ ಅಮೀರನಾದ ಅಲ್ಲೀಮುರಾದನು ಚೆನ್ನಾಗಿ ರಾಜ್ಯವಾಳುವದಿಲ್ಲೆಂದು ಕಂಡುಬಂದವರಿಂದ ಡಾಲಹೌಸಿಯು ೩-೪ ಲಕ್ಷದ ಜಹಗೀರನ್ನು ಉಳಿಸಿ ಮಿಕ್ಕ ರಾಜ್ಯವನ್ನು ಕಸಿದುಕೊಂಡನು. ೩. **ದಾರ್ಜಿಲಿಂಗ**- ನೇಪಾಳ, ಭೂತಾನ ಈ ರಾಜ್ಯಗಳ ನಡುವೆ **ಸಿಕಿಮ** ಎಂಬ ಸಣ್ಣ ಸಂಸ್ಥಾನವಿದೆ. ಅದರೊಳಗಿನ ದಾರ್ಜಿಲಿಂಗ ಎಂಬುದು ಬೇಸಿಗೆಯಲ್ಲಿ ಇ ರ ಲು ಅನುಕೂಲವಾದ ತಂಪು ಪ್ರದೇಶವು ಇದನ್ನು ಇಂಗ್ಲಿಷರು ತಮ್ಮ ಕಡೆಗೆ ಇಟ್ಟುಕೊಂಡು ವರ್ಷಕ್ಕೆ

* ಇದೊಂದು ಸಂಸ್ಥಾನವು ಮಾತ್ರ ಲಾರ್ಡ ಕ್ಯಾನಿಂಗನ ಕಾಲದಲ್ಲಿ ಮರಳಿ ಕೊಡಲ್ಪಟ್ಟಿತು.

ಆರು ಸಾವಿರ ರೂಪಾಯಿಗಳನ್ನು ಸಿಕಿಮದ ಅರಸನಿಗೆ ಸಲ್ಲಿಸುತ್ತಿದ್ದರು. ಆದರೆ ಡಾಲಹೌಸಿಯ ಕಾಲದಲ್ಲಿ ಅಲ್ಲಿಯ ಅರಸನು ಇಬ್ಬರು ಇಂಗ್ಲಿಷರನ್ನು ಸೆರೆ ಹಿಡಿದದ್ದರಿಂದ ದಾರ್ಜಿಲಿಂಗವೂ ಅದರ ನೆರೆಯ ಸೀಮೆಯೂ ಅವನಿಂದ ತೆಗೆದುಕೊಳ್ಳಲ್ಪಟ್ಟವು **(ಈ) ಸೈನ್ಯದ ವೆಚ್ಚಕ್ಕಾಗಿ ತೆಗೆದುಕೊಂಡ ಸೀಮೆ–ವರ್ಹಾಡ ಪ್ರಾಂತವೂ ರಾಯಚೂರು, ನಂದಿದುರ್ಗ ಸರಗಣೆಗಳೂ**– ನಿಜಾಮನು ತನ್ನಲ್ಲಿಟ್ಟುಕೊಂಡ ಸೈನ್ಯದ ಸಂಬಂಧದಿಂದ ೮೦ ಲಕ್ಷ ರೂಪಾಯಿಗಳನ್ನು ಇಂಗ್ಲಿಷರಿಗೆ ಕೊಡತಕ್ಕದ್ದಿತ್ತು. ಡಾಲಹೌಸಿಯು ಎಲ್ಲ ಹಣವನ್ನು ಇಲ್ಲವೆ ಅಷ್ಟು ಉತ್ಪನ್ನದ ಸೀಮೆಯನ್ನು ಕೊಡಲೇಬೇಕೆಂದು ತಿಳಿಸಲು ನಿಜಾಮನು ೪೦ ಲಕ್ಷ ರೂಪಾಯಿಗಳನ್ನು ಕೊಟ್ಟು, ಉಳಿದ ಹಣದ ಸಲುವಾಗಿ ೧ ವರ್ಷದ ಅವಧಿಯನ್ನು ಕೇಳಿಕೊಂಡನು ಆದರೆ ವರ್ಷದ ಮೇಲೆಯೂ ಹಣ ಕೊಡುವದಾಗಲಿಲ್ಲ. ಆಗ ಡಾಲಹೌಸಿಯು ಅವನೊಡನೆ ಹೊಸ ಕರಾರು ಮಾಡಿಕೊಂಡು ವರ್ಹಾಡ, ರಾಯಚೂರ, ನಂದಿದುರ್ಗ ಈ ಸೀಮೆಗಳನ್ನು ತನ್ನ ವಶಕ್ಕೆ ತೆಗೆದುಕೊಂಡನು. ಕ್ರಿ. ಶ ೧೮೫೩

೬. ಡಾಲಹೌಸಿಯ ಕಾಲದ ಸುಧಾರಣೆಗಳು:— ೧. ಬಂಗಾಲ ಪ್ರಾಂತದ ಕಾರಭಾರವನ್ನು ಗ. ಜನರಲನೇ ಸಾಗಿಸುತ್ತಿದ್ದನು. ಡಾಲಹೌಸಿಯ ಕಾಲದಲ್ಲಿ ಆ ಪ್ರಾಂತವು ಸ್ವತಂತ್ರ ಇಲಾಖೆಯಾಗಿ, ಅದಕ್ಕೊಬ್ಬ **ಲೆಫ್ಟನಂಟ ಗವ್ಹರ್ನರನು** ನಿಯಮಿಸಲ್ಪಟ್ಟನು. ಎಲ್ಲ ಪ್ರಾಂತಗಳ ಮೇಲ್ವಿಚಾರಣೆಯೊಂದೇ ಗ. ಜನರಲನ ಕೆಲಸವಾಯಿತು. ೨. ಕಲಕತ್ತೆಗೆ ಬದಲಾಗಿ **ಮಿರತ** ಎಂಬದು ಸೈನ್ಯದ ಮುಖ್ಯ ಠಾಣ್ಯವಾಯಿತು. ೩. **ಪಬ್ಲಿಕ್ ವರ್ಕ್ಸ್** ಎಂಬ ಖಾತೆಯನ್ನೇರ್ಪಡಿಸಿ ಮಾರ್ಗ, ಕಾಲುವೆ ಮುಂತಾದವುಗಳನ್ನು ಕಟ್ಟಿಸುವ ಕೆಲಸವನ್ನು ಒತ್ತರದಿಂದ ಸಾಗಿಸಿದನು ೪. ಕೆಲವು ಖಾತೆಗಳಿಂದ ಕೂಡಿದ ಒಂದೊಂದು ವಿಭಾಗದ ಮೇಲ್ವಿಚಾರಣೆಯ ಕೆಲಸವನ್ನು ಒಬ್ಬೊಬ್ಬ ಸಭಾಸದನಿಗೆ ಒಪ್ಪಿಸಿದನು. ೫. ಇಂಗ್ಲಂಡದಲ್ಲಾಗುತ್ತಿದ್ದ **ಸಿವ್ಹಿಲ್ ಸರ್ವಿಸ್** ಎಂಬ ಪರೀಕ್ಷೆಗೆ ಕೂಡಲು ಈ ದೇಶದವರಿಗೂ ಅನುಕೂಲವಾಯಿತು. ೬. ಉಗೆಬಂಡಿ, ತಾರಾಯಂತ್ರ, ಪೋಸ್ಟ ಆಫೀಸ ಇವು ಹೊಸದಾಗಿ ಬಳಿಕೆಯಲ್ಲಿ ಬಂದವು. ೭. **ಶಿಕ್ಷಣಖಾತೆ**ಯನ್ನು ಸ್ಥಾಪಿಸಿ ವಿದ್ಯಾಪ್ರಸಾರಕ್ಕೆ ಅನುಕೂಲ ಮಾಡಿದನು. ಅಂದಿನಿಂದ ಅಲ್ಲಲ್ಲಿ ದೇಶಭಾಷೆಯ ಶಾಲೆಗಳುಂಟಾದವು. ಅಲ್ಲದೆ, ಜನರು

ನಡೆಸಿದ ಶಾಲೆಗಳಿಗೂ ಹಣದ ಸಹಾಯವು ಸಿಗಹತ್ತಿತು. ೮. ಹಾರ್ಡಿಂಜನ ಕಾಲದಲ್ಲಿ ಆರಂಭವಾಗಿದ್ದ ಗಂಗೆಯ ಕಾಲುವೆಯು ಇವನ ಕಾಲಕ್ಕೆ ಮುಗಿಯಿತು. ಈ ದೊಡ್ಡ ಕಾಲುವೆಯಿಂದ ಒಕ್ಕಲತನಕ್ಕೂ ಸರಕು-ಹಡಗುಗಳ ಓಡಾಟಕ್ಕೂ ಅನುಕೂಲವಾಯಿತು.

೭. **ಕಂಪನಿಯ ಸನದಿನ ವಿಚಾರ** :— ಕ್ರಿ ಶ. ೧೮೫೩. ಕಂಪನಿಯ ಸನದಿನ ೨೦ ವರ್ಷದ ಅವಧಿಯು ಮುಗಿದುದರಿಂದ ಪಾರ್ಲಮೆಂಟಿನಲ್ಲಿ ಮತ್ತೆ ಅದರ ವಿಚಾರಣೆಯು ನಡೆದು, 'ಕಂಪನಿಯ ಕೈಯ ರಾಜ್ಯಭಾರವನ್ನು ಪಾರ್ಲಮೆಂಟಿನವರು ಬೇಕಾದಾಗ ತಮ್ಮ ಕಡೆಗೆ ತೆಗೆದುಕೊಳ್ಳಬಹುದು. ಆ ವರೆಗೆ ಕಂಪನಿಯು ಮೊದಲಿನಂತೆಯೆ ಕಾರಭಾರವನ್ನು ಸಾಗಿಸಬೇಕು' ಎಂದು ಗೊತ್ತಾಯಿತು.

೮. **ಡಾಲಹೌಸಿಯ ಆಳಿಕೆಯ ಕೊನೆಯೂ ಯೋಗ್ಯತೆಯೂ** :— **ವೆಲಸ್ಲಿ**ಯು ಬರಿಯ ರಾಜ್ಯವನ್ನು ವಿಸ್ತರಿಸಿದನು; ಬೆಂಟಿಂಕನು ರಾಜ್ಯವಿಸ್ತಾರಕ್ಕಿಂತ ಸುಧಾರಣೆಗಳನ್ನು ಮಾಡುವಲ್ಲಿ ಹೆಚ್ಚು ಮನಸ್ಸುಹಾಕಿದನು. ಆದರೆ ಡಾಲಹೌಸಿಯು ಇವೆರಡೂ ಕೆಲಸಗಳನ್ನು ಮಿತಿಮೀರಿ ಮಾಡಿ ಹೆಸರಾದನು. ಇಡೀ ಹಿಂದುಸ್ಥಾನವನ್ನು ಇಂಗ್ಲಿಷರ ಅಧಿಕಾರಕ್ಕೆ ಒಳಪಡಿಸುವ ಕೆಲಸವನ್ನು ಮುಗಿಸಿ, ಹೊಸ ಸುಧಾರಣೆಗಳಿಂದ ಈ ದೇಶವನ್ನು ಸಿಂಗರಿಸಿ ಇವನು ಕೃತಕೃತ್ಯನೆನಿಸಿದನು. ಇವನು ದೇಶೀಯ ರಾಜ್ಯಗಳನ್ನು ಕಸಿದುಗೊಂಡದ್ದರಿಂದ ಜನರಲ್ಲಿ ಅವಿಶ್ವಾಸವೂ ಅಸಮಾಧಾನವೂ ಉಂಟಾದವು. ಆದದರಿಂದ ಇವನು ಬಳಕೆಯಲ್ಲಿ ತಂದ ಉಗೆಬಂಡಿ ಮೊದಲಾದ ಹೊಸ ಸಾಧನಗಳ ಮಹತ್ವವು ಜನರ ಲಕ್ಷ್ಯಕ್ಕೆ ಬರಲಿಲ್ಲ. ಇವನು ಕ್ರಿ. ಶ. ೧೮೫೬ರಲ್ಲಿ ತನ್ನ ದೇಶಕ್ಕೆ ಹೋದನು.

೧೯ನೆಯ ಪಾಠ

ಲಾರ್ಡ ಕ್ಯಾನಿಂಗ

(ಕ್ರಿ. ಶ. ೧೮೫೬—೧೮೬೨.)

೧. **ಲಾರ್ಡ ಕ್ಯಾನಿಂಗನ ಬರುವಿಕೆಯೂ ಧೋರಣೆಯೂ** :— ಡಾಲಹೌಸಿಯು ಹೋಗಲು ಲಾರ್ಡ ಕ್ಯಾನಿಂಗನು ಗ. ಜ. ನಾಗಿ ಬಂದನು.

ಪಾರ್ಲಮೆಂಟಿನಲ್ಲಿ ಇವನು ಹಲವು ವರ್ಷ ಕೆಲಸಮಾಡಿ ರಾಜ್ಯಕಾರ್ಯವನ್ನೂ ಹಿಂದುದೇಶದ ಸ್ಥಿತಿಯನ್ನೂ ಅರಿತವನಾಗಿದ್ದನು. ಡಾಲಹೌಸಿಯ ಕೃತ್ಯಗಳ ಮೂಲಕ ಹಿಂದುಸ್ಥಾನದಲ್ಲಿ ಕಠಿಣವಾದ ಪ್ರಸಂಗವು ಒದಗಬಹುದೆಂದು ಇವನಿಗೆ † ಎನಿಸಿತ್ತು. ಇವನು ಸದಾಚಾರಿಯೂ ಶಾಂತನೂ ಆಗಿದ್ದನು.

೨. **ಇರಾಣದ ಯುದ್ಧ** :— ಕ್ರಿ. ಶ. ೧೮೫೬. ಕ್ಯಾನಿಂಗನು ಬಂದ ತುಸುದಿನಗಳಲ್ಲಿ ಇರಾಣದ ಯುದ್ಧದ ಪ್ರಸಂಗವು ಒದಗಿತು. ಅಫಗಾಣಿಸ್ಥಾನದ ಅಮೀರನಾದ ದೊಸ್ತಮಹಮ್ಮದನು ಇಂಗ್ಲಿಷರ ಗೆಳೆಯನಾಗಿದ್ದನು. ಅವನ ರಾಜ್ಯದಲ್ಲಿಯ **ಹಿರಾತ**ದ ಕೋಟೆಯನ್ನು ಇರಾಣದ ಶಹನು ಕಸಿದಿದ್ದನು ಆದದರಿಂದ ಇಂಗ್ಲಂಡದಿಂದ ಅಪ್ಪಣೆಯಾದ ಮೇರೆಗೆ ಕ್ಯಾನಿಂಗನು ಅಮೀರನ ನೆರವಿಗೆ ದಂಡು ಕಳುಹಿದನು. ಅದು ಅಮೀರನೊಡನೆ ಹೋಗಿ ಇರಾಣದವರ **ಬುಶಾಯರ** ಪಟ್ಟಣವನ್ನು ಹಿಡಿದುಕೊಂಡಿತು. ಆಗ ಷಾಹನು ತಾನು ತೆಗೆದುಕೊಂಡಿದ್ದ ಕೋಟೆಯನ್ನು ಬಿಟ್ಟುಕೊಟ್ಟು ಓಡಂಬಡಿಕೆ ಮಾಡಿಕೊಂಡನು.

೩. **೧೮೫೭ ರ ಬಂಡಾಯ**:— ಕ್ರಿ ಶ. **೧೮೫೭—೧೮೫೮. ಕಾರಣಗಳು**— ೧. ಡಾಲಹೌಸಿಯು ಹಲವು ದೇಶೀಯ ರಾಜ್ಯಗಳನ್ನೂ ವರ್ಷಾಶನಗಳನ್ನೂ ಖಾಲಸಾ ಮಾಡಿದ್ದರಿಂದ ಅಧಿಕಾರ, ಧನ, ಮಾನ ಇವುಗಳಿಗೆ ಎರವಾದ ಜನರು ಅಸಂತುಷ್ಟರಾಗಿದ್ದರು. ೨. ಮಿಶನರಿಗಳು ಈ ದೇಶದಲ್ಲಿ ನಡೆಸಿದ್ದ ಧರ್ಮಪ್ರಸಾರದ ಕೆಲಸಕ್ಕೆ ಡಾಲಹೌಸಿಯ ಕಾಲದಿಂದ ಕಂಪನಿಯ ಅಧಿಕಾರಿಗಳು ನೆರವಾಗಹತ್ತಿದರು; ವೇಲೂರ, ಬರಾಕಪುರಗಳ ಸೈನಿಕರ ದಂಗೆಗಳು, ಧರ್ಮಭಾವನೆಗಳಿಗೆ ಅಡ್ಡಿಯಾದದರಿಂದಲೆ ಉಂಟಾದ ವೆಂಬ ಮಾತು ಜನರಿಗೆ ಗೊತ್ತು ಇದ್ದಿತು. ಕ್ರಿ. ಶ. ೧೮೫೬ ರಲ್ಲಿ 'ಜಗತ್ತಿನ ಯಾವುದೇ ಭಾಗದಲ್ಲಿ ಹೋಗಿ ಕೆಲಸಮಾಡಲು ಒಪ್ಪಿಗೆ ಕೊಟ್ಟವರನ್ನೇ ಸೈನ್ಯದಲ್ಲಿ ಸೇರಿಸಿಕೊಳ್ಳಬೇಕು' ಎಂಬ ನಿಯಮವಾಯಿತು. ಈ ಕಾರಣಗಳ ಮೂಲಕ ಜನರಲ್ಲಿ, ಕಂಪನಿ ಸರಕಾರವು ನಮ್ಮ ಧರ್ಮವನ್ನು ಕೆಡಿಸಲು

---

† "ಇದೀಗ, ಹಿಂದುಸ್ಥಾನದ ಮುಗಿಲು ಮೋಡವಿಲ್ಲದುದೂ ಶಾಂತವೂ ಆಗಿ ತೋರುವುದಾದರೂ, ಒಂದಾನೊಂದು ಕಾರ್ಮೋಡವು ಹುಟ್ಟಿ, ಕ್ಷಣದಲ್ಲಿ ಬೆಳೆದು, ಆದು ಮುಗಿಲನ್ನೆಲ್ಲ ಯಾವ ಬಗೆಯಿಂದ ಮುಸುಕುವದೊ ತಿಳಿಯದು."

ಲಾರ್ಡ ಕ್ಯಾನಿಂಗ
(ಬೋರವಣಕರ ಕೃತ ಐ. ಹಿಂದುಸ್ಥಾನ)

ಹವಣಿಸುವದೆಂಬ ಸಂಶಯವು ಉಂಟಾಯಿತು. ೩. ಎಂದೂ ಕಾಣದೆಯಿದ್ದ ಉಗೆಬಂಡಿ, ತಾರಾಯಂತ್ರ ಈ ಹೊಸ ಸಾಧನಗಳು ಒಮ್ಮೆಲೆ ಬಳಕೆಯಲ್ಲಿ ಬಂದದರಿಂದ ಇವುಗಳನ್ನು ತಿಳುವಳಿಕೆಯಿಲ್ಲದ ಜನರು ಉತ್ಪಾದವೆಂದು ಭಾವಿಸಿದರು. ೪. "ಪ್ಲಾಸಿಯ ಯುದ್ಧದಿಂದ ಕಂಪನಿಯ ರಾಜ್ಯವು ಸ್ಥಾಪಿತವಾಯಿತು; ಅದು ನೂರು ವರ್ಷ ಬಾಳಿ ಮುಳುಗುವದು ಎಂದು ಭವಿಷ್ಯವಿದೆ; ಆ ಕಾಲವು ಈಗ ಸಮೀಪಿಸಿತು" ಎಂದು ಹಬ್ಬಿದ ಸುದ್ದಿಯನ್ನು ಹಲವರು ನಿಜವೆಂದು ನಂಬಿದ್ದರು. ೫. ದಿಲ್ಲಿಯಲ್ಲಿ ಇರುತ್ತಿದ್ದ ಬಹದ್ದೂರಷಾಹನಿಗೆ ವರ್ಷಾಶನ ಕೊಡುತ್ತಿದ್ದರು. ಆ ಮನೆತನಕ್ಕೆದ್ದ 'ಬಾದಷಾಹ' ಎಂಬ ಬಿರುದನ್ನು ಕಸಿದುಕೊಳ್ಳಬೇಕೆಂದು ಗೊತ್ತಾಯಿತು. ಇದನ್ನು ತಿಳಿದು ಮೊಗಲ ಮನೆತನವನ್ನು ಗೌರವದಿಂದ ಕಾಣುವ ದಿಲ್ಲಿ ಪ್ರಾಂತದ ಜನರು ಅಸಮಾಧಾನ ಹೊಂದಿದರು. ೬. ಅಯೋಧ್ಯಾ ಪ್ರಾಂತವು ಖಾಲಸಾ ಆದಬಳಿಕ ಅಲ್ಲಿಯ ಜಮೀನದಾರರ ಹಕ್ಕುಗಳನ್ನು ಕ್ರಮದಿಂದ ಕಡಿಮೆಮಾಡಿ ಜಮೀನದಾರಿ ಪದ್ಧತಿಯನ್ನೇ ಮುರಿದುಬಿಡಬೇಕೆಂದು ಗೊತ್ತಾಯಿತು. ಆದರೆ ಕಂಪನಿಯವರ ಈ ಕೃತಿಯು ಜಮೀನದಾರರಿಗೆ ಸಹನವಾಗಲಿಲ್ಲ. ೭. ದೇಶೀಯ ರಾಜ್ಯಗಳಲ್ಲಿದ್ದಾಗ ಸಹಾಯಕ ಸೈನ್ಯದ ಸೈನಿಕರಿಗೆ ಸಿಗುತ್ತಿದ್ದ ಭತ್ತೆಯು ಸಿಗುವದು ಕಟ್ಟಾಯಿತು. ಎಷ್ಟು ವರ್ಷ ದುಡಿದರೂ ದೇಶೀಯರಿಗೆ ಹೆಚ್ಚಿನ ಅಧಿಕಾರದ ಸ್ಥಳಗಳು ದೊರೆಯುತ್ತಿರಲಿಲ್ಲ. ಕ್ರಿ. ಶ. ೧೮೫೩ರಲ್ಲಿ **'ಎನ್‌ಫೀಲ್ಡ ರಾಯಫಲ್'** ಎಂಬ ಹೊಸ ತರದ ತುಬಾಕಿಗಳು ಸೈನಿಕರಿಗೆ ಕೊಡಲ್ಪಟ್ಟವು. ಅವುಗಳನ್ನು ಉಪಯೋಗಿಸುವಾಗ ಕಾಡತೂಸಗಳ ಬಾಯ್ ಹೊದಿಕೆಯನ್ನು ಹಲ್ಲುಗಳಿಂದ ಕಡಿದುತೆಗೆಯಬೇಕೆಂದು ನಿಯಮವಿದ್ದಿತು. ಈ ಕ್ರಮವು ಕೆಲವು ದಿನ ನಡೆದಿರಲು, ಕಾಡತೂಸುಗಳಿಗೆ ನೆಣವನ್ನು ತೊಡೆಯುವರೆಂಬ ಸಂಗತಿಯು ಒಂದು *ಪ್ರಸಂಗದಿಂದ ಎಲ್ಲರಿಗೆ ಗೊತ್ತಾಯಿತು. ಈ ಕಾರಣಗಳಿಂದ ಇಂಗ್ಲಿಷ

---

* ಈ ಕಾಡತೂಸುಗಳು **ಡಮಡಮ** ಎಂಬಲ್ಲಿಯ ಕಾರಖಾನೆಯಿಂದ ಬರುತ್ತಿದ್ದವು. ಆ ಕಾರಖಾನೆಯಲ್ಲಿ ದುಡಿಯುವ ಒಬ್ಬ ಹೊಲೆಯನಿಗೂ ಬರಾಕರಪುರದಲ್ಲಿಯ ಒಬ್ಬ ಬ್ರಾಹ್ಮಣ ಸೈನಿಕನಿಗೂ ಬಾವಿಯ ಮೇಲೆ ನೀರು ತುಂಬುವಾಗ ಒಮ್ಮೆ ಜಗಳವಾತ್ತಿತು. ಆ ಪ್ರಸಂಗದಲ್ಲಿ ಹೊಲೆಯನು "ಮಡಿಹುಡಿ ಮಾಡುವ ನೀವು, ಆಕಳು-ಹಂದಿಗಳ ನೆಣಹತ್ತಿದ ಕಾಡತೂಸುಗಳನ್ನು ಬಾಯಲ್ಲಿಟ್ಟು ಕೊಳ್ಳುವಿರಲ್ಲ!" ಎಂದು ಆ ಬ್ರಾಹ್ಮಣನಿಗೆ ಅಂದನು. ಈ ಮಾತಿನಿಂದ ಹಿಂದುಗಳೂ ಮುಸಲ್ಮಾನರೂ ಸಟ್ಟಾಗಿ ಕಾಡತೂಸುಗಳನ್ನು ಮುಟ್ಟಲಾರೆವೆಂದು ಹಟವನ್ನು ಹಿಡಿದರು.

ಸೈನ್ಯದಲ್ಲಿಯ ದೇಶೀಯ ಸೈನಿಕರು ಉಳಿದ ಜನರಿಗಿಂತ ಹೆಚ್ಚು ಅಸಂತುಷ್ಟರಾದರು.

೪. ಬಂಡಾಯದ ಆರಂಭವೂ ಅದರ ಹಬ್ಬುವಿಕೆಯೂ :-- ಹೀಗಿರುವಾಗ ಕ್ರಿ. ಶ. ೧೮೫೭ನೆಯ ಫೆಬ್ರುವರಿ ತಿಂಗಳನಲ್ಲಿ ರಾಣಿಗಂಜದ ಒಂದು ಸೈನ್ಯವಿಭಾಗದವರು ಕಾಡತೂಸುಗಳಿಗೆ ಕೈಹಚ್ಚುವದಿಲ್ಲೆಂದರು. ಆಗ ಅಧಿಕಾರಿಗಳು ಶಸ್ತ್ರಗಳನ್ನು ಕಸಿದುಕೊಂಡು ಅವರನ್ನು ಕೆಲಸದಿಂದ ತೆಗೆದುಹಾಕಿದರು. ತೆಗೆದುಹಾಕಲ್ಪಟ್ಟವರಲ್ಲಿ ಬಹು ಜನರು ಅಯೋಧ್ಯಾ-ರೋಹಿಲಖಂಡಗಳ ನಿವಾಸಿಗಳಿದ್ದರು. ಅವರು ತಮ್ಮ ಸೀಮೆಗಳಿಗೆ ಬಂದು ಕಲಕತ್ತೆಯ ಸೈನಿಕರ ವಿಚಾರಗಳನ್ನು ಜನರಲ್ಲಿ ಬಿತ್ತಹತ್ತಿದರು. ಮುಂದೆ ಎಪ್ರಿಲ್ ೨೪ನೆಯ ತಾ. ದಿನ ದಂಡಿನ ಮುಖ್ಯ ಶಿಬಿರವಾದ ಮಿರತದಲ್ಲಿ ಕವಾಯತಿಗೆ ನಿಲ್ಲಿಸಲ್ಪಟ್ಟ ಒಂದು ವಿಭಾಗದ ಬಹುತರ ಎಲ್ಲ ಜನರು ಕಾಡತೂಸುಗಳನ್ನು ಮುಟ್ಟಲಿಲ್ಲ. ಆದದರಿಂದ ಅವರಿಗೆಲ್ಲ ಶಿಕ್ಷೆಯು ವಿಧಿಸಲ್ಪಟ್ಟಿತು. ಬಳಿಕ ಅಧಿಕಾರಿಗಳು ಮೇ ತಿಂಗಳ ೯ನೆಯ ದಿನ, ಶಿಕ್ಷೆಹೊಂದಿದ ಜನರನ್ನು ಉಳಿದ ಸೈನಿಕರ ಮುಂದೆ ನಿಲ್ಲಿಸಿ, ಅವರ ಡ್ರೆಸ್ಸುಗಳನ್ನು ಕಸಿದುಕೊಂಡು ಸೆರೆಯಾಳುಗಳ ಬಟ್ಟೆಗಳನ್ನು ಕೊಟ್ಟರು. ಈ ಶಿಕ್ಷೆಹೊಂದಿದವರಲ್ಲಿ ಬಹು ಜನರು ಇಂಗ್ಲಿಷರಿಗಾಗಿ ಒಳ್ಳೆಯ ಶೌರ್ಯದಿಂದ ಕಾದಿದವರಾಗಿದ್ದರು. ಇಂಥವರಿಗೊದಗಿದ ಪ್ರಸಂಗವನ್ನು ನೋಡಿ ಉಳಿದ ಸೈನಿಕರ ಮನಸ್ಸು ಕಳವಳಿಸಿತು.

ಹೀಗಿರಲು, ಕ್ರಿ ಶ. ೧೮೫೭ರ ಮೇ ತಿಂಗಳ ೧೦ನೆಯ ದಿನ ಮಿರತದಲ್ಲಿಯೇ ಮೊದಲು ಬಂಡಾಯವೆದ್ದಿತು. ಆ ದಿನ ಸಂಜೆಗೆ ಬಂಡುಗಾರರು ಒಮ್ಮೆಲೆ ಸೆರೆಮನೆಯನ್ನು ನುಗ್ಗಿ ಅಲ್ಲಿದ್ದ ಸೈನಿಕರನ್ನು ಬಿಡಿಸಿಕೊಂಡು ಕಣ್ಣಿಗೆ ಬಿದ್ದ ಯುರೋಪಿಯನರನ್ನು ಕೊಲ್ಲಹತ್ತಿದರು. ಮತ್ತು ಮರುದಿನ ದಿಲ್ಲಿಯ ಮೇಲೆ ಸಾಗಿ, ಅಲ್ಲಿಯ ಹಿಂದೀ ಸೈನ್ಯವನ್ನು ತಮ್ಮ ಕಡೆಗೆ ಮಾಡಿಕೊಂಡು ಮಿರತದ ಕಾರ್ಯಕವನ್ನು ಅಲ್ಲಿಯೂ ಸಾಗಿಸಿದರು. ಬಳಿಕ ಅವರು ಮದ್ದುಗುಂಡುಗಳ ರಾಶಿಯನ್ನು ವಶಮಾಡಿಕೊಳ್ಳಹೋದರು. ಆದರೆ ಅದನ್ನು ರಕ್ಷಿಸುತ್ತಲಿದ್ದ ಯುರೋಪಿಯನ್ ಅಧಿಕಾರಿಗಳು ಅದು ಇನ್ನು ಬಂಡುಗಾರರ ಕೈಸೇರುವದೆಂದು ಎನಿಸಿದ ಕೂಡಲೆ ಜೀವದ ಹಂಗುದೊರೆದು ಅದಕ್ಕೆ ಬೆಂಕಿ

ಹಚ್ಚಿಬಿಟ್ಟರು ಆದರೂ ಎಷ್ಟೋ ಮದ್ದು-ಗುಂಡು ಬಂಡುಗಾರರ ಪಾಲಾಯಿತು. ಆಮೇಲೆ ಬಂಡುಗಾರರು ದಿಲ್ಲಿಯನ್ನು ಪೂರ್ಣ ವಶಮಾಡಿಕೊಂಡು ಬಹದ್ದೂರಷಾಹನನ್ನು ಒಳ್ಳೆಯ ಸಡಗರದಿಂದ ಪಟ್ಟಕ್ಕೆ ಕುಳ್ಳಿರಿಸಿದರು.

ಕಾನಪೂರ— ಬಂಡುಗಾರರು ದಿಲ್ಲಿಯನ್ನು ವಶಮಾಡಿಕೊಳುತ್ತಿರಲು ಇತ್ತ **ಕಾನಪೂರ, ಲಖನೌ, ಬನಾರಸ, ಝಾಂಸಿ, ಬರೇಲಿ, ನಿಮುಚ, ಗ್ವಾಲ್ಹೇರ, ನಸೀರಾಬಾದ** ಮುಂತಾದ ಎಡೆಗಳಲ್ಲಿಯೂ ಬಂಡಾಯವೆದ್ದಿತು. ಜೂನ ತಿಂಗಳ ಆರಂಭಕ್ಕೆ ಕಾನಪುರದ ಸಿಪಾಯಿಗಳು ಬಂಡುಹೂಡಿದರು. ಪೇಶ್ವೆಯ ಬಾಜೀರಾಯನ ದತ್ತಕಮಗ **ನಾನಾಸಾಹೇಬ**ನು ಅವರ ಮುಂದಾಳಾಗಿ ಅಲ್ಲಿಯ ಇಂಗ್ಲಿಷ ಠಾಣ್ಯವನ್ನು ಮುತ್ತಿದನು. ಸುಮಾರು ಮೂರು ವಾರಗಳ ವರೆಗೆ ಒಳಗಿನವರು ತಡೆದಿದ್ದರು. ಆಮೇಲೆ ಅವರು ಮುಂದುಗಾಣದೆ ನಿಶಸ್ತ್ರರಾಗಿ ನಾನಾಸಾಹೇಬನಿಗೆ ಶರಣುಹೋದರು. ಮತ್ತು ಹೆಂಗಸರನ್ನು ಹುಡುಗರನ್ನು ಅವನ ವಶಕ್ಕೆ ಕೊಟ್ಟು ತಾವು ನಾವುಗಳಿಂದ ಅಲಹಾಬಾದದ ಕಡೆಗೆ ಹೊರಟರು. ಆದರೆ ಬಂಡುಗಾರರು ಗುಂಡುಗಳ ಮಳೆಗರೆದು ಬಹುತರ ಯಾವತ್ತು ಜನರನ್ನು ನಾಶಗೊಳಿಸಿದರು. **ಲಖನೌ**- ಇಲ್ಲಿಯ ಅಸಂತುಷ್ಟರಾದ ಸೈನಿಕರಿಗೆ ಜಮೀನದಾರರ ಮತ್ತು ಉಳಿದ ಜನರ ನೆರವು ಇದ್ದಿತು. ಬಂಡುಗಾರರು ಕಮಿಶನರಾದ ಸರ್ ಹೆನ್ರಿ ಲಾರೇನ್ಸನನ್ನು ಕೊಂದು ಇಂಗ್ಲಿಷರ ಶಿಬಿರವನ್ನು ಮುತ್ತಿದರು. **ಝಾಂಸಿ**- ಜೂನ ತಿಂಗಳ ಆರಂಭಕ್ಕೆ ಬಂಡಾಯವೆದ್ದಿತು. ಬಂಡುಗಾರರು ತಮ್ಮ ನೇಲಧಿಕಾರಿಗಳನ್ನು ಕೊಂದು ಕೋಟೆಯನ್ನು ನುಗ್ಗಿ ಒಳಗಿದ್ದ ಯುರೋಪಿಯನರನ್ನು ಕೊಲೆಮಾಡಿದರು. ಮತ್ತು ಝಾಂಸಿಯ ರಾಣಿಯಾಗಿದ್ದ ಲಕ್ಷ್ಮೀಬಾಯಿಯ ಕಡೆಯಿಂದ ಒಂದು ಲಕ್ಷ ರೂಪಾಯಿಗಳನ್ನು ಕಸಿದುಕೊಂಡು ದಿಲ್ಲಿಯ ಕಡೆಗೆ ಸಾಗಿದವರು ನಡುವೆಯೆ ಕಾನಪುರದ ಕಡೆಗೆ ತಿರುಗಿ ನಾನಾಸಾಹೇಬನನ್ನು ಕೂಡಿಕೊಂಡರು.

೫. **ಬಂಡಾಯವನ್ನು ಅಡಿಗಿಸಿದ್ದು :— ದಿಲ್ಲಿ**- ಬಂಡುಗಾರರು ದಿಲ್ಲಿಯನ್ನು ಹೊಕ್ಕು ಯುರೋಪಿಯನರ ಕೊಲೆ ನಡೆಸಿರುವಾಗಲೆ ಯುರೋಪಿಯನನೊಬ್ಬನು ಹೊತ್ತುಸಾಧಿಸಿ ಬಂಡಾಯದ ಸುದ್ದಿಯನ್ನು ತಂತಿಯಿಂದ ಪಂಜಾಬಕ್ಕೆ ಮುಟ್ಟಿಸಿದನು. ಪಂಜಾಬದ ಗವರ್ನಾದ ಸರ್ ಜಾನ್ ಲಾರೇನ್ಸನು

ದಂಡಿನೊಡನೆ ಜನರಲ್ **ನಿಕಲ್ಸನ**ನನ್ನು ದಿಲ್ಲಿಗೆ ಕಳುಹಿದನು. ಸಪ್ಟಂಬರ ತಿಂಗಳ ಮಧ್ಯದ ಸುಮಾರಿಗೆ ದೊಡ್ಡ ಯುದ್ಧವಾಗಿ ನಿಕಲಸನನೂ ಬಹು ಜನ ಸೈನಿಕರೂ ಹತರಾದರು. ಆದರೂ ಕೊನೆಗೆ ಕಾಶ್ಮೀರ ಅಗಸೆಯಿಂದ ಇಂಗ್ಲಿಷರ ಸೈನ್ಯವು ಒಳನುಗ್ಗಿತು. ಬಳಿಕ ಇಂಗ್ಲಿಷರ ಕಡೆಯ ಹಡಸನ್ ಎಂಬವನು ಬಹಾದ್ದೂರಷಾಹನ ಇಬ್ಬರು ಮಕ್ಕಳನ್ನು ಗುಂಡು ಹಾಕಿ ಕೊಂದನು. ಇಂಗ್ಲಿಷರು ಬಹಾದ್ದೂರಷಾಹನನ್ನು ಸೆರೆಹಿಡಿದು ರಂಗೂನದಲ್ಲಿ ಒಯ್ದಿಟ್ಟರು. **ಕಾನಪುರ**- ಅಲಹಾಬಾದದಲ್ಲೆದ್ದ ಬಂಡಾಯವನ್ನು ಮುರಿದ ಬಳಿಕ ಇಂಗ್ಲಿಷರು ಅಲ್ಲಿಯೇ ಠಾಣ್ಯವನ್ನು ಮಾಡಿಕೊಂಡು ಕಾನಪುರ ಮೊದಲಾದ ಬಂಡುಗಾರರಿದ್ದ ಸ್ಥಳಗಳಿಗೆ ಸೈನ್ನವನ್ನು ಕಳುಹಿಸಹತ್ತಿದರು. ಕಾನಪುರದಲ್ಲಿಯ ಯುರೋಪಿಯನರು ಬಂಡುಗಾರರ ಕೈಯಲ್ಲಿ ಸಿಕ್ಕು ನಾಶ ಹೊಂದಿದ ಸುದ್ದಿಯನ್ನು ಕೇಳಿ ಜ. **ಹ್ಯಾವಲಾಕ**ನು ಕಾನಪುರದ ಮೇಲೆ ಸಾಗಿದನು. ಇವನು ಬಂದನೆಂಬದನ್ನು ಕೇಳಿ ಬಂಡಗಾರರು ತಮ್ಮ ವಶದಲ್ಲಿದ್ದ ಯುರೋಪಿಯನ್ ಹೆಂಗಸರನ್ನೂ ಹುಡುಗರನ್ನೂ ಕೊಂದುಬಿಟ್ಟರು. ಮುಂದೆ ಹ್ಯಾವಲಾಕನ ಎದುರಿಗೆ ತನ್ನ ಆಟ ಸಾಗದೆಂದು ತಿಳಿದು ನಾನಾಸಾಹೇಬನು ಓಡಿಹೋದನು ತರುವಾಯ ಕಾನಪುರವು ಹ್ಯಾವಲಾಕನ ಕೈವಶವಾಯಿತು. ಬಳಿಕ ಹ್ಯಾವಲಾಕನು ಲಖನೌ ಪಟ್ಟಣವನ್ನು ಕೈವಶ ಮಾಡಿಕೊಳ್ಳಲು ಹೋಗಿ ಬಂಡುಗಾರರಿಂದ ತಾನೇ ಮುತ್ತಲ್ಪಟ್ಟನು.

ಈ ಬಂಡಾಯದ ಸುದ್ದಿಯು ಇಂಗ್ಲಂಡದವರಿಗೆ ತಿಳಿಯಲು ಅವರು ಸರ್ **ಹ್ಯೂರೋಜ** ಮತ್ತು **ಕ್ಯಾಂಬೇಲ** ಇವರನ್ನು ಸೈನ್ಯದೊಂದಿಗೆ ಹಿಂದುಸ್ಥಾನಕ್ಕೆ ಕಳುಹಿದರು. ಅವರಿಬ್ಬರು ಮುಂಬಯಿಗೆ ಇಳಿದು ಬಂಡಾಯವೆದ್ದ ನಿಟ್ಟಿಗೆ ಸಾಗಿದರು. **ಕ್ರಿ. ಶ. ೧೮೫೭ರ ನವ್ಹಂಬರ ತಿಂಗಳು ಅರ್ಧ**ಗಳೆದಿರಲು ಕ್ಯಾಂಬೇಲನು ಲಖನೌ ಪಟ್ಟಣಕ್ಕೆ ತಲುಪಿ ಬಂಡುಗಾರರನ್ನು ಸೋಲಿಸಿ ಹ್ಯಾವಲಾಕನನ್ನು ಕೂಡಿಕೊಂಡು ಆ ಪಟ್ಟಣವನ್ನು ವಶಪಡಿಸಿಕೊಂಡನು. ಅಷ್ಟರಲ್ಲಿ ಗ್ವಾಲ್ಹೇರದ ಬಂಡುಗಾರರು **ಕಾಲ್ಪಿಗೆ** ಬಂದು ನಾನಾಸಾಹೇಬನನ್ನು ಕೂಡಿಕೊಂಡು ಕಾನಪುರದ ಮೇಲೆ ಸಾಗಿದರು. ಆಗ ಕ್ಯಾಂಬೇಲನು ಅಲ್ಲಿಗೆ ಹೋಗಿ ಆ ಬಂಡುಗಾರರನ್ನೂ ಸೋಲಿಸಿದನು. ಆ ಬಳಿಕ ಕ್ರಿ. ಶ.

೧೮೫೮ರ ಮಾರ್ಚ್‌ದ ವರೆಗೆ ಲಖನೌದ ಬಂಡಾಯವನ್ನೂ ಅಲ್ಲಿಂದ **ಮೇದ** ವರೆಗೆ **ಬರೇಲಿಯ** ಬಂಡಾಯವನ್ನೂ ಪೂರ್ಣವಾಗಿ ಅಡಗಿಸಿದನು.

ಅತ್ತ, ಕ್ಯಾಂಬೇಲನಿಂದ ಸೋಲಿಸಲ್ಪಟ್ಟ ಗ್ವಾಲ್ಹೇರದ ಸೈನಿಕರು ಝಾಂಸಿಗೆ ಹೋಗಿ **ಲಕ್ಷ್ಮೀಬಾಯಿಯನ್ನು** ಕೂಡಿಕೊಂಡು ಹುರಿಯಾಗಿ ನಿಂತರು ಆಗ ಸರ್ ಹ್ಯೂರೋಜನು **ಮಾರ್ಚ್ ತಿಂಗಳಲ್ಲಿ** ಝಾಂಸಿಯನ್ನು ಮುತ್ತಿದನು. ತನ್ನವರೆ ಶತ್ರುಗಳನ್ನು ಕೂಡುತ್ತಿರುವದನ್ನು ಕಂಡು, ಇನ್ನು ಕೋಟೆಯು ಕೈಬಿಡುವದೆಂದು ತಿಳಿದು ಲಕ್ಷ್ಮೀಬಾಯಿಯು ಮುನ್ನೂರು ಜನ ರಾಹುತರೊಂದಿಗೆ ಪಾರಾಗಿ ಕಾಲ್ಪಿಗೆ ಹೋಗಿ ಪೇಶವೆಯನ್ನು ಕೂಡಿಕೊಂಡಳು. ಹ್ಯೂರೋಜನು ಕೂಡಲೆ ಕಾಲ್ಪಿಗೆ ಹೋಗಿ ಪೇಶವೆಯನ್ನು ಸೋಲಿಸಲು ಅವನು ಎಲ್ಲಿಯೋ ಹೋಗಿಬಿಟ್ಟನು ಬಳಿಕ ಲಕ್ಷ್ಮೀಬಾಯಿಯ ಹೇಳಿಕೆಯಂತೆ ಎಲ್ಲ ಬಂಡುಗಾರರು, ಸಿಂದೆಯೂ ಅವನ ಸೈನ್ಯವೂ ತಮ್ಮನ್ನು ಕೂಡಿಕೊಳ್ಳಬಹುದೆಂಬಾಸೆಯಿಂದ **ಗ್ವಾಲ್ಹೇರಕ್ಕೆ** ಹೋದರು. ಬಯಸಿದಂತೆ ಸಿಂದೆಯ ಸೈನ್ಯವು ಇವರನ್ನು ಕೂಡಿತು. ಸ್ವತಃ ಸಿಂದೆಯು ಬಂಡುಗಾರರನ್ನು ಎದುರಿಸಿ ಸೋತು, ಆಸರಕ್ಕಾಗಿ ಇಂಗ್ಲಿಷರ ಕಡೆಗೆ ಓಡಿಹೋದನು. ಮುಂದೆ ಜೂನ ತಿಂಗಳಲ್ಲಿ ಬಂಡುಗಾರರಿಗೂ ಹ್ಯೂರೋಜನಿಗೂ ದೊಡ್ಡ ಯುದ್ಧವಾಯಿತು. ವೀರ ರಾಣಿಯಾದ ಲಕ್ಷ್ಮೀಬಾಯಿಯು ಕಾದುತ್ತ ಕಾದುತ್ತ ಮಡಿದಳು. **ತಾತ್ಯಾ ಟೋಪಿ**ಯು ಆಗ ಓಡಿಹೋದನು ಮರುವರುಷ ಸಿಕ್ಕುಗಲ್ಲಿಗೆ ಗುರಿಯಾದನು. ಆ ಬಳಿಕ ಸಣ್ಣಪುಟ್ಟ ಬಂಡಾಯಗಳನ್ನಡಗಿಸುವ ಕೆಲಸವು ಕ್ರಿ. ಶ. **೧೮೫೯ರ ನವ್ಹಂಬರದ** ತನಕ ಸಾಗಿ ಮುಗಿಯಿತು.

೨೦ನೆಯ ಪಾಠ

ಲಾರ್ಡ್ ಕ್ಯಾನಿಂಗ (ಮುಂದೆ ಸಾಗಿದ್ದು)

೧. **ಬಂಡಾಯದ ಪರಿಣಾಮ**:— ಬಂಡಾಯವಾದಂದಿನಿಂದ ಇಂಗ್ಲಂಡದ ಜನರು ಹಿಂದುಸ್ಥಾನದ ರಾಜ್ಯಕಾರಭಾರದ ಕಡೆಗೆ ಹೆಚ್ಚು ಲಕ್ಷ್ಯಕೊಡಹತ್ತಿದರು. ಹಿಂದೀ ಜನರ ಅಧಿಕಾರ, ಹಕ್ಕು, ಮಾನಮಾರ್ಯಾದೆ ಇವುಗಳನ್ನು ಲಕ್ಷಿಸದೆ ಬರಿಯ ಲಾಭದ ದೃಷ್ಟಿಯಿಂದ ಕಾರಭಾರವನ್ನು

ಸಾಗಿಸಿದ ಕಂಪನಿಯ ಆಳಿಕೆಯು ಅವರಿಗೆ ಸಾಕೆನಿಸಿತು. ಆದದರಿಂದ ಹಿಂದುಸ್ಥಾನದ ಆಡಳಿತವನ್ನು ಪ್ರತ್ಯಕ್ಷ ಪಾರ್ಲಿಮೆಂಟಿನವರು ತಮ್ಮ ವಶಕ್ಕೆ ತೆಗೆದುಕೊಳ್ಳಬೇಕೆಂದು ಅವರು ಪ್ರತಿಪಾದಿಸತೊಡಗಿದರು. ಕೊನೆಗೆ ಇದೇ ಮಾತಿಗೆ ಬಹುಮತದ ಬೆಂಬಲವು ದೊರೆತು, ಹಿಂದುಸ್ಥಾನದ ರಾಜ್ಯ ಕಾರಭಾರದ ಒಂದು ಕಾಯದೆಯು ಪಾರ್ಲಮೆಂಟಿನಲ್ಲಿ ಪಾಸಾಯಿತು. ಕ್ರಿ. ಶ. ೧೭೫೮.

೨. **ಕ್ರಿ. ಶ. ೧೭೫೮ರ ಕಾಯದೆ**:— ೧. ಈಸ್ಟ ಇಂಡಿಯಾ ಕಂಪನಿಯನ್ನು ರದ್ದುಪಡಿಸಿ ಅದರ ಕಡೆಗಿದ್ದ ಕಾರಭಾರವನ್ನು ವಿಕ್ಟೋರಿಯಾ ರಾಣಿಯವರು ತಮ್ಮ ಕೈಯಲ್ಲಿ ತೆಗೆದುಕೊಳ್ಳಬೇಕು. ೨. ಮಂತ್ರಿಮಂಡಲದಲ್ಲಿಯ ಒಬ್ಬನು **ಭಾರತ ಮಂತ್ರಿ** (ಸ್ಟೇಟ ಸೆಕ್ರೆಟರಿ) ಯಾಗಿ ೧೫ ಜನ ಸಭಾಸದರ ನೆರವಿನಿಂದ ಹಿಂದುಸ್ಥಾನದ ಗವ್ಹರ್ನರ ಜನರಲನ ಮಾರ್ಗದರ್ಶಕನೂ ಮೇಲ್ವಿಚಾರಕನೂ ಆಗಿರಬೇಕು. ೩. ಗವ್ಹರ್ನರ ಜನರಲನಿಗೆ ರಾಣಿಯವರ **ಪ್ರತಿನಿಧಿ (ವ್ಹಾಯಸರಾಯ)** ಎಂಬ ಗೌರವದ ಹೆಸರು ಉಂಟಾಯಿತು. ಈ ಕಾಯದೆಯ ಳಳ ಕಲಮುಗಳಲ್ಲಿ ಮೇಲಿನವು ಮುಖ್ಯವಾದವುಗಳು. ಉಳಿದ ಕಲಮುಗಳು ರಾಜ್ಯಕಾರಭಾರದ ಸಂಬಂಧದ ಸೂಚನೆಗಳಾಗಿದ್ದವು.

೩. **ರಾಣಿಯವರ ಜಾಹೀರನಾಮೆ**:— ಪಾರ್ಲಿಮೆಂಟಿನ ಕಾಯದೆಯ ಮೇರೆಗೆ ಹಿಂದುಸ್ಥಾನದಲ್ಲಿಯ ಸಂಸ್ಥಾನಿಕರನ್ನೂ ಎಲ್ಲ ಪ್ರಜೆಗಳನ್ನೂ ಉದ್ದೇಶಿಸಿ ಒಂದು ಜಾಹೀರನಾಮೆಯನ್ನು ಪ್ರಕಟಿಸಿದರು. ಮೊದಲನೆಯ ವ್ಹಾಯಿಸರಾಯನಾದ ಲಾರ್ಡ ಕ್ಯಾನಿಂಗನು ಕ್ರಿ. ಶ. **೧೮೫೮ರ ನವ್ಹಂಬರ ತಿಂಗಳಿನ ಮೊದಲನೆಯ ದಿನ ಅಲಹಾಬಾದ**ದಲ್ಲಿ ದೊಡ್ಡ ದರ್ಬಾರವನ್ನು ನೆರೆಯಿಸಿ, ಈ ಜಾಹೀರನಾಮೆಯನ್ನು ಓದಿತೋರಿಸಿದನು. ಇದರಲ್ಲಿಯ ಮುಖ್ಯ ಸಂಗತಿಗಳು— ೧. ಹಿಂದೀ ಸಂಸ್ಥಾನಿಕರಿಗೂ ಕಂಪನಿಗೂ ಆದ ಕರಾರು ಗಳಂತೆ ತಪ್ಪದೆ ನಡೆದುಕೊಳ್ಳುವೆವು. ೨. ದತ್ತಕ ತೆಗೆದುಕೊಳ್ಳಲು ಅಪ್ಪಣೆ ಕೊಟ್ಟು ಆ ದತ್ತಕ ಸಂತತಿಗಳ ಕಡೆಗೆ ರಾಜ್ಯಗಳನ್ನೂ ವರ್ಷಾಶನಗಳನ್ನೂ ನಡೆಯಿಸುವೆವು. ೩. ಸಂಸ್ಥಾನಿಕರೇ ಮೊದಲಾದವರ ಅಧಿಕಾರ-ಮಾನ-ಮರ್ಯಾದೆಗಳನ್ನು ತಕ್ಕರೀತಿಯಿಂದ ಕಾಯುವೆವು. ೪. ಪ್ರಜೆಗಳ ಧರ್ಮದಲ್ಲಿಯೂ ಆಚಾರ-ವಿಚಾರಗಳ ಸಂಬಂಧದಲ್ಲಿಯೂ ಕೈಹಾಕುವದಿಲ್ಲ. ೫.

ಧರ್ಮ, ಜಾತಿ ಇವುಗಳನ್ನು ಎಣಿಸದೆ ಯೋಗ್ಯತೆಯುಳ್ಳವರಿಗೆ ಪಕ್ಷಪಾತ ವಿಲ್ಲದೆ ಕೆಲಸಗಳನ್ನು ಕೊಡುವೆವು ೬. ಕೊಲೆಯು ಅಪರಾಧವನ್ನು ಮಾಡದೆ ಇದ್ದ ಬಂಡುಗಾರರನ್ನೆಲ್ಲ ಕ್ಷಮಿಸುವೆವು.

ಈ ಜಾಹೀರನಾಮೆಯಿಂದ ಎಲ್ಲರ ಮನಸ್ಸಿಗೆ ಸಮಾಧಾನವೆನಿಸಿತು.

೪. **ಕ್ಯಾನಿಂಗನ ಕಾಲದ ಉಳಿದ ಕೆಲಸಗಳು :—** ೧. **ವಿಶ್ವವಿದ್ಯಾಲಯಗಳೂ ಹಾಯಕೋರ್ಟುಗಳೂ—** ಕ್ರಿ ಶ ೧೮೫೭ ರಲ್ಲಿ ಬಂಡಾಯ ನಡೆದಿರುವಾಗಲೆ ಕಲಕತ್ತೆ, ಮುಂಬಯಿ, ಮದ್ರಾಸ ಈ ಪಟ್ಟಣಗಳಲ್ಲಿ ವಿಶ್ವವಿದ್ಯಾಲಯ (ಯುನಿವ್ಹರ್ಸಿಟಿ) ಗಳ ಮತ್ತು ಹಾಯಕೋರ್ಟುಗಳ ಸ್ಥಾಪನೆಯಾಯಿತು. ೨. **ಕಾಯದೆ ಮಂಡಲಗಳು—** ಕ್ರಿ ಶ ೧೮೬೧ರಲ್ಲಿ **ಕೌನ್ಸಿಲ ಆಕ್ಟು** ಪ್ರಾಸಾಗಿ ಮುಂಬಯಿ, ಮದ್ರಾಸ ಇವುಗಳ ಗವ್ಹರ್ನರರ ನೆರವಿಗೆ **ಪ್ರಾಂತಿಕ ಕಾಯದೆ ಮಂಡಲಗಳೂ** ವ್ಹಾಯಿಸರಾಯನ ನೆರವಿಗೆ **ವರಿಷ್ಠ ಕಾಯದೆ ಮಂಡಲವೂ** ಉಂಟಾದವು. ಈ ಮಂಡಲಗಳಲ್ಲಿ ಸರಕಾರದ ನವಕರರಲ್ಲದೆ ಕೆಲವರನ್ನೂ ನಿಯಮಿಸಿಕೊಳ್ಳಬೇಕೆಂದು ಗೊತ್ತಾಯಿತು ೩. **ಹೊಸ ಕರಗಳು—** ಬಂಡಾಯವನ್ನು ಅಡಗಿಸುವ ಕೆಲಸಕ್ಕೆ ೪೦ ಕೋಟಿ ರೂ. ವೆಚ್ಚವಾದವು; ಸೈನ್ಯದ ಸುಧಾರಣೆಗಾಗಿ ೧೦ಕೋಟಿ ರೂ. ಹೆಚ್ಚಿಗೆ ಬೇಕಾಗಹತ್ತಿದವು. ಈ ಹಣವನ್ನು ಒದಗಿಸಿಕೊಳ್ಳುವದಕ್ಕಾಗಿ **ಉತ್ಪನ್ನದ ಮೇಲಿನ ಕರ** (ಇನ್‌ಕಮ್ ಟ್ಯಾಕ್ಸ) ವು ಎತ್ತಲಾರಂಭವಾಯಿತು. ೪. ಈಗ ನಾವು ಹಣದಂತೆ ಬಳಸುವ **ನೋಟು**ಗಳು ಕ್ಯಾನಿಂಗನ ಕಾಲದಲ್ಲಿಯೇ ಹೊರಡಹತ್ತಿದವು. ೫. **ಸೈನ್ಯದ ಸುಧಾರಣೆ—** ಬಂಡಾಯವಾಗುವ ಮೊದಲು ಹಿಂದೀ ಮತ್ತು ಯುರೋಪಿಯನ್ ಸೈನಿಕರ ಪ್ರಮಾಣವು ೫ : ೧ ಇದ್ದಿತು ಕ್ಯಾನಿಂಗನು ಯುರೋಪಿಯನ್ ಸೈನಿಕರ ಸಂಖ್ಯೆಯನ್ನು ಹೆಚ್ಚಿಸಿ ಉತ್ತರ ಹಿಂದುಸ್ಥಾನದಲ್ಲಿ ಈ ಪ್ರಮಾಣವು ೨ : ೧ ಮತ್ತು ದಕ್ಷಿಣ ಹಿಂದುಸ್ಥಾನದಲ್ಲಿ ೩ : ೧ ಇರತಕ್ಕದ್ದೆಂದೂ ತೋಪುಖಾನೆಯ ವ್ಯವಸ್ಥೆಯನ್ನು ಯುರೋಪಿಯನರೇ ಮಾಡತಕ್ಕದ್ದೆಂದೂ ಗೊತ್ತುಮಾಡಿದನು. ಈ ವ್ಯವಸ್ಥೆಯಿಂದ ಸೈನ್ಯದ ವೆಚ್ಚವು ಹೆಚ್ಚಿತು. ೬. **ಬಂಗಾಲ ಟೆನ್ಸಿ ಆಕ್ಟ್—** ಈ ಕಾಯದೆಯಿ ಮೂಲಕ ಬಂಗಾಲದ ಜಮೀನದಾರರು ಒಕ್ಕಲಿಗರಿಂದ ಮನಬಂದಂತೆ ಹಣ ಹೀರಿಕೊಳ್ಳುವದು ತಪ್ಪಿತು.



ಹಿಂದೀ ಸೈನ್ಯದ ಕುದುರೆಯ ಸವಾರರು



ಬ್ರಿಟಿಷ ಸೈನಿಕರು

೫. ಕ್ಯಾನಿಂಗನ ಯೋಗ್ಯತೆ:— ಡಾಲಹೌಸಿಯು ಹೋದಬಳಿಕ ಉಂಟಾದ ಕೆಟ್ಟ ಪರಿಸ್ಥಿತಿಯನ್ನು ಜಾಣತನದಿಂದ ಸುಧಾರಿಸಿದವನು ಈ ಕ್ಯಾನಿಂಗನು. ಹಲವು ಇಂಗ್ಲಿಷರು ಬಂಡುಗಾರರ ಸೇಡು ತೀರಿಸಿಕೊಳ್ಳಬೇಕೆಂದು ಹಾತೊರೆಯುತ್ತಿರಲು, ದಯಾಳುವಾದ ಇವನು ಅವರನ್ನು ತಡೆದು ಶಾಂತತೆಯು ಮತ್ತು ಜಾಣತನದ ಉಪಾಯಗಳಿಂದ ಜನರ ಮನಸ್ಸನ್ನು ಸಮಾಧಾನಪಡಿಸಿದನು. ರಾಣಿಯವರ ಜಾಹೀರನಾಮೆಯ ಮೂಲಕ ಕೊಟ್ಟ ಅಭಿವಚನಗಳನ್ನು ಹಿಂದೀಜನರು ತಟ್ಟನೆ ನಂಬಲು ಕ್ಯಾನಿಂಗನ ಒಳ್ಳೆಯ ಆಳಿಕೆಯೇ ಕಾರಣವಾಯಿತೆಂದು ಹೇಳಬಹುದು. ಕ್ರಿ. ಶ **೧೮೬೨**ರಲ್ಲಿ ಇವನು ಕೆಲಸಬಿಟ್ಟು ತನ್ನ ದೇಶಕ್ಕೆ ಹೋದನು.

೨೧ನೆಯ ಪಾಠ

ಕ್ಯಾನಿಂಗನ ತರುವಾಯದ ನಾಲ್ವರು ವ್ಹಾಯಿಸರಾಯರು

(ಕ್ರಿ. ಶ **೧೮೬೨**—**೧೮೬೬**)

೧. ಲಾರ್ಡ್ ಎಲ್ಜಿನ್:— ಕ್ರಿ ಶ. **೧೮೬೨-೧೮೬೩.** ಕ್ಯಾನಿಂಗನ ಬಳಿಕ ಲಾರ್ಡ್ **ಎಲ್ಜಿನನು** ವ್ಹಾಯಿಸರಾಯನಾದನು. ಇವನು ಈ ದೇಶಕ್ಕೆ ಬಂದು ಒಂದು ವರ್ಷದೊಳಗಾಗಿಯೆ ಸತ್ತನು. ಇವನ ಕಾಲದಲ್ಲಿ ಪಂಜಾಬದ ವಹಾಬಿ ಎಂಬ ಮುಸಲ್ಮಾನರು ದಂಗೆ ಎಬ್ಬಿಸಿದರು. ಅದನ್ನು ಸೇನಾಪತಿ ಹ್ಯೂರೋಜನು ಮುರಿದನು.

೨. ಲಾರ್ಡ್ ಲಾರೇನ್ಸ:— **೧೮೬೪-೧೮೬೯.** ಪಂಜಾಬದ ಗವ್ಹರ್ನರ ನಾಗಿದ್ದ **ಲಾರೇನ್ಸನು** ಎಲ್ಜಿನನ ತರುವಾಯ ವ್ಹಾಯಿಸರಾಯನಾದನು. ಇವನ ಕಾಲದಲ್ಲಿ ಮುಖ್ಯವಾಗಿ ಭೂತಾನದ ಯುದ್ಧವೂ ಒಡಿಸಾ-ರಾಜಪುತಾನ, ಬುಂಡೇಲ ಖಂಡಗಳ ಬರಗಳೂ ಒದಗಿದವು. **ಭೂತಾನದ ಯುದ್ಧ**– ಕ್ರಿ. ಶ. **೧೮೬೪.** ಆಸಾಮ, ಭೂತಾನ ಇವುಗಳ ನಡುವೆ ಇರುವ ಘಟ್ಟದ ಸೀಮೆಯ ಒಡೆತನದ ವಿಷಯವಾಗಿ ಇಂಗ್ಲಿಷರಿಗೂ ಭೂತಾನದವರಿಗೂ ತಿಕ್ಕಾಟ ನಡೆಯಿತು ಇಂಗ್ಲಿಷರು **ವಿಡನ್** ಎಂಬುವನನ್ನು ಆಲೋಚನೆಗಾಗಿ ಭೂತಾನದವರ ಕಡೆಗೆ ಕಳುಹಿದನು. ಆದರೆ ಅಲ್ಲಿ ಆದ ಕರಾರುಗಳು ಸಮಾಧಾನಕರ

ವಾದವುಗಳಿಲ್ಲದ್ದರಿಂದ ಲಾರೇನ್ಸನು ಭೂತಾನದ ಮೇಲೆ ದಂಡು ಕಳುಹಿದನು. ಆಗ ಭೂತಾನದವರು ಸೋತು ಒಪ್ಪಂದ ಮಾಡಿಕೊಂಡರು. ಭೂತಾನದವರು **ದ್ವಾರ್ಸ** ಎಂಬ ಪ್ರಾಂತವನ್ನು ಇಂಗ್ಲಿಷರಿಗೆ ಕೊಟ್ಟು ಅವರಿಂದ ೫ ಸಾವಿರ ಪೌಂಡುಗಳನ್ನು ತೆಗೆದುಕೊಳ್ಳಬೇಕೆಂದು ಗೊತ್ತಾಯಿತು **ಒಡಿಸಾ ಪ್ರಾಂತದ ಬರ**— ಕ್ರಿ. ಶ. ೧೮೬೫ರಲ್ಲಿ ಒಡಿಸಾ ಪ್ರಾಂತದಲ್ಲಿ ಮಳೆ ಹೋಗಿ ಅತಿ ಭಯಂಕರವಾದ ಬರಬಿದ್ದಿತು ೨೦ ಲಕ್ಷ ಜನರು ಜೀವಕ್ಕೆ ಎರವಾದರು. **ರಾಜಪುತಾನಾ ಬುಂದೇಲಖಂಡಗಳ ಬರ**— ಕ್ರಿ ಶ. ೧೮೬೬ರಿಂದ ೧೮೬೭ರ ವರೆಗೆ ಈ ಎರಡು ಪ್ರಾಂತಗಳಲ್ಲಿ ಬರಬೀಳಲು ಜನರ ಕಷ್ಟಗಳನ್ನು ತಪ್ಪಿಸುವದಕ್ಕಾಗಿ ಸರಕಾರದವರು ಬಹಳ ಹಣ ವೆಚ್ಚಮಾಡಿದರು. **ಷೇರಅಲಿಯ ಕೂಡ ಸ್ನೇಹದ ಬಳಿಕೆ**— ಕ್ರಿ. ಶ ೧೮೬೩ರಲ್ಲಿ ದೋಸ್ತಮಹಮ್ಮದನು ಸತ್ತಬಳಿಕ ಅವನ ಮಕ್ಕಳಲ್ಲಿ ಅವನ ಪ್ರೀತಿಯವನಾದ **ಷೇರಅಲಿ**ಯು ಅರಸನಾದನು. ಆಗ ಲಾರೇನ್ಸನು ಅವನನ್ನು ಅಭಿನಂದಿಸಿ, ೬ ಲಕ್ಷ ರೂ ಗಳನ್ನು ಕೊಟ್ಟು ಅವನೊಡನೆ ಸ್ನೇಹವನ್ನು ಸಂಪಾದಿಸಿದನು. **ಸುಯೇಜದ ಕಾಲುವೆ**— ಫ್ರೆಂಚ ಇಂಜಿನಿಯರನಾದ ಲೆಸೆಪ್ಸನು ಈ ಕಾಲುವೆಯ ಕೆಲಸವನ್ನು ಕ್ರಿ ಶ ೧೮೬೯ರಲ್ಲಿ ಮುಗಿಸಿದನು. ಅಂದಿನಿಂದ ಹಿಂದುಸ್ಥಾನದ ಬಂದರಗಳಿಂದ ಹೊರಟ ಹಡಗಗಳು ನೆಟ್ಟಗೆ ಇಂಗ್ಲಂಡ ಮೊದಲಾದ ಯುರೋಪದ ದೇಶಗಳಿಗೆ ಹೋಗ ಹತ್ತಿದವು. **ಪಂಜಾಬ ಟೆನಸ್ಸೀ ಆಕ್ಟ** ಮತ್ತು **ಅಯೋಧ್ಯಾ ರೆಂಟ ಆಕ್ಟ**— ರೈತರ ಹಿತಕ್ಕಾಗಿ ಈ ಎರಡು ಕಾಯದೆಗಳು ಪಾಸಾದವು. ಇವನು ಹೋದ ಬಳಿಕ ಲಾರ್ಡ **ಮೇಯೋ**ನು ವ್ಹಾಯಿಸರಾಯನಾಗಿ ಬಂದನು.

೩. **ಲಾರ್ಡ ಮೇಯೋ**:— ಕ್ರಿ ಶ. **೧೮೬೯-೧೮೭೨.** ಇವನು ಬಂದ ವರುಷವೆ ಅಫಗಾಣಿಸ್ಥಾನದ ಅಮೀರ ಷೇರ ಅಲಿಯನ್ನು ಬರಮಾಡಿಕೊಂಡು, **ಅಂಬಾಲಾ**ದಲ್ಲಿ ದರಬಾರವನ್ನು ನೆರೆಯಿಸಿ, ಅವನಿಗೆ ಬಹುಮಾನ ಮಾಡಿದನು. ಆಗ ಅಮೀರನು, ಯಾರ ಪರಚಕ್ರಗಳು ಬಂದರೂ ಇಂಗ್ಲಿಷರ ನೆರವು ದೊರೆಯುವ ಹಾಗಿದ್ದಲ್ಲಿ ತಾನು ಸ್ನೇಹದಿಂದ ಇರುವೆನು; ಎಂದನು. ಮೇಯೋನು ರಶಿಯದ ವಿರುದ್ಧವಾಗಿ ಮಾತ್ರ ತಮಗೆ ಇಂಗ್ಲಿಷರ ನೆರವು ಸಿಗುವದು ಶಕ್ಯವಿದೆ; ಎನ್ನಲು ಅಮೀರನು ಸಮಾಧಾನ ಹೊಂದದೆ ಹೊರಟು ಹೋದನು.

ಖರ್ಚಿನ ಮಾನದಿಂದ ಉತ್ಪನ್ನವು ಕಡಿಮೆ ಇದ್ದುದರಿಂದ ಮೇಯೋನು, ಉತ್ಪನ್ನದ ಮೇಲಿನ ಕರವನ್ನೂ ಉಪ್ಪಿನ ಕರವನ್ನೂ ಹೆಚ್ಚಿಸಿ ಜಮಾಖರ್ಚು ಬಾಯಿಗೂಡುವಂತೆ ಮಾಡಿದನು. ಪ್ರಾಂತಿಕ ಸರಕಾರಗಳ ಕಡೆಗೆ ಕೆಲಕೆಲವು ಖಾತೆಗಳ ವ್ಯವಸ್ಥೆಯನ್ನು ಒಪ್ಪಿಸಿದನು. ಒಕ್ಕಲತನದ ಖಾತೆಯನ್ನು ಏರ್ಪಡಿಸಿದನು ದೇಶೀಯ ಅರಸರ ಮಕ್ಕಳ ಶಿಕ್ಷಣಕ್ಕಾಗಿ **ಅಜಮೀರದಲ್ಲಿ 'ಮೇಯೋ ಕಾಲೇಜು'** ಉಂಟಾಯಿತು. ಇವನು ಕ್ರಿ. ಶ. ೧೮೭೨ರಲ್ಲಿ **ಅಂದಮಾನ**ವನ್ನು ನೋಡಹೋದಾಗ ಒಬ್ಬ ಸೆರೆಯಾಳು ಇವನನ್ನು ಇರಿದು ಕೊಂದನು.

೪. **ಲಾರ್ಡ ನಾರ್ಥಬ್ರೂಕ್** :— ಕ್ರಿ. ಶ. ೧೮೭೨ – ೧೮೭೬. ಮೇಯೋನ ತರುವಾಯ ಲಾರ್ಡ **ನಾರ್ಥಬ್ರೂಕನು** ವ್ಹಾಯಿಸರಾಯನಾದನು. ಕ್ರಿ. ಶ. ೧೮೭೪ರಲ್ಲಿ ಬಂಗಾಲದಲ್ಲಿ ದೊಡ್ಡ ಬರಬೀಳಲು, ಇವನು ೮ ಕೋಟಿ ರೂ. ವೆಚ್ಚಮಾಡಿ ರೇಲ್ವೆ, ಕಾಲುವೆ ಮುಂತಾದ ಕೆಲಸಗಳನ್ನು ಒದಗಿಸಿಕೊಟ್ಟು ಜನರ ಜೀವ ಉಳಿಸಿದನು. ಬಡೋದೆಯ **ಮಲ್ಹಾರರಾಯನು** ದುರ್ವ್ಯಸನಿಯೂ ಪ್ರಜೆಗಳನ್ನು ಪೀಡಿಸುವವನೂ ಆಗಿದ್ದರಿಂದ ವ್ಹಾಯಿಸರಾಯನು ಅವನಿಗೆ ಚೆನ್ನಾಗಿ ಕಾರಭಾರ ಸಾಗಿಸಬೇಕೆಂದು ಎಚ್ಚರಿಸಿದನು. ಆದರೆ ಮಲ್ಹಾರರಾಯನು ದಾರಿಗೆ ಬರಲಿಲ್ಲ. ಆದದರಿಂದ ನಾರ್ಥಬ್ರೂಕನು ಅವನನ್ನು ಪಟ್ಟದಿಂದ ತೆಗೆದು, ಅವನಿಗೆ ದತ್ತಕ ಮಾಡಿಕೊಳ್ಳಲು ಅಪ್ಪಣೆ ಕೊಟ್ಟು, ಸಯಾಜಿರಾಯನನ್ನು ಪಟ್ಟಕ್ಕೆ ಕುಳ್ಳರಿಸಿದನು. ಕ್ರಿ. ಶ. ೧೮೭೫ ಈ ಪ್ರಸಂಗದಿಂದ ಇಂಗ್ಲಿಷ ಸರಕಾರದ ಧೋರಣೆಯ ವಿಷಯವಾಗಿ ಸಂಸ್ಥಾನಿಕರ ಮನಸ್ಸಿನ ಅಲ್ಪಸ್ವಲ್ಪ ಸಂಶಯವೂ ಬದಲಾಯಿತು. ಇದೇ ವರುಷ ಆಗಿನ ಪ್ರಿನ್ಸ ಆಫ್ ವೆಲ್ಸರಾದ **ಏಳನೆಯ ಎಡ್ವರ್ಡರು** ಈ ದೇಶಕ್ಕೆ ಬಂದು ಜನರು ರಾಜನಿಷ್ಠರಾಗಿರುವದನ್ನು ಕಂಡು ಸಂತೋಷವನ್ನು ವ್ಯಕ್ತಪಡಿಸಿದರು. ಮೇಯೋನ ಕಾಲದಲ್ಲಿಯ ಪ್ರಾಪ್ತಿಯ ಮೇಲಿನ ಕರವನ್ನು ನಾರ್ಥಬ್ರೂಕನು ತೆಗೆದುಹಾಕಿದನು. ಕ್ರಿ. ಶ. ೧೮೭೪ರಲ್ಲಿ ಉದಾರಮತದ **ಗ್ಲಾಡಸ್ಟನನ** ಪಕ್ಷವು ಹಿಮ್ಮೆಟ್ಟಿ ಸಾಮ್ರಾಜ್ಯವಾದಿಯಾದ **ಡಿಝುರೇಲಿ**ಯು ಮುಖ್ಯ ಮಂತ್ರಿಯಾದನು. ಇವನ ಧೋರಣೆಯಂತೆ ಆಗಿನ ಸ್ಟೇಟ ಸೆಕ್ರೆಟರಿ (ಭಾರತಮಂತ್ರಿ) ಯು ಅಫಗಾಣಿಸ್ಥಾನದಲ್ಲಿ ತಮ್ಮ ವಕೀಲನನ್ನು ಇಡುವ ಪ್ರಯತ್ನಮಾಡಬೇಕೆಂದೂ ಹಿಂದುಸ್ಥಾನದಲ್ಲಿ ಬರುವ ಸರಕಿನ ಮೇಲೆ ೧೦೦ಕ್ಕೆ ೫ರಂತೆ

ಇದ್ದ ಕರವನ್ನು ಸಹ ತೆಗೆದುಹಾಕಬೇಕೆಂದೂ ಬರೆದನು. ಈ ಎರಡೂ ವಿಚಾರ ಗಳು ನಾರ್ಥಬ್ರೂಕನಿಗೆ ಸರಿಯೋರಲಿಲ್ಲ. ಮುಂಚೆ ತುಸು ದಿನಗಳಲ್ಲಿ ಇವನು ವೈಯಲ್ಲಿ ಸ್ವಸ್ಥತೆಯಿಲ್ಲದಂತಾದ ನೆವದಿಂದ ರಾಜೀನಾಮೆಯನ್ನು ಕೊಟ್ಟು ಹೊರಟು ಹೋದನು. ಕ್ರಿ. ಶ. **೧೮೭೬.**

೨೨ನೆಯ ಪಾಠ

ಲಾರ್ಡ ಲಿಟನ್ (ಕ್ರಿ. ಶ. ೧೮೭೬-೧೮೮೦) **ಲಾರ್ಡ ರಿಪನ್** (ಕ್ರಿ. ಶ. ೧೮೮೦-೧೮೮೪)
ಲಾರ್ಡ ಡಫರೀನ್ (ಕ್ರಿ ಶ. ೧೮೮೪-೧೮೮೮)

೧. ಲಾರ್ಡ ಲಿಟನ್ :— ಕ್ರಿ ಶ. **೧೮೭೬**-೧೮೮೦. ಡಿಝುರೇಲಿಯ ಪಕ್ಷದ ಲಾರ್ಡ **ಲಿಟನ**ನು ನಾರ್ಥಬ್ರೂಕನ ತರುವಾಯ ವ್ಹಾಯಿಸರಾಯ ನಾದನು. ಇವನ ಕಾಲದಲ್ಲಿ ಕ್ರಿ. ಶ. **೧೮೭೬ – ೧೮೭೭**ರ ವರೆಗೆ ದಕ್ಷಿಣ ಹಿಂದುಸ್ಥಾನದಲ್ಲಿ ಬಹಳ ಭಯಂಕರವಾದ ಬರಬಿದ್ದಿತು. ಸರಕಾರದವರೂ ಈ ದೇಶದ ಮತ್ತು ಇಂಗ್ಲಂಡದ ಧನಿಕರೂ ಜನರನ್ನು ಉಳಿಸಲು ಬಹಳ ಹಣ ನೆಚ್ಚ ಮಾಡಿದರು. ಆದರೂ ೫೦ ಲಕ್ಷ ಜನರು ಸಾವಿಗೆ ತುತ್ತಾದರು. ಆಯತ ಹೊತ್ತಿಗೆ ಕೈಕೊಂಡ ಉಪಾಯಗಳಿಂದ ಬರದ ಬಾಧೆಯನ್ನು ತಪ್ಪಿ ಸುವದು ಆಗದೆಂದು ಅನುಭವ ಬಂದದರಿಂದ ಬರದ ನಿವಾರಣಕ್ಕಾಗಿ ಒಂದು ಯೋಜನೆಯು ಗೊತ್ತುಮಾಡಲ್ಪಟ್ಟಿತು. ಇದರಿಂದ ೧. ಪ್ರತಿವರ್ಷ ೧॥ ಕೋಟಿ ರೂಪಾಯಿಗಳನ್ನು ಬರದ ನಿವಾರಣಕ್ಕಾಗಿ ತೆಗೆದಿಡಬೇಕು. ೨. ಬರ ಬಿದ್ದ ಭಾಗದಲ್ಲಿ ತೆರಿಗೆಯನ್ನು ಕಟ್ಟುಮಾಡಬೇಕು. ೩. ಬರಗಾಲದಲ್ಲಿ ಕೆರೆ, ಕಾಲುವೆ, ರೇಲ್ವೆ ಮುಂತಾದ ಕೆಲಸಗಳನ್ನು ಮಾಡಿಸಬೇಕು ೪. ಧರ್ಮಾರ್ಥ ಔಷಧಾಲಯಗಳನ್ನು ಇಡಬೇಕು; ಎಂದು ಗೊತ್ತಾಯಿತು. ಕ್ರಿ.ಶ.**೧೮೭೭**ನೆಯ **ಜನೆವರಿ ೧**ನೆಯ ತಾರೀಖಿನ ದಿನ **ದಿಲ್ಲಿ**ಯಲ್ಲಿ ದೊಡ್ಡ ದರಬಾರವು ನೆರೆದು, **ವ್ಹಿಕ್ಟೋರಿಯಾ** ಮಹಾರಾಣಿಯವರು **"ಹಿಂದುಸ್ಥಾನದ ಚಕ್ರವರ್ತಿನಿ"** ಎಂಬ ಬಿರುದನ್ನು ಧರಿಸಿದ ಸಂಗತಿಯು ಜನರಿಗೆಲ್ಲ ತಿಳಿಯಿತು. ಹಿಂದು ಸ್ಥಾನಕ್ಕೆ ಹೊರಗಿನಿಂದ ಬರುವ ಬಟ್ಟೆಗಳ ಮೇಲೆ ೧೦೦ಕ್ಕೆ ೫ರಂತೆ ಇದ್ದ

ಕರವು ತೆಗೆದುಹಾಕಲ್ಪಟ್ಟಿತು. **ಆರ್ಮ್ಸ್ ಆಕ್ಟ್ (ಶಸ್ತ್ರಗಳ ಕಾಯಿದೆ)** ಪಾಸಾಗಿ ಜನರು ನಿಶ್ಶಸ್ತ್ರರಾಗಿ ಮಾಡಲ್ಪಟ್ಟರು **ಪ್ರೆಸ್ ಆಕ್ಟ್** ಆಗಿ ವರ್ತಮಾನಪತ್ರ ಕರ್ತರ ಮೇಲೆ ಹಲವು ಪ್ರತಿಬಂಧಗಳು ಉಂಟಾದವು.

೨. ಆಫಗಾಣಿಸ್ಥಾನದ ಎರಡನೆಯ ಯುದ್ಧ:— ಕ್ರಿ. ಶ. ೧೮೭೮-೮೦ರಲ್ಲಿ. **ಕಾರಣಗಳು**— ಲಿಟನನು ಆಫಗಾನದ ಅಮೀರನಾದ ಷೇರಅಲಿಗೆ ಪತ್ರ ಬರೆದು, ಇಂಗ್ಲಿಷರ ವಕೀಲನನ್ನು ಕಾಬೂಲದಲ್ಲಿ ಇಟ್ಟುಕೊಳ್ಳಬೇಕೆಂದು ತಿಳಿಸಿದನು ಆದಕ್ಕೆ ಅಮೀರನು ಒಪ್ಪಲಿಲ್ಲ ಇದೇ ಹೊತ್ತಿಗೆ, ಅಮೀರನು ಬೇಡೆಂದರೂ ರಶಿಯದ ವಕೀಲನು ಒಂದು ವರ್ಷದ ವರೆಗೆ ಕಾಬೂಲ ದಲ್ಲಿದ್ದನು. ಅದೇ ವೇರೆಗೆ ಲಿಟನನು ಕಳುಹಿದ ಚೇಂಬರಲೇನ ಎಂಬವನಿಗೆ ಮಾತ್ರ ಅಮೀರನ ಕಡೆಯವರು ದಾರಿಯನ್ನು ಕೊಡಲಿಲ್ಲ. **ಯುದ್ಧ**— **ಈ** ಕಾರಣಗಳಿಂದ ಲಿಟನನು ಖೈಬರ, ಖುರಮ, ಬೋಲನ ಈ ಘಟ್ಟಗಳ ಮಾರ್ಗ ವಾಗಿ ಆಫಗಾನಿಸ್ಥಾನದ ಮೇಲೆ ಸೈನ್ಯ ಕಳುಹಿದನು. ಇದನ್ನು ಕಂಡು ಷೇರ ಅಲಿಯು ರಶಿಯದ ಸಹಾಯವನ್ನು ಪಡೆಯಲು ಹವಣಿಸಿ, ಅದು ಸಿಗದಿರಲು ಓಡಿಹೋದನು ಅವನ ಹಿಂದೆ ಇಂಗ್ಲಿಷರು ಕಾಬೂಲವನ್ನು ವಶಮಾಡಿ ಕೊಂಡು, ಷೇರಅಲಿಯ ಮಗನಾದ **ಯಾಕೂಬಖಾನನನ್ನು** ಪಟ್ಟಗಟ್ಟಿ, ಅವನೊಡನೆ ತಮಗೆ ಅನುಕೂಲವಾಗುವಂತೆ ಒಪ್ಪಂದ ಮಾಡಿಕೊಂಡರು. ಇದನ್ನೆಲ್ಲ ನೋಡುತ್ತ ೫-೬ ತಿಂಗಳುಗಳ ವರೆಗೆ ಸುಮ್ಮನಿದ್ದ ಆಫಗಾನರು ಒಮ್ಮೆಲೆ ಇಂಗ್ಲಿಷರ ಮೇಲೆ ಬಿದ್ದು ರೆಸಿಡೆಂಟನನ್ನೂ ಅವನ ಸಂಗಡಿಗರೆಲ್ಲರನ್ನೂ ಕೊಂದುಬಿಟ್ಟರು. ಆಗ ಲಾರ್ಡ್ **ರಾಬರ್ಟ್ಸ್**ನ ಕೈಕೆಳಗೆ ಇಂಗ್ಲಿಷರ ಹೊಸ ದಂಡು ಕಾಬೂಲದ ಮೇಲೆ ಸಾಗಿತು. ರಾಬರ್ಟ್ಸ್‌ನು ಕಾಬೂಲದಲ್ಲಿ ತನ್ನ ಅಧಿ ಕಾರವನ್ನು ನೆಲೆಸಿ, ಬಂಡುಗಾರರನ್ನು ಕೂಡಿದವನೆಂದು ತಿಳಿದು ಯಾಕೂಬ ಖಾನನನ್ನು ಸೆರೆಹಿಡಿದು, **ಅಬ್ದುಲ್ ರಹಮಾನಖಾನ** ಎಂಬವನನ್ನು ಅಮೀರ ನನ್ನು ಮಾಡಿದನು.


ಇಷ್ಟರಲ್ಲಿ ಆಫಗಾನಿಸ್ಥಾನದಲ್ಲಾದ ಅನರ್ಥದ ಸುದ್ದಿಯನ್ನು ಕೇಳಿ, ಇಂಗ್ಲಂಡದ ಲೋಕಮತವು ಡಿಝುರೇಲಿಯ ವಿರುದ್ಧವಾಯಿತು. ಆಗ ಅವನ ಪಕ್ಷವು ಹಿಮ್ಮೆಟ್ಟಿ ಕ್ರಿ. ಶ. ೧೮೮೦ ರಲ್ಲಿ ಮತ್ತೆ ಗ್ಲ್ಯಾಡ್‌ಸ್ಟನನು ಮುಖ್ಯ ಮಂತ್ರಿ

ಯಾದನು. ಕೂಡಲೆ, ಲಿಟನನು ಇನ್ನು ತನ್ನ ಆಟ ಸಾಗದೆಂದು ತಿಳಿದು ರಾಜೀನಾಮೆ ಕೊಟ್ಟು ಹೊರಟುಹೋದನು. ಆಗ ಗ್ಲ್ಯಾಡಸ್ಟನನು ಉದಾರ ಮತದ ಲಾರ್ಡ **ರಿಪನ**ನನ್ನು ವ್ಹಾಯಿಸರಾಯನ ಕೆಲಸಕ್ಕೆ ಆರಿಸಿದನು

೩. ಲಾರ್ಡ ರಿಪನ್ :— ಕ್ರಿ. ಶ. ೧೮೮೦-೮೪. **ಅಫಗಾನ ಯುದ್ಧದ ಕೊನೆ**- ಯಾಕೂಬಖಾನನನ್ನು ಇಂಗ್ಲಿಷರು ಸೆರೆಹಿಡಿದದರಿಂದ ಆವನ ತಮ್ಮನಾದ **ಅಯುಬಖಾನನು** ದೊಡ್ಡ ದಂಡಿನೊಡನೆ ಬಂದು, ಜನರಲ್ **ಬರೋ** ಜನ ಕೈಕೆಳಗಿನ ಸೈನ್ಯವನ್ನು **ಮಯಿವಾಡ** ಎಂಬಲ್ಲಿ ಸೋಲಿಸಿದನು ಆದರಲ್ಲಿಯ ಕೆಲವು ಸೈನ್ಯವು ಪಾರಾಗಿ ಕಂದಾಹಾರಕ್ಕೆ ಓಡಿಬಂದಿತು. ಆಗ ರಾಬರ್ಟ್ಸನು ಕಾಬೂಲದಿಂದ ಕಂದಾಹಾರಕ್ಕೆ ಬಂದು ಅದನ್ನು ಸಂರಕ್ಷಿಸಿದನು. ಇದೇ ಸಮಯಕ್ಕೆ ಇಂಗ್ಲಂಡದ ಮಂತ್ರಿ ಮಂಡಲದವರು ಅಫಗಾಣಿಸ್ಥಾನದ ಯುದ್ಧವನ್ನು ಮುಗಿಸಬೇಕೆಂದು ತಿಳಿಸಿದರು ಆದದರಿಂದ ರಿಪನನು ಬಂದಕೂಡಲೆ ಯುದ್ಧವನ್ನು ಮುಗಿಸಿ ಎಲ್ಲ ಇಂಗ್ಲಿಷ ಸೈನ್ಯವನ್ನು ಅಫಗಾಣಿಸ್ಥಾನದಿಂದ ಕರೆಯಿಸಿಕೊಂಡನು.

೪. ರಿಪನನು ಮಾಡಿದ ಹಿತದ ಕೆಲಸಗಳು:— **೧. ಮೈಸೂರನ್ನು ಮರಳಿ ಕೊಟ್ಟದ್ದು**:— ಕ್ರಿ. ಶ ೧೮೮೧ ರಿಂದ ಮೈಸೂರ ರಾಜ್ಯಕಾರಭಾರವು ಇಂಗ್ಲಿಷರ ಕೈಸೇರಿದ್ದಿತು. ಕೃಷ್ಣರಾಜ ಒಡೆಯರ ದತ್ತಕ ಮಕ್ಕಳಾದ **ಚಾಮರಾಜ** ಒಡೆಯರು ಕ್ರಿ. ಶ. ೧೮೮೧ರಲ್ಲಿ ವಯಸ್ಸಿಗೆ ಬಂದರು. ಆದದರಿಂದ ಲಾರ್ಡ ರಿಪನನು ಮೈಸೂರ ರಾಜ್ಯವನ್ನು ಅವರಿಗೆ ಮರಳಿ ಒಪ್ಪಿಸಿದನು. **೨. ಮುದ್ರಣ ಸ್ವಾತಂತ್ರ್ಯ**— ಮೆಟಕಾಫನ ಕಾಲದಲ್ಲಿ ಕೊಡಲ್ಪಟ್ಟಿದ್ದ ಮುದ್ರಣ ಸ್ವಾತಂತ್ರ್ಯವನ್ನು ಲಿಟನನು ಕಸಿದುಕೊಂಡಿದ್ದನು. ಉದಾರನಾದ ರಿಪನನು ದೇಶೀಯ ವರ್ತಮಾನ ಪತ್ರಕರ್ತರ ಮೇಲಿನ ಈ ನಿರ್ಬಂಧಗಳನ್ನು **ತೆಗೆದುಬಿಟ್ಟನು. ೩. ಸ್ಥಾನಿಕ ಸ್ವರಾಜ್ಯ**— ಈ ದೇಶದ ಸುಶಿಕ್ಷಿತರಿಗೆ ರಾಜ್ಯ ಕಾರಭಾರದ ಶಿಕ್ಷಣವು ದೊರೆಯಲೆಂದು, ಮ್ಯುನಿಸಿಪಲ್ ಆಕ್ಟ, ಲೋಕಲ್ ಫಂಡ ಆಕ್ಟ ಎಂಬ ಕಾಯದೆಗಳನ್ನು ಪಾಸುಮಾಡಿ, ಮ್ಯುನಿಸಿಪ್ಯಾಲಿಟಿಗಳನ್ನೂ ಜಿಲ್ಲೆಯ ಲೋಕಲ್ ಬೋರ್ಡುಗಳನ್ನೂ ಸ್ಥಾಪಿಸಿದನು **೪. ಶಿಕ್ಷಣದ ಏಳ್ಗೆ**— ಹಂಟರ ಕಮಿಟಿಯನ್ನು ನಿಯಮಿಸಿ ಅದರ ಸೂಚನೆಯಂತೆ

ಶಿಕ್ಷಣದ ಸುಧಾರಣೆಯನ್ನೂ ವಿಸ್ತಾರವನ್ನೂ ಮಾಡಿದನು. **೫. ಇಲ್ಬರ್ಟ್ ಬಿಲ್**– "ಯುರೋಪಿಯನ್ ಅಪರಾಧಿಗಳ ವಿಚಾರಣೆಯನ್ನು ವರಿಷ್ಠ ಹಿಂದೀ ನ್ಯಾಯಾಧೀಶರು ಮಾಡಬಹುದು" ಎಂಬರ್ಥದ ಒಂದು ಮಸೂದೆಯನ್ನು **ಇಲ್ಬರ್ಟ್** ಎಂಬವನು ಕೌನ್ಸಿಲಿನ ಮುಂದೆ ಇಟ್ಟನು. ಆಗ ಯುರೋಪಿಯನರು ಬಹಳ ಅಸಂತುಷ್ಟರಾಗಿ ಈ ಮಸೂದೆಯನ್ನು ವಿರೋಧಿಸಿದರು. ಕೊನೆಗೆ ಹಿಂದೀ ನ್ಯಾಯಾಧೀಶರು ವಿಚಾರಣೆ ನಡೆಸಿದಲ್ಲಿ ಯುರೋಪಿಯನ್ ಅಪರಾಧಿಗಳಿಗೆ ಜ್ಯೂರಿಯನ್ನು ಬೇಡಿಕೊಳ್ಳುವ ಅಧಿಕಾರವಿರಬೇಕೆಂಬ ಸೂಚನೆಯೊಂದಿಗೆ ಆ ಮಸೂದೆಯು ಪಾಸಾಯಿತು.



ಲಾರ್ಡ್ ರಿಪನ್

೫. ರಿಪನನ ಆಳಿಕೆಯ ಕೊನೆಯೂ ಯೋಗ್ಯತೆಯೂ:— ಇವನು ಕ್ರಿ. ಶ. ೧೮೮೪ರಲ್ಲಿ ತನ್ನ ದೇಶಕ್ಕೆ ತೆರಳಿದನು. ಹಿಂದೀ ಜನರ ಏಳ್ಗೆಗಾಗಿ ಮನಮುಟ್ಟಿ ಪ್ರಯತ್ನಿಸಿದ್ದರಿಂದ ಜನರು ಇವನನ್ನು ಒಳ್ಳೆಯ ಆದರದಿಂದ ಕಾಣುತ್ತಿದ್ದರು. ಇವನು ತನ್ನ ದೇಶಕ್ಕೆ ಹೊರಟಿರುವಾಗ ಹಿಂದೀ ಜನರಿಂದ ಅಂತಃಕರಣಪೂರ್ವಕವಾದ ಮರ್ಯಾದೆಯನ್ನು ಹೊಂದಿದನು; ಅಲ್ಲದೆ 'ಲೋಕಪ್ರಿಯ ವ್ಹಾಯಿಸರಾಯ' ಎಂದು ಎನಿಸಿಕೊಂಡನು.

೬. ಲಾರ್ಡ್ ಡಫರೀನ್:— ಕ್ರಿ. ಶ. ೧೮೮೪ – ೧೮೮೮. ಲೋಕಪ್ರಿಯನಾದ ರಿಪನನ ತರುವಾಯ ಲಾರ್ಡ್ **ಡಫರೀನನು** ವ್ಹಾಯಿಸರಾಯನಾದನು. ಇವನ ಕಾಲದಲ್ಲಿ ನಡೆದ ಮಹತ್ವದ ಸಂಗತಿಗಳು. **೧. ಬ್ರಹ್ಮದೇಶದ ೩ನೆಯ ಯುದ್ಧ**– ೧೮೮೫ – ೧೮೮೬. **ಕಾರಣಗಳು**:— ಬ್ರಹ್ಮದೇಶದಲ್ಲಿ ತೆಂಗಿನ ಎಳೆ ಮುಂತಾದವುಗಳ ವ್ಯಾಪಾರ ಮಾಡುತ್ತಿದ್ದ ಇಂಗ್ಲಿಷರಿಗೆ ಅವಶ್ಯವಿದ್ದ ಅನುಕೂಲಗಳನ್ನು ಆವಾದ **ಥೀಜಾ** ಅರಸನು ಒದಗಿಸಿಕೊಡುತ್ತಿರಲಿಲ್ಲ. ಆಗ ಆ ವ್ಯಾಪಾರಸ್ಥರು ತಮ್ಮ ತಕರಾರುಗಳನ್ನು ಡಫರೀನನಿಗೆ ತಿಳಿಸಿದರು.

ಡಫರೀನನು ವ್ಯಾಪಾರಸ್ಥರ ಬೇಡಿಕೆಗಳನ್ನು ಪೂರೈಸುವ ವಿಚಾರಮಾಡಬೇಕೆಂದು ಥೀಬಾನಿಗೆ ತಿಳಿಸಿದುದಕ್ಕೆ ಅವನಿಂದ ಉತ್ತರ ಬರಲಿಲ್ಲ ಅಲ್ಲದೆ, ಅವನು ಫ್ರೆಂಚರೊಡನೆ ಸ್ನೇಹಬೆಳೆಯಿಸುವ ಪ್ರಯತ್ನ ಮಾಡುತ್ತಿದ್ದನು. **ಯುದ್ಧ**:-- ಆದದರಿಂದ ಡಫರೀನನು ದಂಡು ಕಳುಹಲು, ಥೀಬಾನು ಯುದ್ಧದ ಸಿದ್ಧತೆಯನ್ನೇ ಮಾಡದೆ ಇದ್ದುದರಿಂದ ಯುದ್ಧವಾಗದೆ ಅವನು ಇಂಗ್ಲಿಷರ ಕೈಯಲ್ಲಿ ಸಿಕ್ಕನು. ಬ್ರಹ್ಮದೇಶವು ಖಾಲಸಾ ಆಗಿ ಥೀಬಾನು ಹೆಂಡರು ಮಕ್ಕಳೊಂದಿಗೆ ರತ್ನಾಗಿರಿಗೆ ಕಳುಹಲ್ಪಟ್ಟನು. **೨. ರಾಷ್ಟ್ರ ಮಹಾಸಭೆಯ (ಕಾಂಗ್ರೆಸದ) ಉದಯ**:— ಕ್ರಿ ಶ. ೧೮೮೫. ಹಿಂದುಸ್ಥಾನದ ಮುಂದಾಳುಗಳಿಂದ ಪ್ರತಿವರ್ಷ ನೆರೆಯಿಸಲ್ಪಡುತ್ತಿರುವ ರಾಷ್ಟ್ರಮಹಾಸಭೆಯ ಮೊದಲನೆಯ ಅಧಿವೇಶನವು ಲಾರ್ಡ ಡಫರೀನನ ಕಾಲದಲ್ಲಿ ಮುಂಬಯಿಯಲ್ಲಿ ನೆರೆಯಿತು. ಇದರಿಂದ ಹಿಂದೀ ಜನರ ಆಕಾಂಕ್ಷೆಗಳು ಸರಕಾರದವರಿಗೆ ತಿಳಿಯಲು ಅನುಕೂಲವಾಯಿತು. **೩. ವಾಯವ್ಯ ಗಡಸೀಮೆಯ ರಕ್ಷಣೆ** — ಅಫಗಾಣಿಸ್ಥಾನದ ಅಮೀರ, ರಶಿಯಾ, ಇಂಗ್ಲಿಷ ಇವರಲ್ಲಿ ಒಪ್ಪಂದವಾಗಿ **ಆಕ್ಸಸ** ಹೊಳೆಯು ರಶಿಯಾ, ಅಫಗಾಣಿಸ್ಥಾನ ಇವುಗಳ ಮೇರೆಯೆಂದು ಗೊತ್ತಾದದರಿಂದ ರಶಿಯದ ದಾಳಿಯ ಹೆದರಿಕೆ ಕಡಿಮೆಯಾಯಿತು. ಆಮೇಲೆ ಡಫರೀನನು ವಾಯವ್ಯ ಗಡಿಸೀಮೆಯ ರಕ್ಷಣೆಯ ಕೆಲಸ ಕೈಕೊಂಡನು. ಅಫಗಾಣಿಸ್ಥಾನ, ಹಿಂದುಸ್ಥಾನ ಇವುಗಳ ನಡುವೆ ಇರುವ (ಸುಮಾರು ೨॥ ಸಾವಿರ ಚೌರಸ ಮೈಲು) ಪ್ರದೇಶದಲ್ಲಿಯ **ಆಫ್ರೀದಿ** ಮತ್ತು **ವಹಾಬಿ** ಎಂಬ ಜನರು ಹೊತ್ತುನೋಡಿ ಆಗಾಗ್ಗೆ ದಂಗೆ ಮಾಡುತ್ತಿದ್ದರು. ಆದದರಿಂದ ಇವನು ರಾಬರ್ಟ್ಸನನ್ನು ಸೈನ್ಯದೊಡನೆ ಕಳುಹಿ ಆ ಸೀಮೆಯಲ್ಲಿ ಶಾಂತತೆಯನ್ನು ಉಂಟುಮಾಡಿದನು. **೪.** ಬಂಡಾಯದ ಕಾಲದಲ್ಲಿ ಬಂಡುಗಾರರ ಕೈಸೇರಿದ್ದ **ಗ್ವಾಲ್ಹೇರ** ಕೋಟೆಯನ್ನು ಇಂಗ್ಲಿಷರು ಗೆದ್ದುಕೊಂಡಿದ್ದರು. ಅದನ್ನು ಡಫರೀನನು ಮರಳಿ ಸಿಂಧ್ಯೆಗೆ ಕೊಟ್ಟನು. ಕ್ರಿ. ಶ. **೧೮೮೬. ೫.** ರೇಲ್ವೆ ಕಂಪನಿಗಳ ಅವಧಿಯು ಮುಗಿದ ಕೂಡಲೆ ಅವನ್ನು ಸರಕಾರದ ವಶಕ್ಕೆ ತೆಗೆದುಕೊಳ್ಳಬೇಕೆಂದು ಗೊತ್ತಾಯಿತು **೬.** ಕ್ರಿ. ಶ. ೧೮೮೬ರಲ್ಲಿ ರಾಣಿಯವರ ೫೦ ವರ್ಷ ಆಳಿಕೆಯು **ಸುವರ್ಣ ಮಹೋತ್ಸವವು** ಜರುಗಿತು. **೭. ಲೇಡಿ ಡಫರೀನಳ** ಇಚ್ಛೆಯಂತೆ ಸಂಸ್ಥಾನಿಕರಿಂದಲೂ

ಧನಿಕರಿಂದಲೂ ಕೂಡಿದ ಹಣದಿಂದ ಸ್ತ್ರೀಯರಿಗೋಸುಗ **ಔಷಧಾಲಯ**ಗಳನ್ನು ಸ್ಥಾಪಿಸುವ ವ್ಯವಸ್ಥೆಯಾಯಿತು.

೨೩ನೆಯ ಪಾಠ

ಲಾರ್ಡ ಲ್ಯಾನ್ಸಡೌನ್. **ಲಾರ್ಡ ಎಲ್ಜಿನ್.**
(ಕ್ರಿ. ಶ ೧೮೮೮-೧೮೯೪) (ಕ್ರಿ. ಶ ೧೮೯೪-೧೮೯೯)
ಲಾರ್ಡ ಕರ್ಝನ್. (ಕ್ರಿ ಶ. ೧೮೯೯-೧೯೦೫)

೧. **ಲಾರ್ಡ ಲ್ಯಾನ್ಸ್‌ಡಾವುನ್** :— ಕ್ರಿ. ಶ. **೧೮೮೮ — ೧೮೯೪.** ಡಫರೀನನು ಕೆಲಸದಿಂದ ಬಿಡುಗಡೆಯಾಗಲು ಲಾರ್ಡ ಲ್ಯಾನ್ಸ್‌ಡಾವುನನು ವ್ಹಾಯಿಸರಾಯನಾಗಿ ಬಂದನು. ಇವನ ಕಾಲದಲ್ಲಿ ಕೆಳಗಿನ ಸಂಗತಿಗಳು ಮುಖ್ಯವಾಗಿ ವರ್ತಿಸಿದವು. ೧. **ಮಣಿಪುರದ ದಂಗೆ**- ಕ್ರಿ. ಶ. **೧೮೯೦.** ಮಣಿಪುರವು ಚಿಕ್ಕ ಸಂಸ್ಥಾನವು. ಇದು ಬಂಗಾಲದ ಪೂರ್ವಕ್ಕೆ ಅಸಾಮದ ನೆರೆಯಲ್ಲಿ ಗುಡ್ಡಗಾಡಿನಲ್ಲಿ ಇರುವದು ಅಲ್ಲಿಯ ಸೇನಾಪತಿಯು ದಂಗೆಮಾಡಿ ಅರಸನನ್ನು ಓಡಿಸಲು ಅಲ್ಲಿಯ ಬಹುಜನರು ಅವನನ್ನು ಕೂಡಿದರು. ಇದನ್ನು ಕಂಡು ಕ್ವೆಂಟನನು ಸೈನ್ಯದೊಡನೆ ಮಣಿಪುರಕ್ಕೆ ದಂಗೆಯನ್ನು ಅಡಗಿಸಹೋಗಿ ಅಲ್ಲಿ ಅವನ ಕೊಲೆಯಾಯಿತು ಬಳಿಕ ಇಂಗ್ಲಿಷರು ಆ ಸೇನಾಪತಿಯನ್ನು ಸೆರೆಹಿಡಿದು ಗಲ್ಲಿಗೆ ಏರಿಸಿದರು. ಮತ್ತು ಅರಸನ ಚಿಕ್ಕ ವಯಸ್ಸಿನ ಮಗನನ್ನು ಪಟ್ಟಗಟ್ಟಿದರು. ೨. **ಕೌನ್ಸಿಲ್ ಆಕ್ಟ್**- ಕ್ರಿ ಶ. **೧೮೯೨.** ಪಾರ್ಲಿಮೆಂಟಿನಲ್ಲಿ ಪಾಸಾದ ಈ ಕಾಯಿದೆಯಿಂದ **ವರಿಷ್ಠ** ಮತ್ತು **ಪ್ರಾಂತಿಕ** ಕಾಯದೆ ಮಂಡಲಗಳ ಸಭಾಸದರ ಸಂಖ್ಯೆಯು ಹೆಚ್ಚಾಯಿತು. ಪ್ರಾಂತಿಕ ಮಂಡಲದಲ್ಲಿಯ ಸರಕಾರಿ ನವಕರರಲ್ಲದ ಸಭಾಸದರಿಂದ ಆರಿಸಲ್ಪಟ್ಟ ಪ್ರತಿನಿಧಿಗಳು ವರಿಷ್ಠ ಮಂಡಲದಲ್ಲಿಯೂ, **ಮ್ಯುನಿಸಿಪಾಲಿಟಿ, ಲೋಕಲ್ ಬೋರ್ಡು, ವಿಶ್ವವಿದ್ಯಾಲಯ** ಈ ಸಂಸ್ಥೆಗಳಿಂದ ಆರಿಸಲ್ಪಟ್ಟ ಪ್ರತಿನಿಧಿಗಳು ಪ್ರಾಂತಿಕ ಮಂಡಲದಲ್ಲಿಯೂ ಇರಬೇಕೆಂದು ಗೊತ್ತಾಯಿತು. ಅಲ್ಲದೆ ರಾಜ್ಯಕಾರಭಾರದ ಸಂಬಂಧವ ಪ್ರಶ್ನೆಗಳನ್ನು ಕೇಳುವ ಮತ್ತು ಸರಕಾರಿ ಅಂದಾಜಪತ್ರಿಕೆಯ ಸಂಬಂಧದಿಂದ ಚರ್ಚೆ ಮಾಡುವ ಅಧಿಕಾರವು ಸಭಾಸದ

ರಿಗೆ ಉಂಟಾಯಿತು. **೩. ವಾಯವ್ಯ ಸೀಮೆಯ ಭದ್ರತೆ**— ಬೋಲನದ ವರೆಗೆ ರೇಲ್ವೆಯು ಹಾಕಲ್ಪಟ್ಟಿತು. ಲ್ಯಾನ್ಸ್‌ಡಾವುನನು ಕಾಶ್ಮೀರದ ಪಶ್ಚಿಮ ಕ್ಕಿರುವ **ಗಿಲ್ಡಿಟ್, ಚಿತ್ರಳ** ಈ ಠಾಣ್ಯಗಳನ್ನು ಕೈಸೇರಿಸಿಕೊಂಡು **ಹಿಂದುಕುಶ** ಪರ್ವತದ ಮಾರ್ಗವನ್ನು ಭದ್ರಪಡಿಸಿದನು. ಬಳಿಕ ಅಮೀರನನ್ನು ಸಮಾಧಾನಬಡಿಸಿ, ಅವನ ಒಪ್ಪಿಗೆಯಿಂದ ಚಿತ್ರಳ, ಸ್ವಾಟ, ಖೂರ್ರ್ಮ್ಯಾಲ್ಲಿ ವಜರಿಸ್ಥಾನ ಈ ಠಾಣ್ಯಗಳನ್ನು ಇಂಗ್ಲಿಷರ ಅಧಿಕಾರಕ್ಕೆ ಒಳಪಡಿಸಿಕೊಂಡನು.

೨. ಲಾರ್ಡ್ ಎಲ್ಡಿನ್:— ಕ್ರಿ. ಶ. ೧೮೯೪ -- ೧೮೯೮. ಇವನ ಕಾಲದ ಮಹತ್ವದ ಸಂಗತಿಗಳು **೧.** ಹಣದ ಕೊರತೆಯ ಮೂಲಕ ಬರುವ ಸರಕಿನ ಮೇಲೆಯೂ ಈ ದೇಶದ ಗಿರಣಿಯ ಬಟ್ಟೆಯ ಮೇಲೆಯೂ ೧೦೦ಕ್ಕೆ ೫ರಂತೆ ಕರವು ಇಡಲ್ಪಟ್ಟಿತು. ೨. ಕ್ರಿ. ಶ. ೧೮೯೪ರಲ್ಲಿ ಮುಂಬಯಿ-ಪುಣೆ ಗಳಲ್ಲಿ ವಾದ್ಯಗಳ ಸಂಬಂಧದ ಜಗಳಹತ್ತಿ ಹಿಂದು-ಮುಸಲ್ಮಾನರಲ್ಲಿ ದಂಗೆಗ ಳಾದವು. ಮತ್ತು ಕ್ರಿ. ಶ. ೧೮೯೫ರಲ್ಲಿ ಮಲಬಾರವಲ್ಲಿ **ಮೋಪಲಾ** ಜನರು ದಂಗೆಯೆಬ್ಬಿಸಿ ಬಹಳ ಅನರ್ಥವನ್ನುಂಟುಮಾಡಿದರು. **೩.** ಕ್ರಿ ಶ. ೧೮೯೬ ರಲ್ಲಿ ಹಿಂದುಸ್ಥಾನದಲ್ಲೆಲ್ಲ ಬರಬಿದ್ದಿತು; **ಮುಂಬಯಿ, ಮದ್ರಾಸ** ಪ್ರಾಂತಗಳ ಲ್ಲಿಯ ಬರವಂತು ಬಹಳ ಭೀಕರವಾಗಿತ್ತು. ಸರಕಾರವು ಬರಗಾಲದ ಕೆಲಸ ಗಳನ್ನು ಹಚ್ಚಿದರೂ ಈ ಪ್ರಸಂಗದಲ್ಲಿ ಹತ್ತು ಲಕ್ಷ ಜನರು ಮರಣಹೊಂದಿ ದರು. **೪.** ಅದೇ ವರುಷ ಮುಂಬಯಿಯಲ್ಲಿ ಪ್ಲೇಗುಬೇನೆಯು ಹುಟ್ಟಿ, ದೇಶ ವನ್ನೆಲ್ಲ ಮುಸಕಿ, ಲಕ್ಷಗಟ್ಟಲೆ ಜನರನ್ನು ನಾಶಗೊಳಿಸಿತು. ಆಗ ಈ ಬೇನೆಯ ಸ್ವರೂಪವು ಬಹಳೇ ಭಯಂಕರವಾಗಿತ್ತು. **೫.** ಸರಕಾರದ ಕಾರಭಾರದ ಮೇಲೆ ವರ್ತಮಾನಪತ್ರಕರ್ತರು ಮಾಡುವ ಟೀಕೆಗಳ ಪರಿಣಾಮವು ವಿಪರೀತವಾಗುವುದೆಂದು ತಿಳಿದು ಅವರ ಸಂಬಂಧದಿಂದ ಹಲವು ನಿರ್ಬಂಧಗಳುಂಟಾದವು. **೬. ಬಂಗಾಲ, ಆಸಾಮ** ಪ್ರಾಂತಗಳಲ್ಲಿ ಭೂಕಂಪವಾಗಿ ಬಹಳ ಹಾನಿಯಾಯಿತಲ್ಲದೆ ಎಷ್ಟೋ ಜನರು ಜೀವಕ್ಕೆ ಎರವಾದರು. **೭.** ಕ್ರಿ. ಶ. ೧೮೯೭ಕ್ಕೆ ರಾಣಿಯವರ ಆಳಿಕೆಗೆ ೬೦ ವರ್ಷಗಳಾದುದರಿಂದ **ಹೀರಕೋತ್ಸವವು** ಜರುಗಿಸಲ್ಪಟ್ಟಿತು. **೮.** ಕ್ರಿ. ಶ. ೧೮೯೫ರಲ್ಲಿ ವಾಯವ್ಯ ಗಡಿಸೀಮೆಯ **ಚಿತ್ರಳ** ಎಂಬಲ್ಲಿ ಬಂಡಾಯವೆದ್ದಿತು. ಮತ್ತು ಮುಂದೆ ೨ ವರ್ಷಗಳ ತರುವಾಯ ಗಡಿಸೀಮೆಯ ತುಂಬ ದಂಗೆಗಳೆದ್ದವು. ದಂಗೆಗಾರರು

ಗುಂಪುಗುಂಪಾಗಿ ಗಂಟುಬಿದ್ದು ಇಂಗ್ಲಿಷ ಸೈನ್ಯವನ್ನು ಬಹಳ ಕಾಡಿದರು. ಇವರನ್ನು ಹಣಿಯುವ ಕೆಲಸದಲ್ಲಿ ಇಂಗ್ಲಿಷರ ೯೫ ಸಾವಿರ ದಂಡು ತೊಡಗಿ ಕೊಂಡಿದ್ದಿತು. ಕೊನೆಗೆ ಒಂದು ವರ್ಷ ಕಾದಿ ದಂಗೆಗಾರರು ತಣ್ಣಗಾಗಿ ಒಡಂಬಡಿಕೆ ಮಾಡಿಕೊಂಡರು. ಕ್ರಿ ಶ ೧೮೯೫.

೩. **ಲಾರ್ಡ ಕರ್ಝನ್** :— ಕ್ರಿ. ಶ. ೧೮೯೫—೧೯೦೫. ಇವನು ಎಲ್ಜಿನನ ನಂತರ ವ್ಹಾಯಿಸರಾಯನಾದನು. ಮೊದಲು ಇವನು ಭಾರತ ಮಂತ್ರಿಯ ಸಹಾಯಕನಾಗಿ ಕೆಲಸ ಮಾಡಿದುದರಿಂದಲೂ ಹಿಂದುಸ್ಥಾನಕ್ಕೆ ನಾಲ್ಕುಸರತಿ ಬಂದುಹೋಗಿದ್ದುದರಿಂದಲೂ ಈ ದೇಶದ ಸ್ಥಿತಿಯನ್ನು ಚೆನ್ನಾಗಿ ಬಲ್ಲವನಾಗಿದ್ದನು ಅಲ್ಲದೆ ಹೆಸರಾದ ಮುತ್ಸದ್ದಿಯೂ ಹೆಚ್ಚಿನ ಸಾಮ್ರಾಜ್ಯಾಭಿಮಾನಿಯೂ ಹಟವುಳ್ಳವನೂ ಆಗಿದ್ದನು. ಇವನ ಕಾಲದಲ್ಲಿಯ ಮಹತ್ವದ ಸಂಗತಿಗಳು :- ೧. **ವಾಯವ್ಯ ಸೀಮೆಯ ಸಂರಕ್ಷಣೆ**– ಪಂಜಾಬ ಪ್ರಾಂತದ ಪಶ್ಚಿಮದ ಸುಮಾರು ೪೦೦ ಮೈಲು ಉದ್ದವಾದ ಭಾಗವನ್ನು ಆ ಪ್ರಾಂತದಿಂದ ಬೇರೆಮಾಡಿ, ಅದಕ್ಕೆ **ವಾಯವ್ಯ ಗಡಿಸೀಮೆಯ ಪ್ರಾಂತ** ಎಂಬ ಹೆಸರನ್ನಿಟ್ಟು ಚೀಫ ಕಮಿಶನರೆಂಬ ಅಧಿಕಾರಿಯನ್ನು ಅದರ ಮೇಲೆ ನಿಯಮಿಸಿದನು. **ಪೇಶಾವರವು** ಈ ಹೊಸ ಪ್ರಾಂತದ ಮುಖ್ಯ ಪಟ್ಟಣವಾಯಿತು. ಬಳಿಕ ಕರ್ಝನನು **ಚಿತ್ರಳ** ಮೊದಲಾದ ಠಾಣ್ಯಗಳಲ್ಲಿಯ ಇಂಗ್ಲಿಷರ ಸೈನ್ಯವನ್ನು ತೆಗೆದು, ಆ ನಾಡಿನ **ವಹಾಬಿ** ಜನರ ಸೈನ್ಯಗಳನ್ನು ಸಜ್ಜುಗೊಳಿಸಿ, ಅವನ್ನೇ ಆ ಠಾಣ್ಯಗಳ ಮೇಲೆ ಕಾವಲಿಗೆ ಇರಿಸಿದನು. ಇದರಿಂದ ಗಡಿಸೀಮೆಯ ಸಂರಕ್ಷಣೆಯ ಕೆಲಸವು ಹಗುರೆನಿಸಿತು. ೨. **ಪರರಾಷ್ಟ್ರಗಳ ಸಂಬಂಧ— (ಅ) ಅಫಗಾಣಿಸ್ಥಾನ**:— ಕ್ರಿ. ಶ. ೧೯೦೧ರಲ್ಲಿ ಅಫಗಾಣಿಸ್ಥಾನದ ಅಮೀರ ಅಬದುಲ್ ರಹಿಮಾನನು ಮರಣಹೊಂದಲು, ಅವನ ಮಗ **ಹಬೀಬುಲ್ಲಾನು** ಪಟ್ಟಕ್ಕೆ ಬಂದನು. ಕರ್ಝನನು ಅವನಿಗೆ ಹಿಂದಿನ ಕರಾರವನ್ನು ಒಪ್ಪಿಕೊಳ್ಳಬೇಕೆಂದು ತಿಳಿಸಲು ಅವನು ಅನುಮಾನಿಸಹತ್ತಿದನು. ಕೊನೆಗೆ ಕರ್ಝನನು ಅಮೀರನ ಸ್ವಾತಂತ್ರ್ಯವನ್ನು ಮನ್ನಿಸಲು ಅವನು ಒಪ್ಪಂದ ಮಾಡಿಕೊಂಡನು. ಕ್ರಿ. ಶ ೧೯೦೪. **(ಆ) ಇರಾಣದ ಷಾಹನೂಡನೆ ಒಪ್ಪಂದ**:— ರಶಿಯಾದವರು, ಜರ್ಮನರು, ಫ್ರೆಂಚರು ಇವರು ಇರಾಣೀ ಅಖಾತ್ಯದಲ್ಲಿ ತಮ್ಮ ವರ್ಚಸ್ಸನ್ನು ನೆಲೆಗೊಳಿಸುವ ಹವಣಿಕೆಯಲ್ಲಿದ್ದರು. ಆದದರಿಂದ ಕರ್ಝನನು

ತಾನೆ ಇರಾಣದ ತನಕ ಹೋಗಿ ಷಾಹನೊಡನೆ ಮಿತ್ರತ್ವದ ಒಪ್ಪಂದ ಮಾಡಿಕೊಂಡು ಬಂದನು. **(ಇ) ತಿಬೇಟ**:— ಲಾರ್ಡ ಕರ್ಝನನು ತಿಬೇಟದ **ದಲಾಯಿಲಾಮಾನ** ಕಡೆಗೆ ಕಳುಹಿದ ಮೂರು ಪತ್ರಗಳನ್ನು ಅವನು ತಿರುಗಿ ಕಳಿಸಿದನು. ಇಂಗ್ಲಿಷರನ್ನು ತಮ್ಮಲ್ಲಿ ಕಾಲಿಕ್ಕಗೊಡಬಾರದೆಂದು ಅವನ ಸಂಕಲ್ಪವಿದ್ದಿತು. ಅಲ್ಲದೆ ಅವನು ರಶಿಯದವರ ಸಂಗಡ ಸಂಧಾನ ನಡೆಸಿದ್ದನು. ಆದದರಿಂದ ಕರ್ಝನನು **ಯಂಗ ಹಜಬಂಡ**ನನ್ನು ಸೈನ್ಯದೊಂದಿಗೆ ಸಿಕಿಮದ ಮಾರ್ಗವಾಗಿ ತಿಬೇಟದ ಮೇಲೆ ಸಾಗಿಸಿದನು. ಆದರೆ ಹಿಂದುಸ್ಥಾನ ಸರಕಾರವು ಹೀಗೆ ತಿಬೇಟದ ಮೇಲೆ ಕೈಯೆತ್ತಿದುದಕ್ಕಾಗಿ **ಚೀನ, ರಶಿಯಾ** ಈ ದೇಶಗಳ ಸರಕಾರದವರು ಇಂಗ್ಲಂಡನ ಕಡೆಗೆ ತಮ್ಮ ತಕರಾರು ಒಯ್ದರು. ಆಗ ಇಂಗ್ಲಂಡದ ಅಪ್ಪಣೆಯ ಮೇರೆಗೆ ಕರ್ಝನನು ತಿಬೇಟದಿಂದ ಸೈನ್ಯವನ್ನು ಕರೆಯಿಸಿಕೊಳ್ಳಬೇಕಾಯಿತು. ಈ ರೀತಿ ಜಯವುಂಟಾಗಿಯೂ ತಿಬೇಟದ ದಾಳಿಯು ನಿರರ್ಥಕವಾಯಿತು. **೩. ಸಂಸ್ಥಾನಿಕರ ಸಂಬಂಧದ ವ್ಯವಹಾರಗಳು**:— ೧. ಕರ್ಝನನು ಅರಸುಮಕ್ಕಳಿಗೆ ಯುದ್ಧಕಲೆಯ ಶಿಕ್ಷಣವು ದೊರೆಯಬೇಕೆಂದು **"ಇಂಡಿಯನ್ ಕ್ಯಾಡೆಟ್ ಕೋಅರ"** ಎಂಬ ಸಂಸ್ಥೆಯನ್ನು ಸ್ಥಾಪಿಸಿದನು. ೨. ನಿಜಾಮನಿಂದ ಬರತಕ್ಕ ಹಣವೆಲ್ಲ ಮುಟ್ಟಿದುದರಿಂದ **ವರ್ಹಾಡ** ಪ್ರಾಂತವನ್ನು ಮರಳಿ ಕೊಡಬೇಕಾಯಿತು. ಆದರೆ ಕರ್ಝನನು ಕ್ರಿ.ಶ. ೧೯೦೨ರಲ್ಲಿ ನಿಜಾಮನಲ್ಲಿಗೆ ಹೋಗಿ ವರ್ಹಾಡಕ್ಕೆ ಪ್ರತಿಯಾಗಿ ವರ್ಷಕ್ಕೆ ೨೫ ಲಕ್ಷ ರೂಪಾಯಿಗಳನ್ನು ಅವನಿಗೆ ಕೊಡಲೊಪ್ಪಿ ಆ ಪ್ರಾಂತವನ್ನು ಮಧ್ಯಪ್ರಾಂತಕ್ಕೆ ಕೂಡಿಸಿಕೊಂಡನು. ೩. ಕ್ರಿ.ಶ. ೧೯೦೧ರಲ್ಲಿ ವಿಕ್ಟೋರಿಯಾ ಮಹಾರಾಣಿಯವರು ಮರಣ ಹೊಂದಲು **೭ನೆಯ ಎಡ್ವರ್ಡ**ರವರು ಪಟ್ಟಕ್ಕೆ ಕುಳಿತರು. ಆ ಸಂಬಂಧದ ಸಮಾರಂಭವು ಕ್ರಿ.ಶ. **೧೯೦೩ರ ಜನೇವರಿ ೧ನೆಯ** ತಾರೀಖಿಗೆ ದಿಲ್ಲಿಯಲ್ಲಿ ನೆರೆಯಿಸಲ್ಪಟ್ಟಿತು. ಕರ್ಝನನು ಅಲ್ಲಿ ಕೂಡಿದ ಸಂಸ್ಥಾನಿಕರನ್ನು, ಅವರು ಮಾಡಿದ ನೆರವಿಗಾಗಿ ಅಭಿನಂದಿಸಿದನಲ್ಲದೆ ನೀವು ಮನಮುಟ್ಟಿ ಮಾಡುವ ನೆರವಿನಿಂದ ಬ್ರಿಟಿಷ ಸಾಮ್ರಾಜ್ಯವು ಹೆಚ್ಚು ಘನತೆಯನ್ನು ಪಡೆಯುವದು. ಎಂಬರ್ಥದ ಅಭಿಪ್ರಾಯವನ್ನು ವ್ಯಕ್ತಪಡಿಸಿದನು. ಬಾದಷಾಹರು ತಮ್ಮ ಹಿಂದೀ ಪ್ರಜೆಗಳಿಗಾಗಿ ಅಂತಃಕರುಣಪೂರ್ವಕವಾದ

ಸಂದೇಶವನ್ನು ಕಳುಹಿದರು ೪. **ರಾಜ್ಯಕಾರಭಾರದಲ್ಲಿಯ ಸುಧಾರಣೆಗಳು**— ಕ್ರಿ ಶ. ೧೯೦೦ರಲ್ಲಿ ಮತ್ತೆ ಬರವು ಬಿದ್ದಿತು ಪ್ಲೇಗುಬೇನೆಯೂ ದೇಶದಲ್ಲಿ ಹೆಚ್ಚುತ್ತ ನಡೆಯಿತು. ಆದೇ ವೇಳೆಗೆ ರಾಜ್ಯಕಾರಭಾರದ ಹಲವು ಖಾತೆಗಳ ಸುಧಾರಣೆಯಾಗುವದು ಅವಶ್ಯವೆಂದು ಕಂಡುಬಂದಿತು ಆದದರಿಂದ ಕರ್ಝನನು ಮಹತ್ವದ ಪ್ರಶ್ನೆಗಳ ವಿಚಾರಣೆಗಾಗಿ ಬೇರೆಬೇರೆ ಸಮಿತಿಗಳನ್ನು ನಿಯಮಿಸಿ, ಅವುಗಳ ಸೂಚನೆಯ ಮೇರೆಗೆ ಹಲವು ಸುಧಾರಣೆಗಳನ್ನು ಮಾಡಿದನು. ೧. ಇದರಿಂದ ಪ್ಲೇಗಿನ ಕಾಲದಲ್ಲಿ ಜನರ ಮೇಲಾಗುವ ಒತ್ತಾಯವು ಕಡಿಮೆಯಾಯಿತು. ೨. ಹೊಸ ಹೊಸ ಕಾಲುವೆಗಳ ಕೆಲಸಗಳು ಆರಂಭವಾಗಿ ಒಕ್ಕಲ ತನಕ್ಕೆ ಉಪಯೋಗವಾಯಿತು. ಒಕ್ಕಲತನದ ಖಾತೆಯವರು ಬೆಳೆಗಳ ಸಂಬಂಧದ ಪ್ರಯೋಗಗಳನ್ನು ಮಾಡಿ ಒಕ್ಕಲಿಗರಿಗೆ ಲಾಭಕರವಾದ ಸಂಗತಿಗಳನ್ನು ತಿಳಿಸಹತ್ತಿದರು. ಒಕ್ಕಲಿಗರಿಗೆ ಕಡಿಮೆ ಬಡ್ಡಿಯಂತೆ ಸಾಲ ಸಿಗುವದಕ್ಕೆ ಅನುಕೂಲವಾಗುವಂತೆ **ಸಹಕಾರಿ ಸಂಘ**ಗಳು ಸ್ಥಾಪಿತವಾದವು. ೩. ಉಪ್ಪಿನ ಮತ್ತು ಉತ್ಪನ್ನದ ಮೇಲಿನ ಕರಗಳ ಪ್ರಮಾಣವು ಕಡಿಮೆಯಾಯಿತು. **ವ್ಯಾಪಾರೋದ್ಯೋಗಗಳ ಖಾತೆ** ಮತ್ತು **ಪುರಾಣ ವಸ್ತುಸಂಶೋಧನ ಖಾತೆ** ಎಂಬ ಸ್ವತಂತ್ರ ಖಾತೆಗಳುಂಟಾದವು ೫. **ಬಂಗಾಲದಲ್ಲಿಯ ಅಸಂತೋಷ**— ರಾಜ್ಯಕಾರಭಾರದ ಅನುಕೂಲತೆಗಾಗಿ ಬಂಗಾಲ ಪ್ರಾಂತದ ಪೂರ್ವಭಾಗವನ್ನು ಆ ಪ್ರಾಂತದಿಂದ ಬೇರ್ಪಡಿಸಿ ಅದನ್ನೊಂದು ಸ್ವತಂತ್ರ ಪ್ರಾಂತವನ್ನಾಗಿ ಮಾಡುವ ವಿಚಾರವು ಬಹಳ ದಿನಗಳಿಂದ ನಡೆದಿತ್ತು. ಆದರೆ ಬಂಗಾಲದ ಜನರಿಗೆ ಈ ವಿಚಾರವು ಒಪ್ಪಿರಲಿಲ್ಲ. ಕರ್ಝನನ ಕಾಲದಲ್ಲಿ ಕ್ರಿ. ಶ ೧೯೦೫ರ ಅಕ್ಟೋಬರದಿಂದ ಪೂರ್ವ ಬಂಗಾಲದ ಕಾರಭಾರವು ಸ್ವತಂತ್ರವಾಗಿ ಸಾಗುವದು ನಿಶ್ಚಿತವಾಯಿತು. ಆಗ ಬಂಗಾಲದ ಜನರು ಬಲವಾದ ಚಟುವಟಿಕೆಯನ್ನು ಹೂಡಿ ೨ ಸಾವಿರ ಸಭೆಗಳನ್ನು ನೆರೆಯಿಸಿಯೂ ೭೦ ಸಾವಿರ ಸಹಿಗಳ ಬೇಡಿಕೆಗಳನ್ನು ಕಳುಹಿಸಿಯೂ ಬಂಗಾಲವನ್ನು ಒಡೆಯಬಾರದೆಂದು ಕೇಳಿಕೊಂಡರು ಆದರೆ ಕರ್ಝನನ ಆಳಿಕೆಯಲ್ಲಿ ಜನರ ಬೇಡಿಕೆಯು ಪೂರೈಸಲ್ಪಡಲಿಲ್ಲ. ಆಗ **ಪಂಚಮಜಾರ್ಜ ಬಾದಷಾಹ**ರವರು ಕ್ರಿ. ಶ. ೧೯೧೧ರಲ್ಲಿ ರಾಜ್ಯಾರೋಹಣಕ್ಕಾಗಿ ಈ ದೇಶಕ್ಕೆ ಬಂದಿರಲು, ಬಂಗಾಲ ಪ್ರಾಂತವು ಒಟ್ಟಾದುದನ್ನು ತಿಳಿಯಪಡಿಸಿ, ಜನರನ್ನು ತೃಪ್ತಗೊಳಿಸಿದರು. ೬. **ಕರ್ಝನನ ಆಳಿಕೆಯ**

ಕೊನೆ:— ಕ್ರಿ. ಶ. ೧೯೦೫. ಹಿಂದುಸ್ಥಾನದ ಸೇನಾಪತಿಯು ವ್ಹಾಯಿಸರಾಯನಿಗೆ ಅಂಕಿತನಾಗಿ ಕೆಲಸ ಮಾಡುತ್ತಿರುವದು ಆಗಿನ ಸೇನಾಪತಿಯಾದ ಲಾರ್ಡ **ಕಿಚನರ್** ಎಂಬವನಿಗೆ ಸರಿಯೆನಿಸಲಿಲ್ಲ. ಅವನು "ಸೈನ್ಯವಿಷಯದಲ್ಲಿ ಅನಭಿಜ್ಞನಾದ ವ್ಹಾಯಿಸರಾಯನು ಆ ಕೆಲಸದಲ್ಲಿ ಕೈಹಾಕಕೂಡದು" ಎಂದು ಪ್ರತಿಪಾದಿಸತೊಡಗಿದನು. ಕಿಚನರನ ಈ ಮತವನ್ನು ಸ್ಟೇಟ ಸೆಕ್ರೆಟರಿಯು ಎತ್ತಿಹಿಡಿದುದರಿಂದ ಕರ್ಝನನು ರಾಜೀನಾಮೆಯನ್ನು ಕೊಟ್ಟು ಹೊರಟು ಹೋದನು.

೨೪ನೆಯ ಪಾಠ

ಲಾರ್ಡ ಮಿಂಟೋ (ಕ್ರಿ. ಶ. ೧೯೦೫-೧೯೧೦) **ಲಾರ್ಡ ಹಾರ್ಡಿಂಜ** (ಕ್ರಿ. ಶ ೧೯೧೦-೧೯೧೬)
ಲಾರ್ಡ ಚೇಮ್ಸ್‌ಫರ್ಡ ಕ್ರಿ. ಶ ೧೯೧೬-೧೯೨೧)

೧. **ಲಾರ್ಡ ಮಿಂಟೋ**:— **೧೯೦೫ - ೧೯೧೦. ಮಿಂಟೋನು ಬಂದ ಕಾಲದ ಪರಿಸ್ಥಿತಿ**:— ಸುಮಾರು ಇಪ್ಪತ್ತು ವರ್ಷಗಳಿಂದ ನೆರೆಯುತ್ತಲಿದ್ದ ರಾಷ್ಟ್ರಸಭೆಯಲ್ಲಿಯ ಚರ್ಚೆಯ ಮೂಲಕ ಸುಶಿಕ್ಷಿತರ ರಾಜಕೀಯ ಆಕಾಕ್ಷೆಗಳು ಮೊಳೆಲೇ ಬಲಿಯುತ್ತಲಿದ್ದವು. ಬಂಗಾಲ ಪ್ರಾಂತವು ಇಬ್ಭಾಗಿಸಲ್ಪಟ್ಟಂದಿನಿಂದಂತು, ರಾಜ್ಯಕಾರಭಾರದಲ್ಲಿ ತಮ್ಮ ಕೈಯು ಅವಶ್ಯವಾಗಿ ಸೇರಿರಬೇಕೆಂದು ಜನರಿಗೆ ಎನಿಸಹತ್ತಿತ್ತು. **ರಾಷ್ಟ್ರಸಭೆ, ಮುಸ್ಲೀಮಲೀಗ ಇವುಗಳ ಸಾಹಚರ್ಯ**—ಇದು ವರೆಗೆ ಮುಸಲ್ಮಾನರು ರಾಷ್ಟ್ರ ಸಭೆಯ ಕೆಲಸದಲ್ಲಿ ಹೆಚ್ಚಾಗಿ ಮನಸ್ಸು ಹಾಕದೆಯಿದ್ದದರಿಂದ ಅವರ ಆಕಾಂಕ್ಷೆಗಳು ಬೆಳೆದಿರಲಿಲ್ಲ. ಆಗಿನ ರಾಷ್ಟ್ರಸಭೆಯ ಪ್ರಗತಿಯನ್ನು ನೋಡಿ ಮುಸಲ್ಮಾನರು ತಮ್ಮ ಸಮಾಜವನ್ನು ಸುಧಾರಿಸುವದಕ್ಕಾಗಿ ಕ್ರಿ. ಶ. ೧೯೦೬ರಲ್ಲಿ **ಮುಸ್ಲೀಮ ಲೀಗ** ಎಂಬ ಸಂಸ್ಥೆಯನ್ನು ಸ್ಥಾಪಿಸಿದರು. ಈ ಸಂಸ್ಥೆಯು ಕೆಲ ದಿನಗಳ ವರೆಗೆ ಶಿಕ್ಷಣದ ಪ್ರಗತಿಗಾಗಿ ಯತ್ನಿಸುತ್ತಲಿದ್ದಿತು. ಕ್ರಿ. ಶ. ೧೯೦೭ ರಲ್ಲಿ ರಾಷ್ಟ್ರಸಭೆಯ ಅನುಯಾಯಿಗಳಲ್ಲಿ **ಪ್ರಾಗತಿಕ, ರಾಷ್ಟ್ರೀಯ** ಎಂಬೆರಡು ಬಣಗಳಾಗಿ ಆ ಸಭೆಯ ಸೂತ್ರಗಳು ಪ್ರಾಗತಿಕರ ಕೈಸೇರಿದವು. ಅಂದಿನಿಂದ ರಾಷ್ಟ್ರಸಭೆ–ಮುಸ್ಲೀಮ ಲೀಗುಗಳ ಅಧಿವೇಶನಗಳು ಒಂದೇ ಪಟ್ಟಣದಲ್ಲಿ ಒಂದೇ ಕಾಲಕ್ಕೆ

ನೆರೆಯಹತ್ತಿದವು. ಇದರಿಂದ ಪ್ರಾಗತಿಕ ಮತ್ತು ಮುಸಲ್ಮಾನ ಇವರಲ್ಲಿ ಸಾಹ ಚರ್ಯವು ಉಂಟಾಯಿತು. ರಾಷ್ಟ್ರೀಯ ಬಣದವರು ಲೇಖ, ವ್ಯಾಖ್ಯಾನ ಮುಂತಾದವುಗಳ ಮೂಲಕ ಜನರಲ್ಲಿ ಜಾಗ್ರತೆಯನ್ನುಂಟುಮಾಡಿ ಅವರನ್ನು ತಮ್ಮ ಕಡೆಗೆ ಒಲಿಸಿಕೊಂಡು ರಾಷ್ಟ್ರಸಭೆಯನ್ನು ತಮ್ಮ ಕೈವಶಮಾಡಿಕೊಳ್ಳುವ ಪ್ರಯತ್ನ ನಡೆಸಿದರು. **ಪ್ರೆಸ್ ಆಕ್ಟ್ ಮತ್ತು ಸಭಾಬಂದಿಯ ಕಾಯದೆ**— ಕ್ರಿ. ಶ. ೧೯೦೭ರಲ್ಲಿ ಬಂಗಾಲದಲ್ಲಿ **ಅರಾಜಕರ** ಸಂಘಗಳು ಇರುವವೆಂದು ಗೊತ್ತಾಯಿತು. ಈ ಅರಾಜಕರ ಪ್ರಯತ್ನದಿಂದಲೆ ಬಂಗಾಲ-ಪಂಜಾಬ-ಮಹಾ ರಾಷ್ಟ್ರಗಳಲ್ಲಿ ಕೆಲ ಇಂಗ್ಲಿಷ ಅಧಿಕಾರಿಗಳ ಕೊಲೆಯಾಯಿತು ಆಗ ಸರಕಾರ ದವರು ಅರಾಜಕರನ್ನು ಕಂಡುಹಿಡಿದು, ತಪ್ಪುಗಾರರನ್ನು ತಕ್ಕ ರೀತಿಯಿಂದ ಶಿಕ್ಷಿಸಿದರು. ವರ್ತಮಾನಪತ್ರಗಳಲ್ಲಿಯ ಲೇಖಗಳಿಂದಲೂ ಸಭೆಗಳಲ್ಲಿಯ ಭಾಷಣಗಳಿಂದಲೂ ಅರಾಜಕರಿಗೆ ಉತ್ತೇಜನ ದೊರೆಯುವ ಸಂಭವವಿದ್ದುದ ರಿಂದ ಸರಕಾರದವರು **ಪ್ರೆಸ್ ಆಕ್ಟ್** ಮತ್ತು **ಸಂಬಂಧಿಯ ಕಾಯದೆ** ಎಂಬೆರಡು ಕಾಯದೆಗಳನ್ನು ಮಾಡಿದರು. ರಾಜದ್ರೋಹದ ಆರೋಪಕ್ಕಾಗಿ ಹಲವರು ನೆರೆಮನೆಗೆ ಕಳುಹಲ್ಪಟ್ಟರು.

ಮೋರ್ಲೆ-ಮಿಂಟೋ ಸುಧಾರಣೆಗಳು:— ಕ್ರಿ ಶ ೧೯೦೯. ಈ ಸಮ ಯಕ್ಕೆ ಭಾರತ ಮಂತ್ರಿಯಾಗಿದ್ದ **ಮೋರ್ಲೆ** ಮತ್ತು **ಮಿಂಟೋ** ಇವರು ಜನರ ಬೇಡಿಕೆಗಳನ್ನು ಸಹಾನುಭೂತಿಯಿಂದ ವಿಚಾರಿಸಿ ರಾಜ್ಯಕಾರಭಾರದಲ್ಲಿ ಅವರ ಅಧಿಕಾರಗಳನ್ನು ಹೆಚ್ಚಿಸುವ ಕೆಲವು ಸುಧಾರಣೆಗಳನ್ನು ಸೂಚಿಸಿದರು. ಇದಕ್ಕ ನುಸಾರವಾಗಿ ಪಾರ್ಲಮೆಂಟಿನವರು **ಮೋರ್ಲೆ-ಮಿಂಟೋ ಸುಧಾರಣೆ** ಎಂಬ ಕಾಯದೆಯನ್ನು ಪಾಸುಮಾಡಿದರು. ಇದರಿಂದ ೧. ಭಾರತಮಂತ್ರಿ, ವ್ಹಾಯಿಸ ರಾಯ, ಗವ್ಹರ್ನರ ಇವರ ಕಾರ್ಯಕಾರೀ ಮಂಡಲಗಳಲ್ಲಿ ಹಿಂದೀ ಜನರ ಸೇರ್ಪಡೆಯಾಯಿತು ೨. ವರಿಷ್ಠ ಮತ್ತು ಪ್ರಾಂತಿಕ ಕಾಯದೆ ಮಂಡಲಗಳ ಸಭಾಸದರ ಸಂಖ್ಯೆಯು ಹೆಚ್ಚಿಸಲ್ಪಟ್ಟಿತು. ೩. ಪ್ರಾಂತಿಕ ಮಂಡಲಗಳಲ್ಲಿ ಮಾತ್ರ ಸರಕಾರಿ ನವಕರರಲ್ಲದ ಸಭಾಸದರ ಬಹುಮತವಾಯಿತು. ೪. ಅಲ್ಪ ಸಂಖ್ಯಾಕರಿಗಾಗಿ ಸ್ಥಳಗಳು ಕಾದಿಡಲ್ಪಟ್ಟವು. ೫. ಠರಾವುಗಳನ್ನು ಪಾಸು ಮಾಡಿಕೊಳ್ಳುವ, ಅಂದಾಜ ಪತ್ರಿಕೆಯನ್ನು ಚರ್ಚಿಸುವ ಮುಂತಾದ ಅಧಿಕಾರ ಗಳು ಸಭಾಸದರಿಗೆ ದೊರೆತವು.

೨. ಲಾರ್ಡ ಹಾರ್ಡಿಂಜ:— ಕ್ರಿ. ಶ. ೧೯೧೦-೧೯೧೬ ಮಿಂಟೋನ ತರುವಾಯ **ಲಾರ್ಡ ಹಾರ್ಡಿಂಜನು** ವ್ಹಾಯಿಸರಾಯನಾದನು. ಇವನು ಒಳ್ಳೆಯ ಶಾಂತನೂ ಉದಾರನೂ ಆಗಿದ್ದನು. ಇವನ ಕಾಲದಲ್ಲಿ ಒದಗಿದ ಸಂಗತಿಗಳು — **೧. ಬಾದಶಹರ** ಆಗಮನ— ಕ್ರಿ. ಶ. **೧೯೧೧. ೬ನೆಯ**



ಸಾರ್ವಭೌಮ

ಪಂಚನು ಜಾರ್ಜ ಬಾದಷಾಹರು

ಎಡ್ವರ್ಡ ಬಾದಶಹರು ಕ್ರಿ. ಶ. ೧೯೧೦ರಲ್ಲಿ ತೀರಿಕೊಳ್ಳಲು **೫ನೆಯ ಜಾರ್ಜ** ರವರು ಇಂಗ್ಲಂಡದ ಸಿಂಹಾಸನವನ್ನೇರಿದರು. ಮತ್ತು ಮರುವರುಷ **ಮೇರಿ ಮಹಾರಾಣಿ**ಯವರೊಡನೆ ಈ ದೇಶಕ್ಕೆ ಬಂದರು. ಇವರ ರಾಜ್ಯಾರೋಹಣ

ಸಮಾರಂಭವು ಕ್ರಿ. ಶ. ೧೯೧೧ರ **ಡಿಸೆಂಬರ ೧೨ನೆಯ ತಾರೀಖಿನ ದಿನ** ದಿಲ್ಲಿಯಲ್ಲಿ ಒಳ್ಳೆಯ ಸಡಗರದಿಂದ ಆಯಿತು. ಆ ಸಮಯದಲ್ಲಿ ಎಲ್ಲ ಸಂಸ್ಥಾನಿಕರೂ ಪ್ರಾಂತಪ್ರಾಂತಗಳ ಪ್ರತಿಷ್ಠಿತ ಸದ್ಗೃಹಸ್ಥರೂ ನಿಮಂತ್ರಿತರಾಗಿದ್ದರು. ಆಗ ಬಾದಷಾಹರು- ೧ **ದಿಲ್ಲಿಯು** ಹಿಂದುಸ್ಥಾನದ ರಾಜಧಾನಿಯಾಯಿತು. ೨ ಬಂಗಾಲ ಪ್ರಾಂತವು ಮೊದಲಿನಂತೆ ಒಂದು ಮಾಡಲ್ಪಟ್ಟಿತು. ೩. ಶಿಕ್ಷಣ ಕಾರ್ಯಕ್ಕಾಗಿ ೫೦ ಲಕ್ಷ ರೂ. ಗಳು ವೆಚ್ಚ ಮಾಡಲ್ಪಡುವವು ೪. ಹಿಂದೀ ವೀರರಿಗೂ **ವಿಕ್ಟೋರಿಯಾ ಕ್ರಾಸ್** ಎಂಬ ಬಹುಮಾನದ ಪದಕವು ಕೊಡಲ್ಪಡುವದು. ಎಂದು ಜಾಹೀರಪಡಿಸಿ ಜನರ ಮನಸ್ಸನ್ನು ಸಂತೈಸಿದರು.

೨. ಹಾರ್ಡಿಂಜನ ಸಮಾಧಾನವೃತ್ತಿ— ಕ್ರಿ ಶ ೧೯೧೨ರಲ್ಲಿ ಹಾರ್ಡಿಂಜನು ಹೊಸ ದಿಲ್ಲಿಯ ಪ್ರವೇಶ ಸಮಾರಂಭಕ್ಕಾಗಿ ಆನೆಯನ್ನೇರಿ ಹೊರಟಿರಲು ತಲೆತಿರುಕನೊಬ್ಬನು ಅವನ ಮೇಲೆ ಬಾಂಬು ಒಗೆದನು. ಆದರೆ ಸುದೈವದಿಂದ ಹಾರ್ಡಿಂಜನ ಜೀವಕ್ಕೆ ಅಪಾಯವಾಗಲಿಲ್ಲ. ಈ ಪ್ರಸಂಗದಲ್ಲಿ ಹಾರ್ಡಿಂಜನು ತಳೆದ ಸಮಾಧಾನವೃತ್ತಿಯು ವರ್ಣಿಸುವಂಥದಿದ್ದಿತು. ಇಷ್ಟೇ ಅಲ್ಲ; ಅವನು ತನ್ನ ಆಳಿಕೆಯ ಕೊನೆಯ ವರೆಗೂ ಪ್ರಜೆಗಳೊಡನೆ ಸಹಾನುಭೂತಿಯಿಂದಲೇ ನಡೆದನು **೩. ಶಿಕ್ಷಣದ ಪ್ರಗತಿ**— ಬಾದಷಾಹರ ಇಚ್ಛೆಯಂತೆ ೫೦ ಲಕ್ಷ ರೂಪಾಯಿಗಳು ಪ್ರಾಥಮಿಕ ಶಿಕ್ಷಣದ ಪ್ರಸಾರಕ್ಕಾಗಿ ವೆಚ್ಚಮಾಡಲ್ಪಡಹತ್ತಿದವು **ಢಾಕಾ, ಪಾಟಣಾ** ಪಟ್ಟಣಗಳಲ್ಲಿ ಹೊಸ ವಿಶ್ವವಿದ್ಯಾಲಯಗಳು ಸ್ಥಾಪಿಸಲ್ಪಟ್ಟವು. ಪಂಡಿತ **ಮಾಲವೀಯ** ಇವರು ಸ್ಥಾಪಿಸಿದ **ಬನಾರಸ ಹಿಂದು ವಿಶ್ವವಿದ್ಯಾಲಯಕ್ಕೆ** ಸರಕಾರದ ಮಾನ್ಯತೆಯು ದೊರೆಯಿತು. **೪. ದಕ್ಷಿಣ ಆಫ್ರಿಕದಲ್ಲಿಯ ನಿಶಸ್ತ್ರ ಪ್ರತಿಕಾರ**— ನಿಯಮಿತ ಅವಧಿಯ ಕೂಲಿಕಾರರಾಗಿಯೂ ವ್ಯಾಪಾರ-ಉದ್ಯೋಗಗಳ ನೆವದಿಂದಲೂ ಎಷ್ಟೋ ಹಿಂದೀ ಜನರು ದಕ್ಷಿಣ ಆಫ್ರಿಕಕ್ಕೆ ಹೋಗಿ ಅಲ್ಲಿಯೆ ನೆಲೆಗೊಂಡಿದ್ದರು. ಆದರೆ ಅಲ್ಲಿ ವಸಹಾತು ಮಾಡಿದ್ದ ಯುರೋಪಿಯನರು ಹಿಂದೀ ಜನರಿಗೆ ನಾಗರಿಕತೆಯ ಹಕ್ಕುಗಳನ್ನು ಕೊಡುತ್ತಿರಲಿಲ್ಲ. ಆಗ **ಜೋಹಾನ್ಸಬರ್ಗದಲ್ಲಿ ಬ್ಯಾರಿಸ್ಟರ**ರಾಗಿದ್ದ **ಗಾಂಧಿ** (ಈಗಿನ ಮಹಾತ್ಮಾ ಗಾಂಧಿ) ಯವರು ನಾಗರಿಕತೆಯ ಹಕ್ಕುಗಳನ್ನು ಪಡೆದು ಕೊಳ್ಳುವದಕ್ಕಾಗಿ ನಿಶಸ್ತ್ರ ಪ್ರತಿಕಾರ ಮಾಡಹತ್ತಿದರು. ಅವರ ಪ್ರಯತ್ನದಿಂದ ಅಲ್ಲಿಯ ಹಿಂದೀ ಜನರಿಗೆ ಕೆಲಮಟ್ಟಿಗೆ ಅಧಿಕಾರಗಳು ದೊರೆತವು.

೫. ಯುರೋಪದ ಮಹಾ ಯುದ್ಧ— ಕ್ರಿ ಶ. ೧೯೧೪ರ ಜೂನ ತಿಂಗಳಿನ ದಿನ **ಸಿರಾಜಿವೊ** ಎಂಬಲ್ಲಿ ಒಬ್ಬ ಸರ್ವಿಯನನ್ನಿಂದ **ಆಸ್ಟ್ರಿಯದ** ಅರಸುಮಗನ ಕೊಲೆಯಾಯಿತು ಸರ್ವಿಯನ್ ಸರಕಾರದ ಬೆಂಬಲದಿಂದಲೆ ಈ ಕೊಲೆಯಾಯಿತೆಂದು ತಿಳಿದು ಆಸ್ಟ್ರಿಯದವರು **ಸರ್ವಿಯದೊಡನೆ** ಯುದ್ಧವನ್ನು ಸಾರಿದರು. ಕೂಡಲೆ ಜರ್ಮನರು ಆಸ್ಟ್ರಿಯದವರನ್ನೂ ರಶಿಯನರು ಸರ್ವಿಯದವರನ್ನೂ ಕೂಡಿಸಿಕೊಂಡರು **ರಶಿಯಾ, ಫ್ರಾನ್ಸ, ಇಂಗ್ಲಂಡ** ಈ ದೇಶಗಳ ನಡುವೆ ಸ್ನೇಹದ ಒಡಂಬಡಿಕೆಯಾಗಿದ್ದುದರಿಂದ ಫ್ರಾನ್ಸ-ಇಂಗ್ಲಂಡಗಳು ರಶಿಯದ ಪಕ್ಷವನ್ನು ವಹಿಸಿದವು. ಇತ್ತ **ಅಮೇರಿಕಾ, ಇತಲಿ** ಈ ದೇಶಗಳು ಕೂಡ ಇಂಗ್ಲಂಡ-ಫ್ರಾನ್ಸಗಳ ಬೆನ್ನು ಕಟ್ಟಿದವು ಅತ್ತ **ಬಲ್ಗೇರಿಯಾ ತುರ್ಕಸ್ಥಾನ**ಗಳು ಜರ್ಮನರ ಕಡೆಗೆ ಆದವು

ಇಂಗ್ಲಂಡವು ಈ ಯುದ್ಧದಲ್ಲಿ ತೊಡಗಿದ್ದುದರಿಂದ ಸಾಮ್ರಾಜ್ಯದೊಳಗಿನ **ಕಾನಡಾ, ಆಸ್ಟ್ರೇಲಿಯಾ** ಮೊದಲಾದ ದೇಶಗಳಂತೆ **ಹಿಂದುಸ್ಥಾನವೂ** ಅದರ ನೆರವಿಗೆ ಸಜ್ಜಾಯಿತು. ಈ ಮಹಾ ಯುದ್ಧಕ್ಕಾಗಿ ಹಿಂದುಸ್ಥಾನದಿಂದ ಲಕ್ಷಗಟ್ಟಲೆ ಸೈನಿಕರೂ ಕೋಟಿಗಟ್ಟಲೆ ರೂಪಾಯಿಗಳೂ ಪೂರೈಸಲ್ಪಟ್ಟವು ಈ ನೆರವಿನಿಂದಲೆ ಫ್ರಾನ್ಸದಲ್ಲಿ **ವಾರ್ನೆ** ನದಿಯ ಬಳಿಯ ಯುದ್ಧದಲ್ಲಿಯೂ **ಮೆಸೊಪೋಟೋಮಿಯಾ, ಪೂರ್ವ ಆಫ್ರಿಕಾ** ಮುಂತಾದ ಕಡೆಗೆಗಳಲ್ಲಿಯೂ ಇಂಗ್ಲಿಷರಿಗೆ ಜಯದೊರೆಯಿತು. **ದರಬಾನಸಿಂಗ, ಖುದಾದಾದಖಾನ, ಗೋವಿಂದ ಸಿಂಗ** ಮೊದಲಾದ ಹಿಂದೀ ವೀರರು ತಾವು ತೋರ್ಪಡಿಸಿದ ಪರಾಕ್ರಮಕ್ಕಾಗಿ **ವ್ಹಿಕ್ಟೋರಿಯಾ ಕ್ರಾಸ್** ಎಂಬ ಪದಕಗಳನ್ನು ಪಡೆದರು.

ಯುದ್ಧವು ಇನ್ನೂ ಮುಗಿದಿರಲಿಲ್ಲ ಕ್ರಿ ಶ. **೧೯೧೬**ರಲ್ಲಿ ರಿಪನನಂತೆ ಲೋಕಪ್ರಿಯನೆನಿಸಿದ್ದ ಲಾರ್ಡ ಹಾರ್ಡಿಂಜನ ಆಳಿಕೆಯ ಅವಧಿಯು ಮುಗಿಯಲು **ಲಾರ್ಡ ಚೇಮ್ಸ್ಫರ್ಡನು** ವ್ಹಾಯಿಸರಾಯನಾಗಿ ಬಂದನು.

೩. ಲಾರ್ಡ ಚೇಮ್ಸ್ಫರ್ಡ:— ಕ್ರಿ. ಶ. ೧೯೧೬--೧೯೨೧. **೧. ಹಿಂದುಸ್ಥಾನಕ್ಕೆ ಉಂಟಾದ ಮಹತ್ವ**:- ಮಹಾ ಯುದ್ಧವು ನಡೆದಿರುವಾಗಲೆ ಕ್ರಿ. ಶ. **೧೯೧೭**ರಲ್ಲಿ ಕೂಡಿದ **ಸಾಮ್ರಾಜ್ಯ ಪರಿಷತ್ತಿಗೆ** ಹಿಂದುಸ್ಥಾನದ ಪರವಾಗಿಯೂ ಪ್ರತಿನಿಧಿಗಳನ್ನು ಕರೆಯಿಸಿಕೊಳ್ಳುವದು ಅಗತ್ಯವೆನಿಸಿತು. ಆ ಮೇರೆಗೆ

ಬಿಕಾನೇರದ ಮಹಾರಾಜರೂ ನಾಮದಾರ **ಸತ್ಯೇಂದ್ರ ಪ್ರಸನ್ನ * ಸಿಂಹ** ಇವರೂ ಆ ಪರಿಷತ್ತಿಗೆ ಪ್ರತಿನಿಧಿಗಳಾಗಿ ಹೋಗಿದ್ದರು ಕ್ರಿ ಶ **೧೯೧೪**ರಲ್ಲಿ ಜರ್ಮನಿಯು ಸೋತು **ವ್ಹರ್ಸೇಲಿಸ್** ಎಂಬಲ್ಲಿ ಒಪ್ಪಂದ ಮಾಡಿಕೊಳ್ಳಲು ನಾಲ್ಕೈದು ವರ್ಷಗಳವರೆಗೆ ನಡೆದ ಮಹಾಯುದ್ಧವು ಶಾಂತವಾಯಿತು. ವರ್ಸೇಲಿಸದ ಒಪ್ಪಂದದ ಕರಾರುಗಳಿಗೂ ಮೇಲ್ಕಾಣಿಸಿದ ಹಿಂದೀ ಪ್ರತಿನಿಧಿಗಳ ಸಹಿಯಾಯಿತು. ಮತ್ತು ಮುಂದೆ, ಜಗತ್ತಿನಲ್ಲಿ ಶಾಂತತೆಯನ್ನು ನೆಲೆಗೊಳಿಸಲು ಉಂಟಾದ **ರಾಷ್ಟ್ರಸಂಘ**ದಲ್ಲಿಯೂ ಹಿಂದೀ ಪ್ರತಿನಿಧಿಗಳ ಸೇರ್ಪಡೆಯಾಯಿತು. ಮಹಾಯುದ್ಧದ ಪ್ರಸಂಗದಲ್ಲಿ ಸಾಮ್ರಾಜ್ಯ ಸರಕಾರಕ್ಕೆ ಹಿಂದುಸ್ಥಾನವು ಮನ ಮುಟ್ಟಿ ನೆರವಾದುದರಿಂದ **ಹೆಚ್ಚಿನ** ಯೋಗ್ಯತೆಯನ್ನು ಪಡೆಯಿತು. **೨. ಕ್ರಿ. ಶ. ೧೯೧೭ರ ಜಾಹೀರನಾಮೆ**— ಮಹಾಯುದ್ಧವು ಆರಂಭವಾದಂದಿನಿಂದ ಹಿಂದುಸ್ಥಾನದಲ್ಲಿ ಜಾಗ್ರತೆಯುಂಟಾಯಿತು. **ಸ್ವಯಂನಿರ್ಣಯದ** ಅಧಿಕಾರವು ಎಲ್ಲ ರಾಷ್ಟ್ರಗಳಿಗೂ ಇರುವದೆಂಬ ತತ್ವವು ಸರ್ವಸಮ್ಮತವಾದುದರಿಂದ ಈ ದೇಶದ ರಾಜಕೀಯ ಚಟುವಟಿಕೆಯು ಮತ್ತೆ ತಲೆಯೆತ್ತಿತು. ಕ್ರಿ ಶ. **೧೯೧೬**ರಲ್ಲಿ **ಪ್ರಾಗತಿಕ** ಪಕ್ಷವು ಹುಮ್ಮೆಟ್ಟಿ, ರಾಷ್ಟ್ರಸಭೆಯ ಸೂತ್ರಗಳು **ರಾಷ್ಟ್ರೀಯ** ಪಕ್ಷದ ಕೈಸೇರಿದವು. **ಲೋಕಮಾನ್ಯ ಬಾಳ ಗಂಗಾಧರ ಟಿಳಕ**ರವರು ಈ ರಾಷ್ಟ್ರೀಯ ಪಕ್ಷದ ಮುಖಂಡರಾಗಿದ್ದರು. ಇಷ್ಟು ಹೊತ್ತಿಗೆ ಮುಸಲ್ಮಾನರಲ್ಲಿಯು ಜಾಗ್ರತೆಯುಂಟಾಗಿದ್ದಿತು. ಅವರು ತಮ್ಮ **ಮುಸ್ಲೀಮ ಲೀಗಿ**ನಲ್ಲಿ ರಾಷ್ಟ್ರಸಭೆಯಂತೆಯೆ ಶರಾವುಗಳನ್ನು ಪಾಸುಮಾಡಿದರು. ರಾಷ್ಟ್ರದ ಈ ಬಗೆಯ ಒಕ್ಕಟ್ಟಿನ ಬೇಡಿಕೆಗಳಿಗೆ ಇಂಗ್ಲಿಷ ಜನಾಂಗದ ಬೆಂಬಲವೂ ದೊರೆಯಿತು. ಇವೆಲ್ಲ ಸಂಗತಿಗಳ ಪರಿಣಾಮವಾಗಿ, ಆಗಿನ ಭಾರತಮಂತ್ರಿಯಾದ **ಮಾಂಟೆಗ್ಯೂನು** ಕ್ರಿ. ಶ. **೧೯೧೭**ರಲ್ಲಿ "ಹಿಂದುಸ್ಥಾನದಲ್ಲಿ ಕ್ರಮಕ್ರಮವಾಗಿ ಜವಾಬದಾರಿಯುಳ್ಳ ಸ್ವರಾಜ್ಯವು ಸ್ಥಾಪಿಸಲ್ಪಡುವದು" ಎಂದು ಜಾಹೀರ ಮಾಡಿದನು. **೩. ಮಾಂಟೆಗ್ಯೂ-ಚೇಮ್ಸ್‌ಫರ್ಡ (ಮಾಂಟಫರ್ಡ) ಅಕ್ಟ್**— ಕ್ರಿ ಶ. **೧೯೧೯.** ಈ

---

* ನಾಮದಾರ ಸಿಂಹ ಇವರಿಗೆ ಕ್ರಿ. ಶ ೧೯೧೯ರಲ್ಲಿ ಲಾರ್ಡ ಎಂಬ ಪದವಿಯೂ ಸಹಾಯಕ ಭಾರತ ಮಂತ್ರಿಪದವೂ ದೊರೆತವು. ಆಲ್ಲದೆ, ಕ್ರಿ. ಶ. ೧೯೨೧-೨೨ರಲ್ಲಿ ಇವರ್ಯ ಒರಿಸಾ ಪ್ರಾಂತದ ಗವ್ಹರ್ನರರಾದರು. ಈ ಗೌರವದ ಅಧಿಕಾರವನ್ನು ಪಡೆದ ಮೊದಲನೆಯ ಹಿಂದೀ ಗೃಹಸ್ಥರು ಇವರೇ.

ಜಾಹೀರನಾಮೆಯು ಪ್ರಸಿದ್ಧವಾದ ಮರುವರುಷ ಎಂದರೆ, ಕ್ರಿ. ಶ. **೧೯೧೭**ರಲ್ಲಿ ಮಾಂಟೆಗ್ಯೂನು ಈ ದೇಶಕ್ಕೆ ಬಂದು, ವ್ಹಾಯಿಸರಾಯನಾದ ಚೇಮ್ಸ್‌ಫರ್ಡ್ ನೊಡನೆ ಮುಖ್ಯ ಮುಖ್ಯ ಭಾಗಗಳಲ್ಲಿ ತಿರುಗಾಡಿ, ಪ್ರಮುಖರಾದ ಹಿಂದೀಯರ ವಿಚಾರಗಳನ್ನು ಅರಿತುಕೊಂಡನು. ಮತ್ತು ಚೇಮ್ಸ್‌ಫರ್ಡ್‌ನ ನೆರವಿನಿಂದ ಸುಧಾರಣೆಗಳ ಮಸೂದೆಯೊಂದನ್ನು ಬರೆದು ಅದನ್ನು ಪಾರ್ಲಮೆಂಟಿನ




ಲೋಕಮಾನ್ಯ ಟಿಳಕ

ಮುಂದಿಟ್ಟು ಪಾಸುಮಾಡಿಸಿಕೊಂಡನು. ಈ ಕಾಯದೆಗೆ **ಮಾಂಟೆಫರ್ಡ್ ಆಕ್ಟ್** ಎಂಬ ಹೆಸರುಂಟಾಯಿತು ಈ ಕಾಯಿದೆಯಿಂದ, ವ್ಹಾಯಿಸರಾಯನ (ವರಿಷ್ಠ) ಕಾರ್ಯಕಾರೀ ಮಂಡಲದಲ್ಲಿಯ ಮೂರು ಸ್ಥಳಗಳು ಹಿಂದೀ ಸಭಾಸದರಿಗೆ ಸಿಕ್ಕವು. ವ್ಹಾಯಿಸರಾಯನ ನೆರವಿಗೆ ಲೋಕ ಪ್ರತಿನಿಧಿಗಳ ಬಹುಮತವಿರುವ **ವರಿಷ್ಠ ಕಾಯದೆ ಮಂಡಲ** (ಲೆಜಿಸ್ಲೇಟಿವ್ ಅಸೆಂಬ್ಲಿ) ಮತ್ತು **ಕೌನ್ಸಿಲ್ ಆಫ್**

ಸ್ಟೇಟ್ ಎಂಬೆರಡು ಸಭೆಗಳುಂಟಾದವು. ಕಾಯದೆ ಮಂಡಲದಲ್ಲಿ ಪಾಸಾದ ಠರಾವುಗಳು **ಕೌನ್ಸಿಲ್ ಆಫ್ ಸ್ಟೇಟ**ದಲ್ಲಿಯೂ ಪಾಸಾಗಬೇಕಾಯಿತು. ಪರ ರಾಷ್ಟ್ರ ಮತ್ತು ಸಂಸ್ಥಾನಿಕರ ಸಂಬಂಧದ ವ್ಯವಹಾರ, ಸೈನ್ಯ ಮತ್ತು ಹಡಗು ಪಡೆ, ಉಗೆಬಂಡಿ, ಪೋಷ್ಟ ಮತ್ತು ತಂತಿ, ಅಫು ಮತ್ತು ಕರ, ಟಂಕಸಾಲೆ, ಸಾಲ ಈ ಖಾತೆಗಳು ವರಿಷ್ಠ ಸರಕಾರದ ಕಡೆಗೂ, ಉಳಿದ ಖಾತೆಗಳು ಪ್ರಾಂತಿಕ ಸರಕಾರದ ಕಡೆಗೂ ಕೊಡಲ್ಪಟ್ಟವು ಪ್ರಾಂತಿಕ ಸರಕಾರದ ಖಾತೆಗಳಲ್ಲಿ **ಕಾದಿಟ್ಟ ಖಾತೆ**ಗಳು **ಒಪ್ಪಿಸಲ್ಪಟ್ಟ ಖಾತೆ**ಗಳು ಎಂಬ ಭಾಗಗಳು. ಪ್ರಾಂತಿಕ ಕಾರ್ಯಕಾರೀ ಮಂಡಲದ **ಸರಕಾರೀ ಸಭಾಸದರ** ಕಡೆಗೆ ಕಾದಿಟ್ಟ (ಕಂದಾಯ, ಲೆಕ್ಕಪತ್ರ, ನ್ಯಾಯ, ಪೋಲೀಸ ಸೆರೆಮನೆ) ಈ ಖಾತೆಗಳೂ, ಉಳಿದ **ಲೋಕನಿಯುಕ್ತ ಸಭಾಸದರ** ಕಡೆಗೆ ಒಪ್ಪಿಸಲ್ಪಟ್ಟ (ಶಿಕ್ಷಣ, ಆರೋಗ್ಯ, ಒಕ್ಕಲತನ, ವ್ಯಾಪಾರೋದ್ಯೋಗ, ಸ್ಥಾನಿಕ ಸ್ವರಾಜ್ಯ) ಈ ಖಾತೆಗಳೂ ಕೊಡಲ್ಪಟ್ಟವು. ಕಾರ್ಯಕಾರೀ ಮಂಡಲದ ಲೋಕನಿಯುಕ್ತ ಸಭಾಸದರನ್ನು ಎಂದರೆ **ಮಂತ್ರಿ**ಗಳನ್ನು ಗವ್ಹರ್ನರನು ತನ್ನ ಪ್ರಾಂತಿಕ ಕಾಯದೆ ಮಂಡಲದಲ್ಲಿಯ ಬಹುಮತವಿರುವ ಪಕ್ಷದಿಂದ ಆರಿಸಬೇಕಾಯಿತು ಮತದಾರರ ಸಂಖ್ಯೆಯು ಹೆಚ್ಚಾಯಿತು. ಅಪ್ರತ್ಯಕ್ಷ ಆರಿಸುವಿಕೆಯು ನಿಂತುಹೋಗಿ ಮತದಾರರು ಉಮೇದವಾರರಿಗೆ ಪ್ರತ್ಯಕ್ಷ ಮತಕೊಡುವ ಪದ್ಧತಿಯು ಆರಂಭವಾಯಿತು. ಪ್ರಸಂಗ ವಿಶೇಷವಲ್ಲಿ **ಗವ್ಹರ್ನರ ಜನರಲ**ನು ಮತ್ತು **ಗವ್ಹರ್ನರ**ರು ತಮ್ಮ ತಮ್ಮ ಕಾಯದೆ ಮಂಡಲಗಳಲ್ಲಿ ಪಾಸಾದ ಕಾಯದೆಗಳನ್ನು ನಾಪಾಸು ಮಾಡುವ, ಮತ್ತು ನಾಪಾಸಾದ ಠರಾವುಗಳನ್ನು ಪಾಸುಮಾಡುವ ವಿಶೇಷ ಅಧಿಕಾರವನ್ನು ಪಡೆದರು. **೪. ಇನ್‌ಫ್ಲೂಎಂಝಾ ರೋಗದ ಹಾವಳಿ**—ಮಹಾಯುದ್ಧವು ಮುಗಿಯುತ್ತಿರಲು ಜಗತ್ತಿನಲ್ಲೆಲ್ಲ ಇನ್‌ಫ್ಲೂಎಂಝಾ ಎಂಬ ಬೇನೆಯು ಹಬ್ಬಿತು. ಆಗ ಕ್ರಿ ಶ. ೧೯೧೯-೧೯೨೦ ವರೆಗೆ ಈ ಬೇನೆಯಿಂದ ಹಿಂದುಸ್ಥಾನದಲ್ಲಿ ಇರವತ್ತು ಲಕ್ಷ ಜನರು ಸತ್ತರು. **೫. ಅಸಹಕಾರ ಚಟುವಟಿಕೆಯ ಆರಂಭ**— ಮಾಂಟೆಗ್ಯೂ-ಚೇಮ್ಸ್‌ಫರ್ಡ ಸುಧಾರಣೆಗಳಿಂದ ಜನರ ಸಮಾಧಾನವಾಗಲಿಲ್ಲ. ಆಗ **ಲೋಕಪಕ್ಷದ** ಮುಂದಾಳುಗಳಾದ **ಮಹಾತ್ಮಾ ಗಾಂಧಿ**ಯವರು **ಸತ್ಯಾಗ್ರಹ** ಎಂಬ ಚಟುವಟಿಕೆಯನ್ನು ಆರಂಭಿಸಿದರು. ಮಹಾಯುದ್ಧದ ಕೊನೆಗೆ ಆದ ಒಪ್ಪಂದ

ದಿಂದ ತುರ್ಕಸ್ಥಾನದ ಸುಲ್ತಾನನ ಅಧಿಕಾರಕ್ಕೆ ಕುಂದುಬರುವ ಲಕ್ಷಣವು ತೋರಿತು. ಆ ಸುಲತಾನನು ಧಾರ್ಮಿಕ ದೃಷ್ಟಿಯಿಂದ **ಖಲೀಫ** ಎಂದರೆ **ಧರ್ಮಾಧಿಕಾರಿ**ಯಾಗಿದ್ದನು. ಆದುದರಿಂದ ಅವನ ಯೋಗ್ಯತೆಗೆ ಕುಂದು ಬರಬಾರದೆಂದು ಹಿಂದೀ ಮುಸಲ್ಮಾನರು **ಖಿಲಾಫತ್** ಎಂಬ ಚಟುವಟಿಕೆಯನ್ನು ಮಾಡಹತ್ತಿದರು. ಮುಂದೆ ಸ್ರ. ಗಾಂಧಿಯವರು ಈ ಖಿಲಾಫತದ



ಮಹಾತ್ಮಾ ಗಾಂಧಿ

ಚಟುವಟಿಕೆಗೆ ಸಹಾಯಕರಾದುದರಿಂದ **ಮೌ. ಮಹಮ್ಮದ ಅಲಿ** ಮೊದಲಾದ ಮುಸಲ್ಮಾನ ಮುಖಂಡರು ಹಿಂದುಗಳೊಡನೆ ಒಂದಾಗಿ ಅಸಹಕಾರ ಚಟುವಟಿಕೆಯನ್ನು ಕೈಕೊಂಡರು. ಇದೇ ಸಮಯಕ್ಕೆ ದೇಶದಲ್ಲಿ ಅರಾಜಕರ ಸುಳಿದಾಟವೂ ತಲೆದೋರಿತು. ಆಗ ಸರಕಾರದವರು ಶಾಂತತೆಯನ್ನು ಕಾದುಕೊಳ್ಳುವದಕ್ಕಾಗಿ **ರೌಲೆಟ್ ಆಕ್ಟ** ಎಂಬ ಕಾಯದೆಯನ್ನು ಪಾಸು

ಮಾಡಿಕೊಂಡರು. ಈ ಕಾಯದೆಯ ನಿಷೇಧಕ್ಕಾಗಿ ಅಮೃತಸರದ **ಜಾಲಿಯನ-ವಾಲಾಬಾಗ** ಎಂಬಲ್ಲಿ ಜಾಹೀರ ಸಭೆಯೊಂದು ಕೂಡಿರಲು, ಅದನ್ನು ತಡೆಯುವದಕ್ಕಾಗಿ ಜನರಲ್ **ಡಾಯರ** ಎಂಬ ದಂಡಿನ ಅಧಿಕಾರಿಯು ಅವರ ಮೇಲೆ ಗುಂಡುಹಾರಿಸಿದನು. ಅದರಿಂದ ಬಹು ಜನರು ಜೀವಕ್ಕೆ ಎರವಾದರು. ಈ ಕೃತ್ಯದ ಮೂಲಕ ದೇಶದಲ್ಲಿ ತೀವ್ರವಾದ ಅಸಂತೋಷವು ಉಂಟಾಯಿತು.



ಮೌ. ಮಹಮ್ಮದ ಅಲಿ

೫. ಉಳಿದ ಕೆಲಸಗಳು— ಈ ಕಾಲದಲ್ಲಿ ಸೈನ್ಯದ ಹೆಚ್ಚಿನ ಅಧಿಕಾರದ ಸ್ಥಳಗಳು ಹಿಂದೀಯರಿಗೆ ಸಿಗಹತ್ತಿದವು. ಸೆರೆಮನೆಗಳ ಸುಧಾರಣೆಯಾಯಿತಲ್ಲದೆ ಕರಿನೀರಿನ ಶಿಕ್ಷೆಹೊಂದಿದವರನ್ನು **ಅಂದಮಾನಕ್ಕೆ** ಕಳುಹುವುದು ಕಟ್ಟಾಯಿತು. ದೇಶಿಯ ಸಂಸ್ಥಾನಿಕರ ಹಿತ ಸಂಬಂಧವನ್ನು ಕಾದುಕೊಳ್ಳುವದಕ್ಕೋಸ್ಕರ **ನರೇಂದ್ರ ಮಂಡಲ** ಎಂಬ ಸಂಸ್ಥೆಯು ಸ್ಥಾಪಿಸಲ್ಪಟ್ಟಿತು. ದಕ್ಷಿಣ ಮತ್ತು ಪೂರ್ವ ಆಫ್ರಿಕೆಗಳಲ್ಲಿಯ ಹಿಂದೀಯರ ಹಕ್ಕುಗಳ ಸಂರಕ್ಷಣೆಯ ಪ್ರಯತ್ನವಾಯಿತು. ಕ್ರಿ. ಶ ೧೯೩೧ರ ಮಾರ್ಚ ತಿಂಗಳಲ್ಲಿ ಜೇಮ್ಸಘರ್ಡನು ಹೋಗಿ, **ಲಾರ್ಡ ರೀಡಿಂಗನು** ವ್ಹಾಯಿಸರಾಯನಾಗಿ ಬಂದನು.

೨೫ನೆಯ ಪಾಠ

ಲಾರ್ಡ ರೀಡಿಂಗ. (ಕ್ರಿ. ಶ. ೧೯೨೧–೧೯೨೬)


ಲಾರ್ಡ ಆಯುರ್ವಿನ್ (ಕ್ರಿ. ಶ. ೧೯೨೬–೧೯೩೧)

ಲಾರ್ಡ ವಿಲಿಂಗ್ಡನ್. (ಕ್ರಿ. ಶ. ೧೯೩೧–೧೯೩೬)

೧. ಲಾರ್ಡ ರೀಡಿಂಗ:— ಕ್ರಿ. ಶ. **೧೯೨೧—೧೯೨೬.** ಇವನು ಇಂಗ್ಲಂಡದ ಮುಖ್ಯ ನ್ಯಾಯಾಧೀಶನೂ ಮಂತ್ರಿಮಂಡಲದ ಒಬ್ಬ ಮಂತ್ರಿಯೂ

ಅಮೇರಿಕೆಯಲ್ಲಿಯ ಇಂಗ್ಲಂಡದ ವಕೀಲನೂ ಆಗಿ ಬಹಳ ಅನುಭವಿಕ ನಾಗಿದ್ದನು. **ಇವನ ಕಾಲದಲ್ಲಿ ಸಂಭವಿಸಿದ ಸಂಗತಿಗಳು— ೧. ಹೊಸ ಕೌನ್ಸಿಲುಗಳ ಆರಂಭ**— ಕ್ರಿ ಶ ೧೯೧೧ ಮಾಂಟಫರ್ಡ ಸುಧಾರಣೆ-ಗಳಿಂದುಂಟಾವ ಹೊಸ ಕೌನ್ಸಿಲುಗಳನ್ನು ತೆರೆಯುವ ಕೆಲಸವು **ಡ್ಯೂಕ್ ಆಫ್ ಕನಾಟ್** ಅವರಿಂದ ಜರುಗಿತು. **೨. ಪ್ರಿನ್ಸ ಆಫ್ ವೇಲ್ಸರವರ ಆಗಮನ**— ಇದೇ ವರ್ಷದ ಕೊನೆಗೆ ಬಾದಶಹರ ಹಿರಿಯ ಮಕ್ಕಳಾದ **ಎಡ್ವರ್ಡ ಅಲ್ಬರ್ಟ**ರವರು ಈ ದೇಶಕ್ಕೆ ಬಂದು, ಮುಖ್ಯ ಮುಖ್ಯ ಪಟ್ಟಣ ಗಳನ್ನು ಸಂದರ್ಶಿಸಿದರು. **ಪುಣೆ** ಪಟ್ಟಣದಲ್ಲಿಯ **ಶ್ರೀ ಶಿವಾಜಿ ಸ್ಮಾರಕದ** ಆರಂಭವು ಇವರ ಕೈಯಿಂದಲೆ ಆಯಿತು. **೩. ಸಾಮ್ರಾಜ್ಯ ಪರಿಷತ್ತು**— ಬ್ರಿಟಿಷ ಸಾಮ್ರಾಜ್ಯದ ವಸಾಹತುಗಳಲ್ಲಿ ಹಿಂದೀಯರಿಗೆ ಸಮಾನತೆಯ ಹಕ್ಕುಗಳು ಇರಲಿಲ್ಲ. ಅಲ್ಲಿಯವರು, ಹಿಂದೀ ಜನರು ವಸಾಹತುಗಳನ್ನು ಬಿಟ್ಟುಹೋಗಬೇಕಾಗುವಂಥ ಕಾಯದೆಗಳನ್ನು ಮಾಡಿದ್ದರು. ಆದದರಿಂದ ಈ ಕಾಯದೆಗಳ ವಿರುದ್ಧವಾಗಿ ಸಾಮ್ರಾಜ್ಯ ಪರಿಷತ್ತಿನಲ್ಲಿ ತಕರಾರು ನಡೆ-ಯಿತು. ಪರಿಷತ್ತಿನಲ್ಲಿ ಹಿಂದೀಯರಿಗೆ ಸಮಾನತೆಯ ಹಕ್ಕುಗಳು ಇರಬೇಕೆಂಬ ಮಾತು ಸಮ್ಮತವಾಗಿ **ನಾ. ಶಾಸ್ತ್ರಿ**ಯವರು ಸಾಮೋಪಾಯದ ಪ್ರಯತ್ನ ಗಳಿಗಾಗಿ ಕಾನಡಾ, ಆಸ್ಟ್ರೇಲಿಯಾ ಈ ವಸಾಹತುಗಳಿಗೆ ಕಳುಹಲ್ಪಟ್ಟರು. **೪. ಮೋಪಲಾ ಜನರ ದಂಗೆ**— ಮಲಬಾರ ಸೀಮೆಯ **ಮೋಪಲಾ** ಎಂಬ ಮುಸಲ್ಮಾನರು ಮದಾಂಧರಾಗಿ ಅಲ್ಲಿಯ ಹಿಂದುಗಳನ್ನು ಬಲಾತ್ಕಾರದಿಂದ ಕುಲಗೆಡಿಸುತ್ತ ಕೊಳ್ಳೆ-ಕೊಲೆ-ಸುಲಿಗೆಗಳನ್ನು ಮಾಡುತ್ತ ಭಯಂಕರವಾದ ಸ್ಥಿತಿಯನ್ನುಂಟುಮಾಡಿದರು. ಆಗ ಸರಕಾರದವರು ಸೈನ್ಯವನ್ನು ಕಳುಹಿ ಅಲ್ಲಿ ಶಾಂತತೆಯನ್ನು ನೆಲೆಸಿದರು. **೫. ರಾಜಕೀಯ ಚಟುವಟಿಕೆಯ ಸ್ವರೂಪ— ಪಕ್ಷ-ಉಪಪಕ್ಷಗಳು**— ರೀಡಿಂಗನ ಆಳಿಕೆಯ ಮಧ್ಯಾವಧಿಯವರೆಗೆ ಅಸಹಕಾರ ಚಟುವಟಿಕೆಯು ಭರದಿಂದ ಸಾಗಿತ್ತು. ಹೊಸ ಕಾಯದೆ ಕೌನ್ಸಿಲುಗಳೊಡನೆ ರಾಷ್ಟ್ರೀಯ ಸಭೆಯ ಅನುಯಾಯಿಗಳು ತಮ್ಮ ಸಂಬಂಧವನ್ನಿಡಲಿಲ್ಲ. ಅವರು ಕೌನ್ಸಿಲು, ಶಾಲೆ, ಕಾಲೇಜು, ಪದವಿ ಇವುಗಳನ್ನು ತ್ಯಜಿಸಮೇಳಿ ಖಾದಿಯ ಪ್ರಸಾರ, ರಾಷ್ಟ್ರೀಯ ಶಿಕ್ಷಣ, ಅಸ್ಪೃಶ್ಯತೆಯ ನಿವಾರಣೆ ಈ ಕಾರ್ಯಗಳನ್ನು ಕೈಕೊಂಡರು. ಈ ಅಸಹಕಾರ ಚಟುವಟಿಕೆಯನ್ನು ತಡೆಯಲು ಸರಕಾರವು

ಎಷ್ಟೋ ಲೋಕನಾಯಕರನ್ನು ಸೆರೆಮನೆಗೆ ಕಳುಹಿತು. ಈ ಪ್ರಸಂಗದಲ್ಲಿ ಮ. ಗಾಂಧಿಯವರಿಗೂ ರಾಜದ್ರೋಹದ ಆರೋಪದಿಂದ ೬ ವರ್ಷದ ಶಿಕ್ಷೆಯಾಯಿತು. ಆದರೆ ಅವರ ಆರೋಗ್ಯವು ಕುಂದಿದ್ದರಿಂದ ಬೇಗ ಬಿಡುಗಡೆ ಹೊಂದಿದರು. ಕ್ರಿ. ಶ. ೧೯೩೩ರಲ್ಲಿ ತುರ್ಕಸ್ಥಾನದಲ್ಲಿ ರಾಜ್ಯಕ್ರಾಂತಿಯಾಗಿ **ಮುಸ್ತಫಾ ಕಮಾಲ ಪಾಚ್ಛಾನ** ಅಧ್ಯಕ್ಷತೆಯಲ್ಲಿ ಪ್ರಜಾಸತ್ತಾತ್ಮಕ ರಾಜ್ಯಪದ್ಧತಿಯು




ಶ್ರೀ. ವಿಠ್ಠಲಬಾಯಿ ಪಟೇಲ

ಆರಂಭವಾಯಿತು. ಅಂದಿನಿಂದ ಹಿಂದುಸ್ಥಾನದಲ್ಲಿ ನಡೆದಿದ್ದ ಖಿಲಾಫತ್ ಚಟುವಟಿಕೆಯು ಸಹಜವಾಗಿಯೆ ನಿಂತುಹೋಯಿತು. ಮತ್ತು ಈ ಚಟುವಟಿಕೆಯ ನೆವದಿಂದ ಹಿಂದು-ಮುಸಲ್ಮಾನರಲ್ಲಿ ಉಂಟಾಗಿದ್ದ ಒಕ್ಕಟ್ಟು ಕಡಿನೆಯಾಯಿತು. ಮುಂದೆ ಅಸಹಕಾರ ಚಟುವಟಿಕೆಯು ಕುಗ್ಗಿ, **ದೇ. ಚಿತ್ತರಂಜನ ದಾಸ** ಇವರ ಮುಂದಾಳುತನದಲ್ಲಿ **ಸ್ವರಾಜ್ಯ ಪಕ್ಷವು** ಸ್ಥಾಪಿತವಾಯಿತು. ಈ ಪಕ್ಷದ ಬಹುಮತದ ಬೆಂಬಲದಿಂದ **ಶ್ರೀಯುತ ವಿಠ್ಠಲಭಾಯಿ ಪಟೇಲರು ಲೇ.**

ಅಸೆಂಬ್ಲಿಯ ಅಧ್ಯಕ್ಷರಾದರು. ಈ ಸ್ವರಾಜ್ಯ ಪಕ್ಷನಲ್ಲದೆ **ಪ್ರತಿಯೋಗಿ ಸಹಕಾರ** ಎಂಬ ಒಂದು ಉಪಪಕ್ಷವು ಉಂಟಾಯಿತು ಹೀಗೆ ಪಕ್ಷೋಪಪಕ್ಷಗಳು ಹುಟ್ಟಿ ಅಸಹಕಾರ ಚಟುವಟಿಕೆಯು ಕಳೆಗುಂದಿತು **೬. ಉಳಿದ ಕೆಲಸಗಳು**— ಕ್ರಿ. ಶ ೧೯೨೫ರಲ್ಲಿ ನಿಜಾಮನು ವರ್ಹಾಡ ಪ್ರಾಂತವನ್ನು ಬಿಟ್ಟುಕೊಡಬೇಕೆಂದು ಕೇಳಲು ರೀಡಿಂಗನು ಅದು ಮರಳಿ ದೊರೆಯಲಾರದೆಂದು ತಿಳಿಸಿದನು. ಇಂಚಕೇಪ್ ಕಮಿಟಿಯು ವರ್ಷದ ವೆಚ್ಚವನ್ನು ೧೯॥ ಕೋಟಿ ರೂ. ಕಡಿಮೆ ಮಾಡಬಹುದೆಂದು ಸೂಚಿಸಿತು. ಆ ಮೇರೆಗೆ ಬೇರೆ ಬೇರೆ ಖಾತೆಗಳ ವೆಚ್ಚವು ಕಡಿಮೆ ಮಾಡಲ್ಪಟ್ಟಿತು **ಸ್ಕಂಡಸ್ಟ್ರದ ಲಷ್ಕರೀ ಕಾಲೇಜಿಗೆ** ಹಿಂದೀ ತರುಣರನ್ನು ಕಳುಹಲು ಆರಂಭವಾಯಿತು. ಮಾಂಟಫರ್ಡ ಸುಧಾರಣೆಗಳ ಗುಣಾವಗುಣಗಳನ್ನು ಚರ್ಚಿಸಿ **ಮುಡಿಮನ್** ಕಮಿಟಿಯು ತನ್ನ ಅಭಿಪ್ರಾಯವನ್ನು ವ್ಯಕ್ತಪಡಿಸಿತು ಬಳಿಕ ರೀಡಿಂಗನು ವಿಲಾಯತಿಗೆ ಹೋಗಿ ಭಾರತ ಮಂತ್ರಿಗಳೊಡನೆ ಮುಂದಿನ ಧೋರಣೆಯ ವಿಷಯವನ್ನು ಆರೈದಾಡಿ ಮರಳಿ ಬಂದನು. ಆಗ ಭಾರತ ಮಂತ್ರಿಗಳಾಗಿದ್ದ **ಬರ್ಕನ್ ಹೆಡ್** ಅವರು 'ಎಲ್ಲ ಪಕ್ಷವನರು ಒಮ್ಮನಸ್ಸಿನಿಂದ ಬೇಡಿಕೆಯನ್ನು ಸಿದ್ಧಗೊಳಿಸಿದಲ್ಲಿ ಅದರ ವಿಚಾರಣೆಗಾಗಿ ಸರಕಾರವು ಕಮಿಶನವನ್ನು ನಿಯಮಿಸಬಹುದು;' ಎಂದು ತಿಳಿಸಿದರು. ಇದೇ ಹೊತ್ತಿಗೆ ರೀಡಿಂಗನ ಅವಧಿ ಮುಗಿದುದರಿಂದ **ಲಾರ್ಡ ಆಯರ್ವಿನ್** ಎಂಬವನು ವ್ಹಾಯಿಸರಾಯನಾದನು.

೨. ಲಾರ್ಡ ಆಯರ್ವಿನ್ :— ಕ್ರಿ. ಶ. ೧೯೨೬ — ೧೯೩೧. **೧. ಒಕ್ಕಲತನದ ಸುಧಾರಣೆ**— ಇವನು ಒಕ್ಕಲತನದ ಸುಧಾರಣೆಯ ವಿಷಯದಲ್ಲಿ ಹೆಚ್ಚಾಗಿ ಮನಸ್ಸುಹಾಕಿದನು ಮತ್ತು ಅದರ ಸುಧಾರಣೆಗಾಗಿ ಒಂದು ಕಮಿಶನವನ್ನು ಗೊತ್ತುಮಾಡಿದನು. ಕ್ರಿ. ಶ ೧೯೨೬ರಲ್ಲಿ ಮುಂಬಯಿ ಇಲಾಖೆಯ ಒಕ್ಕಲತನದ ಪ್ರದರ್ಶನವು ಪುಣೆಯಲ್ಲಿ ಆಯಿತು. **೨. ಹಿಂದೂ-ಮುಸಲ್ಮಾನರ ದಂಗೆ**— ಇದೇ ವರ್ಷ ಅಲ್ಲಲ್ಲಿ ಹಿಂದೂ-ಮುಸಲ್ಮಾನರಲ್ಲಿ ದಂಗೆಗಳಾದವು. ಹಿಂದುಗಳು **ಶುದ್ಧಿ** ಮತ್ತು **ಸಂಘಟನೆ** ಈ ಕೆಲಸಗಳನ್ನು ಆರಂಭಿಸಿದರು. ಈ ವರ್ಷದ ಕೊನೆಯಲ್ಲಿ ಹಿಂದು ಸಂಘಟನೆಯ ಮುಂದಾಳುಗಳಾದ **ಸ್ವಾಮೀ ಶ್ರದ್ಧಾನಂದರ** ಕೊಲೆಯಾಯಿತು. **೩. ಸಾಯಮನ್ ಕಮಿಶನ್**—ಕ್ರಿ. ಶ. ೧೯೨೭-೨೮. ಸುಧಾರಣಾ ಕಾಯದೆಯ ವಿಚಾರಣೆಗಾಗಿ


ವಾರ್ಲಮೆಂಟಿನವರು **ಸರ್ ಸಾಯಮನ್** ಎಂಬವನು ಅಧ್ಯಕ್ಷನಾಗಿರುವಂತೆ ಏಳು ಜನರ ಒಂದು ಕಮಿಶನವನ್ನು ಗೊತ್ತುಮಾಡಿದರು ಇದರಲ್ಲಿ ಹಿಂದೀ ಸಭಾಸದನೊಬ್ಬನೂ ಇರಲಿಲ್ಲ. ಕಮಿಶನದ ಈ ರಚನೆಯು ಸಮೋಷವೆನಿಸಿದ್ದರಿಂದ ಹಿಂದೀ ಮುಂದಾಳುಗಳು ಇದರೊಡನೆ ಸಂಬಂಧಸ್ಸಿಡಲಿಲ್ಲ. ಈ ಕಮಿಶನವು ಎರಡು ಸರತಿ ಹಿಂದುಸ್ಥಾನಕ್ಕೆ ಬಂದು ಹೋಗಿ ತನ್ನ ವರದಿಯನ್ನು ಪ್ರಸಿದ್ಧಿಪಿಸಿತು. **೪. ನೆಹರು ರಿಪೋರ್ಟ್** ೧೯೨೮. ಸಾಯಮನ್ ಕಮಿಶನ್‌ದಲ್ಲಿ ಹಿಂದೀ ಪ್ರತಿನಿಧಿಗಳನ್ನು ಸೇರಿಸಿಕೊಳ್ಳಬೇಕೆಂಬ ಬೇಡಿಕೆಯನ್ನು ಪಾರ್ಲಿಮೆಂಟಿನವರು ಅಲ್ಲಗಳೆಯಲು, ಹಿಂದುಸ್ಥಾನದಲ್ಲಿಯ ಎಲ್ಲ ರಾಜಕೀಯ ಪಕ್ಷದವರು ಒಂದಾಗಿ ತಮ್ಮ ಸಂಯುಕ್ತ ಪರಿಷತ್ತನ್ನು ಲಖನೌದಲ್ಲಿ ನೆರೆಯಿಸಿದರು ಈ ಪರಿಷತ್ತಿನಲ್ಲಿ ಹಿಂದೀ ಜನರ ಒಪ್ಪಿಗೆಯನ್ನಿನ ಬೇಡಿಕೆಗಳನ್ನು ಸಜ್ಜುಗೊಳಿಸುವದಕ್ಕಾಗಿ **ಪಂಡಿತ ಮೋತಿಲಾಲ ನೆಹರು** ಇವರ ಅಧ್ಯಕ್ಷರಾಗಿರುವ ಒಂದು ಕಮಿಟಿಯು ಗೊತ್ತುಮಾಡಲ್ಪಟ್ಟಿತು. ಈ ಕಮಿಟಿಯವರು ಹಿಂದುಸ್ಥಾನ ಕ್ಕೋಸ್ಕರ ವಸಹಾತುಗಳಲ್ಲಿಯಂತಹ ಸ್ವರಾಜ್ಯದ ಯೋಜನೆಯನ್ನು ಸಿದ್ಧಪಡಿಸಿದರು. ಈ ಯೋಜನೆಯು **ನೆಹರು ರಿಪೋರ್ಟ್** ಎಂಬ ಹೆಸರಿನಿಂದ ಪ್ರಸಿದ್ಧಿಯನ್ನು ಪಡೆಯಿತು. **೫. ಮೊದಲನೆಯ ರಾವುಂಡ್ ಟೇಬಲ್ ಕಾನ್ಫರನ್ಸ** (ದುಂಡುಮೇಜಿನ ಪರಿಷತ್ತು)— ಕ್ರಿ ಶ ೧೯೩೦. ಸಾಯಮನ್ ಕಮಿಶನದ ವರದಿಯು ಪ್ರಸಿದ್ಧವಾದ ಬಳಿಕ ಅವರ ವಿಚಾರಣೆಗಾಗಿ ಲಂಡನ ಪಟ್ಟಣದಲ್ಲಿ ದುಂಡುಮೇಜಿನ ಪರಿಷತ್ತು ನೆರೆಯಿಸಲ್ಪಟ್ಟಿತು. ಮುಖ್ಯ ಮಂತ್ರಿಗಳಾದ




ಲಾರ್ಡ್ ಆಯರ್ವಿನ್

ಇಂಗ್ಲಂಡದ ಮಿ. ರ್ಯಾಮ್ಸೆ ಮ್ಯಾಕ್‌ಡೋನಾಲ್ಡರು ಈ ಪರಿಷತ್ತಿನಲ್ಲಿ ಮಹತ್ವದ ಕಾರ್ಯ ಭಾಗವನ್ನು ವಹಿಸಿದ್ದರು. ಈ ಪರಿಷತ್ತಿನಲ್ಲಿ ಹೊಸ ರಾಜ್ಯಘಟನೆಯಲ್ಲಿ ಬ್ರಿಟಿಷ್ ಹಿಂದು ಸ್ಥಾನದ ಪ್ರತಿನಿಧಿಗಳೊಂದಿಗೆ ಸಂಸ್ಥಾನಿಕರ ಪ್ರತಿನಿಧಿಗಳೂ ಸೇರಿಕೊಳ್ಳಬೇಕೆಂದು ಗೊತ್ತಾಯಿತು. ಆದರೆ ಹಿಂದೀ ರಾಷ್ಟ್ರೀಯ ಪಕ್ಷದ ಮುಂದಾಳುಗಳು ಈ ಪರಿಷತ್ತಿಗೆ

ಮ್ಯಾಕ್‌ಡೋನಾಲ್ಡರು






ಪಂಡಿತ ಜವಾಹರಲಾಲರು

ಹೋಗಲಿಲ್ಲ. ಇಷ್ಟೇ ಅಲ್ಲ; ಲಾಹೋರದಲ್ಲಿ ಪಂ. **ಜವಾಹರಲಾಲ ನೆಹರು** ಇವರ ಅಧ್ಯಕ್ಷತೆಯಲ್ಲಿ ಅಖಿಲಭಾರತ ರಾಷ್ಟ್ರೀಯ ಸಭೆಯು ನೆರೆದು ಅದರಲ್ಲಿ 'ಪೂರ್ಣ ಸ್ವಾತಂತ್ರ್ಯವೇ ಕಾಂಗ್ರೇಸದ ಹೆಗ್ಗುರಿ' ಎಂದು ಸಾರಲಾಯಿತು. ಇಷ್ಟೇ ಅಲ್ಲ; ಇವರು ಮಹಾತ್ಮಾ ಗಾಂಧಿಯವರ ನೇತೃತ್ವದಲ್ಲಿ ಕಾಯದೇಭಂಗದ ಚಟುವಟಿಕೆಯನ್ನಾರಂಭಿಸಿದರು ಈ ಚಟುವಟಿಕೆಯು ದೇಶದ ಹಳ್ಳಿಪಳ್ಳಿಗಳಲ್ಲಿಯೂ ಹೆಚ್ಚಾಗಿ

ಹಬ್ಬಿತು. ಆಗ ಸರಕಾರದವರು ಕೆಲವು **ಆರ್ಡಿನನ್ಸು** (ಒಟ್ಟು ಹುಕುಮು) ಗಳನ್ನು ಹೊರಡಿಸಿ ದೇಶದಲ್ಲಿಯ ಅಸ್ವಸ್ಥತೆಯನ್ನು ಅಡಗಿಸುವ ಪ್ರಯತ್ನ ಮಾಡಿದರು. ಈ ಪ್ರಸಂಗದಲ್ಲಿ ಎಷ್ಟೋ ಮುಂದಾಳುಗಳೂ ಸಹಸ್ರಾವಧಿ ಜನರೂ ಸೆರೆಮನೆಗೆ ಕಳುಹಿಲ್ಪಟ್ಟರು. **೨ನೇಯ ರಾ ವು ಂ ಡ ಟೇಬಲ್ ಕಾನ್ಫರನ್ಸು**— ಕ್ರಿ. ಶ. ೧೯೩೧. ಒಂದನೆಯ ರಾವುಂಡ್ ಟೇಬಲ್ ಕಾನ್ಫರನ್ಸಿನ ಕೆಲಸವು ಮುಗಿದ ಬಳಿಕ ಅನುಕೂಲವಾದ ಪರಿಸ್ಥಿತಿಯನ್ನುಂಟು ಮಾಡುವದಕ್ಕೋಸ್ಕರ ಸರಕಾರವು **ಮ. ಗಾಂಧಿ** ಮೊದಲಾದ ಮುಂದಾಳುಗಳನ್ನು



ಡಾ. ಅನಸಾರಿ

ಸೆರೆಮನೆಯಿಂದ ಬಿಟ್ಟಿತು. ಮುಂದೆ **ಸರ್ ಸಪ್ರೂ, ಬ್ಯಾರಿಸ್ಟರ ಜಯಕರ** ಇವರ ವಿಶೇಷ ಪ್ರಯತ್ನದಿಂದ ಮಹಾತ್ಮಾ ಗಾಂಧಿಯವರು **ಲಾರ್ಡ್ ಆಯರ್ವಿನ್** ಇವರ ಕೂಡ ರಾಜಕೀಯ ಪರಿಸ್ಥಿತಿಯ ಸಂಬಂಧ ಚರ್ಚೆ ಮಾಡಲೊಪ್ಪಿ ವರ್ಕಿಂಗ ಕಮಿಟಿಯ ಮೆಂಬರರನ್ನು ದಿಲ್ಲಿಗೆ ಬರಲು ತಿಳಿಸಿದರು. **ಡಾ. ಅನಸಾರಿ** ಇವರ ಮನೆಯಲ್ಲಿ ವರ್ಕಿಂಗ ಕಮಿಟಿಯ ಸಭೆಸೇರಿ ಚರ್ಚೆ

ಯಾಗಿ ಗಾಂಧಿ-ಆಯರ್ವಿನರ ಕರಾರುಗಳಾದವು ಇದರಿಂದ ದೇಶದಲ್ಲಿ ಶಾಂತತೆಯ ವಾತಾವರಣವು ಉಂಟಾಯಿತು ಮತ್ತು ರಾಜ್ಯಘಟನೆಯ ವಿಚಾರಣೆಗಾಗಿ ಏನೆಯ ರಾವುಂಡ್ ಟೇ. ಕಾನ್ಫರನ್ಸು ನೆರೆಯುವದು ಗೊತ್ತಾಯಿತು. ಇದೇ ಸಮಯಕ್ಕೆ ಎಂದರೆ ಎಪ್ರಿಲ್ ೧೯೩೧ರಲ್ಲಿ ಲಾರ್ಡ ಆಯರ್ವಿನನ ಸ್ಥಳದಲ್ಲಿ **ಲಾರ್ಡ ವಿಲಿಂಗ್ಡನನು** ವ್ಹಾಯಿಸರಾಯನಾದನು.

ಲಾರ್ಡ ವಿಲಿಂಗ್ಡನ್:— ಕ್ರಿ. ಶ. **೧೯೩೧-೧೯೩೬.** ಇವನು ಈ ಮೊದಲು ಕ್ರಿ. ಶ. ೧೯೧೪-೧೮ರ ವರೆಗೆ ನಮ್ಮ ಮುಂಬಯಿ ಇಲಾಖೆಯ ಗವ್ಹರ್ನರನಾಗಿ ಕೆಲಸ ಮಾಡಿದ್ದರಿಂದ ಇವನು ಈ ದೇಶದ ಪರಿಸ್ಥಿತಿಯನ್ನು ಚೆನ್ನಾಗಿ ಅರಿತವನಾಗಿದ್ದನು ಅಲ್ಲದೆ ಇವನು ವಸಾಹತಿಯಲ್ಲೆಯಂತಹ **(ಡೋಮಿನಿಯನ್ ಸ್ಟೇಟ್ಸ)** ರಾಜ್ಯಪದ್ಧತಿಯು ಹಿಂದುಸ್ಥಾನದಲ್ಲಿ ಸ್ಥಾಪಿತವಾಗಬೇಕೆಂಬ ಅಭಿಪ್ರಾಯವುಳ್ಳವನಾಗಿದ್ದನು. ಗೊತ್ತಾದ ಮೇರೆಗೆ ಕ್ರಿ. ಶ. ೧೯೩೧ರ ಕೊನೆಯ ಸುಮಾರಕ್ಕೆ ಏನೆಯ ರಾ. ಟೇ. ಕಾನ್ಫರನ್ಸು ಆರಂಭವಾಯಿತು. ಮ ಗಾಂಧಿಯವರು ವಿಲಾಯತಿಗೆ ಹೋಗಿ ಈ ಕಾನ್ಫರನ್ಸಿನ ಕೆಲಸವು ಉಪಯುಕ್ತವಾಗುವದಕ್ಕೋಸ್ಕರ ಮನಃಪೂರ್ವಕವಾಗಿ ಪ್ರಯತ್ನ ಮಾಡಿದರು. ಆಗ ಅಲ್ಲಿ ರಾಜ್ಯಘಟನೆಯ ಬಹುತರ ಎಲ್ಲ ಅಂಗಗಳ ಸಾಮಾನ್ಯ ಸ್ವರೂಪವು ನಿಶ್ಚಿತವಾಯಿತು. ಆದರೆ ಹಿಂದು-ಮುಸಲ್ಮಾನ ಮೊದಲಾದ ಪಂಗಡಗಳ ಹಕ್ಕುಗಳ ಪ್ರಮಾಣವು ಮಾತ್ರ ನಿಶ್ಚಯಿಸಲ್ಪಡಲಿಲ್ಲ ಆದುದರಿಂದ ಮುಖ್ಯ ಮಂತ್ರಿಗಳು ಆ ಅಧಿಕಾರವನ್ನು ತಮ್ಮ ಕಡೆಗಿಟ್ಟುಕೊಂಡು ಕಾನ್ಫರನ್ಸನ್ನು ಮುಗಿಸಿದರು.

ಇತ್ತ ಹಿಂದುಸ್ಥಾನದಲ್ಲಿ ಲಾರ್ಡ ವಿಲಿಂಗ್ಡನನ ಆಳಿಕೆಯಲ್ಲಿಯೂ ಕೆಲವು ಆರ್ಡಿನನ್ಸುಗಳು ಹೊರಟವು. ಕಾಯದೆಭಂಗದ ಚಟುವಟಿಕೆಯನ್ನು ಅಡಗಿಸುವದಕ್ಕೋಸ್ಕರ ಮ. ಗಾಂಧಿಯವರೇ ಮೊದಲಾದ ಸಾವಿರಾರು ಜನರು ಸೆರೆಮನೆಗೆ ಕಳುಹಲ್ಪಟ್ಟರು.

ಮುಂದೆ ಕ್ರಿ. ಶ. ೧೯೩೨ರಲ್ಲಿ ಮುಖ್ಯ ಮಂತ್ರಿಗಳು ಜಾತಿನಿರ್ಣಯವನ್ನು ಪ್ರಸಿದ್ಧಿಸಿದರು. ಅದರಲ್ಲಿ ಅವರು ಅಸ್ಪೃಶ್ಯರಿಗಾಗಿಯೂ ಸ್ವತಂತ್ರ ಮತದಾರ ಸಂಘವಿರಬೇಕೆಂದು ಸೂಚಿಸಿದ್ದರು. ಆದರೆ ಅಸ್ಪೃಶ್ಯರ ಏಳ್ಗೆಗಾಗಿ ಹಗಲಿರುಳು ಯತ್ನಿಸುವ ಮಹಾತ್ಮಾ ಗಾಂಧಿಯವರಿಗೆ ಈ ಮಾತು ಸರಿಬರಲಿಲ್ಲ. ಅವರು.

ಅಸ್ಪೃಶ್ಯರ ಮುಂದಾಳುಗಳಾದ **ಡಾ. ಅಂಬೇಡಕರರನ್ನು** ಸಮಾಧಾನಗೊಳಿಸಿ ಅವರ ಒಪ್ಪಿಗೆಯೊಂದಿಗೆ "ಹಿಂದು ಮಾತ್ರರಿಗೆಲ್ಲ ಒಂದೇ ಮತದಾರ ಸಂಘವಿರಬೇಕು" ಎಂದು ತಿಳುಹಿಸಿದರು. ಅದಕ್ಕನುಸಾರವಾಗಿ ಮುಖ್ಯ ಮಂತ್ರಿಗಳು ತಮ್ಮ ನಿರ್ಣಯದಲ್ಲಿ ತಕ್ಕ ಬದಲಾವಣೆಯನ್ನು ಮಾಡಿದರು. **ಖನಿಯ ರಾವುಂಡ್ ಟೇಬಲ್ ಕಾನ್ಫರನ್ಸ್**— ಕ್ರಿ. ಶ ೧೯೩೨ರ ಕೊನೆಯ ಸುಮಾರಿಗೆ ಖನಿಯ ರಾ ಟೆ ಕಾನ್ಫರನ್ಸು ನೆರೆದು ಅದರಲ್ಲಿ ರಾಜ್ಯಘಟನೆಯ ವಿಚಾರಣೆಯ ಕೆಲಸವು ಮುಗಿಸಲ್ಪಟ್ಟಿತು ಬಳಿಕ ಕ್ರಿ. ಶ. ೧೯೩೩ರ ಮಾರ್ಚ ತಿಂಗಳಿನಲ್ಲಿ ಬ್ರಿಟಿಷ ಸರಕಾರದವರು ಹೊಸ ರಾಜ್ಯಘಟನೆಯ ಸ್ವರೂಪವನ್ನು ವ್ಯಕ್ತಪಡಿಸುವ **ಶುಭ್ರಪತ್ರಿಕೆ (ವ್ಹಾಯಿಟ್ ಪೇಪರ್)** ಯನ್ನು ಪ್ರಸಿದ್ಧಿಸಿದರು ಮತ್ತು ಈ ಪತ್ರಿಕೆಯ ಚರ್ಚೆಗಾಗಿ ಪಾರ್ಲಮೆಂಟಿನ **ಜಾಯಿಂಟ್ ಸಿಲೆಕ್ಟ ಕಮಿಟಿ**ಯನ್ನು ಗೊತ್ತುಮಾಡಿರುವರು.

ಈ ಕಮಿಟಿಯವರು ಸುಮಾರು ಒಂದುವರೆ ವರ್ಷದವರೆಗೆ ವಿಚಾರಣೆಯ ಕೆಲಸವನ್ನು ಸಾಗಿಸಿ ಒಂದು ವರದಿಯನ್ನು ಸಿದ್ಧಪಡಿಸಿದರು. ಈ ವರದಿಯು ಕ್ರಿ. ಶ. ೧೯೩೪ರ ನವ್ಹಂಬರ ೨೨ನೆಯ ತಾರೀಖಿನ ದಿನ ಇಂಗ್ಲಂಡ-ಹಿಂದು ಸ್ಥಾನಗಳಲ್ಲಿ ಒಮ್ಮೆಲೆ ಪ್ರಸಿದ್ಧವಾಯಿತು. ಬಳಿಕ ಈ ವರದಿಯ ಆಧಾರದಿಂದ ಮಂತ್ರಿಮಂಡಲದವರು ಹೊಸ ರಾಜ್ಯಘಟನೆಯ ಮಸೂದೆಯೊಂದನ್ನು ಸಿದ್ಧಪಡಿಸಿ ಪಾರ್ಲಿಮೆಂಟಿನ ಮುಂದೆ ಇರಿಸಿದರು ಪಾರ್ಲಿಮೆಂಟಿನವರು ಈ ಮಸೂದೆಯಲ್ಲಿ ಕೆಲವು ತಿದ್ದುಪಡಿಮಾಡಿ ೧೯೩೫ರ ಹಿಂದುಸ್ಥಾನದ ಕಾಯದೆಯನ್ನು ಪಾಸುಮಾಡಿದರು. ಈ ಕಾಯ್ದೆಯ ಮೇರೆಗೆ ಸುಧಾರಣೆಯು ಅಮಲಿನಲ್ಲಿ ತರಬೇಕೆಂದು ಬಾದಷಾಹರು ೧೫-೪-೧೯೩೫ನೆಯ ದಿವಸ ಜಾಹೀರ ಪಡಿಸಿದರು. ಆಗ ಈ ಕಾಯ್ದೆಯು ಅಸನುಾಧಾನಕರವಾಗಿರುವದೆಂದು ಭಾರತೀಯ ಮುಖಂಡರು ತಮ್ಮ ಅಭಿಪ್ರಾಯವನ್ನು ವ್ಯಕ್ತಗೊಳಿಸಿದರು. ಆದರೂ ಸರಕಾರದವರು ೧೯೩೭ರ ಎಪ್ರೆಲ ೧ನೆಯ ತಾರೀಖಿನಿಂದ ಈ ಹೊಸ ಕಾಯ್ದೆಯನ್ನು ಅಮಲಿನಲ್ಲಿ ತರಬೇಕೆಂದು ನಿಶ್ಚಯಿಸಿದರು.

ಈ ಕಾಲದಲ್ಲಿ ಬಿಹಾರ ಪ್ರಾಂತದಲ್ಲಿಯೂ ಕ್ವೇಟಾ ಪಟ್ಟಣದಲ್ಲಿಯೂ ಉಗ್ರಸ್ವರೂಪದ ಭೂಕಂಪವಾಗಿ ವರ್ಣಿಸಲು ಅಸಾಧ್ಯವಾದ ಅನಾಹುತಕ್ಕೆ ಜನರು ಸಿಲುಕಿದ್ದರಿಂದ ಜೀವಿತ ವಿತ್ತಗಳ ಅಪಾರವಾದ ಹಾನಿಯೊದಗಿತು.

ಸರಕಾರದವರೂ ರಾಷ್ಟ್ರಸಭೆಯವರೂ ದೊಡ್ಡ ನಿಧಿಯನ್ನು ಸಂಗ್ರಹಿಸಿ ಅನಾಥರಿಗೆ ಸಹಾಯವನ್ನು ಮಾಡಿ ಜನರಿಗೊದಗಿದ ಕಷ್ಟಗಳನ್ನು ಕೆಲವು ಮಟ್ಟಿಗೆ ಕಡಿಮೆ ಮಾಡಿದರು.

ಲಾರ್ಡ ವಿಲಿಂಗ್ಡನ್ನರ ಆಳಿಕೆಯಲ್ಲಿ ಬಾನಶಹರಾದ ಪಂಚನು ಜಾರ್ಜ ಚಕ್ರವರ್ತಿಗಳವರ ೨೫ ವರ್ಷದ ಆಳಿಕೆಯ **ರಜತ ಮಹೋತ್ಸವ**ವು ಒಳ್ಳೇ




ಲನೆಯ ಎಡ್ವರ್ಡ ಬಾದಷಾಹರು

ಸಡಗರದಿಂದ ಎಲ್ಲೆಡೆಗಳಲ್ಲಿ ನೆರವೇರಿಸಲ್ಪಟ್ಟಿತು. ಆದರೆ ಮುಂದೆ ತುಸು ದಿವಸಗಳಲ್ಲೆಯೇ ಜನೆವರಿ ೧೯೩೬ ರಲ್ಲಿ ನಮ್ಮ ಪೂಜ್ಯ ಪಂಚಮಜಾರ್ಜ ಬಾದಷಾಹರವರು ದಿವಂಗತರಾದುದರಿಂದ ಸಕಲ ಪ್ರಜೆಗಳು ದುಃಖಸಾಗರದಲ್ಲಿ ಮುಳುಗಿದರು. ದಿವಂಗತರಾವ ಪಂಚಮಜಾರ್ಜ ಬಾದಷಹರ ತರುವಾಯ ಯುವರಾಜರಾಗಿದ್ದ **ಲನೆಯ ಎಡ್ವರ್ಡ**ರವರು ಅಡಳಿತದ ಸಾರ್ವಭೌಮರಾಗಿ ತಮ್ಮ ಪೂಜ್ಯ ತಂದೆಯವರ ಪದ್ಧತಿಯನ್ನೇ ತಾವೂ ಅನುಸರಿಸುವೆವೆಂದು

ಸಾರಿದರು. ಕ್ರಿ. ಶ. ೧೯೩೬ರ ಎಪ್ರೀಲದಲ್ಲಿ ಲಾರ್ಡ ವಿಲಿಂಗ್ಡನ್ನರು ಹೋಗಿ ಳಿಕದಲ್ಲಿ **ಲಾರ್ಡ ಲಿನ್‌ಲಿಥ್‌ಗೋ** ಇವರು ವೈಸರಾಯರಾದರು.

೪. ಲಾರ್ಡ ಲಿನ್‌ಲಿಥ್‌ಗೋ (೧೯೩೬-ಸಾಗಿದೆ):- ಇವರು ಮೊದಲು ಲಾರ್ಡ ಆಯರ್ವಿನ್ನರ ಕಾಲದಲ್ಲಿ ಹಿಂದುಸ್ಥಾನದ ಒಕ್ಕೂಲತನದ ವಿಚಾರಣಾ ಮಂಡಲದ ಅಧ್ಯಕ್ಷರಾಗಿದ್ದರು. ಜಾಯಿಂಟ ಪಾರ್ಲಿಮೆಂಟರಿ ಕಮಿಟಿಯ ಅಧ್ಯಕ್ಷಸ್ಥಾನವನ್ನು ಕೂಡ ಇವರೇ ಮಂಡಿಸಿದ್ದರು. ಈ ರೀತಿಯಾಗಿ ಹಿಂದು ಸ್ಥಾನದ ರಾಜ್ಯತಂತ್ರದಲ್ಲಿ ಇವರು ಒಳ್ಳೆಯ ಅನುಭವವನ್ನು ಹೊಂದಿದವರಾಗಿ



ಲಾರ್ಡ ಲಿನ್‌ಲಿಥಗೋ

ರುವರು. ಇವರ ಕಾಲದಲ್ಲಿ ಘಟಿಸಿದ ಮಹತ್ವದ ಸಂಗತಿ ಎಂದರೆ- ಕ್ರಿ ಶ. ೧೯೩೭ರಲ್ಲಿ ಆದ **ಕಾಯ್ದೆ ಮಂಡಲಗಳ ಚುನಾವಣೆಯು.** ಈ ಚುನಾವಣೆಯ ಕೆಲಸದಲ್ಲಿ ಎಲ್ಲ ಪಕ್ಷದವರು ತಮ್ಮ ತಮ್ಮ ಪ್ರತಿನಿಧಿಗಳನ್ನು ಹೆಚ್ಚಾಗಿ ಆರಿಸಿ ತರಬೇಕೆಂದು ಬಹಳ ಪ್ರಯತ್ನಿಸಿದರು. ಮುಂಬೈ ಇಲಾಖೆ, ಮದ್ರಾಸ ಇಲಾಖೆ, ಸಂಯುಕ್ತ ಪ್ರಾಂತ, ಬಿಹಾರ, ಓಡಿಸಾ, ಮಧ್ಯಪ್ರಾಂತ ಈ ಪ್ರಾಂತಗಳಲ್ಲಿ ರಾಷ್ಟ್ರಸಭೆಯ ಪ್ರತಿನಿಧಿಗಳ ಬಹುಮತವಾಯಿತು. ಕಾಯದೆಗನುಸರಿಸಿ ಈ ಮೇಲಿನ ಪ್ರಾಂತಗಳ ಗವ್ಹರ್ನರರು ಬಹುಮತವಿದ್ದ ರಾಷ್ಟ್ರಪ್ರತಿನಿಧಿಗಳ

ಪ್ರಮುಖರನ್ನು ಮಂತ್ರಿ ಮಂಡಲವನ್ನು ರಚಿಸಲು ಕರೆಯಿಸಿದರು. ಆಗ ಎಲ್ಲ ಪ್ರಾಂತಗಳ ಕಾಂಗ್ರೆಸ ಪ್ರತಿನಿಧಿಗಳ ಪ್ರಮುಖರು ಗವ್ಹರ್ನರರು ತಮಗಿರುವ ವಿಶೇಷಾಧಿಕಾರಗಳನ್ನು ಉಪಯೋಗಿಸುವ ಸಂಬಂಧವಾದ ಕೆಲವು ಅಭಿವಚನ ಗಳನ್ನು ಕೊಡಬೇಕೆಂದು ಕೇಳಿಕೊಂಡರು. ಆದರೆ ಎಲ್ಲ ಪ್ರಾಂತಗಳ ಗವ್ಹರ್ನ



ಸುಭಾಸಚಂದ್ರ ಭೋಸರು

ರರು ಈ ರೀತಿ ಅಭಿವಚನಗಳನ್ನು ಕೊಡುವದು ಅಶಕ್ಯವೆಂದು ಹೇಳಿದರು. ಅದಕ್ಕಾಗಿ ರಾಷ್ಟ್ರಸಭೆಯ ಪ್ರಮುಖರು **ಹರಿಪುರದಲ್ಲಿ ಸುಭಾಸಚಂದ್ರ ಬೋಸ** ಇವರ ಅಧ್ಯಕ್ಷತೆಯಲ್ಲಿ ಮಂತ್ರಿಮಂಡಲಗಳನ್ನು ರಚಿಸುವದನ್ನು ಆಲ್ಲಗಳಿದರು. ಆಗ ಗವ್ಹರ್ನರರು ಉಳಿದ ಪಕ್ಷದ ಮುಖಂಡರನ್ನು ಕರೆಸಿ ಅವರ ಸಹಾಯದಿಂದ ತಾತ್ಪೂರ್ತಿಕ ಮಂತ್ರಿಮಂಡಲವನ್ನು ರಚಿಸಿಕೊಂಡು ಕಾರಭಾರವನ್ನು ಸಾಗಿಸಿದರು.


ಹೀಗೆ ಪರಿಸ್ಥಿತಿಯಿರುವಾಗ ಸರ್ **ಸಪ್ರೂ** ರವರ ಪ್ರಯತ್ನದಿಂದ ಸರಕಾರ ಮತ್ತು ರಾಷ್ಟ್ರಸಭೆಯ ಮುಂದಾಳುಗಳು ಇವರಲ್ಲಿ ವಿಚಾರವಿನಿಮಯವು ನಡೆಯಿತು. ವ್ಹಾಯಿಸರಾಯರಾದ ಲಾರ್ಡ ಲಿನ್‌ಲಿಥಗೋ ಇವರು "ಪ್ರಾಂತಿಕ ಗವ್ಹರ್ನರರಿಗೆ ವಿಶೇಷಾಧಿಕಾರಗಳಿದ್ದರೂ ಅವುಗಳಿಂದ ರಾಷ್ಟ್ರೀಯ (ಕಾಂಗ್ರೇಸ) ಮಂತ್ರಿಮಂಡಲದ ಕಾರಭಾರಕ್ಕೆ ತೊಂದರೆಯಾಗಲಾರದು" ಎಂದು ಆಶ್ವಾಸನವನ್ನಿತ್ತರು. ಆಗಿನಿಂದ ರಾಷ್ಟ್ರಸಭೆಯವರು ಮುಂಬಯಿ ಮದ್ರಾಸ, ಸಂಯುಕ್ತಪ್ರಾಂತ, ಮೊದಲಾದ ಎಂಟು ಪ್ರಾಂತಗಳಲ್ಲಿ ತಮ್ಮ ಮಂತ್ರಿಮಂಡಲಗಳನ್ನು ರಚಿಸಿಕೊಂಡು ಕಾರಭಾರವನ್ನು ಸಾಗಿಸುತ್ತಲಿರುವರು. ನಮ್ಮ ಮುಂಬಯಿ ಪ್ರಾಂತದ ಕಾಂಗ್ರೇಸ ಮಂತ್ರಿಮಂಡಲದ ಮುಖ್ಯರಾದ ಮಾನ್ಯವರ **ಬಾಳ ಗಂಗಾಧರ ಖೇರ**ರವರು ತಮ್ಮ ಸಹಕಾರಿಗಳಾದ ಮಂತ್ರಿಗಳೊಂದಿಗೆ ಜನಹಿತದ **ಹಲವು** ಸುದಾರಣೆಗಳನ್ನು ಆಸ್ಥೆಯಿಂದಲೂ ಸಾಹಸದಿಂದಲೂ ಕೈಕೊಂಡಿರುವರು. ಪ್ರಾಥಮಿಕ ಶಿಕ್ಷಣ ಪ್ರಸಾರ, ಪ್ರೌಢಶಿಕ್ಷಣ, ವರ್ಧಾ ಶಿಕ್ಷಣ, ಗ್ರಾಮಸುಧಾರಣೆ, ಮದ್ಯಪಾನ ಪ್ರತಿಬಂಧ, ಹರಿಜನಸುಧಾರಣೆ ಮುಂತಾದ ಕಾರ್ಯಗಳು ಭರದಿಂದ ಸಾಗುತ್ತಿರುವವೆಂಬುದು ಎಲ್ಲರಿಗೆ ಒಡೆದು ಕಾಣುವ ಮಾತಾಗಿದೆ. ಈಗ ಅಪೂರ್ಣ ಅಧಿಕಾರಗಳು ದೊರೆತಿರುವಾಗಲೇ, ಜನಹಿತದಕ್ಷರಾದ ನಮ್ಮ ಮಹಿನೀಯರು ಇಷ್ಟು ಪ್ರಗತಿಯನ್ನು ಸಾಧಿಸುವರೆಂದ ಮೇಲೆ ಸಂಪೂರ್ಣ ಅಧಿಕಾರಗಳು ದೊರೆತರೆ ಇವರು ಭಾರತನನ್ನು ಉತ್ಕರ್ಷ



ಮುಖ್ಯಮಂತ್ರಿ ಖೇರರು

ಶಿಖರಕ್ಕೆ ಮುಟ್ಟಿಸುವರೆಂಬಲ್ಲಿ ಸಂಶಯವಿಲ್ಲ! ದೇವರು ಭಾರತದ ಹಂಬಲವನ್ನು ಈಡೇರಿಸಲಿ!! ಸ್ವತಂತ್ರ ಭಾರತವು ಅಭಿಮಾನದಿಂದ ಜಗತ್ತಿನಲ್ಲಿ ಬೆಳಗಲಿ !!!

ದಿವಂಗತರಾದ ಏದನೆಯ ಜಾರ್ಜ ಬಾದಷಾಹರವರ ತರುವಾಯ ಎಂಟನೆಯ ಎಡ್ವರ್ಡರವರು ನಮ್ಮ ಬಾದಷಹರಾದ ಸಂಗತಿಯು ಹಿಂದೆ



ಸಾರ್ವಭೌಮರಾದ ೬ನೆಯ ಜಾರ್ಜರವರು

ಹೇಳಿದೆ. ಆದರೆ ಈ ಬಾದಷಹರು ನಮ್ಮನ್ನು ಬಹುಕಾಲ ಆಳಬೇಕೆಂದು ದೇವರ ಸಂಕೇತವಿರಲಿಲ್ಲ. ೮ನೆಯ ಎಡ್ವರ್ಡ ಬಾದಷಹರವರಿಗೂ ಮಂತ್ರಿಮಂಡಲದವರಿಗೂ ಕಾರಣಾಂತರಗಳಿಂದ ಮತಭೇದಉಂಟಾಗಿ ಕೊನೆಗೆ ಈ ಬಾದಷಹರು ರಾಜ್ಯಭಾರವನ್ನು ೧೦-೧೨-೧೯೩೬ರಲ್ಲಿ ಬಿಟ್ಟುಕೊಟ್ಟರು. ಕೂಡಲೆ ಇವರ ತಮ್ಮಂದಿರಾದ **ಡ್ಯೂಕ ಆಫ್ ಯಾರ್ಕ**ರವರು **೬ನೆಯ ಜಾರ್ಜ**ರೆಂಬ ಅಭಿಧಾನದಿಂದ ನಮ್ಮ ಬಾದಷಾಹರಾದರು. ಇವರ ಸಿಂಹಾಸನಾ

ರೋಹಣ ಸಮಾರಂಭವು ೧೯೫೭ರ ಮೇ ೧೨ನೆಯ ದಿವಸ ವೈಭವದಿಂದ ನೆರವೇರಿತು.

೫. ಹೊಸ ರಾಜ್ಯಘಟನೆಯೂ ಕರ್ನಾಟಕದ ಏಕೀಕರಣವೂ :— ಕನ್ನಡನಾಡು, ಮುಂಬಯಿ ಇಲಾಖೆ, ಮದ್ರಾಸ ಇಲಾಖೆ, ಕೊಡಗುಪ್ರಾಂತ, ಮೈಸೂರ ರಾಜ್ಯ, ನಿಜಾಮ ರಾಜ್ಯ ಇಲ್ಲದೆ ಬೇರೆ ಕೆಲವು ಸಣ್ಣ ಸಂಸ್ಥಾನಗಳು ಹೀಗೆ ಆರು ಕಡೆಗಳಲ್ಲಿ ಹಂಚಿಹೋಗಿದೆ. ಒಂದು ಭಾಷೆಯನ್ನಾಡುವವರ ಸೀಮೆಗಳೆಲ್ಲ ಒಟ್ಟುಗೂಡಿ ಒಂದು ಪ್ರಾಂತವಾಗಿರುವದು, ಆ ನಾಡಿನ ಏಳ್ಗೆಯ ದೃಷ್ಟಿಯಿಂದ ಮಹತ್ವವುಳ್ಳದ್ದಾಗಿದೆ ಹಾಗೆ ಕನ್ನಡ ನಾಡೆಲ್ಲ ಒಂದಾಗುವದು ಅವಶ್ಯವಾಗಿದ್ದರೂ ಬೇರೆ ಬೇರೆ ಒಡೆತನಗಳಿಗೆ ಸೇರಿದ ಭಾಗವನ್ನು ಒಂದು-ಮಾಡುವದು ಅಶಕ್ಯವು. ಆದದರಿಂದ ಇಂಗ್ಲಿಷರ ಒಡೆತನವುಳ್ಳ ಕನ್ನಡ ಸೀಮೆಗಳನ್ನಾದರೂ ಒಟ್ಟುಗೂಡಿಸಿ ಒಂದು ಪ್ರಾಂತವಾಗಿ ಮಾಡಲ್ಪಡ-ಬೇಕೆಂದು ನಮ್ಮ ಜನರು ಪ್ರಯತ್ನಿಸಿದರು. ಆದರೆ ಹೊಸ ರಾಜ್ಯಘಟನೆ-ಯಲ್ಲಿ ಕರ್ನಾಟಕದ ಏಕೀಕರಣದ ಕಾರ್ಯವು ಸಾಧಿಸಲಿಲ್ಲ. ಇನ್ನಾದರೂ ಆದಷ್ಟು ಬೇಗ ಈ ಕಾರ್ಯವು ಕೈಗೂಡಬೇಕೆಂದು ಕನ್ನಡಿಗರೆಲ್ಲರೂ ಸಾಹಸಪಡುತ್ತಲಿರುವರು.

೬. ದೇಶೀಯ ಸಂಸ್ಥಾನಿಕರೂ ಅವರ ಪ್ರಜೆಗಳೂ :— ಅಖಿಲ ಭಾರತದ ಸುಮಾರು ಒಂದು ಮೂರನೆಯಂಶದಷ್ಟು ಪ್ರದೇಶವು ದೇಶೀಯ ಸಂಸ್ಥಾನಿಕರ ಅಧಿಕಾರಕ್ಕೆ ಸೇರಿರುವದು. ಈ ಎಲ್ಲ ಚಿಕ್ಕ ಮೊಡ್ಡ ಸಂಸ್ಥಾನ-ಗಳ ಸಂಖ್ಯೆಯು ಆರುವರೆ ನೂರಕ್ಕಿಂತ ಹೆಚ್ಚಾಗಿದೆ. ಎಲ್ಲ ದೇಶೀಯ ಸಂಸ್ಥಾನಗಳ ಒಟ್ಟು ಜನಸಂಖ್ಯೆಯು ಸುಮಾರು ಏಳು ಕೋಟಿ ಅದೆ. ತಮ್ಮ ಸುತ್ತ ಮುತ್ತಲಿರುವ ಬ್ರಿಟಿಷ ಹಿಂದುಸ್ಥಾನದ ಜನಾಂಗವು ಸ್ವಾಯತ್ತತೆಗಾಗಿ ಸಾಹಸ ಬಡುತ್ತಿರುವಾಗ ಸಂಸ್ಥಾನಗಳ ಪ್ರಜೆಗಳು ಕಣ್ಣುಮುಚ್ಚಿಕೊಂಡು ಸುಮ್ಮನಿರುವದೆ ಅಶಕ್ಯವು. ಅವರಾದರೂ ರಾಷ್ಟ್ರಸಭೆಯ ಕ್ರಮದಂತೆಯೇ ಚಟುವಟಿಕೆಗಳನ್ನು ನಡೆಯಿಸಿ ತಮ್ಮ ಒಡೆಯರಲ್ಲಿ ಹೊಣೆಗಾರಿಕೆಯುಳ್ಳ ಅಧಿಕಾರಗಳನ್ನು ಬೇಡುತ್ತಲಿರುವರು. ಸಂಸ್ಥಾನಿಕರಾದರೂ ತಮ್ಮ ಪ್ರಜೆಗಳ ನ್ಯಾಯವಾದ ಈ ಬೇಡಿಕೆಗಳನ್ನು ಪೂರೈಸಲೇ ಬೇಕಾಗುವದು. ಪ್ರಗತಿಪ್ರಿಯ

ಮೊದಲ ಬಾಜಿರಾಯನು

ಶ್ರೀಮಂತ ಬಾಜಿರಾಯನು

ರಾದ ಹಲವರು ಸಂಸ್ಥಾನಿಕರು ಪ್ರಜೆಗಳ ಬೇಡಿಕೆಗಳನ್ನು ವಿಚಾರಿಸಿ ತಮ್ಮ ತಮ್ಮ ಯೋಜನೆಗಳನ್ನು ಸಜ್ಜುಗೊಳಿಸುತ್ತಿರುವರು. ಔಂಧ ಸಂಸ್ಥಾನದ ಒಡೆಯರಂತೂ ಮಹಾತ್ಮಾ ಗಾಂಧಿಯವರ ಒಪ್ಪಿಗೆಯಂತೆ ಒಂದು ಯೋಜನೆಯನ್ನು ಸಿದ್ಧಪಡಿಸಿ, ಅವರಂತೆ ತಮ್ಮ ಪ್ರಜೆಗಳಿಗೆ ಅಧಿಕಾರಗಳನ್ನು ಕೊಟ್ಟು ಬಿಟ್ಟಿರುವರು ಹೈದರಾಬಾದ, ಮೈಸೂರು, ಕೊಲ್ಹಾಪುರ ಮೊದಲಾದ ನಮ್ಮ ನೆರೆಯ ಸಂಸ್ಥಾನಗಳಲ್ಲಿ ಈಗ ಪ್ರಜಾಪಕ್ಷದ ಚಟುವಟಿಕೆಗಳು ಭರದಿಂದ ಸಾಗಿರುತ್ತವೆ.

೭. **ಉಪಸಂಹಾರ :—** ಪ್ರಿಯ ವಿದ್ಯಾರ್ಥಿಗಳೇ, ಇಲ್ಲಿಗೆ ಮ. ಇಂ. ಆಳಿಕೆಯ ಇತಿಹಾಸವು ಮುಗಿಯಿತು ಆದಿಭೌತಿಕ ಶಾಸ್ತ್ರಗಳಲ್ಲಿ ಮುಂದು ನರಿದ ಯಾವುದೊಂದು ಪಾಶ್ಚಿಮಾತ್ಯ ರಾಷ್ಟ್ರವು, ಆ ಶಾಸ್ತ್ರಗಳಲ್ಲಿ ಹಿಂದುಳಿದಿದ್ದ ಮತ್ತು ಏಕರಾಷ್ಟ್ರೀಯತ್ವಕ್ಕೆ ಎರವಾಗಿದ್ದ ಹಿಂದುಸ್ತಾನವನ್ನು ವಶಮಾಡಿಕೊಳ್ಳುವದೆಂಬ ಸಂಗತಿಯು ಕ್ರಿ. ಶ. ೧೮ನೆಯ ಶತಕದ ಕೊನೆಯಲ್ಲಿ ನಿಶ್ಚಿತವಾಯಿತು. ಹೀಗಿರಲು ಅವರೊಳಗಿನ ಇಂಗ್ಲಂಡಪಂಥ ಸ್ವಾತಂತ್ರ್ಯ ಪ್ರಿಯವಾದ ರಾಷ್ಟ್ರದೊಡನೆ ಸಂಬಂಧವುಂಟಾಯಿತು. ಇಂಗ್ಲಿಷರ ಆಳಿಕೆಯು ಆರಂಭವಾದಂದಿನಿಂದ ನಮ್ಮಲ್ಲಿಯ ರಾಷ್ಟ್ರೀಯ ಭಾವನೆಯು ಜಾಗ್ರತವಾಗಿದೆ. ಹಿಂದೀ ರಾಷ್ಟ್ರದ ಆಕಾಂಕ್ಷೆಗಳನ್ನರಿತು ಇವರು ಕ್ರಮೇಣ ಹೆಚ್ಚು ಹೆಚ್ಚು ರಾಜಕೀಯ ಹಕ್ಕುಗಳನ್ನು ಕೊಡುತ್ತಲಿರುವರು ನಮ್ಮ **ಬಾದಷಾಹರಾದ ೬ನೆಯ ಜಾರ್ಜ ಚಕ್ರವರ್ತಿ**ಯವರಿಗೂ ಮತ್ತು **ಎಲಿಜಾಬೇಥ ಮಹಾರಾಜ್ಞಿ**ಯವರಿಗೂ ದೇವರು ಆಯುರಾರೋಗ್ಯಗಳನ್ನು ದಯಪಾಲಿಸಲೆಂದೂ ಈ ಮಹನೀಯರ ಹಸ್ತದಿಂದಲೇ ಭಾರತೀಯರ ಆಕಾಂಕ್ಷೆಗಳು ಬೇಗನೆ ಪೂರ್ಣವಾಗಲೆಂದೂ ಜಗದೀಶನನ್ನು ಪ್ರಾರ್ಥಿಸುವಾ !

ನಮ್ಮ ಹಿಂದುಸ್ಥಾನವು ಏಳ್ಗೆ ಹೊಂದಲಿ !!!

ಸಮಾಪ್ತ

ಮಹಾರಾಷ್ಟ್ರ-ಇಂಗ್ಲಿಷರ ಆಳಿಕೆಯ ಕಾಲದಲ್ಲಿಯ

ಪ್ರಸಿದ್ಧ ರಾಜವಂಶಗಳು.

೧. ಮರಾಠರ ಮನೆತನ (ಸಾತಾರೆ) (ಕ್ರಿ. ಶ. ೧೬೬೪—೧೮೪೮

೧	ಛತ್ರಪತಿ ಶಿವಾಜಿ ಮಹಾರಾಜ	ಕ್ರಿ ಶ.	೧೬೬೪—೧೬೮೦
೨	,, ಸಂಭಾಜಿ	,,	೧೬೮೦—೧೬೮೯
೩	,, ರಾಜಾರಾಮ	,,	೧೬೮೯—೧೭೦೦
೪	,, ೨ನೆಯ ಶಿವಾಜಿ	,,	೧೭೦೦—೧೭೦೮
೫	,, ಶಾಹೂರಾಜ	,,	೧೭೦೮—೧೭೪೯
೬	,, ರಾಮರಾಜ	,,	೧೭೪೯—೧೭೫೭
೭	,, ೨ನೆಯ ಶಾಹೂರಾಜ	,,	೧೭೫೭—೧೮೦೮
೮	,, ಪ್ರತಾಪಸಿಂಹ	,,	೧೮೦೮—೧೮೪೯
೯	,, ಶಹಾಜಿ	,,	೧೮೪೯—೧೮೪೮

೨. ಪೇಶವೆಯರ ಮನೆತನ (ಪುಣೆ) ಕ್ರಿ ಶ. ೧೭೧೪—೧೮೧೮.

೧	ಬಾಳಾಜಿ ವಿಶ್ವನಾಥ	ಕ್ರಿ. ಶ.	೧೭೧೪—೧೭೨೦
೨	ಬಾಜೀರಾಯ	,,	೧೭೨೦—೧೭೪೦
೩	ಬಾಳಾಜಿ ಬಾಜೀರಾಯ	,,	೧೭೪೦—೧೭೬೦
೪	ಮಾಧವರಾಯ	,,	೧೭೬೧—೧೭೭೧
೫	ನಾರಾಯಣರಾಯ	,,	೧೭೭೨—೧೭೭೩
೬	ಸವಾಯಿ ಮಾಧವರಾಯ	,,	೧೭೭೪—೧೭೯೫
೭	೨ನೆಯ ಬಾಜೀರಾಯ	,,	೧೭೯೫—೧೮೧೮

೩. ಈ. ಇಂ. ಕಂಪನಿಯ ಆಳಿಕೆಯ ಕಾಲದ ಗ. ಜನರಲರು

೧	ವಾರನ ಹೆಸ್ಟಿಂಗ್ಸ	ಕ್ರಿ ಶ.	೧೭೭೪—೧೭೮೫
೨	ಲಾರ್ಡ ಕಾರ್ನವಾಲೀಸ	,,	೧೭೮೫—೧೭೯೩
೩	ಸರ ಜಾನ್ ಶೋರ	,,	೧೭೯೩—೧೭೯೮
೪	ಲಾರ್ಡ ವೆಲಸ್ಲಿ	,,	೧೭೯೮—೧೮೦೫

೫	ಲಾರ್ಡ ಕಾರ್ನವಾಲೀಸ (೨ನೆಯ ಸರತಿ)	ಕ್ರಿ. ಶ.	೧೭೦೫
೬	ಸರ ಜಾರ್ಜ ಬಾರ್ಲೊ	,,	೧೭೦೫—೧೭೦೭
೭	ಲಾರ್ಡ ಮಿಂಟೊ	,,	೧೭೦೭—೧೭೧೩
೮	ಮಾ. ಆಫ್ ಹೆಸ್ಟಿಂಗ್ಸ	,,	೧೭೧೩—೧೭೨೩
೯	ಲಾರ್ಡ ಆಮ್ಹರ್ಸ್ಟ	,,	೧೭೨೩—೧೭೨೮
೧೦	ಲಾರ್ಡ ಉ. ಬೆಂಟಿಂಕ	,,	೧೭೨೮—೧೭೩೫
೧೧	ಸರ ಚಾ. ಮೆಟಕಾಫ	,,	೧೭೩೫—೧೭೩೬
೧೨	ಲಾರ್ಡ ಆಕ್ಲಂಡ	,,	೧೭೩೬—೧೭೪೨
೧೩	ಲಾರ್ಡ ಎಲೆನ್‌ಬರೊ	,,	೧೭೪೨—೧೭೪೪
೧೪	ಲಾರ್ಡ ಹಾರ್ಡಿಂಜ	,,	೧೭೪೪—೧೭೪೮
೧೫	ಲಾರ್ಡ ಡಾಲಹೌಸಿ	,,	೧೭೪೮—೧೭೫೬

೪. ಇಂಗ್ಲಂಡದ ಬಾದಶಹರ ಆಳಿಕೆಯ ಕಾಲದಲ್ಲಿಯ ಹಿಂದುಸ್ಥಾನದ ಗ ಜನರಲರು ಮತ್ತು ವ್ಹಾಯಿಸರಾಯರು.

೧	ಲಾರ್ಡ ಕ್ಯಾನಿಂಗ	ಕ್ರಿ ಶ.	೧೭೫೮—೧೭೬೨
೨	ಲಾರ್ಡ ಎಲ್ಜಿನ	,,	೧೭೬೨—೧೭೬೩
೩	ಲಾರ್ಡ ಲಾರೆನ್ಸ	,,	೧೭೬೪—೧೭೬೯
೪	ಲಾರ್ಡ ಮೇಯೊ	,,	೧೭೬೯—೧೭೭೨
೫	ಲಾರ್ಡ ನಾರ್ಥಬ್ರುಕ್	,,	೧೭೭೨—೧೭೭೬
೬	ಲಾರ್ಡ ಲಿಟನ	,,	೧೭೭೬—೧೭೮೦
೭	ಲಾರ್ಡ ರಿಪನ	,,	೧೭೮೦—೧೭೮೪
೮	ಲಾರ್ಡ ಡಫರಿನ	,,	೧೭೮೪—೧೭೮೮
೯	ಲಾರ್ಡ ಲ್ಯಾನ್ಸಡೌನ	,,	೧೭೮೮—೧೭೯೪
೧೦	ಲಾರ್ಡ ಎಲ್ಜಿನ	,,	೧೭೯೪—೧೭೯೯
೧೧	ಲಾರ್ಡ ಕರ್ಝನ	,,	೧೭೯೯—೧೮೦೫
೧೨	ಲಾರ್ಡ ಮಿಂಟೊ	,,	೧೮೦೫—೧೮೧೦
೧೩	ಲಾರ್ಡ ಹಾರ್ಡಿಂಜ	,,	೧೮೧೦—೧೮೧೬
೧೪	ಲಾರ್ಡ ಚೇವ್ಸಫರ್ಡ	,,	೧೮೧೬—೧೮೨೧

೧೫	ಲಾರ್ಡ ರೀಡಿಂಗ	ಕ್ರಿ. ಶ. ೧೯೨೧—೧೯೨೬
೧೬	ಲಾರ್ಡ ಆಯರ್ವಿನ	,, ೧೯೨೬—೧೯೩೧
೧೭	ಲಾರ್ಡ ವಿಲಿಂಗ್ಡನ್	,, ೧೯೩೧—೧೯೩೬
೧೮	ಲಾರ್ಡ ಲಿನ್‌ಲಿಥಗೋ	೧೯೩೬--

ಮಹಾರಾಷ್ಟ್ರ-ಇಂಗ್ಲಿಷರ ಆಳಿಕೆಯ ಕಾಲದಲ್ಲಿಯ

ಮಹತ್ವದ ಸಂಗತಿಗಳ ಕಾಲಗಳು.

ಇಂಗ್ಲಿಷ ಈಸ್ಟ ಇಂಡಿಯಾ ಕಂಪನಿಯ ಸ್ಥಾಪನೆ	೧೬೦೦
ಸುರತದಲ್ಲಿ ವಖಾರವನ್ನು ಕಟ್ಟಿಸಿದ್ದು	೧೬೧೭
ಅಂಬೋಯನಾದ ಕೊಲೆ	೧೬೨೩
ಶಿವಾಜಿಯ ಜನ್ಮ	೧೬೩೦
ನಿಜಾಮಶಾಹಿಯ ಕೊನೆ	೧೬೩೭
ಮದ್ರಾಸವು ಇಂಗ್ಲಿಷರಿಗೆ ದೊರೆಯಿತು	೧೬೩೯
ಶಿವಾಜಿಯು ರಾಯಗಡವನ್ನು ತೆಗೆದುಕೊಂಡದ್ದು	೧೬೪೬
ಅಫಜುಲ್‌ಖಾನನು ಹತನಾದದ್ದು	೧೬೫೯
ಫ್ರೇಂಚ ಈಸ್ಟ ಇಂಡಿಯಾ ಕಂಪನಿಯು ಸ್ಥಾಪನೆ	೧೬೬೦
ಸಾಲ್ಟೇರದ ಯುದ್ಧ	೧೬೬೨
ಶಿವಾಜಿಯ ಪಟ್ಟಾಭಿಷೇಕ	೧೬೬೪
ಶಿವಾಜಿಯ ಮರಣ	೧೬೮೦
ಔರಂಗಜೇಬನಿಗೂ ರಜಪೂತರಿಗೂ ಆದ ಒಪ್ಪಂದ	೧೬೮೧
ಆದಿಲಶಾಹಿಯ ಕೊನೆ	೧೬೮೬
ಕುತುಬಶಾಹಿಯ ಕೊನೆ	೧೬೮೭
ಮುಂಬಯಿಯು ಇಂಗ್ಲಿಷ ವ್ಯಾಪಾರಸ್ಥರ ಕೇಂದ್ರವಾಯಿತು	೧೬೮೭
ಸಂಭಾಜಿಯ ಕೊಲೆ	೧೬೮೯
ಜಿಂಜಿಯ ಮುತ್ತಿಗೆ	೧೬೯೧—೯೪
ಔರಂಗಜೇಬನ ಮರಣ	೧೭೦೭

ಯುನಾಯಿಟೆಡ್ ಈಸ್ಟ್ ಇಂಡಿಯಾ ಕಂಪನಿಯ ಸ್ಥಾಪನೆ ೧೬೦೨
ಬಾಳಾಜಿಯು ಪೇಶ್ವೆಯಾದದ್ದು ೧೭೧೪
ಚೆಮಣ್ಣಾಜಿಯು ಪೋರ್ತುಗೀಜರನ್ನು ವಸಯಿ ಪ್ರಾಂತದಿಂದ ಹೊರಗೆ ಹಾಕಿದ್ದು ೧೭೩೯
ನಾದಿರಶಹನ ದಾಳಿ ೧೭೩೯
ಮರಾಠರಿಗೆ ಮಾಳವದ ಸನದು ದೊರೆಯಿತು ೧೭೪೨
ನಿಜಾಮ ಉಲ್ಮುಲ್ಕನ ಮರಣ ೧೭೪೮
ಅಬದಾಲಿಯ ದಾಳಿಯ ಆರಂಭ ೧೭೪೮
ಅರ್ಕಾಟಿನ ಮುತ್ತಿಗೆ ೧೭೫೧
ಪ್ಲಾಸಿಯ ಯುದ್ಧ ೧೭೫೭
ಉದಗೀರದ ಕಾಳಗ ೧೭೬೦
ವಾಂಡಿವಾಶದ ಕಾಳಗ ೧೭೬೦
ಕುಂಜಪುರವು ಮರಾಠರ ಕೈಸೇರಿತು ೧೭೬೦
ಪಾನಿಪತದ ಮೂರನೆಯ ಯುದ್ಧ ೧೭೬೧
ಪಾಂಡಿಚೇರಿಯ ಯುದ್ಧ ೧೭೬೧
ರಾಕ್ಷಸಭವನದ ಕಾಳಗ ೧೭೬೩
ಬಕ್ಸಾರದ ಯುದ್ಧ ೧೭೬೪
ಅಲ್ಲಾಹಾಬಾದಿನ ಒಪ್ಪಂದ ೧೭೬೫
ಮೈಸೂರಿನ ೧ನೆಯ ಯುದ್ಧ ೧೭೬೭—೬೯
ಮದ್ರಾಸ ಒಪ್ಪಂದ ೧೭೬೯
ರೆಗ್ಯುಲೇಟಿಂಗ ಆಕ್ಟ ೧೭೭೩
ಮರಾಠರ ೧ನೆಯ ಯುದ್ಧ ೧೭೭೫—೮೩
ಪುರಂದರದ ಒಪ್ಪಂದ ೧೭೭೬
ಮೈಸೂರಿನ ೨ನೆಯ ಯುದ್ಧ ೧೭೮೦—೮೪
ಸಾಳ್ಬಾಯಿ ಒಪ್ಪಂದ ೧೭೮೨
ಹೈದರನ ಮರಣ ೧೭೮೨
ಮಂಗಳೂರಿನ ಒಪ್ಪಂದ ೧೭೮೪

ಪಿಟ್ಟನ ಇಂಡಿಯಾ ಬಿಲ್ಲು	೧೭೮೪
ಮೈಸೂರಿನ ಮೂರನೆಯ ಯುದ್ಧ	೧೭೯೧—೯೨
ಸ್ಥಿರ ಕಂದಾಯ ಪದ್ಧತಿ	೧೭೯೧
ಶ್ರೀರಂಗ ಪಟ್ಟಣದ ಒಪ್ಪಂದ	೧೭೯೨
ಕಂಪನಿಯ ಸನದಿನ ವಿಚಾರಣೆ (೧ನೆಯ ಸಾರೆ)	೧೭೯೩
ಖರಡೆಯ ಯುದ್ಧ	೧೭೯೫
ಮೈಸೂರಿನ ೪ನೆಯ ಯುದ್ಧ	೧೭೯೯
ವಸಯಿ ಒಪ್ಪಂದ	೧೮೦೨
ಮರಾಠರ ೨ನೆಯ ಯುದ್ಧ	೧೮೦೨
ಅಂಜನಗಾಂವ, ದೇವಗಾಂವ ಒಪ್ಪಂದ	೧೮೦೩
ಭರತಪುರದ ಮುತ್ತಿಗೆ	೧೮೦೫
ವೆಲೂರ ದಂಗೆ	೧೮೦೬
ಅಮೃತಸರದ ಒಪ್ಪಂದ	೧೮೦೯
ಕಂಪನಿಯ ಸನದಿನ ವಿಚಾರಣೆ (೨ನೆಯ ಸಾರೆ)	೧೮೧೩
ನೇಪಾಳದ ಯುದ್ಧ	೧೮೧೪-೧೬
ಸೇಗಾವುಲಿಯ ಒಪ್ಪಂದ	೧೮೧೬
ಪೆಂಡಾರಿಗಳ ಯುದ್ಧ	೧೮೧೭
ಮರಾಠರ ೩ನೆಯ ಯುದ್ಧ	೧೮೧೭-೧೮
ಬ್ರಹ್ಮದೇಶದ ೧ನೆಯ ಯುದ್ಧ	೧೮೨೪–೨೬
ಎಂದಬು ಒಪ್ಪಂದ	೧೮೨೬
ಭರತಪುರದ ಮುತ್ತಿಗೆ	೧೮೨೬
ಕಂಪನಿಯ ಸನದಿನ ವಿಚಾರಣೆ (೩ನೆಯ ಸಾರೆ)	೧೮೩೩
ಕೊಡಗು ಖಾಲಸಾ ಆಯಿತು	೧೮೩೪
ಅಫಗಾನರ ೧ನೆಯ ಯುದ್ಧ	೧೮೩೮—೪೨
ಸಿಂಧಪ್ರಾಂತ ಖಾಲಸಾ ಆದದ್ದು	೧೮೪೩
ಗ್ವಾಲೇರದ ಒಪ್ಪಂದ	೧೮೪೩
೨ನೆಯ ೧ನೆಯ ಯುದ್ಧ	೧೮೪೫ — ೪೬

ಲಾಹೋರದ ಒಪ್ಪಂದ ೧೮೪೬
ಸೀಖರ ೨ನೆಯ ಯುದ್ಧ ೧೮೪೫—೪೬
ಬ್ರಹ್ಮದೇಶದ ೨ನೆಯ ಯುದ್ಧ ೧೮೫೨
ಕಂಪನಿಯ ಸನದಿನ ವಿಚಾರಣೆ (೪ನೆಯ ಸಾರೆ) ೧೮೫೩
ಸಿಪಾಯಿಗಳ ಬಂಡಾಯ ೧೮೫೭—೫೮
ರಾಣಿಯವರ ಜಾಹೀರನಾಮೆ ೧೮೫೮
ಕೌನ್ಸಿಲ ಆಕ್ಟ (ಕಾಯದೆ ಮಂಡಲಗಳ ಸ್ಥಾಪನೆ) ೧೮೬೧
ಭೂತಾನದ ಯುದ್ಧ ೧೮೬೪
ಅಫಗಾನರ ೨ನೆಯ ಯುದ್ಧ ೧೮೭೮—೮೦
ಚಾಮರಾಜ ಒಡೆಯರಿಗೆ ವೈಸೂರಿನ ರಾಜ್ಯ ದೊರೆಯಿತು ೧೮೮೧
ರಾಷ್ಟ್ರಸಭೆಯ ಆರಂಭ ೧೮೮೫
ಬ್ರಹ್ಮದೇಶದ ೩ನೆಯ ಯುದ್ಧ ೧೮೮೫—೮೬
ರಾಣಿಯವರ ಆಳಿಕೆಯ ಸುವರ್ಣ ಮಹೋತ್ಸವ ೧೮೮೭
ಮಣಿಪುರದ ದಂಗೆ ೧೮೯೦
ಕೌನ್ಸಿಲ ಆಕ್ಟ (ಕಾಯ್ದೆ ಮಂಡಲಗಳ ಸಭಾಸದರ ಸಂಖ್ಯೆಯನ್ನು ಹೆಚ್ಚು ಮಾಡಿದ್ದು) ೧೮೯೨
ಮೋಪಲಾ ಜನರ ದಂಗೆ ೧೮೯೫
ಪ್ಲೇಗುಬೇನೆಯ ಆರಂಭ ೧೮೯೬
ರಾಣಿಯವರ ಹೀರಕೋತ್ಸವ ೧೮೯೭
ವ್ಹಿಕ್ಟೋರಿಯಾ ಮಹಾರಾಣಿಯವರ ಮರಣ ೧೯೦೧
ಮೋರ್ಲೆ-ಮಿಂಟೋ ಸುಧಾರಣೆ ೧೯೦೯
ಎಡ್ವರ್ಡ ಬಾದಷಾಹರ ಮರಣ ೧೯೧೦
ದಿಲ್ಲಿಯ ಸಮಾರಂಭ ೧೯೧೧
ಯುರೋಪದ ಮಹಾಯುದ್ಧ ೧೯೧೪—೧೮
ಜಾರ್ಜ ಬಾದಷಾಹರ ಜಾಹೀರನಾಮೆ ೧೯೧೯
ಮಾಂಟ್‌ಫರ್ಡ ಸುಧಾರಣೆ ೧೯೧೯
ಪ್ರಿನ್ಸ ಆಫ್ ವೇಲ್ಸರವರು ಹಿಂದುಸ್ಥಾನಕ್ಕೆ ಬಂದದ್ದು ೧೯೨೧

ಸಾಯಮನ್ ಕಮಿಶನ್	೧೯೨೭—೨೮
೧ನೆಯ ರಾವುಂಡ ಟೇಬಲ್ ಕಾನ್ಫರನ್ಸ	೧೯೩೦
೨ನೆಯ ,, ,, ,,	೧೯೩೧
೩ನೆಯ ,, ,, ,,	೧೯೩೨
ಶುಭಪತ್ರಿಕೆಯನ್ನು ಪ್ರಸಿದ್ಧಿಸಿದ್ದು	ಮಾರ್ಚ ೧೯೩೩
ಜಾಯಿಂಟ ಸಿಲೆಕ್ಟ ಕಮಿಟಿಯ ಆರಂಭ	ಎಪ್ರಿಲ್ ೧೯೩೩
,, ,, ,, ರಿಪೋರ್ಟು ಪ್ರಸಿದ್ಧವಾಯಿತು	ನವ್ಹಂಬರ ೧೯೩೪
ಹಿಂದುಸ್ಥಾನದ ಕಾಯ್ದೆ ಪಾಸಾಯಿತು	ಆಗಷ್ಟ ೧೯೩೫
ಪಂಚಮ ಜಾರ್ಜ ಬಾದಷಾಹರ ನಿಧನ	೧೯೩೬
ಎಂಟನೆಯ ಎಡ್ವರ್ಡ ಬಾದಷಾಹರ ರಾಜ್ಯತ್ಯಾಗ	೧೯೩೭
ಆರನೆಯ ಜಾರ್ಜರು ಬಾದಷಾಹರಾದದ್ದು	೧೯೩೭
ಹಿಂದುಸ್ಥಾನದ ಕಾಯ್ದೆಯಂತೆ ಕಾರಭಾರದ ಆರಂಭ	ಎಪ್ರೆಲ್ ೧೯೩೭
ಆರನೆಯ ಜಾರ್ಜ ಬಾದಷಾಹರ ಪಟ್ಟಾಭಿಷೇಕ	ಮೇ ೧೯೩೭

ಆವರ್ತನೆಯ ಮತ್ತು ಪರೀಕ್ಷೆಯ ಪ್ರಶ್ನೆಗಳು

೧. ರಾಜಾರಾಮ, ಬಾಜೀರಾವ, ಬಾಳಾಜಿ, ನಿಜಾಮ ಉಲ್ಮುಲ್ಕ, ನಾನಾ ಫಡಣವೀಸ, ಹೈದರ ಅಲಿ, ರಣಜಿತಸಿಂಗ ಇವರಲ್ಲಿ ಬೇಕಾದ ನಾಲ್ವರ ಚರಿತ್ರೆಗಳನ್ನು ಸಂಕ್ಷಿಪ್ತವಾಗಿ ಬರೆಯಿರಿ.

೨. ಶಿವಾಜಿಯ ಯೋಗ್ಯತೆ, ಡೂಪ್ಲೆಯ ಮಹತ್ವಾಕಾಂಕ್ಷೆ, ಕ್ಲೈವನ ಹಂಚಿಕೆ, ಚಿಮಣಾಜಿಯ ಪರಾಕ್ರಮ, ನಜೀಬಖಾನನ ಸಾಹಸ, ಟೀಪುಸುಲ್ತಾನನ ಪರಾಕ್ರಮ, ಮಾಂಟಫರ್ಡ ಸುಧಾರಣೆಗಳು, ಶುಭ್ರಪತ್ರಿಕೆ ಇವುಗಳ ವಿಷಯವಾಗಿ ಗೊತ್ತಿರುವುದನ್ನು ಸ್ವಲ್ಪದರಲ್ಲಿ ಬರೆಯಿರಿ

೩. ಮರಾಠರ ಉತ್ಕರ್ಷದ ಮತ್ತು ಫ್ರೆಂಚರ ಅಪಕರ್ಷದ ಕಾರಣಗಳಾವವು ?

ಅಥವಾ

ಪ್ಲಾಸಿಯ ಯುದ್ಧದ ಮಹತ್ವವನ್ನೂ ಸಿಪಾಯಿಗಳ ಬಂಡಾಯದ ಪರಿಣಾಮವನ್ನೂ ವಿವರಿಸಿರಿ.

೪. ಕೆಳಗಿನ ಮಾತುಗಳಿಗೆ ತಕ್ಕ ಉದಾಹರಣೆಗಳನ್ನು ನೀವು ಕಲಿತ ಇತಿಹಾಸದಿಂದ ಆರಿಸಿಕೊಂಡು ಅವು ಹೇಗೆ ತಕ್ಕವುಗಳೆಂಬದನ್ನು ತೋರಿಸಿರಿ.

ಆ. ವ್ಯವಸ್ಥಿತವಾದ ಸಣ್ಣ ಸೈನ್ಯವು ಅವ್ಯವಸ್ಥಿತವಾದ ದೊಡ್ಡ ಸೈನ್ಯವನ್ನು ಸೋಲಿಸುವದು.

ಆ. ಮನೆಜಗಳದಲ್ಲಿ ಆಗದವರನ್ನು ನೆರವಿಗೆ ಕರೆದರೆ ಮನೆಯೆ ಅವರ ಪಾಲಾಗುವದು.

೫. ಸಹಾಯಕ ಸೈನ್ಯ (ಸಬಸಿಡಿಯರಿ) ಪದ್ಧತಿ, ಚೌಥಾಯಿ-ಸರ ದೇಶಮುಖಿ, ಸ್ಥಾನಿಕ ಸ್ವರಾಜ್ಯ, ಆರ್ಮ್ಸ್ ಆಕ್ಟ, ಸಾಯಮನ್ ಕಮಿಶನ್, ಇಂಚಕೇಪ್ ಕಮಿಟಿ, ೩ನೆಯ ದುಂಡು ಮೇಜಿನ ಪರಿಷತ್ತು ಇವುಗಳ ಸಂಬಂಧವ ಟಿಪ್ಪಣಿಗಳನ್ನು ಕೊಡಿರಿ.

ಅಥವಾ

ಲಾರ್ಡ ಕಾರ್ನವಾಲೀಸ, ಲಾರ್ಡ ಹೆಸ್ಟಿಂಗ್ಸ, ೩ನೆಯ ಲಾರ್ಡ ಮಿಂಟೊ, ಲಾರ್ಡ ರೀಡಿಂಗ, ಲಾರ್ಡ ವಿಲಿಂಗ್ಡನ್, ಲಾರ್ಡ ಲಿನ್‌ಲಿಥಗೋ ಇವರ ಆಳಿಕೆಯಲ್ಲಿ ಸಂಭವಿಸಿದ ಮುಖ್ಯ ಸಂಗತಿಗಳಾವವು ?

೬. ಯುರೋಪದವರು ಹಿಂದುಸ್ಥಾನಕ್ಕೆ ಬರುವದಕ್ಕೋಸ್ಕರ ಜಲ ಮಾರ್ಗವನ್ನೇ ಏಕೆ ಗೊತ್ತುಹಚ್ಚಬೇಕಾಯಿತು ? ಈ ದೇಶಕ್ಕೆ ಬಂದ ಯುರೋಪಿಯನರಲ್ಲಿ ರಾಜ್ಯಸ್ಥಾಪನೆಯ ಪ್ರಯತ್ನವನ್ನು ಯಾರು ಯಾರು ಮಾಡಿದರು ? ಕೊನೆಗೆ ಯಾರಿಗೆ ಏಕೆ ಜಯವೊರೆಯಿತು ?

ಇಲ್ಲವೆ

ಲೋಕಪ್ರಿಯರಾದ ಇಬ್ಬರು ವ್ಹಾಯಿಸರಾಯರ ಆಳಿಕೆಗಳನ್ನು ಸಂಪೂರ್ಣವಾಗಿ ವಿವರಿಸಿರಿ.

೭. ಹಿಂದುಸ್ಥಾನದ ನಕಾಶವನ್ನು ತೆಗೆದು ಅದರಲ್ಲಿ ಕೆಳಗಿನ ಸ್ಥಳಗಳನ್ನು ಗುರುತಿಸಿರಿ; ಮತ್ತು ಅವುಗಳೊಳಗಿನ ಬೇಕಾದ ನಾಲ್ಕು ಸ್ಥಳಗಳ ಐತಿಹಾಸಿಕ ಮಹತ್ವವನ್ನು ಹೇಳಿರಿ.

ಅಲಹಾಬಾದ. ಸಾಲ್ಹೇರ, ವಾಂಡಿವಾಶ, ಪಾನಿಪತ, ಮಂಗಳೂರು, ಪುರಂದರ, ಡೀಗ, ಚಿನಿಯಾನವಾಲಾ, ಚಿತ್ರಳ, ಸೇಗಾವುಲಿ

ಅಥವಾ

ವಾಯವ್ಯ ಸರಹದ್ದಿನಲ್ಲಿ ಆದ ಯುದ್ಧ ಹಾಗು ಒಪ್ಪಂದಗಳು ಯಾವ ಘೋರಣೆಯಿಂದ ಆದವೆಂಬದನ್ನೂ ಮೈಸೂರಿನ ಕೊನೆಯ ಯುದ್ಧದ ಪರಿಣಾಮವನ್ನೂ ವಿವರಿಸಿರಿ.

೮. ರಾಜಾ ಛತ್ರಸಾಲ, ತಾನ್ಹಾಜಿ ಮಾಲುಸರೆ, ಕೌಂಟ ಲಾಲಿ, ಪರಶುರಾಮಭಾವು, ನೆಪೋಲಿಯನ್, ಸರ್ ಜಾನ್ ಮಾಲಕಮ್, ಜನರಲ್ ಹ್ಯಾವಲಾಕ್, ನಾ. ಪಟೇಲ, ಸರ ಸಪ್ರು, ನಾಮದಾರ ಖೇರ ಈ ವ್ಯಕ್ತಿಗಳ ಹೆಸರುಗಳು ಇತಿಹಾಸದಲ್ಲಿ ಏಕೆ ಪ್ರಸಿದ್ಧವಾಗಿರುವವೆಂಬದನ್ನು ಸ್ವಲ್ಪದರಲ್ಲಿ ತಿಳಿಸಿರಿ.

ಇಲ್ಲವೆ

ಬ್ರಿಟಿಷರ ರಾಜ್ಯವು ಹಿಂದುಸ್ಥಾನದಲ್ಲಿ ಉಂಟಾಗಲು, ಸ್ಥಿರಗೊಳ್ಳಲು ಮತ್ತು ಬೆಳವಣಿಗೆ ಹೊಂದಲು ಯಾರು ಯಾರು ಕಾರಣರಾದರು? ಅವರು ಅದಕ್ಕಾಗಿ ಯಾವ ಯಾವ ಉಪಾಯಗಳನ್ನು ಕೈಕೊಂಡರು?

